
# ಭಾಗವತಾಮೃತಸಾರ



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಅಧ್ಯಾತ್ಮ ಗ್ರಂಥಾವಳಿ

# ಭಾಗವತಾಮೃತಸಾರ

ಬರೆದವರು:

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಕ್ರಮಾಂಕ : 283
Price List Catalog Sl.No. : 198

ಅಧ್ಯಾತ್ಮ ಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ
ದೂರವಾಣಿ: 08175-273820, 9535790641
www.adhyatmaprakasha.org.
e-mail: secretary@adhyatmaprakasha.org
coordinator_apk@yahoo.com

ಬೆಂಗಳೂರು ಶಾಖೆ :
ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028. ದೂ : 080 -2676 5548
e-mail: shankara.bhaskara@gmail.com

2021

BHAGAVATHAMRUTHASARA -
by Sri Sri Sachidananda Saraswathi Swamijigalu,
Published by: Adhyatma Prakasha Karyalaya, Holenarasipura-573211,
Hassan District, Karnataka State, INDIA.
Phone: 08175-273820

website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

ಪ್ರಥಮ ಮುದ್ರಣ : 2021 - 500 ಪ್ರತಿಗಳು

ಮುದ್ರಣ ಕಾಗದ : 70 GSM NS Maplitho

ಪುಟಗಳು : 14+ 349=363

ಬೆಲೆ : ರೂ. 160/-

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ:*
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ದೂರವಾಣಿ: 08175-273820
e-mail: secretary@adhyatmaprakasha.org

ಬೆಂಗಳೂರು ಶಾಖೆ:
ಅಧ್ಯಾತ್ಮಪ್ರಕಾಶಕಾರ್ಯಾಲಯ
ನಂ. 68, (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548
e-mail: shankara.bhaskara@gmail.com

ಅಕ್ಷರ ಜೋಡಣೆ ಮತ್ತು ಮುದ್ರಣ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿ ಲೇಔಟ್,
ಬೆಂಗಳೂರು - 560 062. ಮೊಬೈಲ್: 98453 46197

# ಪ್ರಕಾಶಕರ ಬಿನ್ನಹ

ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯುವವರಿಗೆ ಶ್ರೀಮದ್ಭಾಗವತವು ಜ್ಞಾನದೀಪವಾಗಿದೆ. ಇದರಲ್ಲಿ ಭಗವಂತನ ದಶಾವತಾರ, ಇಪ್ಪತ್ತನಾಲ್ಕು ಅವತಾರಗಳವರ್ಣನೆ ಅಲ್ಲದೆ ಶ್ರೀಕೃಷ್ಣನಾಗಿ ಲೋಕದಲ್ಲಿ ತೋರಿದ ಲೀಲಾವಿನೋದಗಳು, ಆಮೂಲಕ ಉಪದೇಶಿಸಿದ ಕರ್ಮ, ಭಕ್ತಿ, ಉಪಾಸನೆ, ಜ್ಞಾನಗಳ ವರ್ಣನೆಯು ಅತ್ಯಂತ ಚೇತೋಹಾರಿಯಾಗಿ ಭಾವುಕ ರಸಿಕ ಭಕ್ತರಿಗೆ ಮನಃಪ್ರಸನ್ನತೆಯನ್ನು ಕೊಡುವದಾಗಿದೆ. ಇದು ಶುಕಮುಖದಿಂದ ಹೊರಹೊಮ್ಮಿದ್ದೂ ಸಕಲ ಶಾಸ್ತ್ರಗಳ ಸಾರವೂ ಆಗಿದೆ. ಪುರಾಣಗಳು ತತ್ತ್ವವನ್ನು ತಿಳಿಸಬೇಕಾದರೆ ಕಥಾ ಮಾಧ್ಯಮವನ್ನು ಅನುಸರಿಸುತ್ತದೆ. ಆಗ ಉಪದೇಶಗಳನ್ನು ಗ್ರಹಿಸುವದು ಕಷ್ಟವಾಗುತ್ತದೆ. ಕಥೆಯನ್ನುಳಿದು ಉಪದೇಶಗಳಷ್ಟೇ ಅಧ್ಯಾತ್ಮಪ್ರೇಮಿಗಳಿಗೆ ದೊರೆಯಬೇಕೆಂದು ಶ್ರೀಶ್ರೀಗಳವರು ಮಹಾಮುನಿ ವ್ಯಾಸಕೃತವಾದ ಶುಕಮುಖಾಮೃತ ಲೇಪಿತವಾದ ಭಾಗವತದ ಸಾರತಮವಾದ ಭಾಗವನ್ನಷ್ಟೇ ಆಯ್ದು ವಾಚಕರಿಗೆ ಲಭ್ಯವಾಗಿಸಿದ್ದಾರೆ.

ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 24ನೇ ಸಂಪುಟ 3ನೇ ಸಂಚಿಕೆ (1954)ಯಿಂದ ಆರಂಭಿಸಿ 41ನೇ ಸಂಪುಟ 12ನೇ ಸಂಚಿಕೆ (1972) ಯವರೆಗೆ ಸುಮಾರು 140 ಕಂತುಗಳಲ್ಲಿ ಶ್ರೀಮದ್ಭಾಗವತಪುರಾಣದ ತತ್ತ್ವಬೋಧಕ ಪ್ರಕರಣಗಳನ್ನಷ್ಟೇ ಆಯ್ದು **ಭಾಗವತಾಮೃತಸಾರ** ಎಂಬ ಶೀರ್ಷಿಕೆಯಲ್ಲಿ ಶ್ಲೋಕ, ಭಾವಾರ್ಥಗಳನ್ನಷ್ಟೇ ಪ್ರಕಟಿಸಲಾಗಿತ್ತು. ಅದು ಒಂದನೇ ಸ್ಕಂಧದಿಂದ ಆರಂಭಿಸಿ ಹನ್ನೊಂದನೇ ಸ್ಕಂಧದ ಹದಿನೇಳನೇ ಅಧ್ಯಾಯದ 30ನೇ ಶ್ಲೋಕದವರೆಗೆ ಸಂಗ್ರಹಿಸಿ ಪ್ರಕಟಿಸಿದ್ದರು. ಅಲ್ಲಿಂದ ಮುಂದಿನ ಭಾಗದಲ್ಲೂ ಕೆಲವು ಅಮೂಲ್ಯ ಉಪದೇಶಗಳಿವೆ ಎಂದು ಅವನ್ನು ಕಾರ್ಯಾಲಯದ ವಿದ್ವಾಂಸರುಗಳಿಂದ ಆಯ್ಕೆ ಮಾಡಿಸಿ ಶ್ಲೋಕ, ಭಾವಾರ್ಥಗಳೊಡನೆ ಪ್ರಕಟಿಸಲಾಗಿದೆ. ಪತ್ರಿಕೆಯಲ್ಲಿ ಎಲ್ಲ ಭಾಗಗಳೂ ಭಾಗವತಾಮೃತಸಾರ ಎಂಬ ಶೀರ್ಷಿಕೆಯಷ್ಟರಿಂದಲೇ ಪ್ರಕಟವಾಗಿದ್ದವು. ಈಗ ಪ್ರತಿಯೊಂದು ಕಡೆಯಲ್ಲಿಯೂ ಉಚಿತವಾದ ಶೀರ್ಷಿಕೆಯನ್ನು ಸೇರಿಸಿದೆ. ಇದರಿಂದ ವಾಚಕರಿಗೆ ಅಧ್ಯಯನಕ್ಕೆ ಅನುಕೂಲವಾಗುವದೆಂದು ನಂಬಿದ್ದೇವೆ.

ಗ್ರಂಥದ ಆಶಯವನ್ನು ಸ್ವಲ್ಪದರಲ್ಲಿಯೇ ತಿಳಿಸುವ ಮುನ್ನುಡಿಯನ್ನು ಶ್ರೀ ಶ್ರೀಪ್ರಕಾಶಾನಂದೇಂದ್ರಸರಸ್ವತೀಸ್ವಾಮಿಗಳು ಬರೆದಿರುತ್ತಾರೆ.

ಪತ್ರಿಕೆಯಿಂದ ಈ ಲೇಖನಗಳನ್ನು ಸಂಗ್ರಹಿಸುವದರಲ್ಲಿ ಶ್ರೀ ಡಾ॥ ವೈ. ಅನಂತನಾರಾಯಣ ಸಹಾಯವನ್ನು ಮಾಡಿರುತ್ತಾರೆ. ಕರಡುತಿದ್ದುವುದರಲ್ಲಿ ಶ್ರೀ ಲಕ್ಷ್ಮೀಶ ಭಟ್ಟ ಮತ್ತು ಯು. ಪಿ. ಶ್ರೀಕಂಠ ಸಹಾಯವನ್ನು ಮಾಡಿರುತ್ತಾರೆ. ಶ್ರೀ ಆರ್. ಬಿ. ಗೋಪಿನಾಥ್ ಬೆಂ. 5000/– ಧನಸಹಾಯವನ್ನು ನೀಡಿರುತ್ತಾರೆ. ಹೀಗೆ ಪ್ರತ್ಯಕ್ಷ ಪರೋಕ್ಷವಾಗಿ ಸಹಾಯನೀಡಿದ ಎಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ವಾಚಕರು ಎಂದಿನಂತೆ ಕಾರ್ಯಾಲಯದಲ್ಲಿ ನಡೆಸಲಾಗುತ್ತಿರುವ ಅಧ್ಯಾತ್ಮಪ್ರಸಾರಕಾರ್ಯದಲ್ಲಿ ತನುಮನಧನಗಳಿಂದ ಸಹಕರಿಸಿ ಶ್ರೇಯೊಭಾಗಿಗಳಾಗಿರೆಂದು ಪ್ರಾರ್ಥಿಸುತ್ತೇವೆ.

ಶ್ರೀ ಪ್ಲವನಾಮ ಸಂವತ್ಸರ
**ಆಷಾಢಕೃಷ್ಣ ತ್ರಯೋದಶಿ** **ಪ್ರಕಾಶಕರು**
**(ಶ್ರೀಶ್ರೀಗಳವರ ಆರಾಧನೆ)**
**ದಿನಾಂಕ: 6–08–2021**

# ಮುನ್ನುಡಿ

## ಭಾಗವತ ಮತ್ತು ಅದರ ವಿಷಯಗಳು

ಪುರಾಣಗಳಲ್ಲಿ ಭಾಗವತವು ಅತ್ಯಂತ ಉತ್ತಮವಾದದ್ದೆಂದು ಪರಿಗಣಿಸಲ್ಪಟ್ಟಿದೆ, ಹಾಗಾಗಿ ಇದನ್ನು ಪುರಾಣರಾಜ ಎನ್ನುತ್ತೇವೆ. ಪ್ರಸಿದ್ಧವಾದ ಪ್ರಸ್ಥಾನತ್ರಯಿಗಳ ನಂತರದ ಸ್ಥಾನವನ್ನು ಪಡೆದಿರುವುದರಿಂದ, ಚತುರ್ಥ ಪ್ರಸ್ಥಾನವೆಂದೂ ಇದನ್ನು ಕರೆಯುತ್ತೇವೆ. ಹಿಂದೂ ಧರ್ಮದ ವಿವಿಧ ಅಂಶಗಳನ್ನು ಒಂದೆಡೆ ವಿವರಿಸುವದರಿಂದ ಇದನ್ನು ಹಿಂದೂ ಧರ್ಮದ ವಿಶ್ವಕೋಶ ಎನ್ನಬಹುದು. ಇದು ವೇದದ ವಿವರಣಾತ್ಮಕ ವ್ಯಾಖ್ಯಾನ, ಏಕೆಂದರೆ ಇದು ಸಂಪೂರ್ಣ ವೈದಿಕ ಸಾಹಿತ್ಯವನ್ನು ಬಹುಸುಂದರವಾದ ಕಾವ್ಯಾತ್ಮಕ ಭಾಷೆಯಲ್ಲಿ ರೂಪಾಂತರದಿಂದ ಹೇಳುತ್ತದೆ. ವೇದವು ಪ್ರತಿಪಾದಿಸುವ ಕರ್ಮ, ಉಪಾಸನೆ ಮತ್ತು ಜ್ಞಾನಗಳನ್ನು ಒಳಗೊಂಡಿದೆ. ಭಾಗವತವು ಧರ್ಮಶಾಸ್ತ್ರವೂ ಹೌದು, ಹಾಗೆಯೇ ವಿವಿಧ ವ್ರತ ಮತ್ತು ಆಚರಣೆಗಳನ್ನು ಹಲವಾರು ಕಥಾಸಂದರ್ಭಗಳ ಮೂಲಕ ತಿಳಿಸುವ ಕರ್ಮಶಾಸ್ತ್ರವೂ ಹೌದು.

ಪ್ರತೀಕೋಪಾಸನೆ, ಅಹಂಗ್ರಹೋಪಾಸನೆ ಮುಂತಾದ ಉಪಾಸನೆಗಳನ್ನದು ವರ್ಣಿಸುತ್ತದೆ. ಸಗುಣ ಮತ್ತು ನಿರ್ಗುಣ ಬ್ರಹ್ಮದ ಸ್ವರೂಪವನ್ನು ಆಯಾ ಪ್ರಕರಣಕ್ಕೆ ತಕ್ಕಂತೆ ಮನದಟ್ಟಾಗುವಂತೆ ಬೋಧಿಸುತ್ತದೆ. ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ಉತ್ತರಾಯಣ–ದಕ್ಷಿಣಾಯನ ಮಾರ್ಗ ಹಾಗೂ ಅಧಿಕಾರಿಯು ಅದರ ಮೂಲಕ ಪಡೆಯುವ ಲೋಕಗಳನ್ನು ತಿಳಿಸುತ್ತದೆ. ಈ ಗ್ರಂಥದಲ್ಲಿ ವಿವರಿಸಿರುವ ಅವತಾರತತ್ತ್ವವು ಅನನ್ಯಾದೃಶ. ಇಲ್ಲಿ ಇಪ್ಪತ್ತ ನಾಲ್ಕು ಅವತಾರಗಳೊಂದಿಗೆ ದಶಾವತಾರವೂ ಕೂಡ ಅತ್ಯಂತ ಸುಂದರವಾಗಿ ವರ್ಣಿತವಾಗಿದೆ.

ಇದೊಂದು ಉತ್ತಮ ವೇದಾಂತ ಗ್ರಂಥವೂ ಆಗಿದೆ. ಭಾಗವತದಲ್ಲಿ ವೇದಾಂತದ ಉಪದೇಶಗಳು ಎಲ್ಲೆಡೆ ಹರಡಿರುವುದು ಕಂಡುಬರುತ್ತದೆ. ಬೇರೆ ಎಲ್ಲಾ ಪುರಾಣಗಳಲ್ಲೂ ವೇದಾಂತೋಪದೇಶಗಳನ್ನು ನಾವು ಕಾಣಬಹುದು. ಅಲ್ಲಿಯೂ ಮುಖ್ಯವಾಗಿ ಕಾರ್ಯ–ಕಾರಣ ಪ್ರಕ್ರಿಯೆ ಮಾತ್ತು ಕೆಲವೆಡೆ ದೃಗ್–ದೃಶ್ಯ ಪ್ರಕ್ರಿಯೆಯನ್ನೇ ಕಾಣುತ್ತೇವೆ. ಅವಸ್ಥಾತ್ರಯ ಪ್ರಕ್ರಿಯೆಯು ಕಂಡುಬರುವುದಿಲ್ಲ.

ಆದರೂ ಭಾಗವತವು ಈ ಪ್ರಕ್ರಿಯೆಯನ್ನು ವಿಶಿಷ್ಟವಾಗಿ ನಿರೂಪಿಸುತ್ತದೆ. ಇಲ್ಲಿ ವೇದಾಂತೋಪದೇಶವು ಎರಡು ಬಗೆಯಾಗಿ ಕಂಡು ಬರುತ್ತಿದೆ. ಒಂದು ಭಗವತ್-ಸ್ತುತಿರೂಪವಾದರೆ, ಇನ್ನೊಂದು ಉಪದೇಶಪರವಾದುದು.

## ಭಾಗವತಾಮೃತ ಸಾರ

ಆ ವೇದಾಂತೋಪದೇಶಗಳನ್ನು ಕ್ರೋಢೀಕರಿಸಿದರೆ, ಭಾಗವತಪ್ರೋಕ್ತ ವೇದಾಂತವು ಒಂದೆಡೆಯೇ ಸಿಕ್ಕುತ್ತದೆ ಎಂದು ಪೂಜ್ಯ ಸ್ವಾಮಿಗಳು ಮನಗಂಡಿದ್ದರು. ಹಾಗಾಗಿ ಅಂತಹ ಶ್ಲೋಕಗಳನ್ನು ಆರಿಸುತ್ತಾ ಕೇವಲ ಸರಳಾನುವಾದವನ್ನು (ಟಿಪ್ಪಣಿ ರಹಿತವಾಗಿ) ಅಧ್ಯಾತ್ಮಪ್ರಕಾಶ ಮಾಸ ಪತ್ರಿಕೆಯಲ್ಲಿ ಪ್ರಕಟಿಸುತ್ತಾ ಬಂದರು. ಈಗ ಕಾರ್ಯಾಲಯವು ಅವುಗಳನ್ನು ಮಾಸಪತ್ರಿಕೆಯಿಂದ ಸಂಗ್ರಹಿಸಿ, ಪುಸ್ತಕರೂಪವಾಗಿ ಪ್ರಕಟಿಸುತ್ತಿದೆ.

ಭಾಗವತ ಸಪ್ತಾಹವನ್ನು ಕೇಳಿರುವ ಜನರು ಅದು ಸುಂದರವಾದ ಕಥಾನಕದ ಮೂಲಕ ವೈರಾಗ್ಯ, ನೀತಿ, ಮೌಲ್ಯ, ಭಗವದ್ಗುಣಗಳು ಮತ್ತು ಭಕ್ತಿಯನ್ನು ತಿಳಿಸುವ ಗ್ರಂಥವೆಂದೇ ತಿಳಿದಿರುತ್ತಾರೆ. ಆದರೆ ಇದೊಂದು ವೇದಾಂತಗ್ರಂಥವೆಂಬುದನ್ನು ತಿಳಿದಿಲ್ಲ, ಏಕೆಂದರೆ ಈ ವೇದಾಂತದ ಭಾಗಗಳನ್ನು ಪ್ರವಚನಕಾರರು ಸಪ್ತಾಹದ ಪ್ರವಚನಗಳಲ್ಲಿ ಬಿಟ್ಟುಬಿಟ್ಟಿರುತ್ತಾರೆ.

ವಿಷ್ಣುಪುರಾಣವು ಹೇಳಿರುವ ಉಪದೇಶಗಳನ್ನೇ ಭಾಗವತವು ಇನ್ನೂ ವಿವರವಾಗಿ ಹೇಳುತ್ತದೆ ಎಂದು ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು ಹೇಳುತ್ತಿದ್ದರು. ಹಾಗಾಗಿ ಭಾಗವತವನ್ನು **ವಿಷ್ಣುಪುರಾಣದ ವ್ಯಾಖ್ಯಾನ** ಎಂದು ಕರೆಯಬಹುದು.

ಭಾಗವತವು ಇಡಿಯ ಭಾರತದಲ್ಲೇ ಅತ್ಯಂತ ಪ್ರಸಿದ್ಧ ಪುರಾಣವು. ಎಲ್ಲಾ ಭಾರತೀಯ ಭಾಷೆಗಳಿಗೂ ಮತ್ತು ಆಂಗ್ಲ ಭಾಷೆಗೂ ಇದು ಅನುವಾದಗೊಂಡಿದೆ. ಇಂಗ್ಲೀಷ್ ಭಾಷೆಯಲ್ಲೇ ಒಂದಕ್ಕಿಂತ ಹೆಚ್ಚಿನ ಅನುವಾದಗಳಿವೆ. ಇದು ಈ ಗ್ರಂಥದ ಪ್ರಸಿದ್ಧಿಯನ್ನೂ ಇದರ ಕುರಿತು ಜನರ ಆದರವನ್ನೂ ತೋರಿಸುತ್ತದೆ.

## ಗ್ರಂಥದ ಪ್ರಾಮಾಣ್ಯ ಮತ್ತು ಗ್ರಂಥಕರ್ತೃವಿನ ವಿಚಾರ

ಗ್ರಂಥದ ಪ್ರಾಚೀನತೆಯ ಕುರಿತು ಕೆಲವು ಭಿನ್ನಾಭಿಪ್ರಾಯಗಳಿವೆ. ಶಂಕರಾಚಾರ್ಯರು ವಿಷ್ಣುಪುರಾಣದ ಶ್ಲೋಕಗಳನ್ನು ಹಲವಾರು ಬಾರಿ ಉಲ್ಲೇಖಿಸಿದ್ದರೂ, ಒಮ್ಮೆಯೂ ಭಾಗವತದ ಶ್ಲೋಕಗಳನ್ನು ಪ್ರಸ್ತಾಪಿಸಲಿಲ್ಲ. ಇದನ್ನು

ಗಮನಿಸಿದ ಕೆಲವು ವಿದ್ವಾಂಸರು, ಭಾಗವತವು ವಿಷ್ಣುಪುರಾಣದಷ್ಟು ಹಳೆಯದಲ್ಲದೇ ಇರಬಹುದು, ಹಾಗಾಗಿ ಇದು ಶಂಕರರ ಕಾಲದ ನಂತರದ ರಚನೆಯಿರಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇನ್ನೂ ಕೆಲವು ವಿದ್ವಾಂಸರುಗಳು ಭಾಗವತವು ವಿಷ್ಣುಪುರಾಣದ ಸಮಯದಲ್ಲೇ ಇತ್ತು ಎಂಬ ಪಕ್ಷವನ್ನು ಎತ್ತಿ ಹಿಡಿಯುತ್ತಾರೆ. ಏಕೆಂದರೆ, ಯಾವ ವಿಷ್ಣುಪುರಾಣವನ್ನು ಪ್ರಾಚೀನ ಎಂದು ಪರಿಗಣಿಸುತ್ತಾರೋ ಅದೇ ಪುರಾಣವು ಭಾಗವತವನ್ನು ಹದಿನೆಂಟು ಪುರಾಣಗಳಲ್ಲಿ ಒಂದು ಎಂದು ಉಲ್ಲೇಖಿಸುತ್ತದೆ. ಹಾಗಾಗಿ ಭಾಗವತವು ಹಿಂದಿನ ಕಾಲದಲ್ಲೇ ಇದ್ದುಕೊಂಡು ನಂತರದ ಕಾಲದಲ್ಲಿ ಈಗಿನ ರೂಪಕ್ಕೆ ಮೆರಗುಗಾಣಿಸಿ ರಚಿಸಿರಬಹುದು ಎಂದು ಹೇಳಬಹುದು. ಹಾಗಾಗಿ ಇದರ ಮೂಲರೂಪವು ಭಗವಾನ್ ವೇದವ್ಯಾಸರಿಂದ ರಚಿಸಲ್ಪಟ್ಟದ್ದೆಂದು ಹೇಳಬಹುದು. ಇದಕ್ಕೆ ಪೂರಕವಾಗಿ ಈ ಕೆಳಗಿನ ಶ್ಲೋಕಗಳನ್ನು ನೋಡಿ.

**ಆಖ್ಯಾನೈಶ್ಚಾಪ್ಯುಪಾಖ್ಯಾನೈಃ ಗಾಥಾಭಿಃ ಕಲ್ಪಶುದ್ಧಿಭಿಃ ।**

**ಪುರಾಣಸಂಹಿತಾಂ ಚಕ್ರೇ ಪುರಾಣಾರ್ಥವಿಶಾರದಃ ॥ 15 ॥**

**ಪ್ರಖ್ಯಾತೋ ವ್ಯಾಸಶಿಷ್ಯೋಽಭೂತ್ ಸೂತೋ ವೈ ರೋಮಹರ್ಷಣಃ ।**
**ಪುರಾಣಸಂಹಿತಾಂ ತಸ್ಮೈ ದದೌ ವ್ಯಾಸೋ ಮಹಾಮತಿಃ ॥ 16 ॥**

**ಅಷ್ಟಾದಶ ಪುರಾಣಾನಿ ಪುರಾಣಜ್ಞಾಃ ಪ್ರಚಕ್ಷತೇ ॥ 20 ॥**

**ಬ್ರಾಹ್ಮಂ, ಪಾದ್ಮಂ, ವೈಷ್ಣವಂ ಚ ಶೈವಂ, ಭಾಗವತಂ ತಥಾ ॥ 21 ॥**

(ವಿ. ಪು. 3–6–15, 16, 20, 21)

ಮೇಲಿನ ಶ್ಲೋಕಗಳ ಅರ್ಥವು ಹೀಗಿದೆ: (15) ಪುರಾಣಗಳ ಅರ್ಥವನ್ನೂ ಚೆನ್ನಾಗಿ ಬಲ್ಲವರಾದ ವ್ಯಾಸರು ಪ್ರಾಚೀನ ಆಖ್ಯಾನ ಮತ್ತು ಉಪಾಖ್ಯಾನ ಮುಂತಾದವುಗಳಿಂದ (ಈ) ಪುರಾಣ ಸಂಹಿತೆಯನ್ನು ರಚಿಸಿದರು.

(16) ರೋಮಹರ್ಷಣರ ಮಗನಾದ ಸೂತರು ವೇದವ್ಯಾಸರ ಪ್ರಸಿದ್ಧ ಶಿಷ್ಯ(ರು). ಮಹಾಮತಿಯಾದ ವ್ಯಾಸರು ಈ ಪುರಾಣಸಂಹಿತೆಯನ್ನು ಆ ಸೂತರಿಗೆ ಉಪದೇಶಿಸಿದರು.

(20) ಪುರಾಣವನ್ನು ಬಲ್ಲವರು ಹದಿನೆಂಟು ಪುರಾಣಗಳಿವೆಯೆಂದು ಹೇಳುತ್ತಾರೆ (ಅವುಗಳು ಹೀಗಿವೆ).

(21) ಬ್ರಾಹ್ಮ, ಪಾದ್ಮ, ವಿಷ್ಣು, ಶಿವ ಮತ್ತು ಭಾಗವತ ಇತ್ಯಾದಿ.

ಇದು ಹೇಗೇ ಇರಲಿ, ಹಿಂದೂ ಸಂಪ್ರದಾಯವು ಶಾಸ್ತ್ರಗಳನ್ನು ಕಾಲಾತೀತ ಎಂದು ತಿಳಿದಿದೆ, ಕಾಲಾತೀತ ಅಂದರೆ ಇದರ ಪ್ರಾಮಾಣ್ಯವನ್ನು – ಇದು ಎಷ್ಟು ಪ್ರಾಚೀನ ಅಥವಾ ನವೀನ ಗ್ರಂಥ – ಎಂಬುದರಿಂದ ಅಳೆಯಲಾಗದು. ಅವುಗಳಲ್ಲಿ ಪ್ರತಿಪಾದಿತ ವಿಷಯುಗಳು ಪ್ರಾಮಾಣಿಕವಾಗಿದ್ದರೆ ಅವು ಪ್ರಾಮಾಣಿಕವೆನ್ನಲ್ಪಡುತ್ತವೆ. ಶೃತಿ–ಸ್ಮೃತಿ–ಪುರಾಣಗಳಲ್ಲಿ ಮೊದಲೇ ಕಂಡುಬರುವ ವಿಷಯಗಳನ್ನು ವಿಷ್ಣುಪುರಾಣವು ಹೇಳುತ್ತದೆ, ಮತ್ತು ಭಾಗವತದ ಎಲ್ಲಾ ಭಾಗಗಳೂ ವಿಷ್ಣುಪುರಾಣದಲ್ಲಿಯೂ ಕಂಡುಬರುತ್ತವೆ ಮತ್ತು ಅವು ಶ್ರುತಿ, ಸ್ಮೃತಿ ಇತರ ಪುರಾಣಗಳಿಗೂ ಸಮ್ಮತವಾಗಿವೆ. ಅಷ್ಟೇ ಅಲ್ಲದೇ ಹಿಂದೂಧರ್ಮದ ವಿವಿಧ ಸಂಪ್ರದಾಯಗಳು ಭಾಗವತದಲ್ಲಿನ ಉಪದೇಶಗಳನ್ನೂ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಸ್ವೀಕರಿಸಿ, ಅಧ್ಯಯನಮಾಡಿ, ಧ್ಯಾನಿಸಿ, ಚಿಂತಿಸಿ ಬೋಧಿಸುತ್ತವೆ. ಹಾಗಾಗಿ ಇದು ಹಿಂದೂ ಧರ್ಮದ ಎಲ್ಲಾ ಸಂಪ್ರದಾಯಗಳಿಂದ ಒಮ್ಮತದಿಂದ ಸ್ವೀಕರಿಸಲ್ಪಟ್ಟಿದೆ, ಈ ಎಲ್ಲಾ ಕಾರಣಗಳಿಂದ ಇದರ ಪ್ರಾಮಾಣಿಕತೆ ಪ್ರಶ್ನಾತೀತವಾಗಿದೆ. ಇದೂ ಅಲ್ಲದೆ ವೇದಾಂತದ ಹಲವು ವ್ಯಾಖ್ಯಾನಕಾರರು ತಮ್ಮ ವ್ಯಾಖ್ಯಾನಗಳಲ್ಲಿ ವೇದಾಂತದ ಅಂಶಗಳನ್ನು ವಿವರಿಸುವಾಗ ಭಾಗವತದ ಶ್ಲೋಕಗಳನ್ನು ಉದ್ಧರಿಸುವುದನ್ನು ಆಗಾಗ ನೋಡುತ್ತೇವೆ.

## ಸ್ವಾಮಿಗಳ ಸಾಹಿತ್ಯದಲ್ಲಿ ಭಾಗವತದ ಉಲ್ಲೇಖಗಳು

ಪೂಜ್ಯ ಸ್ವಾಮಿಗಳು ತಮ್ಮ ಲೇಖನ ಮತ್ತು ಪ್ರವಚನಗಳಲ್ಲಿ ಭಾಗವತದ ಕಥೆ ಮತ್ತು ಶ್ಲೋಕಗಳನ್ನು ಪದೇ ಪದೇ ಉಲ್ಲೇಖಿಸುತ್ತಿದ್ದರು. ಅವರ ಅನೇಕ ಪುಸ್ತಕಗಳಲ್ಲಿ ಅವುಗಳನ್ನು ಕಾಣಬಹುದು. ನಾರದ ಭಕ್ತಿಸೂತ್ರದ ಮೇಲೆ ಸ್ವಾಮಿಗಳು ಬರೆದ "ಭಕ್ತಿಚಂದ್ರಿಕೆ" ಎಂಬ ಕನ್ನಡದ ವ್ಯಾಖ್ಯಾನ ಪುಸ್ತಕದಲ್ಲಿ ಭಾಗವತದಲ್ಲಿನ ಭಕ್ತಿಪರ ಶ್ಲೋಕಗಳ ಬಹುಭಾಗ ಒಂದೆಡೆಯೇ ಸಿಗುವಂತೆ ಮಾಡಿದ್ದಾರೆ. ವೇದಾಂತ ಜ್ಞಾನದ ಮೇಲೆ ಅವರು ಸಂಗ್ರಹಿಸಿದ ಶ್ಲೋಕಗಳನ್ನು ಈ ಪುಸ್ತಕದಲ್ಲಿಯೇ ಕಾಣಬಹುದು.

## ಭಾಗವತಾಧ್ಯಯನಕ್ಕೆ ಅಧಿಕಾರ (ಯೋಗ್ಯತೆ)

ಸ್ವಯಂ ಭಾಗವತವೇ ತಾನು ವೇದ ಸಮಾನ ಗ್ರಂಥವೆಂದು ಮತ್ತು ವೇದ–ಇತಿಹಾಸ ಮತ್ತು ಪುರಾಣಗಳ ಸಾರವು ಎಂದು ಹೇಳಿದೆ. ಉದಾಹರಣೆಗೆ:

**ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।** (ಭಾಗ. 1–4–40)
**ಸರ್ವವೇದೇತಿಹಾಸಾನಾಂ ಸಾರಂ ಸಾರಂ ಸಮುದ್ಧೃತಮ್ ।**(ಭಾಗ. 1–4–42)

ಮಹಾಭಾರತ ಮತ್ತು ಭಾಗವತವೇ ಮುಂತಾದ ಪುರಾಣಗಳನ್ನು ಅಧ್ಯಯನ ಮಾಡಲು ಅಧಿಕಾರಿತ್ವದ ವಿಷಯದಲ್ಲಿ ಯಾವುದೇ ನಿಷೇಧವಿಲ್ಲ. ವರ್ಣ, ಲಿಂಗ ಇವೇ ಮುಂತಾದವುಗಳ ತಾರತಮ್ಯವಿಲ್ಲದೇ ಎಲ್ಲರೂ ಭಾಗವತವನ್ನು ಪಾರಾಯಣ ಮಾಡಬಹುದು. ಇದಕ್ಕೆ ಭಾಗವತದ ಅನುಗ್ರಹವೂ, ಋಷಿಗಳಿಂದ ಒಪ್ಪಿಗೆಯೂ ಇದೆ, ಈ ವಿಷಯದ ಕುರಿತು ಸ್ವಯಂ ಭಾಗವತವೇ ಹೀಗೆ ಹೇಳಿದೆ:

**ಸ್ತ್ರೀ–ಶೂದ್ರ–ದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ ।**
**ಕರ್ಮಶ್ರೇಯಸಿ ಮೂಢಾನಾಂ ಶ್ರೇಯ ಏವಂ ಭವೇದಿಹ ।**
**ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಮ್ ।** (ಭಾಗ. 1–4–15)

ಶ್ಲೋಕದ ಅರ್ಥ: "ವೇದಗಳನ್ನು ನೇರವಾಗಿ ಅಧ್ಯಯನ ಮಾಡಲಾಗದ ಸ್ತ್ರೀ–ಶೂದ್ರ ಮತ್ತು ದ್ವಿಜಬಂಧುಗಳು, ವೇದೋಕ್ತ ಕರ್ಮ, ಭಕ್ತಿ ಇವೇ ಮೊದಲಾದ ಜ್ಞಾನಗಳಿಂದ ವಂಚಿತರಾಗಬಾರದು. ಅಷ್ಟೇ ಅಲ್ಲದೆ, ಅವರುಗಳು ಈ ಜ್ಞಾನವನ್ನು ಪಡೆದು ತನ್ಮೂಲಕ ಸದ್ಗತಿಯನ್ನು ಪಡೆಯಬೇಕು. ಹಾಗಾಗಿ ವ್ಯಾಸರು ಕರುಣೆಯಿಂದ ವೇದದ ಸಾರವನ್ನು ಆರಿಸಿ ಈ ಗ್ರಂಥವನ್ನು ರಚಿಸಿದರು." ಹಾಗಾಗಿ ಇದು ಅಂತಹವರಿಗೋಸ್ಕರವೇ ವಿಶೇಷವಾಗಿ ರಚಿಸಲ್ಪಟ್ಟದ್ದು. ಆದ್ದರಿಂದ ಯಾರಿಗೆ ವೇದದಲ್ಲಿ ಏನಿದೆ ಮತ್ತು ವೇದವು ಮನುಷ್ಯನ ಇಹ–ಪರ ಜೀವನ, ಈ ಜೀವನದ ಗುರಿ, ಇವೇ ಮೊದಲಾದವುಗಳನ್ನು ಕುರಿತು ಏನು ಹೇಳಿದೆ ಎಂದು ತಿಳಿಯುವ ಹಂಬಲ ಇದೆಯೋ, ಅವರು ಭಾಗವತವನ್ನು ತಪ್ಪದೇ ಓದಲೇಬೇಕು.

ವೇದವನ್ನು ಸಾಕ್ಷಾತ್ ಅಧ್ಯಯನ ಮಾಡಲು ಅಧಿಕಾರವಿರುವ ದ್ವಿಜರೂ ಸಹ ಭಾಗವತಾಧ್ಯಯನದಿಂದ ಪ್ರಯೋಜನವನ್ನು ಪಡೆಯತಕ್ಕದ್ದಿದೆ. ಏಕೆಂದರೆ ಇತಿಹಾಸ ಮತ್ತು ಪುರಾಣಗಳು ವೇದಕ್ಕೆ ವಿಸ್ತೃತ ವ್ಯಾಖ್ಯಾನಗಳು. ಅವುಗಳ ಸಹಾಯವಿಲ್ಲದೆಯೇ ವೇದವನ್ನು ಅರ್ಥಮಾಡಿಕೊಳ್ಳಲಾಗದು. (ಅದರ ಕುರಿತು) ಮಹಾಭಾರತವು ಹೀಗೆ ಹೇಳುತ್ತದೆ.

**ಇತಿಹಾಸ ಪುರಾಣಾಭ್ಯಾಂ ವೇದಾರ್ಥಮುಬೃಂಹಯೇತ್ ।**
**ಭೇತ್ಯಲ್ಪಶ್ರುತಾದ್ ವೇದಃ ಮಾಮಯಂ ಪ್ರಹರಿಷ್ಯತಿ ॥** (ಆದಿ. 1. 267–268)

ಒಬ್ಬ ಮನುಷ್ಯನು ವೇದದ ಅರ್ಥದ ಕುರಿತು ವ್ಯಾಖ್ಯಾನವನ್ನು ಇತಿಹಾಸ (ರಾಮಾಯಣ ಮತ್ತು ಮಹಾಭಾರತದಂತಹವುಗಳು) ಮತ್ತು ಪುರಾಣ (ವಿಷ್ಣುಪುರಾಣ ಮತ್ತು ಭಾಗವತದಂತಹವು)ಗಳಿಂದ ಪಡೆಯಲೇಬೇಕು. ಅವನು ಕೇವಲ ವೇದವನ್ನು ಮಾತ್ರ ಓದುತ್ತಾ ಇತಿಹಾಸ ಪುರಾಣಗಳನ್ನು ತಿರಸ್ಕರಿಸುವವನ ಕುರಿತು ವೇದವು ತನ್ನನ್ನು ಅನ್ಯಥಾ ವ್ಯಾಖ್ಯಾನ ಮಾಡುತ್ತಾನೇನೋ ಎಂದು ಭಯಗೊಳ್ಳುತ್ತದೆ. ವಾಲ್ಮೀಕಿಯೂ ಸಹ ರಾಮಾಯಣವನ್ನು "ವೇದೋಪಬೃಹಂಣಾರ್ಥಾಯ" [ರಾಮಾ. 1–4–6] ವೇದಕ್ಕೆ ವ್ಯಾಖ್ಯಾನದಂತೆ ಬರೆದರೆಂದು ರಾಮಾಯಣವೇ ಹೇಳುತ್ತದೆ. ಹಾಗಾಗಿ ಪಂಚಮವೇದವಾದ ರಾಮಾಯಣ, ಮಹಾಭಾರತ ಮತ್ತು ಪುರಾಣಗಳು ದ್ವಿಜ ಮತ್ತು ದ್ವಿಜೇತರರೆಲ್ಲರೂ ಅಧ್ಯಯನ ಮಾಡತಕ್ಕವುಗಳಾಗಿದೆ.

## ಭಾಗವತದ ಮೇಲಿನ ವ್ಯಾಖ್ಯಾನಗಳು:

ಭಾಗವತದ ಮೇಲೆ ಇಪ್ಪತ್ತಕ್ಕೂ ಹೆಚ್ಚಿನ ವ್ಯಾಖ್ಯಾನಗಳಿವೆ ಆದರೆ ಅವೆಲ್ಲಾ ಸಂಸ್ಕೃತದಲ್ಲೇ ಇವೆ. ಆದ್ದರಿಂದ ಭಾಗವತದಲ್ಲಿನ ವೇದಾಂತ ಪರವಾದ ಶ್ಲೋಕಗಳ ಈ ಸಂಗ್ರಹಕ್ಕೆ ಸ್ವಾಮಿಗಳು ಕನ್ನಡದಲ್ಲಿ ವ್ಯಾಖ್ಯಾನಮಾಡಿದ್ದರೆ, ವೇದಾಂತಾಧ್ಯಯನಕ್ಕೆ ಉಪಯೋಗವಾಗುತ್ತಿತ್ತು. ಈಗ ಇದರ ಮೇಲೆ ಶ್ರೀಸ್ವಾಮೀಜೀಗಳ ವ್ಯಾಖ್ಯಾನವಿಲ್ಲದಿರುವದರಿಂದ, ಸಂಸ್ಕೃತ ಬಲ್ಲವರಾದರೆ ಈ ಭಾಗವತಾಮೃತಸಾರದ ಜೊತೆಗೆ ಸಾಂಪ್ರದಾಯಿಕವಾದ, ಪ್ರಸಿದ್ಧ ಮತ್ತು ಶ್ರೇಷ್ಠ ವ್ಯಾಖ್ಯಾನವಾದ **ಭಾವಾರ್ಥ–ಬೋಧಿನಿಯನ್ನು** ನೋಡಬಹುದು, ಇದನ್ನು ಹದಿನಾಲ್ಕನೆಯ ಶತಮಾನದಲ್ಲಿ ಶ್ರೀಧರ ಸ್ವಾಮಿಗಳು ಸಂಸ್ಕೃತದಲ್ಲಿ ರಚಿಸಿದ್ದಾರೆ. ಮುಂದೆ ಕಾರ್ಯಾಲಯವು ಈ ವ್ಯಾಖ್ಯಾನವನ್ನು ಅದರ ಕನ್ನಡಾನುವಾದ ಮತ್ತು ಟಿಪ್ಪಣಿಗಳೊಂದಿಗೆ ಪ್ರಕಟಣೆ ಮಾಡಲಿ ಎಂದು ಆಶಿಸುತ್ತೇನೆ. ಅಂತಹ ವ್ಯಾಖ್ಯಾನಗಳಿಲ್ಲದಿದ್ದರೂ ಪೂಜ್ಯ ಸ್ವಾಮಿಗಳ ಈ ಕನ್ನಡಾನುವಾದವು, ವೇದಾಂತ ಜಿಜ್ಞಾಸುಗಳಿಗೆ ಕೇವಲ ಶ್ಲೋಕಗಳ ಅರ್ಥವನ್ನು ತಿಳಿಸುವ ಮೂಲಕ ಶ್ರವಣ, ಮನನವೇ ಮುಂತಾದವನ್ನು ಮಾಡಿಸುತ್ತದೆ.

## ವೇದಾಂತ ಗ್ರಂಥವೆಂಬ ಮನ್ನಣೆ

ಆಚಾರ್ಯರುಗಳು ವೇದಾಂತಕ್ಕೆ ಇದೊಂದು ಪ್ರಮಾಣಗ್ರಂಥವೆಂದೇ ಪರಿಗಣಿಸಿ ತಮ್ಮ ವ್ಯಾಖ್ಯಾನಗಳಲ್ಲಿ ಇದರಿಂದ ಶ್ಲೋಕಗಳನ್ನುದಾಹರಿಸಿದ್ದಾರೆ. ಸ್ವತಃ ಭಾಗವತವೇ ಕಟ್ಟಕಡೆಯಲ್ಲಿ ತನ್ನ ಸಾರವೇನೆಂದು ಈ ರೀತಿ ಹೇಳಿದೆ:

**ಸರ್ವವೇದಾಂತಸಾರಂ ಯದ್–ಬ್ರಹ್ಮಾತ್ಮೈಕತ್ವ–ಲಕ್ಷಣಮ್ ।**
**ವಸ್ತ್ವದ್ವಿತೀಯಂ, ತನ್ನಿಷ್ಠಂ ಕೈವಲ್ಯೈಕ–ಪ್ರಯೋಜನಮ್ ॥** (ಭಾಗ. 12.13.12)

ಈ ಭಾಗವತವು ಸರ್ವವೇದಾಂತಸಾರವನ್ನು ಈ ರೀತಿಯಾಗಿ ಉಪದೇಶಿಸುತ್ತದೆ. ಇದು ಅದ್ವೈತವೆಂಬ ಯಥಾರ್ಥವನ್ನು ಮತ್ತು ಸಾಲೋಕ್ಯ?, ಸಾಮೀಪ್ಯ, ಸಾರೂಪ್ಯ, ಸಾರ್ಷ್ಟಿ ಮತ್ತು ಸಾಯುಜ್ಯ ಎಂಬ ಸಗುಣ ಮೋಕ್ಷಗಳಿಗಿಂತ ಭಿನ್ನವಾದ ಕೈವಲ್ಯಮೋಕ್ಷವನ್ನು ನೀಡುವ ಬ್ರಹ್ಮಾತ್ಮೈಕ್ಯವನ್ನು ಹೇಳುವ ಜ್ಞಾನ ನಿಷ್ಠೆಯನ್ನು ಉಪದೇಶಿಸುತ್ತದೆ. ಹಾಗಾಗಿ ಈ ಗ್ರಂಥವು ವೇದಾಂತ ಜಿಜ್ಞಾಸುಗಳಿಗೆ ಸ್ವಾಮಿಗಳು ಮಾಡಿರುವ ಇನ್ನೊಂದು ಆಶೀರ್ವಾದ ಎಂಬುದರಲ್ಲಿ ಸಂಶಯವಿಲ್ಲ.

ಹೊಳೆನರಸೀಪುರ
ದಿನಾಂಕ: 10–6–2021

**ನಾರಾಯಣ ಸ್ಮರಣೆಗಳೊಂದಿಗೆ**
**ಸ್ವಾಮೀ ಪ್ರಕಾಶಾನಂದೇಂದ್ರ ಸರಸ್ವತೀ**

# ವಿಷಯಾನುಕ್ರಮಣಿಕೆ


| | | | |
|---|---|---|---|
| 1. | ಮಂಗಲಾಚರಣೆ | – | 1 |
| 2. | ಭಗವದ್ಭಕ್ತಿಯ ಮಾಹಾತ್ಮ್ಯೆ | – | 2 |
| 3. | ಸರ್ವವೂ ನಾರಾಯಣನೇ | – | 7 |
| 4. | ಭಗವಂತನು ಅನಂತಶಕ್ತಿಯುಳ್ಳವನು | – | 9 |
| 5. | ವಿರಿಂಚಿಗೆ ಭಗವಂತನ ಸ್ವರೂಪದರ್ಶನ | – | 11 |
| 6. | ಶ್ರೀಮದ್ಭಾಗವತದ ಹತ್ತು ಲಕ್ಷಣಗಳು | – | 12 |
| 7. | ದೇವತೆಗಳಿಂದ ಭಗವಂತನ ಪ್ರಾರ್ಥನೆ | – | 15 |
| 8. | ಅಜ್ಞಾನಮೋಹ ನಿವಾರಣೆಯಾಗುವ ಬಗೆ | – | 18 |
| 9. | ಬ್ರಹ್ಮಕೃತ ವಿಷ್ಣುಸ್ತೋತ್ರ | – | 19 |
| 10. | ಕಪಿಲ ಭಗವಂತನು ಉಪದೇಶಿಸಿದ ಭಕ್ತಿಯೋಗ | – | 25 |
| 11. | ದೇವಹೂತಿಗೆ ತಿಳಿಸಿದ ತತ್ತ್ವಗಳ ಲಕ್ಷಣ | – | 32 |
| 12. | ಪ್ರಕೃತಿಪುರುಷರ ವಿವೇಕ | – | 34 |
| 13. | ಸಗುಣಭಕ್ತಿಯೋಗದ ಲಕ್ಷಣ | – | 40 |
| 14. | ಭಕ್ತಿಯೋಗದ ವಿಧಗಳು | – | 43 |
| 15. | ಭಕ್ತಿಯೋಗದ ಶ್ರೇಷ್ಠತೆ | – | 45 |
| 16. | ಧ್ರುವನುಮಾಡಿದ ಭಗವತ್ಸ್ತುತಿ | – | 48 |
| 17. | ಪೃಥುರಾಜನಿಗೆ ಭಗವಂತನ ಉಪದೇಶ | – | 52 |
| 18. | ಪ್ರಚೇತಸರಿಗೆ ನಾರದರ ಉಪದೇಶ | – | 54 |
| 19. | ಋಷಭದೇವರು ಪುತ್ರರಿಗೆ ಮಾಡಿದ ಉಪದೇಶ | – | 59 |
| 20. | ರಹೂಗಣರಾಜನಿಗೆ ಭರತಮುನಿಯ ಉಪದೇಶ | – | 63 |
| 21. | ಭಗವನ್ನಾಮಸ್ಮರಣೆಯೇ ಪಾಪಕ್ಕೆ ಪ್ರಾಯಶ್ಚಿತ್ತ | – | 68 |
| 22. | ನಾರದನು ಚಿತ್ರಕೇತುವಿಗೆ ಉಪದೇಶಮಾಡಿದ | – | 70 |
| 23. | ಪಾರ್ವತಿಯಿಂದ ಶಪ್ತನಾದ ಚಿತ್ರಕೇತುವಿನ ನುಡಿ | – | 78 |
| 24. | ಪ್ರಹ್ಲಾದನು ತಿಳಿಸಿದ ಭಗವತ್ ಶರಣಾಗತಿ | – | 80 |
| 25. | ಪ್ರಹ್ಲಾದನು ಅಸುರಬಾಲಕರಿಗೆ ಮಾಡಿದ ಉಪದೇಶ | | 82 |
| 26. | ಪ್ರಹ್ಲಾದನು ನಾರದರಿಂದ ಪಡೆದ ಉಪದೇಶದ ವರ್ಣನೆ | | 85 |
| 27. | ಪ್ರಹ್ಲಾದನು ಹಿರಣ್ಯಕಶಿಪುವಿಗೆ ತಿಳಿಸಿದ ಭಗವತ್ಸ್ವರೂಪ | | 90 |

28. ಪ್ರಹ್ಲಾದನುಮಾಡಿದ ಶ್ರೀನರಸಿಂಹಸ್ತುತಿ – 92
29. ಗಜೇಂದ್ರಮಾಡಿದ ಪರಮಾತ್ಮಸ್ತೋತ್ರ – 102
30. ಸತ್ಯವ್ರತರಾಜನು ಮಾಡಿದ ಮತ್ಸ್ಯಾವತಾರಿ ಪರಮಾತ್ಮನ ಸ್ತುತಿ 110
31. ದೂರ್ವಾಸಮಹರ್ಷಿಗಳಿಗೆ ಭಗವಂತನ ಉಪದೇಶ 112
32. ದೇವತೆಗಳಿಮದ ಗರ್ಭಸ್ಥ ಭಗವಂತನ ಸ್ತುತಿ – 113
33. ವಸುದೇವನು ಮಾಡಿದ ಶ್ರೀಕೃಷ್ಣಸ್ತುತಿ – 116
34. ದೇವಕಿಯು ಮಾಡಿದ ಭಗವತ್ ಸ್ತುತಿ – 117
35. ಬ್ರಹ್ಮನು ಮಾಡಿದ ಭಗವಂತನ ಸ್ತುತಿ – 118
36. ನಾಗಪತ್ನಿಯರು ಮಾಡಿದ ಶ್ರೀಕೃಷ್ಣನ ಸ್ತುತಿ – 128
37. ಅಕ್ರೂರನು ಮಾಡಿದ ಶ್ರೀಕೃಷ್ಣನ ಸ್ತುತಿ – 131
38. ಮುಚುಕುಂದನು ಮಾಡಿದ ಶ್ರೀಕೃಷ್ಣನ ಸ್ತುತಿ – 137
39. ಭೂಮಿದೇವಿಯು ಮಾಡಿದ ಭಗವಂತನ ಸ್ತುತಿ – 142
40. ಶ್ರೀರುದ್ರನು ಮಾಡಿದ ಶ್ರೀಕೃಷ್ಣಸ್ತುತಿ – 144
41. ಶ್ರೀಕೃಷ್ಣನನ್ನು ಕುರಿತು ಮುನಿಗಳ ಮಾತು – 146
42. ಕರ್ಮದಿಂದಲೇ ಕರ್ಮವನ್ನು ನಾಶಗೊಳಿಸುವ ಬಗೆ 149
43. ವೇದಗಳು ಮಾಡಿದ ಭಗವಂತನ ಸ್ತುತಿ – 150
44. ನಿಮಿರಾಜನಿಗೆ ಕವಿಯೆಂಬ ಯೋಗಿಯ ಉಪದೇಶ 161
45. ನಿಮಿರಾಜನಿಗೆ ಹರಿಯೆಂಬ ಯೋಗಿಯ ಉಪದೇಶ 165
46. ನಿಮಿರಾಜನಿಗೆ ಅಂತರಿಕ್ಷನೆಂಬ ಯೋಗಿಯ ಉಪದೇಶ 168
47. ನಿಮಿರಾಜನಿಗೆ ಪ್ರಬುದ್ಧನೆಂಬ ಯೋಗಿಯ ಉಪದೇಶ 173
48. ನಿಮಿರಾಜನಿಗೆ ಪಿಪ್ಪಲಾಯನೆಂಬ ಯೋಗಿಯ ಉಪದೇಶ 177
49. ನಿಮಿರಾಜನಿಗೆ ಅವಿಹೋತ್ರನೆಂಬ ಯೋಗಿಯ ಉಪದೇಶ 179
50. ನಿಮಿರಾಜನಿಗೆ ದ್ರುಮಿಲನೆಂಬ ಯೋಗಿಯ ಉಪದೇಶ 183
51. ನಿಮಿರಾಜನಿಗೆ ಚಮಸನೆಂಬ ಯೋಗಿಯ ಉಪದೇಶ 187
52. ನಿಮಿರಾಜನಿಗೆ ಕರಭಾಜನನೆಂಬ ಯೋಗಿಯ ಉಪದೇಶ 192
53. ಶ್ರೀಕೃಷ್ಣನನ್ನು ಕುರಿತು ದೇವತೆಗಳ ಪ್ರಾರ್ಥನೆ – 197
54. ಉದ್ಧವನಿಗೆ ಭಗವಂತನ ಉಪದೇಶ – 202
55. ಅವಧೂತೋಪದೇಶ – 206

| | | | |
|---|---|---|---|
| 56. | ಅವದೂತೋಪದೇಶ | – | 211 |
| 57. | ಅವಧೂತೋಪದೇಶ | – | 220 |
| 58. | ಇಹಾಮುತ್ರಭೋಗಗಳ ನಿರೂಪಣೆ | – | 227 |
| 59. | ಬುದ್ಧಮುಕ್ತರ ಸ್ವರೂಪ | – | 235 |
| 60. | ಪರಮಾತ್ಮಪದವಿಯನ್ನು ಪಡೆದುಕೊಳ್ಳುವ ಬಗೆ | – | 243 |
| 61. | ಹಂಸರೂಪದಿಂದ ಸನಕಾದಿಗಳಿಗೆ ಮಾಡಿದ ಉಪದೇಶದ ವರ್ಣನೆ | | 248 |
| 62. | ಭಕ್ತಿ–ಧ್ಯಾನಯೋಗಗಳ ವರ್ಣನೆ | – | 257 |
| 63. | ಸಿದ್ಧಿಗಳ ಹೆಸರು ಮತ್ತು ಲಕ್ಷಣ | – | 266 |
| 64. | ಭಗವಂತನ ವಿಭೂತಿಗಳ ವರ್ಣನೆ | – | 274 |
| 65. | ಭಗವಂತನಿಂದ ವರ್ಣಾಶ್ರಮಧರ್ಮಗಳ ನಿರೂಪಣೆ | | 283 |
| 66. | ಬ್ರಹ್ಮಲೋಕ ಪ್ರಾಪ್ತಿಗಾಗಿ ನೈಷ್ಠಿಕ ಬ್ರಹ್ಮಚಾರಿ ಧರ್ಮಗಳು | | 288 |
| 67. | ಮುಮುಕ್ಷುಗೃಹಸ್ಥರ ಧರ್ಮ | – | 289 |
| 68. | ವಾನಪ್ರಸ್ಥಧರ್ಮ | – | 292 |
| 69. | ಸಂನ್ಯಾಸಧರ್ಮ | – | 293 |
| 70. | ಶ್ರೀಕೃಷ್ಣನಿಂದ ಉದ್ಧವನಿಗೆ ಸಾಧನೆಗಳ ಉಪದೇಶ | | 300 |
| 71. | ಶ್ರೀಕೃಷ್ಣನಿಂದ ಉದ್ಧವನಿಗೆ ಜ್ಞಾನ–ಕರ್ಮ–ಭಕ್ತಿಯೋಗಗಳ ಉಪದೇಶ | | 306 |
| 72. | ಜನ್ಮಮರಣಗಳಿಂದ ಪಾರಾಗುವ ಬಗೆ | – | 312 |
| 73. | ಭಿಕ್ಷುಗೀತೆ | – | 316 |
| 74. | ಪರಮಾರ್ಥತತ್ತ್ವನಿರೂಪಣೆ | – | 325 |
| 75. | ಭಾಗವತಧರ್ಮನಿರೂಪಣೆ | – | 333 |
| 76. | ಭಗವಂತನ ಪರಂಧಾಮ | – | 339 |
| 77. | ಮೋಕ್ಷದ ಸ್ವರೂಪ | – | 340 |
| 78. | ಶ್ರೀ ಶುಕಮುನಿಗಳ ಕೊನೆಯ ಉಪದೇಶ | – | 343 |
| 79. | ಪರಮಗತಿ | – | 346 |
| 80. | ಗ್ರಂಥಪರಿಸಮಾಪ್ತಿ ಮಂಗಲ | – | 348 |


*****

॥ ಓಂ ॥

॥ ಓಂ ನಮೋ ಭಗವತೇ ವಾಸುದೇವಾಯ ॥

# ಭಾಗವತಾಮೃತಸಾರ

**—**—**—**

## ಮಂಗಲಾಚರಣೆ

(ಒಂದನೆಯ ಸ್ಕಂಧ, ಒಂದನೆಯ ಅಧ್ಯಾಯ)

**ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್**
**ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯನ್ತಿ ಯತ್ಸೂರಯಃ ।**
**ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽಮೃಷಾ**
**ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥ 1 ॥**

1. ಈ ಜಗತ್ತಿನ ಹುಟ್ಟು, ಇರವು, ನಾಶ – ಇವುಗಳು ಯಾವ (ಪರಬ್ರಹ್ಮನಿಂದ) ಆಗುತ್ತಿರುವವೋ, ಬೇರೆಯಾರಿಂದಲೂ ಸಾಧ್ಯವಲ್ಲವೋ, ಈ ಬ್ರಹ್ಮಾಂಡದ ಸೃಷ್ಟಿಯ (ರಹಸ್ಯಗಳನ್ನೆಲ್ಲ) ಪೂರ್ಣವಾಗಿ ಯಾವನು ಬಲ್ಲನೋ, ಸೃಷ್ಟಿಯ ಪ್ರಥಮಪುರುಷನಾದ ಹಿರಣ್ಯಗರ್ಭನಿಗೆ (ಆದಿಕವಿಯೆನಿಸಿದವನಿಗೆ) ಸಕಲವೇದಗಳನ್ನೂ ಯಾವನು ಅನುಗ್ರಹಿಸಿದನೋ, ಆದರೆ ಈ ಸೃಷ್ಟಿಯ ರಹಸ್ಯವನ್ನರಿಯದೆ ಮಹಾತ್ಮರೂ ಬೆರಗಾಗಿರುವರೊ, ಇನ್ನು ತೇಜಸ್ಸು, ಅಪ್ಪು, ಭೂಮಿ ಇವುಗಳನ್ನು ತ್ರಿವೃತ್ಕರಣದಿಂದ ಯಾವನು ಸೃಷ್ಟಿಮಾಡಿರುವನೊ, ಆದರೆ ಈ ಸೃಷ್ಟಿಯೆಲ್ಲವೂ ಮಾಯೆಯೇ ಆಗಿರುವದೋ, ಅಂಥ ತನ್ನ ಸ್ವರೂಪದಿಂದ ಯಾವಾಗಲೂ ಇದ್ದುಕೊಂಡು, ಕಲ್ಪನೆಗಳನ್ನು ದಾಟಿ ಎಂದೆಂದಿಗೂ ಸತ್ಯನೂ, ಪರಾತ್ಪರನೂ ಆಗಿರುವ ಆ ಭಗವಂತನನ್ನು ಧ್ಯಾನಮಾಡುತ್ತೇವೆ.

**ಧರ್ಮಃಪ್ರೋಜ್ಝಿತಕೈತವೋಽತ್ರ ಪರಮೋ ನಿರ್ಮತ್ಸರಾಣಾಂ ಸತಾಂ**
**ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಮ್ ।**
**ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ**
**ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥ 2 ॥**

2. ಈ ಪುರಾಣದಲ್ಲಿ ಅನೃತಸಂಪರ್ಕವಿಲ್ಲದ ಪರಮಧರ್ಮವು ಪ್ರತಿಪಾದಿಸಲ್ಪಟ್ಟು ಅಸೂಯಾರಹಿತರಾದ ಸತ್ಪುರುಷರಿಗೆ ಉಪಯುಕ್ತವಾಗಿದೆ. ಇಲ್ಲಿ ತಿಳಿಯಬೇಕಾದ ನಿತ್ಯಸತ್ಯವಾದ ಮಂಗಳಕರವಾದ ತತ್ತ್ವವು ತಿಳಿಯಲ್ಪಡುವದಾಗಿದೆ. ಅದು ತಾಪತ್ರಯಗಳನ್ನು ಬುಡಸಮೇತ ನಾಶಗೊಳಿಸತಕ್ಕದ್ದಾಗಿದೆ. ಹೀಗಿರುವಲ್ಲಿ ಮಹಾಮುನಿಯಾದ (ವ್ಯಾಸಮಹರ್ಷಿಯಿಂದ) ರಚಿಸಲ್ಪಟ್ಟ ಈ ಪುರಾಣವು ಇರಲಾಗಿ ಉಳಿದವುಗಳ ಅಗತ್ಯವು ಕಂಡುಬರುವದಿಲ್ಲ. (ಏಕೆಂದರೆ) ಇದನ್ನು ಆಲೈಸಿ ಕೇಳುವ ಭಕ್ತರಾದ ಶ್ರೋತೃಗಳಿಗೆ (ಅವರ ಹೃದಯದಲ್ಲಿಯೇ ಭಗವಂತನು) ಬಂಧಿಸಲ್ಪಟ್ಟು ಕೃತಕೃತ್ಯರನ್ನಾಗಿ ಮಾಡುವನು.

**ನಿಗಮಕಲ್ಪತರೋರ್ಗಲಿತಂ ಫಲಂ**
**ಶುಕಮುಖಾದಮೃತದ್ರವಸಂಯುತಮ್ ।**
**ಪಿಬತ ಭಾಗವತಂ ರಸಮಾಲಯಂ**
**ಮುಹುರಹೋ ರಸಿಕಾ ಭುವಿ ಭಾವುಕಾಃ ॥ 3 ॥**

3. ವೇದಸಾಹಿತ್ಯಗಳೆಂಬ ಕಲ್ಪತರುಗಳಿಂದ ಹೊರಬಂದು (ಮರದ ಮೇಲೆಯೇ) ಚೆನ್ನಾಗಿ ಹಣ್ಣಾಗಿದ್ದು ಗಿಳಿಯಿಂದ (ರುಚಿನೋಡಲ್ಪಟ್ಟು) ಅಮೃತಧಾರೆಯನ್ನು ಸುರಿಸುತ್ತಿರುವ ರಸದ ನೆಲೆಬೀಡಾಗಿರುವ ಭಾಗವತವೆಂಬ ಈ ರಸಮಯವಾದ ಹಣ್ಣನ್ನು ಎಲೈ ಭಾವುಕ (ರಸಾಸ್ವಾದ) ನಿಪುಣರುಗಳಿರ! ಸವಿಯಿರಿ.

******

## ಭಗವದ್ಭಕ್ತಿಯ ಮಾಹಾತ್ಮ್ಯೆ

(ಒಂದನೆಯ ಸ್ಕಂಧ, ಎರಡನೆಯ ಅಧ್ಯಾಯ)

**ಸ ವೈ ಪುಂಸಾಂ ಪರೋ ಧರ್ಮೋ ಯಶೋ ಭಕ್ತಿರಧೋಕ್ಷಜೇ ।**
**ಅಹೈತುಕ್ಯ ಪ್ರತಿಹತಾ ಯಯಾऽತ್ಮಾ ಸಂಪ್ರಸೀದತಿ ॥ 6 ॥**

6. ಯಾವದರಿಂದ ಅಧೋಕ್ಷಜನಾದ ಪರಮಾತ್ಮನಲ್ಲಿ ಯಾವದೊಂದು ಕಾಮಹೇತುವೂ ಇಲ್ಲದೆ, ಯಾವದೊಂದು ತಡೆಯೂ ಇಲ್ಲದೆ ನಿರಂತರವಾದ ಭಕ್ತಿಯುಂಟಾಗುವದೋ, ಆ ಭಕ್ತಿಯಿಂದ ಅಂತಃಕರಣವೂ ಅತ್ಯಂತವಾಗಿ ನಿರ್ಮಲವಾಗುವದೋ, ಅದೇ ಮನುಷ್ಯನಿಗೆ ಪರಮಧರ್ಮವು.

**ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।**
**ಜನಯತ್ಯಾಶು ವೈರಾಗ್ಯಂ ಜ್ಞಾನಂ ಯತ್ತದಹೈತುಕಮ್ ॥ 7 ॥**

7. ಭಗವಂತನಾದ ವಾಸುದೇವನಲ್ಲಿ ಭಕ್ತಿಯೋಗವನ್ನು ಮಾಡಿದರೆ ಯಾವದೊಂದು ಕಾಮನೆಯೂ ಇಲ್ಲದ ವೈರಾಗ್ಯವನ್ನೂ ಜ್ಞಾನವನ್ನೂ ಬೇಗನೆ ಉಂಟುಮಾಡಿಕೊಡುತ್ತದೆ.

**ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ ।**
**ನೋತ್ಪಾದಯೇದ್ ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥ 8 ॥**

8. ಧರ್ಮವನ್ನು ಚೆನ್ನಾಗಿ ಅನುಷ್ಠಾನಮಾಡಿದಮೇಲೂ ಭಗವತ್ಕಥೆಗಳಲ್ಲಿ ಅನುರಾಗವನ್ನುಂಟುಮಾಡದೆ ಇದ್ದರೆ, ಅದು ಧರ್ಮವಲ್ಲ, ಬರಿಯ ಶ್ರಮವೇ.

**ಧರ್ಮಸ್ಯ ಹ್ಯಾಪವರ್ಗ್ಯಸ್ಯ ನಾರ್ಥೋಽರ್ಥಾಯೋಪಕಲ್ಪತೇ ।**
**ನಾರ್ಥಸ್ಯ ಧರ್ಮೈಕಾನ್ತಸ್ಯ ಕಾಮೋ ಲಾಭಾಯ ಹಿ ಸ್ಮೃತಃ ॥ 9 ॥**

9. ಧರ್ಮಕ್ಕೆ ಮೋಕ್ಷವೇ ಫಲ; ಅದರಿಂದ ಅರ್ಥಪ್ರಾಪ್ತಿಯಾದರೆ ಅದೇನೂ ಪುರುಷಾರ್ಥವಲ್ಲ. ಅರ್ಥಕ್ಕೆ ಧರ್ಮವೇ ಗುರಿ; ಅದಕ್ಕೆ ಕಾಮಪ್ರಾಪ್ತಿಯಾದರೆ ಅದೇನೂ ಲಾಭವೆನಿಸಲಾರದು.

**ಕಾಮಸ್ಯ ನೇನ್ದ್ರಿಯಪ್ರೀತಿರ್ಲಾಭೋ ಜೀವೇತ ಯಾವತಾ ।**
**ಜೀವಸ್ಯ ತತ್ತ್ವಜಿಜ್ಞಾಸಾ ನಾರ್ಥೋ ಯಶ್ಚೇಹ ಕರ್ಮಭಿಃ ॥ 10 ॥**

10. ಕಾಮಕ್ಕೆ ಇಂದ್ರಿಯಗಳನ್ನು ತೃಪ್ತಿಗೊಳಿಸುವದೇನೂ ಲಾಭವಲ್ಲ; ಎಷ್ಟಿದ್ದರೆ ಜೀವನವು ಸಾಗುತ್ತದೆಯೋ ಅಷ್ಟು ಕಾಮಪ್ರಾಪ್ತಿಯಾದರೆ ಸಾಕಾಗಿರುತ್ತದೆ. ಬದುಕಿದ್ದಕ್ಕೆ ಸುಮ್ಮನೆ ಇಹಪರಕರ್ಮಗಳನ್ನು ಮಾಡಿ ಫಲವನ್ನು ಪಡೆದುಕೊಳ್ಳುವದೇ ಪ್ರಯೋಜನವಲ್ಲ; ತತ್ತ್ವವನ್ನು ಅರಿತುಕೊಳ್ಳಬೇಕೆಂಬ ಇಚ್ಛೆಯುಂಟಾಗುವದೇ ಅದಕ್ಕೆ ಪ್ರಯೋಜನವು.

**ವದನ್ತಿ ತತ್ ತತ್ತ್ವವಿದಸ್ತತ್ತ್ವಂ ಯಜ್ಜ್ಞಾನಮದ್ವಯಮ್ ।**
**ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥ 11 ॥**

11. ಯಾವದನ್ನು ಬ್ರಹ್ಮವೆಂದೂ ಪರಮಾತ್ಮನೆಂದೂ ಭಗವಂತನೆಂದೂ ಕರೆಯುವರೋ ಆ ಅದ್ವಿತೀಯಚೈತನ್ಯವನ್ನೇ ತತ್ತ್ವವಿದರು ತತ್ತ್ವವೆಂದು ಕರೆಯುತ್ತಾರೆ.

**ತಚ್ಛ್ರದ್ದಧಾನಾ ಮುನಯೋ ಜ್ಞಾನವೈರಾಗ್ಯಯುಕ್ತಯಾ ।**
**ಪಶ್ಯಂತ್ಯಾತ್ಮನಿ ಚಾತ್ಮಾನಂ ಭಕ್ತ್ಯಾ ಶ್ರುತಗೃಹೀತಯಾ ॥ 12 ॥**

12. ಆ ಪರಮಾತ್ಮನನ್ನು ಶ್ರದ್ಧಾಯುಕ್ತರಾದ ಮುನಿಗಳು ಶ್ರವಣಗೃಹೀತನಾದ, ಜ್ಞಾನವೈರಾಗ್ಯಯುಕ್ತವಾದ, ಭಕ್ತಿಯಿಂದ ತಮ್ಮೊಳಗೇ ಕಂಡುಕೊಳ್ಳುವರು.

**ಅತಃ ಪುಂಭಿರ್ದ್ವಿಜಶ್ರೇಷ್ಠಾ ವರ್ಣಾಶ್ರಮವಿಭಾಗಶಃ ।**
**ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್ ॥ 13 ॥**

13. ಆದ್ದರಿಂದ, ಎಲೈ ದ್ವಿಜಶ್ರೇಷ್ಠರೆ, ವರ್ಣಾಶ್ರಮಕ್ಕನುಗುಣವಾಗಿ ಧರ್ಮವನ್ನು ಚೆನ್ನಾಗಿ ಅನುಷ್ಠಾನಮಾಡಿದ್ದಕ್ಕೆ ಶ್ರೀಹರಿಯನ್ನು ಸಂತೋಷಗೊಳಿಸುವದೇ ಸಿದ್ಧಿಯು.

**ತಸ್ಮಾದೇಕೇನ ಮನಸಾ ಭಗವಾನ್ ಸಾತ್ವತಾಂ ಪತಿಃ ।**
**ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ ॥ 14 ॥**

14. ಆದ್ದರಿಂದ, ಒಂದೇ ಮನಸ್ಸಿನಿಂದ ಸಾತ್ವತರೊಡೆಯನಾದ ಆ ಭಗವಂತನನ್ನು ನಿತ್ಯವೂ ಶ್ರವಣಮಾಡಬೇಕು, ಕೀರ್ತನೆಮಾಡಬೇಕು, ಧ್ಯಾನಮಾಡಬೇಕು, ಪೂಜೆಮಾಡಬೇಕು.

**ಯದನುಧ್ಯಾಸಿನಾ ಯುಕ್ತಾಃ ಕರ್ಮಗ್ರಂಥಿನಿಬಂಧನಮ್ ।**
**ಛಿಂದಂತಿ ಕೋವಿದಾಸ್ತಸ್ಯ ಕೋ ನ ಕುರ್ಯಾತ್ಕಥಾರತಿಮ್ ॥ 15 ॥**

15. ಎಲೈ ನಿಪುಣಮತಿಗಳೆ, ಯಾವನ ಅನುಚಿಂತನವೆಂಬ ಕತ್ತಿಯಿಂದ ಕರ್ಮಗ್ರಂಥಿಯಿಂದಾಗಿರುವ ಬಂಧವನ್ನು ಕತ್ತರಿಸಬಹುದೋ ಆತನ ಕಥೆಯನ್ನು ಯಾವನು ತಾನೆ ರತನಾಗಿದ್ದಾನು?

**ಶುಶ್ರೂಷೋಃ ಶ್ರದ್ದಧಾನಸ್ಯ ವಾಸುದೇವಕಥಾರುಚಿಃ ।**
**ಸ್ಯಾನ್ಮಹತ್ಸೇವಯಾ ವಿಪ್ರಾಃ ಪುಣ್ಯತೀರ್ಥನಿಷೇವಣಾತ್ ॥ 16 ॥**

16. ಎಲೈ ವಿಪ್ರರೆ, ಶ್ರದ್ಧೆಯಿಂದ ಶ್ರವಣಮಾಡುತ್ತಿರುವಾತನಿಗೆ ಮಹಾಪುರುಷಸೇವೆಯಿಂದಲೂ ಪುಣ್ಯತೀರ್ಥಗಳ ಸೇವೆಯಿಂದಲೂ ವಾಸುದೇವಕಥೆಯಲ್ಲಿ ರುಚಿಯುಂಟಾಗುವದು.

**ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।**
**ಹೃದ್ಯನ್ತಃಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ ಸತಾಮ್ ॥ 17 ॥**

17. ಭಗವಂತನ ಸ್ವರೂಪಾವತಾರಲೀಲಾದಿಗಳನ್ನು ಕೇಳುವದೂ ಹೇಳುವದೂ ಪುಣ್ಯಸಮವಾದದ್ದು. ಆ ಸತ್ಪುರುಷರ ಉಪಕಾರಿಯು ತನ್ನ ಕಥೆಯನ್ನು ಕೇಳುವವರ ಹೃದಯದಲ್ಲಿ ಇದ್ದುಕೊಂಡು ಅಮಂಗಲಗಳನ್ನೆಲ್ಲ ತೊಳೆದುಹಾಕುವನು.

**ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವತಸೇವಯಾ ।**
**ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥ 18 ॥**

18. ನಿತ್ಯವೂ ಮಾಡಿದ ಭಗವತ್ಸಂಬಂಧವಾದ ಸೇವೆಯಿಂದ ಹೀಗೆ ಅಶುಭವಾಸನೆಗಳು ಹೋದಂತಾಗಲು ಮಹಾಕೀರ್ತಿಯುತವಾದ ಭಗವಂತನಲ್ಲಿ ನಿಷ್ಠಾರೂಪವಾದ ಭಕ್ತಿಯುಂಟಾಗುವದು.

**ತದಾ ರಜಸ್ತಮೋಭಾವಃ ಕಾಮಲೋಭಾದಯಶ್ಚ ಯೇ ।**
**ಚೇತ ಏತೈರನಾವಿದ್ಧಂ ಸ್ಥಿತಂ ಸತ್ತ್ವೇ ಪ್ರಸೀದತಿ ॥ 19 ॥**

19. ಆಗ ಚಿತ್ತವು ರಜಸ್ಸು, ತಮಸ್ಸು – ಇವುಗಳಿಂದಾದ ಭಾವಗಳೂ, ಕಾಮಭೋಗಾದಿಗಳೂ ಇರುವವಲ್ಲ, ಅವುಗಳ ಹೊಡೆತವಿಲ್ಲದೆ ಸತ್ತ್ವದಲ್ಲಿ ನಿಂತು ಪ್ರಸನ್ನವಾಗುತ್ತದೆ.

**ಏವಂ ಪ್ರಸನ್ನಮನಸೋ ಭಗವದ್ಭಕ್ತಿಯೋಗತಃ ।**
**ಭಗವತ್ತತ್ತ್ವವಿಜ್ಞಾನಂ ಮುಕ್ತಸಙ್ಗಸ್ಯ ಜಾಯತೇ ॥ 20 ॥**

20. ಹೀಗೆ ಭಗವದ್ಭಕ್ತಿಯೋಗದಿಂದ ಮನಸ್ಸು ಪ್ರಸನ್ನವಾಗಿ ಮುಕ್ತಸಂಗನಾದವನಿಗೆ ಭಗವಂತನ ತತ್ತ್ವದ ವಿಜ್ಞಾನವು ಉಂಟಾಗುತ್ತದೆ.

**ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।**
**ಕ್ಷೀಯನ್ತೇ ಚಾಸ್ಯ ಕರ್ಮಾಣಿ ದೃಷ್ಟ ಏವಾಽಽತ್ಮನೀಶ್ವರೇ ॥ 21 ॥**

21. ಆತ್ಮನಾದ ಈಶ್ವರನನ್ನು ಕಂಡುಕೊಂಡಮಾತ್ರದಿಂದ ಹೃದಯದ ಗಂಟು ಬಿಚ್ಚಿಕೊಳ್ಳುವದು, ಸಂಶಯಗಳೆಲ್ಲ ಕತ್ತರಿಸಿಹೋಗುವವು, ಮತ್ತು ಈ ಸಾಧಕನ ಕರ್ಮಗಳೂ ಕ್ಷಯವಾಗುವವು.

**ಅತೋ ವೈ ಕವಯೋ ನಿತ್ಯಂ ಭಕ್ತಿಂ ಪರಮಯಾ ಮುದಾ ।**
**ವಾಸುದೇವೇ ಭಗವತಿ ಕುರ್ವನ್ತ್ಯಾತ್ಮಪ್ರಸಾದಿನೀಮ್ ॥ 22 ॥**

22. ಆದ್ದರಿಂದಲೇ ವಿವೇಕಿಗಳು ವಾಸುದೇವಭಗವಂತನಲ್ಲಿ ಚಿತ್ತಪ್ರಸನ್ನತೆಯನ್ನು ಉಂಟುಮಾಡುವ ಭಕ್ತಿಯನ್ನು ಪರಮಸಂತೋಷದಿಂದ ನಿತ್ಯವೂ ಮಾಡುತ್ತಿರುವರು.

**ವಾಸುದೇವಪರಾ ವೇದಾ ವಾಸುದೇವಪರಾ ಮಖಾಃ ।**
**ವಾಸುದೇವಪರಾ ಯೋಗಾ ವಾಸುದೇವಪರಾಃ ಕ್ರಿಯಾಃ ॥ 28 ॥**

28. ಸರ್ವವೇದಗಳೂ ವಾಸುದೇವನಲ್ಲಿಯೇ ತಾತ್ಪರ್ಯವುಳ್ಳವಾಗಿರುತ್ತವೆ. ಸರ್ವಯಜ್ಞಗಳನ್ನೂ ವಾಸುದೇವನ ಆರಾಧನೆಗೇ ಅನುಷ್ಠಾನಮಾಡುವರು. ಯೋಗಾಭ್ಯಾಸಗಳೂ ವಾಸುದೇವನ ಸಾಕ್ಷಾತ್ಕಾರಕ್ಕಾಗಿಯೇ. ಕರ್ಮಗಳೂ ವಾಸುದೇವನ ಪ್ರೀತ್ಯರ್ಥವಾಗಿಯೇ ಮಾಡುವದು.

**ವಾಸುದೇವಪರಂ ಜ್ಞಾನಂ ವಾಸುದೇವಪರಂ ತಪಃ ।**
**ವಾಸುದೇವಪರೋ ಧರ್ಮೋ ವಾಸುದೇವಪರಾ ಗತಿಃ ॥ 29 ॥**

29. ಜ್ಞಾನವೆಂದರೆ ವಾಸುದೇವನನ್ನು ಅರಿತುಕೊಳ್ಳುವದೇ, ತಪಸ್ಸುಮಾಡುವದು ವಾಸುದೇವಪ್ರಸಾದಕ್ಕಾಗಿಯೇ, ಧರ್ಮಕ್ಕೆ ವಾಸುದೇವನೇ ಪ್ರಭುವು, ವಾಸುದೇವನೇ ಪರಗತಿಯು.

**ಸ ಏವೇದಂ ಸಸರ್ಜಾಗ್ರೇ ಭಗವಾನಾತ್ಮಮಾಯಯಾ ।**
**ಸದಸದ್ರೂಪಯಾ ಚಾಸೌ ಗುಣಮಯ್ಯಾಽಗುಣೋ ವಿಭುಃ ॥ 30 ॥**

30. ಆ ನಿರ್ಗುಣವಾದ ವಿಭುವಾದ ಭಗವಂತನೇ ಸದಸದ್ರೂಪನಾಗಿರುವ ಗುಣಮಯವಾದ ತನ್ನಮಾಯೆಯಿಂದ ಮೊದಲು ಈ ಪ್ರಪಂಚವನ್ನು ಸೃಷ್ಟಿಸಿದನು.

**ತಯಾ ವಿಲಸಿತೇಷ್ವೇಷು ಗುಣೇಷು ಗುಣವಾನಿವ ।**
**ಅನ್ತಃ ಪ್ರವಿಷ್ಟ ಆಭಾತಿ ವಿಜ್ಞಾನೇನ ವಿಜೃಮ್ಭಿತಃ ॥ 31 ॥**

31. ಅದರಿಂದ ಹೊರಟು ವಿಕಸಿತವಾಗಿರುವ ಈ ಗುಣಗಳಲ್ಲಿ ಒಳಹೊಕ್ಕು ತಾನೂ ಆ ಗುಣಗಳುಳ್ಳವನಂತೆ ಕಾಣುತ್ತಿರುವನು. ಅವನು ವಿಜ್ಞಾನರೂಪದಿಂದ ಎಲ್ಲೆಲ್ಲಿಯೂ ವ್ಯಾಪ್ತನಾಗಿರುತ್ತಾನೆ.

**ಯಥಾ ಹ್ಯವಹಿತೋ ವಹ್ನಿರ್ದಾರುಷ್ವೇಕಃ ಸ್ವಯೋನಿಷು ।**
**ನಾನೇವ ಭಾತಿ ವಿಶ್ವಾತ್ಮಾ ಭೂತೇಷು ಚ ತಥಾ ಪುಮಾನ್ ॥ 32 ॥**

32. ಹೇಗೆ ಬೆಂಕಿಯು ಒಂದೇ ಆಗಿದ್ದರೂ, ತನ್ನ ಕಾರಣವಾಗಿರುವ ಬೇರೆಬೇರೆಯ ಕಟ್ಟಿಗೆಗಳಲ್ಲಿದ್ದುಕೊಂಡು ಬೇರೆಬೇರೆಯ ರೂಪವಾಗಿರುವಂತೆ ಕಾಣುತ್ತಿರುವದೋ ಹಾಗೆಯೇ ಆ ವಿಶ್ವಾತ್ಮನಾದ ಪುರುಷನೂ ಬೇರೆಬೇರೆಯ ಸ್ಥಾವರಜಂಗಮಭೂತಗಳಲ್ಲಿದ್ದುಕೊಂಡು ಬೇರೆ ಬೇರೆಯಾಗಿರುವಂತೆ ತೋರುತ್ತಿರುವನು.

*****

## ಸರ್ವವೂ ನಾರಾಯಣನೇ

(ಎರಡನೆಯ ಸ್ಕಂಧ, ಐದನೆಯ ಅಧ್ಯಾಯ)

**ಬ್ರಹ್ಮೋವಾಚ –**

**ತಸ್ಮೈ ನಮೋ ಭಗವತೇ ವಾಸುದೇವಾಯ ಧೀಮಹಿ ।**
**ಯನ್ಮಾಯಯಾ ದುರ್ಜಯಯಾ ಮಾಂ ಬ್ರುವನ್ತಿ ಜಗದ್ಗುರುಮ್ ॥ 12 ॥**

ಬ್ರಹ್ಮನು ನಾರದ ಋಷಿಗೆ ಹೇಳುತ್ತಿದ್ದಾನೆ –

12. ಆ ವಾಸುದೇವಭಗವಂತನಿಗೆ ನಮಸ್ಕಾರ! ಆತನನ್ನೇ ಧ್ಯಾನಮಾಡೋಣ! ಗೆಲ್ಲಲಾಗದಿರುವ ಆತನ ಮಾಯೆಯಿಂದ ಮೋಹಿತರಾದವರು ನಾನೇ ಜಗತ್ತಿಗೆ ತಂದೆಯೆನ್ನುತ್ತಿರುವರು.

**ವಿಲಜ್ಜಮಾನಯಾ ಯಸ್ಯ ಸ್ಥಾತುಮೀಕ್ಷಾಪಥೇಽಮುಯಾ ।**
**ವಿಮೋಹಿತಾ ವಿಕತ್ಥನ್ತೇ ಮಮಾಹಮಿತಿ ದುರ್ಧಿಯಃ ॥ 13 ॥**

13. ಆತನ ದೃಕ್ಪಥದಲ್ಲಿ ನಿಲ್ಲುವದಕ್ಕೆ ನಾಚುತ್ತಿರುವ ಈ ಮಾಯೆಯಿಂದ ಮೋಹಿತರಾದ ದುರ್ಬುದ್ಧಿಯ ಜನರು 'ನಾನು', 'ನನ್ನದು' ಎಂದು ಕೊಚ್ಚಿಕೊಳ್ಳುತ್ತಿರುವರು.

**ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।**
**ವಾಸುದೇವಾತ್ಪರೋ ಬ್ರಹ್ಮನ್ನ ಚಾನ್ಯೋಽರ್ಥೋಽಸ್ತಿ ತತ್ತ್ವತಃ ॥ 14 ॥**

14. ಎಲೈ ಬ್ರಾಹ್ಮಣನೆ, ಪರಮಾರ್ಥದೃಷ್ಟಿಯಿಂದ ನೋಡಿದರೆ ದ್ರವ್ಯ, ಕರ್ಮ, ಕಾಲ, ಸ್ವಭಾವ, ಜೀವ – ಇವೇ ಮುಂತಾದ ಯಾವದೊಂದೂ ವಾಸುದೇವನಿಗಿಂತ ಬೇರೆಯಾದ ಪದಾರ್ಥವಾಗಿರುವದಿಲ್ಲ.

**ನಾರಾಯಣಪರಾ ವೇದಾ ದೇವಾ ನಾರಾಯಣಾಙ್ಗಜಾಃ ।**
**ನಾರಾಯಣಪರಾ ಲೋಕಾ ನಾರಾಯಣಪರಾ ಮಖಾಃ ॥ 15 ॥**

15. ವೇದಗಳು ನಾರಾಯಣನನ್ನು ತಿಳಿಸುವದಕ್ಕಾಗಿಯೇ ಇರುತ್ತವೆ; ದೇವತೆಗಳು ನಾರಾಯಣನ ಅಂಗದಿಂದಲೇ ಉತ್ಪನ್ನರಾಗಿರುತ್ತಾರೆ; ಲೋಕಗಳು ನಾರಾಯಣನ ಆನಂದಾಂಶವನ್ನೇ ಕೊಡುತ್ತವೆ; ಯಜ್ಞಗಳು ನಾರಾಯಣ ಪ್ರೀತ್ಯರ್ಥವಾಗಿಯೇ ಇರುತ್ತವೆ.

**ನಾರಾಯಣಪರೋ ಯೋಗೋ ನಾರಾಯಣಪರಂ ತಪಃ ।**
**ನಾರಾಯಣಪರಂ ಜ್ಞಾನಂ ನಾರಾಯಣಪರಾ ಗತಿಃ ॥ 16 ॥**

16. ಯೋಗಕ್ಕೆ ಗುರಿಯು ನಾರಾಯಣನು; ತಪಸ್ಸಿಗೆ ಗುರಿ ನಾರಾಯಣನೇ; ಜ್ಞಾನವು ನಾರಾಯಣನನ್ನೇ ತಿಳಿಯುವದಕ್ಕೆ; ಉತ್ಕೃಷ್ಟಗತಿಯು ನಾರಾಯಣ ಪ್ರಾಪ್ತಿಯೇ.

**ತಸ್ಯಾಪಿ ದ್ರಷ್ಟುರೀಶಸ್ಯ ಕೂಟಸ್ಥಸ್ಯಾಖಿಲಾತ್ಮನಃ ।**
**ಸೃಜ್ಯಂ ಸೃಜಾಮಿ ಸೃಷ್ಟೋಽಹಮೀಕ್ಷಯೈವಾಭಿಚೋದಿತಃ ॥ 17 ॥**

17. ಅಖಿಲದ್ರಷ್ಟೃವೂ ಕೂಟಸ್ಥನೂ ಸರ್ವರ ಆತ್ಮನೂ ಆದ ಆ ಈಶ್ವರನ ದೃಷ್ಟಿಯಿಂದಲೇ ನಾನು ಸೃಷ್ಟವಾಗಿ ಅದರ ಪ್ರೇರಣೆಯಿಂದಲೇ ಎಲ್ಲವನ್ನೂ ಸೃಷ್ಟಿಸುತ್ತಿರುವೆನು.

*****

# ಭಗವಂತನು ಅನಂತಶಕ್ತಿಯುಳ್ಳವನು

## (ಎರಡನೆಯ ಸ್ಕಂಧ, ಏಳನೆಯ ಅಧ್ಯಾಯ)

**ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ**
**ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ।**
**ಚಸ್ಕಂಭ ಯಃ ಸ್ವರಭಸಾಽಸ್ಖಲತಾ ತ್ರಿಪೃಷ್ಠಂ**
**ಯಸ್ಮಾತ್ ತ್ರಿಸಾಮ್ಯಸದನಾದುರು ಕಂಪಯಾನಮ್ ॥ 40 ॥**

40. ಯಾವನು ಪೃಥಿವಿಯ ಧೂಳಿಯ ಕಣಗಳನ್ನು ಕೂಡ ಎಣಿಸಬಲ್ಲನೋ ಅಂಥ ಜಾಣನು ಕೂಡ ಯಾವನುತಾನೆ ವಿಷ್ಣುವಿನ ವೀರ್ಯಗಳ ಲೆಕ್ಕವನ್ನು ಮಾಡಲಾಪನು? ಪ್ರಧಾನದಿಂದ ಮೊದಲಾಗಿ ಬ್ರಹ್ಮಲೋಕದವರೆಗೂ ತನ್ನ ಪಾದ ರಭಸದಿಂದ ನಡುಗುತ್ತಿದ್ದ ಲೋಕಗಳನ್ನೆಲ್ಲ ತಡೆದು ನಿಲ್ಲಿಸಿದ ಮಹಾತ್ಮನಾತನು!

**ನಾಸ್ತಂ ವಿದಾಮ್ಯಹಮಮೀ ಮುನಯೋಽಗ್ರಜಾಸ್ತೇ**
**ಮಾಯಾಬಲಸ್ಯ ಪುರುಷಸ್ಯ ಕುತೋಽಪರೇ ಯೇ ।**
**ಗಾಯನ್ ಗುಣಾನ್ ದಶಶತಾನನ ಆದಿದೇವಃ**
**ಶೇಷೋಽಧುನಾಪಿ ಸಮವಸ್ಯತಿ ನಾಸ್ಯ ಪಾರಮ್ ॥ 41 ॥**

41. ಎಲೆ ನಾರದನೆ, ಬ್ರಹ್ಮನಾದ ನಾನಾಗಲಿ, ನಿನ್ನ ಅಣ್ಣಂದಿರಾದ ಈ ಸನಕಾದಿಗಳಾಗಲಿ ಈ ಪುರುಷನ ಮಾಯಾಶಕ್ತಿಯ ಕೊನೆಯನ್ನು ಕಾಣೆವು; ಇನ್ನು ಮಿಕ್ಕವರ ಪಾಡೇನು? ಸಹಸ್ರವದನನಾದ ಆದಿದೇವನಾದ ಶೇಷನು ಈತನ ಗುಣಗಳನ್ನು ಗಾನಮಾಡಿಮಾಡಿ ಇನ್ನೂ ಅದರ ಪಾರವನ್ನು ಮುಟ್ಟದೆ ಇರುತ್ತಾನೆ.

**ಯೇಷಾಂ ಸ ಏವ ಭಗವಾನ್ ದಯಯೇದನನ್ತಃ**
**ಸರ್ವಾತ್ಮನಾಽಽಶ್ರಿತಪದೋ ಯದಿ ನಿರ್ವ್ಯಲೀಕಮ್ ।**
**ತೇ ದುಸ್ತರಾಮತಿತರನ್ತಿ ಚ ದೇವಮಾಯಾಂ**
**ನೈಷಾಂ ಮಮಾಹಮಿತಿ ಧೀಃ ಶ್ವಸೃಗಾಲಭಕ್ಷ್ಯೇ ॥ 42 ॥**

42. ನಿಷ್ಕಾಪಟ್ಯದಿಂದ ಆತನ ಪಾದವನ್ನೇ ಸರ್ವಭಾವದಿಂದಲೂ ಆಶ್ರಯಿಸಿದ್ದರಿಂದ ಯಾರ ವಿಷಯದಲ್ಲಿ ಆ ಭಗವಂತನೇ ದಯೆಯನ್ನು

ತೋರುವನೋ ಅವರು ದುಸ್ತರವಾದ ಈ ದೇವಮಾಯೆಯನ್ನು ದಾಟುವರು. ಅವರಿಗೆ ನಾಯಿನರಿಗಳಿಗೆ ಭಕ್ಷ್ಯವಾದ (ತಮ್ಮ) ದೇಹದಲ್ಲಿ ನಾನು–ನನ್ನದೆಂಬ ಭಾವನೆಯಿರುವದಿಲ್ಲ.

**ಶಶ್ವತ್ಪ್ರಶಾನ್ತಮಭಯಂ ಪ್ರತಿಬೋಧಮಾತ್ರಂ**
**ಶುದ್ಧಂ ಸಮಂ ಸದಸತಃ ಪರಮಾತ್ಮತತ್ತ್ವಮ್ ।**
**ಶಬ್ದೋ ನ ಯತ್ರ ಪುರುಕಾರಕವಾನ್ ಕ್ರಿಯಾರ್ಥೋ**
**ಮಾಯಾ ಪರೈತ್ಯಭಿಮುಖೇ ಚ ವಿಲಜ್ಜಮಾನಾ ॥ 47 ॥**

47. ಆ ಪರಮಾತ್ಮತತ್ತ್ವವು ನಿತ್ಯಪ್ರಶಾಂತವೂ, ಭಯರಹಿತವೂ, ಚಿನ್ಮಾತ್ರಸ್ವರೂಪವೂ ಆಗಿರುವದು. ಅದು ಶುದ್ಧವೂ ಸಹೈಕರೂಪವೂ ಆಗಿರುತ್ತದೆ; ಸತ್ತು, ಅಸತ್ತು – ಎಂಬ ವ್ಯಾಕೃತಾವ್ಯಾಕೃತಗಳೆರಡಕ್ಕೂ ವಿಲಕ್ಷಣವಾಗಿರುತ್ತದೆ. ಅದನ್ನು ಯಾವ ಶಬ್ದವೂ ವಾಚ್ಯವಾಗಿ ತಿಳಿಸಲರಿಯದು. ಬಹುಕಾರಕವುಳ್ಳ ಕ್ರಿಯೆಯಾಗಲಿ, ಕ್ರಿಯಾಫಲವಾಗಲಿ ಅದನ್ನು ಮುಟ್ಟಲರಿಯದು. ಆತನ ಮುಂದೆ ಮಾಯೆಯು ಕೂಡ ನಿಲ್ಲಲಾರದೆ ಲಜ್ಜೆಯಿಂದ ಹಿಂಜರಿಯುತ್ತಿರುವಳು!

**ತದ್ವೈ ಪದಂ ಭಗವತಃ ಪರಮಸ್ಯ ಪುಂಸೋ**
**ಬ್ರಹ್ಮೇತಿ ಯದ್ವಿದುರಜಸ್ರಸುಖಂ ವಿಶೋಕಮ್ ।**
**ಸಧ್ರ್ಯಙ್ ನಿಯಮ್ಯ ಯಮಕರ್ತಹೇತಿಂ**
**ಜಹ್ಯುಃ ಸ್ವರಾಡಿವ ನಿಪಾನಖನಿತ್ರಮಿನ್ದ್ರಃ ॥ 48 ॥**

48. ಯಾವ ಶೋಕರಹಿತನಿತ್ಯಾನಂದವನ್ನು ಬ್ರಹ್ಮವೆಂದು ಬಲ್ಲವರು ತಿಳಿದಿರುವರೋ ಅದೇ ಆ ಭಗವಂತನಾದ ಪರಮಪುರುಷನ ಪದವು. ಆತನಲ್ಲಿಯೇ ಯತಿಗಳು ಮನಸ್ಸನ್ನು ನಿಲ್ಲಿಸಿಕೊಂಡು, ಸ್ವರಾಡ್ರೂಪನಾದ ಇಂದ್ರನು ಬಾವಿಯನ್ನು ತೆಗೆಯುವ ಗುದ್ದಲಿಯನ್ನು ಅಸಡ್ಡೆ ಮಾಡುವಂತೆ, ದ್ವಂದ್ವನಾಶಕವಾದ ಸಾಧನಾಂತರವನ್ನು ಕೈಬಿಡುವರು.

**ಸ ಶ್ರೇಯಸಾಮಪಿ ವಿಭುರ್ಭಗವಾನ್ ಯತೋಽಸ್ಯ**
**ಭಾವಸ್ವಭಾವವಿಹಿತಸ್ಯ ಸತಃ ಪ್ರಸಿದ್ಧಿಃ ।**
**ದೇಹೇ ಸ್ವಧಾತುವಿಗಮೇಽನುವಿಶೀರ್ಯಮಾಣೇ**
**ವ್ಯೋಮೇವ ತತ್ರ ಪುರುಷೋ ನ ವಿಶೀರ್ಯತೇಽಜಃ ॥ 49 ॥**

49. ಭಾವವಸ್ತುಗಳ ಪ್ರಸಿದ್ಧಿಯೂ ಆತನಿಂದಲೇ, ಆತನೇ ಶ್ರೇಯಸ್ಸುಗಳಿಗೆ ಒಡೆಯನು. ದೇಹವು ಧಾತುವಿಯೋಗದಿಂದ ನಾಶವಾದರೂ ಆಕಾಶದಂತೆ ಆ ಅಜನಾವ ಪರುಷನು ನಾಶವಾಗದಿರುವನು.

*****

## ವಿರಿಂಚಿಗೆ ಭಗವಂತನ ಸ್ವರೂಪದರ್ಶನ

### (ಎರಡನೆಯ ಸ್ಕಂಧ, ಒಂಬತ್ತನೆಯ ಅಧ್ಯಾಯ)

**ಶ್ರೀಭಗವಾನುವಾಚ –**
**ಜ್ಞಾನಂ ಪರಮಗುಹ್ಯಂ ತೇ ಯದ್ವಿಜ್ಞಾನಸಮನ್ವಿತಮ್ ।**
**ಸರಹಸ್ಯಂ ತದಙ್ಗಂ ಚ ಗೃಹಾಣ ಗದಿತಂ ಮಯಾ ॥ 30 ॥**

30. ಭಗವಂತನಿಂತೆಂದನು: ಬ್ರಹ್ಮದೇವನೆ, ಪರಮಗುಹ್ಯವಾದ ಜ್ಞಾನವನ್ನು ವಿಜ್ಞಾನದೊಡಗೂಡಿ ಸರಹಸ್ಯವಾಗಿ ಸಾಂಗವಾಗಿ ತಿಳಿಸುವೆನು, ಕೇಳು.

**ಯಾವಾನಹಂ ಯಥಾಭಾವೋ ಯದ್ರೂಪಗುಣಕರ್ಮಕಃ ।**
**ತಥೈವ ತತ್ತ್ವವಿಜ್ಞಾನಮಸ್ತು ತೇ ಮದನುಗ್ರಹಾತ್ ॥ 31 ॥**

31. ನಾನು ಎಷ್ಟು ವಿಸ್ತಾರವುಳ್ಳವನೋ, ಯಾವ ಸ್ವರೂಪದವನೋ, ಯಾವಯಾವ ರೂಪಗುಣಕರ್ಮಗಳುಳ್ಳವನೋ, ಹಾಗೆಯೇ ಅದರ ತತ್ತ್ವಜ್ಞಾನವು ನನ್ನ ಅನುಗ್ರಹದಿಂದ ನಿನಗೆ ಆಗಲಿ/

**ಅಹಮೇವಾಸಮೇಕೋಽಗ್ರೇ ನಾನ್ಯ ದ್ಯತ್ಸದಸತ್ಪರಮ್ ।**
**ಪಶ್ಚಾದಹಂ ಯದೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಮ್ ॥ 32 ॥**

32. ಮೊದಲು ನಾನೊಬ್ಬನೇ ಇದ್ದೆನು, ನನಗಿಂತ ಬೇರೆಯಾದ ಸತ್ತಾಗಲಿ ಅಸತ್ತಾಗಲಿ ಇರಲಿಲ್ಲ. ಆಬಳಿಕ ಈ ಎಲ್ಲವೂ ನಾನೇ ಆಗಿರುವೆನು. ಕೊನೆಗೆ ಯಾವದು ಉಳಿಯುವದೋ ಅದು ನಾನೇ.

**ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾಽಽತ್ಮನಿ ।**
**ತದ್ವಿದ್ಯಾದಾತ್ಮನೋ ಮಾಯಾಂ ಯಥಾಽಽಭಾಸೋ ಯಥಾ ತಮಃ ॥ 33 ॥**

33. ಅರ್ಥವಿಲ್ಲದೆ ಯಾವದು ಕಾಣುತ್ತಿರುವದೋ, ಆತ್ಮನಲ್ಲಿ ಯಾವದು

ಕಾಣದೆ ಇರುವದೋ ಅದನ್ನೇ ಆತ್ಮಮಾಯೆಯೆಂದು ತಿಳಿಯಬೇಕು. ಪ್ರತಿಬಿಂಬ, ಕತ್ತಲೆ–ಇವುಗಳು ಅದಕ್ಕೆ ದೃಷ್ಟಾಂತ.

**ಯಥಾ ಮಹಾನ್ತಿ ಭೂತಾನಿ ಭೂತೇಷೂಚ್ಚಾವಚೇಷ್ವನು ।**
**ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್ ॥ 34 ॥**

34. ಮಹಾಭೂತಗಳು ಹೇಗೆ ಮೇಲುಕೀಳೆನಿಸಿದ ಪ್ರಾಣಿಗಳಲ್ಲಿ ಪ್ರವಿಷ್ಟವೂ ಅಪ್ರವಿಷ್ಟವೂ ಆಗಿರುವವೋ, ಹಾಗೆ ನಾನು ಆ ಭೂತಗಳಲ್ಲಿ ಪ್ರವಿಷ್ಟನಾಗಿದ್ದೂ ಅಪ್ರವಿಷ್ಟನಾಗಿರುವೆನು.

**ಏತಾವದೇವ ಜಿಜ್ಞಾಸ್ಯಂ ತತ್ತ್ವಜಿಜ್ಞಾಸುನಾಽತ್ಮನಃ ।**
**ಅನ್ವಯವ್ಯತಿರೇಕಾಭ್ಯಾಂ ಯತ್ಸ್ಯಾತ್ ಸರ್ವತ್ರ ಸರ್ವದಾ ॥ 35 ॥**

35. ಆತ್ಮತತ್ತ್ವವನ್ನು ಅರಿತುಕೊಳ್ಳಬೇಕನ್ನುವವನು, ಯಾವದು ಎಲ್ಲೆಲ್ಲಿಯೂ ಎಂದೆಂದಿಗೂ ಇರುವದೋ ಅಷ್ಟನ್ನು ಮಾತ್ರ ಅನ್ವಯವ್ಯತಿರೇಕಗಳಿಂದ ಅರಿತುಕೊಳ್ಳಬೇಕು.

******

## ಶ್ರೀಮದ್ಭಾಗವತದ ಹತ್ತು ಲಕ್ಷಣಗಳು

(ಎರಡನೆಯ ಸ್ಕಂಧ, ಹತ್ತನೆಯ ಅಧ್ಯಾಯ)

**ಶ್ರೀಶುಕ ಉವಾಚ –**
**ಅತ್ರ ಸರ್ಗೋ ವಿಸರ್ಗಶ್ಚ ಸ್ಥಾನಂ ಪೋಷಣಮೂತಯಃ ।**
**ಮನ್ವನ್ತರೇಶಾನುಕಥಾ ನಿರೋಧೋ ಮುಕ್ತಿರಾಶ್ರಯಃ ॥ 1 ॥**

1. ಶ್ರೀಶುಕರು ಇಂತೆಂದರು: ಈ ಭಾಗವತಪುರಾಣದಲ್ಲಿ ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿಗಳು, ಮನ್ವಂತರಗಳು, ಈಶಾನುಕಥೆಗಳು, ನಿರೋಧ, ಮುಕ್ತಿ, ಆಶ್ರಯ – ಈ ಹತ್ತನ್ನು ವರ್ಣಿಸಿರುತ್ತದೆ.

**ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್ ।**
**ವರ್ಣಯನ್ತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಞ್ಜಸಾ ॥ 2 ॥**

2. ಇವುಗಳಲ್ಲಿ ಹತ್ತನೆಯದಾದ ಆಶ್ರಯವನ್ನು ಶೋಧಿಸಿ ಶಬ್ದದಿಂದಲೂ

ತಾತ್ಪರ್ಯದಿಂದಲೂ ನಿಶ್ಚಯಿಸುವದಕ್ಕಾಗಿಯೇ ಮಿಕ್ಕ ಒಂಬತ್ತು ವಿಷಯಗಳ ಸ್ವರೂಪವನ್ನು ಇಲ್ಲಿ ಮಹಾತ್ಮರು ವರ್ಣಿಸಿರುತ್ತಾರೆ.

**ಭೂತಮಾತ್ರೇನ್ದ್ರಿಯಧಿಯಾಂ ಜನ್ಮ ಸರ್ಗ ಉದಾಹೃತಃ ।**
**ಬ್ರಹ್ಮಣೋ ಗುಣವೈಷಮ್ಯಾದ್ವಿಸರ್ಗಃ ಪೌರುಷಃ ಸ್ಮೃತಃ ॥ 3 ॥**

3. ಸತ್ತ್ವಾದಿಗುಣಗಳು ವೈಷಮ್ಯವನ್ನು ಪಡೆಯಲು ಪರಬ್ರಹ್ಮದಿಂದ ಭೂತತನ್ಮಾತ್ರೆಗಳು, ಇಂದ್ರಿಯಗಳು, ಬುದ್ಧಿ – ಇವುಗಳ ನಿರ್ಮಾಣವಾಗುವದೇ 'ಸರ್ಗ'ವೆನಿಸುತ್ತದೆ. ಆ ವಿರಾಟ್ಪುರುಷನಿಂದ ಆಗುವ ಸೃಷ್ಟಿಯೇ 'ವಿಸರ್ಗ'ವೆನಸಿಸುತ್ತದೆ.

**ಸ್ಥಿತಿರ್ವೈಕುಣ್ಠವಿಜಯಃ ಪೋಷಣಂ ತದನುಗ್ರಹಃ ।**
**ಮನ್ವನ್ತರಾಣಿ ಸದ್ಧರ್ಮ ಊತಯಃ ಕರ್ಮವಾಸನಾಃ ॥ 4 ॥**

4. ವೈಕುಂಠಭಗವಂತನು ಸೃಷ್ಟಿಯಾದದ್ದನ್ನೆಲ್ಲ ವ್ಯವಸ್ಥೆಗೊಳಿಸುವ ಉತ್ಕರ್ಷವೇ 'ಸ್ಥಾನವು'. ಆತನು ಭಕ್ತರಮೇಲೆ ಮಾಡುವ ಅನುಗ್ರಹವೇ 'ಪೋಷಣವು'. 'ಮನ್ವಂತರ'ವೆಂದರೆ ಸತ್ಪುರುಷರಾದ ಮನ್ವಂತರಾಧಿಪತಿಗಳ ಧರ್ಮಾಚರಣೆ. ಕರ್ಮವಾಸನೆಗಳೇ 'ಊತಿಗಳು'.

**ಅವತಾರಾನುಚರಿತಂ ಹರೇರಸ್ಯಾನುವರ್ತಿನಾಮ್ ।**
**ಪುಂಸಾಮೀಶಕಥಾಃ ಪ್ರೋಕ್ತಾ ನಾನಾಖ್ಯಾನೋಪಬೃಂಹಿತಾಃ ॥ 5 ॥**

5. ಶ್ರೀಹರಿಯು ಅವತಾರಗಳ ಚರಿತ್ರೆಯೂ ಮತ್ತು ಆತನ ಅನುವರ್ತಿಗಳಾದವರ ಬಗೆಬಗೆಯ ಆಖ್ಯಾನಗಳಿಂದ ಪುಷ್ಟವಾಗಿರುವ ಕಥೆಗಳೂ 'ಈಶಾನುಕಥೆಗಳು'.

**ನಿರೋಧೋಽಸ್ಯಾನುಶಯನಮಾತ್ಮನಃ ಸಹ ಶಕ್ತಿಭಿಃ ।**
**ಮುಕ್ತಿರ್ಹಿತ್ವಾನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ ॥ 6 ॥**

6. ಈ ಜೀವಾತ್ಮನು ತನ್ನ ಉಪಾಧಿಶಕ್ತಿಗಳೊಡನೆ ಪರಮಾತ್ಮನ ಯೋಗನಿದ್ರೆಯನ್ನು ಹಿಂಬಾಲಿಸಿ ಆತನಲ್ಲಿ ಲಯವಾಗುವದೇ 'ನಿರೋಧವು'. 'ಮುಕ್ತಿ'ಯೆಂದರೆ ತಪ್ಪುತಿಳಿವಳಿಕೆಯಿಂದಾಗಿರುವ ಬೇರೊಂದು ರೂಪವನ್ನು ಬಿಟ್ಟು ತನ್ನ ರೂಪದಿಂದಲೇ ನೆಲೆನಿಲ್ಲುವದು.

**ಆಭಾಸಶ್ಚ ನಿರೋಧಶ್ಚ ಯತಶ್ಚಾಧ್ಯವಸೀಯತೇ ।**
**ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ॥ 7 ॥**

7. ತೋರಿಕೊಳ್ಳುವದೂ ಲಯವೂ ಯಾವದರಿಂದ ಗೊತ್ತಾಗುವದೋ, ಅದೇ 'ಆಶ್ರಯವು'. ಅದನ್ನು ಪರಬ್ರಹ್ಮವೆಂದೂ ಪರಮಾತ್ಮನೆಂದೂ ಕರೆಯುವರು.

**ಯೋಽಧ್ಯಾತ್ಮಿಕೋಽಯಂ ಪುರುಷಃ ಸೋಽಸಾವೇವಾಧಿದೈವಿಕಃ ।**
**ಯಸ್ತತ್ರೋಭಯವಿಚ್ಛೇದಃ ಸ ಸ್ಮೃತೋ ಹ್ಯಾಧಿಭೌತಿಕಃ ॥ 8 ॥**

8. ಈ ಜೀವರೂಪನಾದ ಆಧ್ಯಾತ್ಮಿಕಪುರುಷನಿದಾನಲ್ಲ, ಅವನೇ ಆ ಸೂರ್ಯಾಂತರ್ಗತನಾದ ಆಧಿದೈವಿಕಪುರುಷನು. ಇವರಿಬ್ಬರನ್ನು ಬೇರ್ಪಡಿಸಿ ವಿಚ್ಛೇದವನ್ನುಂಟುಮಾಡಿರುವವನೇ ಆಧಿಭೌತಿಕನು.

**ಏಕಮೇಕತರಾಭಾವೇ ಯದಾ ನೋಪಲಭಾಮಹೇ ।**
**ತ್ರಿಶಯಂ ತತ್ರ ಯೋ ವೇದ ಸ ಆತ್ಮಾ ಸ್ವಾಶ್ರಯಾಶ್ರಯಃ ॥ 9 ॥**

9. ಇವುಗಳಲ್ಲಿ ಒಂದಿಲ್ಲದಿದ್ದರೆ ಇನ್ನೊಂದನ್ನು ಕಾಣುವದು ಆಗಲಾರದು. ಆಗ ಈ ಮೂರನ್ನು ಯಾವನು ಅರಿಯುತ್ತಿರುವನೋ ಆ ಪರಮಾತ್ಮನೇ ತನಗೆತಾನೇ ಆಶ್ರಯವಾಗಿರುವ ಆಶ್ರಯವು.

**ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।**
**ಯದನುಗ್ರಹತಃ ಸನ್ತಿ ನ ಸನ್ತಿ ಯದುಪೇಕ್ಷಯಾ ॥ 10 ॥**

10. ಉಪಾದಾನದ್ರವ್ಯವು, ನಿಮಿತ್ತವಾದ ಕರ್ಮವು, ಕಾಲ, ಸ್ವಭಾವ, ಭೋಕ್ತೃವಾದ ಜೀವ – ಇವು ಆತನ ಅನುಗ್ರಹದಿಂದ ಇರುತ್ತವೆ; ಅವನು ಉಪೇಕ್ಷೆಮಾಡಿದರೆ ಇಲ್ಲ.

**ಏಕೋ ನಾನಾತ್ವಮನ್ವಿಚ್ಛನ್ ಯೋಗತಲ್ಪಾತ್ ಸಮುತ್ಥಿತಃ ।**
**ವೀರ್ಯಂ ಹಿರಣ್ಮಯಂ ದೇವೋ ಮಾಯಯಾ ವ್ಯಸೃಜತ್ ತ್ರಿಧಾ ॥ 11 ॥**

11. ಆ ದೇವನು ತಾನೊಬ್ಬನೇ ಇದ್ದವನು ನಾನಾರೂಪನಾಗಬೇಕೆಂದು ಯೋಗತಲ್ಪದಿಂದೆದ್ದು ತನ್ನ ತೇಜೋಮಯವಾದ ವೀರ್ಯವನ್ನು ಮಾಯೆಯಿಂದ ಮೂರು ಬಗೆಯಾಗಿ ಮಾಡಿದನು.

*****

## ದೇವತೆಗಳಿಂದ ಭಗವಂತನ ಪ್ರಾರ್ಥನೆ

### (ಮೂರನೆಯ ಸ್ಕಂಧ, ಐದನೆಯ ಅಧ್ಯಾಯ)

**ದೇವಾ ಊಚುಃ –**
**ನಮಾಮ ತೇ ದೇವ ಪದಾರವಿನ್ದಂ**
**ಪ್ರಪನ್ನತಾಪೋಪಶಮಾತಪತ್ರಮ್ ।**
**ಯನ್ಮೂಲಕೇತಾ ಯತಯೋಽಞ್ಜಸೋರು**
**ಸಂಸಾರದುಃಖಂ ಬಹಿರುತ್ಕ್ಷಿಪನ್ತಿ ॥ 38 ॥**

38. ದೇವತೆಗಳಿಂತೆಂದರು: ದೇವ, ಶರಣಾಗತರ ತಾಪವನ್ನು ಹೋಗಲಾಡಿಸುವ ಕೊಡೆಯಂತಿರುವ ನಿನ್ನ ಪದಕಮಲವನ್ನು ನಮಸ್ಕರಿಸುತ್ತಿರುವೆವು. ಈ ಪಾದಮೂಲವನ್ನು ಆಶ್ರಯಿಸುವ ಯತಿಗಳು ಹೆಚ್ಚಿನ ಸಂಸಾರದುಃಖವನ್ನು ಸುಲಭವಾಗಿ ಹೊರಕ್ಕೆ ಹಾಕಿಕೊಳ್ಳುತ್ತಾರಲ್ಲವೆ?

**ಧಾತರ್ಯದಸ್ಮಿನ್ ಭವ ಈಶ ಜೀವಾ**
**ಸ್ತಾಪತ್ರಯೇಣೋಪಹತಾ ನ ಶರ್ಮ ।**
**ಆತ್ಮಲ್ಲಭನ್ತೇ ಭಗವಂಸ್ತವಾಙ್ಘ್ರಿಚ್ಛಾಯಾಂ**
**ಸವಿದ್ಯಾಮತ ಆಶ್ರಯೇಮ ॥ 39 ॥**

39. ಎಲೈ ಜಗದ್ಧಾತೃವಾದ ಈಶ್ವರನೆ, ಈ ಸಂಸಾರದಲ್ಲಿ ಜೀವರು ತಾಪತ್ರಯದಿಂದ ಉಪಹತರಾಗಿರುವದರಿಂದ ಅಂತಃಕರಣದಲ್ಲಿ ಸಮಾಧಾನವನ್ನು ಹೊಂದದೆ ಇರುವರು. ಆದ್ದರಿಂದ ಭಗವಂತನೆ, ಜ್ಞಾನಮಯವಾದ ನಿನ್ನ ಪಾದದ ನೆರಳನ್ನು ಆಶ್ರಯಿಸುವೆವು.

**ಮಾರ್ಗನ್ತಿ ಯತ್ತೇ ಮುಖಪದ್ಮನೀಡೈ**
**ಶ್ಛನ್ದಃಸುಪರ್ಣೈರ್ಋಷಯೋ ವಿವಿಕ್ತೇ ।**
**ಯಸ್ಯಾಘಮರ್ಷೋದಸರಿದ್ವರಾಯಾಃ**
**ಪದಂ ಪದಂ ತೀರ್ಥಪದಃ ಪ್ರಪನ್ನಾಃ ॥ 40 ॥**

40. ಋಷಿಗಳು ನಿನ್ನ ಮುಖಪದ್ಮವೆಂಬ ಗೂಡನ್ನಾಶ್ರಯಿಸುವ ವೇದಗಳೆಂಬ ಹಕ್ಕಿಗಳ ಮೂಲಕ ಯಾವ ನಿನ್ನ ಪಾದವನ್ನು ಹುಡುಕುತ್ತಿರುವರೋ, ಪಾಪಹರವಾದ

ಶ್ರೇಷ್ಠ ಗಂಗಾನದಿಗೂ ಯಾವದು ಮೂಲಸ್ಥಾನವೋ ಆ ತೀರ್ಥಪಾದನಾದ ನಿನ್ನ ಪಾದವನ್ನು ಶರಣು ಹೊಕ್ಕಿರುವೆವು!

**ಯಚ್ಛ್ರದ್ಧಯಾ ಶ್ರುತವತ್ಯಾಚ ಭಕ್ತ್ಯಾ**
**ಸಂಮೃಜ್ಯಮಾನೇ ಹೃದಯೇಽವಧಾಯ ।**
**ಜ್ಞಾನೇನ ವೈರಾಗ್ಯಬಲೇನ ಧೀರಾ**
**ವ್ರಜೇಮತತ್ತೇಽಙ್ಘ್ರಿಸರೋಜಪೀಠಮ್ ॥ 41 ॥**

41. ಯಾವದನ್ನು ಶ್ರದ್ಧೆಯಿಂದಲೂ ಶ್ರವಣಾದಿಗಳಿಂದ ಕೂಡಿದ ಭಕ್ತಿಯಿಂದಲೂ ನಿರ್ಮಲವಾದ ಹೃದಯದಲ್ಲಿಟ್ಟುಕೊಂಡು ವೈರಾಗ್ಯಬಲ ಯುಕ್ತಜ್ಞಾನದಿಂದ ವಿಜ್ಞಾನಿಗಳೆನಿಸಿಕೊಂಡಿರುವರೋ ಅಂಥ ನಿನ್ನ ಪಾದಕಮಲದ ಪಾದುಕೆಯನ್ನು ಶರಣುಹೊಕ್ಕಿರುವೆವು.

**ವಿಶ್ವಸ್ಯ ಜನ್ಮಸ್ಥಿತಿಸಂಯಮಾರ್ಥೇ**
**ಕೃತಾವತಾರಸ್ಯ ಪದಾಂಬುಜಂ ತೇ ।**
**ವ್ರಜೇಮ ಸರ್ವೇ ಶರಣಂ ಯದೀಶ**
**ಸ್ಮೃತಂ ಪ್ರಯಚ್ಛತ್ಯಭಯಂ ಸ್ವಪುಂಸಾಮ್ ॥ 42 ॥**

42. ಎಲೈ ಈಶ್ವರನೆ, ವಿಶ್ವದ ಸೃಷ್ಟಿಸ್ಥಿತಿಲಯಗಳನ್ನು ಮಾಡುವದಕ್ಕಾಗಿ ಅವತರಿಸುತ್ತಿರುವ ನಿನ್ನ ಚರಣಕಮಲವನ್ನು – ಯಾವದನ್ನು ಸ್ಮರಿಸಿದರೆ ತನ್ನ ಭಕ್ತರಾದ ಜನರಿಗೆ ಅಭಯವನ್ನು ನೀಡುವದೋ ಆ ಚರಣಕಮಲವನ್ನು – ಶರಣುಹೊಂದಿರುವೆವು.

**ಯತ್ಸಾನುಬನ್ಧೇಽಸತಿ ದೇಹಗೇಹೇ**
**ಮಮಾಽಹಮಿತ್ಯೂಢದುರಾಗ್ರಹಾಣಾಮ್ ।**
**ಪುಂಸಾಂ ಸುದೂರಂ ವಸತೋಽಪಿ ಪುರ್ಯಾಂ**
**ಭಜೇಮ ತತ್ತೇ ಭಗವನ್ ಪದಾಬ್ಜಮ್ ॥ 43 ॥**

43. ಭಗವಂತನೆ, ತುಚ್ಛವಾದ ದೇಹ, ಗೃಹ – ಮುಂತಾದವುಗಳಲ್ಲಿಯೂ ಅವುಗಳ ಸಂಬಂಧಿಯಾದ ಇತರ ಪದಾರ್ಥಗಳಲ್ಲಿಯೂ ನಾನು, ನನ್ನದು – ಎಂಬ ದುರಾಗ್ರಹವು ಎದ್ದುಕೊಂಡಿರುವ ಪುರುಷರ ಶರೀರದಲ್ಲಿದ್ದುಕೊಂಡಿದ್ದರೂ ಯಾವದು ಅತ್ಯಂತದೂರವಾಗಿರುವದೋ, ಆ ನಿನ್ನ ಪಾದಕಮಲವನ್ನು ಭಜಿಸುವೆವು.

**ತಾನ್ ವೈ ಹ್ಯಸದ್ವೃತ್ತಿಭಿರಕ್ಷಿಭಿರ್ಯೇ**
**ಪರಾಹೃತಾನ್ತರ್ಮನಸಃ ಪರೇಶ ।**
**ಅಥೋ ನ ಪಶ್ಯನ್ತ್ಯುರುಗಾಯ ನೂನಂ**
**ಯೇ ತೇ ಪದನ್ಯಾಸವಿಲಾಸಲಕ್ಷ್ಮ್ಯಾಃ ॥ 44 ॥**

44. ಪರಮಯಶಸ್ವಿಯಾದ ಪರಮೇಶ್ವರನೆ, ತುಚ್ಛವಿಷಯಕವಾದ ವೃತ್ತಿಗಳುಳ್ಳ ಇಂದ್ರಿಯಗಳು ಒಳಗಿನ ಮನಸ್ಸನ್ನು ಹೊರಕ್ಕೆಳೆದೊಯ್ದಿರುವ ಜನರು ಯಾರಿರುವರೋ ಅವರು ಆ ಕಾರಣದಿಂದಲೇ ಯಾರು ಪಾದಗಳ ಸಂಚಾರದ ವಿಲಾಸಲಕ್ಷ್ಮಿಗೆ ಸಂಬಂಧಪಟ್ಟವರೋ ಅಂಥವರನ್ನು ಕಾಣುವದೇ ಇಲ್ಲವಷ್ಟೆ?

**ಪಾನೇನ ತೇ ದೇವ ಕಥಾಸುಧಾಯಾಃ**
**ಪ್ರವೃದ್ಧಭಕ್ತ್ಯಾ ವಿಶದಾಶಯಾ ಯೇ ।**
**ವೈರಾಗ್ಯಸಾರಂ ಪ್ರತಿಲಭ್ಯ ಬೋಧಂ**
**ಯಥಾಽಞ್ಜಸಾಽನ್ವೀಯುರಕುಣ್ಠಧಿಷ್ಣ್ಯಮ್ ॥ 45 ॥**

45. ಎಲೈ ದೇವನೆ, ನಿನ್ನ ಕಥಾಮೃತಪಾನದಿಂದ ಭಕ್ತಿಯು ಬೆಳೆದುಕೊಂಡಿರುವ ಕಾರಣದಿಂದ ಯಾರು ನಿರ್ಮಲಾಂತಃಕರಣರಾಗಿರುವರೋ ಅವರು ವೈರಾಗ್ಯವೆಂಬ ಸಾರವುಳ್ಳ ಆತ್ಮಜ್ಞಾನವನ್ನು ಪಡೆದು ವೈಕುಂಠಸ್ಥಾನವನ್ನು ಸುಲಭವಾಗಿಯೇ ಪಡೆದುಕೊಳ್ಳುವರು.

**ತಥಾಽಪರೇ ಚಾಽಽತ್ಮಸಮಾಧಿಯೋಗ**
**ಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್ ।**
**ತ್ವಾಮೇವ ಧೀರಾಃ ಪುರುಷಂ ವಿಶನ್ತಿ**
**ತೇಷಾಂ ಶ್ರಮಃ ಸ್ಯಾನ್ನ ತು ಸೇವಯಾ ತೇ ॥ 46 ॥**

46. ಮತ್ತೆ ಕೆಲವರು ಧೀರರು ಚಿತ್ತಸಮಾಧಿಯೋಗದ ಬಲದಿಂದ ಅತ್ಯಂತಪ್ರಬಲವಾದ ಮಾಯೆಯನ್ನು ಗೆದ್ದುಕೊಂಡು ಪರಮಪುರುಷನಾದ ನಿನ್ನನ್ನೇ ಪ್ರವೇಶಿಸುವರು. ಅವರಿಗೆ ಶ್ರಮವಾದರೂ ಆದೀತು, ಆದರೆ ನಿನ್ನ ಸೇವೆಯಿಂದ ಯಾವ ಶ್ರಮವೂ ಆಗುವಂತಿಲ್ಲ.

******

## ಅಜ್ಞಾನಮೋಹ ನಿವಾರಣೆಯಾಗುವ ಬಗೆ

### (ಮೂರನೆಯ ಸ್ಕಂಧ, ಏಳನೆಯ ಅಧ್ಯಾಯ)

**ಮೈತ್ರೇಯ ಉವಾಚ –**
**ಸೇಯಂ ಭಗವತೋ ಮಾಯಾ ಯನ್ನಯೇನ ವಿರುಧ್ಯತೇ ।**
**ಈಶ್ವರಸ್ಯ ವಿಮುಕ್ತಸ್ಯ ಕಾರ್ಪಣ್ಯಮುತ ಬನ್ಧನಮ್ ॥ 9 ॥**

9. ನಿಜವಾಗಿ ಎಲ್ಲವನ್ನೂ ಆಳುವವನೂ ನಿತ್ಯಮುಕ್ತನೂ ಆಗಿರುವ ಆತ್ಮನಿಗೆ ದೈನ್ಯವೂ ಮತ್ತು ಬಂಧವೂ ಬಂದೊದಗುವದೆಂಬುದಿದೆಯಲ್ಲ, ತರ್ಕವಿರುದ್ಧವಾಗಿರುವ ಆ ಇದೇ ಭಗವಂತನ ಮಾಯೆ.

**ಯದರ್ಥೇನ ವಿನಾಽಮುಷ್ಯ ಪುಂಸ ಆತ್ಮವಿಪರ್ಯಯಃ ।**
**ಪ್ರತೀಯತ ಉಪದ್ರಷ್ಟುಃ ಸ್ವಶಿರಶ್ಛೇದನಾದಿಕಃ ॥ 10 ॥**

10. ಕನಸನ್ನು ಕಾಣುತ್ತಿರುವವನಿಗೆ ಹೇಗೆ ತನ್ನ ತಲೆಯನ್ನು ಕಡಿದುಹಾಕಿದ್ದೇ ಮುಂತಾದದ್ದು ನಿಜವಾಗಿ ಆಗದೆ ಇದ್ದರೂ ಆದಂತೆ ತನ್ನ ಸ್ವರೂಪದ ವಿಪರೀತಜ್ಞಾನವುಂಟಾಗುವದೋ ಹಾಗೆಯೇ ಅಜ್ಞಾನದಿಂದ ಹೀಗೆಲ್ಲ ಕಾಣುತ್ತಿರುತ್ತದೆ.

**ಯಥಾ ಜಲೇ ಚನ್ದ್ರಮಸಃ ಕಮ್ಪಾದಿಸ್ತತ್ಕೃತೋ ಗುಣಃ ।**
**ದೃಶ್ಯತೇಽಸನ್ನಪಿ ದ್ರಷ್ಟುರಾತ್ಮನೋಽನಾತ್ಮನೋ ಗುಣಃ ॥ 11 ॥**

11. ಹೇಗೆ ನೀರಿನಲ್ಲಿ ಚಂದ್ರನ ಪ್ರತಿಬಿಂಬದ ನಡುಕವೇ ಮುಂತಾದ ನೀರಿನ ಧರ್ಮವು ಸಟೆಯಾಗಿದ್ದರೂ ತೋರುತ್ತಿರುವದೋ, ಅದರಂತೆ, ದ್ರಷ್ಟ್ರುವಾದ ಆತ್ಮನಲ್ಲಿಲ್ಲದಿದ್ದರೂ ಅನಾತ್ಮದ ಗುಣವು ಇರುವಂತೆ ಕಾಣುತ್ತಿರುವದು.

**ಸ ವೈ ನಿವೃತ್ತಿಧರ್ಮೇಣ ವಾಸುದೇವಾನುಕಮ್ಪಯಾ ।**
**ಭಗವದ್ಭಕ್ತಿಯೋಗೇನ ತಿರೋಧತ್ತೇ ಶನೈರಿಹ ॥ 12 ॥**

12. ಈ ತೋರಿಕೆಯು ಶಮದಮಾದಿನಿವೃತ್ತಿಧರ್ಮದಿಂದಲೂ ವಾಸುದೇವನ ಕನಿಕರದಿಂದಲೂ ಆದ ಭಗವದ್ಭಕ್ತಿಯೋಗದಿಂದ ಮೆಲ್ಲಮೆಲ್ಲನೆ ಮರೆಯಾಗುವದು.

**ಯದೇನ್ದ್ರಿಯೋಪರಾಮೋऽಥ ದ್ರಷ್ಟಾತ್ಮನಿ ಪರೇ ಹರೌ ।**
**ವಿಲೀಯನ್ತೇ ತದಾ ಕ್ಲೇಶಾಃ ಸಂಸುಪ್ತಸ್ಯೇವ ಕೃತ್ಸ್ನಶಃ ॥ 13 ॥**

13. ಯಾವಾಗ ಇಂದ್ರಿಯಗಳು ಸಾಕ್ಷಿರೂಪನಾದ ಪರಮಾತ್ಮನಾದ ಶ್ರೀಹರಿಯಲ್ಲಿ ನಿಂತುಬಿಡುವವೋ ಆಗ ಜೀವನ ಕ್ಲೇಶಗಳೆಲ್ಲ – ಸುಷುಪ್ತನಾದವನಿಗೆ ಅಡಗಿಹೋಗುವಂತೆ – ಪೂರ್ಣವಾಗಿ ಲಯವಾಗಿಬಿಡುವವು.

******

## ಬ್ರಹ್ಮಕೃತ ವಿಷ್ಣುಸ್ತೋತ್ರ

**(ಮೂರನೆಯ ಸ್ಕಂಧ, ಒಂಬತ್ತನೆಯ ಅಧ್ಯಾಯ)**

**ಬ್ರಹ್ಮ ಉವಾಚ –**
**ಜ್ಞಾತೋऽಸಿ ಮೇऽದ್ಯ ಸುಚಿರಾನ್ನನು ದೇಹಭಾಜಾಂ**
**ನ ಜ್ಞಾಯತೇ ಭಗವತೋ ಗತಿರಿತ್ಯವದ್ಯಮ್ ।**
**ನಾನ್ಯತ್ತ್ವದಸ್ತಿ ಭಗವನ್ನಪಿ ತನ್ನ ಶುದ್ಧಂ**
**ಮಾಯಾಗುಣವ್ಯತಿಕರಾದ್ಯದುರುರ್ವಿಭಾಸಿ ॥ 1 ॥**

1. ಬ್ರಹ್ಮನು ಇಂತೆಂದನು: ಭಗವಂತನೆ, ಬಹುಕಾಲಕ್ಕೆ ನನಗೆ ನಿನ್ನ ಅರಿವಾಯಿತು. ಆಹಾ! ನಿನ್ನನ್ನು ದೇಹಧಾರಿಗಳಾದವರು ಅರಿಯದೆ ಇರುವದೆಂಬುದು ಎಂಥ ದೊಡ್ಡ ತಪ್ಪು! ನಿನಗಿಂತ ಬೇರೆಯಾಗಿ ಯಾವದೊಂದೂ ನಿಜವಾಗಿ ಇರುವದಿಲ್ಲ. ಯಾವದೊಂದು ಬೇರೆಯಿರುವಂತೆ ಕಾಣುತ್ತಿರುವದೋ ಅದು ಶುದ್ಧವಾದ ಇರವಲ್ಲ. ಏಕೆಂದರೆ ನೀನೇ ಮಾಯಾ ಗುಣಗಳ ಮಿಶ್ರಣದಿಂದ ಬಲುಬಗೆಯಿಂದ ತೋರುತ್ತಿರುವೆ.

**ರೂಪಂ ಯದೇತದವಬೋಧರಸೋದಯೇನ**
**ಶಶ್ವನ್ನಿವೃತ್ತತಮಸಃ ಸದನುಗ್ರಹಾಯ ।**
**ಆದೌ ಗೃಹೀತಮವತಾರಶತೈಕಬೀಜಂ**
**ಯನ್ನಾಭಿಪದ್ಮಭವನಾದಹಮಾವಿರಾಸಮ್ ॥ 2 ॥**

**ನಾತಃಪರಂ ಪರಮಯದ್ಭವತಃ ಸ್ವರೂಪ–**
**ಮಾನನ್ದಮಾತ್ರಮವಿಕಲ್ಪಮವಿದ್ಧವರ್ಚಃ ।**

**ಪಶ್ಯಾಮಿ ವಿಶ್ವಸೃಜಮೇಕಮವಿಶ್ವಮಾತ್ಮನ್**
**ಭೂತೇನ್ದ್ರಿಯಾತ್ಮಕಮದಸ್ತ ಉಪಾಶ್ರಿತೋऽಸ್ಮಿ ॥ 3 ॥**

2–3. ಎಂದೆಂದಿಗೂ ತಮಸ್ಸಿನ ಸಂಬಂಧವಿಲ್ಲದಿರುವ ನಿನ್ನ, ಜ್ಞಾನಶಕ್ತಿಯಿಂದ ಸತ್ಪುರುಷರನ್ನು ಅನುಗ್ರಹಿಸುವದಕ್ಕಾಗಿ ಮೊಟ್ಟಮೊದಲು ನೀನು ಧರಿಸಿರುವದಾದ, ನೂರಾರು ಅವತಾರಗಳಿಗೆ ಬೀಜವಾಗಿರುವ ಈ ರೂಪವಿದೆಯಲ್ಲ, ಎಲೈ ಪರಮೇಶ್ವರನೆ, ಯಾವದರ ನಾಭಿಕಮಲಪ್ರದೇಶದಿಂದ ನಾನು ಹುಟ್ಟಿರುವೆನೋ ಆ ಈ ರೂಪವಿದೆಯಲ್ಲ, ಇದಕ್ಕಿಂತಲೂ ನಿನ್ನ ಆನಂದಮಾತ್ರವಾದ, ನಿರ್ವಿಕಲ್ಪವಾದ, ಅನಾವೃತಪ್ರಕಾಶಸ್ವರೂಪವಾದ ಸ್ವರೂಪವು ಬೇರೆಯೆಂದು ನಾನು ಎಣಿಸಿರುವದಿಲ್ಲ. ವಿಶ್ವವನ್ನೆಲ್ಲ ಸೃಷ್ಟಿಸುವನಾದ, ಭೂತಗಳಿಗೂ ಇಂದ್ರಿಯಗಳಿಗೂ ಕಾರಣವಾಗಿರುವ, ಈ ರೂಪವನ್ನೇ, ಎಲೈ ಪರಮಾತ್ಮನೆ, ನಾನು ಶರಣುಹೊಂದಿರುವೆನು.

**ತದ್ವಾ ಇದಂ ಭುವನಮಙ್ಗಲ ಮಙ್ಗಲಾಯ**
**ಧ್ಯಾನೇ ಸ್ಮ ನೋ ದರ್ಶಿತಂ ತ ಉಪಾಸಕಾನಾಮ್ ।**
**ತಸ್ಮೈ ನಮೋ ಭಗವತೇऽನುವಿಧೇಮ ತುಭ್ಯಂ**
**ಯೋऽನಾದೃತೋ ನರಕಭಾಗ್ಭಿರಸತ್ಪ್ರಸಙ್ಗೈಃ ॥ 4 ॥**

4. ಎಲೈ ಲೋಕಕಲ್ಯಾಣಕಾರಕನೆ, ಆ ಈ ರೂಪವನ್ನು ನಿನ್ನ ಉಪಾಸಕರಾದ ನಮ್ಮ ಕಲ್ಯಾಣಕ್ಕಾಗಿಯೇ ಧ್ಯಾನದಲ್ಲಿ ತೋರಿಸಿಕೊಟ್ಟಿರುತ್ತೀಯೆ. ನರಕಭಾಜನರಾದ ಕುತರ್ಕಕಥಾಪ್ರಸಕ್ತಿಯಲ್ಲಿರುವವರು ಯಾವ ನಿನ್ನನ್ನು ತಿರಸ್ಕಾರದಿಂದ ಕಾಣುತ್ತಿರುವರೋ ಆ ಭಗವಂತನಾದ ನಿನಗೆ ನಮಸ್ಕಾರವನ್ನು ಮಾಡುತ್ತಿರುವೆವು.

**ಯೇ ತು ತ್ವದೀಯಚರಣಾಮ್ಬುಜಕೋಶಗನ್ಧಂ**
**ಜಿಘ್ರನ್ತಿ ಕರ್ಣವಿವರೈಃ ಶ್ರುತಿವಾತನೀತಮ್ ।**
**ಭಕ್ತ್ಯಾ ಗೃಹೀತಚರಣಃ ಪರಯಾ ಚ ತೇಷಾಂ**
**ನಾಪೈಷಿ ನಾಥ ಹೃದಯಾಮ್ಬುರುಹಾತ್ ಸ್ವಪುಂಸಾಮ್ ॥ 5 ॥**

5. ಆದರೆ ಯಾರು ಶ್ರುತಿ ಎಂಬ ಗಾಳಿಯು ತಂದುಕೊಟ್ಟ ನಿನ್ನ ಚರಣಕಮಲಕೋಶದ ವಾಸನೆಯನ್ನು ಕರ್ಣರಂಧ್ರಗಳಿಂದ ಮೂಸುತ್ತಿರುವರೋ,

ಅವರು ಭಕ್ತಿಯಿಂದ ನಿನ್ನ ಚರಣವನ್ನು ಗಟ್ಟಿಯಾಗಿ ಕಟ್ಟಿಹಾಕಿಬಿಟ್ಟಿರುವದರಿಂದ, ಎಲೈ ಸ್ವಾಮಿಯೆ, ಆ ನಿನ್ನ ಜನರ ಹೃದಯಕಮಲವನ್ನು ಬಿಟ್ಟು ನೀನು ಹೋಗುವದೇ ಇಲ್ಲ.

**ತಾವದ್ಭಯಂ ದ್ರವಿಣಗೇಹಸುಹೃನ್ನಿಮಿತ್ತಂ**
**ಶೋಕಃ ಸ್ಪೃಹಾ ಪರಿಭವೋ ವಿಪುಲಶ್ಚ ಲೋಭಃ ।**
**ತಾವನ್ಮಮೇತ್ಯಸದವಗ್ರಹ ಆರ್ತಿಮೂಲಂ**
**ಯಾವನ್ನ ತೇಽಙ್ಘ್ರಿಮಭಯಂ ಪ್ರವೃಣೀತ ಲೋಕಃ ॥ 6 ॥**

6. ಎಲೈ ದೇವನೆ, ಎಲ್ಲಿಯವರೆಗೆ ನಿನ್ನ ಅಭಯದವಾದ ಚರಣವನ್ನು ಜನರು ಆರಿಸಿಕೊಳ್ಳುವದಿಲ್ಲವೋ ಅಲ್ಲಿಯವರೆಗೆ ಅವರಿಗೆ ದ್ರವ್ಯ, ಮನೆ, ಗೆಳೆಯರು ಮುಂತಾದವರ ನಿಮಿತ್ತದಿಂದಾಗುವ ಭಯವಿರುವದು; ಅಲ್ಲಿಯವರೆಗೇ ಸಂಕಟಕ್ಕೆ ಕಾರಣವಾಗಿರುವ 'ನನ್ನದು' ಎಂಬ ತಪ್ಪುತಿಳಿವಳಿಕೆಯೂ ಇರುವದು.

**ದೈವೇನ ತೇ ಹತಧಿಯೋ ಭವತಃ ಪ್ರಸಙ್ಗಾತ್**
**ಸರ್ವಾಶುಭೋಪಶಮನಾದ್ವಿಮುಖೇನ್ದ್ರಿಯಾ ಯೇ ।**
**ಕುರ್ವನ್ತಿ ಕಾಮಸುಖಲೇಶಲವಾಯ ದೀನಾ**
**ಲೋಭಾಭಿಭೂತಮನಸೋಽಕುಶಲಾನಿ ಶಶ್ವತ್ ॥ 7 ॥**

7. ಸರ್ವವಿಧವಾದ ಅಕಲ್ಯಾಣವನ್ನೂ ನಾಶಗೊಳಿಸುವ ನಿನ್ನ ಶ್ರವಣಕೀರ್ತನಾದಿ ಪ್ರಸಂಗದಿಂದ ಹಿಂತಿರುಗಿದ ಇಂದ್ರಿಯಗಳುಳ್ಳವನಾಗಿ ಕಾಮಸುಖದ ಒಂದು ಲೇಶಲವಕ್ಕಾಗಿ ಯಾರು ಲೋಭಕ್ಕೆ ಪರವಶನಾದ ಮನಸ್ಸಿನಿಂದ ಯಾವಾಗಲೂ ಕೆಟ್ಟಕರ್ಮಗಳನ್ನೇ ಮಾಡುತ್ತಿರುವರೋ ಅವರ ಬುದ್ಧಿಯು ದುರ್ದೈವದಿಂದ ನಷ್ಟವಾಗಿರುತ್ತದೆ.

**ಕ್ಷುತ್ತೃತ್ರಿಧಾತುಭಿರಿಮಾ ಮುಹುರರ್ದ್ಯಮಾನಾಃ**
**ಶೀತೋಷ್ಣವಾತವರ್ಷೈರಿತರೇತರಾಚ್ಚ ।**
**ಕಾಮಾಗ್ನಿನಾಽಚ್ಯುತರುಷಾ ಚ ಸುದುರ್ಭರೇಣ**
**ಸಂಪಶ್ಯತೋ ಮನ ಉರುಕ್ರಮ ಸೀದತೇ ಮೇ ॥ 8 ॥**

8. ವಿಸ್ತೀರ್ಣಕ್ರಮನಾದ ದೇವನೆ, ಹಸಿವು, ಬಾಯಾರಿಕೆ, ವಾತಪಿತ್ತಶ್ಲೇಷ್ಮ ಗಳೆಂಬ ಧಾತುತ್ರಯ– ಇವುಗಳಿಂದಲೂ ಶೀತೋಷ್ಣಗಳು ಗಾಳಿ, ಮಳೆ –

ಇವುಗಳಿಂದಲೂ ಒಬ್ಬರ ನಿಮಿತ್ತದಿಂದ ಒಬ್ಬರಿಗೆ ಆಗುವ ನಿಮಿತ್ತದಿಂದಲೂ ಎಂದಿಗೂ ತುಂಬಲಾಗದ ಕಾಮಾಗ್ನಿಯಿಂದಲೂ ಬಿಡದಿರುವ ಕೋಪದಿಂದಲೂ ಮತ್ತೆ ಮತ್ತೆ ಪೀಡಿತರಾಗಿರುವ ಈ ಪ್ರಜೆಗಳನ್ನು ಕಂಡು ನನ್ನ ಮನಸ್ಸು ವ್ಯಥೆಗೊಳ್ಳುತ್ತಿದೆ.

**ಯಾವತ್ಪೃಥಕ್ತ್ವಮಿದಮಾತ್ಮನ ಇನ್ದ್ರಿಯಾರ್ಥ-**
**ಮಾಯಾಬಲಂ ಭಗವತೋ ಜನ ಈಶ ಪಶ್ಯೇತ್ ।**
**ತಾವನ್ನ ಸಂಸೃತಿರಸೌ ಪ್ರತಿಸಂಕ್ರಮೇತ**
**ವ್ಯರ್ಥಾಪಿ ದುಃಖನಿವಹಂ ವಹತೀ ಕ್ರಿಯಾರ್ಥಾ ॥ 9 ॥**

9. ಎಲೈ ಈಶ್ವರನೆ, ಎಲ್ಲಿಯವರೆಗೆ ಜೀವನು ಇಂದ್ರಿಯಾರ್ಥಗಳೆಂಬ ಭಗವಂತನ ಈ ಮಾಯಾಶಕ್ತಿಯನ್ನು ಆತ್ಮನಿಗಿಂತ ಬೇರೆಯಾಗಿ ಕಾಣುತ್ತಿರುವನೋ ಅಲ್ಲಿಯವರೆಗೆ ಕ್ರಿಯಾಫಲವಾದ ಈ ಸಂಸಾರವು ಅಪರಮಾರ್ಥವಾದರೂ ದುಃಖಸಮೂಹವನ್ನು ತಂದೊದಗಿಸುತ್ತಿರುವ ಈ ಸಂಸಾರವು ಹೋಗಲಾರದು.

**ಅಹ್ನ್ಯಾಪೃತಾರ್ತಕರಣಾ ನಿಶಿ ನಿಃಶಯಾನಾ**
**ನಾನಾಮನೋರಥಧಿಯಾ ಕ್ಷಣಭಗ್ನನಿದ್ರಾಃ ।**
**ದೈವಾದತಾರ್ಥರಚನಾ ಋಷಯೋಽಪಿ ದೇವ**
**ಯುಷ್ಮತ್ಪ್ರಸಙ್ಗವಿಮುಖಾ ಇಹ ಸಂಸರನ್ತಿ ॥ 10 ॥**

10. ಹಗಲು ವಿಷಯವ್ಯಾಪೃತವಾಗಿ ಕ್ಲೇಶಪಡುತ್ತಿರುವ ಕರಣವುಳ್ಳವರೂ ರಾತ್ರೆಯಲ್ಲಿ ಬಗೆಬಗೆಯ ಮನೋರಥಗಳ ಅಂತಃಕರಣದಿಂದ ಕೂಡಿ ಕನಸುಕಾಣುತ್ತಾ ಕ್ಷಣಕ್ಷಣಕ್ಕೂ ನಿದ್ರಾಭಂಗವುಳ್ಳವರೂ ಅರ್ಥಾರ್ಥವಾಗಿ ಮಾಡುವ ಉದ್ಯೋಗಗಳೆಲ್ಲ ದೈವಹತವಾಗಿರುವವರೂ ಆದ ಋಷಿಗಳು ಕೂಡ, ನಿನ್ನ ಕಥಾಶ್ರವಣಾದಿಪ್ರಸಂಗವಿಮುಖರಾಗಿ ಸಂಸಾರದಲ್ಲಿ ತೊಳಲುತ್ತಿರುವರು.

**ತ್ವಂ ಭಾವಯೋಗಪರಿಭಾವಿತಹೃತ್ಸರೋಜ**
**ಆಸ್ಸೇ ಶ್ರುತೇಕ್ಷಿತಪಥೋ ನನು ನಾಥ ಪುಂಸಾಮ್ ।**
**ಯದ್ಯದ್ಧಿಯಾ ತ ಉರುಗಾಯ ವಿಭಾವಯನ್ತಿ**
**ತತ್ತದ್ವಪುಃ ಪ್ರಣಯಸೇ ಸದನುಗ್ರಹಾಯ ॥ 11 ॥**

11. ಮಹಾಯಶಃಶಾಲಿಯಾದ ನಾಥನೆ, ಭಕ್ತಿಯೋಗಪರಿಶುದ್ಧರಾದ ಪುರುಷರ ಹೃತ್ಕಮಲದಲ್ಲಿ ನೀನು ಶ್ರವಣದಿಂದ ತಿಳಿದುಬರುವ ಮಾರ್ಗವುಳ್ಳವನಾಗಿ ಕುಳಿತಿರುವೆಯಲ್ಲವೆ? ಯಾವ ಯಾವ ಬುದ್ಧಿಯಿಂದ ನಿನ್ನನ್ನು ವಿಭಾವನೆ ಮಾಡುವರೋ ಆಯಾ ರೂಪವನ್ನೇ ಭಕ್ತರಾದ ಸತ್ಪುರುಷರ ಅನುಗ್ರಹಕ್ಕಾಗಿ ಧರಿಸುತ್ತಿರುವೆಯಲ್ಲ!

**ನಾತಿ ಪ್ರಸೀದತಿ ತಥೋಪಚಿತೋಪಚಾರೈ**
**ರಾರಾಧಿತಃ ಸುರಗಣೈರ್ಹೃದಿ ಬದ್ಧಕಾಮೈಃ ।**
**ಯತ್ಸರ್ವಭೂತದಯಯಾಽಸದಲಭ್ಯಯೈಕೋ**
**ನಾನಾಜನೇಷ್ವವಹಿತಃ ಸುಹೃದನ್ತರಾತ್ಮಾ ॥ 12 ॥**

12. ಬೇರೆಬೇರೆ ಜನರಲ್ಲಿ ಇದ್ದುಕೊಂಡಿರುವ ಒಬ್ಬನೇ ಅಂತರಾತ್ಮನೂ ಅನಿಮಿತ್ತಬಂಧುವೂ ಆದ ನೀನು ಅಸತ್ಪುರುಷರಿಗೆ ಅಲಭ್ಯವಾದ ಸರ್ವಭೂತದಯೆಯಿಂದ ಹೇಗೆ ಪ್ರಸನ್ನನಾಗುವೆಯೋ ಹಾಗೆ ಕಾಮಬದ್ಧರಾಗಿರುವ ದೇವತಾಗಣಗಳೂ ಮಾಡಿದ ಹೆಚ್ಚಿನ ಉಪಚಾರಗಳಿಂದಲೂ ಪ್ರಸನ್ನನಾಗುವದಿಲ್ಲ.

**ಪುಂಸಾಮತೋ ವಿವಿಧಕರ್ಮಭಿರಧ್ವರಾದ್ಯೈ**
**ರ್ದಾನೇನ ಚೋಗ್ರತಪಸಾ ವ್ರತಚರ್ಯಯಾ ಚ ।**
**ಆರಾಧನಂ ಭಗವತಸ್ತವ ಸತ್ಕ್ರಿಯಾರ್ಥೋ**
**ಧರ್ಮೋಽರ್ಪಿತಃ ಕರ್ಹಿಚಿದ್ಧ್ರಿಯತೇ ನ ಯತ್ರ ॥ 13 ॥**

13. ಆದ್ದರಿಂದ ಯಜ್ಞವೇ ಮುಂತಾದ ಕರ್ಮಗಳಿಂದಲೂ ದಾನದಿಂದಲೂ ಉಗ್ರವಾದ ತಪಸ್ಸಿನಿಂದಲೂ ವ್ರತಾಚರಣೆಯಿಂದಲೂ ಭಗವಂತನಾದ ನಿನ್ನನ್ನು ಆರಾಧನೆಮಾಡುವದೇ ಸತ್ಕ್ರಿಯಾಫಲವು. ಏಕೆಂದರೆ ನಿನ್ನಲ್ಲಿ ಅರ್ಪಿತವಾದ ಯಾವ ಕರ್ಮವೂ ನಾಶವಾಗುವದಿಲ್ಲ.

**ಶಶ್ವತ್ಸ್ವರೂಪಮಹಸೈವ ನಿಪೀತಭೇದ –**
**ಮೋಹಾಯ ಬೋಧಧಿಷಣಾಯ ನಮಃ ಪರಸ್ಮೈ ।**
**ವಿಶ್ವೋದ್ಭವಸ್ಥಿತಿಲಯೇಷು ನಿಮಿತ್ತಲೀಲಾ –**
**ರಾಸಾಯ ತೇ ನಮ ಇದಂ ಚಕೃಮೇಶ್ವರಾಯ ॥ 14 ॥**

14. ಯಾವಾಗಲೂ ತನ್ನ ಸ್ವರೂಪವಾದ ತೇಜಸ್ಸಿನಿಂದಲೇ ಭೇದಭ್ರಾಂತಿಯನ್ನು ತೊಲಗಿಸುವವನೂ ಜ್ಞಾನಕ್ಕೆ ಆಧಾರನೂ ಆಗಿರುವ ಪರಮಾತ್ಮನಿಗೆ ನಮಸ್ಕಾರ! ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ನಿಮಿತ್ತವಾಗಿರುವ ಲೀಲಾಕ್ರೀಡೆಯುಳ್ಳ ಈಶ್ವರನಾದ ನಿನಗೆ ಈ ನಮಸ್ಕಾರವನ್ನು ಮಾಡಿರುತ್ತೇವೆ.

**ಯಸ್ಯಾವತಾರಗುಣಕರ್ಮವಿಡಮ್ಬನಾನಿ**
**ನಾಮಾನಿ ಯೇಽಸುವಿಗಮೇ ವಿವಶಾ ಗೃಣನ್ತಿ ।**
**ತೇ ನೈಕಜನ್ಮಶಮಲಂ ಸಹಸೈವ ಹಿತ್ವಾ**
**ಸಂಯಾನ್ತ್ಯಪಾವೃತಮೃತಂ ತಮಜಂ ಪ್ರಪದ್ಯೇ ॥ 15 ॥**

15. ಯಾವಾತನ ಅವತಾರಗಳು, ಗುಣಗಳು, ಕರ್ಮಗಳು – ಇವುಗಳನ್ನು ಅನುಕರಿಸಿ ತಿಳಿಸುವ ನಾಮಗಳನ್ನು ಯಾರು ಪ್ರಾಣೋತ್ಕ್ರಮಣಕಾಲದಲ್ಲಿ ಪರವಶರಾಗಿ ಉಚ್ಚರಿಸುವರೋ ಅವರು ಅನೇಕ ಜನ್ಮಗಳ ಪಾಪವನ್ನು ಇದ್ದಕ್ಕಿದ್ದ ಹಾಗೆಯೇ ನಾಶಮಾಡಿಕೊಂಡು, ಯಾವ ಅವಿದ್ಯಾವರಣವೂ ಇಲ್ಲದ ಸತ್ಯರೂಪವಾದ ಬ್ರಹ್ಮವನ್ನು ಹೊಂದುವರಲ್ಲವೆ? ಆ ಅಜನಾದ ನಿನ್ನನ್ನು ಶರಣುಹೊಂದಿರುವೆನು.

**ಯೋ ವಾ ಅಹಂ ಚ ಗಿರಿಶಶ್ಚ ವಿಭುಃ ಸ್ವಯಂ ಚ**
**ಸ್ಥಿತ್ಯುದ್ಭವಪ್ರಲಯಹೇತವ ಆತ್ಮಮೂಲಮ್ ।**
**ಭಿತ್ತ್ವಾ ತ್ರಿಪಾದ್ವಿವೃಧ ಏಕ ಉರುಪ್ರರೋಹ–**
**ಸ್ತಸ್ಮೈ ನಮೋ ಭಗವತೇ ಭುವನದ್ರುಮಾಯ ॥ 16 ॥**

16. ಯಾವಾತನು ತಾನೊಬ್ಬನೇ ಆತ್ಮಸ್ವರೂಪವಾದ ಬೇರನ್ನು ಒಡೆದು ಮೂರು ದೊಡ್ಡಬುಡಗಳುಳ್ಳವನಾಗಿ, ಬ್ರಹ್ಮನಾದ ನಾನು, ಈಶ್ವರ ಮತ್ತು ವಿಭುವಾದ ತಾನು – ಎಂದು ಸೃಷ್ಟಿ, ಪ್ರಲಯ, ಸ್ಥಿತಿ – ಇವುಗಳಿಗೆ ಕಾರಣವಾಗಿ ಬೆಳದುಕೊಂಡಿರುವನೋ ಆ ಭುವನವೃಕ್ಷರೂಪನಿಗೆ ನಮಸ್ಕಾರ!

**ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ**
**ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।**
**ಯಸ್ತಾವದಸ್ಯ ಬಲವಾನಿಹಜೀವಿತಾಶಾಂ**
**ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ 17 ॥**

17. ಮನುಷ್ಯನು ಪಾಪನಿರತನಾಗಿ, ನೀನೇ ಹೇಳಿಕೊಟ್ಟಿರುವ ನಿನ್ನ ಅರ್ಚನೆಯ ರೂಪವಾದ ಪುಣ್ಯಕರ್ಮದಲ್ಲಿ ಅಸಡ್ಡೆಯಿಂದಿರುತ್ತಾನೆ. ಅವನಿಗೆ ಇರುವ ಇಲ್ಲಿಯೇ ಬದುಕಿರಬೇಕೆಂಬ ಆಶೆಯನ್ನು ತಟ್ಟನೆ ಕತ್ತರಿಸಿಹಾಕುವನಲ್ಲ, ಆ ಕಾಲರೂಪನಾದ ನಿನಗೆ ನಮಸ್ಕಾರ!

**ಯಸ್ಮಾದ್ ಬಿಭೇಮ್ಯಹಮಪಿ ದ್ವಿಪರಾರ್ಧಧಿಷ್ಣ್ಯ**
**ಮಧ್ಯಾಸಿತಃ ಸಕಲಲೋಕನಮಸ್ಕೃತಂ ಯತ್ ।**
**ತೇಪೇ ತಪೋ ಬಹುಸವೋಽವರುರುತ್ಸಮಾನ–**
**ಸ್ತಸ್ಮೈ ನಮೋ ಭಗವತೇಽಧಿಮಖಾಯ ತುಭ್ಯಮ್ ॥ 18 ॥**

18. ಸಕಲಲೋಕಕ್ಕೂ ನಮಸ್ಕರಣೀಯವಾಗಿರುವ ಸತ್ಯಲೋಕವನ್ನು ಎರಡು ಪರಾರ್ಧಗಳ ಕಾಲ ಆಳುತ್ತಿರುವ ನಾನುಕೂಡ ಆ ಕಾಲರೂಪನಾದ ನಿನಗೆ ಅಂಜುತ್ತಿರುವೆನಲ್ಲ! ಎಷ್ಟೋ ಸಂವತ್ಸರಗಳವರೆಗೆ ನಿನ್ನ ಪ್ರಾಪ್ತಿಗಾಗಿ ತಪಸ್ಸನ್ನು ಮಾಡಿದೆನಲ್ಲ; ಭಗವಂತನೆ, ಆ ಅಧಿಯಜ್ಞನಾದ ನಿನಗೆ ನಮಸ್ಕಾರ!

**ತಿರ್ಯಙ್ಮನುಷ್ಯವಿಬುಧಾದಿಷು ಜೀವಯೋನಿ–**
**ಷ್ವಾತ್ಮೇಚ್ಛಯಾಽಽತ್ಮಕೃತಸೇತುಪರೀಪ್ಸಯಾ ಯಃ ।**
**ರೇಮೇ ನಿರಸ್ತರತಿರಪ್ಯವಿರುದ್ಧದೇಹ–**
**ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ 19 ॥**

19. ಯಾವ ಕಾಮವೂ ಇಲ್ಲದವನಾದರೂ ತಾನೇ ಏರ್ಪಡಿಸಿರುವ ಧರ್ಮಸೇತುವನ್ನು ಕಾಪಾಡುವದಕ್ಕಾಗಿ ತಿರ್ಯಗ್ಜಂತುಗಳು, ಮನುಷ್ಯರು, ದೇವತೆಗಳು – ಮುಂತಾದ ಜೀವಯೋನಿಗಳಲ್ಲಿ ದೇಹಧಾರಣೆಯನ್ನು ಮಾಡಿ ಯಾವಾತನು ತನ್ನ ಲೀಲೆಗಳನ್ನು ತೋರಿಸಿರುತ್ತಾನೋ ಆ ಭಗವಂತನಿಗೆ ನಮಸ್ಕಾರ!

*****

## ಕಪಿಲ ಭಗವಂತನು ಉಪದೇಶಿಸಿದ ಭಕ್ತಿಯೋಗ

(ಮೂರನೆಯ ಸ್ಕಂಧ, ಇಪ್ಪತ್ತೈದನೆಯಅಧ್ಯಾಯ)

**ಶ್ರೀಭಗವಾನುವಾಚ –**
**ಯೋಗ ಆಧ್ಯಾತ್ಮಿಕಃ ಪುಂಸಾಮತೋ ನಿಃಶ್ರೇಯಸಾಯ ಮೇ ।**
**ಅತ್ಯನ್ತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥ 13 ॥**

13. ಶ್ರೀಕಪಿಲಭಗವಂತನಿಂತೆಂದನು: ಆಧ್ಯಾತ್ಮಿಕಯೋಗವೇ ಪುರುಷರಿಗೆ ಮೋಕ್ಷಕ್ಕೆ ಕಾರಣವೆಂದು ನನ್ನ ಮತವು. ಅದರಿಂದ ದುಃಖವೂ ಸುಖವೂ ತೀರ ತೊಲಗಿ ಹೋಗುವವು.

**ತಮಿಮಂ ತೇ ಪ್ರವಕ್ಷ್ಯಾಮಿ ಯಮವೋಚಂ ಪುರಾಽನಘೇ ।**
**ಋಷೀಣಾಂ ಶ್ರೋತುಕಾಮಾನಾಂ ಯೋಗಂ ಸರ್ವಾಙ್ಗನೈಪುಣಮ್ ॥ 14 ॥**

14. ನಿರ್ದುಷ್ಟಳಾದ ತಾಯೆ, ಈ ಯೋಗವನ್ನು ಕೇಳಿ ತಿಳಿಯುವ ಕುತೂಹಲವುಳ್ಳ ಋಷಿಗಳಿಗಾಗಿ ನಾನು ಹಿಂದೆ ಸಕಲ ಅಂಗಗಳ ತಿಳಿವಳಿಕೆಯೊಡನೆ ತಿಳಿಸಿಕೊಟ್ಟಿದ್ದೆನು. ಆ ಇದನ್ನೇ ನಿನಗಾಗಿ ಹೇಳುವೆನು.

**ಚೇತಃ ಖಲ್ವಸ್ಯ ಬನ್ಧಾಯ ಮುಕ್ತಯೇ ಚಾಽಽತ್ಮನೋ ಮತಮ್ ।**
**ಗುಣೇಷು ಸಕ್ತಂ ಬನ್ಧಾಯ ರತಂ ವಾ ಪುಂಸಿ ಮುಕ್ತಯೇ ॥ 15 ॥**

15. ಈ ಜೀವಾತ್ಮನಿಗೆ ಚಿತ್ತವೇ ಬಂಧಕ್ಕೂ ಮುಕ್ತಿಗೂ ಕಾರಣವೆನಿಸುತ್ತದೆ. ತ್ರಿಗುಣಗಳಲ್ಲಿ ಆಸಕ್ತವಾಗಿದ್ದರೆ ಬಂಧಕ್ಕೆ ಕಾರಣವಾಗಿರುವದು, ಪರಮಪುರುಷನಲ್ಲಿ ಅನುರಕ್ತವಾದರೆ ಮುಕ್ತಿಗೆ ಕಾರಣವಾಗುವದು.

**ಅಹಂಮಮಾಭಿಮಾನೋತ್ಥೈಃ ಕಾಮಲೋಭಾದಿಭಿರ್ಮಲೈಃ ।**
**ವೀತಂ ಯದಾ ಮನಃ ಶುದ್ಧಮದುಃಖಮಸುಖಂ ಸಮಮ್ ॥ 16 ॥**

16. ಯಾವಾಗ ಈ ಮನಸ್ಸು ನಾನು, ನನ್ನದು – ಎಂಬ ಅಭಿಮಾನದಿಂದುಂಟಾಗುವ ಕಾಮ, ಲೋಭ – ಮುಂತಾದ ಕಲ್ಮಷಗಳಿಂದ ಮುಕ್ತವಾಗುವದೋ, ಆಗ ಅದು ದುಃಖವಿಲ್ಲದ್ದಾಗಿ ಸುಖವಿಲ್ಲದ್ದೂ ಆಗಿ ಶುದ್ಧವೂ ಸಮತೆಯುಳ್ಳದ್ದೂ ಆಗುವದು.

**ತದಾ ಪುರುಷ ಆತ್ಮಾನಂ ಕೇವಲಂ ಪ್ರಕೃತೇಃ ಪರಮ್ ।**
**ನಿರನ್ತರಂ ಸ್ವಯಂಜ್ಯೋತಿರಣಿಮಾನಮಖಣ್ಡಿತಮ್ ॥ 17 ॥**
**ಜ್ಞಾನವೈರಾಗ್ಯಯುಕ್ತೇನ ಭಕ್ತಿಯುಕ್ತೇನ ಚಾಽಽತ್ಮನಾ ।**
**ಪರಿಪಶ್ಯತ್ಯುದಾಸೀನಂ ಪ್ರಕೃತಿಂ ಚ ಹತೌಜಸಮ್ ॥ 18 ॥**

17–18. ಆಗ ಪುರುಷನು ಜ್ಞಾನವೈರಾಗ್ಯಯುಕ್ತವಾದ ಭಕ್ತಿಯುತವಾದ ಅಂತಃಕರಣದಿಂದೊಡಗೂಡಿ ತನ್ನ ಸ್ವರೂಪವಾದ ಆತ್ಮನು ಕೇವಲನೆಂದೂ

ಪ್ರಕೃತಿಗಿಂತಲೂ ಹೆಚ್ಚಿನವನೆಂದೂ ನಿರಂತರನೆಂದೂ ಸ್ವಯಂಪ್ರಕಾಶನೆಂದೂ ಸೂಕ್ಷ್ಮರೂಪನೆಂದೂ ಅಖಂಡರೂಪನೆಂದೂ ಉದಾಸೀನರೂಪನೆಂದೂ ಪ್ರಕೃತಿಯು ಶಕ್ತಿಹೀನವೆಂದೂ ಕಂಡುಕೊಳ್ಳುತ್ತಾನೆ.

**ನ ಯುಜ್ಯಮಾನಯಾ ಭಕ್ತ್ಯಾ ಭಗವತ್ಯಖಿಲಾತ್ಮನಿ ।**
**ಸದೃಶೋಽಸ್ತಿ ಶಿವಃ ಪನ್ಥಾ ಯೋಗಿನಾಂ ಬ್ರಹ್ಮಸಿದ್ಧಯೇ ॥ 19 ॥**

19. ಎಲ್ಲರಿಗೂ ಆತ್ಮನಾಗಿರುವ ಭಗವಂತನಲ್ಲಿ ಮಾಡುವ ಭಕ್ತಿಗೆ ಸಮಾನವಾದ ಮಂಗಲಮಯಮಾರ್ಗವು ಬ್ರಹ್ಮಪ್ರಾಪ್ತಿಗೆ ಮತ್ತೊಂದು ಇರುವದಿಲ್ಲ.

**ಪ್ರಸಙ್ಗಮಜರಂ ಪಾಶಮಾತ್ಮನಃ ಕವಯೋ ವಿದುಃ ।**
**ಸ ಏವ ಸಾಧುಷು ಕೃತೋ ಮೋಕ್ಷದ್ವಾರಮಪಾವೃತಮ್ ॥ 20 ॥**

20. ಸಂಗವೆಂಬುದೇ ಆತ್ಮನಿಗೆ ಮುಪ್ಪಿಲ್ಲದ ಬಂಧವೆಂದು ಬಲ್ಲವರು ತಿಳಿಯುತ್ತಾರೆ. ಆದರೆ ಆ ಸಂಗವನ್ನೇ ಸಾಧುಗಳಲ್ಲಿ ಮಾಡಿದರೆ ಅದು ಮೋಕ್ಷಕ್ಕೆ ತೆರೆದ ಬಾಗಿಲಾಗುತ್ತದೆ.

**ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಮ್ ।**
**ಅಜಾತಶತ್ರವಃ ಶಾನ್ತಾಃ ಸಾಧವಃ ಸಾಧುಭೂಷಣಾಃ ॥ 21 ॥**

21. ಸಹನಶೀಲರೂ ದಯಾಲುಗಳೂ ಸರ್ವದೇಹಿಗಳಿಗೂ ಅಕಾರಣ ಬಂಧುಗಳೂ, ಶತ್ರುಗಳೇ ಇಲ್ಲದವರೂ ಶಾಂತರೂ ಸಾಧುಶೀಲವುಳ್ಳವರಾಗಿರುವರೆಂಬ ಭೂಷಣವುಳ್ಳವರೇ ಸಾಧುಗಳು.

**ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವನ್ತಿ ಯೇ ದೃಢಾಮ್ ।**
**ಮತ್ಕೃತೇ ತ್ಯಕ್ತಕರ್ಮಾಣಸ್ತ್ಯಕ್ತಸ್ವಜನಬಾನ್ಧವಾಃ ॥ 22 ॥**

**ಮದಾಶ್ರಯಾಃ ಕಥಾ ಮೃಷ್ಟಾಃ ಶೃಣ್ವನ್ತಿ ಕಥಯನ್ತಿ ಚ ।**
**ತಪನ್ತಿ ವಿವಿಧಾಂಸ್ತಾಪಾನ್ನೈತಾನ್ ಮದ್ಗತಚೇತಸಃ ॥ 23 ॥**

**ತ ಏತೇ ಸಾಧವಃ ಸಾಧ್ವಿ ಸರ್ವಸಙ್ಗವಿವರ್ಜಿತಾಃ ।**
**ಸಙ್ಗಸ್ತೇಷ್ವಥ ತೇ ಪ್ರಾರ್ಥ್ಯಃ ಸಙ್ಗದೋಷಹರಾ ಹಿ ತೇ ॥ 24 ॥**

22–23–24. ಯಾರು ನನ್ನಲ್ಲಿ ದೃಢವಾದ ಭಕ್ತಿಯನ್ನು ಮಾಡುತ್ತಿರುವರೋ, ನನಗಾಗಿ ಕರ್ಮಗಳನ್ನೂ ಸ್ವಜನರನ್ನೂ ಬಾಂಧವರನ್ನೂ ಬಿಟ್ಟಿರುವರೋ ನನ್ನ

ವಿಷಯದ ಪವಿತ್ರವಾದ ಕಥೆಗಳನ್ನು ಕೇಳುತ್ತಲೂ ಹೇಳುತ್ತಲೂ ಇರುವರೋ ನನ್ನಲ್ಲಿಯೇ ಚಿತ್ತವುಳ್ಳವರಾಗಿ ಈ ತಾಪಗಳೆಲ್ಲವನ್ನೂ ಸಹಿಸಿಕೊಂಡಿರುವರೋ, ಎಲೌ ಸಾಧ್ವಿಯೆ, ಈ ಸರ್ವಸಂಗರಹಿತರಾದವರೇ ಸಾಧುಗಳು. ಅವರ ಸಂಗವನ್ನು ಇಚ್ಛಿಸು, ಏಕೆಂದರೆ ಸಂಗದೋಷಗಳೆಲ್ಲವನ್ನೂ ಪರಿಹರಿಸುವವರು, ಅವರು.

**ಸತಾಂ ಪ್ರಸಜ್ಗಾನ್ಮಮ ವೀರ್ಯಸಂವಿದೋ**
**ಭವನ್ತಿ ಹೃತ್ಕರ್ಣರಸಾಯನಾಃ ಕಥಾಃ ।**
**ತಜ್ಜೋಷಣಾದಾಸ್ವಪವರ್ಗವರ್ತ್ಮನಿ**
**ಶ್ರದ್ಧಾರತಿರ್ಭಕ್ತಿರನುಕ್ರಮಿಷ್ಯತಿ ॥ 25 ॥**

25. ಸತ್ಪುರುಷರ ಉತ್ಕೃಷ್ಟವಾದ ಸಂಗದಿಂದ ನನ್ನ ವೀರ್ಯದ ಯಥಾರ್ಥಜ್ಞಾನವನ್ನುಂಟುಮಾಡಿಕೊಡುವ ಹೃದಯಕ್ಕೂ ಕಿವಿಗಳಿಗೂ ಸರಿಯಾಗಿರುವ ಕಥೆಗಳು ದೊರಕುವವು. ಅವರ ಸೇವೆಯನ್ನು ಮಾಡುವದರಿಂದ ಬೇಗನೆ ಮೋಕ್ಷಮಾರ್ಗದಲ್ಲಿ ಶ್ರದ್ಧೆಯೂ ರತಿಯೂ ಭಕ್ತಿಯೂ ಕ್ರಮಕ್ರಮವಾಗಿ ಉಂಟಾಗುವವು.

**ಭಕ್ತ್ಯಾ ಪುಮಾಞ್ಜಾತವಿರಾಗ ಐನ್ದ್ರಿಯಾ**
**ದ್ದೃಷ್ಟಶ್ರುತಾನ್ಮದ್ರಚನಾನುಚಿನ್ತಯಾ ।**
**ಚಿತ್ತಸ್ಯ ಯತ್ತೋ ಗ್ರಹಣೇ ಯೋಗಯುಕ್ತೋ**
**ಯತಿಷ್ಯತೇ ಋಜುಭಿರ್ಯೋಗಮಾರ್ಗೈಃ ॥ 26 ॥**

26. ನನ್ನ ಸೃಷ್ಟ್ಯಾದಿಲೀಲೆಯನ್ನು ಅನುಚಿಂತನೆಮಾಡುವದರಿಂದ ಇಹಪರಲೋಕಗಳ ಇಂದ್ರಿಯಸುಖದಲ್ಲಿ ವಿರಕ್ತಿಯುಂಟಾದವನಾಗಿ, ಚಿತ್ತವನ್ನು ಹಿಡಿತದಲ್ಲಿಟ್ಟುಕೊಳ್ಳುವದಕ್ಕೆ ಉದ್ಯುಕ್ತನಾಗಿ ಯೋಗಯುಕ್ತನಾಗಿ, ಸರಳವಾದ ಭಕ್ತಿಪ್ರಧಾನವಾದ ಯೋಗಮಾರ್ಗಗಳಿಂದ ಪ್ರಯತ್ನವನ್ನು ಮಾಡುವನು.

**ಅಸೇವಯಾಽಯಂ ಪ್ರಕೃತೇರ್ಗುಣಾನಾಂ**
**ಜ್ಞಾನೇನ ವೈರಾಗ್ಯವಿಜೃಮ್ಭಿತೇನ ।**
**ಯೋಗೇನ ಮಯ್ಯರ್ಪಿತಯಾ ಚ ಭಕ್ತ್ಯಾ**
**ಮಾಂ ಪ್ರತ್ಯಗಾತ್ಮಾನಮಿಹಾವರುನ್ಧೇ ॥ 27 ॥**

27. ಈ ಪುರುಷನು ಪ್ರಕೃತಿಯ ಗುಣಗಳನ್ನು ಸೇವನೆಮಾಡದೆ

ಇರುವದರಿಂದಲೂ, ವೈರಾಗ್ಯದಿಂದ ಹೊರಹೊಮ್ಮಿದ ಜ್ಞಾನದಿಂದಲೂ, ಯೋಗದಿಂದಲೂ ನನ್ನಲ್ಲಿಯೇ ಇಟ್ಟ ಭಕ್ತಿಯಿಂದಲೂ ಅಂತರಾತ್ಮನಾದ ನನ್ನನ್ನು ಇಲ್ಲಿಯೇ ಕಂಡುಕೊಳ್ಳುವವನಾಗುತ್ತಾನೆ.

**ಶ್ರೀಭಗವಾನುವಾಚ –**

**ದೇವಾನಾಂ ಗುಣಲಿಙ್ಗಾನಾಮಾನುಶ್ರವಿಕಕರ್ಮಣಾಮ್ ।**
**ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ॥ 32 ॥**

**ಅನಿಮಿತ್ತಾ ಭಾಗವತೀ ಭಕ್ತಿಃ ಸಿದ್ಧೇರ್ಗರೀಯಸೀ ।**
**ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥಾ ॥ 33 ॥**

32–33. ಶ್ರೀಕಪಿಲಭಗವಂತನು ತಾಯಿಯಾದ ದೇವಹೂತಿಯನ್ನು ಕುರಿತು ಇಂತೆಂದನು: ವೇದೋಕ್ತಕರ್ಮವನ್ನು ಮಾಡುತ್ತಿರುವ ಮತ್ತು ವಿಷಯಗಳನ್ನು ತಿಳಿಸುತ್ತಿರುವ ಇಂದ್ರಿಯಗಳು ಸತ್ತ್ವಮೂರ್ತಿಯಾದ ಶ್ರೀಹರಿಯಲ್ಲಿಯೇ, ಸ್ವಭಾವದಿಂದ ಪ್ರವೃತ್ತವಾಗುವದಿದೆಯಲ್ಲ, ಅದೇ ಅಹೈತುಕವಾದ ಭಗವದ್ಭಕ್ತಿಯೆನಿಸುವದು. ಅದು ಪರಮಸಿದ್ಧಿಯಾದ ಮುಕ್ತಿಗಿಂತಲೂ ಹೆಚ್ಚಿನದು. ಆ ಭಕ್ತಿಯು ಉಂಡ ಅನ್ನವನ್ನು ಜಾಠರಾಗ್ನಿಯು ಅರಗಿಸುವಂತೆ ಕರ್ಮಸಂಸ್ಕಾರದ ಕೋಶವಾದ ಲಿಂಗಶರೀರವನ್ನು ಜೀರ್ಣಗೊಳಿಸಿಬಿಡುತ್ತದೆ.

**ನೈಕಾತ್ಮತಾಂ ಮೇ ಸ್ಪೃಹಯನ್ತಿ ಕೇಚಿ–**
**ನ್ಮತ್ಪಾದಸೇವಾಽಭಿರತಾ ಮದೀಹಾಃ ।**
**ಯೇಽನ್ಯೋಽನ್ಯತೋ ಭಾಗವತಾಃ ಪ್ರಸಜ್ಯ**
**ಸಭಾಜಯನ್ತೇ ಮಮ ಪೌರುಷಾಣಿ ॥ 34 ॥**

34. ಕೆಲವರು ಭಗವದ್ಭಕ್ತರುಂಟು. ಅವರಿಗೆ ನನ್ನ ಪಾದಸೇವೆಯಲ್ಲಿಯೇ ಅಭಿರತಿಯಿರುತ್ತದೆ. ಅವರು ಭಗವತ್ಕರ್ಮವನ್ನೇ ಮಾಡುತ್ತಿರುತ್ತಾರೆ. ಒಬ್ಬರೊಡನೊಬ್ಬರು ಸೇರಿಕೊಂಡು ನನ್ನ ಪೌರುಷಗಳನ್ನೇ ಗೌರವಪೂರ್ವಕವಾಗಿ ಕೊಂಡಾಡುತ್ತಿರುವರು. ಅವರು ನನ್ನೊಡನೆ ಏಕೀಭಾವವನ್ನು ಹೊಂದುವ ಸಾಯುಜ್ಯಮುಕ್ತಿಯನ್ನು ಬಯಸುವದಿಲ್ಲ.

**ಪಶ್ಯನ್ತಿ ತೇ ಮೇ ರುಚಿರಾಣ್ಯಮ್ಬ ಸನ್ತಃ**
**ಪ್ರಸನ್ನವಕ್ತ್ರಾರುಣಲೋಚನಾನಿ ।**

**ರೂಪಾಣಿ ದಿವ್ಯಾನಿ ವರಪ್ರದಾನಿ**
**ಸಾಕಂ ವಾಚಂ ಸ್ಪೃಹಣೀಯಾಂ ವದನ್ತಿ ॥ 35 ॥**

35. ಎಲೌ ತಾಯೆ, ಆ ಸತ್ಪುರುಷರು, ಪ್ರಸನ್ನಮುಖದಿಂದಲೂ ಅರುಣನೇತ್ರಗಳಿಂದಲೂ ಕೂಡಿರುವ ದಿವ್ಯವಾದ ವರದಾಯಕರೂಪಗಳನ್ನು ದರ್ಶನಗೈಯುತ್ತಿರುವರು, ಮತ್ತು ಅವುಗಳೊಡನೆ ಎಂಥವರಿಗೂ ಬೇಕೆನ್ನಿಸುವ ಸಂಭಾಷಣೆಯನ್ನು ಮಾಡುತ್ತಿರುವರು.

**ತೈರ್ದರ್ಶನೀಯಾವಯವೈರುದಾರ**
**ವಿಲಾಸಹಾಸೇಕ್ಷಿತವಾಮಸೂಕ್ತೈಃ ।**
**ಹೃತಾತ್ಮನೋ ಹೃತಪ್ರಾಣಾಂಶ್ಚ ಭಕ್ತಿ-**
**ರನಿಚ್ಛತೋ ಮೇ ಗತಿಮಣ್ವೀಂ ಪ್ರಯುಙ್ಕ್ತೇ ॥ 36 ॥**

36. ದರ್ಶನೀಯವಾದ ಅವಯುವಗಳುಳ್ಳ, ಉದಾರವಿಲಾಸದಿಂದಲೂ ಮಂದಹಾಸದಿಂದಲೂ ಕೃಪಾಕಟಾಕ್ಷದಿಂದಲೂ ಸುಂದರಸೂಕ್ತಿಗಳಿಂದಲೂ ಕೂಡಿದ ಆ ಮಧುರರೂಪಗಳಿಂದ ಅವರ ಮನಸ್ಸೂ ಇಂದ್ರಿಯಗಳೂ ಅಪಹೃತವಾಗಿರುವವು. ಅವರು ಬೇಡವೆಂದರೂ ಭಕ್ತಿಯು ನನ್ನ ಪರಮಸೂಕ್ಷ್ಮ ಪದವಿಯನ್ನು ತೋರಿಸಿಕೊಡುವದು.

**ಅಥೋ ವಿಭೂತಿಂ ಮಮ ಮಾಯಾವಿನಸ್ತಾ-**
**ಮೈಶ್ವರ್ಯಮಷ್ಟಾಙ್ಗಮನುಪ್ರವೃತ್ತಮ್ ।**
**ಶ್ರಿಯಂ ಭಾಗವತೀಂ ವಾಽಸ್ಪೃಹಯನ್ತಿ ಭದ್ರಾಂ**
**ಪರಸ್ಯ ಮೇ ತೇಽಶ್ನುವತೇ ತು ಲೋಕೇ ॥ 37 ॥**

37. ಅನಂತರ ಅವರು ಮಹಾಮಾಯಾವಿಯಾದ ನನ್ನ ವಿಭೂತಿಯನ್ನು, ತಾನೇ ಬಂದೊದಗಿದ ಅಷ್ಟೈಶ್ವರ್ಯವನ್ನು, ಭಗವಂತನಾದ ನನ್ನ ಐಶ್ವರ್ಯವನ್ನು ಕೂಡ ಅವರು ಇಚ್ಛಿಸದಿದ್ದರೂ ನನ್ನ ಲೋಕವನ್ನು ಪಡೆದಾಗ ಅವೆಲ್ಲವನ್ನೂ ಪಡೆದುಕೊಳ್ಳುತ್ತಾರೆ.

**ನ ಕರ್ಹಿಚಿನ್ಮತ್ಪರಾಃ ಶಾನ್ತರೂಪೇ**
**ನಙ್ಕ್ಷ್ಯನ್ತಿ ನೋ ಮೇಽನಿಮಿಷೋ ಲೇಢಿ ಹೇತಿಃ ।**

**ಯೇಷಾಮಹಂ ಪ್ರಿಯ ಆತ್ಮಾ ಸುತಶ್ಚ**
**ಸಖಾ ಗುರುಃ ಸುಹೃದೋ ದೈವಮಿಷ್ಟಮ್ ॥ 38 ॥**

38. ಎಲೌ ಶಾಂತರೂಪವಾದ ತಾಯೆ, ನನ್ನಲ್ಲಿಯೇ ತಾತ್ಪರ್ಯವುಳ್ಳವರಿದಾರಲ್ಲ, ಅವರು ಎಂದಿಗೂ ನಾಶವಾಗುವದಿಲ್ಲ. ಅವರಿಗೆ ನಾನೇ ಪ್ರಿಯನು, ಆತ್ಮನು, ಪುತ್ರನು, ಗೆಳೆಯನು, ಗುರುವು, ಸುಹೃದನು, ಇಷ್ಟದೇವತೆಯೂ ಆಗಿರುವೆನಲ್ಲವೆ? ಅವರನ್ನು ನನ್ನ ಆಯುಧವಾದ ಕಾಲಚಕ್ರವು ಎಂದಿಗೂ ನುಂಗದೆ ಇರುತ್ತದೆ.

**ಶ್ರೀಭಗವಾನುವಾಚ –**
**ಇಮಂ ಲೋಕಂ ತಥೈವಾಮುಮಾತ್ಮಾನಮುಭಯಾಯಿನಮ್ ।**
**ಆತ್ಮಾನಮನು ಯೇ ಚೇಹ ಯೇ ರಾಯಃ ಪಶವೋ ಗೃಹಾಃ ॥ 39 ॥**

**ವಿಸೃಜ್ಯ ಸರ್ವಾನನ್ಯಾಂಶ್ಚ ಮಾಮೇವಂ ವಿಶ್ವತೋಮುಖಮ್ ।**
**ಭಜನ್ತ್ಯನನ್ಯಯಾ ಭಕ್ತ್ಯಾ ತಾನ್ ಮೃತ್ಯೋರತಿಪಾರಯೇ ॥ 40 ॥**

39–40. ಶ್ರೀಕಪಿಲಭಗವಂತನಿಂತೆಂದನು: ಯಾರು ಈ ಲೋಕದ ಭೋಗಗಳನ್ನೂ ಪರಲೋಕದ ಭೋಗಗಳನ್ನೂ ಈ ಎರಡು ಲೋಕಗಳಿಗೂ ಹೋಗಿ ಸಂಚರಿಸುತ್ತಿರುವ ತನ್ನನ್ನೂ ತನ್ನ ಅನುಬಂಧಿಗಳಾದ ಹೆಂಡಿರುಮಕ್ಕಳು ಮುಂತಾದವುಗಳನ್ನೂ ಧನಗಳನ್ನೂ ಪಶುಗಳನ್ನೂ ಮನೆಗಳನ್ನೂ ಇನ್ನೂ ಮಿಕ್ಕ ಎಲ್ಲಾ ತನ್ನ ಸ್ವತ್ತುಗಳನ್ನೂ ತ್ಯಜಿಸಿ ಅನನ್ಯ ಭಕ್ತಿಯಿಂದ ವಿಶ್ವತೋಮುಖನಾದ ನನ್ನನ್ನು ಭಜಿಸುತ್ತಿರುವರೋ ಅವರನ್ನು ಸಂಸಾರಮೃತ್ಯುವಿನಿಂದ ದಾಟಿಸುವೆನು.

**ನಾನ್ಯತ್ರ ಮದ್ಭಗವತಃ ಪ್ರಧಾನಪುರುಷೇಶ್ವರಾತ್ ।**
**ಆತ್ಮನಃ ಸರ್ವಭೂತಾನಾಂ ಭಯಂ ತೀವ್ರಂ ನಿವರ್ತತೇ ॥ 41 ॥**

**ಮದ್ಭಯಾದ್ವಾತಿ ವಾತೋ ಯಂ ಸೂರ್ಯಸ್ತಪತಿ ಮದ್ಭಯಾತ್ ।**
**ವರ್ಷತೀನ್ದ್ರೋ ದಹತ್ಯಗ್ನಿರ್ಮೃತ್ಯುಶ್ಚರತಿ ಮದ್ಭಯಾತ್ ॥ 42 ॥**

41–42. ಪ್ರಧಾನಪುರುಷರುಗಳಿಗೆ ಒಡೆಯನೂ ಸರ್ವಭೂತಗಳಿಗೂ ಆತ್ಮನೂ ಆಗಿರುವ ಭಗವಂತನಾದ ತನ್ನಿಂದ ಹೊರತು ಯಾವ ಪ್ರಾಣಿಗಳಿಗೂ ತೀವ್ರವಾದ ಸಂಸಾರಭಯವು ತೊಲಗಬಾರದು. ನನ್ನ ಭಯದಿಂದಲೇ ವಾಯುವು

ಬೀಸುತ್ತಿರುವನು. ನನ್ನ ಭಯದಿಂದಲೇ ಈ ಸೂರ್ಯನು ತಪಿಸುತ್ತಿರುವನು, ಇಂದ್ರನು ಮಳೆಗರೆಯುತ್ತಿರುವನು. ಅಗ್ನಿಯು ಸುಡುತ್ತಿರುವನು. ನನ್ನ ಭಯದಿಂದಲೇ ಮೃತ್ಯುವು ತನ್ನ ಕಾರ್ಯವನ್ನು ಮಾಡುತ್ತಾ ಸಂಚರಿಸುತ್ತಿರುವನು.

**ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಯೋಗಿನಃ ।**
**ಕ್ಷೇಮಾಯ ಪಾದಮೂಲಂ ಮೇ ಪ್ರವಿಶನ್ತ್ಯಕುತೋಭಯಮ್ ॥ 43 ॥**

43. ಯೋಗಿಗಳಾದವರು ಪರಮಕ್ಷೇಮವಾದ ಮುಕ್ತಿಗಾಗಿ ನಿರ್ಭಯವಾದ ನನ್ನ ಪಾದಮೂಲವನ್ನು ಜ್ಞಾನವೈರಾಗ್ಯಗಳಿಂದೊಡಗೂಡಿದ ಭಕ್ತಿಯೋಗದಿಂದ ಸೇರುತ್ತಿರುವರು.

**ಏತಾವಾನೇವ ಲೋಕೇಽಸ್ಮಿನ್ ಪುಂಸಾಂ ನಿಃಶ್ರೇಯಸೋದಯಃ ।**
**ತ್ರೀವ್ರೇಣ ಭಕ್ತಿಯೋಗೇನ ಮನೋ ಮಯ್ಯರ್ಪಿತಂ ಸ್ಥಿರಮ್ ॥ 44 ॥**

44. ತೀವ್ರವಾದ ಭಕ್ತಿಯೋಗದಿಂದ ಮನಸ್ಸನ್ನು ನನ್ನಲ್ಲಿಯೇ ಸ್ಥಿರವಾಗಿ ಸಮರ್ಪಿಸುವನೆಂಬುದಿಷ್ಟೇ ಈ ಲೋಕದಲ್ಲಿ ಜನರಿಗೆ ಮೋಕ್ಷೋದಯಕ್ಕೆ ಕಾರಣವಾಗಿರುವದು.

*****

## ದೇವಹೂತಿಗೆ ತಿಳಿಸಿದ ತತ್ತ್ವಗಳ ಲಕ್ಷಣ

**(ಮೂರನೆಯ ಸ್ಕಂಧ, ಇಪ್ಪತ್ತಾರನೆಯ ಅಧ್ಯಾಯ)**

**ಶ್ರೀಭಗವಾನುವಾಚ –**
**ಅಥ ತೇ ಸಂಪ್ರವಕ್ಷ್ಯಾಮಿ ತತ್ತ್ವಾನಾಂ ಲಕ್ಷಣಂ ಪೃಥಕ್ ।**
**ಯದ್ ವಿದಿತ್ವಾ ವಿಮುಚ್ಯೇತ ಪುರುಷಃ ಪ್ರಾಕೃತೈರ್ಗುಣೈಃ ॥ 1 ॥**

1. ಶ್ರೀಕಪಿಲಭಗವಂತನಿಂತೆಂದನು: ತಾಯೆ, ನಿನಗೆ ತತ್ತ್ವಗಳ ಲಕ್ಷಣವನ್ನು ವಿಂಗಡಿಸಿ ಹೇಳುತ್ತೇನೆ. ಅದನ್ನು ತಿಳಿದುಕೊಂಡವನು ಪ್ರಕೃತಿಯ ಗುಣಗಳಿಂದ ಮುಕ್ತನಾಗುವನು.

**ಜ್ಞಾನಂ ನಿಃಶ್ರೇಯಸಾರ್ಥಾಯ ಪುರುಷಸ್ಯಾಽಽತ್ಮದರ್ಶನಮ್ ।**
**ಯದಾಹುರ್ವರ್ಣಯೇ ತತ್ತೇ ಹೃದಯಗ್ರನ್ಥಿಭೇದನಮ್ ॥ 2 ॥**

2. ಪುರುಷನಿಗೆ ಆತ್ಮದರ್ಶನರೂಪವಾದ ಜ್ಞಾನವು ಮೋಕ್ಷವೆಂಬ ಫಲವನ್ನು ಕೊಡುವದು ಎಂದು ಯಾವದನ್ನು ಹೇಳುವರೋ ಆ ಹೃದಯಗ್ರಂಥಿಯನ್ನು ನಾಶಗೊಳಿಸುವ ಜ್ಞಾನವನ್ನು ನಿನಗೆ ವಿವರಿಸಿ ತಿಳುಹುವೆನು.

**ಅನಾದಿರಾತ್ಮಾ ಪುರುಷೋ ನಿರ್ಗುಣಃ ಪ್ರಕೃತೇಃ ಪರಃ ।**
**ಪ್ರತ್ಯಗ್ಧಾಮಾ ಸ್ವಯಂಜ್ಯೋತಿಃ ವಿಶ್ವಂ ಯೇನ ಸಮನ್ವಿತಮ್ ॥ 3 ॥**

3. ಪುರುಷನೆಂದರೆ ಪ್ರಕೃತಿಗಿಂತಲೂ ಹೆಚ್ಚಿನವನಾದ ಅನಾದಿಯಾದ ಆತ್ಮನು. ಅವನು ನಿರ್ಗುಣನು, ಎಲ್ಲಕ್ಕೂ ಒಳಗೆ ಇರುವವನು, ಯಾವದರಿಂದ ವಿಶ್ವವೆಲ್ಲವೂ ಅನುಗತವಾಗಿದ್ದುಕೊಂಡು ಬೆಳಗುತ್ತಿರುವದೋ ಅಂಥ ಸ್ವಯಂಜ್ಯೋತಿಯು.

**ಸ ಏಷ ಪ್ರಕೃತಿಂ ಸೂಕ್ಷ್ಮಾಂ ದೈವೀಂ ಗುಣಮಯೀಂ ವಿಭುಃ ।**
**ಯದೃಚ್ಛಯೈವೋಪಗತಾಮಭ್ಯಪದ್ಯತ ಲೀಲಯಾ ॥ 4 ॥**

4. ಆ ಈ ವಿಭುವಾದ ಪುರುಷನು ಎಲ್ಲಕ್ಕಿಂತಲೂ ಸೂಕ್ಷ್ಮವಾಗಿ ಅವ್ಯಕ್ತವಾಗಿರುವ ಪರಮೇಶ್ವರನ ಗುಣಮಯವಾದ ಪ್ರಕೃತಿಯು ಯದೃಚ್ಛೆಯಿಂದಲೇ ಸಮೀಪಿಸಲು ಅದನ್ನು ಲೀಲೆಯಿಂದ ಹೊಂದಿಕೊಂಡನು.

**ಗುಣೈರ್ವಿಚಿತ್ರಾಃ ಸೃಜತೀಂ ಸರೂಪಾಃ ಪ್ರಕೃತಿಂ ಪ್ರಜಾಃ ।**
**ವಿಲೋಕ್ಯ ಮುಮುಹೇ ಸದ್ಯಃ ಸ ಇಹ ಜ್ಞಾನಗೂಹಯಾ ॥ 5 ॥**

5. ತನ್ನ ಗುಣಗಳಿಂದ ವಿಚಿತ್ರರಾದ ಸಮಾನರೂಪರಾದ ಪ್ರಜೆಗಳನ್ನು ಸೃಷ್ಟಿಸುತ್ತಿರುವ, ಜ್ಞಾನವನ್ನು ಮುಸುಕಿಕೊಂಡಿರುವ ಪ್ರಕೃತಿಯನ್ನು ಕಂಡು ಇವನು ಕೂಡಲೆ ಇಲ್ಲಿ ಮೋಹಗೊಂಡನು.

**ಏವಂ ಪರಾಭಿಧ್ಯಾನೇನ ಕರ್ತೃತ್ವಂ ಪ್ರಕೃತೇಃ ಪುಮಾನ್ ।**
**ಕರ್ಮಸು ಕ್ರಿಯಮಾಣೇಷು ಗುಣೈರಾತ್ಮನಿ ಮನ್ಯತೇ ॥ 6 ॥**

6. ಹೀಗೆ ತನಗಿಂತ ಅನ್ಯವಾದ ಪ್ರಕೃತಿಯ ಅಭಿಧ್ಯಾನದಿಂದ, ಪ್ರಕೃತಿಯ ಗುಣಗಳು ಕರ್ಮವನ್ನು ಮಾಡುತ್ತಿರಲು, ಆ ಕರ್ಮಗಳಿಗೆ ತಾನೇ ಕರ್ತೃವೆಂದು ಭಾವಿಸಿಕೊಳ್ಳುತ್ತಾನೆ.

**ತದಸ್ಯ ಸಂಸ್ಮೃತಿರ್ಬನ್ಧಃ ಪಾರತನ್ತ್ರ್ಯಂ ಚ ತತ್ಕೃತಮ್ ।**
**ಭವತ್ಯಕರ್ತುರೀಶಸ್ಯ ಸಾಕ್ಷಿಣೋ ನಿರ್ವೃತಾತ್ಮನಃ ॥ 7 ॥**

7. ಇದೇ ಇವನಿಗೆ ಸಂಸಾರವು, ಬಂಧವು; ಇವನಿಗಿರುವ ಪರಾಧೀನತೆಯೂ ಅದರಿಂದಾಗಿರುತ್ತದೆ. ಇವನು ನಿಜವಾಗಿ ಅಕರ್ತೃವು, ಈಶ್ವರನು, ಸಾಕ್ಷಿಯು, ಆನಂದಸ್ವರೂಪನು.

**ಕಾರ್ಯಕಾರಣಕರ್ತೃತ್ವೇ ಕಾರಣಂ ಪ್ರಕೃತಿಂ ವಿದುಃ ।**
**ಭೋಕ್ತೃತ್ವೇ ಸುಖದುಃಖಾನಾಂ ಪುರುಷಂ ಪ್ರಕೃತೇಃ ಪರಮ್ ॥ 8 ॥**

8. ಶರೀರೇಂದ್ರಿಯಗಳನ್ನು ಉಂಟುಮಾಡಿರುವದಕ್ಕೆ ಕಾರಣವು ಪ್ರಕೃತಿ ಎನ್ನುವರು. ಸುಖದುಃಖಗಳ ಭೋಕ್ತೃತ್ವಕ್ಕೆ ಪ್ರಕೃತಿಗಿಂತ ವಿಲಕ್ಷಣವಾದ ಪುರುಷನನ್ನೇ ಕಾರಣವೆನ್ನುವರು.

**ತಮಸ್ಮಿನ್ ಪ್ರತ್ಯಗಾತ್ಮಾನಂ ಧಿಯಾ ಯೋಗಪ್ರವೃತ್ತಯಾ ।**
**ಭಕ್ತ್ಯಾ ವಿರಕ್ತ್ಯಾ ಜ್ಞಾನೇನ ವಿವಿಚ್ಯಾಽಽತ್ಮನಿ ಚಿನ್ತಯೇತ್ ॥ 9 ॥**

9. ಈ ಕಾರ್ಯಕರಣಸಂಘಾತದೊಳಗಿರುವ ಆ ಪ್ರತ್ಯಗಾತ್ಮನನ್ನು ಯೋಗದಿಂದುಂಟಾದ ಏಕಾಗ್ರಚಿತ್ತದಿಂದಲೂ ಪ್ರಮೇಶ್ವರಭಕ್ತಿಯಿಂದಲೂ ವಿರಕ್ತಿಯಿಂದಲೂ ವಿಂಗಡಿಸಿಕೊಂಡು ಚಿಂತಿಸಬೇಕು.

******

## ಪ್ರಕೃತಿಪುರುಷರ ವಿವೇಕ

(ಮೂರನೆಯ ಸ್ಕಂಧ, ಇಪ್ಪತ್ತೇಳನೆಯ ಅಧ್ಯಾಯ)

**ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈರ್ಗುಣೈಃ ।**
**ಅವಿಕಾರಾದಕರ್ತೃತ್ವಾನ್ನಿರ್ಗುಣತ್ವಾಜ್ಜಲಾರ್ಕವತ್ ॥ 1 ॥**

1. ಭಗವಂತನು ಹೇಳುತ್ತಿದ್ದಾನೆ: ಪ್ರಕೃತಿಯು ಕಾರ್ಯವಾದ ಶರೀರದಲ್ಲಿರುತ್ತಿದ್ದರೂ ಪುರುಷನು, ಆ ಪ್ರಕೃತಿಯ ಗುಣಗಣವಾದ ಸುಖದುಃಖಾದಿಗಳಿಂದ ಲಿಪ್ತನಾಗುವದಿಲ್ಲ; ಏಕೆಂದರೆ ಅವನು ವಿಕಾರರಹಿತನು, ನಿರ್ಗುಣನು. ನೀರಿನಲ್ಲಿರುವ ಸೂರ್ಯನು ನೀರಿನ ಚಲನೆಯೇ ಮುಂತಾದವುಗಳಿಂದ ಲಿಪ್ತನಾಗದಿರುವಂತೆಯೇ ಇದು.

**ಸ ಏಷ ಯರ್ಹಿ ಪ್ರಕೃತೇರ್ಗುಣೇಷ್ವಭಿವಿಷಜ್ಜತೇ ।**
**ಅಹಂಕ್ರಿಯಾವಿಮೂಢಾತ್ಮಾ ಕರ್ತಾಽಸ್ಮೀತ್ಯಭಿಮನ್ಯತೇ ॥ 2 ॥**

2. ಆ ಈ ಆತ್ಮನು ಪ್ರಕೃತಿಯ ಗುಣಗಳಲ್ಲಿ ಯಾವಾಗ ಸಕ್ತನಾಗುವನೋ ಆಗ ಅಹಂಕಾರದಿಂದ ವಿಮೂಢನಾಗಿ ಕರ್ತೃವಾಗಿರುತ್ತೇನೆ ಎಂದು ಅಭಿಮಾನವನ್ನು ತಳೆಯುತ್ತಾನೆ.

**ತೇನ ಸಂಸಾರಪದವೀಮವಶೋಽಭ್ಯೇತ್ಯ ನಿರ್ವೃತಃ ।**
**ಪ್ರಾಸಙ್ಗಿಕೈಃ ಕರ್ಮದೋಷೈಃ ಸದಸನ್ಮಿಶ್ರಯೋನಿಷು ॥ 3 ॥**

3. ಅದರಿಂದ ಸುಖರಹಿತವಾಗಿ ಸಂಗದಿಂದುಂಟಾದ ಕರ್ಮದೋಷಗಳಿಂದ ಉತ್ತಮ, ಮಧ್ಯಮಾಧಮಗಳಾದ ಯೋನಿಗಳಲ್ಲಿ ಹುಟ್ಟುತ್ತಾ ಪರವಶನಾಗಿಯೇ ಸಂಸಾರದ ಹಾದಿಯನ್ನು ಸೇರುವನು.

**ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।**
**ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥ 4 ॥**

4. ವಿಷಯವು ಇಲ್ಲದಿದ್ದರೂ ವಿಷಯವನ್ನು ಧ್ಯಾನಿಸುತ್ತಿರುವ ಇವನಿಗೆ ಕನಸಿನಲ್ಲಿ ಅನರ್ಥವು ಬಂದೊದಗುವಂತೆ – ಸಂಸಾರವು ಬಂದೊದಗಿ ತೊಲಗದೆ ಇರುತ್ತದೆ.

**ಪ್ರಬುಧ್ಯ ಸ್ವಪ್ನಸುಪ್ತಿಭ್ಯಾಂ ಸಂಸ್ಮರನ್ನಾತ್ಮವೈಶಸಮ್ ।**
**ವೈತಥ್ಯಂ ವ್ಯಭಿಚಾರಂ ಚ ನಾಸೌ ಧ್ಯಾಯೇವ್ಯತೋ ಭಯಮ್ ॥**

(ಇದು ಅಧಿಕಪಾಠ) – ಕನಸುನಿದ್ರೆಗಳನ್ನು ಬಿಟ್ಟು ಎಚ್ಚತ್ತವನು ಆಗ ತನ್ನ ಕೊಲೆಯಾಯಿತೆಂಬುದನ್ನು ಸ್ಮರಣೆಗೆ ತಂದುಕೊಂಡರೂ ಅದು ಹುಸಿಯೆಂಬುದನ್ನೂ ಈಗ ಬೇರೆಯಾಗಿರುವದೆಂಬುದನ್ನೂ ತಿಳಿದು ಅಂಜಿಕೆಯನ್ನು ಮನಸ್ಸಿಗೆ ತಂದುಕೊಳ್ಳುವದಿಲ್ಲವಲ್ಲವೆ?

**ಅತ ಏವ ಶನೈಶ್ಚಿತ್ತಂ ಪ್ರಸಕ್ತಮಸತಾಂ ಪಥಿ ।**
**ಭಕ್ತಿಯೋಗೇನ ತೀವ್ರೇಣ ವಿರಕ್ತ್ಯಾ ಚ ನಯೇದ್ವಶಮ್ ॥ 5 ॥**

5. ಆದ್ದರಿಂದಲೇ ಕೆಟ್ಟವರ ಮಾರ್ಗದಲ್ಲಿ ಆಸಕ್ತವಾಗಿರುವ ಚಿತ್ತವನ್ನು ತೀವ್ರವಾದ ಭಕ್ತಿಯೋಗದಿಂದಲೂ ವಿರಕ್ತಿಯಿಂದಲೂ ಅಳವಡಿಸಿಕೊಳ್ಳಬೇಕು.

**ಯಮಾದಿಭಿರ್ಯೋಗಪಥೈರಭ್ಯಸನ್ ಶ್ರದ್ಧಯಾನ್ವಿತಃ ।**
**ಮಯಿ ಭಾವೇನ ಸತ್ಯೇನ ಮತ್ಕಥಾಶ್ರವಣೇನ ಚ ॥ 6 ॥**

**ಸರ್ವಭೂತಸಮತ್ವೇನ ನಿರ್ವೈರೇಣಾಪ್ರಸಙ್ಗತಃ ।**
**ಬ್ರಹ್ಮಚರ್ಯೇಣ ಮೌನೇನ ಸ್ವಧರ್ಮೇಣ ಬಲೀಯಸಾ ॥ 7 ॥**

**ಯದೃಚ್ಛಯೋಪಲಬ್ಧೇನ ಸಂತುಷ್ಟೋ ಮಿತಭುಙ್ಮುನಿಃ ।**
**ವಿವಿಕ್ತಶರಣಃ ಶಾನ್ತೋ ಮೈತ್ರಃ ಕರುಣ ಆತ್ಮವಾನ್ ॥ 8 ॥**

**ಸಾನುಬನ್ಧೇ ಚ ದೇಹೇಽಸ್ಮಿನ್ನಕುರ್ವನ್ನಸದಾಗ್ರಹಮ್ ।**
**ಜ್ಞಾನೇನ ದೃಷ್ಟತತ್ತ್ವೇನ ಪ್ರಕೃತೇಃ ಪುರುಷಸ್ಯ ಚ ॥ 9 ॥**

**ನಿವೃತ್ತಬುದ್ಧ್ಯವಸ್ಥಾನೋ ದೂರೀಭೂತಾನ್ಯದರ್ಶನಃ ।**
**ಉಪಲಭ್ಯಾಽಽತ್ಮನಾಽಽತ್ಮಾನಂ ಚಕ್ಷುಷೇವಾರ್ಕಮಾತ್ಮದೃಕ್ ॥ 10 ॥**

**ಮುಕ್ತಲಿಙ್ಗಂ ಸದಾಭಾಸಮಸತಿ ಪ್ರತಿಪದ್ಯತೇ ।**
**ಸತೋ ಬನ್ಧುಮಸಚ್ಚಕ್ಷುಃ ಸರ್ವಾನುಸ್ಯೂತಮದ್ವಯಮ್ ॥ 11 ॥**

6–11. ಯಮನಿಯಮಗಳೇ ಮುಂತಾದ ಯೋಗಮಾರ್ಗಗಳಿಂದ ಚಿತ್ತವನ್ನು ಏಕಾಗ್ರಗೊಳಿಸುವ ಅಭ್ಯಾಸವನ್ನು ಮಾಡಿಕೊಳ್ಳುತ್ತಲೂ ಶ್ರದ್ಧೆಯಿಂದೊಡಗೂಡಿ ಪರಮಾತ್ಮಪ್ರೇಮದಿಂದಲೂ ಭಗವತ್ಕಥಾಶ್ರವಣದಿಂದಲೂ ಸರ್ವಭೂತಗಳಲ್ಲಿಯೂ ಸಮಭಾವದಿಂದಿದ್ದುಕೊಂಡಿರುವದರಿಂದಲೂ ನಿರ್ವೈರಭಾವದಿಂದಲೂ ಸಂಗತ್ಯಾಗದಿಂದಲೂ ಬ್ರಹ್ಮಚರ್ಯೆ, ಮೌನ, ಬಲಿಷ್ಠವಾದ ಸ್ವಧರ್ಮಾಚರಣೆ – ಇವುಗಳಿಂದಲೂ ಒಡಗೂಡಿದವನಾಗಿ ಯದೃಚ್ಛಾಲಾಭದಿಂದ ಸಂತುಷ್ಟನಾಗುತ್ತಾ ಮಿತಭೋಜನವನ್ನು ಮಾಡುತ್ತಾ ಮನನಮಾಡುವ ಅಭ್ಯಾಸವುಳ್ಳವನಾಗಿ ಏಕಾಂತವಾಸವನ್ನು ಮಾಡುತ್ತಾ ಶಾಂತನಾಗಿ ಮೈತ್ರಿ, ಕರುಣೆ ಇವುಗಳುಳ್ಳವನಾಗಿ ಚಿತಾಂತಃಕರಣನಾಗಿ ಮಕ್ಕಳೇ ಮುಂತಾದ ಅನುಭಂಧಿಗಳೊಡಗೂಡಿದ ಈ ದೇಹದಲ್ಲಿ ನಾನು ನನ್ನದೆಂಬ ದುರಾಗ್ರಹವನ್ನು ಮಾಡಿಕೊಳ್ಳದೆ ಪ್ರಕೃತಿಯ ಮತ್ತು ಪುರುಷನ ತತ್ತ್ವವನ್ನು ಕಂಡುಕೊಳ್ಳುವ ಜ್ಞಾನದಿಂದೊಡಗೂಡಿ ಜಾಗ್ರದಾದ್ಯವಸ್ಥೆಗಳನ್ನೂ ಮೀರಿ ಮತ್ತೊಂದರ ದರ್ಶನದಿಂದ ದೂರನಾಗಿ ಕಣ್ಣಿನಿಂದ ಸೂರ್ಯನನ್ನು ಕಾಣುವಂತೆ ತನ್ನಿಂದಲೇ ತನ್ನ ಪರಮಾರ್ಥಸ್ವರೂಪವಾದ ಆತ್ಮನನ್ನು ಕಂಡುಕೊಂಡು ನಿರುಪಾಧಿಕನೂ ಅಸದ್ರೂಪವಾದ ಅಹಂಕಾರದಲ್ಲಿ

ಸತ್ತಿನ ತೋರಿಕೆಯನ್ನು ತೋರಿಸುವ ಸದಧಿಷ್ಠಾನರೂಪನೂ ಅಸತ್ತಾದ ಕಾರ್ಯದ ಪ್ರಕಾಶಕನೂ ಎಲ್ಲೆಲ್ಲಿಯೂ ಅನುಗತವಾಗಿರುವ ರೂಪದವನೂ ಆದ ಅದ್ವಯಾತ್ಮನನ್ನು ಪಡೆದುಕೊಳ್ಳುವನು.

**ಯಥಾ ಜಲಸ್ಥ ಆಭಾಸಃ ಸ್ಥಲಸ್ಥೇನಾವದೃಶ್ಯತೇ ।**
**ಸ್ವಾಭಾಸೇನ ತಥಾ ಸೂರ್ಯೋ ಜಲಸ್ಥೇನ ದಿವಿ ಸ್ಥಿತಃ ॥ 12 ॥**

**ಏವಂ ತ್ರಿವೃದಹಙ್ಕಾರೋ ಭೂತೇನ್ದ್ರಿಯಮನೋಮಯೈಃ ।**
**ಸ್ವಾಭಾಸೈರ್ಲಕ್ಷಿತೋಽನೇನ ಸದಾಭಾಸೇನ ಸತ್ಯದೃಕ್ ॥ 13 ॥**

12–13. ಹೇಗೆ ನೆಲದ ಮೇಲಿರುವ ಗೋಡೆಯೇ ಮುಂತಾದ ಸ್ಥಲದಲ್ಲಿರುವ ಆಭಾಸದಿಂದ ನೀರಿನಲ್ಲಿರುವ ಆಭಾಸವು ಕಾಣಿಸುವದೋ, ಆ ನೀರಿನಲ್ಲಿರುವ ಆಭಾಸದಿಂದ ಆಕಾಶದಲ್ಲಿರುವ ಸೂರ್ಯನೂ ಹೇಗೆ ಕಾಣಿಸುವನೋ, ಅದರಂತೆ ದೇಹ, ಇಂದ್ರಿಯಗಳು, ಮನಸ್ಸು – ಇವುಗಳ ಆಭಾಸದಿಂದ ಮೂರು ಬಗೆಯ ಅಹಂಕಾರದ ಆಭಾಸವೂ ಕಾಣಿಸುತ್ತದೆ; ಆ ಬಳಿಕ ಸದಾತ್ಮನ ಆಭಾಸವುಳ್ಳ ಆ ಅಹಂಕಾರದಿಂದ ಸತ್ಯಚೈತನ್ಯಸ್ವರೂಪನಾದ ಆತ್ಮನೂ ಕಾಣಬರುತ್ತಾನೆ.

**ಭೂತಸೂಕ್ಷ್ಮೇನ್ದ್ರಿಯಮನೋಬುದ್ಧ್ಯಾದಿಷ್ವಿಹ ನಿದ್ರಯಾ ।**
**ಲೀನೇಷ್ವಸತಿ ಯಸ್ತತ್ರ ವಿನಿದ್ರೋ ನಿರಹಂಕ್ರಿಯಃ ॥ 14 ॥**

**ಮನ್ಯಮಾನಸ್ಸದಾಽಽತ್ಮಾನಮನಷ್ಟೋ ನಷ್ಟವನ್ಮೃಷಾ ।**
**ನಷ್ಟೋ ಹಙ್ಕರಣೇನ ದ್ರಷ್ಟಾ ನಷ್ಟವಿತ್ತ ಇವಾಽಽತುರಃ ॥ 15 ॥**

**ಏವಂ ಪ್ರತ್ಯವಮೃಶ್ಯಾಸಾವಾತ್ಮಾನಂ ಪ್ರತಿಪದ್ಯತೇ ।**
**ಸಾಹಙ್ಕಾರಸ್ಯ ದ್ರವ್ಯಸ್ಯ ಯೋಽವಸ್ಥಾನಮನುಗ್ರಹಃ ॥ 16 ॥**

14–16. ಭೂತಸೂಕ್ಷ್ಮ, ಇಂದ್ರಿಯಗಳು, ಮನಸ್ಸು, ಬುದ್ಧಿ – ಮುಂತಾದವುಗಳು ಅಸದ್ರೂಪವಾದ ಅವ್ಯಾಕೃತದಲ್ಲಿ ನಿದ್ರೆಯಿಂದ ಲಯವಾಗಲು, ಯಾವಾತನು ನಿದ್ರಾರಹಿತನೂ ನಿರಹಂಕಾರನೂ ಆಗಿರುವನೋ, ಆಗ್ಗೆ ತಾನು ನಾಶವಾಗದಿದ್ದರೂ ಅಹಂಕಾರವು ನಾಶವಾಗಲು ಹಣವನ್ನು ಕಳೆದುಕೊಂಡವನಂತೆ ವಿವಶನಾಗಿ ತಾನೇ ನಾಶವಾದೆನೆಂದೆಂದು ಕೊಳ್ಳುತ್ತಾ ಇರುವನೋ, ಆ ಆತ್ಮನನ್ನು ವಿಮರ್ಶೆಮಾಡಿ ತನ್ನ ಇರವೇ ಅಹಂಕಾರಸಹಿತವಾದ ದೇಹೇಂದ್ರಿಯ ಸಂಘಾತವು

ತೋರುವದಕ್ಕೆ ಬೇಕಾದ ಅನುಗ್ರಹವೆಂದು ತನ್ನ ಪರಮಾತ್ಮಸ್ವರೂಪವನ್ನು ಅರಿತುಕೊಳ್ಳುವನು.

**ಶ್ರೀಭಗವಾನುವಾಚ –**
**ಅನಿಮಿತ್ತನಿಮಿತ್ತೇನ ಸ್ವಧರ್ಮೇಣಾಮಲಾತ್ಮನಾ ।**
**ತೀವ್ರಯಾ ಮಯಿ ಭಕ್ತ್ಯಾ ಚ ಶ್ರುತಿಸಂಭೃತಯಾ ಚಿರಮ್ ॥ 21 ॥**

**ಜ್ಞಾನೇನ ದೃಷ್ಟತತ್ತ್ವೇನ ವೈರಾಗ್ಯೇಣ ಬಲೀಯಸಾ ।**
**ತಪೋಯುಕ್ತೇನ ಯೋಗೇನ ತೀವ್ರೇಣಾಽಽತ್ಮಸಮಾಧಿನಾ ॥ 22 ॥**

**ಪ್ರಕೃತಿಃ ಪುರುಷಸ್ಯೇಹ ದಹ್ಯಮಾನಾ ತ್ವಹರ್ನಿಶಮ್ ।**
**ತಿರೋಭವಿತ್ರೀ ಶನಕೈರಗ್ನೇರ್ಯೋನಿರಿವಾರಣಿಃ ॥ 23 ॥**

21–23. ಶ್ರೀಕಪಿಲಭಗವಂತನಿಂತೆಂದನು: ಯಾವದೊಂದು ಪ್ರಯೋಜನವನ್ನೂ ನಿಮಿತ್ತವಾಗಿಟ್ಟುಕೊಳ್ಳದೆ ಸ್ವಧರ್ಮವನ್ನು ಮಾಡಿದ್ದರಿಂದ ನಿರ್ಮಲವಾದ ಅಂತಃಕರಣದಿಂದಲೂ ಮತ್ತೆಮತ್ತೆ ಶ್ರವಣಮಾಡಿದ್ದರಿಂದ ಪುಷ್ಟಿಯನ್ನು ಪಡೆದ ಭಗವದ್ಭಕ್ತಿಯಿಂದಲೂ, ತತ್ತ್ವಾನುಭವಪರ್ಯಂತವಾದ ಜ್ಞಾನದಿಂದಲೂ, ಬಲಿಷ್ಠವಾದ ವೈರಾಗ್ಯದಿಂದಲೂ ತೀವ್ರವಾಗಿ ಆತ್ಮನಲ್ಲಿಯೇ ಏಕಾಗ್ರತೆಯನ್ನು ಹೊಂದಿದ ತಪೋಯುಕ್ತವಾದ ಯೋಗದಿಂದಲೂ ಪುರುಷನಲ್ಲಿರುವ ಪ್ರಕೃತಿಯು ಹಗಲೂ ಇರುಳೂ ದಗ್ಧವಾಗುತ್ತಿದ್ದರೆ ಬೆಂಕಿಗೆ ಕಾರಣವಾದ ಅರಣಿಯಂತೆ ಮೆಲ್ಲಮೆಲ್ಲನೆ ಕಾಣದಂತಾಗುವರು.

**ಭುಕ್ತಭೋಗಾ ಪರಿತ್ಯಕ್ತಾ ದೃಷ್ಟದೋಷಾ ಚ ನಿತ್ಯಶಃ ।**
**ನೇಶ್ವರಸ್ಯಾಶುಭಂ ಧತ್ತೇ ಸ್ವೇ ಮಹಿಮ್ನಿ ಸ್ಥಿತಸ್ಯ ಚ ॥ 24 ॥**

24. ತನ್ನ ಭೋಗವನ್ನು ಭುಂಜಿಸಿ ಆಗಿರುವ, ನಿತ್ಯವೂ ದೋಷವು ಕಂಡಹಾಗೆಯೇ ಇರುವ ಆ ಪ್ರಕೃತಿಯು ಸ್ವತಂತ್ರನಾಗಿ ತನ್ನ ಮಹಿಮೆಯಲ್ಲಿಯೇ ನಿಂತಿರುವ ಆತ್ಮನಿಗೆ ಅಶುಭವಾದ ಸಂಸಾರವನ್ನು ಉಂಟುಮಾಡಲಾರದು.

**ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।**
**ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥ 25 ॥**

**ಏವಂ ವಿದಿತತತ್ತ್ವಸ್ಯ ಪ್ರಕೃತಿರ್ಮಯಿ ಮಾನಸಮ್ ।**
**ಯುಞ್ಜತೋ ನಾಪಕುರುತ ಆತ್ಮಾರಾಮಸ್ಯ ಕರ್ಹಿಚಿತ್ ॥ 26 ॥**

25–26. ಇನ್ನೂ ಎಚ್ಚತ್ತಿಲ್ಲದವನಿಗೆ ಹೇಗೆ ಕನಸು ಬಹಳ ಅನರ್ಥಗಳನ್ನು ಉಂಟುಮಾಡುವದೋ ಹೇಗೆ ಎಚ್ಚತ್ತವನಿಗೆ ಅದೇ ಮೋಹವನ್ನು ಉಂಟುಮಾಡಲಾರದೆ ಇರುವನೋ ಹಾಗೆಯೇ ತತ್ತ್ವವನ್ನರಿತು ಭಗವಂತನಲ್ಲಿಯೇ ಮನಸ್ಸಿಟ್ಟ ಆತ್ಮಾರಾಮನಿಗೆ ಪ್ರಕೃತಿಯು ಎಂದಿಗೂ ಕೆಡುಕನ್ನು ಮಾಡುವದಿಲ್ಲ.

**ಯ ದೈವಮಧ್ಯಾತ್ಮರತಃ ಕಾಲೇನ ಬಹುಜನ್ಮನಾ ।**
**ಸರ್ವತ್ರ ಜಾತವೈರಾಗ್ಯ ಅಬ್ರಹ್ಮಭವನಾನ್ಮುನಿಃ ॥ 27 ॥**

**ಮದ್ಭಕ್ತಃ ಪ್ರತಿಬುದ್ಧಾರ್ಥೋ ಮತ್ಪ್ರಸಾದೇನ ಭೂಯಸಾ ।**
**ನಿಃಶ್ರೇಯಸಂ ಸ್ವಸಂಸ್ಥಾನಂ ಕೈವಲ್ಯಾಖ್ಯಂ ಮದಾಶ್ರಯಮ್ ॥ 28 ॥**

**ಪ್ರಾಪ್ನೋತೀಹಾಞ್ಜಸಾ ಧೀರಃ ಸ್ವದೃಶಾಚ್ಛಿನ್ನಸಂಶಯಃ ।**
**ಯದ್ಗತ್ವಾ ನ ನಿವರ್ತೇತ ಯೋಗೀ ಲಿಙ್ಗಾದ್ವಿನಿರ್ಗಮೇ ॥ 29 ॥**

27–29. ಯಾವಾಗ ಅನೇಕ ಜನ್ಮಗಳವರೆಗೂ ಹೀಗೆ ಅಧ್ಯಾತ್ಮರತನಾಗಿದ್ದು ಬ್ರಹ್ಮಲೋಕದವರೆಗಿನ ಎಲ್ಲಾ ಭೋಗಗಳಲ್ಲಿಯೂ ವೈರಾಗ್ಯವುಂಟಾದವನಾಗುವನೋ ಆಗ ಆ ವಿವೇಕಿಯಾದ ನನ್ನ ಭಕ್ತನು ನನ್ನ ಹೆಚ್ಚಿನ ಕೃಪೆಯಿಂದ ತತ್ತ್ವವನ್ನು ಅರಿತುಕೊಂಡವನಾಗಿ ಆತ್ಮದರ್ಶನದಿಂದ ಸರ್ವಸಂಶಯಗಳನ್ನೂ ಕತ್ತರಿಸಿ ಕೊಂಡವನಾಗಿ ನನ್ನನ್ನೇ ಆಶ್ರಯಿಸಿಕೊಂಡಿರುವದಾಗಿರುವ, ಕೈವಲ್ಯವೆಂಬ ಹೆಸರಿನ – ಲಿಂಗದೇಹದಿಂದ ಬಿಡುಗಡೆಯಾದ ಯಾವ ಯೋಗಿಯು ಪದವನ್ನು ಪಡೆದುಕೊಂಡು ಎಂದಿಗೂ ಹಿಂತಿರುಗದೆ ಇರುವನೋ ಆ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವದೆಂಬ ನಿಃಶ್ರೇಯಸವನ್ನು ಆತ್ಯಂತಿಕವಾಗಿ ಹೊಂದುತ್ತಾನೆ.

**ಯದಾ ನ ಯೋಗೋಪಚಿತಾಸು ಚೇತೋ**
**ಮಾಯಾಸು ಸಿದ್ಧಸ್ಯ ವಿಷಜ್ಜತೇಽಙ್ಗ ।**
**ಅನನ್ಯಹೇತುಷ್ವಥ ಮೇ ಗತಿಃ ಸ್ಯಾ –**
**ದಾತ್ಯನ್ತಿಕೀ ಯತ್ರ ನ ಮೃತ್ಯುಹಾಸಃ ॥ 30 ॥**

30. ಎಲೌ ತಾಯೆ, ಯಾವಾಗ ಕೇವಲ ಯೋಗಸಿದ್ಧವಾದ

ಅಣಿಮಾದಿಮಾಯೆಗಳಲ್ಲಿ ಚಿತ್ತವು ಸಕ್ತವಾಗದೆ ಇರುವದೋ, ಆಗ ಮೃತ್ಯುವಿನ ನಗೆಗೀಡಾಗದ ಆತ್ಯಂತಿಕವಾದ ನನ್ನ ಪದದ ಪ್ರಾಪ್ತಿಯಾಗುವದು.

******

## ಸಗುಣಭಕ್ತಿಯೋಗದ ಲಕ್ಷಣ

(ಮೂರನೆಯ ಸ್ಕಂಧ, ಇಪ್ಪತ್ತೆಂಟನೆಯ ಅಧ್ಯಾಯ)

**ಸ್ವಧರ್ಮಾಚರಣಂ ಶಕ್ತ್ಯಾ ವಿಧರ್ಮಾಚ್ಚ ನಿವರ್ತನಮ್ ।**
**ದೈವಾಲ್ಲಬ್ಧೇನ ಸಂತೋಷ ಆತ್ಮವಿಚ್ಚರಣಾರ್ಚನಮ್ ॥ 2 ॥**

**ಗ್ರಾಮ್ಯ ಧರ್ಮನಿವೃತ್ತಿಶ್ಚ ಮೋಕ್ಷಧರ್ಮರತಿಸ್ತಥಾ ।**
**ಮಿತಮೇಧ್ಯಾದನಂ ಶಶ್ವದ್ವಿವಿಕ್ತಕ್ಷೇಮ ಸೇವನಮ್ ॥ 3 ॥**

**ಅಹಿಂಸಾ ಸತ್ಯಮಸ್ತೇಯಂ ಯಾವದರ್ಥಪರಿಗ್ರಹಃ ।**
**ಬ್ರಹ್ಮಚರ್ಯಂ ತಪಃ ಶೌಚಂ ಸ್ವಾಧ್ಯಾಯಃ ಪುರುಷಾರ್ಚನಮ್ ॥ 4 ॥**

**ಮೌನಂ ಸದಾಸನಜಯಃ ಸ್ಥೈರ್ಯಂ ಪ್ರಾಣಜಯಃ ಶನೈಃ ।**
**ಪ್ರತ್ಯಾಹಾರಶ್ಚೇನ್ದ್ರಿಯಾಣಾಂ ವಿಷಯಾನ್ಮನಸಾ ಹೃದಿ ॥ 5 ॥**

**ಸ್ವಧಿಷ್ಣ್ಯಾನಾಮೇಕದೇಶೇ ಮನಸಾ ಪ್ರಾಣಧಾರಣಮ್ ।**
**ವೈಕುಣ್ಠಲೀಲಾಭಿಧ್ಯಾನಂ ಸಮಾಧಾನಂ ತಥಾಽಽತ್ಮನಃ ॥ 6 ॥**

**ಏತೈರನ್ಯೈಶ್ಚ ಪಥಿಭಿರ್ಮನೋ ದುಷ್ಟಮಸತ್ಪಥಮ್ ।**
**ಬುದ್ಧ್ಯಾ ಯುಞ್ಜೀತ ಶನಕೈರ್ಜಿತಪ್ರಾಣೋ ಹ್ಯತನ್ದ್ರಿತಃ ॥ 7 ॥**

2–7. ಯಥಾಶಕ್ತಿಯಾಗಿ ಸ್ವಧರ್ಮವನ್ನು ಆಚರಿಸುವದು, ನಿಷಿದ್ಧವಾದದ್ದನ್ನು ಬಿಟ್ಟು ಬಿಡುವದು, ದೈವವಶದಿಂದ ದೊರೆತಷ್ಟರಿಂದ ಸಂತುಷ್ಟನಾಗಿರುವದು, ಆತ್ಮಜ್ಞಾನಿಗಳ ಪಾದವನ್ನು ಪೂಜಿಸುವದು, ಗ್ರಾಮ್ಯಧರ್ಮವನ್ನು ಕೈಬಿಟ್ಟು ಮೋಕ್ಷಧರ್ಮದಲ್ಲಿಯೇ ನಿರತನಾಗಿರುವದು, ಮಿತವಾಗಿಯೂ ಶುದ್ಧವಾಗಿಯೂ ಇರುವ ಆಹಾರವನ್ನು ಸೇವಿಸುವದು, ಯಾವಾಗಲೂ ಏಕಾಂತಸ್ಥಾನ ದಲ್ಲಿರುತ್ತಿರುವದು, ಅಹಿಂಸೆ, ಸತ್ಯ, ಪರಸ್ವತ್ತನ್ನು ತೆಗೆದುಕೊಳ್ಳದಿರುವದು, ಪ್ರಯೋಜನವಿದ್ದಷ್ಟುಮಾತ್ರ ಇಟ್ಟುಕೊಳ್ಳುವದು, ಬ್ರಹ್ಮಚರ್ಯ, ತಪಸ್ಸು, ಬಾಹ್ಯಾಭ್ಯಂತರ ಶೌಚ, ಅಧ್ಯಯನ, ವಿಷ್ಣುವಿನ ಅರ್ಚನೆ, ಮೌನ, ಆಸನಜಯ, ಮನಃಸ್ಥೈರ್ಯ,

ಪ್ರಾಣಾಯಾಮ, ಇಂದ್ರಿಯಗಳನ್ನು ವಿಷಯಗಳಿಂದ ಮೆಲ್ಲಮೆಲ್ಲನೆ ಹಿಂಜಗ್ಗಿಕೊಳ್ಳುವದು, ಮನಃ ಸಹಿತವಾದ ಪ್ರಾಣಗಳನ್ನು ಯಾವದಾದರೊಂದು ಸ್ಥಾನದಲ್ಲಿ ಕೇಂದ್ರೀಕರಿಸಿಕೊಳ್ಳುವದು, ಭಗವಂತನ ಲೀಲೆಗಳನ್ನು ಧ್ಯಾನಮಾಡುವದು, ಚಿತ್ತವನ್ನು ಆತ್ಮನಲ್ಲಿ ಸಮಾಧಾನಗೊಳಿಸಿಕೊಳ್ಳುವದು – ಇವೇಮುಂತಾದ ಮಾರ್ಗಗಳಿಂದ ಕುಮಾರ್ಗದಲ್ಲಿ ನಡೆಯುವ ದುಷ್ಟಮನಸ್ಸನ್ನು ಮೆಲ್ಲಮೆಲ್ಲನೆ ಪ್ರಾಣಗಳನ್ನು ಗೆದ್ದ ಬುದ್ಧಿಯಿಂದ ಆಲಸ್ಯರಹಿತನಾಗಿ ಯೋಗಕ್ಕೆ ಹತ್ತಿಸಿಕೊಳ್ಳಬೇಕು.

**ದೇಹಂ ಚ ತಂ ನ ಚರಮಃ ಸ್ಥಿತಮುತ್ಥಿತಂ ವಾ**
**ಸಿದ್ಧೋ ವಿಪಶ್ಯತಿ ಯತೋಽಧ್ಯಗಮತ್ ಸ್ವರೂಪಮ್ ।**
**ದೈವಾದುಪೇತಮಥ ದೈವವಶಾದಪೇತಮ್**
**ವಾಸೋ ಯಥಾ ಪರಿಕೃತಂ ಮದಿರಾಮದಾನ್ಧಃ ॥ 37 ॥**

37. ಹೇಗೆ ಮದ್ಯದ ಮದದಿಂದ ಮತ್ತನಾಗಿರುವವನು ತಾನು ಧರಿಸಿರುವ ಬಟ್ಟೆಯು ದೈವವಶದಿಂದ ಮೈಮೇಲಕ್ಕೆ ಬರಲಿ, ಅಥವಾ ದೈವವಶದಿಂದ ಅತ್ತಸರಿಯಲಿ, ಅದನ್ನರಿಯದೆ ಇರುವನೋ, ಅದರಂತೆ ಚರಮಾವಸ್ಥೆಯಲ್ಲಿರುವ ಸಿದ್ಧಪುರುಷನು ಕುಳಿತಿರಲಿ, ಎದ್ದೇಳಲಿ, ಅದನ್ನೂ ಕಾಣದೆಯೇ ಇರುವನು. ಏಕೆಂದರೆ ಅವನು ಸ್ವರೂಪವನ್ನು ಸೇರಿಕೊಂಡಿರುತ್ತಾನೆ.

**ದೇಹೋಽಪಿ ದೈವವಶಗಃ ಖಲು ಕರ್ಮ ಯಾವ–**
**ತ್ಸ್ವಾರಮ್ಭಕಂ ಪ್ರತಿಸಮೀಕ್ಷತ ಏವ ಸಾಸುಃ ।**
**ತಂ ಸಪ್ರಪಞ್ಚಮಧಿರೂಢಸಮಾಧಿಯೋಗಃ**
**ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ॥ 38 ॥**

38. ಅವನ ದೇಹವೂ ದೈವವಶದಿಂದ ತನ್ನನ್ನುಂಟುಮಾಡಿರುವ ಕರ್ಮವಿರುವವರೆಗೂ ಪ್ರಾಣಸಹಿತವಾಗಿ ಇದ್ದುಕೊಂಡೇ ಇರುತ್ತದೆ. ಆದರೆ ಸಮಾಧಿಯೋಗವನ್ನು ಏರಿ ವಸ್ತುವನ್ನು ಅರಿತುಕೊಂಡಿರುವಾತನು ಆ ಕನಸಿನ ಶರೀರದಂತಿರುವ ಶರೀರವನ್ನೂ ಅದರ ವಿಶೇಷಗಳನ್ನೂ ಮತ್ತೆ ಎಂದಿಗೂ ಹೊಂದಿಕೊಳ್ಳದೆ ಇರುತ್ತಾನೆ.

**ಯಥಾ ಪುತ್ರಾಚ್ಚ ವಿತ್ತಾಚ್ಚ ಪೃಥಙ್ಮರ್ತ್ಯಃ ಪ್ರತೀಯತೇ ।**
**ಅಪ್ಯಾತ್ಮತ್ವೇನಾಭಿಮತಾದ್ದೇಹಾದೇಃ ಪುರುಷಸ್ತಥಾ ॥ 39 ॥**

39. ಹೇಗೆ ಸ್ವಲ್ಪ ವಿಚಾರಮಾಡಿದ ಮರ್ತ್ಯನಿಗೆ ಮಗನು, ಧನ – ಇವಕ್ಕಿಂತಲೂ ತಾನು ಬೇರೆ ಎಂದು ತಿಳಿಯುವದೋ, ಹಾಗೆಯೇ ತನ್ನ ಸ್ವರೂಪವೆಂದೇ ಅಭಿಮತವಾಗಿರುವ ದೇಹವೇ ಮುಂತಾದದ್ದಕ್ಕಿಂತಲೂ ತಾನು ಬೇರೆಯೆಂದೇ ಗೊತ್ತಾಗುತ್ತದೆ.

**ಯಥೋಲ್ಮುಕಾದ್ವಿಸ್ಫುಲಿಙ್ಗಾದ್ಧೂಮಾದ್ವಾಪಿ ಸ್ವಸಂಭವಾತ್ ।**
**ಅಪ್ಯಾತ್ಮತ್ವೇನಾಭಿಮತಾದ್ಯಥಾಗ್ನಿಃ ಪೃಥಗುಲ್ಮುಕಾತ್ ॥ 40 ॥**
**ಭೂತೇನ್ದ್ರಿಯಾನ್ತಃಕರಣಾತ್ಪ್ರಧಾನಾಜ್ಜೀವಸಂಜ್ಞಿತಾತ್ ।**
**ಆತ್ಮಾ ತಥಾ ಪೃಥಗ್ದ್ರಷ್ಟಾ ಭಗವಾನ್ ಬ್ರಹ್ಮಸಂಜ್ಞಿತಃ ॥ 41 ॥**

40–41. ಕೊಳ್ಳಿಯಿಂದ ಹೊರಬಂದಿರುವ ಕಿಡಿಗಿಂತಲೂ ತನ್ನಿಂದ ಉಂಟಾಗಿರುವ ಹೊಗೆಗಿಂತಲೂ ಅದೇ ಎಂದು ಭಾವಿಸಿರುವ ಕೊಳ್ಳಿಗಿಂತಲೂ ಬೆಂಕಿಯು ಹೇಗೆ ಬೇರೆಯೇ ಆಗಿರುವದೋ, ಹಾಗೆಯೇ ಭೂತಗಳು, ಇಂದ್ರಿಯಗಳು, ಅಂತಃಕರಣ – ಇವಕ್ಕಿಂತಲೂ ಪ್ರಧಾನಕ್ಕಿಂತಲೂ ಜೀವನೆಂಬವನಿಗಿಂತಲೂ ಅವುಗಳನ್ನು ಕಾಣುತ್ತಿರುವ ಆತ್ಮನು – ಬ್ರಹ್ಮವೆಂಬ ಹೆಸರಿನ ಭಗವಂತನು – ಬೇರೆಯಾಗಿರುತ್ತಾನೆ.

**ಸರ್ವಭೂತೇಷು ಚಾಽಽತ್ಮಾನಂ ಸರ್ವಭೂತಾನಿ ಚಾಽಽತ್ಮನಿ ।**
**ಈಕ್ಷೇತಾಽನನ್ಯಭಾವೇನ ಭೂತೇಷ್ವಿವ ತದಾತ್ಮತಾಮ್ ॥ 42 ॥**

42. ಭಿನ್ನಭಿನ್ನವಾಗಿ ಕಾಣುವ ಚತುರ್ವಿಧಪ್ರಾಣಿಗಳೂ ಭೂತಮಾತ್ರವೇ ಎಂದು ಹೇಗೆ ವಿವೇಕಿಯು ತಿಳಿಯುತ್ತಾನೋ ಹಾಗೆಯೇ ಸರ್ವಭೂತಗಳಲ್ಲಿಯೂ ತನ್ನ ಆತ್ಮನನ್ನೂ, ತನ್ನ ಆತ್ಮನಲ್ಲಿ ಸರ್ವಭೂತಗಳನ್ನೂ ಅನನ್ಯಭಾವದಿಂದ ಕಾಣುತ್ತಿರಬೇಕು.

**ಸ್ವಯೋನಿಷು ಯಥಾ ಜ್ಯೋತಿರೇಕಂ ನಾನಾ ಪ್ರತೀಯತೇ ।**
**ಯೋನಿನಾಂ ಗುಣವೈಷಮ್ಯಾತ್ತಥಾಽಽತ್ಮಾ ಪ್ರಕೃತೌ ಸ್ಥಿತಃ ॥ 43 ॥**

43. ಹೇಗೆ ಬೆಂಕಿಯು ಒಂದೇ ಆಗಿದ್ದರೂ ತನ್ನ ಆಶಯವಾದ ಕಟ್ಟಿಗೆ ಮುಂತಾದವುಗಳ ಉದ್ದ, ಗಿಡ್ಡ, ಮುಂತಾದ ಗುಣಗಳ ತಾರತಮ್ಯದಿಂದ ಆ ಆಶ್ರಯದ ವಸ್ತುಗಳಲ್ಲಿ ಬೇರೆ ಬೇರೆಯಾಗಿ ಕಾಣುತ್ತಿರುವದೋ ಇದರಂತೆ ಆತ್ಮನು

(ಒಬ್ಬನೇ ಆಗಿದ್ದರೂ) ಪ್ರಕೃತಿಯಿಂದಾದ ದೇಹಗಳಲ್ಲಿ ಬೇರೆಬೇರೆಯಾಗಿ ಕಾಣುತ್ತಿರುವನು.

**ತಸ್ಮಾದಿಮಾಂ ಸ್ವಾಂ ಪ್ರಕೃತಿಂ ದೈವೀಂ ಸದಸದಾತ್ಮಿಕಾಮ್ ।**
**ದುರ್ವಿಭಾವ್ಯಾಂ ಪರಾಭಾವ್ಯ ಸ್ವರೂಪೇಣಾವತಿಷ್ಠತೇ ॥ 44 ॥**

44. ಆದ್ದರಿಂದ ಈ ಸದಸದ್ರೂಪವಾಗಿರುವ ಈ ತನ್ನ ಅಚಿಂತ್ಯವಾದ ದೈವೀಪ್ರಕೃತಿಯನ್ನು ಜಯಿಸಿಕೊಂಡರೆ ತನ್ನ ಸ್ವರೂಪದಲ್ಲಿ ನಿಲ್ಲುವವನಾಗುತ್ತಾನೆ.

*****

## ಭಕ್ತಿಯೋಗದ ವಿಧಗಳು

### (ಮೂರನೆಯ ಸ್ಕಂಧ, ಇಪ್ಪತ್ತೊಂಬನೆಯ ಅಧ್ಯಾಯ)

**ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನಿ ಭಾವ್ಯತೇ ।**
**ಸ್ವಭಾವಗುಣಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ॥ 7 ॥**

7. ಕಪಿಲಭಗವಂತನು ಹೇಳಿದನೇನೆಂದರೆ: ತಾಯೆ, ಭಕ್ತಿಯೋಗವೆಂಬುದು ಬೇರೆ ಬೇರೆ ಮಾರ್ಗಗಳಿಂದ ಹಲವು ವಿಧವಾಗಿ ತೋರಿಬರುತ್ತದೆ. ಸ್ವಭಾವದ ಮತ್ತು ಗುಣಗಳ ಪ್ರಕಾರದಿಂದ ಮನುಷ್ಯರ ಭಾವವೂ ಭಿನ್ನಭಿನ್ನವಾಗಿರುತ್ತದೆ.

**ಅಭಿಸಂಧಾಯ ಯೋ ಹಿಂಸಾಂ ದಮ್ಭಂ ಮಾತ್ಸರ್ಯಮೇವ ವಾ ।**
**ಸಂರಮ್ಭೀ ಭಿನ್ನದೃಗ್ಭಾವಂ ಮಯಿ ಕುರ್ಯಾತ್ ಸ ತಾಮಸಃ ॥ 8 ॥**

8. ಯಾವನು ಕೋಪಿಯೂ ಭೇದದರ್ಶಿಯೂ ಆಗಿದ್ದುಕೊಂಡು ಹಿಂಸೆಯನ್ನಾಗಲಿ, ದಂಭವನ್ನಾಗಲಿ, ಮಾತ್ಸರ್ಯವನ್ನಾಗಲಿ ಮನಸ್ಸಿನಲ್ಲಿಟ್ಟು ಕೊಂಡು ಭಕ್ತಿಯನ್ನು ಮಾಡುವನೋ ಅವನು ತಾಮಸಭಕ್ತನು.

**ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ ।**
**ಅರ್ಚಾದಾವರ್ಚಯೇದ್ಯೋ ಮಾಂ ಪೃಥಗ್ಭಾವಃ ಸ ರಾಜಸಃ ॥ 9 ॥**

9. ಯಾವನು ವಿಷಯಗಳನ್ನಾಗಲಿ ಕೀರ್ತಿಯನ್ನಾಗಲಿ ಈಶ್ವರತ್ವವನ್ನಾಗಲಿ ಮನಸ್ಸಿನಲ್ಲಿಟ್ಟುಕೊಂಡು ಪ್ರತಿಮಾದಿಗಳಲ್ಲಿ ಭೇದಬುದ್ಧಿ ಯಿಂದ ಅರ್ಚನೆಯನ್ನು ಮಾಡುತ್ತಿರುವನೋ, ಅವನು ರಾಜಸಭಕ್ತನು.

**ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ವಾ ತದರ್ಪಣಮ್ ।**
**ಯಜೇದ್ಯಷ್ಟವ್ಯಮಿತಿ ವಾ ಪೃಥಗ್ಭಾವಃ ಸ ಸಾತ್ತ್ವಿಕಃ ॥ 10 ॥**

10. ಯಾವನು ಕರ್ಮಕ್ಷಯಕ್ಕಾಗಿ ಅಥವಾ ಪರಮಾತ್ಮನಿಗೆ ಅರ್ಪಣೆ ಮಾಡುವ ಉದ್ದೇಶದಿಂದ ಪೂಜಿಸುವದು ಕರ್ತವ್ಯವು ಎಂದು ಭೇದಬುದ್ಧಿಯಿಂದ ಪೂಜಿಸುತ್ತಿರುವನೋ ಅವನು ಸಾತ್ತ್ವಿಕಭಕ್ತನು.

**ಮದ್ಗುಣಶ್ರುತಿಮಾತ್ರೇಣ ಮಯಿ ಸರ್ವಗುಹಾಶಯೇ ।**
**ಮನೋಗತಿರವಿಚ್ಛಿನ್ನಾ ಯಥಾ ಗಙ್ಗಾಮ್ಭಸೋಽಮ್ಬುಧೌ ॥ 11 ॥**

**ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಮ್ ।**
**ಅಹೈತುಕ್ಯವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ॥ 12 ॥**

11–12. ನನ್ನ ಗುಣಗಳನ್ನು ಶ್ರವಣಮಾಡಿದಮಾತ್ರದಿಂದ ಗಂಗಾಜಲವು ಹೇಗೆ ಅಖಂಡಾಕಾರವಾಗಿ ಸಮುದ್ರದತ್ತ ಹರಿಯುತ್ತಿರುವರೋ, ಹಾಗೆ, ಸರ್ವರಹೃದಯದಲ್ಲಿಯೂ ಇರುತ್ತಿರುವ ನನ್ನ ಕಡೆಗೇ ಮನೋ ಗತಿಯು ಕಡಿವಡೆಯದೆ ಯಾವಾಗ ಹರಿಯುತ್ತಿರುವದೋ ಅದು ನಿರ್ಗುಣಭಕ್ತಿಯ ಲಕ್ಷಣವು. ಆ ಭಕ್ತಿಯು ಯಾವದೊಂದು ಪ್ರಯೋಜನವನ್ನೂ ಬಯಸದೆ ಪುರುಷೋತ್ತಮನಲ್ಲಿಟ್ಟಿರುವ ಅನನ್ಯಪ್ರೇಮವಾಗಿರುತ್ತದೆ.

**ಸಾಲೋಕ್ಯಸಾರ್ಷ್ಟಿಸಾಮೀಪ್ಯಸಾರೂಪ್ಯೈಕತ್ವಮಪ್ಯುತ ।**
**ದೀಯಮಾನಂ ನ ಗೃಹ್ಣನ್ತಿ ವಿನಾ ಮತ್ಸೇವನಂ ಜನಾಃ ॥ 13 ॥**

**ಸ ಏವ ಭಕ್ತಿಯೋಗಾಖ್ಯ ಆತ್ಯನ್ತಿಕ ಉದಾಹೃತಃ ।**
**ಯೇನಾತಿವ್ರಜ್ಯ ತ್ರಿಗುಣಂ ಮದ್ಭಾವಾಯೋಪಪದ್ಯತೇ ॥ 14 ॥**

13–14. ಪರಮಾತ್ಮನಾದ ನನ್ನ ಸೇವೆಯಿಲ್ಲದ ಸಾಲೋಕ್ಯ, ಸಾರ್ಷ್ಟಿ (ಸಮಾನೈಶ್ವರ್ಯದ ಭೋಗ), ಸಾಮೀಪ್ಯ, ಅಥವಾ ಏಕತ್ವವನ್ನು ಕೂಡ ಕೊಡುವೆನೆಂದರೂ ತೆಗೆದುಕೊಳ್ಳದೆ ಇರುವರಲ್ಲ, ಅದೇ ಆತ್ಯಂತಿಕಭಕ್ತಿಯೋಗವೆನಿಸುವದು. ಅದರಿಂದ ಸಾಧಕನು ಮೂರು ಗುಣಗಳನ್ನೂ ಮೀರಿ ಭಗವದ್ಭಾವವನ್ನು ಹೊಂದುವದಕ್ಕೆ ಸಮರ್ಥನಾಗುತ್ತಾನೆ.

**ನಿಷೇವಿತೇನಾನಿಮಿತ್ತೇನ ಸ್ವಧರ್ಮೇಣ ಮಹೀಯಸಾ ।**
**ಕ್ರಿಯಾಯೋಗೇನ ಶಸ್ತೇನ ನಾತಿಹಿಂಸ್ರೇಣ ನಿತ್ಯಶಃ ॥ 15 ॥**

**ಮದ್ಧಿಷ್ಣ್ಯದರ್ಶನಸ್ಪರ್ಶಪೂಜಾಸ್ತುತ್ಯಭಿವನ್ದನೈಃ ।**
**ಭೂತೇಷು ಮದ್ಭಾವನಯಾ ಸತ್ತ್ವೇನಾಸಙ್ಗಮೇನ ಚ ॥ 16 ॥**

**ಮಹತಾಂ ಬಹುಮಾನೇನ ದೀನಾನಾಮನುಕಮ್ಪಯಾ ।**
**ಮೈತ್ರ್ಯಾ ಚೈವಾಽಽತ್ಮತುಲ್ಯೇಷು ಯಮೇನ ನಿಯಮೇನ ಚ ॥ 17 ॥**

**ಆಧ್ಯಾತ್ಮಿಕಾನುಶ್ರವಣಾನ್ನಾಮಸಙ್ಕೀರ್ತನಾಚ್ಚ ಮೇ ।**
**ಆರ್ಜವೇನಾರ್ಯಸಙ್ಗೇನ ನಿರಹಙ್ಕ್ರಿಯಯಾ ತಥಾ ॥ 18 ॥**

**ಮದ್ಧರ್ಮಣೋ ಗುಣೈರೇತೈಃ ಪರಿಸಂಶುದ್ಧ ಆಶಯಃ ।**
**ಪುರುಷಸ್ಯಾಞ್ಜಸಾಽಭ್ಯೇತಿ ಶ್ರುತಮಾತ್ರಗುಣಂ ಹಿ ಮಾಮ್ ॥ 19 ॥**

15–19. ನಿಷ್ಕಾಮನಾಗಿ ಸ್ವಧರ್ಮವನ್ನು ಸೇವಿಸುವ ಅಲ್ಪಹಿಂಸೆಯ ಮಹಾಪ್ರಶಸ್ತ ಕರ್ಮಯೋಗದಿಂದಲೂ ನನ್ನ ಪ್ರತಿಮೆಗಳ ದರ್ಶನ, ಸ್ಪರ್ಶ, ಪೂಜೆ, ಸ್ತುತಿ, ನಮಸ್ಕಾರಗಳಿಂದಲೂ; ಪ್ರಾಣಿಗಳಲ್ಲಿ ಭಗವದ್ಭಾವನೆಯನ್ನು ಮಾಡುವದರಿಂದಲೂ; ಧೈರ್ಯದಿಂದಲೂ ಅಸಂಗದಿಂದಲೂ ದೊಡ್ಡವರಲ್ಲಿ ಗೌರವ, ದೀನರಲ್ಲಿ ಕನಿಕರ, ಸಮರಲ್ಲಿ ಮೈತ್ರಿ, ಯಮ ನಿಯಮಗಳು, ಆಧ್ಯಾತ್ಮಿಕ ಶ್ರವಣ, ನಾಮಕೀರ್ತನ, ಸರಳತನ, ಆರ್ಯರ ಸಂಗ, ನಿರಹಂಕಾರ – ಇಂಥ ಭಾಗವತಧರ್ಮಗಳಿಂದ ಚಿತ್ತವು ಪರಿಶುದ್ಧವಾಗಿ ಭಗವದ್ಗುಣಶ್ರವಣಮಾತ್ರದಿಂದ ಭಗವಂತನನ್ನು ಸೇರಿಬಿಡುವದು.

******

## ಭಕ್ತಿಯೋಗದ ಶ್ರೇಷ್ಠತೆ

(ಮೂರನೆಯ ಸ್ಕಂಧ, ಮೂವತ್ತೆರಡನೆಯ ಅಧ್ಯಾಯ)

**ತಸ್ಮಾತ್ತ್ವಂ ಸರ್ವಭಾವೇನ ಭಜಸ್ವ ಪರಮೇಷ್ಠಿನಮ್ ।**
**ತದ್ಗುಣಾಶ್ರಯಯಾ ಭಕ್ತ್ಯಾ ಭಜನೀಯಪದಾಮ್ಬುಜಮ್ ॥ 22 ॥**

22. ಕಪಿಲಭಗವಂತನು ಹೇಳಿದನೇನೆಂದರೆ: ತಾಯೆ, ಭಜನೀಯವಾದ

ಪಾದಪದ್ಮಗಳುಳ್ಳ ನೀನು ಆ ಭಗವಂತನನ್ನೂ ಆತನ ಗುಣಗಳನ್ನು ಆಶ್ರಯಿಸಿಕೊಂಡಿರುವ ಭಕ್ತಿಯಿಂದ ಸರ್ವಭಾವದಿಂದಲೂ ಭಜಿಸುತ್ತಿರು.

**ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।**
**ಜನಯತ್ಯಾಶು ವೈರಾಗ್ಯಂ ಜ್ಞಾನಂ ಯದ್ಬ್ರಹ್ಮದರ್ಶನಮ್ ॥ 23 ॥**

23. ವಾಸುದೇವಭಗವಂತನಲ್ಲಿ ಮಾಡಿದ ಭಕ್ತಿಯೋಗವು ಬೇಗನೆ ವೈರಾಗ್ಯವನ್ನೂ ಬ್ರಹ್ಮಸಾಕ್ಷಾತ್ಕಾರರೂಪವಾದ ಜ್ಞಾನವನ್ನೂ ಉಂಟುಮಾಡುತ್ತದೆ.

**ಯದಾಽಸ್ಯ ಚಿತ್ತಿಮರ್ಥೇಷು ಸಮೇಷ್ವಿನ್ದ್ರಿಯವೃತ್ತಿಭಿಃ ।**
**ನ ವಿಗೃಹ್ಣಾತಿ ವೈಷಮ್ಯಂ ಪ್ರಿಯಮಪ್ರಿಯಮಿತ್ಯುತ ॥ 24 ॥**

**ಸ ತದೈವಾಽಽತ್ಮನಾಽಽತ್ಮಾನಂ ನಿಃಸಙ್ಗಂ ಸಮದರ್ಶನಮ್ ।**
**ಹೇಯೋಪಾದೇಯರಹಿತಮಾರೂಢಂ ಪದಮೀಕ್ಷತೇ ॥ 25 ॥**

24–25. ಯಾವಾಗ ತನ್ನ ಚಿತ್ತವು ಯಾವ ವಸ್ತುಗಳಲ್ಲಿಯೂ ಇದು ಪ್ರಿಯವು, ಇದು ಅಪ್ರಿಯವು – ಎಂಬ ವೈಷಮ್ಯವನ್ನು ಇಂದ್ರಿಯವೃತ್ತಿಗಳಿಂದ ಗ್ರಹಿಸದೆ ಇರುವದೋ ಅವನು ಆಗಲೆ ನಿಸ್ಸಂಗವೂ ಸಮದರ್ಶನವುಳ್ಳದ್ದೂ ಆಗಿ, ಬಿಡತಕ್ಕದ್ದಾಗಲಿ ತೆಗೆದುಕೊಳ್ಳತಕ್ಕದ್ದಾಗಲಿ ಇಲ್ಲದ ಆರೂಢಸ್ಥಿತಿಯ ಪರಮಾತ್ಮತತ್ತ್ವವನ್ನು ತಾನೇ ಕಂಡುಕೊಳ್ಳುವನು.

**ಜ್ಞಾನಮಾತ್ರಂ ಪರಂ ಬ್ರಹ್ಮ ಪರಮಾತ್ಮೇಶ್ವರಃ ಪುಮಾನ್ ।**
**ದೃಶ್ಯಾದಿಭಿಃ ಪೃಥಗ್ಭಾವೈರ್ಭಗವಾನೇಕ ಈಯತೇ ॥ 26 ॥**

26. ಚೈತನ್ಯಮಾತ್ರವೇ ಪರಬ್ರಹ್ಮವು, ಪರಮಾತ್ಮನು ಈಶ್ವರನು, ಪುರುಷನು. ಆ ಭಗವಂತನೊಬ್ಬನೇ ದೃಶ್ಯವೇ–ಮುಂತಾದ ಬೇರೆಬೇರೆಯ ಪದಾರ್ಥಗಳ ರೂಪಗಳಿಂದ ತಿಳಿಯಬರುತ್ತಿರುವನು.

**ಏತಾವಾನೇವ ಯೋಗೇನ ಸಮಗ್ರೇಣೇಹ ಯೋಗಿನಃ ।**
**ಯುಜ್ಯತೇಽಭಿಮತೋ ಹ್ಯರ್ಥೋ ಯದಸಙ್ಗಸ್ತು ಕೃತ್ಸ್ನಶಃ ॥ 27 ॥**

27. ಎಲ್ಲದರಲ್ಲಿಯೂ ಅಸಂಗವಾಗಿರುವದೆಂಬುದಿಷ್ಟೇ ಯೋಗಿಯಾದವನಿಗೆ ಯೋಗದಿಂದ ಪಡೆಯಬೇಕಾಗಿರುವ ಇಷ್ಟಾರ್ಥವೆಂಬುದು.

**ಜ್ಞಾನಮೇಕಂ ಪರಾಚೀನೈರಿನ್ದ್ರಿಯೈರ್ಬ್ರಹ್ಮ ನಿರ್ಗುಣಮ್ ।**
**ಅವಭಾತ್ಯರ್ಥರೂಪೇಣ ಭ್ರಾನ್ತ್ಯಾ ಶಬ್ದಾದಿಧರ್ಮಿಣಾ ॥ 28 ॥**

28. ಕೇವಲ ಜ್ಞಾನಮಾತ್ರವಾಗಿರುವ ನಿರ್ಗುಣಬ್ರಹ್ಮವು ಹೊರಮುಖವಾಗಿರುವ ಇಂದ್ರಿಯಗಳ ನಿಮಿತ್ತದಿಂದ ಶಬ್ದಾದಿಧರ್ಮಗಳುಳ್ಳ ಅರ್ಥರೂಪವುಳ್ಳದ್ದಾಗಿ ಭ್ರಾಂತಿಯಿಂದ ತೋರುತ್ತಿರುತ್ತದೆ.

**ಯಥಾ ಮಹಾನಹಂರೂಪಸ್ತ್ರಿವೃತ್ಪಞ್ಚವಿಧಃ ಸ್ವರಾಟ್ ।**
**ಏಕಾದಶವಿಧಸ್ತಸ್ಯ ವಪುರಣ್ಡಂ ಜಗದ್ಯತಃ ॥ 29 ॥**

29. ಹೇಗೆಂದರೆ ಅದೇ ಮಹತ್ತು ವೈಕಾರಿಕರಾಜಸತಾಮಸಗಳೆಂಬ ಮೂರು ಬಗೆಯ ಅಹಂಕಾರ, ಐದು ಬಗೆಯ ಮಹಾಭೂತಗಳು, ಹನ್ನೊಂದು ವಿಧದ ಇಂದ್ರಿಯಗಳು, ಜೀವ (ಎಲ್ಲವೂ ಆಗಿರುತ್ತದೆ). ಆ (ಜೀವನ) ಶರೀರರೂಪವಾದ ಅಂಡವೂ ಅದರಿಂದಾದ ಜಗತ್ತೂ (ಎಲ್ಲವೂ ಅದೇ).

**ಏತದ್ವೈ ಶ್ರದ್ಧಯಾ ಭಕ್ತ್ಯಾ ಯೋಗಾಭ್ಯಾಸೇನ ನಿತ್ಯಶಃ ।**
**ಸಮಾಹಿತಾತ್ಮಾ ನಿಃಸಙ್ಗೋ ವಿರಕ್ತ್ಯಾ ಪರಿಪಶ್ಯತಿ ॥ 30 ॥**

30. ಈ ತತ್ತ್ವವನ್ನು ಶ್ರದ್ಧೆಯಿಂದಲೂ ಭಕ್ತಿಯಿಂದಲೂ ನಿತ್ಯವೂ ಮಾಡುವ ಯೋಗಾಭ್ಯಾಸದಿಂದಲೂ ಸಮಾಹಿತಾಂತಃಕರಣನಾಗಿ ನಿಸ್ಸಂಗನಾದವನು ವಿರಕ್ತಿಯಿಂದ ಕಂಡುಕೊಳ್ಳುವನು.

**ಇತ್ಯೇತತ್ಕಥಿತಂ ಗುರ್ವಿ ಜ್ಞಾನಂ ತದ್ಬ್ರಹ್ಮದರ್ಶನಮ್ ।**
**ಯೇನಾನುಬುಧ್ಯತೇ ತತ್ತ್ವಂ ಪ್ರಕೃತೇಃ ಪುರುಷಸ್ಯ ಚ ॥ 31 ॥**

31. ತಾಯೆ, ಬ್ರಹ್ಮಸಾಕ್ಷಾತ್ಕಾರರೂಪವಾದ ಈ ಜ್ಞಾನವನ್ನು ಹೇಳಿರುತ್ತೇನೆ. ಇದರಿಂದ ಪ್ರಕೃತಿಯ ಮತ್ತು ಪುರುಷನ ತತ್ತ್ವವನ್ನು ತಿಳಿದುಕೊಳ್ಳಬಹುದು.

*****

## ಧ್ರುವನುಮಾಡಿದ ಭಗವತ್ಸ್ತುತಿ

### (ನಾಲ್ಕನೆಯ ಸ್ಕಂಧ, ಒಂಬತ್ತನೆಯ ಅಧ್ಯಾಯ)

**ಯೋಽನ್ತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ**
**ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।**
**ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್**
**ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥ 6 ॥**

6. ಧ್ರುವನು ಭಗವಂತನನ್ನು ಸ್ತೋತ್ರಮಾಡಿದನೆಂತೆಂದರೆ: ಸರ್ವಶಕ್ತಿಗಳನ್ನೂ ಧರಿಸಿರುವನಾದ, ತನ್ನ ಶಕ್ತಿಯಿಂದಲೇ ನನ್ನ ಈ ಗಾಢನಿದ್ರೆಯಲ್ಲಿರುವ ವಾಣಿಯನ್ನು ಜೀವಕಳೆಯುಳ್ಳದ್ದನ್ನಾಗಿ ಮಾಡುತ್ತಿರುವ, ಪಾಣಿಪಾದಶ್ರೋತ್ರತ್ವಕ್ಕು ಮುಂತಾದ ಮಿಕ್ಕ ಇಂದ್ರಿಯಗಳನ್ನೂ ಸಚೇತನಗೊಳಿಸುತ್ತಿರುವ ಭಗವಂತನಾದ ಪುರುಷನೆ, ನಿನಗೆ ನಮಸ್ಕಾರ!

**ಏಕಸ್ತ್ವಮೇವ ಭಗವನ್ನಿದಮಾತ್ಮಶಕ್ತ್ಯಾ**
**ಮಾಯಾಖ್ಯಯೋರುಗುಣಯಾ ಮಹದಾದ್ಯಶೇಷಮ್ ।**
**ಸೃಷ್ಟ್ವಾಽನುವಿಶ್ಯ ಪುರುಷಸ್ತದಸದ್ಗುಣೇಷು**
**ನಾನೇವ ದಾರುಷು ವಿಭಾವಸುವದ್ವಿಭಾಸಿ ॥ 7 ॥**

7. ಎಲೈ ಭಗವಂತನೆ, ನೀನೊಬ್ಬನೇ ಇದ್ದುಕೊಂಡು, ಮಾಯೆ ಎಂಬ ಈ ನಿನ್ನ ಗುಣಮಯವಾದ ಶಕ್ತಿಯಿಂದ ಮಹತ್ತೇ ಮುಂತಾದದ್ದೆಲ್ಲವನ್ನೂ ಸೃಷ್ಟಿಮಾಡಿ ಪುರುಷನಾಗಿ ಅದರ ಒಳಹೊಕ್ಕು, ಆ ಶಕ್ತಿಯ ಅಸದ್ರೂಪವಾದ ಗುಣಗಳಾದ ಇಂದ್ರಿಯಾದಿಗಳಲ್ಲಿ, ಬಗೆ ಬಗೆಯ ಕಟ್ಟಿಗೆಗಳಲ್ಲಿ ಬೆಂಕಿಯು ಬೇರೆಬೇರೆಯಾಗಿ ತೋರುವಂತೆ, ನಾನಾರೂಪದಿಂದಿರುವವನಾಗಿ, ತೋರುತ್ತಿರುವೆ.

**ತ್ವದ್ದತ್ತಯಾ ವಯುನಯೇದಮಚಷ್ಟ ವಿಶ್ವಂ**
**ಸುಪ್ತಪ್ರಬುದ್ಧ ಇವ ನಾಥ ಭವತ್ಪ್ರಪನ್ನಃ ।**
**ತಸ್ಯಾಪವರ್ಗ್ಯಶರಣಂ ತವ ಪಾದಮೂಲಂ**
**ವಿಸ್ಮರ್ಯತೇ ಕೃತವಿದಾ ಕಥಮಾರ್ತಬನ್ಧೋ ॥ 8 ॥**

8. ನಿನ್ನನ್ನು ಶರಣುಹೊಂದಿದಾತನು, ನಿದ್ರಿಸುತ್ತಿದ್ದು ಎಚ್ಚತ್ತವನಂತೆ, ನೀನು

ಇತ್ತಿರುವ ಅರಿವಿನಿಂದಲೇ ಇವೆಲ್ಲವನ್ನೂ ಅರಿಯುತ್ತಾನೆ. ಎಲೈ ಆರ್ತಬಂಧುವೆ, ಅಂಥ ನಿನ್ನ, ಮುಕ್ತರಿಗೆಲ್ಲ ಶರಣಸ್ಥಾನವಾದ, ಪಾದತಲವನ್ನು, ಯಾವ ಕೃತಜ್ಞನು ತಾನೆ ಮರೆತಾನು?

**ನೂನಂ ವಿಮೃಷ್ಟಮತಯಸ್ತವ ಮಾಯಯಾ ತೇ**
**ಯೇ ತ್ವಾಂ ಭವಾಪ್ಯಯವಿಮೋಕ್ಷಣಮನ್ಯಹೇತೋಃ ।**
**ಅರ್ಚನ್ತಿ ಕಲ್ಪಕತರುಂ ಕುಣಪೋಪಭೋಗ್ಯ –**
**ಮಿಚ್ಛನ್ತಿ ಯತ್ಸ್ಪರ್ಶಜಂ ನಿರಯೇಽಪಿ ನೃಣಾಮ್ ॥ 9 ॥**

9. ದೇವ, ಯಾರು ಜನನಮರಣಗಳಿಂದ ಬಿಡುಗಡೆಯನ್ನು ಮಾಡಿಸಬಲ್ಲ ಕಲ್ಪವೃಕ್ಷದಂತಿರುವ ನಿನ್ನನ್ನು ಮತ್ತೊಂದಕ್ಕಾಗಿ ಅರ್ಚಿಸುತ್ತಾರೋ, (ಆ ಅರ್ಚನೆಯ ಫಲವಾಗಿ) ಈ ಶವಸಮಾನವಾದ ದೇಹದ ಉಪಭೋಗ್ಯವಸ್ತುವನ್ನು ಇಂದ್ರಿಯಸಂಸ್ಪರ್ಶದಿಂದ ಸಿಕ್ಕುವ ಯಾವದರ ಭೋಗವು ನರಕದಲ್ಲಿಯೂ ಇದ್ದೇ ಇರುವದೋ ಅದನ್ನು – ಬಯಸುತ್ತಿರುವರೋ, ಅಂಥವರ ಬುದ್ಧಿಯು ನಿಜವಾಗಿ ನಿನ್ನ ಮಾಯೆಯಿಂದ ವಂಚಿತವಾಗಿರುತ್ತದೆ ಎನ್ನಬೇಕು.

**ಯಾ ನಿರ್ವೃತಿಸ್ತನುಭೃತಾಂ ತವ ಪಾದಪದ್ಮ–**
**ಧ್ಯಾನಾದ್ಭವಜ್ಜನಕಥಾಶ್ರವಣೇನ ವಾ ಸ್ಯಾತ್ ।**
**ಸಾ ಬ್ರಹ್ಮಣಿ ಸ್ವಮಹಿಮನ್ಯಪಿ ನಾಥ ಮಾ ಭೂತ್**
**ಕಿಂ ತ್ವನ್ತಕಾಸಿಲುಲಿತಾತ್ಪತತಾಂ ವಿಮಾನಾತ್ ॥ 10 ॥**

10. ಎಲೈ ನಾಥನೆ, ನಿನ್ನ ಪಾದಕಮಲಗಳ ಧ್ಯಾನದಿಂದ, ಅಥವಾ, ನಿನ್ನ ಭಕ್ತಜನರ ಪವಿತ್ರಕಥೆಯನ್ನು ಕೇಳುವದರಿಂದ, ಯಾವ ಸುಖವು ಜನರಿಗೆ ಉಂಟಾಗುವದೋ, ಅದು ತನ್ನ ಮಹಿಮೆಯಲ್ಲಿ ತಾನು ನಿಂತಿರುವ ಬ್ರಹ್ಮದಲ್ಲಿಯೂ ಸಿಕ್ಕಲಾರದು. ಕಾಲನ ಕತ್ತಿಯಿಂದ ಕಡಿದುಹೋಗಿ ಕೆಳಕ್ಕುರುಳಿದ ವಿಮಾನದಿಂದ ಕೆಳಕ್ಕೆ ಬೀಳುವ ಜನರಿಗೆ ಸಿಕ್ಕಲಾರದೆಂಬುದನ್ನು ಹೇಳತಕ್ಕದ್ದೇನಿದೆ?

**ಭಕ್ತಿಂ ಮುಹುಃ ಪ್ರವಹತಾಂ ತ್ವಯಿ ಮೇ ಪ್ರಸಙ್ಗೋ**
**ಭೂಯಾದನನ್ತಮಹತಾಮಮಲಾಶಯಾನಾಮ್ ।**
**ಯೇನಾಞ್ಜಸೋಲ್ಬಣಮುರುವ್ಯಸನಂ ಭವಾಬ್ಧಿಂ**
**ನೇಷ್ಯೇ ಭವದ್ಗುಣಕಥಾಮೃತಪಾನಮತ್ತಃ ॥ 11 ॥**

11. ಎಲೈ ಅನಂತನೆ, ನಿನ್ನಲ್ಲಿ ಭಕ್ತಿಯನ್ನು ಮತ್ತೆಮತ್ತೆ ಹರಿಯಿಸುತ್ತಿರುವ ನಿರ್ಮಲ ಹೃದಯದ ಸಂಗವು ನನಗೆ ಆಗಲಿ! ಅದರಿಂದ ನಿನ್ನ ಗುಣ, ಕಥೆ – ಎಂಬೀ ಅಮೃತವನ್ನು ಕುಡಿದು ಮತ್ತನಾಗಿ, ಅನೇಕ ದುಃಖಗಳ ಈ ಸಂಸಾರ ಸಾಗರವನ್ನು ದಾಟಿಯೇನು!

**ತೇ ನ ಸ್ಮರನ್ತ್ಯತಿತರಾಂ ಪ್ರಿಯಮೀಶ ಮರ್ತ್ಯಂ**
**ಯೇ ಚಾನ್ವದಃ ಸುತಸುಹೃದ್ಗೃಹವಿತ್ತದಾರಾಃ ।**
**ಯೇ ತ್ವಬ್ಜನಾಭ ಭವದೀಯಪದಾರವಿನ್ದ–**
**ಸೌಗನ್ಧ್ಯಲುಬ್ಧಹೃದಯೇಷು ಕೃತಪ್ರಸಙ್ಗಾಃ ॥ 12 ॥**

12. ಎಲೈ ಕಮಲನಾಭನೆ, ಯಾರು ನಿನ್ನ ಪಾದಕಮಲದ ಪರಿಮಳದಲ್ಲಿಯೇ ಆಶೆಯುಳ್ಳ ಹೃದಯದವರ ಸಂಗವನ್ನು ಮಾಡಿಕೊಂಡಿರುವರೋ, ಅವರು ಈ ಅತ್ಯಂತಪ್ರಿಯವಾದ ಮರ್ತ್ಯಶರೀರ ಮತ್ತು ಇದಕ್ಕೆ ಸಂಬಂಧಸಿರುವ ಮಕ್ಕಳು, ಸ್ನೇಹಿತರು, ಮನೆ, ಧನ, ಸ್ತ್ರೀ – ಮುಂತಾದವುಗಳ ಸ್ಮರಣೆಯನ್ನು ಮಾಡುವದಿಲ್ಲ.

**ತಿರ್ಯಙ್ನಗದ್ವಿಜಸರೀಸೃಪದೇವದೈತ್ಯ–**
**ಮರ್ತ್ಯಾದಿಭಿಃ ಪರಿಚಿತಂ ಸದಸದ್ವಿಶೇಷಮ್ ।**
**ರೂಪಂ ಸ್ಥವಿಷ್ಠಮಜ ತೇ ಮಹದಾದ್ಯನೇಕಂ**
**ನಾತಃ ಪರಂ ಪರಮ ವೇದ್ಮಿ ನ ಯತ್ರ ವಾದಃ ॥ 13 ॥**

13. ತಿರ್ಯಗ್ಜಂತುಗಳು, ಮರಗಳು, ಹಕ್ಕಿಗಳು, ಹಾವುಹಲ್ಲಿಗಳು, ದೇವತೆಗಳು, ದೈತ್ಯರು, ಮನುಷ್ಯರು – ಇವರೇ ಮುಂತಾದವರಲ್ಲಿ ಕಂಡುಬರುವ ಮಹದಾದಿಗಳಿಂದಾಗಿರುವ ಇದೆಲ್ಲ ನಿನ್ನ ಸ್ಥೂಲರೂಪವು. ಇದಕ್ಕಿಂತಲೂ ಆಚೆಯಿರುವ ನಿನ್ನ ವಾಗಗೋಚರವಾದ ಪರಮರೂಪವನ್ನು ಮಾತ್ರ ನಾನರಿಯೆನು.

**ಕಲ್ಪಾನ್ತ ಏತದಖಿಲಂ ಜಠರೇಣ ಗೃಹ್ಣನ್**
**ಶೇತೇ ಪುಮಾನ್ ಸ್ವದೃಗನನ್ತಸಖಸ್ತದಙ್ಕೇ ।**
**ಯನ್ನಾಭಿಸಿನ್ಧುರುಹಕಾಞ್ಚನಲೋಕಪದ್ಮ–**
**ಗರ್ಭೇ ದ್ಯುಮಾನ್ ಭಗವತೇ ಪ್ರಣತೋಽಸ್ಮಿ ತಸ್ಮೈ ॥ 14 ॥**

14. ಭಗವಂತನೆ, ಕಲ್ಪಾಂತದಲ್ಲಿ ಈ ಜಗತ್ತೆಲ್ಲವನ್ನೂ ತನ್ನ ಹೊಟ್ಟೆಯೊಳಗೆ ಅಡಿಗಿಸಿಕೊಂಡು ಅನಂತಸಖನಾಗಿ ಆತನ ಮೇಲೆ ಯಾವ ಪರಮಪುರುಷನು

ನಿದ್ರಿಸುತ್ತಿರುವವನೋ, ಯಾವಾತನ ನಾಭಿಸಮುದ್ರದಿಂದ ಪ್ರಕಟವಾದ ಕಾಂಚನವರ್ಣದ ಲೋಕಕಮಲದಿಂದ ಪ್ರಕಾಶಮಯನಾದ ಬ್ರಹ್ಮನು ಹುಟ್ಟುವನೋ, ಅಂಥ ನಿನಗೆ ನಮಸ್ಕಾರ!

**ತ್ವಂ ನಿತ್ಯಮುಕ್ತಪರಿಶುದ್ಧವಿಬುದ್ಧ ಆತ್ಮಾ**
**ಕೂಟಸ್ಥ ಆದಿಪುರುಷೋ ಭಗವಾಂಸ್ತ್ರ್ಯಧೀಶಃ ।**
**ಯದ್ಬುದ್ಧ್ಯವಸ್ಥಿತಿಮಖಣ್ಡಿತಯಾ ಸ್ವದೃಷ್ಟ್ಯಾ**
**ದ್ರಷ್ಟಾ ಸ್ಥಿತಾವಧಿಮಖೋ ವ್ಯತಿರಿಕ್ತ ಆಸ್ಸೇ ॥ 15 ॥**

15. ನೀನು ನಿತ್ಯಶುದ್ಧಬುದ್ಧಮುಕ್ತನಾದ ಆತ್ಮನು, ನಿರ್ವಿಕಾರ ಸ್ವರೂಪನು, ಆದಿಪುರುಷನು, ಭಗವಂತನು, ಮೂರುಲೋಕಕ್ಕೂ ಒಡೆಯನು, ಅಖಂಡವಾದ ನಿನ್ನ ಚಿನ್ಮಯ ದೃಷ್ಟಿಯಿಂದ ಬುದ್ಧಿಯ ಅವಸ್ಥೆಗಳನ್ನೆಲ್ಲ ನೋಡುತ್ತಿರುವವನು, ಕರ್ಮಾಧ್ಯಕ್ಷನಾಗಿರುವವನು, ಸರ್ವಕ್ಕೂ ವಿಲಕ್ಷಣನಾಗಿರುವವನೂ ಆಗಿರುವೆ.

**ಯಸ್ಮಿನ್ನಿರುದ್ಧಗತಯೋ ಹ್ಯನಿಶಂ ಪತನ್ತಿ**
**ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾತ್ ।**
**ತದ್ಬ್ರಹ್ಮ ವಿಶ್ವಭವಮೇಕಮನನ್ತಮಾದ್ಯ-**
**ಮಾನನ್ದ ಮಾತ್ರಮವಿಕಾರಮಹಂ ಪ್ರಪದ್ಯೇ ॥ 16 ॥**

16. ಇಂಥ ನಿನ್ನಲ್ಲಿ ವಿದ್ಯೆಯೇ ಮುಂತಾದ ವಿಧವಿಧವಾದ ಶಕ್ತಿಗಳು ಒಂದರ ಹಿಂದೊಂದು ತಡೆಗಟ್ಟಿದ ಗತಿಯುಳ್ಳವಾಗಿ ಬಂದು ತೋರಿಕೊಳ್ಳುತ್ತಿರುವವು. ವಿಶ್ವಕ್ಕೆಲ್ಲಾ ಮೂಲವಾದ, ಅದ್ವಿತೀಯವೂ ಅನಂತವೂ ಸರ್ವಕ್ಕೂ ಆದಿಯೂ ಆನಂದರೂಪವೂ ಆಗಿರುವ ಆ ನಿನ್ನ ವಿಕಾರರಹಿತಬ್ರಹ್ಮಸ್ವರೂಪವನ್ನು ಶರಣುಹೊಕ್ಕಿರುವೆನು.

**ಸತ್ಯಾಶಿಷೋ ಹಿ ಭಗವಂಸ್ತವ ಪಾದಪದ್ಮ**
**ಮಾಶೀಸ್ತಥಾನುಭಜತಃ ಪುರುಷಾರ್ಥಮೂರ್ತೇಃ ।**
**ಅಪ್ಯೇವಮಾರ್ಯ ಭಗವಾನ್ ಪರಿಪಾತಿ ದೀನಾ-**
**ನ್ವಾಸ್ರೇವ ವತ್ಸಕಮನುಗ್ರಹಕಾತರೋಽಸ್ಮಾನ್ ॥ 17 ॥**

17. ಪುರುಷಾರ್ಥಮೂರ್ತಿಯಾದ ನಿನ್ನ ಪಾದಪದ್ಮವೇ, ಹಾಗೆಂದು ತಿಳಿದು ಭಜಿಸುವವರಿಗೆ ಸಕಲಕಾಮನೆಗಳಿಗಿಂತಲೂ ಹೆಚ್ಚಿನ ಸತ್ಯವಾದ

ಪುರುಷಾರ್ಥವಾಗಿರುವದು. ಹೀಗಿದ್ದರೂ, ಎಲೈ ಉದಾರಸ್ವಭಾವನೆ, ನೀನು ಕಾಮಗಳಿಂದ ದೀನರಾಗಿರುವ ನಮ್ಮಗಳನ್ನು ಅನುಗ್ರಹಿಸುವದರಲ್ಲಿ ಹಸುವು ತನ್ನ ಕರುವಿನ ವಿಷಯದಲ್ಲಿರುವಂತೆ – ಕಾತರನಾಗಿರುತ್ತೀಯೆ!

*****

## ಪೃಥುರಾಜನಿಗೆ ಭಗವಂತನ ಉಪದೇಶ

### (ನಾಲ್ಕನೆಯ ಸ್ಕಂಧ, ಇಪ್ಪತ್ತನೆಯ ಅಧ್ಯಾಯ)

**ಸುಧಿಯಃ ಸಾಧವೋ ಲೋಕೇ ನರದೇವ ನರೋತ್ತಮಾಃ ।**
**ನಾಭಿದ್ರುಹ್ಯನ್ತಿ ಭೂತೇಭ್ಯೋ ಯರ್ಹಿ ನಾತ್ಮಾ ಕಲೇವರಮ್ ॥ 3 ॥**

3. ಭಗವಂತನು ಪೃಥುರಾಜನನ್ನು ಕುರಿತು ಇಂತೆಂದನು: ಈ ಶರೀರವು ಆತ್ಮನಲ್ಲವೆಂದು ಯಾವಾಗ ಆಯಿತೋ ಅದನ್ನರಿತಾಗ ಉತ್ತಮಪುರುಷರೂ ವಿವೇಕಿಗಳೂ ಆದ ಸಾಧುಗಳು ಈ ಲೋಕದಲ್ಲಿ ಯಾವ ಪ್ರಾಣಿಗಳಿಗೂ ದ್ರೋಹವನ್ನೆಸಗದೆ ಇರುವರು.

**ಅತಃ ಕಾಯಮಿಮಂ ವಿದ್ವಾನವಿದ್ಯಾಕಾಮಕರ್ಮಭಿಃ ।**
**ಆರಬ್ಧ ಇತಿ ನೈವಾಸ್ಮಿನ್ ಪ್ರತಿಬುದ್ಧೋಽನುಷಜ್ಜತೇ ॥ 5 ॥**

5. ಆದ್ದರಿಂದ ಈ ಶರೀರವು ಅವಿದ್ಯಾ, ಕಾಮ, ಕರ್ಮ – ಇವುಗಳಿಂದ ಆದದ್ದೆಂದು ತಿಳಿದುಕೊಂಡ ಜ್ಞಾನಿಯು ಇದರಲ್ಲಿ ಆಸಕ್ತನಾಗದೆ ಇರುತ್ತಾನೆ.

**ಅಸಂಸಕ್ತಃ ಶರೀರೇಽಸ್ಮಿನ್ನಮುನೋತ್ಪಾದಿತೇ ಗೃಹೇ ।**
**ಅಪತ್ಯೇ ದ್ರವಿಣೇ ವಾಪಿ ಕಃ ಕುರ್ಯಾನ್ಮಮತಾಂ ಬುಧಃ ॥ 6 ॥**

6. ಈ ಶರೀರದಲ್ಲಿ ಆಸಕ್ತಿಯಿಲ್ಲದಿರುವ ಯಾವ ವಿವೇಕಿಯುತಾನೆ ಇದರಿಂದ ಉಂಟಾಗಿರುವ ಮನೆ, ಮಕ್ಕಳು, ಅಥವಾ ದ್ರವ್ಯ – ಇವುಗಳಲ್ಲಿ ಮಮತೆಯನ್ನು ಮಾಡಿಕೊಂಡಾನು?

**ಏಕಃ ಶುದ್ಧಃ ಸ್ವಯಂಜ್ಯೋತಿರ್ನಿರ್ಗುಣೋಽಸೌ ಗುಣಾಶ್ರಯಃ ।**
**ಸರ್ವಗೋಽನಾವೃತಃ ಸಾಕ್ಷೀ ನಿರಾತ್ಮಾತ್ಮಾಽಽತ್ಮನಃ ಪರಃ ॥ 7 ॥**

7. ಈ ಆತ್ಮನು ಏಕನು, ಶುದ್ಧನು, ಸ್ವಯಂಪ್ರಕಾಶನು ನಿರ್ಗುಣನು,

ಗುಣಗಳಿಗೆ ಆಶ್ರಯನಾಗಿರುವಾತನು. ಸರ್ವವ್ಯಾಪಕನು, ಯಾವ ಆವರಣವೂ ಇಲ್ಲದವನು, ಸಾಕ್ಷಿಯು, ತನಗೆ ಮತ್ತೊಬ್ಬ ಆತ್ಮನಿಲ್ಲದೆ ಆತ್ಮನು, ದೇಹಾದಿರೂಪನಾದ ಮಿಥ್ಯಾತ್ಮನಿಗಿಂತಲೂ ವಿಲಕ್ಷಣನು.

**ಯ ಏವಂ ಸನ್ತಮಾತ್ಮಾನಮಾತ್ಮಸ್ಥಂ ವೇದ ಪೂರುಷಃ ।**
**ನಾಜ್ಯತೇ ಪ್ರಕೃತಿಸ್ಥೋಽಪಿ ತದ್ಗುಣೈಃ ಸ ಮಯಿ ಸ್ಥಿತಃ ॥ 8 ॥**

8. ಯಾವ ಮನುಷ್ಯನು ಹೀಗಿರುವ ಆತ್ಮನು ತನ್ನ ಆತ್ಮರೂಪದಿಂದ ಇರುವನೆಂದು ಅರಿತುಕೊಂಡಿರುವನೋ ಅವನು ಪ್ರಕೃತಿಯ ಕಾರ್ಯವಾದ ದೇಹದಲ್ಲಿರುತ್ತಿದ್ದರೂ ನನ್ನಲ್ಲಿಯೇ ಇದ್ದುಕೊಂಡಿರುವದರಿಂದ ಆ ಪ್ರಕೃತಿಯ ಗುಣಗಳಿಂದ ಲಿಪ್ತನಾಗದೆ ಇರುವನು.

**ಯಃ ಸ್ವಧರ್ಮೇಣ ಮಾಂ ನಿತ್ಯಂ ನಿರಾಶೀಃ ಶ್ರದ್ಧಯಾನ್ವಿತಃ ।**
**ಭಜತೇ ಶನಕೈಸ್ತಸ್ಯ ಮನೋ ರಾಜನ್ ಪ್ರಸೀದತಿ ॥ 9 ॥**

9. ಎಲೈ ರಾಜನೆ, ಯಾವಾತನು ನಿತ್ಯವೂ ಫಲಾಸಕ್ತಿಯಿಲ್ಲದೆ ಶ್ರದ್ಧಾಯುಕ್ತನಾಗಿ ಸ್ವಧರ್ಮದಿಂದ ನನ್ನನ್ನು ಭಜಿಸುತ್ತಿರುವನೋ, ಅವನ ಮನಸ್ಸು ಮೆಲ್ಲಮೆಲ್ಲನೆ ನಿರ್ಮಲವಾಗುವದು.

**ಪರಿತ್ಯಕ್ತಗುಣಃ ಸಮ್ಯಗ್ದರ್ಶನೋ ವಿಮಲಾಶಯಃ ।**
**ಶಾನ್ತಿಂ ಮೇ ಸಮವಸ್ಥಾನಂ ಬ್ರಹ್ಮಕೈವಲ್ಯಮಶ್ನುತೇ ॥ 10 ॥**

10. ಶುದ್ಧಾಂತಃಕರಣನಾದವನು ಉತ್ತಮವಾದ ಜ್ಞಾನವನ್ನು ಹೊಂದಿ ತ್ರಿಗುಣಗಳನ್ನು ಮೀರಿದವನಾಗಿ, ನನ್ನ ರೂಪದಿಂದಲೇ ನಿಲ್ಲುವ ಬ್ರಹ್ಮಕೈವಲ್ಯವೆಂಬ ಶಾಂತಿಯನ್ನು ಪಡೆದುಕೊಳ್ಳುತ್ತಾನೆ.

**ಉದಾಸೀನಮಿವಾಧ್ಯಕ್ಷಂ ದ್ರವ್ಯಜ್ಞಾನಕ್ರಿಯಾತ್ಮನಾಮ್ ।**
**ಕೂಟಸ್ಥಮಿಮಮಾತ್ಮಾನಂ ಯೋ ವೇದಾಽಽಪ್ನೋತಿ ಶೋಭನಮ್ ॥ 11 ॥**

11. ವಿಷಯ, ಜ್ಞಾನ, ಕ್ರಿಯೆ, ಮನಸ್ಸು – ಇವುಗಳೆಲ್ಲವನ್ನೂ ಉದಾಸೀನನಂತೆ ನೋಡುತ್ತಿರುವ ಈ ಕೂಟಸ್ಥನಾದ ಆತ್ಮನನ್ನು ಯಾವನು ಅರಿತುಕೊಳ್ಳುವನೋ ಅವನು ಕಲ್ಯಾಣವನ್ನು ಹೊಂದುವನು.

**ಭಿನ್ನಸ್ಯ ಲಿಙ್ಗಸ್ಯ ಗುಣಪ್ರವಾಹೋ**
**ದ್ರವ್ಯಕ್ರಿಯಾಕಾರಕಚೇತನಾತ್ಮನಃ ।**
**ದೃಷ್ಟ್ವಾಸು ಸಂಪತ್ಸು ವಿಪತ್ಸು ಸೂರಯೋ**
**ನ ವಿಕ್ರಿಯನ್ತೇ ಮಯಿ ಬದ್ಧಸೌಹೃದಾಃ ॥ 12 ॥**

12. ಗುಣಪ್ರವಾಹರೂಪವಾದ ಈ ಸಂಸಾರವು ವಿಷಯ, ಕ್ರಿಯಾ, ಕಾರಕ, ಚಿದಾಭಾಸ – ಇವುಗಳ ರೂಪದಲ್ಲಿರುವ ಲಿಂಗಶರೀರಕ್ಕೇ ಸೇರಿದ್ದಾಗಿರುತ್ತದೆ, (ಆತ್ಮನಿಗಲ್ಲ.) ನನ್ನಲ್ಲಿಯೇ ದೃಢಭಕ್ತಿಯನ್ನಿಟ್ಟುಕೊಂಡಿರುವ ಜ್ಞಾನಿಗಳು ಸಂಪತ್ತುಗಳಾಗಲಿ ವಿಪತ್ತುಗಳಾಗಲಿ ಬಂದೊದಗಿದರೂ ಎಂದಿಗೂ ವಿಕಾರವನ್ನು ಹೊಂದದೆ ಇರುತ್ತಾರೆ.

******

## ಪ್ರಚೇತಸರಿಗೆ ನಾರದರ ಉಪದೇಶ

(ನಾಲ್ಕನೆಯ ಸ್ಕಂಧ, ಮೂವತ್ತೊಂದನೆಯ ಅಧ್ಯಾಯ)

**ತಜ್ಜನ್ಮ ತಾನಿ ಕರ್ಮಾಣಿ ತದಾಯುಸ್ತನ್ಮನೋ ವಚಃ ।**
**ನೃಣಾಂ ಯೇನೇಹ ವಿಶ್ವಾತ್ಮಾ ಸೇವ್ಯತೇ ಹರಿರೀಶ್ವರಃ ॥ 9 ॥**

9. ನಾರದರು ಪ್ರಚೇತಸರನ್ನು ಕುರಿತು ಇಂತೆಂದರು: ಎಲ್ಲಕ್ಕೂ ಆತ್ಮನಾಗಿರುವ ಈಶ್ವರನಾದ ಹರಿಯನ್ನು ಯಾವದರಿಂದ ಸೇವೆಮಾಡಲಾಗುತ್ತದೆಯೋ ಅದೇ ಜನ್ಮವು, ಅವೇ ಕರ್ಮಗಳು, ಅದೇ ಆಯುಸ್ಸು, ಅದೇ ಮನಸ್ಸು, ಅದೇ ವಾಕ್ಕು.

**ಕಿಂ ಜನ್ಮಭಿಸ್ತ್ರಿಭಿರ್ವೇಹ ಶೌಕ್ಲಸಾವಿತ್ರಯಾಜ್ಞಿಕೈಃ ।**
**ಕರ್ಮಭಿರ್ವಾ ತ್ರಯೀಪ್ರೋಕ್ತೈಃ ಪುಂಸೋಽಪಿ ವಿಬುಧಾಯುಷಾ ॥ 10 ॥**

**ಶ್ರುತೇನ ತಪಸಾ ವಾ ಕಿಂ ವಚೋಭಿಶ್ಚಿತ್ತವೃತ್ತಿಭಿಃ ।**
**ಬುದ್ಧ್ಯಾ ವಾ ಕಿಂ ನಿಪುಣಯಾ ಬಲೇನೇನ್ದ್ರಿಯರಾಧಸಾ ॥ 11 ॥**

**ಕಿಂ ವಾ ಯೋಗೇನ ಸಾಂಖ್ಯೇನ ನ್ಯಾಸಸ್ವಾಧ್ಯಾಯಯೋರಪಿ ।**
**ಕಿಂ ವಾ ಶ್ರೇಯೋಭಿರನ್ಯೈಶ್ಚ ನ ಯತ್ರಾತ್ಮಪ್ರದೋ ಹರಿಃ ॥ 12**

10–12. ಎಲ್ಲಿ ನಮ್ಮ ಆತ್ಮಸಾಕ್ಷಾತ್ಕಾರವನ್ನೇ ಕೊಡುವ ಶ್ರೀಹರಿಯ ಪ್ರಾಪ್ತಿ ಇರುವದಿಲ್ಲವೋ, ಅಂಥ ಶೌಕ್ಲ (ವಿಶುದ್ಧವಂಶದಲ್ಲಿ ಹುಟ್ಟುವ), ಸಾವಿತ್ರ (ಉಪನಯನಸಂಸ್ಕಾರದಿಂದಾಗುವ) ಮತ್ತು ಯಾಜ್ಞಿಕ (ಯಜ್ಞಕರ್ಮದಿಂದಾಗುವ) – ಈ ಮೂರು ಬಗೆಯ ಜನ್ಮಗಳಿಂದಾಗಲಿ ವೇದೋಕ್ತಕರ್ಮಗಳಿಂದಾಗಲಿ, ದೇವತೆಗಳ ದೀರ್ಘಾಯುಸ್ಸಿನಿಂದಾಗಲಿ ಮನುಷ್ಯನಿಗೆ ಆಗತಕ್ಕದ್ದೇನು? ಅಂಥ ಶಾಸ್ತ್ರಶ್ರವಣದಿಂದಾಗಲಿ ತಪಸ್ಸಿನಿಂದಾಗಲಿ ವಾಗ್ವೈಖರಿಯಿಂದಾಗಲಿ ಬಗೆಬಗೆಯ ತಿಳಿವಳಿಕೆಯಿಂದಾಗಲಿ ನಿಪುಣತರವಾದ ಬುದ್ಧಿಯಿಂದಾಗಲಿ, ಬಲದಿಂದಾಗಲಿ ಇಂದ್ರಿಯಪಾಟವದಿಂದಾಗಲಿ ಆಗಬೇಕಾದದ್ದೇನು? ಅಂಥ ಯೋಗ, ಸಾಂಖ್ಯ, ಸಂನ್ಯಾಸ, ವೇದಾಧ್ಯಯನ –ಇವುಗಳಿಂದಾದರೂ ಆಗಬೇಕಾದದ್ದೇನಿದೆ? ಅಥವಾ ಮತ್ತಿತರ ಶ್ರೇಯಃಫಲಗಳಿಂದಾದರೂ ಆಗಬೇಕಾದದ್ದೇನಿರುವದು?

**ಶ್ರೇಯಸಾಮಪಿ ಸರ್ವೇಷಾಮಾತ್ಮಾ ಹ್ಯವಧಿರರ್ಥತಃ ।**
**ಸರ್ವೇಷಾಮಪಿ ಭೂತಾನಾಂ ಹರಿರಾತ್ಮಾಽಽತ್ಮದಃ ಪ್ರಿಯಃ ॥ 13 ॥**

13. ನಿಜವಾಗಿ ನೋಡಿದರೆ ಸಕಲಶ್ರೇಯಸ್ಸುಗಳೆಲ್ಲವೂ ಕೊನೆಗೆ ಬೇಕಾಗಿರುವದು ಆತ್ಮನಿಗಾಗಿಯೇ ಅಲ್ಲವೆ? ಆದ್ದರಿಂದ ಎಲ್ಲ ಪ್ರಾಣಿಗಳಿಗೂ ಆತ್ಮನಾಗಿ ಆತ್ಮಸ್ವರೂಪವನ್ನು ಅನುಗ್ರಹಿಸುವ ಶ್ರೀಹರಿಯೇ ಪ್ರಿಯನಾಗಿರುತ್ತಾನೆ.

**ಯಥಾ ತರೋರ್ಮೂಲನಿಷೇಚನೇನ**
**ತೃಪ್ಯನ್ತಿ ತತ್ಸ್ಕನ್ಧಭುಜೋಪಶಾಖಾಃ ।**
**ಪ್ರಾಣೋಪಹಾರಾಚ್ಚ ಯಥೇನ್ದ್ರಿಯಾಣಾಂ**
**ತಥೈವ ಸರ್ವಾರ್ಹಣಮಚ್ಯುತೇಜ್ಯಾ ॥ 14 ॥**

14. ಹೇಗೆ ಮರದ ಬೇರಿಗೆ ನೀರುಹಾಕುವದರಿಂದ ಅದರ ಬುಡ, ಕೊಂಬೆ, ರೆಂಬೆ, ಟಿಸಿಲುಗಳು – ಎಲ್ಲವೂ ತೃಪ್ತಿಯಾಗುವದೋ, ಹಾಗೆಯೇ ಅಚ್ಯುತನ ಪೂಜೆಯೆಂಬುದು ಸರ್ವದೇವತೆಗಳ ಪೂಜೆಯಾಗಿರುತ್ತದೆ.

**ಯಥೈವ ಸೂರ್ಯಾತ್ ಪ್ರಭವನ್ತಿ ವಾರಃ**
**ಪುನಶ್ಚತಸ್ಮಿನ್ ಪ್ರವಿಶನ್ತಿ ಕಾಲೇ ।**
**ಭೂತಾನಿ ಭೂಮೌ ಸ್ಥಿರಜಙ್ಗಮಾನಿ**
**ತಥಾ ಹರಾವೇವ ಗುಣಪ್ರವಾಹಃ ॥ 15 ॥**

15. ಹೇಗೆ ನೀರು ಸೂರ್ಯನಿಂದ ಉಂಟಾಗಿ ಮತ್ತೆ ಕಾಲಾನುಕಾಲಕ್ಕೆ ಅವನಲ್ಲಿಯೇ ಸೇರಿಕೊಳ್ಳುವದೋ, ಹೇಗೆ ಸ್ಥಾವರಜಂಗಮಪ್ರಾಣಿಗಳು ಭೂಮಿಯಿಂದ ಹುಟ್ಟಿ ಅದನ್ನೆ ಸೆರಿಕೊಳ್ಳುವವೋ, ಅದರಂತೆ ಈ ಗುಣಪ್ರವಾಹವಾದ ಜಗತ್ತು ಹರಿಯಿಂದ ಉಂಟಾಗಿ ಹರಿಯನ್ನೇ ಸೇರಿಕೊಳ್ಳುವದು.

**ಏತತ್ಪದಂ ಯಜ್ಜಗದಾತ್ಮನಃ ಪರಂ**
**ಸಕೃದ್ವಿಭಾತಂ ಸವಿತುರ್ಯಥಾ ಪ್ರಭಾ ।**
**ಯಥಾऽಸವೋ ಜಾಗ್ರತಿ ಸುಪ್ತಶಕ್ತಯೋ**
**ದ್ರವ್ಯಕ್ರಿಯಾಜ್ಞಾನಭಿದಾಭ್ರಮಾತ್ಯಯಃ ॥ 16 ॥**

16. ಈ ಜಗತ್ತೆಂಬುದು ಆ ಪರಮಾತ್ಮನ ಪರಮಪದವೇ ಆಗಿದ್ದು ಸೂರ್ಯನ ಪ್ರಭೆಯಂತೆಯೇ ಆತನಿಗಿಂತ ಅವ್ಯತಿರಿಕ್ತವಾಗಿಯೇ ಯಾವಾಗಲೂ ತೋರುತ್ತಿರುವದು. ತನಿನಿದ್ರೆಯಲ್ಲಿ ಶಕ್ತಿಗಳು ಆತ್ಮನಲ್ಲಿಯೇ ಸುಪ್ತವಾಗಿದ್ದು ಎಚ್ಚರದಲ್ಲಿ ಹೇಗೆ ತೋರುತ್ತಿರುವವೋ ಹಾಗಿದೆ ಈ ಜಗತ್ತು. ನಿಜವಾಗಿ ಯಾವಾಗಲೂ ದ್ರವ್ಯ, ಕ್ರಿಯೆ, ಜ್ಞಾನ – ಎಂಬ ಭೇದಭ್ರಮೆಯನ್ನು ಮಿರಿರುವದೇ ಆ ಪರಮಾತ್ಮನ ಪದವು.

**ಯಥಾ ನಭಸ್ಯಭ್ರತಮಃಪ್ರಕಾಶಾ**
**ಭವನ್ತಿ ಭೂಪಾ ನ ಭವನ್ತ್ಯನುಕ್ರಮಾತ್ ।**
**ಏವಂ ಪರೇ ಬ್ರಹ್ಮಣಿ ಶಕ್ತಯಸ್ತ್ವಮೂ**
**ರಜಸ್ತಮಃಸತ್ತ್ವಮಿತಿ ಪ್ರವಾಹಃ ॥ 17 ॥**

17. ಎಲೈ ಭೂಪರುಗಳಿರ, ಹೇಗೆ ಮೋಡಗಳು, ಕತ್ತಲೆ, ಬೆಳಕು – ಇವು ಆಕಾಶದಲ್ಲಿ ಒಂದೊಂದಾಗಿ ತೋರಿಕೊಂಡು ಮೈಗರೆಯುವವೋ ಹೀಗೆಯೇ ಪರಬ್ರಹ್ಮದಲ್ಲಿ ಸತ್ತ್ವರಜಸ್ತಮಗಳೆಂಬ ಶಕ್ತಿಗಳು ಪ್ರವಾಹರೂಪವಾಗಿ ತೋರಿಕೊಂಡು ಅಡಗುತ್ತಿರುವವು.

**ತೇನೈಕಮಾತ್ಮಾನಮಶೇಷದೇಹಿನಾಂ**
**ಕಾಲಂ ಪ್ರಧಾನಂ ಪುರುಷಂ ಪರೇಶಮ್ ।**
**ಸ್ವತೇಜಸಾ ಧ್ವಸ್ತಗುಣಪ್ರವಾಹ –**
**ಮಾತ್ಮೈಕಭಾವೇನ ಭಜಧ್ವಮದ್ಧಾ ॥ 18 ॥**

18. ಆದ್ದರಿಂದ ಎಲ್ಲಾ ದೇಹಿಗಳಿಗೂ ಒಬ್ಬನೇ ಆತ್ಮನಾಗಿರುವ, ಕಾಲ, ಪ್ರಧಾನ, ಪುರುಷ, ಪರಮೇಶ್ವರ – ಎಲ್ಲವೂ ಆಗಿರುವ ಆತನನ್ನು, ತನ್ನ ತೇಜಸ್ಸಿನಿಂದ ತ್ರಿಗುಣಪ್ರವಾಹವನ್ನು ಧ್ವಂಸಮಾಡುವ ಈ ಪರಮಾತ್ಮನನ್ನು ನಮ್ಮ ಆತ್ಮನೇ ಈತನು ಎಂಬ ಭಾವದಿಂದ ಭಜಿಸಿರಿ.

**ದಯಯಾ ಸರ್ವಭೂತೇಷು ಸಂತುಷ್ಟ್ಯಾ ಯೇನಕೇನ ವಾ ।**
**ಸರ್ವೇನ್ದ್ರಿಯೋಪಶಾನ್ತ್ಯಾ ಚ ತುಷ್ಯತ್ಯಾಶು ಜನಾರ್ದನಃ ॥ 19 ॥**

19. ಸರ್ವಭೂತಗಳಲ್ಲಿಯೂ ಕರುಣೆಯನ್ನು ತೋರಿಸುವದರಿಂದಲೂ ಏನು ಸಿಕ್ಕಿದರೆ ಅದರಿಂದಲೇ ಸಂತುಷ್ಟನಾಗುವದರಿಂದಲೂ ಇಂದ್ರಿಯಗಳೆಲ್ಲ ವನ್ನೂ ಉಪಶಾಂತಿಗೊಳಿಸಿಕೊಳ್ಳುವದರಿಂದಲೂ ಆ ಜನಾರ್ದನನು ಬೇಗನೆ ಪ್ರಸನ್ನನಾಗುತ್ತಾನೆ.

**ಅಪಹತಸಕಲೈಷಣಾಮಲಾತ್ಮ**
**ನ್ಯವಿರತಮೇಧಿತಭಾವನೋಪಹೂತಃ ।**
**ನಿಜಜನವಶಗತ್ವಮಾತ್ಮನೋಽಯಂ**
**ನ ಸರತಿ ಛಿದ್ರವದಕ್ಷರಃ ಸತಾಂ ಹಿ ॥ 20 ॥**

20. ಪುತ್ರೈಷಣೆಯೇ ಮುಂತಾದ ಸಕಲ ಏಷಣೆಗಳನ್ನೂ ನಾಶಮಾಡಿ ಕೊಂಡು ನಿರ್ಮಲವಾಗಿರುವ ಸಂತರ ಅಂತಃಕರಣದಲ್ಲಿ, ಎಡೆಬಿಡದೆ ಬೆಳೆಯುತ್ತಿರುವ ಭಾವನೆಯಿಂದ ಸೆಳೆಯಲ್ಪಟ್ಟು ತನ್ನ ಭಕ್ತಪರಾಧೀನತೆಯನ್ನು, ಆಕಾಶವು ಅಲ್ಲಿಂದ ಹೇಗೆ ಬೇರೆಕಡೆಗೆ ಚಲಿಸದೆ ಇರುವದೋ ಹಾಗೆ, ಕದಲಿಸದೆ ಇರುತ್ತಾನೆ.

**ನ ಭಗತಿ ಕುಮನೀಷಿಣಾಂ ಸ ಇಜ್ಯಾಂ**
**ಹರಿರಧನಾತ್ಮಧನಪ್ರಿಯೋ ರಸಜ್ಞಃ ।**
**ಶ್ರುತಧನಕುಲಕರ್ಮಣಾಂ ಮದೈರ್ಯೇ**
**ವಿದಧತಿ ಪಾಪಮಕಿಂಚನೇಷು ಸತ್ಸು ॥ 21 ॥**

21. ನಿರ್ಧನರಾಗಿದ್ದರೂ ಪರಮಾತ್ಮನೇ ತಮ್ಮ ಧನವೆಂದು ಬಗೆಯುವವರಲ್ಲಿ ಪ್ರೇಮವನ್ನಿಟ್ಟುಕೊಂಡಿರುವ ಭಕ್ತಿರಸಜ್ಞನಾದ ಹರಿಯು, ಶಾಸ್ತ್ರಜ್ಞಾನ, ಧನ, ಕುಲ, ಕರ್ಮ ಇವುಗಳ ಮದಗಳಿಂದ ಯಾರು ತಮ್ಮದೆಂಬುದಿಲ್ಲದೆ ಸತ್ಪುರುಷರ

ವಿಷಯದಲ್ಲಿ ಪಾಪವನ್ನು ಎಸಗುತ್ತಿರುವರೋ ಅಂಥ ಕುಬುದ್ಧಿಯ ಜನರ ಪೂಜೆಯನ್ನು ಎಂದಿಗೂ ಸ್ವೀಕರಿಸುವದೇ ಇಲ್ಲ.

**ಶ್ರಿಯಮನುಚರತೀಂ ತದರ್ಥಿನಶ್ಚ**
**ದ್ವಿಪದಪತೀನ್ ವಿಬುಧಾಂಶ್ಚ ಯತ್ಸ್ವಪೂರ್ಣಃ ।**
**ನ ಭಜತಿ ನಿಜಭೃತ್ಯವರ್ಗತನ್ತ್ರಃ**
**ಕಥಮಮುಮುದ್ವಿಸೃಜೇತ್ ಪುಮಾನ್ ಕೃತಜ್ಞಃ ॥ 22 ॥**

22. ಸ್ವಯಂಪರಿಪೂರ್ಣನಾಗಿರುವ ಆ ಭಗವಂತನು ತನ್ನನ್ನೇ ಅನುಸರಿಸಿಕೊಂಡಿರುವ ಲಕ್ಷ್ಮೀದೇವಿಯನ್ನಾಗಲಿ ಆಕೆಯ ಅನುಗ್ರಹವನ್ನೇ ಬಯಸುತ್ತಿರುವ ನರಪತಿಗಳನ್ನಾಗಲಿ ದೇವತೆಗಳನ್ನಾಗಲಿ ಲೆಕ್ಕವಿಡುವವನಲ್ಲ. ಆದರೂ ತನ್ನ ಭಕ್ತರುಗಳ ಸಮೂಹಕ್ಕೆ ವಶನಾಗಿಯೇ ಇರುತ್ತಾನೆ. ಇಂಥ ಕರುಣಾಮಯನನ್ನು ಕೃತಜ್ಞನಾದ ಯಾವ ಪುರುಷನುತಾನೆ ಹೇಗೆ ಬಿಟ್ಟಿರುವದಕ್ಕಾದೀತು?

**ಇತಿ ಪ್ರಚೇತಸೋ ರಾಜನ್ನನ್ಯಾಶ್ಚ ಭಗವತ್ಕಥಾಃ**
**ಶ್ರಾವಯಿತ್ವಾ ಬ್ರಹ್ಮಲೋಕಂ ಯಯೌ ಸ್ವಾಯಮ್ಭುವೋ ಮುನಿಃ ॥ 23 ॥**
**ತೇಽಪಿ ತನ್ಮುಖನಿರ್ಯಾತಂ ಯಶೋ ಲೋಕಮಲಾಪಹಮ್ ।**
**ಹರೇರ್ನಿಶಮ್ಯ ತತ್ಪಾದಂ ಧ್ಯಾಯನ್ತಸ್ತದ್ಗತಿಂ ಯಯುಃ ॥ 24 ॥**

24. ಹೀಗೆ ನಾರದರು ಪ್ರಚೇತಸರಿಗೆ ಇದೇ ಮುಂತಾದ ಭಗವತ್ಕಥೆಗಳನ್ನು ಹೇಳಿ ಬ್ರಹ್ಮಲೋಕಕ್ಕೆ ಹೋದರು. ಆ ಪ್ರಚೇತಸರೂ ಆತನ ಮುಖದಿಂದ ಬಂದ ಸಂಸಾರ ಮಲಪರಿಹಾರಕವಾದ ಭಗವಂತನ ಕೀರ್ತಿಯನ್ನು ಕೇಳಿ ಆತನ ಪಾದವನ್ನೇ ಚಿಂತಿಸುತ್ತಾ ಆತನ ಲೋಕಕ್ಕೆ ತೆರಳಿದರು – ಎಂದು ಮೈತ್ರೇಯನು ನುಡಿದನು.

*****

# ಋಷಭದೇವರು ಪುತ್ರರಿಗೆಮಾಡಿದ ಉಪದೇಶ

**(ಐದನೆಯ ಸ್ಕಂಧ, ಐದನೆಯ ಅಧ್ಯಾಯ)**

**ಋಷಭ ಉವಾಚ –**
**ನಾಯಂ ದೇಹೋ ದೇಹಭಾಜಾಂ ನೃಲೋಕೇ**
**ಕಷ್ಟಾನ್ ಕಾಮಾನರ್ಹತೇ ವಿಡ್ಭುಜಾಂ ಯೇ ।**
**ತಪೋ ದಿವ್ಯಂ ಪುತ್ರಕಾಯೇನ ಸತ್ತ್ವಂ**
**ಶುದ್ಧ್ಯೇದ್ಯಸ್ಮಾದ್ ಬ್ರಹ್ಮಸೌಖ್ಯಂ ತ್ವನನ್ತಮ್ ॥ 1 ॥**

1. ಋಷಭದೇವನಿಂತೆಂದನು: ಮಕ್ಕಳಿರಾ, ಮನುಷ್ಯಲೋಕದಲ್ಲಿ ದೇಹವನ್ನು ಪಡೆದಿರುವವರ ಈ ಶರೀರವು ದುಃಖಮಯವಾದ ಕಾಮಭೋಗಗಳನ್ನು ಅನುಭವಿಸುವದಕ್ಕೆ ತಕ್ಕದ್ದಲ್ಲ; ಆ ಭೋಗಗಳು ಮಲವನ್ನು ತಿನ್ನುವ ಹಂದಿನಾಯಿಗಳಿಗೂ ಸಿಕ್ಕಬಹುದಾದವು. ಇದು ದಿವ್ಯವಾದ ತಪಸ್ಸುಮಾಡುವದಕ್ಕೆ ಅರ್ಹವಾದದ್ದು, ಆ ತಪಸ್ಸಿನಿಂದ ಅಂತಃಕರಣದ ಶುದ್ಧಿಯಾಗುವದು, ಅದರಿಂದ ಅನಂತವಾದ ಬ್ರಹ್ಮಾನಂದವು ದೊರಕುವದು.

**ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇ–**
**ಸ್ತಮೋದ್ವಾರಂ ಯೋಷಿತಾಂ ಸಙ್ಗಿಸಙ್ಗಮ್ ।**
**ಮಹಾನ್ತಸ್ತೇ ಸಮಚಿತ್ತಾಃ ಪ್ರಶಾನ್ತಾ**
**ವಿಮನ್ಯವಃ ಸುಹೃದಃ ಸಾಧವೋ ಯೇ ॥ 2 ॥**

2. ಮಹಾಪುರುಷರ ಸೇವೆಯು ಮುಕ್ತಿಗೂ ಸ್ತ್ರೀಸಂಗಿಗಳ ಸಂಗವು ನರಕಕ್ಕೂ ದ್ವಾರವು ಎಂದು ಬಲ್ಲವರು ಹೇಳುತ್ತಾರೆ. ಮಹಾಪುರುಷರು ಯಾರೆಂದರೆ ಏರುಪೇರಿಲ್ಲದ ಚಿತ್ತವುಳ್ಳವರೂ, ಪರಮಶಾಂತರೂ, ಕ್ರೋಧರಹಿತರೂ, ಎಲ್ಲರಲ್ಲಿಯೂ ಸುಹೃದ್ಭಾವದಿಂದ ಇರುವವರೂ, ಸಚ್ಚರಿತ್ರರೂ ಆಗಿರುವವರೇ.

**ಯೇ ವಾ ಮಯೀಶೇ ಕೃತಸೌಹೃದಾರ್ಥಾ**
**ಜನೇಷು ದೇಹಂಭರವಾರ್ತಿಕೇಷು ।**
**ಗೃಹೇಷು ಜಾಯಾತ್ಮಜರಾತಿಮತ್ಸು**
**ನ ಪ್ರೀತಿಯುಕ್ತಾ ಯಾವದರ್ಥಾಶ್ಚ ಲೋಕೇ ॥ 3 ॥**

3. ಮತ್ತು ಯಾರು ಈಶ್ವರನಾದ ನನ್ನಲ್ಲಿಯೇ ಇಟ್ಟಿರುವ ಪ್ರೇಮವೇ ಪುರುಷಾರ್ಥವೆಂದು ನಂಬಿರುವರೋ, ಹೊಟ್ಟೆಯಪಾಡನ್ನೇ ನೋಡಿಕೊಳ್ಳುವವರು ಮತ್ತು ವಿಷಯಗಳ ಮಾತನ್ನೇ ಆಡುತ್ತಿರುವವರು, ಹೆಂಡತಿ, ಮಕ್ಕಳು, ಧನ – ಮುಂತಾದವುಗಳಿಂದ ಕೂಡಿದ ಮನೆ, ಇವುಗಳಲ್ಲಿ ಯಾರಿಗೆ ಆಸಕ್ತಿಯಿರುವದಿಲ್ಲವೋ, ಯಾರು ಲೋಕವ್ಯವಹಾರದಲ್ಲಿ ದೇಹ ಯಾತ್ರೆಗೆ ಬೇಕಾಗುವಷ್ಟು ಮಟ್ಟಿಗೇ ಪ್ರವೃತ್ತರಾಗಿರುವರೋ, ಅವರು ಮಹಾಪುರುಷರು.

**ನೂನಂ ಪ್ರಮತ್ತಃ ಕುರುತೇ ವಿಕರ್ಮ**
**ಯದಿನ್ದ್ರಿಯಪ್ರೀತಯ ಆಪೃಣೋತಿ ।**
**ನ ಸಾಧು ಮನ್ಯೇ ಯತ ಆತ್ಮನೋಽಯ–**
**ಮಸನ್ನಪಿ ಕ್ಲೇಶದ ಆಸ ದೇಹಃ ॥ 4 ॥**

4. ಎಚ್ಚರಿಕೆಯಿಂದಿರದ ಮನುಷ್ಯನು ಇಂದ್ರಿಯಗಳ ತೃಪ್ತಿಮಾತ್ರವನ್ನು ಮಾಡುವ ವಿಕರ್ಮವನ್ನೇ ಮಾಡುತ್ತಿರುವನು. ಆದರೆ ಇದು ಸರಿಯಲ್ಲವೆಂದು ನನ್ನ ಮತವು; ಏಕೆಂದರೆ ಈ ವಿಕರ್ಮದಿಂದಲೇ ತಾನು ಹುಸಿಯಾಗಿದ್ದರೂ ಕ್ಲೇಶವನ್ನು ತಂದುಕೊಡುವ ಈ ದೇಹವು ಬಂದೊದಗುತ್ತದೆ.

**ಪರಾಭವಸ್ತಾವದಬೋಧಜಾತೋ**
**ಯಾವನ್ನ ಜಿಜ್ಞಾಸತ ಆತ್ಮತತ್ತ್ವಮ್ ।**
**ಯಾವತ್ಕ್ರಿಯಾಸ್ತಾವದಿದಂ ಮನೋ ವೈ**
**ಕರ್ಮಾತ್ಮಕಂ ಯೇನ ಶರೀರಬನ್ಧಃ ॥ 5 ॥**

5. ಎಲ್ಲಿಯವರೆಗೆ ಆತ್ಮತತ್ತ್ವದ ಜಿಜ್ಞಾಸೆಯನ್ನು ಮಾಡುವದಿಲ್ಲವೋ, ಅಲ್ಲಿಯವರೆಗೂ ಅಜ್ಞಾನದಿಂದಾದ ಸ್ವರೂಪಾವರಣವು ಇರುತ್ತದೆ. ಎಲ್ಲಿಯವರೆಗೆ ಕರ್ಮಗಳಲ್ಲಿ ರತನಾಗಿರುವನೋ, ಅಲ್ಲಿಯವರೆಗೆ ಕರ್ಮಾತ್ಮಕವಾದ ಈ ಮನಸ್ಸು ಇದ್ದುಕೊಂಡಿರುವದು. ಆದರಿಂದಲೇ ಶರೀರಕ್ಕೆ ಕಟ್ಟುಬಿದ್ದಿರುತ್ತಾನೆ.

**ಏವಂ ಮನಃ ಕರ್ಮವಶಂ ಪ್ರಯುಙ್ಕ್ತೇ**
**ಅವಿದ್ಯಯಾಽಽತ್ಮನ್ಯುಪಧೀಯಮಾನೇ ।**
**ಪ್ರೀತಿರ್ನ ಯಾವನ್ಮಯಿ ವಾಸುದೇವೇ**
**ನ ಮುಚ್ಯತೇ ದೇಹಯೋಗೇನ ತಾವತ್ ॥ 6 ॥**

6. ಹೀಗೆ ಆತ್ಮನು ಅವಿದ್ಯೆಯಿಂದ ಮರೆಯಾಗಿರುವಲ್ಲಿ ಕರ್ಮವಶವಾಗಿರುವ ಮನಸ್ಸು ಮನುಷ್ಯನನ್ನು ಕರ್ಮದಲ್ಲಿ ತೊಡಗಿಸುತ್ತಲೇ ಇರುವದು, ಎಲ್ಲಿಯವರೆಗೆ ವಾಸದೇವನಾದ ನನ್ನಲ್ಲಿ ಪ್ರೀತಿಯುಂಟಾಗುವದಿಲ್ಲವೋ ಅಲ್ಲಿಯವರೆಗೂ ದೇಹಸಂಬಂಧದಿಂದ ಬಿಡುಗಡೆಯಾಗುವಂತಿರುವದಿಲ್ಲ.

**ಹಂಸೇ ಗುರೌ ಮಯಿ ಭಕ್ತ್ಯಾನುವೃತ್ತ್ಯಾ**
**ವಿತೃಷ್ಣಯಾ ದ್ವಂದ್ವತಿತಿಕ್ಷಯಾ ಚ**
**ಸರ್ವತ್ರ ಜನ್ತೋರ್ವ್ಯಸನಾವಗತ್ಯಾ**
**ಜಿಜ್ಞಾಸಯಾ ತಪಸೇಹಾನಿವೃತ್ತ್ಯಾ ॥ 10 ॥**

**ಮತ್ಕರ್ಮಭಿರ್ಮತ್ಕಥಯಾ ಚ ನಿತ್ಯಂ**
**ಮದ್ದೇವಸಙ್ಗಾದ್ಗುಣಕೀರ್ತನಾನ್ಮೇ ।**
**ನಿರ್ವೈರಸಾಮ್ಯೋಪಶಮೇನ ಪುತ್ರಾ**
**ಜಿಹಾಸಯಾ ದೇಹಗೇಹಾತ್ಮಬುದ್ಧೇಃ ॥ 11 ॥**

**ಅಧ್ಯಾತ್ಮಯೋಗೇನ ವಿವಿಕ್ತಸೇವಯಾ**
**ಪ್ರಾಣೇನ್ದ್ರಿಯಾತ್ಮಾಭಿಜಯೇನ ಸಧ್ರ್ಯಕ್ ।**
**ಸಚ್ಛ್ರದ್ಧಯಾ ಬ್ರಹ್ಮಚರ್ಯೇಣ ಶಶ್ವ –**
**ದಸಂಪ್ರಮಾದೇನ ಯಮೇನ ವಾಚಮ್ ॥ 12 ॥**

**ಸರ್ವತ್ರ ಮದ್ಭಾವವಿಚಕ್ಷಣೇನ**
**ಜ್ಞಾನೇನ ವಿಜ್ಞಾನವಿರಾಜಿತೇನ ।**
**ಯೋಗೇನ ಧೃತ್ಯುದ್ಯಮಸತ್ತ್ವಯುಕ್ತೋ**
**ಲಿಙ್ಗಂ ವ್ಯಪೋಹೇತ್ಕುಶಲೋಽಹಮಾಖ್ಯಮ್ ॥ 13 ॥**

10–13. ಎಲೈ ಪುತ್ರರಿರ, ಈ ನಾನು ಎಂಬ ಲಿಂಗಶರೀರವನ್ನು ಬಿಟ್ಟು ಸಂಸಾರವನ್ನು ದಾಟಬೇಕೆಂಬುವನು ಹೇಗೆ ಧೈರ್ಯ, ಉದ್ಯಮ, ಸತ್ತ್ವಗುಣಗಳಿಂದೊಡಗೂಡಿರಬೇಕೆಂದರೆ, ಪರಮಾತ್ಮನೂ ಗುರುವೂ ಆಗಿರುವ ನನ್ನಲ್ಲಿ ಭಕ್ತಿಯೂ ಅನುವರ್ತನೆಯೂ ವೈರಾಗ್ಯವೂ ಇರಬೇಕು. ಶೀತೋಷ್ಣಸುಖದುಃಖಾದಿ ದ್ವಂದ್ವಗಳನ್ನು ತಡೆದುಕೊಳ್ಳುವ ತಿತಿಕ್ಷೆಯಿರುವವನಾಗಬೇಕು. ಈ ಜೀವನಿಗೆ ಎಲ್ಲೆಲ್ಲಿಯೂ ದುಃಖವೇ ಆಗುವದೆಂಬುದನ್ನು

ಮನದಟ್ಟುಮಾಡಿಕೊಂಡಿರಬೇಕು. ತತ್ತ್ವವನ್ನು ಜಿಜ್ಞಾಸೆ ಮಾಡುತ್ತಿರಬೇಕು. ತಪೋಯುಕ್ತನಾಗಿರಬೇಕು, ಕರ್ಮತ್ಯಾಗವನ್ನು ಮಾಡಿರಬೇಕು. ನನಗೋಸ್ಕರವಾಗಿಯೇ ಕರ್ಮವನ್ನು ಮಾಡುತ್ತಾ ನನ್ನ ಕಥೆಯನ್ನೇ ಶ್ರವಣಮಾಡುತ್ತಿರಬೇಕು, ನಾನೇ ಪರದೈವವೆಂದುಕೊಂಡಿರುವವರ ಸಂಗವನ್ನು ಮಾಡುತ್ತಿರಬೇಕು, ನನ್ನ ಗುಣಗಳನ್ನೇ ಕೀರ್ತನಮಾಡುತ್ತಿರಬೇಕು. ಯಾರಲ್ಲಿಯೂ ವೈರವಿಲ್ಲದೆ ಸಮಬುದ್ಧಿಯಿಂದ ಕೂಡಿ ಶಾಂತಿಯುತನಾಗಿ ದೇಹಗೃಹಾದಿಗಳಲ್ಲಿ ನಾನುನಾನೆಂಬ ಬುದ್ಧಿಯನ್ನು ಬಿಡುವ ಇಚ್ಛೆಯಿಂದೊಡಗೂಡಿರಬೇಕು. ಅಧ್ಯಾತ್ಮಯೋಗವನ್ನು ಅನುಷ್ಠಾನಮಾಡುತ್ತಾ ಏಕಾಂತಪ್ರದೇಶದಲ್ಲಿಯೇ ಇದ್ದುಕೊಂಡವನಾಗಿ ಪ್ರಾಣಗಳು, ಇಂದ್ರಿಯಗಳು, ಮನಸ್ಸು – ಇವುಗಳನ್ನು ಸಂಪೂರ್ಣವಾಗಿ ಬಿಗಿಹಿಡಿದಿಟ್ಟುಕೊಂಡಿರಬೇಕು. ಎಲ್ಲೆಲ್ಲಿಯೂ ಭಗವದ್ಭಾವವನ್ನೇ ಕಾಣುತ್ತಿರುವವನಾಗಿ ಅನುಭವರೂಪದರಿವಿನಿಂದೊಡ ಗೂಡಿದ ಜ್ಞಾನವುಳ್ಳವನಾಗಿ ಯೋಗಸಾಧನವನ್ನು ಮಾಡುತ್ತಿರುಬೇಕು.

**ಕರ್ಮಾಶಯಂ ಹೃದಯಗ್ರನ್ಥಿಬನ್ಧ–**
**ಮವಿದ್ಯಯಾऽऽಸಾದಿತಮಪ್ರಮತ್ತಃ ।**
**ಅನೇನ ಯೋಗೇನ ಯಥೋಪದೇಶಂ**
**ಸಮ್ಯಗ್ವ್ಯಪೋಹ್ಯೋಪರಮೇತ ಯೋಗಾತ್ ॥ 14 ॥**

14. ಅವಿದ್ಯೆಯ ನಿಮಿತ್ತದಿಂದ ಒಂದೊದಗಿರುವ ಕರ್ಮಾಶಯವನ್ನೂ ಹೃದಯಗ್ರಂಥಿಯ ಬಂಧವನ್ನೂ ಈವರೆಗೆ ನಾನು ಉಪದೇಶಿಸಿರುವ ಈ ಯೋಗದಿಂದ ಸಂಪೂರ್ಣವಾಗಿ ತೊಲಗಿಸಿಕೊಂಡು ಆ ಬಳಿಕ ಯೋಗವನ್ನು ಬಿಟ್ಟುಬಿಡಬೇಕು.

**ಪುತ್ರಾಂಶ್ಚ ಶಿಷ್ಯಾಂಶ್ಚ ನೃಪೋ ಗುರುರ್ವಾ**
**ಮಲ್ಲೋಕಕಾಮೋ ಮದನುಗ್ರಹಾರ್ಥಃ ।**
**ಇತ್ಥಂ ವಿಮನ್ಯುರನುಶಿಷ್ಯಾದತಜ್ಞಾನ್**
**ನ ಯೋಜಯೇತ್ಕರ್ಮಸು ಕರ್ಮಮೂಢಾನ್ ॥**
**ಕಂ ಯೋಜಯನ್ಮನುಜೋऽರ್ಥಂ ಲಭೇತ**
**ನಿಪಾತಯನ್ನಷ್ಟದೃಶಂ ಹಿ ಗರ್ತೇ ॥ 15 ॥**

15. ರಾಜನಾಗಲಿ ಗುರುವಾಗಲಿ ನನ್ನ ಲೋಕವನ್ನು ಅಥವಾ ನನ್ನ ಅನುಗ್ರಹವನ್ನು ಇಚ್ಛಿಸುತ್ತಾನಾದರೆ, ನಿಜವನ್ನರಿಯದ ತನ್ನ ಪ್ರಜೆಗಳಿಗೂ ಶಿಷ್ಯರಿಗೂ ಈ ರೀತಿಯಿಂದ ಸಮಾಧಾನಚಿತ್ತನಾಗಿ ಹೀಗೆಯೇ ಉಪದೇಶಮಾಡಬೇಕೇ ಹೊರತು ಕರ್ಮಮೂಢರಾದ ಅವರನ್ನು ಕರ್ಮಗಳಲ್ಲಿ ತೊಡಗಿಸಬಾರದು. ಕಣ್ಣುಕಾಣದವನನ್ನು ಗುಂಡಿಯಲ್ಲಿ ಕೆಡಹುವ ಮನುಷ್ಯನಿಗೆ ಯಾವ ಪುರುಷಾರ್ಥವುತಾನೆ ಲಭಿಸೀತು?

**ಲೋಕಃ ಸ್ವಯಂ ಶ್ರೇಯಸಿ ನಷ್ಟದೃಷ್ಟಿ–**
**ರ್ಯೋಽರ್ಥಾನ್ ಸಮೀಹೇತ ನಿಕಾಮಕಾಮಃ ।**
**ಅನ್ಯೋನ್ಯವೈರಃ ಸುಖಲೇಶಹೇತೋ–**
**ರನನ್ತದುಃಖಂ ಚ ನ ವೇದ ಮೂಢಃ ॥ 16 ॥**

16. ಮೂಢಜನವು ಮೊದಲು ತಾನೇ ಶ್ರೇಯಸ್ಸಿನ ವಿಷಯದಲ್ಲಿ ಕಣ್ಣುಗಾಣದೆ ಇರುತ್ತದೆ. ತೀವ್ರವಾದ ಕಾಮದಿಂದ ವಿಷಯಗಳನ್ನು ಬಯಸುತ್ತಿರುತ್ತದೆ. ಅಲ್ಪಸುಖದ ನಿಮಿತ್ತದಿಂದಾಗುವ ಅನಂತದುಃಖವನ್ನು ಅರಿತುಕೊಳ್ಳಲಾರದೆ ಇರುತ್ತದೆಯಷ್ಟೆ?

******

## ರಹೂಗಣರಾಜನಿಗೆ ಭರತಮುನಿಯ ಉಪದೇಶ

(ಐದನೆಯ ಸ್ಕಂಧ, ಹನ್ನೊದನೆಯ ಅಧ್ಯಾಯ)

**ಬ್ರಾಹ್ಮಣ ಉವಾಚ–**
**ಅಕೋವಿದಃ ಕೋವಿದವಾದವಾದಾ –**
**ನ್ವದಸ್ಯಥೋ ನಾತಿವಿದಾಂ ವರಿಷ್ಠಃ ।**
**ನ ಸೂರಯೋ ಹಿ ವ್ಯವಹಾರಮೇನಂ**
**ತತ್ತ್ವಾವಮರ್ಶೇನ ಸಹಾಽಽಮನನ್ತಿ ॥ 1 ॥**

1. ಜಡಭರತನಿಂತೆಂದನು: ರಾಜನೆ, ತತ್ತ್ವವನ್ನರಿಯದಿದ್ದರೂ ಅರಿತವನಂತೆ ಮಾತಾಡುತ್ತಿರುವೆ; ಆದ್ದರಿಂದ ನೀನು ಜ್ಞಾನಿಗಳಲ್ಲಿ ಶ್ರೇಷ್ಠನೆಂದು ತಿಳಿಯುವದಕ್ಕಿಲ್ಲ. ವಿವೇಕಿಗಳು ಈ ವ್ಯವಹಾರವನ್ನು ತತ್ತ್ವವಿಮರ್ಶೆಮಾಡು ವಾಗ ಒಪ್ಪಲಾರರು.

**ತಥೈವ ರಾಜನ್ನುರುಗಾರ್ಹಮೇಧ–**
**ವಿತಾನವಿದ್ಯೋರುವಿಜೃಂಭಿತೇಷು ।**

**ನ ವೇದವಾದೇಷು ಹಿ ತತ್ತ್ವವಾದಃ**
**ಪ್ರಾಯೇಣ ಶುದ್ಧೋ ನು ಚಕಾಸ್ತಿ ಸಾಧುಃ ॥ 2 ॥**

2. ಹೀಗೆಯೇ, ಎಲೈ ರಾಜನೆ, ಗೃಹಸ್ಥಜನರಿಗೆ ಬೇಕಾದ ಕರ್ಮಗಳ ತಿಳಿವಳಿಕೆಯನ್ನೇ ವಿಸ್ತರಿಸುವದರಲ್ಲಿಯೇ ತೊಡಗಿಸುವ ವೇದವಾದಗಳಲ್ಲಿಯೂ ಬಲುಮಟ್ಟಿಗೆ ಶುದ್ಧ ತತ್ತ್ವಜ್ಞಾನದ ಉಪದೇಶವು ಕಾಣಬರುತ್ತಿಲ್ಲ.

**ನ ತಸ್ಯ ತತ್ತ್ವಗ್ರಹಣಾಯ ಸಾಕ್ಷಾ-**
**ದ್ವರೀಯಸೀರಪಿ ವಾಚಃ ಸಮಾಸನ್ ।**
**ಸ್ವಪ್ನೇ ನಿರುಕ್ತ್ಯಾ ಗೃಹಮೇಧಿಸೌಖ್ಯಂ**
**ನ ಯಸ್ಯ ಹೇಯಾನುಮಿತಂ ಸ್ವಯಂ ಸ್ಯಾತ್ ॥ 3 ॥**

3. ಯಾವನಿಗೆ ಗೃಹಸ್ಥಲಭ್ಯವಾದ ಸ್ವರ್ಗಾದಿಸುಖವು ಸ್ವಪ್ನಸುಖದಂತೆ ಹೇಯವಾದದ್ದೆಂದು ತಿಳಿದುಬಂದಿಲ್ಲವೋ ಅಂಥವನಿಗೆ ಉತ್ತಮವಾದ ಉಪನಿಷದ್ವಚನಗಳು ಕೂಡ ತತ್ತ್ವಜ್ಞಾನವನ್ನು ಉಂಟುಮಾಡಿಕೊಡಲಾರವು.

**ಯಾವನ್ಮನೋ ರಜಸಾ ಪೂರುಷಸ್ಯ**
**ಸತ್ತ್ವೇನ ವಾ ತಮಸಾ ವಾನುರುದ್ಧಮ್ ।**
**ಚೇತೋಭಿರಾಕೂತಿಭಿರಾತನೋತಿ**
**ನಿರಙ್ಕುಶಂ ಕುಶಲಂ ಚೇತರಂ ವಾ ॥ 4 ॥**

4. ಎಲ್ಲಿಯವರೆಗೆ ಮನುಷ್ಯನ ಮನಸ್ಸು ಸತ್ತ್ವಕ್ಕಾಗಲಿ, ರಜಸ್ಸಿಗಾಗಲಿ, ಅಥವಾ ತಮಸ್ಸಿಗಾಗಲಿ ವಶವಾಗಿರುವದೋ, ಅಲ್ಲಿಯವರೆಗೂ ಜ್ಞಾನೇಂದ್ರಿಯ ಗಳಿಂದಲೂ ಕರ್ಮೇಂದ್ರಿಯಗಳಿಂದಲೂ ಶುಭಾಶುಭಕರ್ಮಗಳನ್ನು ಮಾಡುತ್ತಲೇ ಇರುತ್ತಾನೆ.

**ಸ ವಾಸನಾತ್ಮಾ ವಿಷಯೋಪರಕ್ತೋ**
**ಗುಣಪ್ರವಾಹೋ ವಿಕೃತಃ ಷೋಡಶಾತ್ಮಾ ।**
**ಬಿಭ್ರತ್ಪೃಥಙ್ನಾಮಭಿರೂಪಭೇದ -**
**ಮನ್ತರ್ಬಹಿಷ್ಟ್ವಂ ಚ ಪುರೈಸ್ತನೋತಿ ॥ 5 ॥**

5. ಆ ವಾಸನಾತ್ಮಕವಾದ ಮನಸ್ಸುವಿಷಯಗಳಲ್ಲಿ ಉಪರಕ್ತವಾಗಿದ್ದುಕೊಂಡು

ಗುಣಗಳಿಂದ ಪ್ರೇರತವಾಗಿ ಬಗೆಬಗೆಯ ವಿಕಾರಗಳನ್ನು ಹೊಂದುವ ಷೋಡಶಕಲಾತ್ಮವಾಗಿರುತ್ತದೆ. ಬೇರೆಬೇರೆಯ ಹೆಸರುಗಳಿಂದ ಬೇರೆಬೇರೆಯ ರೂಪಗಳನ್ನು ಹೊಂದುತ್ತಾ ಶರೀರಗಳ ನಿಮಿತ್ತದಿಂದ ಜೀವನಿಗೆ ಉತ್ಕೃಷ್ಟನಿಕೃಷ್ಟತ್ವ ವನ್ನು ಉಂಟುಮಾಡುತ್ತಿರುವದು.

**ದುಃಖಂ ಸುಖಂ ವ್ಯತಿರಿಕ್ತಂ ಚ ತೀವ್ರಂ**
**ಕಾಲೋಪಪನ್ನಂ ಫಲಮಾವ್ಯನಕ್ತಿ ।**
**ಆಲಿಙ್ಗ್ಯ ಮಾಯಾರಚಿತಾನ್ತರಾತ್ಮಾ**
**ಸ್ವದೇಹಿನಂ ಸಂಸೃತಿಚಕ್ರಕೂಟಃ ॥ 6 ॥**

6. ಮಾಯಾರಚಿತವಾದ ಅಂತಃಸ್ವರೂಪವುಳ್ಳದ್ದಾಗಿ ತನ್ನ ಜೀವವನ್ನು ಅಪ್ಪಿಕೊಂಡು ಸಂಸಾರಚಕ್ರವನ್ನು ತಿರುಗಿಸುತ್ತಾ ಆಯಾ ಕಾಲಕ್ಕೆ ಬಂದೊದಗುವ ದುಃಖ, ಸುಖ ಮತ್ತು ಅವುಗಳಿಗಿಂತ ವ್ಯತಿರಿಕ್ತವಾದ ಮೋಹ ಎಂಬ ಫಲವನ್ನು ವ್ಯಕ್ತಗೊಳಿಸುತ್ತಿರುವದು.

**ತಾವಾನಯಂ ವ್ಯವಹಾರಃ ಸದಾವಿಃ**
**ಕ್ಷೇತ್ರಜ್ಞಸಾಕ್ಷ್ಯೋ ಭವತಿ ಸ್ಥೂಲಸೂಕ್ಷ್ಮಃ ।**
**ತಸ್ಮಾನ್ಮನೋ ಲಿಙ್ಗಮದೋ ವದನ್ತಿ**
**ಗುಣಾಗುಣತ್ವಸ್ಯ ಪರಾವರಸ್ಯ ॥ 7 ॥**

7. ಅಲ್ಲಿಯುವರೆಗೂ ಕ್ಷೇತ್ರಜ್ಞನಿಗೆ ಕಾಣಬರುತ್ತಿರುವ ಈ ಸ್ಥೂಲಸೂಕ್ಷ್ಮವ್ಯವಹಾರವು ಯಾವಾಗಲೂ ತೋರುತ್ತಿರುವದು. ಆದ್ದರಿಂದ ಈ ಮನಸ್ಸೇ ಗುಣಾಭಿಮಾನಿಯಾಗಿರುವ ನಿಕೃಷ್ಟಸ್ಥಿತಿಗೂ ಗುಣಾತೀತವಾದ ಉತ್ಕೃಷ್ಟಸಿದ್ಧಿಗೂ ಕಾರಣವೆಂದು ಬಲ್ಲವರು ಹೇಳುವರು.

**ಗುಣಾನುರಕ್ತಂ ವ್ಯಸನಾಯ ಜನ್ತೋಃ**
**ಕ್ಷೇಮಾಯ ನೈರ್ಗುಣ್ಯಮಥೋ ಮನಃ ಸ್ಯಾತ್ ।**
**ಯಥಾ ಪ್ರದೀಪೋ ಘೃತವರ್ತಿಮಶ್ನನ್**
**ಶಿಖಾಃ ಸಧೂಮಾ ಭಜತಿ ಹ್ಯನ್ಯದಾ ಸ್ವಮ್ ।**
**ಪದಂ ತಥಾ ಗುಣಕರ್ಮಾನುಬದ್ಧಂ**
**ವೃತ್ತೀರ್ಮನಃ ಶ್ರಯತೇಽನ್ಯತ್ರ ತತ್ತ್ವಮ್ ॥ 8 ॥**

8. ಗುಣಗಳಲ್ಲಿ ಅನುರಕ್ತವಾಗಿರುವವರೆಗೆ ಜೀವನಿಗೆ ಸಂಸಾರ ದುಃಖಕ್ಕೆ ಕಾರಣವಾಗಿರುತ್ತದೆ. ಗುಣಾತೀತವಾಗಿರುವಾಗ ಮುಕ್ತಿಗೆ ಕಾರಣವಾಗುತ್ತದೆ. ದೀಪವು ಹೇಗೆ ತುಪ್ಪದ ಬತ್ತಿಯನ್ನು ಭೋಗಿಸುತ್ತಿರುವವರೆಗೆ ಹೊಗೆಯಿಂದೊಡಗೂಡಿದ ಜ್ವಾಲೆಯುಳ್ಳದ್ದಾಗಿರುವದೋ, ಮಿಕ್ಕಕಾಲ ದಲ್ಲಿ ತನ್ನ ರೂಪದಲ್ಲಿಯೇ ಇರುವದೋ ಅದರಂತೆ ಗುಣಕರ್ಮಗಳ ಸಂಬಂಧದಿಂದ ಮನಸ್ಸು ವೃತ್ತಿಗಳನ್ನು ಹೊಂದುತ್ತಿರುವದು, ಅದಿಲ್ಲದಾಗ ತತ್ತ್ವರೂಪವನ್ನೇ ಹೊಂದುವದು.

**ಏಕಾದಶಾಽಽಸನ್ ಮನಸೋ ಹಿ ವೃತ್ತಯ**
**ಆಕೂತಯಃ ಪಞ್ಚಧಿಯೋಽಭಿಮಾನಃ ।**
**ಮಾತ್ರಾಣಿ ಕರ್ಮಾಣಿ ಪುರಂ ಚ ತಾಸಾಂ**
**ವದನ್ತಿ ಹೈಕಾದಶ ವೀರ ಭೂಮೀಃ ॥ 9 ॥**

9. ಎಲೈ ವೀರನೆ, ಮನಸ್ಸಿಗೆ ಕರ್ಮಾಕಾರವಾದ ಐದು, ಜ್ಞಾನಾಕಾರವಾದ ಐದು, ಅಭಿಮಾನಾಕಾರವಾದದ್ದು ಒಂದು – ಎಂದು ಹನ್ನೊಂದು ವೃತ್ತಿಗಳು. ಆ ವೃತ್ತಿಗಳಿಗೆ ಭೂತಮಾತ್ರೆಗಳು, ಕರ್ಮಗಳು, ಮತ್ತು ಶರೀರ – ಎಂಬೀ ಹನ್ನೊಂದನ್ನು ಅವಕ್ಕೆ ವಿಷಯಗಳು ಎನ್ನುವರು.

**ಗನ್ಧಾಕೃತಿಸ್ಪರ್ಶರಸಶ್ರವಾಂಸಿ**
**ವಿಸರ್ಗರತ್ಯರ್ತ್ಯಭಿಜಲ್ಪಶಿಲ್ಪಾಃ ।**
**ಏಕಾದಶಂ ಸ್ವೀಕರಣಂ ಮಮೇತಿ**
**ಶಯ್ಯಾಮಹಂ ದ್ವಾದಶಮೇಕ ಆಹುಃ ॥ 10 ॥**

10. ಗಂಧ, ರೂಪ, ಸ್ಪರ್ಶ, ರಸ, ಶಬ್ದ – ಎಂಬ ಐದು ಜ್ಞಾನೇಂದ್ರಿಯ ವಿಷಯಗಳು. ಪುರೀಷತ್ಯಾಗ, ರತಿ, ಗಮನ, ಭಾಷಣ, ತೆಗೆದುಕೊಳ್ಳುವದೇ ಮುಂತಾದ ವ್ಯಾಪಾರ – ಎಂಬ ಐದು ಕರ್ಮೇಂದ್ರಿಯವಿಷಯಗಳು, ನಾನು ಎಂದು ಗ್ರಹಿಸುವದೇ ಅಭಿಮಾನದ ವಿಷಯವು. ಕೆಲವರು ಅಹಂಕಾರವೆಂಬುದು ಹನ್ನೆರಡನೆಯ ವೃತ್ತಿಯೆಂದೂ ಅದಕ್ಕೆ ಆಶ್ರಯವಾಗಿರುವ ಶರೀರವೇ ಹನ್ನೆರಡನೆಯ ವಿಷಯವೆಂದೂ ಹೇಳುತ್ತಾರೆ.

**ದ್ರವ್ಯಸ್ವಭಾವಾಶಯಕರ್ಮಕಾಲೈ–**
**ರೇಕಾದಶಾಮೀ ಮನಸೋ ವಿಕಾರಾಃ ।**

**ಸಹಸ್ರಶಃ ಶತಶಃ ಕೋಟಿಶಶ್ಚ**
**ಕ್ಷೇತ್ರಜ್ಞತೋ ನ ಮಿಥೋ ನ ಸ್ವತಃ ಸ್ಯುಃ ॥ 11 ॥**

11. ವಿಷಯ, ಸ್ವಭಾವ, ಸಂಸ್ಕಾರ, ಕರ್ಮ, ಕಾಲ – ಇವುಗಳಿಂದ ಈ ಹನ್ನೊಂದು ಮನೋವಿಕಾರಗಳೂ, ನೂರಾರು, ಸಾವಿರಾರು, ಕೋಟಿಗಟ್ಟಲೆಯ ಭೇದವನ್ನು ಪಡೆಯುತ್ತಿರುವವು. ಇವುಗಳ ಇರವು ಕ್ಷೇತ್ರಜ್ಞನ ಸತ್ತೆಯಿಂದಲೇ ಹೊರತು, ಸ್ವತಃ ಇರುವದಿಲ್ಲ, ಒಂದಕ್ಕೊಂದು ಕೂಡಿಯೂ ಆಗಿರುವದಿಲ್ಲ.

**ಕ್ಷೇತ್ರಜ್ಞ ಏತಾ ಮನಸೋ ವಿಭೂತೀ–**
**ರ್ಜೀವಸ್ಯ ಮಾಯಾರಚಿತಸ್ಯ ನಿತ್ಯಾಃ ।**
**ಆವಿರ್ಹಿತಾಃ ಕ್ವಾಪಿ ತಿರೋಹಿತಾಶ್ಚ**
**ಶುದ್ಧೋ ವಿಚಷ್ಟೇ ಹ್ಯವಿಶುದ್ಧಕರ್ತುಃ ॥ 12 ॥**

12. ಮಾಯಾರಚಿತನಾದ ಜೀವನ ಈ ಅಶುದ್ಧಸಂಸಾರಕ್ಕೆ ಕಾರಣವಾಗಿರುವ ಪ್ರವಾಹರೂಪದಿಂದ ನಿತ್ಯವಾದ ವಿಭೂತಿಗಳು ಜಾಗ್ರತ್ಸ್ವಪ್ನಗಳೆಂಬ ಕೆಲವು ಅವಸ್ಥೆಗಳಲ್ಲಿ ಹೊರತೋರಿಕೊಳ್ಳುತ್ತಿರುವದನ್ನೂ ಮತ್ತೆ ಕೆಲವು ಅವಸ್ಥೆಗಳಲ್ಲಿ ಮರೆಯಾಗಿರುವದನ್ನೂ ಶುದ್ಧವಾದ ಕ್ಷೇತ್ರಜ್ಞನು ನೋಡುತ್ತಲೇ ಇರುವನು.

**ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಃ**
**ಸಾಕ್ಷಾತ್ಸ್ವಯಂಜ್ಯೋತಿರಜಃ ಪರೇಶಃ ।**
**ನಾರಾಯಣೋ ಭಗವಾನ್ ವಾಸುದೇವಃ**
**ಸ್ವಮಾಯಯಾಽಽತ್ಮನ್ಯವಧೀಯಮಾನಃ ॥ 13 ॥**

13. ಕ್ಷೇತ್ರಜ್ಞನಾದ ಪರಮಾತ್ಮನು, ಪುರಾಣಪುರುಷನಾಗಿರುತ್ತಾನೆ; ಸಾಕ್ಷಾತ್ತಾಗಿ ಸ್ವಯಂಜ್ಯೋತಿಯು, ಜನ್ಮರಹಿತನು, ಪರಮೇಶ್ವರನು, ನಾರಾಯಣನು, ತನ್ನ ಮಾಯೆಯಿಂದ ಅಂತಃಕರಣದಲ್ಲಿ ಇದ್ದುಕೊಂಡಿರುವವನು.

**ಯಥಾನಿಲಃ ಸ್ಥಾವರಜಙ್ಗಮಾನಾ–**
**ಮಾತ್ಮಸ್ವರೂಪೇಣ ನಿವಿಷ್ಟ ಈಶೇತ್ ।**
**ಏವಂ ಪರೋ ಭಗವಾನ್ವಾಸುದೇವಃ**
**ಕ್ಷೇತ್ರಜ್ಞ ಆತ್ಮೇದಮನುಪ್ರವಿಷ್ಟಃ ॥ 14 ॥**

14. ಹೇಗೆ ವಾಯುವು ಸ್ಥಾವರಜಂಗಮಪ್ರಾಣಿಗಳಲ್ಲೆಲ್ಲ ಆತ್ಮಸ್ವರೂಪದಿಂದ ಒಳಹೊಕ್ಕು ಅವುಗಳನ್ನು ಆಳುತ್ತಿರುವನೋ, ಅದರಂತೆ ಈ ಭಗವಂತನಾದ ವಾಸುದೇವನು, ಕ್ಷೇತ್ರಜ್ಞನಾದ ಆತ್ಮನು ಈ ಪ್ರಪಂಚವೆಲ್ಲವನ್ನೂ ಒಳಹೊಕ್ಕು ಆಳುತ್ತಿರುವನು.

**ನ ಯಾವದೇತಾಂ ತನುಭೃನ್ನರೇನ್ದ್ರ**
**ವಿಧೂಯ ಮಾಯಾಂ ವಯುನೋದಯೇನ ।**
**ವಿಮುಕ್ತಸಙ್ಗೋ ಜಿತಷಟ್ಸಪತ್ನೋ**
**ವೇದಾತ್ಮತತ್ತ್ವಂ ಭ್ರಮತೀಹ ತಾವತ್ ॥ 15 ॥**

15. ಎಲೈ ನರೇಂದ್ರನೆ, ಎಲ್ಲಿಯವರೆಗೆ ಈ ಮಾಯೆಯನ್ನು ಜ್ಞಾನೋದಯದಿಂದ ತೊಲಗಿಸಿಕೊಂಡು ಸಂಗವನ್ನು ತ್ಯಜಿಸಿ ಅರಿಷಡ್ವರ್ಗವನ್ನು ಬಯಸಿಕೊಂಡು ಆತ್ಮತತ್ತ್ವವನ್ನು ಅರಿತುಕೊಳ್ಳದೆ ಇರುವನೋ ಅಲ್ಲಿಯವರೆಗೂ ಈ ಸಂಸಾರದಲ್ಲಿ ತೊಳಲುತ್ತಿರುವನು.

*****

## ಭಗವನ್ನಾಮಸ್ಮರಣೆಯೇ ಪಾಪಕ್ಕೆ ಪ್ರಾಯಶ್ಚಿತ್ತ

(ಆರನೆಯ ಸ್ಕಂಧ, ಒಂದನೆಯ ಅಧ್ಯಾಯ)

**ಶ್ರೀಶುಕ ಉವಾಚ –**
**ಕರ್ಮಣಾ ಕರ್ಮನಿರ್ಹಾರೋ ನ ಹ್ಯಾತ್ಯನ್ತಿಕ ಇಷ್ಯತೇ ।**
**ಅವಿದ್ವದಧಿಕಾರಿತ್ವಾತ್ ಪ್ರಾಯಶ್ಚಿತ್ತಂ ವಿಮರ್ಶನಮ್ ॥ 11 ॥**

11. ಶ್ರೀಶುಕನಿಂತೆಂದನು: ಎಲೈ ರಾಜನೆ, ಕರ್ಮದಿಂದಲೇ ಕರ್ಮವು ತೀರ ನಾಶವಾಗಲಾರದು; ಏಕೆಂದರೆ ಕರ್ಮವು ಅಜ್ಞರಿಗೆ ಮಾತ್ರವೇ ವಿಧಿಸಿದ್ದಾಗಿರುತ್ತದೆ. ನಿಜವಾದ ಪ್ರಾಯಶ್ಚಿತ್ತವೆಂದರೆ ಜ್ಞಾನವೇ.

**ನಾಶ್ನತಃ ಪಥ್ಯಮೇವಾನ್ನಂ ವ್ಯಾಧಯೋಽಭಿಭವನ್ತಿ ಹಿ ।**
**ಏವಂ ನಿಯಮಕೃದ್ರಾಜಙ್ಞನೈಃ ಕ್ಷೇಮಾಯ ಕಲ್ಪತೇ ॥ 12 ॥**

12. ಪಥ್ಯವಾದ ಅನ್ನವನ್ನೇ ತೆಗೆದುಕೊಳ್ಳುವವನನ್ನು ರೋಗಗಳು ವಶಗೊಳಿಸಿಕೊಳ್ಳಲಾರವಲ್ಲವೆ? ಇದರಂತೆ ನಿಯಮಗಳನ್ನೇ ಅನುಸರಿಸುತ್ತಿರುವವನು ಮೆಲ್ಲಮೆಲ್ಲಗೆ ಮುಕ್ತಿಯನ್ನು ಪಡೆಯುವದಕ್ಕೆ ಶಕ್ತನಾಗುತ್ತಾನೆ.

**ತಪಸಾ ಬ್ರಹ್ಮಚರ್ಯೇಣ ಶಮೇನ ಚ ದಮೇನ ಚ ।**
**ತ್ಯಾಗೇನ ಸತ್ಯಶೌಚಾಭ್ಯಾಂ ಯಮೇನ ನಿಯಮೇನ ಚ ॥ 13 ॥**

**ದೇಹವಾಗ್ಬುದ್ಧಿಜಂ ಧೀರಾ ಧರ್ಮಜ್ಞಾಃ ಶ್ರದ್ಧಯಾನ್ವಿತಾಃ ।**
**ಕ್ಷಿಪನ್ತ್ಯಘಂ ಮಹದಪಿ ವೇಣುಗುಲ್ಮಮಿವಾನಲಃ ॥ 14 ॥**

13–14. ಧರ್ಮಜ್ಞರೂ ಶ್ರದ್ಧಾಯುಕ್ತರೂ ಆದ ವಿವೇಕಿಗಳು ತಪಸ್ಸು, ಬ್ರಹ್ಮಚರ್ಯ, ಶಮ, ದಮ, ದಾನ, ಸತ್ಯ, ಬಾಹ್ಯಾಂತರಶೌಚ, ಯಮ, ನಿಯಮ – ಇವುಗಳ ಮೂಲಕ ಕಾಯವಾಙ್ಮನಃಕೃತವಾದ ದೊಡ್ಡದೊಡ್ಡ ಪಾಪಗಳನ್ನು ಕೂಡ ಬೆಂಕಿಯು ಬಿದಿರುಮೆಳೆನ್ನು ಸುಡುವಂತೆ ತೊಲಗಿಸಿಕೊಳ್ಳುವರು.

**ಕೇಚಿತ್ಕೇವಲಯಾ ಭಕ್ತ್ಯಾ ವಾಸುದೇವಪರಾಯಣಾಃ ।**
**ಅಘಂ ಧುನ್ವನ್ತಿ ಕಾರ್ತ್ಸ್ನ್ಯೇನ ನೀಹಾರಮಿವ ಭಾಸ್ಕರಃ ॥ 15 ॥**

15. ಕೆಲವರು ಮಾತ್ರ ವಾಸುದೇವನಲ್ಲಿಯೇ ತಾತ್ಪರ್ಯವುಳ್ಳವರಾಗಿದ್ದು ಕೊಂಡು ಸೂರ್ಯನು ಕಾವಳವನ್ನು ಹೋಗಲಾಡಿ ಸುವಂತೆ ಪಾಪವನ್ನು ಸಂಪೂರ್ಣವಾಗಿ ಕೇವಲ ಭಕ್ತಿಯಿಂದಲೇ ತೊಲಗಿಸಿಕೊಳ್ಳುತ್ತಾರೆ.

**ನ ತಥಾ ಹ್ಯಘವಾನ್ರಾಜನ್ ಪೂಯೇತ ತಪಆದಿಭಿಃ ।**
**ಯಥಾ ಕೃಷ್ಣಾರ್ಪಿತಪ್ರಾಣಸ್ತತ್ಪೂರುಷನಿಷೇವಯಾ ॥ 16 ॥**

16. ರಾಜನೆ, ಭಗವಂತನಿಗೇ ತನ್ನ ಸರ್ವಪ್ರಾಣಗಳನ್ನೂ ಸಮರ್ಪಣೆಮಾಡಿ ಆತನ ಭಕ್ತರ ಸೇವೆಮಾಡಿದ್ದರಿಂದ ಹೇಗೆ ಪಾಪಿಯಾದವನು ಪರಿಶುದ್ಧನಾಗುವನೋ ಹಾಗೆ ತಪಸ್ಸೇ ಮುಂತಾದವುಗಳ ಮೂಲಕ ಶುದ್ಧನಾಗಲಾರನು.

**ಸಧ್ರೀಚೀನೋ ಹ್ಯಯಂ ಲೋಕೇ ಪನ್ಥಾಃ ಕ್ಷೇಮೋಽಕುತೋಭಯಃ ।**
**ಸುಶೀಲಾಃ ಸಾಧವೋ ಯತ್ರ ನಾರಾಯಣಪರಾಯಣಾಃ ॥ 17 ॥**

17. ಈ ಭಕ್ತಿಮಾರ್ಗವೇ ಲೋಕದಲ್ಲಿ ಸಮೀಚೀನವಾದದ್ದು ಕ್ಷೇಮಕರ ವಾದದ್ದು, ಮತ್ತು ಯಾತರ ಭಯವೂ ಇಲ್ಲದ್ದು. ಈ ಮಾರ್ಗದಲ್ಲಿ ನಾರಾಯಣ ಪರಾಯಣರಾದ ಸುಶೀಲರಾದ ಸಾಧುಗಳು ಇರುತ್ತಾರೆ.

**ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣಪರಾಙ್ಮುಖಮ್ ।**
**ನ ನಿಷ್ಪುನನ್ತಿ ರಾಜೇನ್ದ್ರ ಸುರಾಕುಮ್ಭಮಿವಾಪಗಾಃ ॥ 18 ॥**

18. ಯಾವನು ಭಗವಂತನಿಗೆ ಪರಾಙ್ಮುಖನಾಗಿರುವನೋ ಅವನನ್ನು ಸುರಾಭಾಂಡವನ್ನು ಪವಿತ್ರವಾದ ನದಿಗಳೂ ಪಾವನಗೊಳಿಸಲಾರದಿರುವಂತೆ, ಯಾವ ಪ್ರಾಯಶ್ಚಿತ್ತಗಳೇ ಆಗಲಿ ಪಾವನಗೊಳಿಸಲಾರದೆ ಇರತ್ತವೆ.

**ಸಕೃನ್ಮನಃ ಕೃಷ್ಣಪದಾರವಿನ್ದಯೋ–**
**ರ್ನಿವೇಶಿತಂ ತದ್ಗುಣರಾಗಿ ಯೈರಿಹ ।**
**ನ ತೇ ಯಮಂ ಪಾಶಭೃತಶ್ಚ ತದ್ಭಟಾನ್**
**ಸ್ವಪ್ನೇಽಪಿ ಪಶ್ಯನ್ತಿ ಹಿ ಚೀರ್ಣನಿಷ್ಕೃತಾಃ ॥ 19 ॥**

19. ಯಾರಾದರೂ ತಮ್ಮ ಮನಸ್ಸನ್ನು ಭಗವಂತನ ಗುಣಗಳಲ್ಲಿಯೇ ಅನುರಕ್ತವಾಗಿ ಮಾಡಿಕೊಂಡು ಆತನ ಪಾದಾರವಿಂದಗಳಲ್ಲಿ ಒಂದೇ ಒಂದು ಸಲ ಇಟ್ಟುಕೊಂಡರೂ ಸಾಕು, ಅವರು ಎಲ್ಲಾ ಪ್ರಾಯಶ್ಚಿತ್ತಗಳನ್ನೂ ಮಾಡಿಕೊಂಡಂತೆ. ಅವರು ಯಮನನ್ನೂ ಪಾಶಧಾರಿಗಳಾದ ಅವನ ದೂತರನ್ನು ಕನಸಿನಲ್ಲಿಕೂಡ ಕಾಣಲಾರರು. ಇನ್ನು ಅವರಿಗೆ ಪಾಪದ ಫಲವೆಲ್ಲಿಂದ ಬರಬೇಕು?

*****

## ನಾರದನು ಚಿತ್ರಕೇತುವಿಗೆ ಉಪದೇಶಮಾಡಿದ ಸಂಕರ್ಷಣವಿದ್ಯೋಪಾಸನೆ

**(ಆರನೆಯ ಸ್ಕಂಧ, ಹದಿನಾರನೆಯ ಅಧ್ಯಾಯ)**

**ಓಂ ನಮಸ್ತುಭ್ಯಂ ಭಗವತೇ ವಾಸುದೇವಾಯ ಧೀಮಹಿ ।**
**ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ 18 ॥**

18. ಭಗವಂತನಾದ ನಿನಗೆ ಸಮಸ್ಕಾರ! ವಾಸುದೇವನಾದ ನಿನಗೆ ನಮಸ್ಕಾರ! (ನಾವು ನಿನ್ನನ್ನೇ) ಧ್ಯಾನಮಾಡುವೆವು. ಪ್ರದ್ಯುಮ್ನನಾದ, ಅನಿರುದ್ಧನಾದ, ಸಂಕರ್ಷಣನಾದ ನಿನಗೆ ನಮಸ್ಕಾರ!

**ನಮೋ ವಿಜ್ಞಾನಮಾತ್ರಾಯ ಪರಮಾನನ್ದಮೂರ್ತಯೇ ।**
**ಆತ್ಮಾರಾಮಾಯ ಶಾನ್ತಾಯ ನಿವೃತ್ತದ್ವೈತದೃಷ್ಟಯೇ ॥ 19 ॥**

19. ಕೇವಲಚಿದ್ರೂಪನೂ, ಪರಮಾನಂದನಿಗ್ರಹನೂ ಆದ, ಸ್ವಸ್ವರೂಪ

ದಲ್ಲಿಯೇ ಆರಮಣಮಾಡುತ್ತಿರುವ, ಶಾಂತನಾದ, ದ್ವೈತದೃಷ್ಟಿಯು ಒಂದಿಷ್ಟೂ ಇಲ್ಲದ, ನಿನಗೆ ನಮಸ್ಕಾರ!

**ಆತ್ಮಾನನ್ದಾನುಭೂತ್ಯೈವ ನ್ಯಸ್ತಶಕ್ತ್ಯೂರ್ಮಯೇ ನಮಃ ।**
**ಹೃಷೀಕೇಶಾಯ ಮಹತೇ ನಮಸ್ತೇ ವಿಶ್ವಮೂರ್ತಯೇ ॥ 20 ॥**

20. ಆತ್ಮಾನಂದದ ಅನುಭವದಿಂದಲೇ ತೆಗೆದುಹಾಕಿದ ಮಾಯಾಶಕ್ತಿಯ ರಾಗದ್ವೇಷಾದಿಗಳೆಂಬ ಅಲೆಗಳುಳ್ಳವನೆ, ಹೃಷೀಕೇಶನೆ, ಮಹಾಂತನೆ, ವಿಶ್ವರೂಪನೆ, ನಿನಗೆ ನಮಸ್ಕಾರ!

**ವಚಸ್ಯುಪರತೇಽಪ್ರಾಪ್ಯ ಯ ಏಕೋ ಮನಸಾ ಸಹ ।**
**ಅನಾಮರೂಪಶ್ಚಿನ್ಮಾತ್ರಃ ಸೋಽವ್ಯಾನ್ನಃ ಸದಸತ್ಪರಃ ॥ 21 ॥**

21. ವಾಕ್ಕು ಮನಸ್ಸಿನೊಡನೆ ಯಾವಾತನನ್ನು ವಿಷಯೀಕರಿಸಲಾರದೆ ಸುಮ್ಮನಾಗಲು ನಾಮರೂಪಗಳಿಲ್ಲದ ಚಿನ್ಮಾತ್ರವಾಗಿ ಯಾವನೊಬ್ಬನೇ (ಉಳಿದುಕೊಂಡಿರುವನೋ) ವ್ಯಾಕೃತಾವ್ಯಾಕೃತಗಳನ್ನು ಮೀರಿರುವ ಆ ಪರಮಾತ್ಮನು ನಮ್ಮನ್ನು ಕಾಪಾಡಲಿ!

**ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ ।**
**ಮೃನ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ ॥ 22 ॥**

22. ಈ ಜಗತ್ತೆಲ್ಲವೂ ಯಾವನಲ್ಲಿ ಇದ್ದುಕೊಂಡಿರುವದೋ, ಯಾವನಲ್ಲಿ ಲಯವಾಗುವದೋ, ಯಾವನಿಂದಲೇ ಹುಟ್ಟುವದೋ, ಮಣ್ಣಿನಕಾರ್ಯವಾದ ಗಡಿಗೆಮಡಕೆ ಮುಂತಾದವುಗಳಲ್ಲಿರುವ ಮೃತ್ತ್ವವೆಂಬ ಜಾತಿಯಂತಿರುವ ಸರ್ವಸಾಮಾನ್ಯವಾದ ಆ ಬ್ರಹ್ಮವಾದ ನಿನಗೆ ನಮಸ್ಕಾರ!

**ಯನ್ನ ಸ್ಪೃಶನ್ತಿ ನ ವಿದುರ್ಮನೋಬುದ್ಧೀನ್ದ್ರಿಯಾಸವಃ ।**
**ಅನ್ತರ್ಬಹಿಶ್ಚ ವಿತತಂ ವ್ಯೋಮವತ್ತನ್ನತೋಽಸ್ಮ್ಯಹಮ್ ॥ 23 ॥**

23. ಮನಸ್ಸು, ಬುದ್ಧಿ, ಇಂದ್ರಿಯಗಳು, ಪ್ರಾಣಗಳು – ಇವು ಯಾವವೂ ಯಾವದನ್ನು ಮುಟ್ಟಲಾರವೋ, ಅರಿಯಲಾರವೋ, ಒಳಗೂ ಹೊರಗೂ ಆಕಾಶದಂತೆ ವ್ಯಾಪಿಸಿಕೊಂಡಿರುವ ಆತನನ್ನು ನಾನು ನಮಸ್ಕರಿಸುತ್ತೇನೆ.

**ದೇಹೇನ್ದ್ರಿಯಪ್ರಾಣಮನೋಧಿಯೋಽಮೀ**
**ಯದಂಶವಿದ್ಧಾಃ ಪ್ರಚರನ್ತಿ ಕರ್ಮಸು ।**
**ನೈವಾನ್ಯದಾ ಲೋಹಮಿವಾಪ್ರತಪ್ತಂ**
**ಸ್ಥಾನೇಷು ತದ್ದ್ರಷ್ಟ್ರಪದೇಶಮೇತಿ ॥ 24 ॥**

24. ದೇಹ, ಇಂದ್ರಿಯಗಳು, ಪ್ರಾಣಗಳು, ಮನಸ್ಸು, ಬುದ್ಧಿ, – ಎಂಬಿವು ಯಾವದರ ಚೈತನ್ಯಾಂಶದಿಂದ ಕೂಡಿದಾಗಲೇ ತಮ್ಮತಮ್ಮ ಕರ್ಮಗಳಲ್ಲಿ ವರ್ತಿಸುತ್ತಿರುವವೋ, ಕಾಯಿಸದ ಕಬ್ಬಿಣವು ಸುಡಲಾರದಿರುವಂತೆ, ಆ ಚೈತನ್ಯದ ಸಂಬಂಧವಿಲ್ಲದಾಗ ವಿಷಯಗಳನ್ನು ತಿಳಿಸಲೇ ಆರವೋ, ಆ ಬ್ರಹ್ಮವೇ ಆಯಾ ಉಪಾಧಿಗಳಲ್ಲಿ 'ದ್ರಷ್ಟೃ' (ನೋಡತಕ್ಕದ್ದು) ಎಂಬ ಹೆಸರನ್ನು ಪಡೆಯುತ್ತಿರುವದು.

**ಓಂ ನಮೋ ಭಗವತೇ ಮಹಾಪುರುಷಾಯ, ಮಹಾನುಭಾವಾಯ,**
**ಮಹಾಭೂತಿಪತಯೇ, ಸಕಲಸಾತ್ವತಪರಿವೃಢನಿಕರಕರಕಮಲ**
**ಕುಡ್ಮಲೋಪಲಾಲಿತಚರಣಾರವಿನ್ದಯುಗಲ ಪರಮೇಷ್ಠಿನ್ ನಮಸ್ತೇ ॥ 25 ॥**

25. ಮಹಾಪುರಷನಾದ, ಮಹಾನುಭಾವನಾದ ಮಹಾವಿಭೂತಿಗಳ ಒಡೆಯನಾದ, ಭಗವಂತನಿಗೆ (ಓಂ ನಮಃ) ನಮಸ್ಕಾರ! ಸಕಲಸಾತ್ವತ ಶ್ರೇಷ್ಠಸಮೂಹದ ಕರಕಮಲದ ಮೊಗ್ಗುಗಳಿಂದ ಸೇವಿಸಲ್ಪಟ್ಟ ಚರಣಕಮಲ ಯುಗ್ಮಗಳುಳ್ಳ ಉತ್ಕೃಷ್ಟಸ್ವರೂಪನೆ, ಸರ್ವೇಶ್ವರನೆ, ನಿನಗೆ ನಮಸ್ಕಾರ!

**ಅಜಿತ, ಜಿತಃ ಸಮಮತಿಭಿಃ ಸಾಧುಭಿರ್ಭವಾಞ್ಜಿತಾತ್ಮಭಿರ್ಭವತಾ ।**
**ವಿಜಿತಾಸ್ತೇಽಪಿ ಚ ಭಜತಾಮಕಾಮಾತ್ಮನಾಂ ಯ ಆತ್ಮದೋಽತಿಕರುಣಃ ॥ 34 ॥**

34. **ಚಿತ್ರಕೇತುವಿಂತೆಂದನು:** ದೇವ, ನೀನು ಅಜಿತನೇ ಆಗಿರುವೆಯಾದರೂ ಸಮಬುದ್ಧಿಯುಳ್ಳ ಸಾಧುಗಳಿಂದ ಜಿತನಾಗಿರುವೆ, (ಅವರ ವಶನಾಗಿರುವೆ)! ಅವರೂ ನಿನ್ನಿಂದ ಜಿತರಾಗಿರುವರು, ಏಕೆಂದರೆ ನಿಷ್ಕಾಮರಾಗಿ ನಿನ್ನನ್ನು ಭಜಿಸುತ್ತಿರುವವರಿಗೆ ಅತಿಕರುಣೆಯಿಂದ ಆತ್ಮನನ್ನೇ ಕೊಟ್ಟಿರುವೆ!

**ತವ ವಿಭವಃ ಖಲು ಭಗವನ್ ಜಗದುದಯಸ್ಥಿತಿಲಯಾದೀನಿ ।**
**ವಿಶ್ವಸೃಜಸ್ತೇಂಶಾಂಶಾಸ್ತತ್ರ ಮೃಷಾ ಸ್ಪರ್ಧನ್ತೇ ಪೃಥಗಭಿಮತ್ಯಾ ॥ 35 ॥**

35. ಭಗವಂತನೆ, ಜಗತ್ತಿನ ಸೃಷ್ಟಿಸ್ಥಿತಿಲಯಾದಿಗಳು ನಿನ್ನ ವಿಭೂತಿಯಲ್ಲವೆ?

ವಿಶ್ವಸೃಷ್ಟಿಕರ್ತನಾದ ನಿನ್ನ ಅಂಶದಲ್ಲಿ ಅಂಶರಾಗಿರುವವರು, ಸುಳ್ಳುಸುಳ್ಳೇ ಬೇರೆಬೇರೆಯಾಗಿ ತಾವು ಜಗತ್ಕರ್ತ್ರಾದಿಗಳೆಂಬ ಅಭಿಮಾನದಿಂದ ಒಬ್ಬರೊಡನೊಬ್ಬರು ಸ್ಪರ್ಧಿಸುತ್ತಿರುವರು!

**ಪರಮಾಣುಪರಮಮಹತೋಸ್ತ್ವಮಾದ್ಯನ್ತಾನ್ತರವರ್ತೀ ತ್ರಯವಿಧುರಃ ।**
**ಅದಾವನ್ತೇಽಪಿ ಚ ಸತ್ತ್ವಾನಾಂ ಯದ್ಧ್ರುವಂ ತದೇವಾನ್ತರಾಲೇಽಪಿ ॥ 36 ॥**

36. ಪರಮ ಅಣುವಿಗೂ ಪರಮ ಮಹತ್ತಾಗಿರುವದಕ್ಕೂ ನೀನು ಆದಿ, ಅಂತ, ಮಧ್ಯ – ಎಲ್ಲವೂ ಆಗಿ ಈ ಅದ್ಯಂತಮಧ್ಯಗಳು ಮೂರೂ ಇಲ್ಲದವನಾಗಿರುವೆ. ಭಾವಗಳ ಆದಿಯಲ್ಲಿಯೂ ಅಂತದಲ್ಲಿಯೂ ಇರುವದಲ್ಲವೆ, ನಡುವೆಯೂ ನಿಜವಾಗಿ ಇರುವದು?

**ಕ್ಷಿತ್ಯಾದಿಭಿರೇಷ ಕಿಲಾವೃತಃ ಸಪ್ತಭಿರ್ದಶಗುಣೋತ್ತರೈರಾಣ್ಡಕೋಶಃ ।**
**ಯತ್ರ ಪತತ್ಯಣುಕಲ್ಪಃ ಸಹಾಣ್ಡಕೋಟಿಭಿಸ್ತದನನ್ತಃ ॥ 37 ॥**

37. ಪೃಥಿವಿಯೇಮುಂತಾಗಿ (ಅಹಂಕಾರ, ಮಹತ್ತತ್ವದವರೆಗಿನ) ಹತ್ತುಹತ್ತರಷ್ಟು ಹೆಚ್ಚಿನ ಮುಂದುಮುಂದಿನ ಆವರಣಗಳಿಂದೊಡಗೂಡಿರುವ ಈ ಅಂಡಕೋಶವು, ಇಂಥ ಬ್ರಹ್ಮಾಂಡಕೋಟಿಗಳೊಡಗೂಡಿದರೂ ನಿನ್ನೊಳಗೆ ಪರಮಾಣುವಿನಂತೆ ಬಿದ್ದಿರುವದಲ್ಲವೆ? ಆದ್ದರಿಂದ ನೀನು ಅನಂತನು.

**ವಿಷಯತೃಷೋ ನರಪಶವೋ ಯ ಉಪಾಸತೇ ವಿಭೂತೀರ್ನ ಪರಂ ತ್ವಾಮ್ ।**
**ತೇಷಾಮಾಶಿಷ ಈಶ ತದನು ವಿನಶ್ಯನ್ತಿ ಯಥಾ ರಾಜಕುಲಮ್ ॥ 38 ॥**

38. ವಿಷಯಾಭಿಲಾಷೆಯುಳ್ಳ ಯಾರು ನಿನ್ನ ವಿಭೂತಿಗಳನ್ನೇ ಉಪಾಸನೆಮಾಡುತ್ತಿರುವರೋ, ಆದರೆ ನಿನ್ನನ್ನು ಮಾತ್ರ ಉಪಾಸನೆಮಾಡದೆ ಇರುವರೋ, ಎಲೈ ಸರ್ವೇಶ್ವರನೆ, ಅವರ ಕಾಮಗಳು, ಹೇಗೆ (ಎಲ್ಲಾ) ರಾಜಕುಲವೂ ಅಳಿದುಹೋಗುವದೋ ಹಾಗೆಯೇ, ಆ ವಿಭೂತಿಗಳೊಡನೆಯೇ ನಾಶವಾಗುವದು.

**ಕಾಮಧಿಯಸ್ತ್ವಯಿ ರಚಿತಾ ನ ಪರಮ ರೋಹನ್ತಿ ಯಥಾ ಕರಮ್ಭಬೀಜಾನಿ ।**
**ಜ್ಞಾನಾತ್ಮನ್ಯಗುಣಮಯೇ ಗುಣಗಣತೋಽಸ್ಯ ದ್ವನ್ದ್ವಜಾಲಾನಿ ॥ 39 ॥**

39. ಎಲೈ ಪರಮಾತ್ಮನೇ, ಜ್ಞಾನಾತ್ಮನೂ ನಿರ್ಗುಣನೂ ಆಗಿರುವ ನಿನ್ನಲ್ಲಿ ಮಾಡಿದ ಸಕಾಮಭಾವನೆಗಳು, ಸುಟ್ಟಬೀಜಗಳು ಮೊಳಕೆಯಾಗದೆ ಇರುವಂತೆ,

ಮುಂದೆ ಮೊಳಕೆಯಾಗದೆ ಇರುವವು. ಈ ಜೀವನಿಗೆ ಆಗುವ ಸುಖದುಃಖಾದಿ ದ್ವಂದ್ವಗಳೆಲ್ಲವೂ ಗುಣದಿಂದಲೇ ಅಲ್ಲವೆ, ಉಂಟಾಗುವವು?

**ಜಿತಮಜಿತ ತದಾ ಭವತಾ ಯದಾಹ ಭಾಗವತಂ ಧರ್ಮಮನವದ್ಯಮ್ ।**
**ನಿಷ್ಕಿಞ್ಚನಾ ಯೇ ಮುನಯ ಆತ್ಮಾರಾಮಾ ಯಮುಪಾಸತೇಽಪವರ್ಗಾಯ ॥40 ॥**

40. ಎಲೈ ಅಜಿತನಾದ ಪರಮೇಶ್ವರನೆ, ಯಾವಾಗ ನಿರ್ದುಷ್ಟವಾದ ಭಾಗವತಧರ್ಮವನ್ನು ಉಪದೇಶಮಾಡಿದೆಯೊ, ಆಗ ನೀನು ಜಯಶೀಲನಾದೆ! ಏಕೆಂದರೆ ಯಾವದೊಂದನ್ನೂ ತಮ್ಮದ್ದೆಂದು ಇಟ್ಟುಕೊಳ್ಳದೆ ಇರುವ ಆತ್ಮಾರಾಮರಾದ ಮುನಿಗಳೂ ಮೋಕ್ಷಪ್ರಾಪ್ತಿಗಾಗಿ ಆ ಭಾಗವತಧರ್ಮದ ಆಶ್ರಯವನ್ನು ಮಾಡುವರು.

**ವಿಷಮಮತಿರ್ನ ಯತ್ರ ನೃಣಾಂ ತ್ವಮಹಮಿತಿ ಮಮ ತವೇತಿ ಚ ಯದನ್ಯತ್ರ ।**
**ವಿಷಮಧಿಯಾ ರಚಿತೋ ಯಃ ಸ ಹ್ಯವಿಶುದ್ಧಃ ಕ್ಷಯಿಷ್ಣುರಧರ್ಮಬಹುಲಃ ॥41 ॥**

41. ಈ ಭಾಗವತಧರ್ಮದಲ್ಲಿ ನಾನು, ನೀನು; ನನ್ನದು, ನಿನ್ನದು – ಎಂಬ ವಿಷಮಬುದ್ಧಿಯು ಉಂಟಾಗುವಂತೆಯೇ ಇರುವದಿಲ್ಲ. ಇದಕ್ಕೆ ಬದಲಾಗಿ ವಿಷಮಬುದ್ಧಿಯಿಂದ ಯಾವ ಧರ್ಮವನ್ನು ಮಾಡುವರೋ ಅದೇ ಅಶುದ್ಧವಾದದ್ದು, ನಾಶವಾಗುವ ಸ್ವಭಾವದ್ದು, ಅಧರ್ಮಪ್ರಾಯವಾದದ್ದು.

**ಕಃ ಕ್ಷೇಮೋ ನಿಜಪರಯೋಃ ಕಿಯಾನರ್ಥಃ ಸ್ವಪರದ್ರುಹಾ ಧರ್ಮೇಣ ।**
**ಸ್ವದ್ರೋಹಾತ್ತವ ಕೋಪಃ ಪರಸಂಪೀಡಯಾ ಚ ತಥಾಽಧರ್ಮಃ ॥ 42 ॥**

42. ತನಗೂ ಮತ್ತೊಬ್ಬರಿಗೂ ಕೆಟ್ಟದ್ದನ್ನು ಮಾಡುವ ಸಕಾಮಧರ್ಮದಿಂದ ತನಗಾಗಲಿ ಮತ್ತೊಬ್ಬರಿಗಾಗಲಿ ಯಾವ ಕ್ಷೇಮವಾದೀತು? ಆತ್ಮದ್ರೋಹ ಮಾಡಿಕೊಳ್ಳುವದರಿಂದ ನಿನಗೆ ಕೋಪವುಂಟಾಗುತ್ತದೆ, ಮತ್ತೊಬ್ಬರಿಗೆ ಪೀಡೆಯನ್ನು ಮಾಡುವದರಿಂದ ಅಧರ್ಮವೇ ಆಗುತ್ತದೆ.

**ನ ವ್ಯಭಿಚರತಿ ತವೇಕ್ಷಾ ಯಯಾ ಹ್ಯಭಿಹಿತೋ ಭಾಗವತೋ ಧರ್ಮಃ ।**
**ಸ್ಥಿರಚರಸತ್ತ್ವಕದಮ್ಬೇಷ್ವಪೃಥಗ್ಧಿಯೋ ಯಮುಪಾಸತೇ ತ್ವಾರ್ಯಾಃ ॥ 43 ॥**

43. ದೇವ, ಯಾವ ದೃಷ್ಟಿಯಿಂದ ನೀನು ಭಾಗವತಧರ್ಮವನ್ನು ಹೇಳಿರುವೆಯೋ, ಅದು ಎಂದಿಗೂ ತಪ್ಪುದಾರಿಗೆ ಹೋಗುವಂತಿಲ್ಲ. ಆದ್ದರಿಂದ

ಯಾವ ಸಜ್ಜನರು ಚರಾಚರಪ್ರಾಣಿಗಳಲ್ಲಿ ಸಮದೃಷ್ಟಿಯಿಂದ ಕೂಡಿರುವರೋ ಅವರೇ ಅದನ್ನು ಸೇವಿಸುತ್ತಾರೆ.

**ನ ಹಿ ಭಗವನ್ನಘಟಿತಮಿದಂ ತ್ವದ್ದರ್ಶನಾನ್ನೃಣಾಮಖಿಲಪಾಪಕ್ಷಯಃ ।**
**ಯನ್ನಾಮ ಸಕೃಚ್ಛ್ರವಣಾತ್ ಪುಲ್ಕಸಕೋಽಪಿ ವಿಮುಚ್ಯತೇ ಸಂಸಾರಾತ್ ॥ 44 ॥**

44. ಭಗವಂತನೆ, ನಿನ್ನ ದರ್ಶನಮಾತ್ರದಿಂದ ಜನರಿಗೆ ಸರ್ವಪಾಪವೂ ಕ್ಷಯವಾಗುತ್ತದೆ ಎಂಬುದೇನೂ ಅಸಂಭವವಾದದ್ದಲ್ಲ. ಏಕೆಂದರೆ ನಿನ್ನ ನಾಮವನ್ನು ಒಮ್ಮೆ ಕೇಳಿದ ಮಾತ್ರದಿಂದ ಕಟುಕನೂ ಸಂಸಾರದಿಂದ ಮುಕ್ತನಾಗುತ್ತಾನೆ.

**ಅಥ ಭಗವನ್ವಯಮಧುನಾ ತ್ವದವಲೋಕಪರಿಮೃಷ್ಟಾಶಯಮಲಾಃ ।**
**ಸುರಋಷಿಣಾ ಯದುದಿತಂ ತಾವಕೇನ ಕಥಮನ್ಯಥಾ ಭವತಿ ॥ 45 ॥**

45. ಭಗವಂತನೆ, ಈಗ ನಿನ್ನ ದರ್ಶನಮಾತ್ರದಿಂದ ನನ್ನ ಅಂತಃಕರಣ ದಲ್ಲಿರುವ ಸರ್ವಮಲಗಳೂ ತೊಳೆದುಹೋಗಿರುತ್ತವೆ. ನಿನ್ನ ಭಕ್ತರಾದ ದೇವರ್ಷಿನಾರದರು ಹೇಳಿದ್ದು ಹೇಗೆತಾನೆ ಹುಸಿಯಾದೀತು.

**ವಿದಿತಮನನ್ತ ಸಮಸ್ತಂ ತವ ಜಗದಾತ್ಮನಾ ಜನೈರಿಹಾಚರಿತಮ್ ।**
**ವಿಜ್ಞಾಪ್ಯಂ ಪರಮಗುರೋಃ ಕಿಯದಿವ ಸವಿತುರಿವ ಖದ್ಯೋತೈಃ ॥ 46 ॥**

46. ಎಲೈ ಅನಂತನೆ, ಜನರು ಇಲ್ಲಿ ಏನೇನು ಮಾಡುತ್ತಾರೋ ಅದೆಲ್ಲವೂ ಜಗದಾತ್ಮನಾಗಿರುವ ನಿನಗೆ ತಿಳಿದೇಇರುತ್ತದೆ. ಸೂರ್ಯನಿಗೆ ಮಿಣುಕುಹುಳುಗಳು ಹೇಗೆ ಬೆಳಕನ್ನು ಕೊಡಲಾರವೋ ಹಾಗೆ ಪರಮಗುರುವಾದ ನಿನ್ನಲ್ಲಿ ನಾನು ಬಿನ್ನವಿಸಿಕೊಳ್ಳುವದು ಏನುತಾನೆ ಇದೆ?

**ನಮಸ್ತುಭ್ಯಂ ಭಗವತೇ ಸಕಲಜಗತ್ಸ್ಥಿತಿಲಯೋದಯೇಶಾಯ ।**
**ದುರವಸಿತಾತ್ಮಗತಯೇ ಕುಯೋಗಿನಾಂ ಭಿದಾ ಪರಮಹಂಸಾಯ ॥ 47 ॥**

47. ಸಕಲಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಒಡೆಯನಾದ ಭಗವಂತನೆ, ಕುಯೋಗಿಗಳ ಭೇದದೃಷ್ಟಿಯಿಂದ ನಿಶ್ಚಯಿಸಲಾಗದ ಸ್ವರೂಪವುಳ್ಳಾತನೆ, ಪರಮಪವಿತ್ರಾತ್ಮನೆ, ನಿನಗೆ ನಮಸ್ಕಾರ!

**ಯಂ ವೈ ಶ್ವಸನ್ತಮನು ವಿಶ್ವಸೃಜಃ ಶ್ವಸನ್ತಿ**
**ಯಂ ಚೇಕಿತಾನಮನು ಚಿತ್ತಯ ಉಚ್ಚಕನ್ತಿ ।**
**ಭೂಮಣ್ಡಲಂ ಸರ್ಷಪಾಯತಿ ಯಸ್ಯ ಮೂರ್ಧ್ನಿ**
**ತಸ್ಮೈ ನಮೋ ಭಗವತೇऽಸ್ತು ಸಹಸ್ರಮೂರ್ಧ್ನೇ ॥ 48 ॥**

48. ಯಾವಾತನ ವ್ಯಾಪಾರದಿಂದ ಬ್ರಹ್ಮಾದಿಗಳು ವ್ಯಾಪಾರಮಾಡುತ್ತಿರುವವರೋ, ಯಾವನ ಚೈತನ್ಯವನ್ನು ಅನುಸರಿಸಿ ಕರಣಗಳೆಲ್ಲವೂ ಅರಿಯುತ್ತಿರುವವೋ, ಯಾವಾತನ ತಲೆಯಮೇಲೆ ಭೂಮಂಡಲವು ಸಾಸುವೆಕಾಳಾಗಿ ತೋರುವದೋ, ಆ ಸಹಸ್ರಶೀರ್ಷನಾದ ಭಗವಂತನಿಗೆ ನಮಸ್ಕಾರವಿರಲಿ!

**ಅಹಂ ವೈ ಸರ್ವಭೂತಾನಿ ಭೂತಾತ್ಮಾ ಭೂತಭಾವನಃ ।**
**ಶಬ್ದಬ್ರಹ್ಮ ಪರಂ ಬ್ರಹ್ಮ ಮಮೋಭೇ ಶಾಶ್ವತೀ ತನೂ ॥ 51 ॥**

51. **ಶ್ರೀಭಗವಂತನು ಚಿತ್ರಕೇತುವನ್ನು ಕುರಿತು ಇಂತೆಂದನು:** ನಾನೇ ಸರ್ವಭೂತಗಳ ರೂಪದಲ್ಲಿರುವೆನು, ನಾನೇ ಆ ಪ್ರಾಣಿಗಳ ಆತ್ಮನು, ಭೂತಗಳನ್ನು ಉಂಟುಮಾಡುವವನೂ ನಾನೇ. ಶಬ್ದಬ್ರಹ್ಮವಾದ ವೇದವೂ ಪರಬ್ರಹ್ಮವೂ ನನ್ನೆರಡು ಶಾಶ್ವತವೇಷಗಳು.

**ಲೋಕೇ ವಿತತಮಾತ್ಮಾನಂ ಲೋಕಂ ಚಾತ್ಮನಿ ಸಂತತಮ್ ।**
**ಉಭಯಂ ಚ ಮಯಾ ವ್ಯಾಪ್ತಂ ಮಯಿ ಚೈವೋಭಯಂ ಕೃತಮ್ ॥ 52 ॥**

52. ಲೋಕದಲ್ಲಿ ವ್ಯಾಪ್ತವಾಗಿರುವ ಆತ್ಮನನ್ನೂ, ಆತ್ಮನಲ್ಲಿಯೇ ಇದ್ದುಕೊಂಡಿರುವ ಲೋಕವನ್ನೂ, ಈ ಎರಡೂ ನನ್ನಿಂದಲೇ ವ್ಯಾಪ್ತವಾಗಿರುವದೆಂಬುದನ್ನೂ ನನ್ನಲ್ಲಿಯೇ ಈ ಎರಡೂ ಕಲ್ಪಿತವಾಗಿವೆಯೆಂಬುದನ್ನೂ ತಿಳಿದುಕೊಳ್ಳಬೇಕು.

**ಯಥಾ ಸುಷುಪ್ತಃ ಪುರುಷೋ ವಿಶ್ವಂ ಪಶ್ಯತಿ ಚಾऽऽತ್ಮನಿ ।**
**ಆತ್ಮಾನಮೇಕದೇಶಸ್ಥಂ ಮನ್ಯತೇ ಸ್ವಪ್ನ ಉತ್ಥಿತಃ ॥ 53 ॥**

**ಏವಂ ಜಾಗರಣಾದೀನಿ ಜೀವಸ್ಥಾನಾನಿ ಚಾऽऽತ್ಮನಃ ।**
**ಮಾಯಾಮಾತ್ರಾಣಿ ವಿಜ್ಞಾಯ ತದ್ದ್ರಷ್ಟಾರಂ ಪರಂ ಸ್ಮರೇತ್ ॥ 54 ॥**

53–54. ಹೇಗೆ ತನಿನಿದ್ರೆಯಿಂದ ಸ್ವಪ್ನದಲ್ಲಿ ಎಚ್ಚತ್ತವನು ತನ್ನಲ್ಲಿ ಎಲ್ಲಾ

ಪ್ರಪಂಚವನ್ನೂ ತಾನು ಅದರಲ್ಲಿ ಒಂದು ಕಡೆಯಲ್ಲಿರುವೆನೆಂದೂ ಭಾವಿಸಿಕೊಳ್ಳುತ್ತಿರುವನೋ ಹಾಗೆಯೇ ಎಚ್ಚರವೇ ಮುಂತಾದ ಮೂರು ಜೀವನ ಅವಸ್ಥೆಗಳೂ ಆತ್ಮನ ಮಾಯೆಯಿಂದ ಕಲ್ಪಿತವಾದವುಗಳೆಂದು ಅರಿತುಕೊಂಡು, ಅವುಗಳನ್ನು ನೋಡುತ್ತಿರುವ ಆತ್ಮನೇ ಪರಮಾತ್ಮನೆಂದು ನೆನಪಿಗೆ ತಂದುಕೊಳ್ಳಬೇಕು.

**ಯೇನ ಪ್ರಸುಪ್ತಃ ಪುರುಷಃ ಸ್ವಾಪಂ ವೇದಾಽಽತ್ಮನಸ್ತದಾ ।**
**ಸುಖಂ ಚ ನಿರ್ಗುಣಂ ಬ್ರಹ್ಮ ತಮಾತ್ಮಾನಮವೇಹಿ ಮಾಮ್ ॥ 55 ॥**

55. ಗಾಢನಿದ್ರೆಯಲ್ಲಿರುವ ಪುರುಷನು ಏತರಿಂದ ತನ್ನ ನಿದ್ರೆಯನ್ನೂ ಅಲ್ಲಿ ಆಗುವ ಸುಖವನ್ನೂ ಅರಿತುಕೊಳ್ಳುವನೋ ಆ ನಿರ್ಗುಣಬ್ರಹ್ಮವಾದ ನಾನೇ ಆತ್ಮನೆಂದು ಅರಿತುಕೋ.

**ಉಭಯಂ ಸ್ಮರತಃ ಪುಂಸಃ ಪ್ರಸ್ವಾಪಪ್ರತಿಬೋಧಯೋಃ ।**
**ಅನ್ವೇತಿ ವ್ಯತಿರಿಚ್ಯೇತ ತಜ್ಜ್ಞಾನಂ ಬ್ರಹ್ಮ ತತ್ಪರಮ್ ॥ 56 ॥**

56. ಮನುಷ್ಯನು ಈ ಎರಡನ್ನೂ ಸ್ಮರಿಸುತಿರುವಲ್ಲಿ ಸುಷುಪ್ತಿ, ಎಚ್ಚರ – ಇವುಗಳಲ್ಲಿ ಯಾವದು ಅನುಸರಿಸಿಕೊಂಡೇ ಇರುವದೋ, ಯಾವದು ಈ ಎರಡಕ್ಕೂ ವ್ಯತಿರಿಕ್ತವಾಗಿರುವದೋ, ಅದೇ ಜ್ಞಾನವು, ಅದೇ ಪರಬ್ರಹ್ಮವು.

**ಯದೇತದ್ ವಿಸ್ಮೃತಂ ಪುಂಸೋ ಮದ್ಭಾವಂ ಭಿನ್ನಮಾತ್ಮನಃ ।**
**ಶತಃ ಸಂಸಾರ ಏತಸ್ಯ ದೇಹಾದ್ದೇಹೋ ಮೃತೇರ್ಮೃತಿಃ ॥ 57 ॥**

57. ಮನಷ್ಯನಿಗೆ ಈ ತನ್ನ ಸ್ವರೂಪವು ವಿಸ್ಮೃತವಾಯಿತೆಂದರೆ, ಅದು ತನಗಿಂತ ಭಿನ್ನವಾಗುತ್ತದೆ. ಅದರಿಂದ ಇವರಿಗೆ ಜನ್ಮದಮೇಲೆ ಜನ್ಮ, ಮರಣದ ಮೇಲೆ ಮರಣ – ಹೀಗೆ ಸಂಸಾರವುಂಟಾಗುತ್ತಿರುವದು.

**ಲಬ್ಧ್ವೇಹ ಮಾನುಷೀಂ ಯೋನಿಂ ಜ್ಞಾನವಿಜ್ಞಾನಸಂಭವಾಮ್ ।**
**ಆತ್ಮಾನಂ ಯೋ ನ ಬುಧ್ಯೇತ ನ ಕ್ವಚಿಚ್ಛಮಮಾಪ್ನುಯಾತ್ ॥ 58 ॥**

58. ಇಲ್ಲಿ ಜ್ಞಾನವಿಜ್ಞಾನಗಳನ್ನು ಪಡೆಯಬಹುದಾದ ಮಾನುಷಜನ್ಮವನ್ನು ಪಡೆದುಕೊಂಡೂ ಯಾವನು ಆತ್ಮನನ್ನು ಅರಿತುಕೊಳ್ಳದೆ ಇರುವನೋ, ಅವನಿಗೆ ಎಲ್ಲಿಯೂ ಶಾಂತಿಯು ದೊರಕಲಾರದು.

**ಸ್ವತ್ರೇಹಾಯಾಂ ಪರಿಕ್ಲೇಶಂ ತತಃ ಫಲವಿಪರ್ಯಯಮ್ ।**
**ಅಭಯಂ ಚಾಪ್ಯನೀಹಾಯಾಂ ಸಂಕಲ್ಪಾದ್ವಿರಮೇತ್ ಕವಿಃ ॥ 59 ॥**

59. ಪ್ರವೃತ್ತಿಯಿಂದ ಆಯಾಸವೂ ಆ ಬಳಿಕ ವಿಪರೀತಫಲವೂ ಆಗುವದೆಂಬುದನ್ನೂ ನಿವೃತ್ತಿಯಿಂದ ಈ ಎರಡೂ ಇಲ್ಲದೆ ಅಭಯಮೋಕ್ಷವೇ ಆಗುವದೆಂಬುದನ್ನೂ ನೆನೆದು ದೂರದರ್ಶಿಯಾದವನು ಸಂಕಲ್ಪವನ್ನು ಮಾಡದೆ ಇರಬೇಕು.

**ಸುಖಾಯ ದುಃಖಮೋಕ್ಷಾಯ ಕುರ್ವಾತೇ ದಮ್ಪತೀ ಕ್ರಿಯಾಃ ।**
**ತತೋಽನಿವೃತ್ತಿರಪ್ರಾಪ್ತಿರ್ದುಃಖಸ್ಯ ಚ ಸುಖಸ್ಯ ಚ ॥ 60 ॥**

**ಏವಂ ವಿಪರ್ಯಯಂ ಬುದ್ಧ್ವಾ ನೃಣಾಂ ವಿಜ್ಞಾಭಿಮಾನಿನಾಮ್ ।**
**ಆತ್ಮನಶ್ಚ ಗತಿಂ ಸೂಕ್ಷ್ಮಾಂ ಸ್ಥಾನತ್ರಯವಿಲಕ್ಷಣಾಮ್ ॥ 61 ॥**

**ದೃಷ್ಟಶ್ರುತಾಭಿರ್ಮಾತ್ರಾಭಿರ್ನಿರ್ಮುಕ್ತಃ ಸ್ವೇನ ತೇಜಸಾ ।**
**ಜ್ಞಾನವಿಜ್ಞಾನಸಂತುಷ್ಟೋ ಮದ್ಭಕ್ತಃ ಪುರುಷೋ ಭವೇತ್ ॥ 62 ॥**

60–62. ದಂಪತಿಗಳು ಸುಖವಾಗಲಿ, ದುಃಖ ಹೋಗಲಿ – ಎಂದು ಕರ್ಮವನ್ನು ಮಾಡುವರು; ಅದರಿಂದ ದುಃಖವು ಹೋಗದು, ಸುಖವು ಸಿಕ್ಕದು. ತಿಳಿವಳಿಕೆಯುಳ್ಳವನೆಂಬ ಅಭಿಮಾನದಿಂದ ಮನುಜನು ಹೀಗೆ ವಿಪರೀತಫಲವಾಗುವದನ್ನರಿತು ಅವಸ್ಥಾತ್ರಯ ವಿಲಕ್ಷಣವಾಗಿರುವ ತನ್ನ ಸ್ವರೂಪವನ್ನರಿತುಕೊಂಡು ತನ್ನ ತೇಜೋಬಲದಿಂದ ಇಹಪರ ವಿಷಯಾಂಶಗಳಿಂದ ಮುಕ್ತನಾಗಿ, ಜ್ಞಾನವಿಜ್ಞಾನಸಂತುಷ್ಟನಾಗಿ ನನ್ನ ಭಕ್ತನಾದ ಪುರುಷನಾಗಬೇಕು.

*****

## ಪಾರ್ವತಿಯಿಂದ ಶಪ್ತನಾದ ಚಿತ್ರಕೇತುವಿನ ನುಡಿ

(ಆರನೆಯ ಸ್ಕಂಧ, ಹದಿನೇಳನೆಯ ಅಧ್ಯಾಯ)

**ಸಂಸಾರಚಕ್ರ ಏತಸ್ಮಿಂಜ್ಜನ್ತುರಜ್ಞಾನಮೋಹಿತಃ ।**
**ಭ್ರಾಮ್ಯನ್ಸುಖಂ ಚ ದುಃಖಂ ಚ ಭುಙ್ಕ್ತೇ ಸರ್ವತ್ರ ಸರ್ವದಾ ॥ 18 ॥**

18. ಜೀವನು ಈ ಸಂಸಾರಚಕ್ರದಲ್ಲಿ ಅಜ್ಞಾನದಿಂದ ಮೋಹಿತನಾಗಿ

ತೊಳಲುತ್ತಾ ಸುಖವನ್ನೂ ದುಃಖವನ್ನೂ ಯಾವಾಗಲೂ ಎಲ್ಲೆಲ್ಲಿಯೂ ಅನುಭವಿಸುತ್ತಿರುವನು.

**ನೈವಾತ್ಮಾ ನ ಪರಶ್ಚಾಪಿ ಕರ್ತಾ ಸ್ಯಾತ್ಸುಖದುಃಖಯೋಃ ।**
**ಕರ್ತಾರಂ ಮನ್ಯತೇಽಪ್ರಾಜ್ಞ ಆತ್ಮಾನಂ ಪರಮೇವ ಚ ॥ 19 ॥**

19. ಸುಖವನ್ನಾಗಲಿ ದುಃಖವನ್ನಾಗಲಿ ಉಂಟುಮಾಡುವವನು ತಾನೂ ಅಲ್ಲ, ಮತ್ತೊಬ್ಬನೂ ಅಲ್ಲ. ಅಜ್ಞನಾದವನೇ ತನ್ನನ್ನು ಅಥವಾ ಮತ್ತೊಬ್ಬನನ್ನು ಇವಕ್ಕೆ ಕಾರಣವೆಂದು ಎಣಿಸುವನು.

**ಗುಣಪ್ರವಾಹ ಏತಸ್ಮಿನ್ ಕಃ ಶಾಪಃ ಕೋನ್ವನುಗ್ರಹಃ ।**
**ಕಃ ಸ್ವರ್ಗೋ ನರಕಃ ಕೋ ವಾ ಕಿಂ ಸುಖಂ ದುಃಖಮೇವ ವಾ ॥ 20 ॥**

20. ಸತ್ತ್ವರಜಸ್ತಮೋಗುಣಗಳ ಪ್ರವಾಹವಾಗಿರುವ ಈ ಸಂಸಾರದಲ್ಲಿ ಶಾಪವೆಂದರೆ ಯಾವದು, ಅನುಗ್ರಹವೆಂದರೆ ಯಾವದು? ಸ್ವರ್ಗವು ಯಾವದು, ನರಕವು ಯಾವದು? ಸುಖವೆಂಬುದು ಯಾವದು, ದುಃಖವೆಂಬುದಾದರೂ ಯಾವದು?

**ಏಕಃ ಸೃಜತಿ ಭೂತಾನಿ ಭಗವಾನಾತ್ಮಮಾಯಯಾ ।**
**ಏಷಾಂ ಬನ್ಧಂ ಚ ಮೋಕ್ಷಂ ಚ ಸುಖಂ ದುಃಖಂ ಚ ನಿಷ್ಕಲಃ ॥ 21 ॥**

21. ನಿಷ್ಕಲನಾದ ಭಗವಂತನೊಬ್ಬನೇ ತನ್ನ ಮಾಯೆಯಿಂದ ಪ್ರಾಣಿಗಳನ್ನು ಸೃಷ್ಟಿಸುತ್ತಿರುವನು, ಇವಕ್ಕೆ ಬಂಧವನ್ನೂ ಮೋಕ್ಷವನ್ನೂ ದುಃಖವನ್ನೂ ಉಂಟುಮಾಡುತ್ತಿರುವನು.

**ನ ತಸ್ಯ ಕಶ್ಚಿದ್ದಯಿತಃ ಪ್ರತೀಪೋ ನ ಜ್ಞಾತಿಬನ್ಧುರ್ನ ಪರೋ ನ ಚ ಸ್ವಃ ।**
**ಸಮಸ್ಯ ಸರ್ವತ್ರ ನಿರಞ್ಜನಸ್ಯ ಸುಖೇ ನ ರಾಗಃ ಕುತ ಏವ ರೋಷಃ ॥ 22 ॥**

22. ಅವನಿಗೆ ಯಾವನೊಬ್ಬನೂ ಬೇಕಾದವನಿಲ್ಲ, ಆಗದವನೂ ಇಲ್ಲ. ತನ್ನವನಾದ ನೆಂಟನಿಲ್ಲ, ಅನ್ಯನಿಲ್ಲ, ತನ್ನವನೂ, ಇಲ್ಲ. ಎಲ್ಲದರಲ್ಲಿಯೂ ಸಮನಾಗಿ ಏತರ ಅಂಟೂ ಇಲ್ಲದ ಆತನಿಗೆ ಸುಖದಲ್ಲಿ ರಾಗವಿಲ್ಲ. ದುಃಖದಲ್ಲಿ ರೋಷವೆಲ್ಲಿಯದು?

*****

## ಪ್ರಹ್ಲಾದನು ತಿಳಿಸಿದ ಭಗವತ್‌ಶರಣಾಗತಿ

(ಏಳನೆಯ ಸ್ಕಂಧ, ಐದನೆಯ ಅಧ್ಯಾಯ)

**ತತ್ಸಾಧು ಮನ್ಯೇಽಸುರವರ್ಯ ದೇಹಿನಾಂ**
**ಸದಾ ಸಮುದ್ವಿಗ್ನಧಿಯಾಮಸದ್ಗ್ರಹಾತ್ ।**
**ಹಿತ್ವಾಽಽತ್ಮಪಾತಂ ಗೃಹಮನ್ಧಕೂಪಂ**
**ವನಂ ಗತೋ ಯದ್ಧರಿಮಾಶ್ರಯೇತ ॥ 5 ॥**

5. **ಪ್ರಹ್ಲಾದನಿಂತೆಂದನು:** ಅಸುರಶ್ರೇಷ್ಠನಾದ ತಂದೆಯೇ, ತಪ್ಪುತಿಳಿವಳಿಕೆಯಿಂದ ಕಳವಳಗೊಂಡಿರುವ ಬುದ್ಧಿಯುಳ್ಳ ಜನರಿಗೆ, ತಮ್ಮನ್ನು ಕೆಡಹಿಬೀಳಿಸುವ ಕಗ್ಗತ್ತಲೆಯ ಹಾಳುಭಾವಿಯಂತಿರುವ ಮನೆಯನ್ನು ಬಿಟ್ಟು ಅರಣ್ಯಕ್ಕೆ ಹೋಗಿ ಹರಿಯನ್ನಾಶ್ರಯಿಸುವದೇ ಒಳ್ಳೆಯದೆಂದು ನನ್ನ ಮತವು.

**ಸ್ವಃ ಪರಶ್ಚೇತ್ಯಸದ್ಗ್ರಾಹಃ ಪುಂಸಾಂ ಯನ್ಮಾಯಯಾ ಕೃತಃ ।**
**ವಿಮೋಹಿತಧಿಯಾಂ ದೃಷ್ಟಸ್ತಸ್ಮೈ ಭಗವತೇ ನಮಃ ॥ 11 ॥**

11. ಭ್ರಾಂತಚಿತ್ತರಾದ ಪುರುಷರಲ್ಲಿ ಕಾಣಬರುವ ತನ್ನವನು, ಅನ್ಯರವನು – ಎಂಬ ತಪ್ಪಿನ ಭಾವನೆಯು ಯಾವಾತನ ಮಾಯೆಯಿಂದಾಗಿರುವದೋ, ಆ ಭಗವಂತನಿಗೆ ನಮಸ್ಕಾರ!

**ಸ ಯದಾಽನುವ್ರತಃ ಪುಂಸಾಂ ಪಶುಬುದ್ಧಿರ್ವಿಭಿದ್ಯತೇ ।**
**ಅನ್ಯ ಏಷ ತಥಾಽನ್ಯೋಽಹಮಿತಿ ಭೇದಗತಾಽಸತೀ ॥ 12 ॥**

12. ಆತ್ಮನು ಯಾವಾಗ ಮನುಷ್ಯರಿಗೆ ಅನುಕೂಲವಾಗುವನೋ, ಆಗ 'ಇವನು ಮತ್ತೊಬ್ಬನು, ನಾನು ಮತ್ತೊಬ್ಬನು' ಎಂಬ ಭೇದವಿಷಯಕವಾದ ಪಶುಬುದ್ಧಿಯು ನಾಶವಾಗುವದು.

**ಸ ಏಷ ಆತ್ಮಾ ಸ್ವಪರೇತ್ಯಬುದ್ಧಿಭಿ–**
**ರ್ದುರತ್ಯಯಾನುಕ್ರಮಣೋ ನಿರೂಪ್ಯತೇ ।**
**ಮುಹ್ಯನ್ತಿ ಯದ್ವರ್ತ್ಮನಿ ವೇದವಾದಿನೋ**
**ಬ್ರಹ್ಮಾದಯೋ ಹ್ಯೇಷ ಭಿನತ್ತಿ ಮೇ ಮತಿಮ್ ॥ 13 ॥**

13. ಅನುಸರಿಸಿ ತಿಳಿಯುವದಕ್ಕೆ ಆಗದ ಆ ಈ ಆತ್ಮನೇ, ಬುದ್ಧಹೀನರಿಂದ 'ತಾನು, ಅನ್ಯನು' – ಎಂದು ಭಿನ್ನವಾಗಿ ತಿಳಿಯಲ್ಪಡುತ್ತಿರುವನು. ಆತನ ಜಿಜ್ಞಾಸಾಮಾರ್ಗದಲ್ಲಿ ವೇದವಾದಿಗಳಾದ ಬ್ರಹ್ಮಾದಿಗಳೂ ದಾರಿತಪ್ಪುತ್ತಿರುವರು! ಈತನೇ ನೀನು ಹೇಳುತ್ತಿರುವಂತೆ ನನ್ನ ಬುದ್ಧಿಯನ್ನು ಮಾರ್ಪಡಿಸಿರುತ್ತಾನೆ.

**ಯಥಾ ಭ್ರಾಮ್ಯತ್ಯಯೋ ಬ್ರಹ್ಮನ್ ಸ್ವಯಮಾಕರ್ಷಸನ್ನಿಧೌ ।**
**ತಥಾ ಮೇ ಭಿದ್ಯತೇ ಚೇತಶ್ಚಕ್ರಪಾಣೇರ್ಯದೃಚ್ಛಯಾ ॥ 14 ॥**

14. ಅಯಸ್ಕಾಂತದ ಹತ್ತಿರದಲ್ಲಿ ಹೇಗೆ ಕಬ್ಬಿಣವು ತಾನೇ ಚಲಿಸುತ್ತಿರುವದೋ, ಹಾಗೆಯೇ ನನ್ನ ಬುದ್ಧಿಯು ಆ ಚಕ್ರಪಾಣಿಯ ಇಚ್ಛೆಯಿಂದ ಬೇರ್ಪಟ್ಟಿರುತ್ತದೆ.

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।**
**ಅರ್ಚನಂ ವನ್ದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥ 23 ॥**
**ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।**
**ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥ 24 ॥**

23–24. ವಿಷ್ಣುಭಗವಂತನ ಗುಣಾದಿಗಳನ್ನು ಶ್ರವಣಮಾಡುವದು, ಆತನನ್ನೇ ಕೀರ್ತನಮಾಡುವದು, ಸ್ಮರಿಸುತ್ತಿರುವುದು, ಆತನ ಪಾದಗಳನ್ನು ಸೇವಿಸುವದು, ಆತನನ್ನೇ ಅರ್ಚನೆಮಾಡುತ್ತಿರುವುದು, ನಮಸ್ಕರಿಸುವದು, ಆತನ ದಾಸನಾಗಿರುವದು, ಆತನ ಸಖನಾಗಿರುವದು, ತನ್ನನ್ನು ಆತನಿಗೆ ಒಪ್ಪಿಸಿಬಿಡುವದು – ಈ ಒಂಬತ್ತು ಬಗೆಯ ಭಕ್ತಿಯನ್ನು ವಿಷ್ಣುಭಗವಂತನಲ್ಲಿ ಸಂಪೂರ್ಣ ಅರ್ಪಣಬುದ್ಧಿಯಿಂದ ಮಾಡಿದರೆ, ಅದೇ ಉತ್ತಮವಾದ ಅಧ್ಯಯನವೆಂದು ನನ್ನ ಮತವು.

**ಮತಿರ್ನ ಕೃಷ್ಣೇ ಪರತಃ ಸ್ವತೋ ವಾ**
**ಮಿಥೋಽಭಿಪದ್ಯೇತ ಗೃಹವ್ರತಾನಾಮ್ ।**
**ಅದಾನ್ತಗೋಭಿರ್ವಿಶತಾಂ ತಮಿಸ್ರಂ**
**ಪುನಃ ಪುನಶ್ಚರ್ವಿತಚರ್ವಣಾನಾಮ್ ॥ 30 ॥**

30. ಸಂಸಾರಿಜನರಿಗೆ ಮತ್ತೊಬ್ಬರ ಉಪದೇಶದಿಂದಲಾಗಲಿ, ತಮ್ಮಿಂದಲೇ ಆಗಲಿ, ಒಬ್ಬರೊಬ್ಬರೊಡನೆ ವಿಚಾರಮಾಡುವದರಿಂದಾಗಲಿ, ಕೃಷ್ಣಭಗವಂತನಲ್ಲಿ ಬುದ್ಧಿಯು ಉಂಟಾಗಲಾರದು. ಇಂದ್ರಿಯಗಳನ್ನು ವಶಗೊಳಿಸಿಕೊಳ್ಳಲಾರದೆ ಅವರು ಮತ್ತೆಮತ್ತೆ ಅನುಭವಿಸಿದ ಭೋಗಗಳನ್ನೇ ಅನುಭವಿಸುತ್ತಾ ನರಕವನ್ನೂ

ಹೋಗುತ್ತಿರುವರು.

**ನೈಷಾಂ ಮತಿಸ್ತಾವದುರುಕ್ರಮಾಙ್ಘ್ರಿಂ**
**ಸ್ಪೃಶತ್ಯನರ್ಥಾಪಗಮೋ ಯದರ್ಥಃ ।**
**ಮಹೀಯಸಾಂ ಪಾದರಜೋऽಭಿಷೇಕಂ**
**ನಿಷ್ಕಿಞ್ಚನಾನಾಂ ನ ವೃಣೀತ ಯಾವತ್ ॥ 32 ॥**

32. ಎಲ್ಲಿಯವರೆಗೂ ಅಕಿಂಚನರಾದ ಮಹಾತ್ಮನ ಪಾದಧೂಲಿಯಲ್ಲಿ ಸ್ನಾನಮಾಡುವದನ್ನು ಆರಿಸಿಕೊಳ್ಳುವದಿಲ್ಲವೋ ಅಲ್ಲಿಯವರೆಗೆ ಅವರ ಬುದ್ಧಿಯು ಅನರ್ಥನಾಶವನ್ನುಂಟು ಮಾಡಿಕೊಡುವ ಆ ಉರುಕ್ರಮನಾದ ವಿಷ್ಣುವಿನ ಪಾದವನ್ನು ಮುಟ್ಟುವದಿಲ್ಲ.

*****

## ಪ್ರಹ್ಲಾದನು ಅಸುರಬಾಲಕರಿಗೆ ಮಾಡಿದ ಉಪದೇಶ

(ಏಳನೆಯ ಸ್ಕಂಧ, ಆರನೆಯ ಅಧ್ಯಾಯ)

**ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ ಭಾಗವತಾನಿಹ ।**
**ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ ॥ 1 ॥**

1. ವಿವೇಕಿಯಾದವನು ಇನ್ನೂ ಕೌಮಾರಾವಸ್ಥೆಯಲ್ಲಿರುವಾಗಲೇ ಭಾಗವತಧರ್ಮಗಳನ್ನು ಅನುಷ್ಠಾನಮಾಡಬೇಕು. ಮನುಷ್ಯಜನ್ಮವು ದುರ್ಲಭವು; ಇದೇ ಪುರುಷಾರ್ಥವನ್ನು ಕೊಡತಕ್ಕದ್ದು. ಆದರೆ ಅದೂ ಅನಿತ್ಯವಾದದ್ದು.

**ಯಥಾ ಹಿ ಪುರುಷಸ್ಯೇಹ ವಿಷ್ಣೋಃ ಪಾದೋಪಸರ್ಪಣಮ್ ।**
**ಯದೇಷ ಸರ್ವಭೂತಾನಾಂ ಪ್ರಿಯ ಆತ್ಮೇಶ್ವರಃ ಸುಹೃತ್ ॥ 2 ॥**

2. ಮನುಷ್ಯನಿಗೆ ವಿಷ್ಣುವಿನ ಪಾದಕ್ಕೆ ಶರಣುಹೋಗುವದೇ ಜನ್ಮದ ಸಾರ್ಥಕ್ಯವು. ಏಕೆಂದರೆ ಈತನೇ ಸರ್ವಪ್ರಾಣಿಗಳಿಗೂ ಪ್ರಿಯನು, ಆತ್ಮನು, ಒಡೆಯನು, ಒಳ್ಳೆಯದನ್ನು ಬಯಸುವ ಸ್ನೇಹಿತನು.

**ಸುಖಮೈನ್ದ್ರಿಯಕಂ ದೈತ್ಯಾ ದೇಹಯೋಗೇನ ದೇಹಿನಾಮ್ ।**
**ಸರ್ವತ್ರ ಲಭ್ಯತೇ ದೈವಾದ್ಯಥಾ ದುಃಖಮಯತ್ನತಃ ॥ 3 ॥**

**ತತ್ಪ್ರಯಾಸೋ ನ ಕರ್ತವ್ಯೋ ಯತ ಆಯುರ್ವ್ಯಯಃ ಪರಮ್ ।**
**ನ ತಥಾ ವಿನ್ದತೇ ಕ್ಷೇಮಂ ಮುಕುನ್ದಚರಣಾಮ್ಬುಜಮ್ ॥ 4 ॥**

**ತತೋ ಯತೇತ ಕುಶಲಃ ಕ್ಷೇಮಾಯ ಭಯಮಾಶ್ರಿತಃ ।**
**ಶರೀರಂ ಪೌರುಷಂ ಯಾವನ್ನ ವಿಪದ್ಯೇತ ಪುಷ್ಕಲಮ್ ॥ 5 ॥**

3–5. ದೈತ್ಯರುಗಳಿರಾ, ದೇಹವು ಬಂತೆಂದರೆ ಶರೀರಿಗಳಿಗೆ ಹೇಗೆ ಯಾವ ಪ್ರಯತ್ನವೂ ಇಲ್ಲದೆ ಅದೃಷ್ಟಕ್ಕನುಗುಣವಾಗಿ ದುಃಖವು ಒದಗಿಯೇತೀರುವದೋ ಹಾಗೆಯೇ ಎಲ್ಲೆಲ್ಲಿಯೂ ಇಂದ್ರಿಯಸುಖವೂ ಅದೃಷ್ಟವಶದಿಂದ ತಾನೇ ಸಿಕ್ಕುವದು. ಆದ್ದರಿಂದ ಅದಕ್ಕಾಗಿ ಪ್ರಯಾಸವನ್ನು ಮಾಡಬಾರದು; ಅದರಿಂದ ಸುಮ್ಮನೆ ಆಯುಸ್ಸು ಕಳೆದುಹೋಗುವದು, ಮುಕುಂದನ ಚರಣಕಮಲಪ್ರಾಪ್ತಿರೂಪವಾದ ಮೋಕ್ಷವು ಹಾಗೆ ತನಗೆತಾನೇ ಸಿಕ್ಕುವದಿಲ್ಲ. ಆದ್ದರಿಂದ ಸಂಸಾರಭಯದಲ್ಲಿರುವ ಜಾಣನಾದವನು ಎಲ್ಲಾ ಬಗೆಯಿಂದಲೂ ಸರಿಯಾಗಿರುವ ಈ ಮಾನವಶರೀರವು ನಾಶವಾಗುವದರೊಳಗಾಗಿ ಮೋಕ್ಷಕ್ಕಾಗಿ ಪ್ರಯತ್ನಮಾಡಬೇಕು.

**ನ ಹ್ಯಚ್ಯುತಂ ಪ್ರೀಣಯತೋ ಬಹ್ವಾಯಾಸೋಽಸುರಾತ್ಮಜಾಃ ।**
**ಆತ್ಮತ್ವಾತ್ಸರ್ವಭೂತಾನಾಂ ಸಿದ್ಧತ್ವಾದಿಹ ಸರ್ವತಃ ॥ 19 ॥**

19. ಅಸುರಾತ್ಮಜರೆ, ಅಚ್ಯುತಭಗವಂತನನ್ನು ಸಂತೋಷಗೊಳಿಸಬೇಕು ಎನ್ನುವವರಿಗೆ ಬಹಳ ಆಯಾಸವೇನೂ ಆಗುವಂತಿಲ್ಲ. ಏಕೆಂದರೆ ಆತನು ಸರ್ವಭೂತಗಳಿಗೂ ಆತ್ಮನಾಗಿರುತ್ತಾನೆ; ಎಲ್ಲಾ ಕಡೆಯಲ್ಲಿಯೂ ಎಲ್ಲಕ್ಕೂ ಸತ್ತಾಪ್ರದನಾಗಿ ಸ್ವಯಂಸಿದ್ಧನಾಗಿರುತ್ತಾನೆ.

**ಪರಾವರೇಷು ಭೂತೇಷು ಬ್ರಹ್ಮಾನ್ತಸ್ಥಾವರಾದಿಷು ।**
**ಭೌತಿಕೇಷು ವಿಕಾರೇಷು ಭೂತ್ವೇಷ್ವಥ ಮಹತ್ಸು ಚ ॥ 20 ॥**

**ಗುಣೇಷು ಗುಣಸಾಮ್ಯೇ ಚ ಗುಣವ್ಯತಿಕರೇ ತಥಾ ।**
**ಏಕ ಏವ ಪರೋ ಹ್ಯಾತ್ಮಾ ಭಗವಾನೀಶ್ವರೋಽವ್ಯಹಃ ॥ 21 ॥**

20–21. ಸ್ಥಾವರಾದಿಯಾಗಿ ಬ್ರಹ್ಮನವರೆಗಿನ ಸಣ್ಣದೊಡ್ಡ ಎಲ್ಲಾ ಪ್ರಾಣಿಗಳಲ್ಲಿಯೂ ಭೌತಿಕಕಾರ್ಯಗಳಲ್ಲಿಯೂ ಮಹಾಭೂತಗಳಲ್ಲಿಯೂ ತ್ರಿಗುಣಗಳಲ್ಲಿಯೂ ಗುಣಸಾಮ್ಯವಾದ ಪ್ರಧಾನದಲ್ಲಿಯೂ ಗುಣವ್ಯತಿಕರವಾದ

ಮಹತ್ತತ್ತ್ವಾದಿಗಳಲ್ಲಿಯೂ ಭಗವಂತನೂ ಈಶ್ವರನೂ ಅವ್ಯಯನೂ ಆದ ಪರಮಾತ್ಮನೊಬ್ಬನೇ ಇದ್ದುಕೊಂಡಿರುವನು.

**ಪ್ರತ್ಯಗಾತ್ಮಸ್ವರೂಪೇಣ ದೃಶ್ಯರೂಪೇಣ ಚ ಸ್ವಯಮ್ ।**
**ವ್ಯಾಪ್ಯವ್ಯಾಪಕನಿರ್ದೇಶ್ಯೋ ಹ್ಯನಿರ್ದೇಶ್ಯೋ ವಿಕಲ್ಪಿತಃ ॥ 22 ॥**

22. ತಾನು ತನ್ನ ರೂಪದಲ್ಲಿ ಇಂಥವನೆಂದು ನಿರ್ದೇಶಮಾಡುವದಕ್ಕಾಗದವನಾದರೂ ಪ್ರತ್ಯಗಾತ್ಮರೂಪದಿಂದಲೂ ದೃಶ್ಯವಸ್ತುಗಳ ರೂಪದಿಂದಲೂ ವ್ಯಾಪ್ಯವು, ವ್ಯಾಪಕವು – ಎಂದು ನಿರ್ದೇಶ ಮಾಡಲ್ಪಡುತ್ತಾನೆ; ಅವಿಕಲ್ಪನಾದರೂ ಇವೆಲ್ಲದರ ರೂಪದಿಂದ ವಿಕಲ್ಪಿತನಾಗುತ್ತಾನೆ.

**ಕೇವಲಾನುಭವಾನನ್ದಸ್ವರೂಪಃ ಪರಮೇಶ್ವರಃ ।**
**ಮಾಯಯಾನ್ತರ್ಹಿತೈಶ್ವರ್ಯ ಈಯತೇ ಗುಣಸರ್ಗಯಾ ॥ 23 ॥**

23. ಶುದ್ಧವಾದ ಅನುಭವಾನಂದಸ್ವರೂಪನಾದ ಪರಮೇಶ್ವರನು ಗುಣಸ್ರಷ್ಟವಾದ ಮಾಯೆಯಿಂದ ಮರೆಯಾಗಿರುವ ಐಶ್ವರ್ಯವುಳ್ಳವನಾಗಿ ಕಾಣುತ್ತಿರುತ್ತಾನೆ.

**ತಸ್ಮಾತ್ಸರ್ವೇಷು ಭೂತೇಷು ದಯಾಂ ಕುರುತ ಸೌಹೃದಮ್ ।**
**ಆಸುರಂ ಭಾವಮುನ್ಮುಚ್ಯ ಯಯಾ ತುಷ್ಯತ್ಯಧೋಕ್ಷಜಃ ॥ 24 ॥**

24. ಆದ್ದರಿಂದ ಅಸುರಭಾವವನ್ನು ಬಿಟ್ಟುಕೊಟ್ಟು ಸರ್ವಭೂತಗಳಲ್ಲಿಯೂ ದಯೆಯನ್ನೂ ಸ್ನೇಹವನ್ನೂ ತೊರಿಸಿರಿ. ಅದರಿಂದ ಆ ಅಧೋಕ್ಷಜನು ಸಂತುಷ್ಟನಾಗುವನು.

**ತುಷ್ಟೇ ಚ ತತ್ರ ಕಿಮಲಭ್ಯಮನನ್ತ ಆದ್ಯೇ**
**ಕಿಂ ತೈರ್ಗುಣವ್ಯತಿಕರಾದಿಹ ಯೇ ಸ್ವಸಿದ್ಧಾಃ ।**
**ಧರ್ಮಾದಯಃ ಕಿಮಗುಣೇನ ಚ ಕಾಙ್ಕ್ಷಿತೇನ**
**ಸಾರಂಜುಷಾಂ ಚರಣಯೋರುಪಗಾಯತಾಂ ನಃ ॥ 25 ॥**

25. ಆ ಆದ್ಯ ಅನಂತಭಗವಂತನು ಸಂತುಷ್ಟನಾದರೆ, ಗುಣಗಳ ಮಿಶ್ರಣದಿಂದ ಸ್ವಯಂಸಿದ್ಧವಾಗುವ ಧರ್ಮಾದಿಗಳಿಂದಲಾಗಲಿ, ಅಥವಾ ನಿರ್ಗುಣವಾದ ಮೋಕ್ಷದ ಇಚ್ಛೆಯಿಂದಲಾಗಲಿ, ಸಾರವನ್ನೇ ಸೇವಿಸುತ್ತಾ ಭಗವ

ಚ್ಚರಣವನ್ನೇ ಗಾನಮಾಡುತ್ತಿರುವ ನಮ್ಮಗಳಿಗೆ ಆಗಬೇಕಾದದ್ದೇನಿರುವದು?

**ಧರ್ಮಾರ್ಥಕಾಮ ಇತಿ ಯೋऽಭಿಹಿತಸ್ತ್ರಿವರ್ಗ**
**ಈಕ್ಷಾತ್ರಯೀ ನಯದಮಾ ವಿವಿಧಾ ಚ ವಾರ್ತಾ ।**
**ಮನ್ಯೇ ತದೇತದಖಿಲಂ ನಿಗಮಸ್ಯ ಸತ್ಯಂ**
**ಸ್ವಾತ್ಮಾರ್ಪಣಂ ಸ್ವಸುಹೃದಃ ಪರಮಸ್ಯ ಪುಂಸಃ ॥ 26 ॥**

26. ಧರ್ಮ, ಅರ್ಥ, ಕಾಮ – ಎಂದು ಹೇಳಿರುವ ತ್ರಿವರ್ಗ, ಆತ್ಮವಿದ್ಯೆ, ಕರ್ಮ, ವಿದ್ಯೆ, ತರ್ಕ, ದಂಡನೀತಿ, ಮತ್ತು ಬಗೆಬಗೆಯ ಜೀವನೋಪಾಯ – ಇವೆಲ್ಲವೂ ವೈದಿಕ ಸತ್ಯವೇ ಸರಿ. ಇವುಗಳೆಲ್ಲಕ್ಕಿಂತಲೂ ಪರಮಸತ್ಯವೆಂದರೆ ನಮ್ಮ ಹಿತೈಷಿಯಾದ ಪರಮಪುರುಷನಿಗೆ ಸ್ವಾತ್ಮಾರ್ಪಣವೇ ಎಂದು ನನ್ನ ಮತವು.

**ಜ್ಞಾನಂ ತದೇತದಖಿಲಂ ದುರವಾಪಮಾಹ**
**ನಾರಾಯಣೋ ನರಸಖಃ ಕಿಲ ನಾರದಾಯ ।**
**ಏಕಾನ್ತಿನಾಂ ಭಗವತಸ್ತದಕಿಞ್ಚನಾನಾಂ**
**ಪಾದಾರವಿನ್ದರಜಸಾ ಪ್ಲುತದೇಹಿನಾಂ ಸ್ಯಾತ್ ॥ 27 ॥**

27. ಈ ದುರ್ಲಭವಾದ ಜ್ಞಾನವೆಲ್ಲವನ್ನೂ ನರಸಖನಾದ ಶ್ರೀಮನ್ನಾರಾಯಣನು ನಾರದನಿಗೆ ಹೇಳಿಕೊಟ್ಟನಂತೆ, ತಮ್ಮದೆಂಬುದೇನೂ ಇಲ್ಲದೆ, ಏಕಾಂತಭಕ್ತರಾಗಿ, ಭಗವಂತನ ಪಾದಕಮಲಗಳ ಧೂಳಿಯು ಬಳಿದುಕೊಂಡ ದೇಹವುಳ್ಳವರಿಗೆ ಈ ಜ್ಞಾನವು ಅವಶ್ಯವಾಗಿ ಆಗುವದು.

******

## ಪ್ರಹ್ಲಾದನು ನಾರದರಿಂದ ಪಡೆದ ಉಪದೇಶದ ವರ್ಣನೆ

(ಏಳನೆಯ ಸ್ಕಂಧ, ಏಳನೆಯ ಅಧ್ಯಾಯ)

**ತಸ್ಮಾದ್ಭವದ್ಭಿಃ ಕರ್ತವ್ಯಂ ಕರ್ಮಣಾಂ ತ್ರಿಗುಣಾತ್ಮನಾಮ್ ।**
**ಬೀಜನಿರ್ಹರಣಂ ಯೋಗಃ ಪ್ರವಾಹೋಪರಮೋ ಧಿಯಃ ॥ 28 ॥**

28. ಆದ್ದರಿಂದ ನೀವು ತ್ರಿಗುಣಾತ್ಮಕವಾದ ಕರ್ಮಗಳ ಬೀಜವನ್ನು ನಾಶಗೊಳಿಸುವ ಯೋಗವನ್ನು ಮಾಡಬೇಕು. ಅದು ಬುದ್ಧಿವೃತ್ತಿಗಳ ಪ್ರವಾಹವನ್ನು ನಿಲ್ಲಿಸಿಬಿಡುತ್ತದೆ.

**ತತ್ರೋಪಾಯಸಹಸ್ರಾಣಾಮಯಂ ಭಗವತೋದಿತಃ ।**
**ಯದೀಶ್ವರೇ ಭಗವತಿ ಯಥಾ ಯೈರಞ್ಜಸಾ ರತಿಃ ॥ 29 ॥**

29. ಇದನ್ನು ಸಂಪಾದಿಸಿಕೊಳ್ಳುವದಕ್ಕೆ ಇರುವ ಸಾವಿರಗಟ್ಟಲೆಯ ಉಪಾಯಗಳಲ್ಲಿ ಭಗವಂತನೇ ಹೇಳಿರುವ ಶ್ರೇಷ್ಠ ಉಪಾಯವು ಯಾವದೆಂದರೆ, ಯಾವ ಸಾಧನಗಳಿಂದ ಆ ಈಶ್ವರನಾದ ಭಗವಂತನಲ್ಲಿ ಸ್ವಾಭಾವಿಕವಾದ ರತಿಯುಂಟಾಗುವದೋ ಅದೇ.

**ಗುರುಶುಶ್ರೂಷಯಾ ಭಕ್ತ್ಯಾ ಸರ್ವಲಬ್ಧಾರ್ಪಣೇನ ಚ ।**
**ಸಙ್ಗೇನ ಸಾಧುಭಕ್ತಾನಾಮೀಶ್ವರಾರಾಧನೇನ ಚ ॥ 30 ॥**

**ಶ್ರದ್ಧಯಾ ತತ್ಕಥಾಯಾಂ ಚ ಕೀರ್ತನೈರ್ಗುಣಕರ್ಮಣಾಮ್ ।**
**ತತ್ಪಾದಾಮ್ಬುರುಹಧ್ಯಾನಾತ್ ತಲ್ಲಿಙ್ಗೇಕ್ಷಾರ್ಹಣಾದಿಭಿಃ ॥ 31 ॥**

30–31. ಸಾಧನಗಳು ಯಾವವೆಂದರೆ: ಭಕ್ತಿಯಿಂದ ಗುರುಗಳ ಶುಶ್ರೂಷೆಯನ್ನು ಮಾಡುವದು, ತನಗೆ ದೊರಕಿದ್ದನ್ನೆಲ್ಲ ಭಗವಂತನಿಗೆ ಅರ್ಪಿಸುವದು, ಸತ್ಪುರುಷರಾದ ಭಕ್ತರ ಸಂಗ, ಈಶ್ವರನನ್ನು ಪೂಜಿಸುವದು, ಆತನ ಕಥಾಶ್ರವಣದಲ್ಲಿ ಶ್ರದ್ಧೆಯನ್ನಿಟ್ಟುಕೊಳ್ಳುವದು, ಆತನ ಗುಣಕರ್ಮಗಳನ್ನು ಕೀರ್ತನಮಾಡುತ್ತಿರುವದು, ಆತನ ಪಾದಕಮಲಗಲನ್ನು ಧ್ಯಾನಮಾಡುವದು, ಆತನ ಮೂರ್ತಿಯನ್ನು ನೋಡುವದು, ಪೂಜಿಸುವದು – ಇವೇ.

**ಹರಿಃ ಸರ್ವೇಷು ಭೂತೇಷು ಭಗವಾನಾಸ್ತ ಈಶ್ವರಃ ।**
**ಇತಿ ಭೂತಾನಿ ಮನಸಾ ಕಾಮೈಸ್ತೈಃ ಸಾಧು ಮಾನಯೇತ್ ॥ 32 ॥**

32. ಸಮಸ್ತಭೂತಗಳೊಳಗೂ ಈಶ್ವರನಾದ ಭಗವಂತನು ಇರುತ್ತಾನೆ ಎಂಬ ಭಾವನೆಯಿಂದ ಸಮಸ್ತಪ್ರಾಣಿಗಳ ಇಚ್ಛೆಯನ್ನು ಪೂರೈಸುತ್ತಾ ಗೌರವಿಸಬೇಕು.

**ಏವಂ ನಿರ್ಜಿತಷಡ್ವರ್ಗೈಃ ಕ್ರಿಯತೇ ಭಕ್ತಿರೀಶ್ವರೇ ।**
**ವಾಸುದೇವೇ ಭಗವತಿ ಯಥಾ ಸಲ್ಲಭತೇ ರತಿಮ್ ॥ 33 ॥**

33. ಕಾಮಕ್ರೋಧಾದಿಗಳ ರೂಪದ ಅರಿಷಡ್ವರ್ಗವನ್ನು ಗೆದ್ದುಕೊಂಡು ಈಶ್ವರ ಭಗವಂತನಲ್ಲಿ ಭಕ್ತಿಯನ್ನು ಮಾಡುತ್ತಿದ್ದರೆ ಅದರಿಂದ ವಾಸುದೇವ ಭಗವಂತನಲ್ಲಿ ಪ್ರೇಮವುಂಟಾಗುವದು.

**ನಿಶಮ್ಯ ಕರ್ಮಾಣಿ ಗುಣಾನತುಲ್ಯಾನ್**
**ವೀರ್ಯಾಣಿ ಲೀಲಾತನುಭಿಃ ಕೃತಾನಿ ।**
**ಯದಾಽತಿಹರ್ಷೋತ್ಪುಲಕಾಶ್ರುಗದ್ಗದಂ**
**ಪ್ರೋತ್ಕಣ್ಠ ಉದ್ಗಾಯತಿ ರೌತಿ ನೃತ್ಯತಿ ॥ 34 ॥**

**ಯದಾ ಗ್ರಹಗ್ರಸ್ತ ಇವ ಕ್ವಚಿದ್ಧಸ-**
**ತ್ಯಾಕ್ರನ್ದತೇ ಧ್ಯಾಯತಿ ವನ್ದತೇ ಜನಮ್ ।**
**ಮುಹುಃ ಶ್ವಸನ್ ವಕ್ತಿ ಹರೇ ಜಗತ್ಪತೇ**
**ನಾರಾಯಣೇತ್ಯಾತ್ಮಮತಿರ್ಗತತ್ರಪಃ ॥ 35 ॥**

34–35. ಪರಮಾತ್ಮನ ಲೀಲಾವಿಗ್ರಹಗಳು ಮಾಡಿದ ಕರ್ಮಗಳನ್ನೂ ಅಸಮಾನವಾದ ಗುಣಗಳನ್ನೂ ವೀರ್ಯಗಳನ್ನೂ ಕೇಳಿ ಯಾವಾಗ ಅತ್ಯಂತ ಹರ್ಷದಿಂದ ಹೋಂಪುಳಿಗೊಂಡು, ಆನಂದಾಶ್ರುಗಳಿಂದೊಡಗೂಡಿ ಗದ್ಗದ ವಾಕ್ಕಿನಿಂದ ಉಚ್ಚಸ್ವರದಲ್ಲಿ ಉದ್ಗಾನಮಾಡುತ್ತಿರುವನೋ, ಕೂಗುತ್ತಿರುವನೋ, ಕುಣಿದಾಡುತ್ತಿರುವನೋ; ಯಾವಾಗ ಗ್ರಹಾವಿಷ್ಟನಾದಂತೆ ಒಮ್ಮೆ ನಗುತ್ತಲೂ ಒಮ್ಮೆ ಅಳುತ್ತಲೂ ಧ್ಯಾನಮಾಡುತ್ತಲೂ ಜನರನ್ನು ನಮಸ್ಕರಿಸುತ್ತಲೂ ಬಾರಿ ಬಾರಿಗೂ ನಿಟ್ಟುಸಿರುಬಿಡುತ್ತಾ ಹರೇ! ಜಗತ್ಪತೇ! ನಾರಾಯಣ! – ಎಂದು ಪರಮಾತ್ಮನಲ್ಲಿಟ್ಟ ಮನಸ್ಸಿನಿಂದ ನಾಚಿಕೆಯನ್ನು ಬಿಟ್ಟು ನಾಮಕೀರ್ತನೆ ಮಾಡುತ್ತಿರುವನೋ –

**ತದಾ ಪುಮಾನ್ ಮುಕ್ತಸಮಸ್ತಬನ್ಧನ-**
**ಸ್ತದ್ಭಾವಭಾವಾನುಕೃತಾಶಯಾಕೃತಿಃ ।**
**ನಿರ್ದಗ್ಧಬೀಜಾನುಶಯೋ ಮಹೀಯಸಾ**
**ಭಕ್ತಿಪ್ರಯೋಗೇಣ ಸಮೇತ್ಯಧೋಕ್ಷಜಮ್ ॥ 36 ॥**

36. ಆಗ ಮನುಷ್ಯನು ಸಮಸ್ತಬಂಧನಗಳಿಂದಲೂ ಮುಕ್ತನಾಗಿ ಭಗವದ್ಭಾವಭಾವನೆಯ ತದಾಕಾರವಾದ ಅಂತಃಕರಣಶರೀರಗಳುಳ್ಳವನಾಗಿ ಬೀಜರೂಪವಾದ ಅನುಶಯವನ್ನೆಲ್ಲ ಸುಟ್ಟುಕೊಂಡು ಮಹಾಭಕ್ತಿಯೋಗದಿಂದ ಆ ಅಧೋಕ್ಷಜನನ್ನೇ ಸೇರುವನು.

**ಅಧೋಕ್ಷಜಾಲಮ್ಭಮಿಹಾಶುಭಾತ್ಮನಃ**
**ಶರೀರಿಣಃ ಸಂಸೃತಿಚಕ್ರನಾಶನಮ್ ।**
**ತದ್ಬ್ರಹ್ಮ ನಿರ್ವಾಣಸುಖಂ ವಿದುರ್ಬುಧಾ-**
**ಸ್ತತೋ ಭಜಧ್ವಂ ಹೃದಯೇ ಹೃದೀಶ್ವರಮ್ ॥ 37 ॥**

37. ಅಶುಭಾತ್ಮನಾದ ಶರೀರಿಗೆ ಮನಸ್ಸಿನಲ್ಲಾಗುವ ಅಧೋಕ್ಷಜನ ಸಂಸ್ಪರ್ಶವೇ ಸಂಸಾರಚಕ್ರವನ್ನು ನಾಶಗೊಳಿಸುವದು. ಇದನ್ನೇ ತಿಳಿದವರು ಬ್ರಹ್ಮನಿರ್ವಾಣದ ಸುಖವೆನ್ನುವರು. ಆದ್ದರಿಂದ ಹೃದಯದಲ್ಲಿ ಆ ಹೃದಯೇಶ್ವರನನ್ನು ಭಜಿಸಿರಿ.

**ಕೋಽತಿಪ್ರಯಾಸೋಽಸುರಬಾಲಕಾ ಹರೇ-**
**ರುಪಾಸನೇ ಸ್ವೇ ಹೃದಿ ಛಿದ್ರವತ್ಸತಃ ।**
**ಸ್ವಸ್ಯಾಽಽತ್ಮನಃ ಸಖ್ಯುರಶೇಷದೇಹಿನಾಂ**
**ಸಾಮಾನ್ಯತಃ ಕಿಂ ವಿಷಯೋಪಪಾದನೈಃ ॥ 38 ॥**

38. ಎಲೈ ಅಸುರಪುತ್ರರೆ, ತಮ್ಮ ಹೃದಯದಲ್ಲಿಯೇ ಆಕಾಶದಂತೆ ಇದ್ದುಕೊಂಡಿರುವ, ತಮ್ಮ ಆತ್ಮವೇ ಆಗಿ ಎಲ್ಲಾ ದೇಹಿಗಳಿಗೂ ಸಮಾನವಾಗಿ ಸಖನಾಗಿರುವ ಹರಿಯ ಉಪಾಸನೆಯಲ್ಲಿ ಕಷ್ಟವಾದರೂ ಏನಿದೆ? ವಿಷಯಗಳ ಸಂಪಾದನೆಗೆಂದು ಹೊಡೆದಾಡುವದರಿಂದೇನು ಪ್ರಯೋಜನ?

**ರಾಯಃ ಕಲತ್ರಂ ಪಶವಃ ಸುತಾದಯೋ**
**ಗೃಹಾ ಮಹೀ ಕುಞ್ಜರಕೋಶಭೂತಯಃ ।**
**ಸರ್ವೇಽರ್ಥಕಾಮಾಃ ಕ್ಷಣಭಙ್ಗುರಾಯುಷಃ**
**ಕುರ್ವನ್ತಿ ಮರ್ತ್ಯಸ್ಯ ಕಿಯತ್ ಪ್ರಿಯಂ ಚಲಾಃ ॥ 39 ॥**

39. ಧನ, ಹೆಂಡತಿ, ಪಶುಗಳು, ಮಕ್ಕಳುಮರಿಗಳು, ಮನೆ, ಭೂಮಿ, ಆನೆ, ಬೊಕ್ಕಸ, ವಿಭೂತಿಗಳು – ಎಲ್ಲಾ ಅರ್ಥಕಾಮಗಳೂ ಕ್ಷಣಮಾತ್ರಕ್ಕೆ ನಾಶವಾಗುವಷ್ಟು ಆಯುಸ್ಸುಳ್ಳವು. ಚಂಚಲವಾಗಿರುವ ಅವು ಮರ್ತ್ಯನಾದವನಿಗೆ ಎಷ್ಟು ಪ್ರಿಯವನ್ನು ಮಾಡಿಯಾವು?

**ಏವಂ ಹಿ ಲೋಕಾಃ ಕ್ರತುಭಿಃ ಕೃತಾ ಅಮೀ**
**ಕ್ಷಯಿಷ್ಣವಃ ಸಾತಿಶಯಾ ನ ನಿರ್ಮಲಾಃ ।**

**ತಸ್ಮಾದದೃಷ್ಟಶ್ರುತದೂಷಣಂ ಪರಂ**
**ಭಕ್ತ್ಯೈಕಯೇಶಂ ಭಜತಾऽऽತ್ಮಲಬ್ಧಯೇ ॥ 40 ॥**

40. ಹೀಗೆಯೇ ಯಜ್ಞಗಳಿಂದ ಆಗುವ ಆ ಲೋಕಗಳು ಕ್ಷಯಶೀಲವಾಗಿರುತ್ತವೆ, ಅಶುದ್ಧವಾಗಿರುತ್ತವೆ. ಆದ್ದರಿಂದ ಯಾವ ದೋಷವನ್ನೂ ಯಾರೂ ಕಂಡು ಕೇಳಿಲ್ಲದ ಪರಮಾತ್ಮನನ್ನು ಈಶ್ವರನನ್ನು, ಆತ್ಮಲಾಭಕ್ಕಾಗಿ ಕೇವಲ ಭಕ್ತಿಯಿಂದ ಭಜಿಸಿರಿ.

**ನಿರೂಪ್ಯತಾಮಿಹ ಸ್ವಾರ್ಥಃ ಕಿಯಾನ್ ದೇಹಭೃತೋऽಸುರಾಃ ।**
**ನಿಷೇಕಾದಿವ್ಯವಸ್ಥಾಸು ಕ್ಲಿಶ್ಯಮಾನಸ್ಯ ಕರ್ಮಭಿಃ ॥ 46 ॥**

46. ಅಸುರರೆ, ನಿಷೇಕಾದಿಯಾಗಿ ಶ್ಮಶಾನಾಂತವಾದ ಕರ್ಮಗಳನ್ನು ಮಾಡಿ ಮಾಡಿ ಕ್ಲೇಶಪಡುತ್ತಾ ಇರುವ ಈ ಶರೀರಿಗೆ ಎಲ್ಲಾ ಅವಸ್ಥೆಗಳಲ್ಲಿಯೂ ಎಷ್ಟು ಸ್ವಾರ್ಥವು ಸಾಧಿತವಾಗುತ್ತದೆ ಎಂಬುದನ್ನಾದರೂ ಪರೀಕ್ಷಿಸಿನೋಡಿರಿ.

**ತಸ್ಮಾದರ್ಥಾಶ್ಚ ಕಾಮಾಶ್ಚ ಧರ್ಮಾಶ್ಚ ಯದಪಾಶ್ರಯಾಃ ।**
**ಭಜತಾನೀಹಯಾऽऽತ್ಮಾನಮನೀಹಂ ಹರಿಮೀಶ್ವರಮ್ ॥ 48 ॥**

48. ಆದ್ದರಿಂದ ಅರ್ಥಗಳೂ ಕಾಮಗಳೂ ಧರ್ಮಗಳೂ ಯಾವನನ್ನೇ ಆಶ್ರಯಿಸಿಕೊಂಡಿರುವವೋ ಆ ನಿಷ್ಕಾಮನಾದ ಪರಮಾತ್ಮನಾದ ಈಶ್ವರನಾದ ಹರಿಯನ್ನು ನಿಷ್ಕಾಮರಾಗಿ ಭಜಿಸಿರಿ.

**ಸರ್ವೇಷಾಮಪಿ ಭೂತಾನಾಂ ಹರಿರಾತ್ಮೇಶ್ವರಃ ಪ್ರಿಯಃ ।**
**ಭೂತೈಃ ಮಹದ್ಭಿಃ ಸ್ವಕೃತೈಃ ಕೃತಾನಾಂ ಜೀವಸಂಜ್ಞಿತಃ ॥ 49 ॥**

49. ತಾನು ಸೃಷ್ಟಿಸಿರುವ ಮಹಾಭೂತಗಳಿಂದ ನಿರ್ಮಿತವಾಗಿರುವ ಸಕಲಭೂತಗಳಿಗೂ ಆತ್ಮನೂ ಈಶ್ವರನೂ ಪ್ರಿಯನೂ ಆಗಿರುವ ಆ ಹರಿಯೇ ಜೀವನೆಂಬ ಹೆಸರುಳ್ಳವನಾಗಿರುತ್ತಾನೆ.

**ದೇವೋऽಸುರೋ ಮನುಷ್ಯೋ ವಾ ಯಕ್ಷೋ ಗನ್ಧರ್ವ ಏವ ಚ ।**
**ಭಜನ್ಮುಕುನ್ದಚರಣಂ ಸ್ವಸ್ತಿಮಾನ್ ಸ್ಯಾದ್ ಯಥಾ ವಯಮ್ ॥ 50 ॥**

50. ದೇವನಾಗಲಿ, ಅಸುರನಾಗಲಿ, ಮನುಷ್ಯನಾಗಲಿ, ಯಕ್ಷನಾಗಲಿ, ಗಂಧರ್ವನೇ ಆಗಲಿ ಯಾವನು ಮುಕುಂದನ ಚರಣವನ್ನು ಭಜಿಸುವನೋ

ಅವನು ನಮ್ಮಂತೆಯೇ ಕಲ್ಯಾಣಭಾಜನನಾಗುವನು.

**ನಾಲಂ ದ್ವಿಜತ್ವಂ ದೇವತ್ವಮೃಷಿತ್ವಂ ವಾಽಸುರಾತ್ಮಜಾಃ ।**
**ಪ್ರೀಣನಾಯ ಮುಕುನ್ದಸ್ಯ ನ ವೃತ್ತಂ ನ ಬಹುಜ್ಞತಾ ॥ 51 ॥**

**ನ ದಾನಂ ನ ತಪೋ ನೇಜ್ಯಾ ನ ಶೌಚಂ ನ ವ್ರತಾನಿ ಚ ।**
**ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯದ್ವಿಡಮ್ಬನಮ್ ॥ 52 ॥**

51–52. ಎಲೈ ಅಸುರಪುತ್ರರೆ, ದ್ವಿಜನಾಗುವದಾಗಲಿ, ದೇವನಾಗುವದಾಗಲಿ, ಋಷಿಯಾಗುವದಾಗಲಿ, ಮುಕುಂದನನ್ನು ಸಂತೋಷಗೊಳಿಸು ವದಕ್ಕೆ ಸಾಲದು. ನಡತೆಯಾಗಲಿ, ಬಹುಶಾಸ್ತ್ರಜ್ಞತೆಯಾಗಲಿ, ದಾನ, ತಪಸ್ಸು, ಯಜ್ಞ, ಶೌಚ, ವ್ರತಗಳಾಗಲಿ ಸಾಕಾಗಲಾರವು. ಹರಿಯು ನಿರ್ಮಲಭಕ್ತಿಯಿಂದಲೇ ಪ್ರೀತನಾಗುವನು; ಮಿಕ್ಕದ್ದೆಲ್ಲವೂ ಬೂಟಾಟಿಕೆಯು.

**ಏತಾವಾನೇವ ಲೋಕೇಽಸ್ಮಿನ್ ಪುಂಸಃ ಸ್ವಾರ್ಥಃ ಪರಃ ಸ್ಮೃತಃ ।**
**ಏಕಾನ್ತಭಕ್ತಿರ್ಗೋವಿನ್ದೇ ಯತ್ಸರ್ವತ್ರ ತದೀಕ್ಷಣಮ್ ॥ 55 ॥**

55. ಮನುಷ್ಯನಾದವನಿಗೆ ಈ ಲೋಕದಲ್ಲಿ – ಎಲ್ಲೆಲ್ಲಿಯೂ ಆ ಗೋವಿಂದನನ್ನೇ ಕಾಣುತ್ತಾ ಅವನಲ್ಲಿ ನಿಯತವಾದ ಭಕ್ತಿಯಿರುವದೆಂಬುದಿಷ್ಟೇ ಪರಮಪುರುಷಾರ್ಥವೆನಿಸುತ್ತದೆ.

*****

## ಪ್ರಹ್ಲಾದನು ಹಿರಣ್ಯಕಶಿಪುವಿಗೆ ತಿಳಿಸಿದ ಭಗವತ್ಸ್ವರೂಪ

### (ಏಳನೆಯ ಸ್ಕಂಧ, ಎಂಟನೆಯ ಅಧ್ಯಾಯ)

**ಪ್ರಹ್ಲಾದ ಉವಾಚ –**
**ನ ಕೇವಲಂ ಮೇ ಭವತಶ್ಚ ರಾಜನ್**
**ಸ ವೈ ಬಲಂ ಬಲಿನಾಂ ಚಾಪರೇಷಾಮ್ ।**
**ಪರೇಽವರೇಽಮೀ ಸ್ಥಿರಜಙ್ಗಮಾ ಯೇ**
**ಬ್ರಹ್ಮಾದಯೋ ಯೇನ ವಶಂ ಪ್ರಣೀತಾಃ ॥ 8 ॥**

8. ಪ್ರಹ್ಲಾದನಿಂತೆಂದನು: ಎಲೈ ರಾಜನೆ, ನನಗೆ ಮಾತ್ರವೇ ಅಲ್ಲ, ನಿನಗೂ, ಬಲಿಷ್ಠರೆನಿಸಿಕೊಂಡಿರುವ ಮಿಕ್ಕವರಿಗೆಲ್ಲರಿಗೂ, ಆತನೇ ಬಲವು.

ಹೆಚ್ಚುಕಡಿಮೆಯ ಸ್ಥಿತಿಯಲ್ಲಿರುವ ಬ್ರಹ್ಮಾದಿಗಳೆಂಬ ಸ್ಥಾವರಜಂಗಮಪ್ರಾಣಿಗಳೆಲ್ಲವನ್ನೂ ಆತನೇ ವಶಗೊಳಿಸಿಕೊಂಡಿರುತ್ತಾನೆ.

**ಸ ಈಶ್ವರಃ ಕಾಲ ಉರುಕ್ರಮೋಽಸಾ–**
**ವೋಜಃಸಹಃಸತ್ತ್ವಬಲೇನ್ದ್ರಿಯಾತ್ಮಾ ।**
**ಸ ಏವ ವಿಶ್ವಂ ಪರಮಃ ಸ್ವಶಕ್ತಿಭಿಃ**
**ಸೃಜತ್ಯವತ್ತ್ಯತ್ತಿ ಗುಣತ್ರಯೇಶಃ ॥ 9 ॥**

9. ಸರ್ವಶಕ್ತನಾದ ಆ ಈಶ್ವರನೇ ಕಾಲಸ್ವರೂಪನು, ಎಲ್ಲರಿಗೂ ಇಂದ್ರಿಯ ಬಲ, ಮನೋಬಲ, ದೇಹಬಲಸ್ವರೂಪನೂ ಇಂದ್ರಿಯಸ್ವರೂಪನೂ ಆಗಿರುತ್ತಾನೆ. ಆ ಪರಮಾತ್ಮನೇ ತನ್ನ ಶಕ್ತಿಗಳಿಂದ ವಿಶ್ವವನ್ನು ಸೃಷ್ಟಿಸುತ್ತಾನೆ, ಕಾಪಾಡುತ್ತಾನೆ, ಸಂಹರಿಸುತ್ತಾನೆ; ಏಕೆಂದರೆ ಮೂರು ಗುಣಗಳಿಗೂ ಒಡೆಯನಾತನು.

**ಜಹ್ಯಾಸುರಂ ಭಾವಮಿಮಂ ತ್ವಮಾತ್ಮನಃ**
**ಸಮಂ ಮನೋ ಧತ್ಸ್ವ ನ ಸನ್ತಿ ವಿದ್ವಿಷಃ ।**
**ಋತೇಽಜಿತಾದಾತ್ಮನ ಉತ್ಪಥಸ್ಥಿತಾ–**
**ತ್ತದ್ಧಿ ಹ್ಯನನ್ತಸ್ಯ ಮಹತ್ ಸಮರ್ಹಣಮ್ ॥ 10 ॥**

10. ಈ ನಿನ್ನ ಅಸುರಭಾವವನ್ನು ಬಿಟ್ಟುಬಿಡು. ಮನಸ್ಸನ್ನು ಎಲ್ಲರಲ್ಲಿಯೂ ಸಮವಾಗಿರಿಸಿಕೊ, ತನಗೆ ಅಳವಡದೆ ಉನ್ಮಾರ್ಗದಲ್ಲಿರುವ ಮನಸ್ಸಿಗಿಂತ ಬೇರೆ ಯಾವ ಶತ್ರುವೂ ಇರುವದಿಲ್ಲ. ಸಮಭಾವನೆಯೇ ಆತನ ಪೂಜೆ.

**ದಸ್ಯೂನ್ ಪುರಾ ಷಣ್ಣ ವಿಜಿತ್ಯ ಲುಮ್ಪತೋ**
**ಮನ್ಯನ್ತ ಏಕೇ ಸ್ವಜಿತಾ ದಿಶೋ ದಶ ।**
**ಜಿತಾತ್ಮನೋ ಜ್ಞಸ್ಯ ಸಮಸ್ಯ ದೇಹಿನಾಂ**
**ಸಾಧೋಃ ಸ್ವಮೋಹಪ್ರಭವಾಃ ಕುತಃ ಪರೇ ॥ 11 ॥**

11. ಲೂಟಿಮಾಡುತ್ತಿರುವ ಆರು ದರೋಡೆಗಾರರನ್ನು ಮೊದಲು ಜಯಿಸದೆ ಹತ್ತು ದಿಕ್ಕುಗಳನ್ನೂ ಗೆದ್ದಿರುವೆವೆಂದುಕೊಳ್ಳುವವರು ಕೆಲವರು. ಅಂತಃಕರಣವನ್ನು ಗೆದ್ದುಕೊಂಡು ಜೀವರಲ್ಲೆಲ್ಲ ಸಮಬುದ್ಧಿಯಿಂದಿರುವ ಸಾಧುವಿಗೆ ಅಜ್ಞಾನದಿಂದಾಗುವ ಶತ್ರುಗಳೆಲ್ಲಿರುವರು?

******

## ಪ್ರಹ್ಲಾದನುಮಾಡಿದ ಶ್ರೀನರಸಿಂಹಸ್ತುತಿ

### (ಏಳನೆಯ ಸ್ಕಂಧ, ಒಂಬತ್ತನೆಯ ಅಧ್ಯಾಯ)

**ಬ್ರಹ್ಮಾದಯಃ ಸುರಗಣಾಃ ಮುನಯೋಽಥ ಸಿದ್ಧಾಃ**
**ಸತ್ತ್ವೈಕತಾನಮತಯೋ ವಚಸಾಂ ಪ್ರವಾಹೈಃ ।**
**ನಾರಾಧಿತುಂ ಪುರುಗುಣೈರಧುನಾಪಿ ಪಿಪ್ರುಃ**
**ಕಿಂ ತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥ 8 ॥**

8. ಬ್ರಹ್ಮನೇ ಮೊದಲಾದ ದೇವತಾಗಣಗಳೂ ಮುನಿಗಳೂ ಸಿದ್ಧರೂ ಕೇವಲ ಶುದ್ಧಸತ್ತ್ವಪ್ರಧಾನರಾದ ಅಂತಃಕರಣರಾದವರೂ ತಮ್ಮ ಬಹುಗುಣ ಯುಕ್ತವಾದ ವಾಕ್ಪ್ರವಾಹಗಳಿಂದ ತೃಪ್ತಿಗೊಳಿಸುವದಕ್ಕೆ ಈವರೆಗೂ ಸಮರ್ಥ ರಾಗಿಲ್ಲ. ಅಂಥ ಹರಿಯು ಈ ಕ್ರೂರ ಜಾತಿಯವನಾದ ನನ್ನ ಸ್ತೋತ್ರದಿಂದ ತುಷ್ಟನಾಗುವನೆ?

**ಮನ್ಯೇ ಧನಾಭಿಜನರೂಪತಪಃ ಶ್ರುತೌಜ-**
**ಸ್ತೇಜಃಪ್ರಭಾವಬಲಪೌರುಷಬುದ್ಧಿಯೋಗಾಃ ।**
**ನಾರಾಧನಾಯ ಹಿ ಭವನ್ತಿ ಪರಸ್ಯ ಪುಂಸೋ**
**ಭಕ್ತ್ಯಾ ತುತೋಷ ಭಗವಾನ್ ಗಜಯೂಥಪಾಯ ॥ 9 ॥**

9. ಧನ, ವಂಶ, ರೂಪ, ತಪಸ್ಸು, ಶಾಸ್ತ್ರಶ್ರವಣ, ಓಜಸ್ಸು, ತೇಜಸ್ಸು, ಪ್ರಭುಶಕ್ತಿ, ಬಲ, ಪೌರುಷ, ಬುದ್ಧಿ, ಯೋಗ – ಇವುಗಳು ಪರಮಪುರುಷನನ್ನು ಸಂತುಷ್ಟಿಗೊಳಿಸುವದಕ್ಕೆ ಶಕ್ತವಲ್ಲವೆಂದೇ ನನ್ನ ಭಾವನೆ. ಆ ಭಗವಂತನು ಗಜೇಂದ್ರನಿಗೆ ಭಕ್ತಿಯಿಂದಲೇ ಸಂತುಷ್ಟನಾದನಷ್ಟೆ?

**ವಿಪ್ರಾದ್ ದ್ವಿಷಡ್ಗುಣಯುತಾದರವಿನ್ದನಾಭ-**
**ಪಾದಾರವಿಂದವಿಮುಖಾಚ್ಛ್ವಪಚಂ ವರಿಷ್ಠಮ್ ।**
**ಮನ್ಯೇ ತದರ್ಪಿತಮನೋವಚನೇಹಿತಾರ್ಥ**
**ಪ್ರಾಣಂ ಪುನಾತಿ ನ ಕುಲಂ ನ ತು ಭೂರಿಮಾನಃ ॥ 10 ॥**

10. ಎಂಟು ಆತ್ಮಗುಣಗಳಿಂದ ಕೂಡಿದ್ದರೂ ಪದ್ಮನಾಭನ ಪಾದಕಮಲ ಗಳಿಂದ ವಿಮುಖನಾಗಿರುವ ವಿಪ್ರನಿಗಿಂತಲೂ ಮನಸ್ಸು, ವಾಕ್ಕು, ಕರ್ಮ, ಅರ್ಥ, ಪ್ರಾಣ – ಇವನ್ನು ಆತನಿಗೇ ಅರ್ಪಿಸಿರುವ ಚಂಡಾಲನೇ ಮೇಲೆಂದು ನನ್ನ

ಮತ. ಏಕೆಂದರೆ ಅವನೇ ಕುಲವನ್ನು ಪಾವನಗೊಳಿಸುತ್ತಾನೆಯೇ ಹೊರತು ಅಭಿಮಾನಿಯಾದ ಬ್ರಾಹ್ಮಣನು ಪಾವನಗೊಳಿಸನು.

**ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋ**
**ಮಾನಂ ಜನಾದವಿದುಷಃ ಕರುಣೋ ವೃಣೀತೇ ।**
**ಯದ್ಯಜ್ಜನೋ ಭಗವತೇ ವಿದಧೀತ ಮಾನಂ**
**ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ ॥ 11 ॥**

11. ಆತ್ಮಲಾಭಪರಿಪೂರ್ಣನಾಗಿರುವ ಈ ಕರುಣಾಶಾಲಿಯಾದ ಪ್ರಭುವು ಅಜ್ಞಜನರಿಂದ ತನಗೆ ಮಾನವಾಗಬೇಕೆಂದು ಬಯಸುವದಿಲ್ಲ. ಮನುಷ್ಯನು ಭಗವಂತನಿಗೆ ಯಾವ ಯಾವ ಮಾನವನ್ನು ತೋರಿಸುವನೋ ಅದದು ಅವನಿಗೇ ಆಗುವದು. ಮುಖದ ಕಾಂತಿಯು ಪ್ರತಿಬಿಂಬಕ್ಕೆ ಆಗುವದಿಲ್ಲವೆ? ಅದರಂತೆಯೇ ಇದು.

**ತಸ್ಮಾದಹಂ ವಿಗತವಿಕ್ಲವ ಈಶ್ವರಸ್ಯ**
**ಸರ್ವಾತ್ಮನಾ ಮಹಿ ಗೃಣಾಮಿ ಯಥಾಮನೀಷಮ್ ।**
**ನೀಚೋಽಜಯಾ ಗುಣವಿಸರ್ಗಮನುಪ್ರವಿಷ್ಟಃ**
**ಪೂಯೇತ ಯೇನ ಹಿ ಪುಮಾನನುವರ್ಣಿತೇನ ॥ 12 ॥**

12. ಆದ್ದರಿಂದ ನಾನು ಈಶ್ವರನ ಮಹಿಮೆಯನ್ನು ಬುದ್ಧಿಗೆ ತಿಳಿದಮಟ್ಟಿಗೂ ನಿಶ್ಶಂಕನಾಗಿ ಸ್ತುತಿಸುವೆನು. ಮಾಯೆಯಿಂದ ಗುಣಗಳ ವಿಸೃಷ್ಟಿಯಾದ ಶರೀರವನ್ನು ಹೊಕ್ಕಿರುವ ನೀಚನಾದ ಮನುಷ್ಯನು ಆ ಮಹಿಮಾನುವರ್ಣನೆಯಿಂದ ಪವಿತ್ರನಾಗುವನಲ್ಲವೆ?

**ಸರ್ವೇ ಹ್ಯಮೀ ವಿಧಿಕರಾತವಸತ್ತ್ವಧಾಮ್ನೋ**
**ಬ್ರಹ್ಮಾದಯೋ ವಯಮಿವೇಶ ನ ಚೋದ್ವಿಜನ್ತಃ ।**
**ಕ್ಷೇಮಾಯ ಭೂತಯ ಉತಾತ್ಮಸುಖಾಯ ಚಾಸ್ಯ**
**ವಿಕ್ರೀಡಿತಂ ಭಗವತೋ ರುಚಿರಾವತಾರೈಃ ॥ 13 ॥**

13. ಎಲೈ ಈಶ್ವರನೆ, ಈ ಬ್ರಹ್ಮಾದಿಗಳೂ ನಮ್ಮಂತೆಯೇ ಸತ್ತ್ವಧಾಮನಾದ ನಿನ್ನ ಅಪ್ಪಣೆಯಂತೆ ಮಾಡುವರು; ಸ್ವಲ್ಪವೂ ಉದ್ವೇಗಪಡುವದಿಲ್ಲ. ಈ ಭಗವಂತನಾದ ನಿನ್ನ ಅವತಾರಲೀಲೆಯು ಕ್ಷೇಮಕ್ಕೂ, ವಿಭೂತಿಗೂ ಮತ್ತು

ನಮ್ಮ ಸುಖಕ್ಕೂ ಕಾರಣವಾಗಿರುತ್ತದೆ.

**ತದ್ಯಚ್ಛ ಮನ್ಯುಮಸುರಶ್ಚ ಹತಸ್ತ್ವಯಾದ್ಯ**
**ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ।**
**ಲೋಕಾಶ್ಚ ನಿರ್ವೃತಿಮಿತಾಃ ಪ್ರತಿಯನ್ತಿ ಸರ್ವೇ**
**ರೂಪಂ ನೃಸಿಂಹ ವಿಭಯಾಯ ಜನಾಃ ಸ್ಮರನ್ತಿ ॥ 14 ॥**

14. ಆದ್ದರಿಂದ ಎಲೈ ನೃಸಿಂಹನೇ, ಕೋಪವನ್ನು ನಿಲ್ಲಿಸು! ನಿನ್ನಿಂದ ಅಸುರನು ಹತನಾಗಿದಾನೆ; ಸಾಧುವುಕೂಡ ಹಾವುಚೇಳುಗಳ ಕೊಲೆಯಿಂದ ಸಂತೋಷಗೊಳ್ಳುವನಲ್ಲವೆ? ಜನರೂ ಸುಖಿಗಳಾದರು. ನಿನ್ನ ರೂಪವು ನಿರ್ಭಯಕ್ಕೆ ಕಾರಣವೆಂದು ಎಲ್ಲರೂ ತಿಳಿದಿರುತ್ತಾರೆ, ಸ್ಮರಿಸುತ್ತಾರೆ.

**ನಾಹಂ ಬಿಭೇಮ್ಯಜಿತ ತೇಽತಿಭಯಾನಕಾಸ್ಯ–**
**ಜಿಹ್ವಾರ್ಕನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ।**
**ಅನ್ತ್ರಸ್ರಜಃ ಕ್ಷತಜಕೇಸರಶಙ್ಕುಕರ್ಣಾ–**
**ನ್ನಿರ್ಹ್ರಾದಭೀತದಿಗಿಭಾದರಿಭಿನ್ನಖಾಗ್ರಾತ್ ॥ 15 ॥**

15. ಎಲೈ ಅಜಿತನಾದ ಭಗವಂತನೆ, ನಿನ್ನ ಅತಿಭಯಂಕರವಾದ ಮುಖ, ನಾಲಗೆ, ಸೂರ್ಯನೇತ್ರ, ಗಂಟಿಕ್ಕಿದ ಹುಬ್ಬಿನ ಕುಣಿತ, ಉಗ್ರವಾದ ಕೋರೆದಾಡೆ, ಎಲಬುಗಳ ಮಾಲಿಕೆ, ರಕ್ತಮಿಶ್ರವಾದ ತಲೆಗೂದಲು, ಮುಳ್ಳುಮೊನೆಯ ಕಿವಿ, ಗರ್ಜನೆಯಿಂದ ದಿಗಿಲುಗೊಂಡಿರುವ ದಿಕ್ಕರಿಗಳು, ಶತ್ರುಗಳನ್ನು ಸೀಳುವ ಉಗುರಿನ ಮೊನೆ – ಇವುಗಳಿಗೆ ನಾನು ಅಂಜಿರುವದಿಲ್ಲ.

**ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರ–**
**ಸಂಸಾರಚಕ್ರಕದನಾದ್ ಗ್ರಸತಾಂ ಪ್ರಣೀತಃ ।**
**ಬದ್ಧಃ ಸ್ವಕರ್ಮಭಿರುತತ್ತಮ ತೇಽಙ್ಘ್ರಿಮೂಲಂ**
**ಪ್ರೀತೋಽಪವರ್ಗಶರಣಂ ಹ್ವಯಸೇ ಕದಾ ನು ॥ 16 ॥**

16. ದೀನವತ್ಸಲನೆ, ಸಹಿಸಲಸದಳವಾದ ಉಗ್ರವಾದ ಸಂಸಾರಚಕ್ರದಲ್ಲಿ ತೊಳಲುವ ದುಃಖಕ್ಕೆ ಅಂಜಿರುತ್ತೇನೆ. ಅದರಲ್ಲಿ ನನ್ನ ಕರ್ಮಗಳಿಂದ ಬದ್ಧನಾಗಿ ಹಿಂಸ್ರಕಷ್ಟಗಳ ನಡುವೆ ಬಿದ್ದಿರುತ್ತೇನೆ. ಎಲೈ ಪ್ರಿಯತಮನೆ, ನೀನು ಯಾವಾಗ

ಪ್ರೀತನಾಗಿ ಭೀತರಿಗೆ ಮೋಕ್ಷವೆಂಬ ರಕ್ಷಣೆಯನ್ನು ಕೊಡುವ ನಿನ್ನ ಪಾದದೆಡೆಗೆ ಎಂದಿಗೆ ಕರೆದುಕೊಳ್ಳುವೆಯೋ?

**ಯಸ್ಮಾತ್ಪ್ರಿಯಾಪ್ರಿಯವಿಯೋಗಸಯೋಗಜನ್ಮ–**
**ಶೋಕಾಗ್ನಿನಾ ಸಕಲಯೋನಿಷು ದಹ್ಯಮಾನಃ ।**
**ದುಃಖೌಷಧಂ ತದಪಿ ದುಃಖಮತದ್ಧಿಯಾಹಂ**
**ಭೂಮನ್ ಭ್ರಮಾಮಿ ವದ ಮೇ ತವ ದಾಸ್ಯಯೋಗಮ್ ॥ 17 ॥**

17. ಎಲೈ ಅದ್ವಯಬ್ರಹ್ಮಸ್ವರೂಪನೆ, ನಾನು ಸಕಲಜನ್ಮಗಳಲ್ಲಿಯೂ ಪ್ರಿಯದ ಅಗಲುವಿಕೆ, ಅಪ್ರಿಯದ ಸಂಬಂಧಗಳನ್ನುಂಟುಮಾಡುವ ಶೋಕಾಗ್ನಿಯಿಂದ ಸುಟುಹೋಗುತ್ತಲೇ ಇದ್ದೇನೆ. ದುಃಖಕ್ಕೆ ಔಷಧವೆಂಬುದೂ ದುಃಖವೇ ಆಗಿರುತ್ತದೆ. ಆದರೆ ಆ ತಿಳಿವಳಿಕೆಯಿಲ್ಲದೆ ನಾನು ಸುಮ್ಮನೆ ತೊಳಲುತ್ತಿರುವೆನಲ್ಲ! ನಿನ್ನ ದಾಸ್ಯಕ್ಕೆ ಉಪಾಯವನ್ನು ದಯವಿಟ್ಟು ಹೇಳಿಕೊಡು!

**ಸೋಽಹಂ ಪ್ರಿಯಸ್ಯ ಸುಹೃದಃ ಪರದೇವತಾಯಾಃ**
**ಲೀಲಾಕಥಾಸ್ತವ ನೃಸಿಂಹ ವಿರಿಞ್ಚಗೀತಾ ।**
**ಅಞ್ಜಸ್ತಿತರ್ಮ್ಯನುಗೃಣನ್ ಗುಣವಿಪ್ರಮುಕ್ತೋ**
**ದುರ್ಗಾಣಿ ತೇ ಪದಯುಗಾಲಯಹಂಸಸಙ್ಗಃ ॥ 18 ॥**

18. ನರಸಿಂಹನೆ, ಪ್ರಿಯನೂ ಹಿತೈಷಿಯೂ ಪರದೇವತೆಯೂ ಆಗಿರುವ ನಿನ್ನ ಲೀಲಾ ಕಥೆಗಳನ್ನು ಬ್ರಹ್ಮದೇವರು ಹಾಡಿರುವಂತೆ ಹಾಡುತ್ತಾ ಗುಣಗಳಿಂದ ಬಿಡುಗಡೆಯನ್ನು ಹೊಂದಿ, ನಿನ್ನ ಪದಯುಗ್ಮದಲ್ಲಿ ಇದ್ದುಕೊಂಡಿರುವ ಮಹಾತ್ಮಪರಮಹಂಸರ ಸಂಗದಿಂದ ಸಂಸಾರದ ಕಷ್ಟಗಳನ್ನು ದಾಟುವೆನು.

**ಬಾಲಸ್ಯ ನೇಹ ಶರಣಂ ಪಿತರೌ ನೃಸಿಂಹ**
**ನಾರ್ತಸ್ಯ ಚಾಗದಮುದನ್ವತಿ ಮಜ್ಜತೋ ನೌಃ ।**
**ತಪ್ತಸ್ಯ ತತ್ಪ್ರತಿವಿಧಿರ್ಯ ಇಹಾಞ್ಜಸೇಷ್ಟ–**
**ಸ್ತಾಪದ್ವಿಭೋ ತನುಭೃತಾಂ ತ್ವದುಪೇಕ್ಷಿತಾನಾಮ್ ॥ 19 ॥**

19. ನೃಸಿಂಹನೆ, ಹುಡುಗನಿಗೆ ತಾಯಿತಂದೆಗಳು ರಕ್ಷಕರಲ್ಲ, ರೋಗಿಗಳಿಗೆ ಔಷಧವು ರಕ್ಷಕವಲ್ಲ; ಕಡಲಿನಲ್ಲಿ ಮುಳುಗುವವನಿಗೆ ಹಡಗು ರಕ್ಷಕವಲ್ಲ. ನಿನ್ನ ಉಪೇಕ್ಷೆಗೆ ಪಾತ್ರರಾದವರ ಮತದಲ್ಲಿ ಯಾವದು ದುಃಖಿಗೆ

ದುಃಖಪ್ರತೀಕಾರವೆನಿಸುವದೋ, ಅದು ಕ್ಷಣಿಕವಾದದ್ದೇ, ಎಂದಿಗೂ ಆತ್ಯಂತಿಕವಲ್ಲ.

**ಯಸ್ಮಿನ್ ಯತೋ ಯರ್ಹಿ ಯೇನ ಚ ಯಸ್ಯ ಯಸ್ಮಾ-**
**ದ್ಯಸ್ಮೈ ಯಥಾ ಯದುತ ಯಸ್ತ್ವಪರಃ ಪರೋ ವಾ ।**
**ಭಾವಃ ಕರೋತಿ ವಿಕರೋತಿ ಪೃಥಕ್ಸ್ವಭಾವಃ**
**ಸಂಚೋದಿತಸ್ತದಖಿಲಂ ಭವತಃ ಸ್ವರೂಪಮ್ ॥ 20 ॥**

20. ಸಾಮಾನ್ಯನಾಗಲಿ ಉತ್ತಮನಾಗಲಿ ಯಾವನು ಯಾರ ಪ್ರೇರಣೆಯಿಂದ ಯಾವ ಆಧಾರದಲ್ಲಿದ್ದುಕೊಂಡು, ಯಾವ ನಿಮಿತ್ತದಿಂದ, ಯಾವ ಕಾಲದಲ್ಲಿ ಯಾವ ಸಾಧನದಿಂದ ಯಾರಿಗಾಗಿ ಯಾವಾಗ ಯಾವದನ್ನು ಮಾಡುತ್ತಾನೋ, ಮಾರ್ಪಡಿಸುತ್ತಾನೋ, ಅವೆಲ್ಲವೂ ನಿನ್ನ ಸ್ವರೂಪವೇ.

**ಮಾಯಾ ಮನಃ ಸೃಜತಿ ಕರ್ಮಮಯಂ ಬಲೀಯಃ**
**ಕಾಲೇನ ಚೋದಿತಗುಣಾನುಮತೇನ ಪುಂಸಃ ।**
**ಛನ್ದೋಮಯಂ ಯದಜಯಾರ್ಪಿತಷೋಡಶಾರಂ**
**ಸಂಸಾರಚಕ್ರಮಜ ಕೋಽತಿತರೇತ್ತ್ವದನ್ಯಃ ॥ 21 ॥**

**ಸ ತ್ವಂ ಹಿ ನಿತ್ಯವಿಜಿತಾತ್ಮಗುಣಃ ಸ್ವಧಾಮ್ನಾ**
**ಕಾಲೋ ವಶೀಕೃತವಿಸೃಜ್ಯವಿಸರ್ಗಶಕ್ತಿಃ ।**
**ಚಕ್ರೇ ವಿಸೃಷ್ಟಮಜಯೇಶ್ವರ ಷೋಡಶಾರೇ**
**ನಿಷ್ಪೀಡ್ಯಮಾನಮುಪಕರ್ಷ ವಿಭೋ ಪ್ರಪನ್ನಮ್ ॥ 22 ॥**

21–22. ಪುರುಷನ ಈಕ್ಷಣರೂಪವಾದ ಅನುಮತಿಯಿಂದ ಕಾಲದಿಂದ ತನ್ನ ಗುಣಗಳು ಕ್ಷೋಭಿತವಾಗಲು, ಮಾಯೆಯು ಕರ್ಮಮಯವೂ ಬಲಿಷ್ಠವೂ ಕಾಮಮಯವೂ ಆದ ಮನಸ್ಸನ್ನು ಸೃಷ್ಟಿಸುವದು. ಅವಿದ್ಯೆಯಿಂದ ಮನಸ್ಸು, ಪ್ರಾಣಗಳು, ಇಂದ್ರಿಯಗಳು – ಎಂಬ ಹದಿನಾರು ಹಾರೆಕೋಲುಗಳಿಂದ ಕೂಡಿದ ಈ ಸಂಸಾರಚಕ್ರವನ್ನು ದಾಟಿದವನು; ಎಲೈ ಜನ್ಮರಹಿತನೆ, ನೀನಲ್ಲದೆ ಬೇರೆ ಇನ್ನಾವನಿರುವನು? ಸ್ವತೇಜಸ್ಸಿನಿಂದ ಎಂದೆಂದಿಗೂ ಬುದ್ಧಿಗುಣಗಳನ್ನು ಜಯಿಸಿರುವ ಕಾಲಸ್ವರೂಪವೇ ಆಗಿರುವೆ, ಸೃಷ್ಟಿಸಲ್ಪಡುವವುಗಳ ಮತ್ತು ಸೃಷ್ಟಿಸುವ ಶಕ್ತಿಗಳನ್ನೆಲ್ಲ ವಶಗೊಳಿಸಿಕೊಂಡಿರುವೆ; ಮಾಯೆಯಿಂದ ಸೃಷ್ಟವಾದ ಹದಿನಾರು ಹಾರೆಕೋಲುಗಳ ಈ ಸಂಸಾರಚಕ್ರದಲ್ಲಿ ಹಿಸುಕಲ್ಪಡುತ್ತಿರುವ ನಾನು ನಿನಗೆ ಶರಣುಬಂದಿರುವೆನು.

ವಿಭುವೆ, ಇಲ್ಲಿಂದ ನನ್ನನ್ನು ಅತ್ತ ಸೆಳೆದುಹಾಕು!

**ದೃಷ್ಟಾ ಮಯಾ ದಿವಿ ವಿಭೋಽಖಿಲಧಿಷ್ಣ್ಯಪಾನಾ-**
**ಮಾಯುಃ ಶ್ರಿಯೋ ವಿಭವ ಇಚ್ಛತಿ ಯಂ ಜನೋಽಯಮ್ ।**
**ಯೇಽಸ್ಮತ್ಪಿತುಃ ಕುಪಿತಹಾಸವಿಜೃಂಭಿತಭ್ರೂ-**
**ವಿಸ್ಫೂರ್ಜಿತೇನ ಲುಲಿತಾಃ ಸ ತು ತೇ ನಿರಸ್ತಃ ॥ 23 ॥**

23. ವಿಭುವೆ, ಯಾವದನ್ನು ಈ ಲೋಕದ ಜನರು ಇಚ್ಛಿಸುತ್ತಿರುವರೋ, ಸ್ವರ್ಗದಲ್ಲಿ ಸಿಕ್ಕುವ ಆ ಸಮಸ್ತಲೋಕಪಾಲರ ಆಯುಸ್ಸು, ಸಂಪತ್ತುಗಳು, ವಿಭವ – ಎಲ್ಲವನ್ನೂ ನಾನು ಕಂಡಿರುವೆನು. ಅವು ನನ್ನ ತಂದೆಯ ಕೋಪದ ನಗೆಯ ಹುಚ್ಚಿನ ಕುಣಿತದಿಂದಲೇ ಹಾರಿಹೋದವು! ಆದರೆ ಅವನನ್ನೂ ನೀನು ಇಲ್ಲವಾಗಿಸಿದೆ!

**ತಸ್ಮಾದಮೂಸ್ತನುಭೃತಾಮಹಮಾಶಿಷೋ ಜ್ಞ**
**ಆಯುಃ ಶ್ರಿಯಂ ವಿಭವಮೈನ್ದ್ರಿಯಮಾವಿರಿಞ್ಚಾತ್ ।**
**ನೇಚ್ಛಾಮಿ ತೇ ವಿಲುಲಿತಾನುರುವಿಕ್ರಮೇಣ**
**ಕಾಲಾತ್ಮನೋಪನಯ ಮಾಂ ನಿಜಭೃತ್ಯಪಾರ್ಶ್ವಮ್ ॥ 24 ॥**

24. ಆದ್ದರಿಂದ ಈ ಶರೀರಿಗಳು ಬಯಸುತ್ತಿರುವ ಬ್ರಹ್ಮಲೋಕದವರೆಗಿನ ಆಯುಸ್ಸು, ಸಿರಿ, ವಿಭವ ಮತ್ತು ಇಂದ್ರಿಯಭೋಗ – ಇವುಗಳನ್ನು ನಾನು ಇಚ್ಛಿಸುತ್ತಿಲ್ಲ. ಬಹುಪರಾಕ್ರಮಿಯಾದ ಕಾಲರೂಪನಾದ ನಿನ್ನಿಂದ ಅವೆಲ್ಲವೂ ಗ್ರಸ್ತವಾಗಿರುತ್ತವೆ. ನನ್ನನ್ನು ನಿನ್ನ ಭೃತ್ಯರ ಬಳಿಗೆ ಸೇರಿಸು!

**ಕುತ್ರಾಶಿಷಃ ಶ್ರುತಿಸುಖಾ ಮೃಗತೃಷ್ಣಿರೂಪಾಃ**
**ಕ್ವೇದಂ ಕಲೇವರಮಶೇಷರುಜಾಂ ವಿರೋಹಃ ।**
**ನಿರ್ವಿದ್ಯತೇ ನ ತು ಜನೋ ಯದಪೀತಿ ವಿದ್ವಾನ್**
**ಕಾಮಾನಲಂ ಮಧುಲವೈಃ ಶಮಯನ್ ದುರಾಪೈಃ ॥ 25 ॥**

25. ಕೇಳುವದಕ್ಕೆ ಸುಖಮಯವಾಗಿದ್ದರೂ ಬಿಸಿಲುಕುದುರೆಯಂತೆ ಇರುವ ಈ ಕಾಮಗಳೆಲ್ಲಿ, ರೋಗಗಳೆಲ್ಲವೂ ಎದ್ದುಕೊಳ್ಳುವದಕ್ಕೆ ಸ್ಥಾನವಾಗಿರುವ ಈ ಶರೀರವೆಲ್ಲಿ! ಇದನ್ನು ತಿಳಿದುಕೊಂಡಿದ್ದರೂ ವಿರಕ್ತರಾಗದೆ ಇರುವರೆಲ್ಲ! ಎಂದಿಗೂ ಸಿಕ್ಕದೆ ಇರುವ ಮಧುಬಿಂದುಗಳಿಂದ ಈ ಕಾಮಾಗ್ನಿಯನ್ನು ಶಾಂತಿಗೊಳಿಸುವದಕ್ಕೆ ಎಳೆಸುವರಲ್ಲ!

**ಕ್ವಾಹಂ ರಜಃಪ್ರಭವ ಈಶ ತಮೋಽಧಿಕೇಽಸ್ಮಿ–**
**ಞ್ಜಾತಃ ಸುರೇತರಕುಲೇ ಕ್ವ ತವಾನುಕಮ್ಪಾ ।**
**ನ ಬ್ರಹ್ಮಣೋ ನ ತು ಭವಸ್ಯ ನ ವೈ ರಮಾಯಾ**
**ಯನ್ಮೇಽರ್ಪಿತಃ ಶಿರಸಿ ಪದ್ಮಕರಃ ಪ್ರಸಾದಃ ॥ 26 ॥**

26. ಎಲೆ ಈಶ್ವರನೆ, ಈ ತಮಃಪ್ರಧಾನವಾದ ಅಸುರವಂಶದಲ್ಲಿ ಹುಟ್ಟಿದ ರಜೋಗುಣೋತ್ಪನ್ನನಾದ ನಾನೆಲ್ಲಿ? ನಿನ್ನ ದಯೆಯೆಲ್ಲಿ? ಬ್ರಹ್ಮನ ತಲೆಯ ಮೇಲಾಗಲಿ, ರುದ್ರನ ತಲೆಯಮೇಲಾಗಲಿ ಲಕ್ಷ್ಮಿಯ ತಲೆಯ ಮೇಲಾಗಲಿ ಇಡದೆ ಇದ್ದ ಕರಕಮಲವನ್ನು ನನ್ನ ಶಿರಸ್ಸಿನಮೇಲೆ ಇಟ್ಟು ಅನುಗ್ರಹಿಸಿರುವೆಯಲ್ಲ!

**ನೈಷಾ ಪರಾವರಮತಿರ್ಭವತೋ ನನು ಸ್ಯಾ–**
**ಜ್ಜನ್ತೋರ್ಯಥಾತ್ಮಸುಹೃದೋ ಜಗತಸ್ತಥಾಪಿ ।**
**ಸಂಸೇವಯಾ ಸುರತರೋರಿವ ತೇ ಪ್ರಸಾದಃ**
**ಸೇವಾನುರೂಪಮುದಯೋ ನ ಪರಾವರತ್ವಮ್ ॥ 27 ॥**

27. ಸಾಮಾನ್ಯಜೀವರಂತೆ ನಿನಗೆ ಹೆಚ್ಚು, ಕಡಿಮೆ – ಎಂಬ ಬುದ್ಧಿಯು ಜಗತ್ತಿಗೇ ಆತ್ಮನಾದ ನಿಷ್ಕಾರಣಸುಹೃತ್ತಾಗಿರುವ ನಿನ್ನಲ್ಲಿರುವದಿಲ್ಲ. ಹೀಗಿದ್ದರೂ ಕಲ್ಪತರುವನ್ನು ಸೇವಿಸಿದವರಿಗೇ ಫಲವಾಗುವಂತೆ ನಿನ್ನ ಪ್ರಸಾದವು ಆಗುತ್ತಿರುವದು, ಸೇವೆಗೆ ಅನುಸಾರವಾಗಿಯೇ ಆ ಪ್ರಸನ್ನತೆಯುಂಟಾಗುವದೇ ಹೊರತು ಉಚ್ಚನೀಚನೆಂಬ ಕಾರಣದಿಂದಲ್ಲ.

**ಏವಂ ಜನಂ ನಿಪತಿತಂ ಪ್ರಭವಾಹಿಕೂಪೇ**
**ಕಾಮಾಭಿಕಾಮಮನು ಯಃ ಪ್ರಪತನ್ ಪ್ರಸಙ್ಗಾತ್ ।**
**ಕೃತ್ವಾಽಽತ್ಮಸಾತ್ ಸುರರ್ಷಿಣಾ ಭಗವನ್ ಗೃಹೀತಃ**
**ಸೋಽಹಂ ಕಥಂ ನು ವಿಸೃಜೇ ತವ ಭೃತ್ಯಸೇವಾಮ್ ॥ 28 ॥**

28. ಇದರಂತೆ, ಕಾಮುಗಳನ್ನೇ ಎಲ್ಲೆಲ್ಲಿಯೂ ಕಾಮಿಸುತ್ತಾ ಅದರ ಸಂಗದಿಂದ ಜನ್ಮಕೂಪದಲ್ಲಿ ಬಿದ್ದಿದ್ದ ನನ್ನನ್ನು ತನ್ನವನನ್ನಾಗಿ ಮಾಡಿಕೊಂಡು ದೇವರ್ಷಿಯಾದ ನಾರದನು ಪರಿಗ್ರಹಿಸಿದನೋ ಅಂಥ ನಾನು ನಿನ್ನ ಭೃತ್ಯರ ಸೇವೆಯನ್ನು ಹೇಗೆತಾನೆ ಬಿಡಲಿ?

**ಮತ್ಪ್ರಾಣರಕ್ಷಣಮನನ್ತ ಪಿತುರ್ವಧಶ್ಚ**
**ಮನ್ಯೇ ಸ್ವಭೃತ್ಯಋಷಿವಾಕ್ಯಮೃತಂ ವಿಧಾತುಮ್ ।**
**ಖಡ್ಗಂ ಪ್ರಗೃಹ್ಯ ಯದವೋಚದಸದ್ವಿಧಿತ್ಸು-**
**ಸ್ತ್ವಾಮೀಶ್ವರೋ ಮದಪರೋಽವತು ಕಂ ಹರಾಮಿ ॥ 29 ॥**

29. ಎಲೈ ಅನಂತನೆ, ನನ್ನ ಪ್ರಾಣವನ್ನು ರಕ್ಷಿಸಿದ್ದು, ತಂದೆಯನ್ನು ಕೊಂದದ್ದು ನಿನ್ನ ಭೃತ್ಯರಾದ ಋಷಿಗಳ ವಾಕ್ಯವನ್ನು ಸತ್ಯವೆಂದು ಮಾಡಬೇಕೆಂದೇ ನಾನು ಎಣಿಸಿರುತ್ತೇನೆ. ಏಕೆಂದರೆ ಅವನು ಕತ್ತಿಯನ್ನು ಎತ್ತಿ ಮಾಡಬಾರದ್ದನ್ನು ಮಾಡಬೇಕೆಂಬ ಇಚ್ಛೆಯಿಂದ 'ನನಗಿಂತ ಬೇರೆಯಾದ ಈಶ್ವರ ನೊಬ್ಬನಿದ್ದರೆ ನಿನ್ನನ್ನು ಕಾಪಾಡಲಿ! ನಿನ್ನ ತಲೆಯನ್ನು ಕತ್ತರಿಸುವೆನು' ಎಂದನಲ್ಲವೆ?

**ಏಕಸ್ತ್ವಮೇವ ಜಗದೇತದಮುಷ್ಯ ಯತ್ತ್ವ**
**ಮಾದ್ಯನ್ತಯೋಃ ಪೃಥಗವಸ್ಯಸಿ ಮಧ್ಯತಶ್ಚ ।**
**ಸೃಷ್ಟ್ವಾ ಗುಣವ್ಯತಿಕರಂ ನಿಜಮಾಯಯೇದಂ**
**ನಾನೇವ ತೈರವಸಿತಸ್ತದನುಪ್ರವಿಷ್ಟಃ ॥ 30 ॥**

30. ನೀನೊಬ್ಬನೇ ಈ ಜಗತ್ತಾಗಿರುವೆ. ಏಕೆಂದರೆ ಇದರ ಆದ್ಯಂತಗಳಲ್ಲಿ ಇದಕ್ಕಿಂತ ಬೇರೆಯಾಗಿದ್ದುಕೊಂಡು, ನಡುವೆ, ಇದನ್ನು ರಕ್ಷಿಸುತ್ತಲೂ ಇರುವೆ. ಈ ಗುಣಮಿಶ್ರಣವನ್ನು ನಿನ್ನ ಮಾಯೆಯಿಂದ ಸೃಷ್ಟಿಸಿ, ಅದನ್ನು ಪ್ರವೇಶಿಸಿದವನಾಗಿ ಆ ಗುಣಗಳಿಂದ ನಾನಾರೂಪನಾಗಿರುವಂತೆ ನಿಶ್ಚಿತನಾಗುತ್ತಿರುವೆ.

**ತ್ವಂ ವಾ ಇದಂ ಸದಸದೀಶ ಭವಾಂಸ್ತತೋಽನ್ಯೋ**
**ಮಾಯಾ ಯದಾತ್ಮಪರಬುದ್ಧಿರಿಯಂ ಹ್ಯಪಾರ್ಥಾ ।**
**ಯದ್ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ**
**ತದ್ವೈ ತದೇವ ವಸುಕಾಲವದಷ್ಟಿತರ್ವೋಃ ॥ 31 ॥**

31. ಈ ಸದಸದ್ರೂಪದ ಕಾರ್ಯಕಾರಣಭಾವದ ಜಗತ್ತೆಲ್ಲವೂ ನೀನೇ; ನೀನು ಅದಕ್ಕಿಂತ ಬೇರೆ. ನಾನು, ಮತ್ತೊಬ್ಬರು – ಎಂಬೀ ಮಾಯಾಬುದ್ಧಿಯು ನಿರ್ವಿಷಯವಾದದ್ದು. ಯಾವದು ಯಾವದಕ್ಕೆ ಜನ್ಮವೋ, ನಾಶವೋ, ತೋರುವಿಕೆಯೂ ಆಗಿರುವದೋ ಅದೇ ಬೀಜವೃಕ್ಷಗಳಿಗೆ ಕಾರಣವಾಗಿ ಭೂತಸೂಕ್ಷ್ಮತನ್ಮಾತ್ರೆಯಂತೆ ಆ (ಕಾರ್ಯ)ವಲ್ಲವೆ?

**ನೈತನ್ಮನಸ್ತವ ಕಥಾಸು ವಿಕುಣ್ಠನಾಥ**
**ಸಮ್ಪ್ರೀಯತೇ ದುರಿತದುಷ್ಟಮಸಾಧು ತೀವ್ರಮ್ ।**
**ಕಾಮಾತುರಂ ಹರ್ಷಶೋಕಭಯೈಷಣಾರ್ತಂ**
**ತಸ್ಮಿನ್ ಕಥಂ ತವ ಗತಿಂ ವಿಮೃಶಾಮಿ ದೀನಃ ॥ 39 ॥**

39. ಎಲೈ ವೈಕುಂಠಾಧಿಪತಿಯೆ, ಪಾಪದಿಂದ ದೂಷಿತವಾಗಿರುವ ಈ ಮನಸ್ಸು, ಅಸಾಧುವಾಗಿದೆ, ಕಾಮಾತುರವಾಗಿರುತ್ತದೆ; ಹರ್ಷ, ಶೋಕ, ಭಯ, ಏಷಣೆಗಳು – ಇವುಗಳಿಂದ ಸಂಕಟಪಡುತ್ತಿದೆ. ನಿನ್ನ ಕಥೆಗಳಿಂದ ಸಂತೋಷವನ್ನು ಹೊಂದದೆ ಇರುತ್ತದೆ. ಹೀಗಿರುವಲ್ಲಿ ದೀನನಾದ ನಾನು ನಿನ್ನ ಸ್ವರೂಪವನ್ನು ಹೇಗೆತಾನೆ ತಿಳಿದುಕೊಂಡೇನು?

**ಜಿಹ್ವೈಕತೋಽಚ್ಯುತ ವಿಕರ್ಷತಿ ಮಾಽವಿತೃಪ್ತಾ**
**ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।**
**ಘ್ರಾಣೋಽನ್ಯತಶ್ಚಪಲದೃಕ್ ಕ್ವ ಚ ಕರ್ಮಶಕ್ತಿ-**
**ರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನನ್ತಿ ॥ 40 ॥**

40. ಅತೃಪ್ತವಾದ ನಾಲಿಗೆ ಒಂದುಕಡೆಗೆ, ಶಿಶ್ನವು ಒಂದುಕಡೆಗೆ; ತ್ವಗಿಂದ್ರಿಯವೊಂದುಕಡೆಗೆ, ಶ್ರವಣವೇ ಒಂದುಕಡೆಗೆ, ಘ್ರಾಣವು ಒಂದುಕಡೆಗೆ, ಚಂಚಲವಾದ ಚಕ್ಷುರಿಂದ್ರಿಯವು ಒಂದುಕಡೆಗೆ – ಹೀಗೆ ಗೃಹಸ್ಥನನ್ನು ಅನೇಕ ಸವತಿಯರು ಕೀಳುವಂತೆ ನನ್ನನ್ನು ಕೀಳುತ್ತಿವೆ!

**ಏವಂ ಸ್ವಕರ್ಮಪತಿತಂ ಭವವೈತರಣ್ಯಾ-**
**ಮನ್ಯೋನ್ಯಜನ್ಮಮರಣಾಶನಭೀತಭೀತಮ್ ।**
**ಪಶ್ಯನ್ ಜನಂ ಸ್ವಪರವಿಗ್ರಹವೈರಮೈತ್ರಂ**
**ಹನ್ತೇತಿ ಪಾರಚರ ಪೀಪೃಹಿ ಮೂಢಮದ್ಯ ॥ 41 ॥**

41. ಎಲೈ ಸಂಸಾರದ ಆಚೆಯಿರುವ ನಿತ್ಯಮುಕ್ತಭಗವಂತನೆ, ಹೀಗೆ ಸ್ವಕರ್ಮಗಳಿಂದ ಸಂಸಾರವೆಂಬ ವೈತರಣಿಯಲ್ಲಿ ಬಿದ್ದು ಒಂದರಿಂದೊಂದು ಆಗುತ್ತಿರುವ ಜನನ, ಮರಣ, ಭೋಗ – ಇವುಗಳಿಂದ ಅತ್ಯಂತಭಿಕರವಾಗಿರುವ, ತನ್ನವರಿವರು, ಹೊರಗಿನವರಿವರು – ಎಂದು ಮೈತ್ರಿ, ವೈರ – ಇವುಗಳನ್ನು ಒಬ್ಬರಲ್ಲೊಬ್ಬರು ಮಾಡುತ್ತಾ ಇರುವ ಈ ಮೂಢಜನರನ್ನು ಕಂಡು ಅಯ್ಯೋ! ಎಂದು ಈಗಲೆ ಇದರಿಂದ ದಾಟಿಸಿ ಕಾಪಾಡು!

**ಕೋ ನ್ವತ್ರ ತೇಽಖಿಲಗುರೋ ಭಗವನ್ ಪ್ರಯಾಸ**
**ಉತ್ತಾರಣೇಽಸ್ಯ ಭವಸಂಭವಲೋಪಹೇತೋಃ ।**
**ಮೂಢೇಷು ವೈ ಮಹದನುಗ್ರಹ ಆರ್ತಬನ್ಧೋ**
**ಕಿಂ ತೇನ ತೇ ಪ್ರಿಯಜನಾನನುಸೇವತಾಂ ನಃ ॥ 41 ॥**

41. ಎಲ್ಲರಿಗೂ ತಂದೆಯಾಗಿರುವ ಭಗವಂತನೆ, ಸೃಷ್ಟಿಸ್ಥಿತಿಪ್ರಲಯ ಕಾರಣನಾಗಿರುವ ನಿನಗೆ ಈ ಜೀವಜನರನ್ನು ದಾಟಿಸುವದರಲ್ಲಿ ಪ್ರಯಾಸವಾದರೂ ಏನಿದೆ? ಎಲೈ ಆರ್ತಬಂಧುವೆ, ಮೂಢರಲ್ಲಿಯೇ ಅಲ್ಲವೆ, ದೊಡ್ಡವರ ಅನುಗ್ರಹವಾಗಬೇಕು? ನಿನ್ನ ಪ್ರಿಯರಾದ ಭಕ್ತಜನರನ್ನು ಸೇವಿಸುವ ನಮಗೆ ಅದರಿಂದೇನಾಗಬೇಕಾಗಿದೆ?

**ನೈವೋದ್ವಿಜೇ ಪರ ದುರತ್ಯಯವೈತರಣ್ಯಾ-**
**ಸ್ತ್ವದ್ವೀರ್ಯಗಾಯನಮಹಾಮೃತಮಗ್ನಚಿತ್ತಃ ।**
**ಶೋಚೇ ತತೋ ವಿಮುಖಚೇತಸ ಇನ್ದ್ರಿಯಾರ್ಥ-**
**ಮಾಯಾಸುಖಾಯ ಭರಮುದ್ವಹತೋ ವಿಮೂಢಾನ್ ॥ 42 ॥**

42. ಎಲೈ ಪರಮಾತ್ಮನೆ, ದಾಟಲಶಕ್ಯವಾದ ವೈತರಣಿಯಿಂದ ನನಗೆ ಯಾವ ತಳಮಳವೂ ಆಗುತ್ತಿಲ್ಲ; ಏಕೆಂದರೆ ನಿನ್ನ ವೀರ್ಯವನ್ನು ಗಾನ ಮಾಡುವದೆಂಬ ಮಹಾಮೃತದಲ್ಲಿ ನನ್ನ ಚಿತ್ತವು ಮುಳುಗಿರುತ್ತದೆ. ಅದಕ್ಕೆ ವಿಮುಖರಾಗಿ ಇಂದ್ರಿಯಾರ್ಥಗಳಿಂದಾಗುವ ಮಾಯಾಸುಖಪ್ರಾಪ್ತಿಯಲ್ಲಿಯೇ ತಾತ್ಪರ್ಯವುಳ್ಳ ವಿಮೂಢರನ್ನು ಕುರಿತೇ ನಾನು ಶೋಕಿಸುತ್ತಿರುವೆನು.

**ಪ್ರಾಯೇಣ ದೇವ ಮುನಯಃ ಸ್ವವಿಮುಕ್ತಿಕಾಮಾ**
**ಮೌನಂ ಚರನ್ತಿ ವಿಜನೇ ನ ಪರಾರ್ಥನಿಷ್ಠಾಃ ।**
**ನೈತಾನ್ ವಿಹಾಯ ಕೃಪಣಾನ್ ವಿಮುಮುಕ್ಷ ಏಕೋ**
**ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ॥ 44 ॥**

44. ದೇವನೆ, ಮುನಿಗಳು ಬಲುಮಟ್ಟಿಗೆ ತಮ್ಮ ಮುಕ್ತಿಯನ್ನೇ ಬಯಸಿ ವಿಜನಸ್ಥಾನದಲ್ಲಿ ಮೌನನಿಷ್ಠರಾಗಿರುತ್ತಾರೆ. ಮತ್ತೊಬ್ಬರ ಪ್ರಯೋಜನದಲ್ಲಿ ತಾತ್ಪರ್ಯವುಳ್ಳವರಾಗಿರುವದಿಲ್ಲ. ಈ ಕೃಪಣರಾದ ಜೀವರನ್ನು ಬಿಟ್ಟು ನನಗೆ ವಿಮುಕ್ತಿಯಾಗಬೇಕೆಂಬ ಇಚ್ಛೆಯಿರುವದಿಲ್ಲ. ಸಂಸಾರದಲ್ಲಿ ತೊಳಲುತ್ತಿರುವವನಿಗೆ

ನಿನ್ನನ್ನು ಬಿಟ್ಟರೆ ಮತ್ತೊಬ್ಬ ರಕ್ಷಕನು ನನಗೆ ಕಾಣುತ್ತಲೂ ಇಲ್ಲ.

**ಮೌನವ್ರತಶ್ರುತತಪೋಽಧ್ಯಯನಸ್ವಧರ್ಮ–**
**ವ್ಯಾಖ್ಯಾರಹೋಜಪಸಮಾಧಯ ಆಪವರ್ಗ್ಯಾಃ ।**
**ಪ್ರಾಯಃ ಪರಂ ಪುರುಷ ತೇ ತ್ವಜಿತೇನ್ದ್ರಿಯಾಣಾಂ**
**ವಾರ್ತಾ ಭವನ್ತ್ಯುತ ವಾಽತ್ರ ತು ದಾಮ್ಭಿಕಾನಾಮ್ ॥ 46 ॥**

46. ಎಲೈ ಪರಮಪುರುಷನೆ, ಮೌನ, ಬ್ರಹ್ಮಚರ್ಯ, ಶಾಸ್ತ್ರಶ್ರವಣ, ತಪಸ್ಸು, ಅಧ್ಯಯನ, ಸ್ವಧರ್ಮಪಾಲನ, ಶಾಸ್ತ್ರಾರ್ಥವಿಚಾರ, ಏಕಾಂತವಾಸ, ಜಪ, ಸಮಾಧಿ – ಇವು ಮೋಕ್ಷಸಾಧನಗಳು. ಆದರೆ ಜಿತೇಂದ್ರಿಯರಲ್ಲದವರಿಗೆ ದಾಂಭಿಕರಿಗೆ ಅಷ್ಟೂ ಆಗುವಂತಿಲ್ಲ.

*****

## ಗಜೇಂದ್ರಮಾಡಿದ ಪರಮಾತ್ಮಸ್ತೋತ್ರ

(ಎಂಟನೆಯ ಸ್ಕಂಧ, ಮೂರನೆಯ ಅಧ್ಯಾಯ)

**ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।**
**ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥ 2 ॥**

2. ಯಾವಾತನಿಂದ ಈ ಜಗತ್ತು ಹುಟ್ಟಿ ಚಿದಾತ್ಮಕವಾಗಿಯೇ ಇರುವದೋ ಆ ಭಗವಂತನಿಗೆ, ಅದಿಕಾರಣನಾಗಿರುವ ಪುರುಷನಿಗೆ, ಪರಮೇಶ್ವರನಿಗೆ ಓಂ! ನಮಸ್ಕಾರವಚನವನ್ನು ಹೇಳುತ್ತಿದ್ದೇವೆ.

**ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।**
**ಯೋಽಸ್ಮಾತ್ ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥ 3 ॥**

3. ಈ ಜಗತ್ತು ಯಾವಾತನಲ್ಲಿಯೇ ಇರುವದೋ, ಯಾವತನಿಂದಲೇ ಇದು ಬಂದಿರುವದೋ ಯಾವನಿಂದ ಇದು ನಿಯಂತ್ರಿತವಾಗಿದೆಯೋ, ಯಾವನು ತಾನೇ ಇದಾಗಿರುವನೋ ಯಾವನು ಈ ಜಗತ್ತಿಗಿಂತಲೂ ಇದರ ಕಾರಣಕ್ಕಿಂತಲೂ ಪರಮನಾಗಿರುವನೋ ಆ ಸ್ವಯಂಭುವನ್ನು ಶರಣುಹೊಕ್ಕಿರುವೆನು.

**ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ**
**ಕ್ವಚಿದ್ವಿಭಾತಂ ಕ್ವಚ ತತ್ತಿರೋಹಿತಮ್ ।**

**ಅವಿದ್ಧದೃಕ್ ಸಾಕ್ಷ್ಯುಭಯಂ ತದೀಕ್ಷತೇ**
**ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥ 4 ॥**

4. ಯಾವಾತನು ತನ್ನ ಮಾಯೆಯಿಂದ ತೋರಿಸಲ್ಪಡುತ್ತಾ – ಕೆಲವುವೇಳೆ ತೋರುವದು ಕೆಲವುವೇಳೆ ಮೊಳೆತುಮರೆಯಾಗುವದು – ಈ ಎರಡನ್ನೂ ಅಲುಪ್ತದೃಷ್ಟಿಯಿಂದೊಡಗೂಡಿದ ಸಾಕ್ಷಿಯಾಗಿ ನೋಡುತ್ತಿರುವನೋ, ಆ ತನಗೆ ತಾನೇ ಮೂಲವಾಗಿರುವ ಪರಾತ್ಪರನು ನನ್ನನ್ನು ಕಾಪಾಡಲಿ!

**ಕಾಲೇನ ಪಞ್ಚತ್ವಮಿತೇಷು ಕೃತ್ಸ್ನಶೋ**
**ಲೋಕೇಷು ಕಾಲೇಷು ಚ ಸರ್ವಹೇತುಷು ।**
**ತಮಸ್ತದಾಸೀದ್ಗಹನಂ ಗಭೀರಂ**
**ಯಸ್ತಸ್ಯ ಪಾರೇಽಭಿವಿರಾಜತೇ ವಿಭುಃ ॥ 5 ॥**

**ನ ಯಸ್ಯ ದೇವಾ ಋಷಯಃ ಪದಂ ವಿದು–**
**ರ್ಜನ್ತುಃ ಪುನಃ ಕೋಽರ್ಹತಿ ಗನ್ತುಮೀರಿತುಮ್ ।**
**ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ**
**ದುರತ್ಯಯಾನುಕ್ರಮಣಃ ಸ ಮಾಽವತು ॥ 6 ॥**

5–6. ಲೋಕಗಳೂ ಲೋಕಪಾಲಕರೂ ಸಮಸ್ತಲೋಕಗಳೂ – ಇವೆಲ್ಲ ಕಾಲಾನುಕಾಲಕ್ಕೆ ಸಂಪೂರ್ಣವಾಗಿ ನಾಶವಾಗಲು ಗಹನವಾದ ಗಭೀರವಾದ ಕತ್ತಲೊಂದೇ ಆವರಿಸಿಕೊಂಡಿರುವಲ್ಲಿ ಯಾವ ವಿಭುವು ಅದರಿಂದಾಚೆಗೆ ಪ್ರಕಾಶಿಸುತ್ತಿರುವನೋ, ಯಾವಾತನ ಸ್ಥಾನವನ್ನು ದೇವತೆಗಳಾಗಲಿ ಋಷಿಗಳಾಗಲಿ ಅರಿಯಲಾರರೋ, ಮಿಕ್ಕ ಜೀವನು ಯಾವನು ಹೇಗೆತಾನೆ ಅರಿತಾನು, ಹೇಳಿಯಾನು? ಬಗೆಬಗೆಯ ವೇಷಗಳಿಂದ ಅಭಿನಯಿಸುವ ನಟನನ್ನು ಗೊತ್ತುಪಡಿಸಲಾಗದಿರುವಂತೆ, ಯಾವನನ್ನು ಅನುಸರಿಸಿ ತಿಳಿಯುವದು ಯಾರಿಂದಲೂ ಆಗದೋ ಆತನು ನನ್ನನ್ನು ಕಾಪಾಡಲಿ!

**ದಿದೃಕ್ಷವೋ ಯಸ್ಯ ಪದಂ ಸುಮಙ್ಗಲಂ**
**ವಿಮುಕ್ತಸಙ್ಗಾ ಮುನಯಃ ಸುಸಾಧವಃ ।**
**ಚರನ್ತ್ಯಲೋಕವ್ರತಮವ್ರಣಂ ವನೇ**
**ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥ 7 ॥**

7. ಯಾವಾತನ ಅತ್ಯಂತಮಂಗಲವಾದ ಪರಮಪದವನ್ನು ಕಾಣಬೇಕೆಂದು ಸಂಗವನ್ನು ತ್ಯಜಿಸಿ ಸುಸಾಧುಗಳಾದ ಮುನಿಗಳು ಸರ್ವಭೂತಗಳಿಗೂ ಆತ್ಮರಾಗಿ ವನದಲ್ಲಿ ಅವಿಚ್ಛಿನ್ನವಾದ ತಪಸ್ಸನ್ನು ಮಾಡುತ್ತಿರುವರೋ ಆತನೇ ನನಗೆ ಗತಿ!

**ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ**
**ನ ನಾಮರೂಪೇ ಗುಣದೋಷ ಏವ ವಾ ।**
**ತಥಾಪಿ ಲೋಕಾಪ್ಯಯಸಂಭವಾಯ ಯಃ**
**ಸ್ವಮಾಯಯಾ ತಾನ್ಯನು ಕಾಲಮೃಚ್ಛತಿ ॥ 8 ॥**

**ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನನ್ತಶಕ್ತಯೇ ।**
**ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥ 9 ॥**

8–9. ಯಾವಾತನಿಗೆ ಜನ್ಮವಾಗಲಿ, ಕರ್ಮವಾಗಲಿ, ನಾಮರೂಪಗಳಾಗಲಿ, ಗುಣವಾಗಲಿ ದೋಷವೇ ಆಗಲಿ – ಇಲ್ಲವೋ ಆದರೂ ಲೋಕಸೃಷ್ಟಿಪ್ರಲಯಕ್ಕಾಗಿ ಯಾವಾತನು ತನ್ನ ಮಾಯೆಯಿಂದಲೇ ಅವುಗಳನ್ನು ಪಡೆಯುತ್ತಿರುವನೋ ಆ ಬ್ರಹ್ಮನಿಗೆ, ಅನಂತಶಕ್ತಿಗಳುಳ್ಳವನಾಗಿ ರೂಪರಹಿತ ನಾಗಿ ಬಹುರೂಪನಾಗಿರುವ ಆಶ್ಚರ್ಯಕರ್ಮನಾದ ಆ ಪರಮೇಶ್ವರನಿಗೆ, ನಮಸ್ಕಾರ!

**ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।**
**ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥ 10 ॥**

10. ಸ್ವಯಂಪ್ರಕಾಶನಾದ ಸಾಕ್ಷಿಯಾದ ಪರಮಾತ್ಮನಿಗೆ ನಮಸ್ಕಾರ! ವಾಕ್ಕುಗಳು, ಮನಸ್ಸು, ಚಿತವೃತ್ತಿಗಳು – ಇವೆಲ್ಲಕ್ಕೂ ದೂರವಿರುವಾತನಿಗೆ ನಮಸ್ಕಾರ!

**ಸತ್ತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।**
**ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥ 11 ॥**

11. ವಿವೇಕಿಯಾದ ಪುರುಷನಿಗೆ ನೈಷ್ಕರ್ಮ್ಯದ ಮೂಲಕ ಮನಸ್ಸಿನಿಂದಲೇ ಅರಿತುಕೊಳ್ಳಲಾಗುವ ಕೈವಲ್ಯದೊಡೆಯುನಿಗೆ, ಮೋಕ್ಷಸುಖ ವಿಜ್ಞಾನರೂಪನಾದವನಿಗೆ, ನಮಸ್ಕಾರ!

**ನಮಃ ಶಾನ್ತಾಯ ಘೋರಾಯ ಮೂಢಾಯ ಗುಣಧರ್ಮಿಣೇ ।**
**ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ ॥ 12 ॥**

12. ಮೂರು ಗುಣಗಳ ಧರ್ಮದಿಂದ ಶಾಂತನೂ ಘೋರನೂ ಮೂಢನೂ ಆಗಿರುವಾತನಿಗೆ, ಆದರೂ ಯಾವ ವಿಶೇಷವೂ ಇಲ್ಲದೆ ಸಮತ್ವರೂಪದಲ್ಲಿರುವ ಜ್ಞಾನದ ಗಟ್ಟಿಗೆ, ನಮಸ್ಕಾರ!

**ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।**
**ಪುರುಷಾಯಾಽಽತ್ಮಮೂಲಾಯ ಮೂಲಪ್ರಕೃತಯೇ ನಮಃ ॥ 13 ॥**

13. ಕ್ಷೇತ್ರಜ್ಞನೂ ಸರ್ವರಿಗೂ ಒಡೆಯನೂ ಸಾಕ್ಷಿಯೂ ಎಲ್ಲೆಲ್ಲಿಯೂ ಪೂರ್ಣನಾಗಿರುವಾತನೂ ಸ್ವಯಂಕರಣನಾಗಿರುವ, ಮೂಲಪ್ರಕೃತಿಯೂ ಆಗಿರುವ ನಿನಗೆ ನಮಸ್ಕಾರ!

**ಸರ್ವೇನ್ದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ ।**
**ಅಸತಾ ಛಾಯಯೋಕ್ತಾಯ ಸದಾಭಾಸಾಯ ತೇ ನಮಃ ॥ 14 ॥**

14. ಇಂದ್ರಿಯಗಳೆಲ್ಲದರ ಗುಣಗಳನ್ನು ನೋಡುತ್ತಿರುವ, ಪ್ರತ್ಯಯಗಳೆಲ್ಲಕ್ಕೂ ಕಾರಣನಾಗಿರುವ, ಮಿಥ್ಯಾರೂಪವಾದ ನೆರಳಿನಂತಿರುವ ಅಹಂಕಾರಾದಿಗಳಿಂದ ತಿಳಿಯಬರುವ, ವಸ್ತುಗಳಲ್ಲಿ ಸತ್ತಾರೂಪವಾಗಿ ತೋರುತ್ತಿರುವ, ನಿನಗೆ ನಮಸ್ಕಾರ!

**ನಮೋ ನಮಸ್ತೇಽಖಿಲಕಾರಣಾಯ**
**ನಿಷ್ಕಾರಣಾಯಾದ್ಭುತಕಾರಣಾಯ ।**
**ಸರ್ವಾಗಮಾಮ್ನಾಯಮಹಾರ್ಣವಾಯ**
**ನಮೋಽಪವರ್ಗಾಯ ಪರಾಯಣಾಯ ॥ 15 ॥**

15. ಎಲ್ಲಕ್ಕೂ ಕಾರಣನಾಗಿರುವ ಕಾರಣಶೂನ್ಯನಾದ ಇದ್ದಂತೆ ಇದ್ದು ಕಾರಣವಾಗಿರುವ ಅದ್ಭುತಕಾರಣರೂಪನಾದ ನಿನಗೆ ನಮಸ್ಕಾರ! ಸಮಸ್ತ ಆಗಮಗಳಿಗೂ ವೇದಗಳಿಗೂ ನದಿಗಳು ಹೋಗಿ ಸೇರುವ ಸಮುದ್ರದಂತಿರುವ ನಿನಗೆ, ಮೋಕ್ಷಸ್ವರೂಪನಾಗಿ ಎಲ್ಲರಿಗೂ ಪರಗತಿಯಾಗಿರುವ ನಿನಗೆ ನಮಸ್ಕಾರ!

**ಗುಣಾರಣಿಚ್ಛನ್ನಚಿದೂಷ್ಮಪಾಯ**
**ತತ್ಕ್ಷೋಭವಿಸ್ಫೂರ್ಜಿತಮಾನಸಾಯ ।**
**ನೈಷ್ಕರ್ಮ್ಯಭಾವೇನ ವಿವರ್ಜಿತಾಗಮ-**
**ಸ್ವಯಂಪ್ರಕಾಶಾಯ ನಮಸ್ಕರೋಮಿ ॥ 16 ॥**

16. ಗುಣತ್ರಯವೆಂಬ ಅರಣಿಯಲ್ಲಿ ಮುಚ್ಚಿಹೋಗಿರುವ ಚಿತ್ಸ್ವರೂಪದ ತೇಜಸ್ಸುಳ್ಳವನಾದ, ಆ ಗುಣಗಳ ಕ್ಷೋಭದಿಂದ ಹೊರಹೊಮ್ಮಿದ ಸಂಕಲ್ಪವುಳ್ಳಾತನಾದ ನಿನಗೆ ನೈಷ್ಕರ್ಮ್ಯಭಾವದಿಂದ ಶಾಸ್ತ್ರವನ್ನು ಮೀರಿರುವವರಿಗೆ ತಾನೇ ಹೊಳೆಯುತ್ತಿರುವ ನಿನಗೆ, ನಮಸ್ಕಾರ!

**ಮಾದೃಕ್ಪ್ರಪನ್ನಪಶುಪಾಶವಿಮೋಕ್ಷಣಾಯ**
**ಮುಕ್ತಾಯ ಭೂರಿಕರುಣಾಯ ನಮೋಽಲಯಾಯ ।**
**ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ-**
**ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥ 17 ॥**

17. ನನ್ನಂಥ ಶರಣುಬಂದ ಪಶುಗಳ ಪಾಶಗಳನ್ನು ಬಿಡಿಸುವಂಥ ನಿನಗೆ, ಮುಕ್ತನೂ ಮಹಾಕರುಣಾಶಾಲಿಯೂ ನಾಶರಹಿತನೂ ಆದ ನಿನಗೆ, ನಮಸಾರ! ತನ್ನ ಅಂಶದಿಂದ ಸರ್ವಶರೀರಗಳ ಮನಸ್ಸಿನಲ್ಲಿ ಕಾಣುವ ಪ್ರತ್ಯಗ್ದ್ರಷ್ಟೃರೂಪನಾದ ಮಹಾಭಗವಂತನೆ, ಈಶ್ವರನಾದ ನಿನಗೆ ನಮಸ್ಕಾರ!

**ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈ-**
**ರ್ದುಷ್ಪ್ರಾಪಣಾಯ ಗುಣಸಙ್ಗವಿವರ್ಜಿತಾಯ ।**
**ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ**
**ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥ 18 ॥**

18. ಶರೀರ, ಪುತ್ರ, ಬಂಧು, ಗೃಹ, ವಿತ್ತ, ಜನರು – ಇವರುಗಳಲ್ಲಿ ಆಸಕ್ತರಾಗಿರುವವರಿಗೆ ಸಿಕ್ಕದೆ ಇರುವ, ಗುಣಸಂಗವು ಒಂದಿಷ್ಟೂ ಇಲ್ಲದಿರುವ, ಮುಕ್ತಾತ್ಮರಾದವರು ತಮ್ಮ ಹೃದಯದಲ್ಲಿ ಚಿಂತಿಸುತ್ತಿರುವ ಚೈತನ್ಯಸ್ವರೂಪ ಭಗವಂತನೆ, ಈಶ್ವರನಾದ ನಿನಗೆ ನಮಸ್ಕಾರ!

**ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ**
**ಭಜನ್ತ ಇಷ್ಟಾಂ ಗತಿಮಾಪ್ನುವನ್ತಿ ।**
**ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ**
**ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥ 19 ॥**

19. ಧರ್ಮ, ಅರ್ಥ, ಕಾಮ, ಮೋಕ್ಷ – ಇವುಗಳನ್ನು ಬಯಸಿ ಯಾವಾತನನ್ನು ಭಜಿಸುವವರು ತಮತಮಗೆ ಇಷ್ಟವಾದ ಗತಿಯನ್ನು

ಪಡೆದುಕೊಳ್ಳುವರೋ, ಮತ್ತು ಬೇರೆಯ ಇಚ್ಛೆಗಳನ್ನೂ ಅವ್ಯಯವಾದ ದೇಹವನ್ನೂ ಯಾವನು ಕೊಡುವನೋ, ಅಂಥ ಪೂರ್ಣದಯಾಕರನಾದ ಪರಮಾತ್ಮನು ನನಗೆ ವಿಮುಕ್ತಿಯನ್ನು ಕೊಡಲಿ!

**ಏಕಾನ್ತಿನೋ ಯಸ್ಯ ನ ಕಞ್ಚನಾರ್ಥಂ**
**ವಾಞ್ಛನ್ತಿ ಯೇ ವೈ ಭಗವತ್ಪ್ರಪನ್ನಾಃ ।**
**ಅತ್ಯದ್ಭುತಂ ತಚ್ಚರಿತಂ ಸುಮಙ್ಗಲಂ**
**ಗಾಯನ್ತಿ ಆನನ್ದಸಮುದ್ರಮಗ್ನಾಃ ॥ 20 ॥**

**ತಮಕ್ಷರಂ ಬ್ರಹ್ಮ ಪರಂ ಪರೇಶ–**
**ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ।**
**ಅತೀನ್ದ್ರಿಯಂ ಸೂಕ್ಷ್ಮಮಿವಾತಿದೂರ–**
**ಮನನ್ತಮಾದ್ಯ ಪರಿಪೂರ್ಣಮೀಡೇ ॥ 21 ॥**

20–21. ಯಾವಾತನ ಏಕಾಂತಭಕ್ತರು ಯಾವದೊಂದು ಅರ್ಥವನ್ನೂ ಬಯಸದೆ ಇರುವರೋ, ಯಾರು ಭಗವಂತನನ್ನು ಶರಣುಹೊಂದಿ ಅತ್ಯದ್ಭುತವಾದ ಆತನ ಸುಮಂಗಲವಾದ ಚರಿತ್ರೆಯನ್ನು ಗಾನಮಾಡುತ್ತಾ ಆನಂದಸಮುದ್ರದಲ್ಲಿ ಮುಳುಗಿರುವರೋ, ಆ ಅಕ್ಷರವನ್ನು, ಪರಬ್ರಹ್ಮವನ್ನು, ಪರಮೇಶ್ವರನನ್ನು, ಅಧ್ಯಾತ್ಮಯೋಗದಿಂದಲೇ ತಿಳಿಯಬರುವ ಆ ಅವ್ಯಕ್ತನನ್ನ, ಅತೀಂದ್ರಿಯನಾಗಿ ಸೂಕ್ಷ್ಮನಾಗಿ ಅತಿದೂರನೂ ಅನಂತನೂ ಆಗಿರುವ ಪರಿಪೂರ್ಣನನ್ನು ಸ್ತೋತ್ರಮಾಡುತ್ತಿದ್ದೇನೆ.

**ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।**
**ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥ 22 ॥**

**ಯಥಾರ್ಚಿಷೋಽಗ್ನೇಃ ಸವಿತುರ್ಗಭಸ್ತಯೋ**
**ನಿರ್ಯಾನ್ತಿ ಸಂಯಾನ್ತ್ಯಸಕೃತ್ ಸ್ವರೋಚಿಷಃ ।**
**ತಥಾ ಯತೋಽಯಂ ಗುಣಸಂಪ್ರವಾಹೋ**
**ಬುದ್ಧಿರ್ಮನಃ ಖಾನಿ ಶರೀರಸರ್ಗಾಃ ॥ 23 ॥**

**ಸ ವೈ ನ ದೇವಾಸುರಮರ್ತ್ಯ ತಿರ್ಯ–**
**ಙ್ನ ಸ್ತ್ರೀ ನ ಷಣ್ಢೋನ ಪುಮಾನ್ನ ಜನ್ತುಃ ।**

**ನಾಯಂ ಗುಣಃ ಕರ್ಮ ನ ಸನ್ನಚಾಸ–**
**ನ್ನಿಷೇಧಶೇಷೋ ಜಯತಾದಶೇಷಃ ॥ 24 ॥**

22–24. ಬ್ರಹ್ಮನೇ ಮೊದಲಾದ ದೇವತೆಗಳೂ ವೇದಗಳೂ ಲೋಕಗಳೂ ಚರಾಚರಪ್ರಾಣಿಗಳೂ ನಾಮರೂಪಗಳ ಭೇದದಿಂದೊಡಗೂಡಿ ಯಾವಾತನ ಸ್ವಲ್ಪತರವಾದ ಕಲೆಯಿಂದ ಮಾಡಲ್ಪಟ್ಟಿರುತ್ತಾರೊ, ಸ್ವಯಂಪ್ರಕಾಶವಾದ ಬೆಂಕಿಯಿಂದ ಕಿಡಿಗಳು ಹೇಗೋ, ಸೂರ್ಯನಿಂದ ಕಿರಣಗಳು ಹೇಗೋ ಹಾಗೆ ಯಾವಾತನಿಂದ ಬುದ್ಧಿ, ಮನಸ್ಸು, ಇಂದ್ರಿಯಗಳು, ಶರೀರಸೃಷ್ಟಿಗಳು, – ಎಂಬೀ ಗುಣಪ್ರವಾಹವು ಬಂದಿರುವದೋ, ಆತನು ದೇವತೆಯಲ್ಲ, ಅಸುರ ನಲ್ಲ, ಮರ್ತ್ಯನಲ್ಲ, ತಿರ್ಯಕ್ಪ್ರಾಣಿಯಲ್ಲ, ಹೆಣ್ಣಲ್ಲ, ಗಂಡಲ್ಲ, ನಪುಂಸಕನಲ್ಲ, ಜೀವನಲ್ಲ, ಗುಣವಲ್ಲ, ಕರ್ಮವಲ್ಲ, ಸತ್ತಲ್ಲ, ಅಸತ್ತಲ್ಲ, ಎಲ್ಲವನ್ನೂ ಅಲ್ಲಗಳೆದ ಉಳಿಮೆಯಾದ ಪೂರ್ಣನಾದ ಆತನೇ ಜಯಶೀಲನಾಗಲಿ!

**ಜಿಜೀವಿಷೇ ನಾಹಮಿಹಾಮುಯಾ ಕಿ–**
**ಮನ್ತರ್ಬಹಿಶ್ಚಾವೃತಯೇಭಯೋನ್ಯಾ ।**
**ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವ–**
**ಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಮ್ ॥ 25 ॥**

25. ಒಳಗೂ ಹೊರಗೂ ತಮಸ್ಸಿನಿಂದ ಆವೃತನಾಗಿರುವ ಈ ಆನೆಯ ಶರೀರದಿಂದಲೇ ಬದುಕಿರಬೇಕೆಂದು ನಾನು ಇಚ್ಛಿಸುವದಿಲ್ಲ. ಆದರೆ ಯಾವದಕ್ಕೆ ಕಾಲದಿಂದಲೂ ಬಾಧೆಯಾಗಲಾರದೋ, ಆ ಆತ್ಮಲೋಕದ ಆವರಣವಾದ ಅಜ್ಞಾನದ ಮೋಕ್ಷವನ್ನು ಇಚ್ಛಿಸುತ್ತೇನೆ.

**ಸೋಽಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇದಸಮ್ ।**
**ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಽಸ್ಮಿ ಪರಂ ಪದಮ್ ॥ 26 ॥**

26. ಆ ನಾನು ವಿಶ್ವವನ್ನು ಸೃಷ್ಟಿಸಿದವನಾದ, ವಿಶ್ವರೂಪನಾದ, ವಿಶ್ವವಿಲಕ್ಷಣನಾದ, ವಿಶ್ವವನ್ನೇ ಉಪಕರಣವಾಗುಳ್ಳ, ವಿಶ್ವಕ್ಕೆಲ್ಲ ಆತ್ಮನಾದ ಜನ್ಮರಹಿತಬ್ರಹ್ಮವಾದ ಪರಮಪದವನ್ನು ನಮಸ್ಕರಿಸುತ್ತೇನೆ.

**ಯೋಗರನ್ಧಿತಕರ್ಮಾಣೋ ಹೃದಿ ಯೋಗವಿಭಾವಿತೇ ।**
**ಯೋಗಿನೋ ಯಂ ಪ್ರಪಶ್ಯನ್ತಿ ಯೋಗೇಶಂ ತಂ ನತೋಽಸ್ಮ್ಯಹಮ್ ॥ 27 ॥**

27. ಯೋಗದಿಂದ ಕರ್ಮವನ್ನು ನಾಶಮಾಡಿಕೊಂಡ, ಯೋಗಿಗಳು ಯೋಗಭಾವನೆಯುಳ್ಳ ಹೃದಯದಲ್ಲಿ ಯಾವಾತನನ್ನು ಕಾಣುವರೋ ಅಂಥ ಯೋಗೇಶ್ವರನ್ನು ನಾನು ನಮಸ್ಕರಿಸುತ್ತೇನೆ.

**ನಮೋ ನಮಸ್ತುಭ್ಯಮಸಹ್ಯವೇಗ–**
**ಶಕ್ತಿತ್ರಯಾಯಾಖಿಲಧೀಗುಣಾಯ ।**
**ಪ್ರಪನ್ನಪಾಲಾಯ ದುರನ್ತಶಕ್ತಯೇ**
**ಕದಿನ್ದ್ರಿಯಾಣಾಮನವಾಪ್ಯವರ್ತ್ಮನೇ ॥ 28 ॥**

28. ತಡೆಯುವದಕ್ಕಾಗದ ವೇಗವುಳ್ಳ ರಾಗಾದಿಶಕ್ತಿತ್ರಯವುಳ್ಳಾತನೆ, ನಿನಗೆ ನಮಸ್ಕಾರ! ಅಂತಃಕರಣಸರ್ವಗುಣವುಳ್ಳಾತನೆ, ನಿನಗೆ ನಮಸ್ಕಾರ! ಶರಣಾಗತರನ್ನು ಕಾಪಾಡುವಾತನೆ, ಕೊನೆಗಾಣದ ಶಕ್ತಿಯುಳ್ಳಾತನೆ, ಅಜಿತೇಂದ್ರಿಯರಿಗೆ ಸಿಕ್ಕದ ಮಾರ್ಗವುಳ್ಳಾತನೆ, ನಿನಗೆ ನಮಸ್ಕಾರ!

**ನಾಯಂ ವೇದ ಸ್ವಮಾತ್ಮಾನಂ ಯಚ್ಛಕ್ತ್ಯಾಹಂಧಿಯಾ ಹತಮ್ ।**
**ತಂ ದುರತ್ಯಯಮಾಹಾತ್ಮ್ಯಂ ಭಗವನ್ತಮಿತೋಽಸ್ಮ್ಯಹಮ್ ॥ 29 ॥**

29. ನಾನೆಂಬ ಬುದ್ಧಿಯಿಂದ ಆವೃತನಾಗಿರುವ ಯಾವಾತನ ಮಾಯಾಶಕ್ತಿಯಿಂದ ತನ್ನ ಆತ್ಮನನ್ನೂ ಈ ಜನರು ಅರಿತುಕೊಳ್ಳದೆ ಇರುವರೋ ಆ ಅರಿಯಲಸದಳವಾದ ಮಹಿಮೆಯುಳ್ಳ ಭಗವಂತನನ್ನು ನಾನು ಶರಣುಹೊಕ್ಕಿರುವೆನು.

**ಶ್ರೀಶುಕ ಉವಾಚ –**
**ಏವಂ ಗಜೇನ್ದ್ರಮುಪವರ್ಣಿತನಿರ್ವಿಶೇಷಂ**
**ಬ್ರಹ್ಮಾದಯೋ ವಿವಿಧಲಿಙ್ಗಭಿದಾಽಭಿಮಾನಾಃ ।**
**ನೈತೇ ಯದೋಪಸಸೃಪುರ್ನಿಖಿಲಾತ್ಮಕತ್ವಾತ್**
**ತತ್ರಾಖಿಲಾಮರಮಯೋ ಹರಿರಾವಿರಾಸೀತ್ ॥ 30 ॥**

30. ಶ್ರೀಶುಕರು ಇಂತೆಂದರು: ಎಲೈ ರಾಜನೆ, ಹೀಗೆ ಗಜೇಂದ್ರನು ನಿರ್ವಿಶೇಷನಾದ ಪರಮಾತ್ಮನನ್ನು ವರ್ಣಿಸುತ್ತಿರಲು ಬೇರೆಬೇರೆಯ ಆಕಾರವಿಶೇಷಗಳಲ್ಲಿ ಅಭಿಮಾನವುಳ್ಳ ಬ್ರಹ್ಮಾದಿಗಳು ಅವನ ಬಳಿಗೆ ಬರಲಿಲ್ಲ. ಆಗ ಸರ್ವಾತ್ಮನಾದ್ದರಿಂದ ಸರ್ವದೇವಮಯನಾದ ಹರಿಯು ಕಾಣಿಸಿಕೊಂಡನು.

*****

## ಸತ್ಯವ್ರತರಾಜನು ಮಾಡಿದ ಮತ್ಸ್ಯಾವತಾರಿ ಪರಮಾತ್ಮನ ಸ್ತುತಿ

(ಎಂಟನೆಯ ಸ್ಕಂಧ, ಇಪ್ಪತ್ತನಾಲ್ಕನೆಯ ಅಧ್ಯಾಯ)

**ಅನಾದ್ಯವಿದ್ಯೋಪಹತಾತ್ಮಸಂವಿದ–**
**ಸ್ತನ್ಮೂಲಸಂಸಾರಪರಿಶ್ರಮಾತುರಾಃ ।**
**ಯದೃಚ್ಛಯೇಹೋಪಸೃತಾ ಯಮಾಪ್ನುಯು –**
**ರ್ವಿಮುಕ್ತಿದೋ ನಃ ಪರಮೋ ಗುರುರ್ಭವಾನ್ ॥ 46 ॥**

46. ಸತ್ಯವ್ರತರಾಜನು ಮತ್ಸ್ಯಾವಕಾರಿಯಾದ ಪರಮಾತ್ಮನನ್ನು ಹೀಗೆಂದು ಸ್ತುತಿಸಿದನು: ಅನಾದಿಯಾದ ಅವಿದ್ಯೆಯಿಂದ ಆತ್ಮಜ್ಞಾನವಿಲ್ಲದವರಾಗಿ, ಆ ಅವಿದ್ಯಾನಿಮಿತ್ತದಿಂದಾದ ಸಂಸಾರದ ಬಳಲಿಕೆಯಿಂದ ನೊಂದು ಅಕಸ್ಮಾತ್ತಾಗಿ ಮಾಡಿದ ಪುಣ್ಯದಿಂದ ಯಾವಾತನನ್ನು ಪಡೆದುಕೊಳ್ಳುವರೋ, ಆ ಮುಕ್ತಿಪ್ರದನಾದ ಪರಮಗುರುವೇ ನೀನು.

**ಜನೋಽಬುಧೋಽಯಂ ನಿಜಕರ್ಮಬನ್ಧನಃ**
**ಸುಖೇಚ್ಛಯಾ ಕರ್ಮ ಸಮೀಹತೇಽಸುಖಮ್ ।**
**ಯತ್ಸೇವಯಾ ತಾಂ ವಿಧುನೋತ್ಯಸನ್ಮತಿಂ**
**ಗ್ರನ್ಥಿಂ ಸ ಭಿನ್ದ್ಯಾದ್ ಹೃದಯಂ ಸ ನೋ ಗುರುಃ ॥ 47 ॥**

47. ಈ ಅಜ್ಞಜನವು ತಮ್ಮ ಕರ್ಮದಿಂದಲೇ ಬದ್ಧವಾಗಿದ್ದು ಸುಖಕ್ಕಾಗಿ ಅಸುಖವಾದ ಕರ್ಮವನ್ನು ಮಾಡುತ್ತಿರುವದು, ಯಾವಾತನ ಸೇವೆಯಿಂದ ಆ ಅಸದ್ಬುದ್ಧಿಯನ್ನು ತೊಲಗಿಸಿಕೊಳ್ಳುವರೋ ಆ ಗುರುವು ನಮ್ಮ ಹೃದಯಗ್ರಂಥಿಯನ್ನು ಭೇದಿಸಲಿ.

**ಯತ್ಸೇವಯಾಗ್ನೇರಿವ ರುದ್ರರೋದನಂ**
**ಪುಮಾನ್ ವಿಜಹ್ಯಾನ್ಮಲಮಾತ್ಮನಸ್ತಮಃ ।**
**ಭಜೇತ ವರ್ಣಂ ನಿಜಮೇಷ ಸೋಽವ್ಯಯೋ**
**ಭೂಯಾತ್ಸ ಈಶಃ ಪರಮೋ ಗುರೋರ್ಗುರುಃ ॥ 48 ॥**

48. ಯಾವಾತನ ಸೇವೆಯಿಂದ – ಬೆಂಕಿಯ ಸಂಪರ್ಕದಿಂದ ಬೆಳ್ಳಿಯು ತನ್ನ ಮೂಲವನ್ನು ಬಿಟ್ಟು ತನ್ನ ರೂಪವನ್ನು ಪಡೆದುಕೊಳ್ಳುವಂತೆ ಮನುಷ್ಯನು ತನ್ನ ಅಂತಃಕರಣದ ಮಲವಾದ ತಮಸ್ಸನ್ನು ಕಳೆದುಕೊಳ್ಳುವನೋ ಮತ್ತು ತನ್ನ

ನಿಜವಾದ ಸ್ವರೂಪವನ್ನು ಪಡೆದುಕೊಳ್ಳುವನೋ, ಆ ಅವ್ಯಯನಾದ ಪರಮೇಶ್ವರನು ನಮಗೆ ಪರಮಗುರುವಾಗಲಿ!

**ನ ಯತ್ಪ್ರಸಾದಾಯುತಭಾಗಲೇಶ–**
**ಮನ್ಯೇ ಚ ದೇವಾ ಗುರವೋ ಜನಾಃ ಸ್ವಯಮ್ ।**
**ಕರ್ತುಂ ಸಮೇತಾಃ ಪ್ರಭವನ್ತಿ ಪುಂಸ–**
**ಸ್ತಮೀಶ್ವರಂ ತ್ವಾಂ ಶರಣಂ ಪ್ರಪದ್ಯೇ ॥ 49 ॥**

49. ಮಿಕ್ಕದೇವತೆಗಳು ತಾವು ಎಷ್ಟೇ ದೊಡ್ಡವರಾಗಿದ್ದರೂ ಎಲ್ಲರೂ ಒಟ್ಟುಸೇರಿದರೂ ಯಾವಾತನ ಪ್ರಸಾದದಲ್ಲಿ ಹತ್ತುಸಾವಿರದಲ್ಲಿ ಒಂದಂಶದಷ್ಟನ್ನು ಕೂಡ ಮನುಷ್ಯನಿಗೆ ಮಾಡಿಕೊಡಲಾರರೋ ಅಂಥ ಈಶ್ವರನಾದ ನಿನ್ನನ್ನು ಶರಣುಹೊಂದಿರುತ್ತೇನೆ.

**ಅಚಕ್ಷುರನ್ಧಸ್ಯ ಯಥಾಗ್ರಣೀಃ ಕೃತ–**
**ಸ್ತಥಾ ಜನಸ್ಯಾವಿದುಷೋಽಬುಧೋ ಗುರುಃ ।**
**ತ್ವಮರ್ಕದೃಕ್ಸರ್ವದೃಶಾಂ ಸಮೀಕ್ಷಣೋ**
**ವೃತೋ ಗುರುರ್ನಃ ಸ್ವಗತಿಂ ಬುಭುತ್ಸತಾಮ್ ॥ 50 ॥**

50. ಕಣ್ಣಿಲ್ಲದವನು ಕುರುಡನಿಗೆ ಮುಂದಾಳಾದರೆ ಹೇಗೋ ಹಾಗೆ ಅಜ್ಞನಾದವನಿಗೆ ಏನೂ ತಿಳಿಯದ ಗುರುವಾದರೂ ಹಾಗೆಯೇ. ಸೂರ್ಯನೇತ್ರನಾದ ನೀನು ಸರ್ವದೃಷ್ಟಿಗಳನ್ನೂ ನೋಡುತ್ತಿರುವಾತನಾದ್ದರಿಂದ ಸ್ವಗತಿಯನ್ನು ಅರಿತುಕೊಳ್ಳಬೇಕೆಂಬ ನಾವು ನಿನ್ನನ್ನೇ ಗುರುವಾಗಿ ಆರಿಸಿಕೊಂಡಿರುವೆವು.

**ಜನೋ ಜನಸ್ಯಾಽಽದಿಶತೇಽಸತಿಂ ಮತಿಂ**
**ಯಯಾ ಪ್ರಪದ್ಯೇತ ದುರತ್ಯಯಂ ತಮಃ ।**
**ತ್ವಂ ತ್ವವ್ಯಯಂ ಜ್ಞಾನಮಮೋಘಮಞ್ಜಸಾ**
**ಪ್ರಪದ್ಯತೇ ಯೇನ ಜನೋ ನಿಜಂ ಪದಮ್ ॥ 51 ॥**

51. ಒಬ್ಬನು ಇನ್ನೊಬ್ಬನಿಗೆ ತಿಳಿಸಿಕೊಡುವ ಜ್ಞಾನದಿಂದ ದಾಟಲಾರದ ಅಜ್ಞಾನವನ್ನೇ ಪಡೆದುಕೊಳ್ಳುವನು. ನೀನಾದರೋ ಅವ್ಯಯವಾದ ಅಮೋಘವಾದ ಜ್ಞಾನವನ್ನು ತಿಳಿಸಿಕೊಡುವೆ. ಅದರಿಂದ ಮನುಷ್ಯನು ತನ್ನ ಸ್ಥಾನವನ್ನು ಸುಲಭವಾಗಿ ಪಡೆದುಕೊಳ್ಳಬಹುದು.

*****

## ದೂರ್ವಾಸಮಹರ್ಷಿಗಳಿಗೆ ಭಗವಂತನ ಉಪದೇಶ

(ಒಂಬತ್ತನೆಯ ಸ್ಕಂಧ, ನಾಲ್ಕನೆಯ ಅಧ್ಯಾಯ)

**ಶ್ರೀಭಗವಾನುವಾಚ –**

**ಅಹಂ ಭಕ್ತಪರಾಧೀನೋ ಹ್ಯಸ್ವತನ್ತ್ರಇವ ದ್ವಿಜ ।**
**ಸಾಧುಭಿರ್ಗ್ರಸ್ತಹೃದಯೋ ಭಕ್ತೈರ್ಭಕ್ತಜನಪ್ರಿಯಃ ॥ 63 ॥**

63. ಶ್ರೀಭಗವಂತನು ದೂರ್ವಾಸರ್ಷಿಯನ್ನು ಕುರಿತು ಇಂತೆಂದನು: ಎಲೈ ದ್ವಿಜನೆ, ನಾನು ಭಕ್ತವಶನಾಗಿರುವೆನಾದ್ದರಿಂದ ಸ್ವತಂತ್ರನಲ್ಲದಂತೆಯೇ ಇರುತ್ತೇನೆ. ನಾನು ಭಕ್ತಜನರಿಗೆ ಪ್ರಿಯನಾದ್ದರಿಂದ ಸತ್ಪುಷರಾದ ಭಕ್ತರು ನನ್ನ ಹೃದಯವನ್ನು ಹಿಡಿದಿಟ್ಟಿರುವರು.

**ನಾಹ ಮಾತ್ಮಾನಮಾಶಾಸೇ ಮದ್ಭಕ್ತೈಃ ಸಾಧುಭಿರ್ವಿನಾ ।**
**ಶ್ರಿಯಂ ಚಾತ್ಯನ್ತಿಕೀಂ ಬ್ರಹ್ಮನ್ ಯೇಷಾ ಗತಿರಹಂ ಪರಾ ॥ 64 ॥**

64. ಎಲೈ ಬ್ರಾಹ್ಮಣನೆ, ನಾನೇ ಪರಗತಿಯೆಂದು ಮಾಡಿಕೊಂಡಿರುವ ಸತ್ಪುರುಷರಾದ ನನ್ನ ಭಕ್ತರಿಲ್ಲದಿದ್ದರೆ ನನಗೆ ನಾನೂ ಬೇಡ! ಅತ್ಯಂತವಾದ ಸಿರಿಯೂ ಬೇಡ!

**ಯೇ ದಾರಾಗಾರಪುತ್ರಾಪ್ತಾನ್ ಪ್ರಾಣಾನ್ ವಿತ್ತಮಿಮಂ ಪರಮ್ ।**
**ಹಿತ್ವಾ ಮಾಂ ಶರಣಂ ಯಾತಾಃ ಕಥಂ ತಾಂಸ್ತ್ಯಕ್ತುಮುತ್ಸಹೇ ॥ 65 ॥**

65. ಯಾರು ಹೆಂಡತಿ, ಮನೆ, ಮಕ್ಕಳು, ಆಪ್ತರು, ಪ್ರಾಣ, ಧನ, ಇಹಪರಗಳು – ಇವೆಲ್ಲವನ್ನೂ ಬಿಟ್ಟು ನನ್ನನ್ನೇ ಶರಣುಹೊಕ್ಕಿರುವರೋ, ಅವರನ್ನು ಹೇಗೆ ಬಿಡಲಿ?

**ಮಯಿ ನಿರ್ಬದ್ಧಹೃದಯಾಃ ಸಾಧವಃ ಸಮದರ್ಶನಾಃ ।**
**ವಶೀಕುರ್ವನ್ತಿ ಮಾಂ ಭಕ್ತ್ಯಾ ಸತ್ ಸ್ತ್ರಿಯಃ ಸತ್ಪತಿಂ ಯಥಾ ॥ 66 ॥**

66. ಸಮತತ್ತ್ವವನ್ನೇ ನೋಡುತ್ತಿರುವ ಸಾಧುಗಳು ನನ್ನಲ್ಲಿಯೇ ನೆಲೆನಿಂತಿರುವ ಹೃದಯವುಳ್ಳವರಾದ್ದರಿಂದ ಪತಿವ್ರತೆಯರಾದವರು ತಮ್ಮ ಉತ್ತಮವಾದ ಪತಿಯನ್ನು ಹೇಗೋ ಹಾಗೆ, ನನ್ನನ್ನು ವಶಗೊಳಿಸಿಕೊಂಡಿರುವರು.

**ಮತ್ಸೇವಯಾ ಪ್ರತೀತಂ ಚ ಸಾಲೋಕ್ಯಾದಿಚತುಷ್ಟಯಮ್ ।**
**ನೇಚ್ಛನ್ತಿ ಸೇವಯಾ ಪೂರ್ಣಾಃ ಕುತೋಽನ್ಯತ್ಕಾಲವಿದ್ರುತಮ್ ॥ 67 ॥**

67. ನನ್ನ ಸೇವೆಯಿಂದ ಪರಿತೃಪ್ತರಾದವರು ಆ ಸೇವೆಯಿಂದ ದೊರಕುವ ಸಾಲೋಕ್ಯಾದಿಚತುರ್ವಿಧ'ಮುಕ್ತಿ'ಯನ್ನು ಕೂಡ ಬಲ್ಲರು; ಇನ್ನು ಕಾಲಪರಿಚ್ಛಿನ್ನವಾಗಿರುವ ಮತ್ತೊಂದನ್ನು ಹೇಗೆ ಬಯಸಿಯಾರು?

**ಸಾಧವೋ ಹೃದಯಂ ಮಹ್ಯಂ ಸಾಧೂನಾಂ ಹೃದಯಂ ತ್ವಹಮ್ ।**
**ಮದನ್ಯತ್ತೇ ನ ಜಾನನ್ತಿ ನಾಹಂ ತೇಭ್ಯೋ ಮನಾಗಪಿ ॥ 68 ॥**

68. ಸಾಧುಗಳೇ ನನ್ನ ಹೃದಯ, ಸಾಧುಗಳಿಗೆ ನಾನೇ ಹೃದಯವು. ನನ್ನನ್ನು ಬಿಟ್ಟು ಅವರು ಮತ್ತೇನನ್ನೂ ಅರಿಯರು, ನಾನೂ ಅವರುನ್ನುಳಿದು ಮತ್ತೇನನ್ನೂ ಎಳ್ಳಷ್ಟೂ ಅರಿಯೇನು.

*****

## ದೇವತೆಗಳಿಂದ ಗರ್ಭಸ್ಥ ಭಗವಂತನ ಸ್ತುತಿ

**(ದಶಮ ಸ್ಕಂಧ, ಎರಡನೆಯ ಅಧ್ಯಾಯ)**

**ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ**
**ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।**
**ಸತ್ಯಸ್ಯ ಸತ್ಯಮೃತಸತ್ಯನೇತ್ರಂ**
**ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ 26 ॥**

26. ಬ್ರಹ್ಮಾದಿಗಳಿಂತೆಂದರು: ಸತ್ಯಸಂಕಲ್ಪನೂ, ಸತ್ಯವೆಂಬ ಪರಮಸಾಧನದಿಂದ ದೊರೆಯುತಕ್ಕವನೂ, ಮೂರುಕಾಲಕ್ಕೂ ಇರುವ ಸತ್ಯಸ್ವರೂಪನೂ, ಸತ್ಯಶಬ್ದವಾಚ್ಯವಾದ ಪಂಚಭೂತಗಳಿಗೆ ಕಾರಣನೂ, ಸತ್ಯದಲ್ಲಿ ಅಂತರ್ಯಾಮಿಯಾಗಿರತಕ್ಕವನೂ, ಆ ಸತ್ಯಕ್ಕೂ ಪರಮಾರ್ಥವಾದ ಸತ್ಯಸ್ವರೂಪನೂ, ಋತ(ಸತ್ಯವಾಕ್ಕು), ಸತ್ಯ(ಸಮದರ್ಶನ) – ಇವುಗಳಿಗೆ ನೇತ್ರವಾದವನೂ ಆಗಿರುವ ಸರ್ವಪ್ರಕಾರದ ಸತ್ಯಾತ್ಮಕನಾಗಿರುವ ದೇವನೆ, ನಿನ್ನನ್ನು ಶರಣುಹೊಕ್ಕಿರುತ್ತೇವೆ.

**ತ್ವಮೇಕ ಏವಾಸ್ಯ ಸತಃ ಪ್ರಸೂತಿ-**
**ಸ್ತ್ವಂ ಸಂನಿಧಾನಂ ತ್ವಮನುಗ್ರಹಶ್ಚ ।**
**ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ**
**ಪಶ್ಯನ್ತಿ ನಾನಾ ನ ವಿಪಶ್ಚಿತೋ ಯೇ ॥ 28 ॥**

28. ನೀನೊಬ್ಬನೇ ಈ ಕಾರ್ಯರೂಪವಾದ ಜಗತ್ತಿಗೆ ಕಾರಣನು, ನೀನೇ ಲಯಸ್ಥಾನವು, ನೀನೇ ಇದಕ್ಕೆ ಅನುಗ್ರಹಕರ್ತನು. ನಿನ್ನ ಮಾಯೆಯಿಂದ ಆವೃತವಾದ ಚಿತ್ತವುಳ್ಳವನು ನಿನ್ನನ್ನು ಬೇರೆಬೇರೆಯೆಂದು ತಿಳಿಯುವರೇ ಹೊರತು ಬಲ್ಲವರು ಹಾಗೆಂದು ತಿಳಿಯುವದಿಲ್ಲ.

**ತ್ವಯ್ಯಮ್ಬುಜಾಕ್ಷಾಖಿಲಸತ್ತ್ವಧಾಮ್ನಿ**
**ಸಮಾಧಿನಾऽऽವೇಶಿತಚೇತಸೈಕೇ ।**
**ತ್ವತ್ಪಾದಪೋತೇನ ಮಹತ್ಕೃತೇನ**
**ಕುರ್ವನ್ತಿ ಗೋವತ್ಸಪದಂ ಭವಾಬ್ಧಿಮ್ ॥ 30॥**

30. ಎಲೈ ಕಮಲಾಕ್ಷನೆ, ಸರ್ವಸತ್ತ್ವಾಶ್ರಯನಾದ ನಿನ್ನಲ್ಲಿಯೇ ಸಮಾಧಿಯ ಆವೇಶವುಳ್ಳ ಚಿತ್ತವುಳ್ಳ ಮುಖ್ಯಭಕ್ತರು ನಿನ್ನ ಪಾದವೆಂಬ ದೋಣಿಯನ್ನೇ ದೊಡ್ಡದೆಂದೆಣಿಸಿಕೊಂಡು ಸಂಸಾರಸಾಗರವನ್ನು ಹಸುವಿನ ಕರುವಿನ ಹೆಜ್ಜೆಯಷ್ಟು ಅಲ್ಪವಾಗಿ ಮಾಡಿಕೊಂಡಿರುತ್ತಾರೆ.

**ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮ**
**ನ್ಭವಾರ್ಣವಂ ಭೀಮಮದಭ್ರಸೌಹೃದಾಃ ।**
**ಭವತ್ಪದಾಮ್ಭೋರುಹನಾವಮತ್ರ ತೇ**
**ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥ 31 ॥**

31. ಎಲೈ ಸ್ವಯಂಪ್ರಕಾಶನೆ, ಅವರು ಈ ದಾಟಲಶಕ್ಯವಾದ ಭಯಂಕರವಾದ ಸಂಸಾರಸಾಗರವನ್ನು ತಾವೂ ದಾಟಿ, ಅಪಾರಕರುಣೆಯಿಂದ ನಿನ್ನ ಪಾದಕಮಲವೆಂಬ ನಾವೆಯನ್ನು ಇಲ್ಲಿಯೇ ಇಟ್ಟುಹೋಗಿರುತ್ತಾರೆ. ನೀನು ಸತ್ಪುರುಷರಿಗೆ ಅನುಗ್ರಹಮಾಡುವಾತನಲ್ಲವೆ?

**ನ ನಾಮರೂಪೇ ಗುಣಜನ್ಮಕರ್ಮಭಿ-**
**ರ್ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ।**

**ಮನೋವಚೋಭ್ಯಾಮನುಮೇಯವರ್ತ್ಮನೋ**
**ದೇವ ಕ್ರಿಯಾಯಾಂ ಪ್ರತಿಯನ್ತ್ಯಥಾಪಿ ಹಿ ॥ 36 ॥**

36. ಗುಣಗಳು, ಜನ್ಮಗಳು, ಕರ್ಮಗಳು – ಇವುಗಳಿಂದ ನಿನ್ನ ನಾಮರೂಪಗಳನ್ನು ಗೊತ್ತುಮಾಡುವದಕ್ಕೆ ಬರುವದಿಲ್ಲ. ಏಕೆಂದರೆ ಮನೋವಾಕ್ಕುಗಳಿಂದ ಅನುಮಾನಿಸಿ ತಿಳಿಯಬೇಕಾದದ್ದು ನಿನ್ನ ಮಾರ್ಗವು; ನೀನು ಅದಕ್ಕೂ ಸಾಕ್ಷಿಯು. ಆದರೂ ಉಪಾಸನಾದಿಕ್ರಿಯೆಯಲ್ಲಿ ನಿನ್ನನ್ನು ಉಪಾಸಕರು ಕಾಣುತ್ತಿರುವರೆಂಬುದು ಪ್ರಸಿದ್ಧವಾಗಿದೆ.

**ಶೃಣ್ವನ್ ಗೃಣನ್ಸಂಸ್ಮರಯಂಶ್ಚ ಚಿನ್ತಯ–**
**ನ್ನಾಮಾನಿ ರೂಪಾಣಿ ಚ ಮಙ್ಗಲಾನಿ ತೇ ।**
**ಕ್ರಿಯಾಸು ಯಸ್ತ್ವಚ್ಚರಣಾರವಿನ್ದಯೋ–**
**ರಾವಿಷ್ಟಚೇತಾ ನ ಭವಾಯ ಕಲ್ಪತೇ ॥ 37 ॥**

37. ಮಂಗಲಕರವಾದ ನಿನ್ನ ನಾಮರೂಪಗಳನ್ನು ಶ್ರವಣಮಾಡುತ್ತಾ, ಹೇಳುತ್ತಾ, ಸ್ಮರಿಸುತ್ತಾ, ಧ್ಯಾನಿಸುತ್ತಾ ಅರ್ಚನಾದಿಕ್ರಿಯೆಗಳಲ್ಲಿ (ನಿರತನಾಗಿ) ಯಾವನು ನಿನ್ನ ಚರಣಾರವಿಂದಗಳಲ್ಲಿಯೇ ಚಿತ್ತವನ್ನು ಇಟ್ಟುಕೊಂಡಿರುವನೋ ಅವನು ಮತ್ತೆ ಸಂಸಾರಕ್ಕೆ ಬರುವಹಾಗಿಲ್ಲ.

**ನ ತೇಽಭವಸ್ಯೇಶ ಭವಸ್ಯ ಕಾರಣಂ**
**ವಿನಾ ವಿನೋದಂ ಬತ ತರ್ಕಯಾಮಹೇ ।**
**ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ**
**ಕೃತಾ ಯತಸ್ತ್ವಯ್ಯಭಯಾಶ್ರಯಾತ್ಮನಿ ॥ 39 ॥**

39. ಈಶ್ವರನೆ, ಜನ್ಮರಹಿತನಾದ ನೀನು ಹುಟ್ಟುವದಕ್ಕೆ ವಿನೋದವೊಂದು ಹೊರತು ಮತ್ತೆ ಯಾವ ಕಾರಣಕ್ಕೂ ನಾವು ಊಹಿಸಲರಿಯೆವು. ಹುಟ್ಟು, ಇರವು, ಸಾವು – ಎಂಬುದು ಕೂಡ ಅಭಯಾಶ್ರಯಸ್ವರೂಪನಾದ ನಿನ್ನಲ್ಲಿ ಅವಿದ್ಯೆಯಿಂದ ಕಲ್ಪಿತವಷ್ಟೆ?

* * * * *

## ವಸುದೇವನು ಮಾಡಿದ ಶ್ರೀಕೃಷ್ಣಸ್ತುತಿ

### (ದಶಮ ಸ್ಕಂಧ, ಮೂರನೆಯ ಅಧ್ಯಾಯ)

**ವಿದಿತೋಽಸಿ ಭವಾನ್ ಸಾಕ್ಷಾತ್ಪುರುಷಃ ಪ್ರಕೃತೇಃ ಪರಃ ।**
**ಕೇವಲಾನುಭವಾನನ್ದಸ್ವರೂಪಃ ಸರ್ವಬುದ್ಧಿದೃಕ್ ॥ 13 ॥**

13. ವಸುದೇವನಿಂತೆಂದನು: ಭಗವಂತನೆ, ನೀನು ಪ್ರಕೃತಿಯನ್ನು ಮೀರಿದ ಸಾಕ್ಷಾತ್ ಪುರುಷನೇ, ಕೇವಲಾನುಭವಾನನ್ದಸ್ವರೂಪನೇ, ಸರ್ವಬುದ್ಧಿಗಳಿಗೂ ಸಾಕ್ಷಿಯೇ ಎಂದು ಪ್ರಸಿದ್ಧನಾಗಿರುವೆ.

**ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾಗ್ರೇ ತ್ರಿಗುಣಾತ್ಮಕಮ್ ।**
**ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ ॥ 14 ॥**

14. ಆ ನೀನೇ ನಿನ್ನ ಪ್ರಕೃತಿಯಿಂದ ಈ ತ್ರಿಗುಣಾತ್ಮಕವಾದ ಜಗತ್ತನ್ನು ಸೃಷ್ಟಿಸಿ ಅದರ ಹಿಂದೆಯೇ – ನಿಜವಾಗಿ ಪ್ರವೇಶಿಸದೆ ಇದ್ದರೂ ಪ್ರವೇಶಿಸಿರುವವನಂತೆ ಕಾಣಿಸುತ್ತಿರುವೆ.

**ತ್ವತ್ತೋಽಸ್ಯ ಜನ್ಮಸ್ಥಿತಿಸಂಯಮಾನ್ ವಿಭೋ**
**ವದನ್ತ್ಯನೀಹಾದಗುಣಾದವಿಕ್ರಿಯಾತ್ ।**
**ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ**
**ತ್ವಾದಾಶ್ರಯತ್ವಾದುಪಚರ್ಯತೇ ಗುಣೈಃ ॥ 19 ॥**

19. ಯಾವ ಕ್ರಿಯೆಯೂ ಇಲ್ಲದ, ಯಾವ ಗುಣವೂ ಇಲ್ಲದ, ಯಾವ ವಿಕಾರವೂ ಇಲ್ಲದ ನಿನ್ನಿಂದಲೇ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಆಗುವವೆಂದು ಹೇಳುವರು. ಈಶ್ವರನೂ ಬ್ರಹ್ಮವೂ ಆದ ನಿನ್ನ ವಿಷಯದಲ್ಲಿ ಇದು ಅಸಂಭಾವಿತವೇನೂ ಅಲ್ಲ; ಏಕೆಂದರೆ ಗುಣಗಳು ನಿನ್ನನ್ನೇ ಆಶ್ರಯಿಸಿರುವದರಿಂದ ಅವುಗಳ ಕಾರ್ಯವು ನಿನ್ನಲ್ಲಿ ಉಪಚರಿತವಾಗುತ್ತಿದೆ.

**ಸ ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ**
**ಬಿಭರ್ಷಿ ಶುಕ್ಲಂ ಖಲು ವರ್ಣಮಾತ್ಮನಃ ।**
**ಸರ್ಗಾಯ ರಕ್ತಂ ರಜಸೋಪಬೃಂಹಿತಂ**
**ಕೃಷ್ಣಂ ಚ ವರ್ಣಂ ತಮಸಾ ಜನಾತ್ಯಯೇ ॥ 20 ॥**

20. ಆ ನೀನೇ ತ್ರಿಲೋಕವನ್ನೂ ಕಾಪಾಡುವದಕ್ಕಾಗಿ ನಿನ್ನ ಮಾಯೆಯಿಂದ ಶುಕ್ಲವರ್ಣವನ್ನು ಧರಿಸುತ್ತಿರುವೆ, ಸೃಷ್ಟಿಗಾಗಿ ರಜೋಗುಣಪ್ರಧಾನವಾದ ರಕ್ತಗುಣವನ್ನು ಹೊಂದುತ್ತಿರುವೆ. ಮತ್ತು ಪ್ರಲಯಕಾಲದಲ್ಲಿ ತಮಃಪ್ರಧಾನವಾದ ಕೃಷ್ಣವರ್ಣವನ್ನು ಧರಿಸುತ್ತಿರುವೆ.

*****

## ದೇವಕಿಯು ಮಾಡಿದ ಭಗವತ್‌ಸ್ತುತಿ

### (ದಶಮ ಸ್ಕಂಧ, ಮೂರನೆಯ ಅಧ್ಯಾಯ)

**ರೂಪಂ ಯತ್ತತ್ ಪ್ರಾಹುರವ್ಯಕ್ತಮಾದ್ಯಂ**
**ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।**
**ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ**
**ಸ ತ್ವಂ ಸಾಕ್ಷಾದ್ವಿಷ್ಣುರಧ್ಯಾತ್ಮದೀಪಃ ॥ 24 ॥**

24. ದೇವಕಿಯು ಭಗವಂತನನ್ನು ಕುರಿತು ಇಂತೆಂದಳು: ಇಂದ್ರಿಯಾಗೋಚರವು, ಎಲ್ಲಕ್ಕೂ ಮೊದಲಿನದು, ಬ್ರಹ್ಮವು, ಜ್ಯೋತಿಯು, ಯಾವ ಧರ್ಮಗಳೂ ಇಲ್ಲದ್ದು, ಮಾರ್ಪಾಡುಗಳಿಲ್ಲದ್ದು, ಸನ್ಮಾತ್ರವಾದದ್ದು (ಬರಿಯ ಇರವು), ದ್ರವ್ಯಗುಣಾದಿವಿಶೇಷಗಳಿಲ್ಲದ್ದು, ನಿಷ್ಕ್ರಿಯವಾದದ್ದು ಎಂದು ಯಾವ ರೂಪವನ್ನು ಹೇಳುವರೋ, ಆ ಅಧ್ಯಾತ್ಮದೀಪನಾದ ಸಾಕ್ಷಾದ್ವಿಷ್ಣುವೇ ನೀನು.

**ನಷ್ಟೇ ಲೋಕೇ ದ್ವಿಪರಾರ್ಧಾವಸಾನೇ**
**ಮಹಾಭೂತೇಷ್ವಾದಿಭೂತಂ ಗತೇಷು ।**
**ವ್ಯಕ್ತೇಽವ್ಯಕ್ತಂ ಕಾಲವೇಗೇನ ಯಾತೇ**
**ಭವಾನೇಕಃ ಶಿಷ್ಯತೇ ಶೇಷಸಂಜ್ಞಃ ॥ 25 ॥**

25. ಎರಡು ಪರಾರ್ಧಗಳ ಕಾಲವು ಮುಗಿಯಲು ಲೋಕವೆಲ್ಲವೂ ನಾಶವಾಗಿ, ಮಹಾಭೂತಗಳು ಮೂಲಭೂತವನ್ನು ಸೇರಿ, ವ್ಯಕ್ತಜಗತ್ತೆಲ್ಲವೂ ಕಾಲವೇಗದಿಂದ ಅವ್ಯಕ್ತದಲ್ಲಿ ಸೇರಿಕೊಳ್ಳುವಾಗ, ಶೇಷನೆಂಬ ಹೆಸರಿನ ನೀನೊಬ್ಬನೇ ಉಳಿದುಕೊಂಡಿರುವೆ.

**ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬನ್ಧೋ**
**ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್ ।**
**ನಿಮೇಷಾದಿರ್ವತ್ಸರಾನ್ತೋ ಮಹೀಯಾಂ–**
**ಸ್ತಂ ತ್ವೇಶಾನಂ ಕ್ಷೇಮಧಾಮ ಪ್ರಪದ್ಯೇ ॥ 26 ॥**

26. ಕಾಣಿಸಿಕೊಳ್ಳದೆ ಎಲ್ಲರಿಗೂ ಬಂಧುವಾಗಿರುವವನೆ, ಯಾವದರಿಂದ ಈ ವಿಶ್ವವೆಲ್ಲ ತನ್ನ ವ್ಯಾಪಾರವನ್ನು ಮಾಡುತ್ತಿರುವದೋ, ನಿಮಿಷದಿಂದ ಹಿಡಿದು ವರ್ಷದವರೆಗೆ ವಿಭಕ್ತವಾಗಿರುವ ಈ ಮಹಾಕಾಲವಿದೆಯಲ್ಲ, ಅದು ನಿನ್ನ ಲೀಲಾವ್ಯಾಪಾರಮಾತ್ರವೆನ್ನುವರು. ಅಂಥ ಈಶ್ವರನೂ ಮುಕ್ತಿಗೆ ಸ್ಥಾನವೂ ಆದ ನಿನ್ನನ್ನು ನಾನು ಶರಣುಹೊಂದಿರುವೆನು.

*****

## ಬ್ರಹ್ಮನು ಮಾಡಿದ ಭಗವಂತನ ಸ್ತುತಿ

**(ದಶಮ ಸ್ಕಂಧ, ಹದಿನಾಲ್ಕನೆಯ ಅಧ್ಯಾಯ)**

**ಶ್ರೇಯಃಸ್ರುತಿಂ ಭಕ್ತಿಮುದಸ್ಯ ತೇ ವಿಭೋ**
**ಕ್ಲಿಶ್ಯನ್ತಿ ಯೇ ಕೇವಲಬೋಧಲಬ್ಧಯೇ ।**
**ತೇಷಾಮಸೌ ಕ್ಲೇಶಲ ಏವ ಶಿಷ್ಯತೇ**
**ನಾನ್ಯದ್ಯಥಾ ಸ್ಥೂಲತುಷಾವಘಾತನಮ್ ॥ 4 ॥**

4. ಬ್ರಹ್ಮನಿಂತೆಂದನು: ಎಲೈ ವಿಭುವೆ, ಶ್ರೇಯಸ್ಸನ್ನು ಸ್ರವಿಸುವ ನಿನ್ನ ಭಕ್ತಿಯನ್ನು ಬಿಟ್ಟು, ಯಾರು ಬರಿಯ ಜ್ಞಾನಪ್ರಾಪ್ತಿಗಾಗಿ ಆಯಾಸಪಡುವರೋ, ಅವರಿಗೆ – ಬರಿಯ ಬತ್ತದ ಹೊಟ್ಟನ್ನು ಕುಟ್ಟುವವರಿಗೆ ಹೇಗೆ ಬರಿಯ ಕ್ಲೇಶವೊಂದೇ ದೊರೆಯುವದೋ, ಹಾಗೆ – ಕ್ಲೇಶವೊಂದೇ ಉಳಿದುಕೊಳ್ಳುವದು ಮತ್ತೇನೂ ಉಳಿಯುವದಿಲ್ಲ.

**ಪುರೇಹ ಭೂಮನ್ ಬಹವೋಽಪಿ ಯೋಗಿನ–**
**ಸ್ತ್ವದರ್ಪಿತೇಹಾ ನಿಜಕರ್ಮಲಬ್ಧಯಾ ।**
**ವಿಬುಧ್ಯ ಭಕ್ತ್ಯೈವ ಕಥೋಪನೀತಯಾ**
**ಪ್ರಪೇದಿರೇಽಞ್ಜೋಽಚ್ಯುತ ತೇ ಗತಿಂ ಪರಾಮ್ ॥ 5 ॥**

5. ಅಚ್ಯುತನೆ, ಸರ್ವವ್ಯಾಪಕನೆ, ಈ ಲೋಕದಲ್ಲಿ ಹಿಂದೆ ಬಹಳ ಯೋಗಿಗಳು ಕರ್ಮವನ್ನೆಲ್ಲ ನಿನಗೆ ಅರ್ಪಿಸಿ, ಆ ಕರ್ಮದಿಂದಲೂ ಕಥಾಶ್ರವಣದಿಂದಲೂ ಸಿಕ್ಕಿದ ಭಕ್ತಿಯಿಂದಲೇ ಜ್ಞಾನವನ್ನು ಪಡೆದುಕೊಂಡು ಸುಲಭವಾಗಿ ನಿನ್ನ ಪರಮಪದವನ್ನು ಪಡೆದುಕೊಂಡಿರುತ್ತಾರೆ.

**ತಥಾಪಿ ಭೂಮನ್ ಮಹಿಮಾಽಗುಣಸ್ಯ ತೇ**
**ವಿಬೋದ್ಧುಮರ್ಹತ್ಯಮಲಾನ್ತರಾತ್ಮಭಿಃ ।**
**ಅವಿಕ್ರಿಯಾತ್ ಸ್ವಾನುಭವಾದರೂಪತೋ**
**ಹ್ಯನನ್ಯಬೋಧ್ಯಾತ್ಮತಯಾ ನ ಚಾನ್ಯಥಾ ॥ 6 ॥**

6. ಅಪರಿಚ್ಛಿನ್ನಸ್ವರೂಪನೆ, ಹೀಗಿದ್ದರೂ ನಿರ್ಗುಣನಾದ ನಿನ್ನ ಮಹಿಮೆಯನ್ನು ನಿರ್ಮಲಾಂತಃಕರಣವುಳ್ಳವರಿಂದಲೇ ಅವಿಕಾರವಾದ ಸ್ವಾನುಭವ ದಿಂದ ತಿಳಿಯುವದಕ್ಕೆ ತಕ್ಕವಾದದ್ದು. ಏಕೆಂದರೆ ಅದು ಅರೂಪವಾಗಿರುತ್ತದೆ ಮತ್ತು ಮತ್ತೊಂದರಿಂದ ಅರಿಯುವದಕ್ಕೆ ಅಶಕ್ಯವಾದ ಸ್ವರೂಪವುಳ್ಳದ್ದಾಗಿರುತ್ತದೆ.

**ಗುಣಾತ್ಮನಸ್ತೇಽಪಿ ಗುಣಾನ್ ವಿಮಾತುಂ**
**ಹಿತಾವತೀರ್ಣಸ್ಯ ಕ ಈಶಿರೇಽಸ್ಯ ।**
**ಕಾಲೇನ ಯೈರ್ವಾ ವಿಮಿತಾಃ ಸುಕಲ್ಪೈ**
**ರ್ಭೂಪಾಂಸವಃ ಖೇ ಮಿಹಿಕಾ ದ್ಯುಭಾಸಃ ॥ 7 ॥**

7. ಯಾರು ಅನೇಕ ಕಲ್ಪಗಳವರೆಗೂ ಭೂಮಿಯಲ್ಲಿರುವ ಧೂಳಿನ ಕಣಗಳನ್ನೂ, ಆಕಾಶದಲ್ಲಿರುವ ಹಿಮಬಿಂದುಗಳನ್ನೂ ಆಕಾಶದಲ್ಲಿರುವ ನಕ್ಷತ್ರಗಳನ್ನೂ ಎಣಿಸಲಾಪರೋ, ಅವರಲ್ಲಿಯೂ, ಜಗತ್ತಿನ ಹಿತಕ್ಕಾಗಿ ಅವತರಿಸಿರುವ ಸಗುಣಾತ್ಮನಾದ ನಿನ್ನ ಗುಣಗಳನ್ನು ಎಣಿಸುವದಕ್ಕೆ ಯಾರು ತಾನೆ ಶಕ್ತರಾಗಿರುವರು?

**ತತ್ತೇಽನುಕಮ್ಪಾಂ ಸುಸಮೀಕ್ಷಮಾಣೋ**
**ಭುಞ್ಜಾನ ಏವಾತ್ಮಕೃತಂ ವಿಪಾಕಮ್ ।**
**ಹೃದ್ವಾಗ್ವಪುರ್ಭಿರ್ವಿದಧನ್ನಮಸ್ತೇ**
**ಜೀವೇತ ಯೋ ಮುಕ್ತಿಪದೇ ಸ ದಾಯಭಾಕ್ ॥ 8 ॥**

8. ಆದ್ದರಿಂದ ನಿನ್ನ ದಯೆಯನ್ನೇ ಕಾದುಕೊಂಡಿದ್ದು ತಾನು ಮಾಡಿರುವ

ಕರ್ಮದ ಫಲವನ್ನು ಅನುಭವಿಸುತ್ತಾ ಮನಸ್ಸು, ವಾಕ್ಕು, ಕಾಯ – ಇವುಗಳಿಂದ ನಿನಗೆ ನಮಸ್ಕಾರ ಮಾಡುತ್ತಾ ಯಾವನು ಬಾಳುತ್ತಿರುವನೋ, ಅವನೇ ಮುಕ್ತಿಪದಕ್ಕೆ ಭಾಗಿಯು.

**ಪಶ್ಯೇಶ ಮೇಽನಾರ್ಯಮನನ್ತ ಆದ್ಯೇ**
**ಪರಾತ್ಮನಿ ತ್ವಯ್ಯಪಿ ಮಾಯಿಮಾಯಿನಿ ।**
**ಮಾಯಾಂ ನಿತತ್ಯೇಕ್ಷಿತುಮಾತ್ಮವೈಭವಂ**
**ಹ್ಯಹಂ ಕಿಯಾನೈಚ್ಛಮಿವಾರ್ಚಿರಗ್ನೌ ॥ 9 ॥**

9. ಪರಮೇಶ್ವರನೆ, ನನ್ನ ಅನಾರ್ಯವರ್ತನೆಯನ್ನು ನೋಡು! ಅನಂತನೂ ಆದ್ಯನೂ ಪರಮಾತ್ಮನೂ ಆಗಿರುವ ಮಾಯಾವಿಗಳಿಗೆಲ್ಲ ಮಾಯಾವಿಯಾದ ನಿನ್ನಲ್ಲಿಯೂ ಮಾಯೆಯನ್ನು ಹರಡಿ, ನನ್ನ ವೈಭವವನ್ನು ನೋಡಿಕೊಳ್ಳೋಣವೆಂದು – ಉರಿಯು ಬೆಂಕಿಯಲ್ಲಿ ತನ್ನ ವೈಭವವನ್ನು ನೋಡಿಕೊಳ್ಳಲೆಳಸುವಂತೆ – ಇಚ್ಛಿಸಿದೆನಲ್ಲ! ನಾನು ಎಷ್ಟರವನು?

**ಅತಃ ಕ್ಷಮಸ್ವಾಚ್ಯುತ ವೇದಜೋ ಭುವೋ**
**ದ್ಯಜಾನತಸ್ತ್ವತ್ಪೃಥಗೀಶಮಾನಿನಃ ।**
**ಅಜಾವಲೇಪಾನ್ಧತಮೋಽನ್ಧಚಕ್ಷುಷ**
**ಏಷೋಽನುಕಮ್ಪ್ಯೋ ಮಯಿ ನಾಥವಾನಿತಿ ॥ 10 ॥**

10. ಆದ್ದರಿಂದ ಅಚ್ಯುತನೆ, ರಜೋಗುಣದಿಂದ ಹುಟ್ಟಿರುವ, ಅಜ್ಞಾನಿಯಾದ, ನಿನಗಿಂತ ಬೇರೆಯಾಗಿ ನಾನೇ ಈಶ್ವರನೆಂದು ತಿಳಿದುಕೊಂಡಿದ್ದ, ಅಜ(ಜನ್ಮರಹಿತ)ನೆಂಬ ಗರ್ವದಿಂದ ಅಂಧಂತಮಸ್ಸಿನಿಂದ ಕಣ್ಣುಕಾಣದೆ ಇದ್ದ ನನ್ನನ್ನು, 'ಇವನಿಗೆ ನಾನೇ ಗತಿ, ಇವನಲ್ಲಿ ಕೃಪೆ ತೋರಬೇಕು' ಎಂದು ಕ್ಷಮಿಸು!

**ಕ್ವಾಹಂ ತಮೋಮಹದಹಂಖಚರಾಗ್ನಿವಾರ್ಭೂ–**
**ಸಂವೇಷ್ಟಿತಾಣ್ಡಘಟಸಪ್ತವಿತಸ್ತಿಕಾಯಃ ।**
**ಕೀದೃಗ್ವಿಧಾವಿಗಣಿತಾಣ್ಡಪರಾಣುಚರ್ಯಾ–**
**ವಾತಾಧ್ವರೋಮವಿವರಸ್ಯ ಚ ತೇ ಮಹಿತ್ವಮ್ ॥ 11 ॥**

11. ಅವ್ಯಕ್ತ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಪ್ಪು, ಪೃಥ್ವಿ

– ಇವುಗಳಿಂದ ಕೂಡಿರುವ ಏಳು ಗೇಣಿನ ಬ್ರಹ್ಮಾಂಡದ ಶರೀರವುಳ್ಳ ನಾನೆಲ್ಲಿ, ಇಂಥ ಲೆಕ್ಕವಿಲ್ಲದಷ್ಟು ಬ್ರಹ್ಮಾಂಡಗಳೆಂಬ ಪರಮಾಣುಗಳು ಹರಿದಾಡುವದಕ್ಕೆ ಕಿಟಕಿಗಳಂತಿರುವ ರೋಮಕೂಪಗಳುಳ್ಳ ನಿನ್ನ ಮಹಿಮೆಯೆಲ್ಲಿ!

**ಉತ್ಕ್ಷೇಪಣಂ ಗರ್ಭಗತಸ್ಯ ಪಾದಯೋಃ**
**ಕಿಂ ಕಲ್ಪತೇ ಮಾತುರಧೋಕ್ಷಜಾಗಸೇ ।**
**ಕಿಮಸ್ತಿನಾಸ್ತಿವ್ಯಪದೇಶಭೂಷಿತಂ**
**ತದಾಸ್ತಿ ಕುಕ್ಷೇಽಕಿಯದಪ್ಯನನ್ತಃ ॥ 12 ॥**

12. ಅಧೋಕ್ಷಜವೆ, ತಾಯಿಯ ಗರ್ಭದೊಳಗಿರುವ ಮಗು ಕಾಲುಗಳನ್ನು ಕೊಡವಿಕೊಳ್ಳುವದು ಅಪರಾಧವೆನಿಸೀತೇನು? ಇದೆ, ಇಲ್ಲ – ಎಂಬ ಶಬ್ದಗಳಿಗೆ ವಾಚ್ಯವಾಗಿರುವ ಯಾವದೇ ಆಗಲಿ ನಿನ್ನ ಉದರದೊಳಗೆ ಇಲ್ಲದಿರುವದು ಉಂಟೇನು?

**ಜಗತ್ತ್ರಯಾನ್ತೋದಧಿಸಂಪ್ಲವೋದೇ**
**ನಾರಾಯಣಸ್ಯೋದರನಾಭಿನಾಲಾತ್ ।**
**ವಿನಿರ್ಗತೋಽಜಸ್ತ್ವಿತಿ ವಾಙ್ನ ವೈ ಮೃಷಾ**
**ಕಿಂ ತ್ವೀಶ್ವರ ತ್ವನ್ನ ವಿನಿರ್ಗತೋಽಸ್ಮಿ ॥ 13 ॥**

13. ಮೂರು ಲೋಕಗಳೂ ಪ್ರಲಯವಾಗುವ ಉಕ್ಕಿದ ಸಾಗರದ ನೀರಿನಲ್ಲಿ, ನಾರಾಯಣನ ಹೊಟ್ಟೆಯ ಹೊಕ್ಕಳಿನ ನಾಲದಿಂದ ಬ್ರಹ್ಮನು ಹೊರಕ್ಕೆ ಬಂದನು ಎಂಬ ವಚನವೇ ಸುಳ್ಳಲ್ಲವಷ್ಟೇ? ಹಾಗಾದರೆ ನಾನು ನಿನ್ನಿಂದ ಹೊರಬಂದ ಮಗನಲ್ಲವೆ?

**ನಾರಾಯಣಸ್ತ್ವಂ ನ ಹಿ ಸರ್ವದೇಹಿನಾ–**
**ಮಾತ್ಮಾಽಸ್ಯಧೀಶಾಽಖಿಲಲೋಕಸಾಕ್ಷೀ ।**
**ನಾರಾಯಣೋಽಙ್ಗಂ ನರಭೂಜಲಾಯನಾತ್**
**ತಚ್ಚಾಪಿ ಸತ್ಯಂ ನ ತವೈವ ಮಾಯಾ ॥ 14 ॥**

**ತಚ್ಚೇಜ್ಜಲಸ್ಥಂ ತವ ಸಜ್ಜಗದ್ವಪುಃ**
**ಕಿಂ ಮೇ ನ ದೃಷ್ಟಂ ಭಗವಂಸ್ತದೈವ ।**

**ಕಿಂ ವಾ ಸುದೃಷ್ಟಂ ಹೃದಿ ಮೇ ತದೈವ**
**ಕಿಂ ನೋ ಸಪದ್ಯೇವ ಪುನರ್ವ್ಯದರ್ಶಿ ॥ 15 ॥**

14–15. ದೇವ, ನೀನು ಸರ್ವದೇಹಿಗಳಿಗೂ ಆತ್ಮನಾದ ನಾರಾಯಣನು (ನಾರ – ಜೀವರ, ಅಯನ–ಆಶ್ರಯವಾಗಿರುವಾತನು) ಅಲ್ಲವೆ? ಎಲ್ಲರಿಗೂ ಪ್ರವರ್ತಕನಾದ ನಾರಾಯಣನು (ನಾರ–ಜೀವರ ಅಯನ–ಪ್ರವರ್ತಕನು) ಅಲ್ಲವೆ? ಅಖಿಲಲೋಕಕ್ಕೂ ಸಾಕ್ಷಿಯಾದ ನಾರಾಯಣನು (ನಾರ – ನರರನ್ನು ಅಯ – ನೋಡುವಾತನು) ಅಲ್ಲವೆ? ನರನಿಂದುತ್ಪನ್ನವಾದ ತತ್ತ್ವಗಳೂ ಜಲವೂ ಆಶ್ರಯವಾಗಿರುವದರಿಂದ ನಾರಾಯಣವೆನಿಸಿರುವನಲ್ಲ, ಆತನೂ ನಿನ್ನ ಅಂಶವೇ. ಆದರೆ ಅದೂ ಪೂರ್ಣಸತ್ಯವಲ್ಲ, ನಿನ್ನ ಮಾಯೆಯೇ. ಆ ನಿನ್ನ ವಿರಾಟ್‌ಸ್ವರೂಪವು ಜಲದಲ್ಲಿದ್ದರೆ, ಭಗವಂತನೆ, ಆಗಲೇ ಅಲ್ಲಿದ್ದ ನನಗೆ ಏತಕ್ಕೆ ಕಾಣಿಸಲಿಲ್ಲ? ಆದರೆ ನಾನು ಯಾವಾಗ ತಪಸ್ಸುಮಾಡಿದೆನೋ ಆಗಲೇ ಏಕೆ ಅದರ ದರ್ಶನವಾಯಿತು? ಆಮೇಲೆ ಕೂಡಲೆ ಅದು ಏತಕ್ಕೆ ಕಾಣದಂತಾಯಿತು?

**ಅತ್ರೈವ ಮಾಯಾಧಮನಾವತಾರೇ**
**ಹ್ಯಸ್ಯ ಪ್ರಪಞ್ಚಸ್ಯ ಬಹಿಃ ಸ್ಫುಟಸ್ಯ ।**
**ಕೃತ್ಸ್ನಸ್ಯ ಚಾನ್ತರ್ಜಠರೇ ಜನನ್ಯಾ**
**ಮಾಯಾತ್ವಮೇವ ಪ್ರಕಟೀಕೃತಂ ತೇ ॥ 16 ॥**

16. ಮಾಯಾನಾಶಕನೆ, ಇದೇ ಅವತಾರದಲ್ಲಿಯೇ ಹೊರಗೆ ಕಾಣುವ ಈ ಪ್ರಪಂಚವೆಲ್ಲವನ್ನೂ ನಿನ್ನ ಹೊಟ್ಟೆಯೊಳಗೆ ತೋರಿಸಿ ಇದೆಲ್ಲವೂ ನಿನ್ನ ಮಾಯೆಯೇ ಎಂಬುದನ್ನು ತೋರಿಸಿಕೊಟ್ಟಿರುವೆ.

**ಯಸ್ಯ ಕುಕ್ಷಾವಿದಂ ಸರ್ವಂ ಸಾತ್ಮಂ ಭಾತಿ ಯಥಾ ತಥಾ ।**
**ತತ್ತ್ವಯ್ಯಪೀಹ ತತ್ಸರ್ವಂ ಕಿಮಿದಂ ಮಾಯಯಾ ವಿನಾ ॥ 17 ॥**

17. ನಿನ್ನ ಹೊಟ್ಟೆಯೊಳಗೆ ಇದೆಲ್ಲವೂ ಹೇಗೆ ತೋರುವದೋ ಹಾಗೆಯೇ ನಿನ್ನೊಡನೆ ಇಲ್ಲಿಯೂ ಕಾಣಿಸುತ್ತದೆ. ಇದು ಮಾಯೆಯಲ್ಲದೆ ಮತ್ತೇನು?

**ಅದ್ಯೈವ ತ್ವದೃತೇಽಸ್ಯ ಕಿಂ ಮಮ ನ ತೇ ಮಾಯಾತ್ವಮಾದರ್ಶಿತಮ್**
**ಏಕೋಽಸಿ ಪ್ರಥಮಂ ತತೋ ವ್ರಜಸುಹೃದ್ ವತ್ಸಾಃ ಸಮಸ್ತಾ ಅಪಿ ।**

**ತಾವನ್ತೋಽಸಿ ಚತುರ್ಭುಜಾಸ್ತದಖಿಲೈಃ ಸಾಕಂ ಮಯೋಪಾಸಿತಾ-**
**ಸ್ತಾವನ್ತ್ಯೇವ ಜಗನ್ತ್ಯಭೂಸ್ತದಮಿತಂ ಬ್ರಹ್ಮಾದ್ವಯಂ ಶಿಷ್ಯತೇ ॥ 18 ॥**

18. ನಿನ್ನನ್ನು ಬಿಟ್ಟಿರೆ ಈ ಪ್ರಪಂಚವೆಲ್ಲವೂ ನಿನ್ನ ಮಾಯೆಯೇ ಎಂಬುದನ್ನು ಈಗಲೇ ನನಗೆ ತೋರಿಸಿಕೊಟ್ಟಿರುವದಿಲ್ಲವೆ? ಮೊದಲು ನೀನೊಬ್ಬನೇ ಇದ್ದೆ. ಆಮೇಲೆ ಗೋಪಾಲಕರು, ಕರುಗಳು ಎಲ್ಲವೂ ಆದೆ. ಆಮೇಲೆ ನಾನು ಎಲ್ಲರೂ ಉಪಾಸನೆಮಾಡುತ್ತಿರುವ ಅಷ್ಟೂ ಚತುರ್ಭುಜರೂ ಆದೆ, ಅಷ್ಟೇ ಜಗತ್ತುಗಳೂ ಆದೆ, ಆ ಬಳಿಕ ಅನಂತವಾದ ಅದ್ವಯಬ್ರಹ್ಮವೇ ಆಗಿ ಉಳಿದಿರುವೆ.

**ಅಜಾನತಾಂ ತ್ವತ್ಪದವೀಮನಾತ್ಮ-**
**ನ್ಯಾತ್ಮಾಽಽತ್ಮನಾ ಭಾಸಿ ವಿತತ್ಯ ಮಾಯಾಮ್ ।**
**ಸೃಷ್ಟಾವಿವಾಹಂ ಜಗತೋ ವಿಧಾನೇ**
**ಇವ ತ್ವಮೇಷೋಽನ್ತ ಇವ ತ್ರಿನೇತ್ರಃ ॥ 19 ॥**

19. ನಿನ್ನ ಸ್ವರೂಪವನ್ನು ಅರಿಯುವವರಿಗೆ ಅನಾತ್ಮದಲ್ಲಿರುವ ಆತ್ಮರೂಪದಿಂದ ಕಾಣುತ್ತಿರುವೆ. ಮತ್ತು ಮಾಯೆಯನ್ನು ವಿಸ್ತರಿಸಿ ಸೃಷ್ಟಿಯಲ್ಲಿ ನನ್ನಂತೆ, ಸ್ಥಿತಿಯಲ್ಲಿ ನಿನ್ನಂತೆ, ಅಂತಕಾಲದಲ್ಲಿ ಮುಕ್ಕಣ್ಣನಂತೆ ತೋರಿಕೊಳ್ಳುವೆ.

**ಸುರೇಷ್ವೃಷಿಷ್ವೀಶ ತಥೈವ ನೃಷ್ವಪಿ**
**ತಿರ್ಯಕ್ಷು ಯಾದಸ್ಸ್ವಪಿ ತೇಽಜನಸ್ಯ ।**
**ಜನ್ಮಾಸತಾಂ ದುರ್ಮದನಿಗ್ರಹಾಯ**
**ಪ್ರಭೋ ವಿಧಾತಃ ಸದನುಗ್ರಹಾಯ ಚ ॥ 20 ॥**

20. ಎಲೈ ಈಶ್ವರನೆ, ದೇವತೆಗಳಲ್ಲಿ, ಋಷಿಗಳಲ್ಲಿ ಮತ್ತು ಮನುಷ್ಯನಲ್ಲಿ ತಿರ್ಯಗ್ಜಂತುಗಳಲ್ಲಿ ಜಲಜಂತುಗಳಲ್ಲಿ ಕೂಡ – ಜನ್ಮರಹಿತನಾದ ನಿನಗೆ ಜನ್ಮವು, ಪ್ರಭುವೆ, ಮತ್ತರಾದವರನ್ನು ನಿಗ್ರಹಿಸುವದಕ್ಕೂ, ಸತ್ಪುರುಷರನ್ನು ಅನುಗ್ರಹಿಸುವದಕ್ಕೂ ಆಗುತ್ತಿರುವದು.

**ಕೋ ವೇತ್ತಿ ಭೂಮನ್ ಭಗವನ್ ಪರಾತ್ಮನ್**
**ಯೋಗೇಶ್ವರೋತೀರ್ಭವತಸ್ತ್ರಿಲೋಕ್ಯಾಮ್ ।**
**ಕ್ವ ವಾ ಕಥಂ ವಾ ಕತಿ ವಾ ಕದೇತಿ**
**ವಿಸ್ತಾರಯನ್ ಕ್ರೀಡಸಿ ಯೋಗಮಾಯಾಮ್ ॥ 21 ॥**

21. ಅನಂತನೆ, ಭಗವಂತನೆ, ಪರಮಾತ್ಮನೆ, ಯೋಗೀಶ್ವರನೆ, ನಿನ್ನ ಲೀಲೆಗಳನ್ನು ಯಾವಾಗ, ಹೇಗೆ, ಎಷ್ಟನ್ನು, ಯೋಗಮಾಯೆಯಿಂದ ಬಿತ್ತರಿಸಿಕೊಂಡು ಕ್ರೀಡಿಸುವೆಯೋ ಯಾವನು ಬಲ್ಲನು?

**ತಸ್ಮಾದಿದಂ ಜಗದಶೇಷಮಸತ್ಸ್ವರೂಪಂ**
**ಸ್ವಪ್ನಾಭಮಸ್ತಧಿಷಣಂ ಪುರುದುಃಖದುಃಖಮ್ ।**
**ತ್ವಯ್ಯೇವ ನಿತ್ಯಸುಖಬೋಧತನಾವನನ್ತೇ**
**ಮಾಯಾತ ಉದ್ಯದಪಿ ಯತ್ ಸದಿವಾವಭಾತಿ ॥ 22 ॥**

22. ಆದ್ದರಿಂದ ಈ ಜಗತ್ತು ಸ್ವಪ್ನದಂತೆ ಅಸತ್ತಾಗಿರುತ್ತದೆ, ಅಜ್ಞಾನರೂಪ ವಾಗಿರುತ್ತದೆ, ದುಃಖದ ಮೇಲೆ ದುಃಖವನ್ನು ಕೊಡುವದಾಗಿರುತ್ತದೆ, ನಿತ್ಯನೂ ಆನಂದಸ್ವರೂಪನೂ ಅನಂತನೂ ಆಗಿರುವ ನಿನ್ನಲ್ಲಿಯೇ ಮಾಯೆಯಿಂದ ಹುಟ್ಟಿರುವದಾದರೂ ಸದ್ರೂಪವಾಗಿರುವಂತೆ ತೋರುತ್ತಿರುತ್ತದೆ.

**ಏಕಸ್ತ್ವಮಾತ್ಮಾ ಪುರುಷಃ ಪುರಾಣಃ**
**ಸತ್ಯಃ ಸ್ವಯಂಜ್ಯೋತಿರನನ್ತ ಆದ್ಯಃ ।**
**ನಿತ್ಯೋಽಕ್ಷರೋಽಜಸ್ರಸುಖೋ ನಿರಞ್ಜನಃ**
**ಪೂರ್ಣೋಽದ್ವಯೋ ಮುಕ್ತ ಉಪಾಧಿತೋಽಮೃತಃ ॥ 23 ॥**

23. ನೀನು ಒಬ್ಬನೇ ಆತ್ಮನು, ಪುರಾಣಪುರುಷನು, ಸತ್ಯರೂಪನು, ಸ್ವಯಂಜ್ಯೋತಿಯು, ಅನಂತನು, ಆದ್ಯನು, ನಿತ್ಯನು, ನಾಶರಹಿತನು, ನಿತ್ಯಾನಂದನು, ನಿರ್ಲೇಪನು, ಪೂರ್ಣನು, ಅದ್ವಯನು, ಉಪಾಧಿಗಳಿಲ್ಲದವನು, ಅಮೃತ ಸ್ವರೂಪನು.

**ಏವಂವಿಧಂ ತ್ವಾಂ ಸಕಲಾತ್ಮನಾಮಪಿ**
**ಸ್ವಾತ್ಮಾನಮಾತ್ಮಾತ್ಮತಯಾ ವಿಚಕ್ಷತೇ ।**
**ಗುರ್ವರ್ಕಲಬ್ಧೋಪನಿಷತ್ಸುಚಕ್ಷುಷಾ**
**ಯೇ ತೇ ತರನ್ತೀವ ಭವಾನೃತಾಮ್ಬುಧಿಮ್ ॥ 24 ॥**

24. ಇಂಥ ಎಲ್ಲಾ ಆತ್ಮರಿಗೂ ಆತ್ಮನಾಗಿರುವ ನಿನ್ನನ್ನು ತಮ್ಮ ಆತ್ಮನೇ ಎಂದು ಗುರುವೆಂಬ ಸೂರ್ಯನಿಂದ ಪಡೆದಕೊಂಡ ಜ್ಞಾನವೆಂಬ ಚಕ್ಷುಸ್ಸಿನಿಂದ ಕಂಡುಕೊಳ್ಳುತ್ತಾರೋ ಅವರು ಸಂಸಾರವೆಂಬ ಮಿಥ್ಯಾಸಾಗರವನ್ನು ದಾಟುತ್ತಾರೆ.

**ಆತ್ಮಾನಮೇವಾಽಽತ್ಮತಯಾಽವಿಜಾನತಾಂ**
**ತೇನೈವ ಜಾತಂ ನಿಖಿಲಂ ಪ್ರಪಞ್ಚಿತಮ್ ।**
**ಜ್ಞಾನೇನ ಭೂಯೋಽಪಿ ಚ ತತ್ ಪ್ರಲೀಯತೇ**
**ರಜ್ಜ್ವಾಮಹೇರ್ಭೋಗಭವಾಭವೌ ಯಥಾ ॥ 25 ॥**

25. ಆತ್ಮನೇ ಆಗಿರುವ ನಿನ್ನನ್ನು ಆತ್ಮನೆಂದು ತಿಳಿಯದವರಿಗೆ, ಆ ಅಜ್ಞಾನದಿಂದಲೇ ಅಖಿಲಪ್ರಪಂಚವೂ ಉಂಟಾಗಿರುತ್ತದೆ. ಹಾಗೆ ಅರಿತುಕೊಳ್ಳುವದರಿಂದ ಅದು – ಹಗ್ಗದಲ್ಲಿ ಅಜ್ಞಾನದಿಂದ ಹಾವಿನ ಹೆಡೆಯು ಎದ್ದುಕೊಳ್ಳುವದು, ಮತ್ತೆ ಜ್ಞಾನದಿಂದ ಪ್ರಲಯವಾಗುವದು ಹೇಗೋ ಹಾಗೆಯೇ – ಮತ್ತೂ ನಾಶವಾಗುತ್ತದೆ.

**ಅಜ್ಞಾನಸಂಜ್ಞೌ ಭವಬನ್ಧಮೋಕ್ಷೌ**
**ದ್ವೌ ನಾಮ ನಾನ್ಯೌ ಸ್ತ ಋತೇಽಜ್ಞಭಾವಾತ್ ।**
**ಅಜಸ್ರಚಿತ್ಯಾತ್ಮನಿ ಕೇವಲೇ ಪರೇ**
**ವಿಚಾರ್ಯಮಾಣೇ ತರಣಾವಿವಾಹನೀ ॥ 26 ॥**

26. ಸಂಸಾರದ ಬಂಧ ಮತ್ತು ಅದರಿಂದ ಮೋಕ್ಷ – ಇವೆರಡೂ ಅಜ್ಞಾನದಿಂದ ತೋರತಕ್ಕವುಗಳು; ವಿಚಾರಮಾಡಿನೋಡಿದರೆ ಇವೆರಡೂ ಅಜ್ಞರ ಭಾವನೆಗಿಂತ ವ್ಯತಿರಿಕ್ತವಾಗಿ ಸೂರ್ಯನಲ್ಲಿ ಹಗಲುರಾತ್ರೆಗಳು ಹೇಗೆ ಇಲ್ಲವೇಇಲ್ಲವೋ ಹಾಗೆ – ನಿತ್ಯಚಿದ್ರೂಪನಾದ ಅದ್ವಿತೀಯಪರಮಾತ್ಮನಲ್ಲಿ ಇಲ್ಲವೇಇಲ್ಲ.

**ತ್ವಾಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮೇವ ಚ ।**
**ಆತ್ಮಾ ಪುನರ್ಬಹಿರ್ಮೃಗ್ಯ ಅಹೋಽಜ್ಞಜನತಾಜ್ಞತಾ ॥ 27 ॥**

27. ಆತ್ಮನಾದ ನೀನೇ ಎಲ್ಲಕ್ಕೂ ಹೆಚ್ಚಿನವನೆಂದೂ, ಆತ್ಮನೇ ಪರಮಾತ್ಮನೆಂದೂ ಅರಿತೂ ಆತ್ಮನನ್ನು ಮತ್ತೂ ಹೊರಗೆ ಹುಡುಕುತ್ತಿರುವರಲ್ಲ, ಆಹಾ! ಅಜ್ಞಜನರ ಅಜ್ಞಾನವನ್ನು ಏನೆಂದು ಹೇಳಲಿ!

**ಅನ್ತರ್ಭವೇಽನನ್ತ ಭವನ್ತಮೇವ**
**ಹ್ಯತತ್ತ್ಯಜನ್ತೋ ಮೃಗಯನ್ತಿ ಸನ್ತಃ ।**

**ಅಸನ್ತಮಪ್ಯನ್ತ್ಯಹಿಮನ್ತರೇಣ**
**ಸನ್ತಂ ಗುಣಂ ತಂ ಕಿಮು ಯನ್ತಿ ಸನ್ತಃ ॥ 28 ॥**

28. ಎಲೈ ಅನಂತನೆ, ಈ ಕಾರ್ಯಕರಣಸಂಘಾತದೊಳಗೆ ಇರುವ ನಿನ್ನನ್ನೇ, ಅನಾತ್ಮವನ್ನು ಬಿಡುವದರಮೂಲಕ ಸತ್ಪುರುಷರು ಹುಡುಕುತ್ತಿರು ತ್ತಾರೆ. ಹತ್ತಿರವಿರುವ ಮಿಥ್ಯಾಸರ್ಪದ ನಿರಾಕರಣೆಯಿಲ್ಲದೆಯೇ ನಿಜವಾಗಿರುವ ಹಗ್ಗವನ್ನು ವಿವೇಕಿಗಳು ಅರಿತುಕೊಂಡಾರೇನು?

**ಅಥಾಪಿ ತೇ ದೇವ ಪದಾಮ್ಬುಜದ್ವಯ-**
**ಪ್ರಸಾದಲೇಶಾನುಗೃಹೀತ ಏವ ಹಿ ।**
**ಜಾನಾತಿ ತತ್ತ್ವಂ ಭಗವನ್ಮಹಿಮ್ನೋ**
**ನ ಚಾನ್ಯ ಏಕೋಽಪಿ ಚಿರಂ ವಿಚಿನ್ವನ್ ॥ 29 ॥**

29. ಎಲೈ ದೇವನೆ, ಹೀಗಿದ್ದರೂ ನಿನ್ನ ಪಾದಕಲಮಯುಗಲದ ಪ್ರಸಾದದ ಲೇಶದ ಅನುಗ್ರಹವುಳ್ಳಾತನೇ ನಿನ್ನ ಮಹಿಮೆಯ ತತ್ತ್ವವನ್ನು ಅರಿತುಕೊಂಡಾನೇ ಹೊರತು ಮತ್ತೆ ಯಾವನೂ ಚಿರಕಾಲದವರೆಗೆ ತಾನೇ ಹುಡುಕಿನೋಡಿದರೂ ಅರಿತುಕೊಳ್ಳಲಾರನು.

**ತದಸ್ತು ಮೇ ನಾಥ ಸ ಭೂರಿಭಾಗೋ**
**ಭವೇಽತ್ರ ವಾಽನ್ಯತ್ರ ತು ವಾ ತಿರಶ್ಚಾಮ್ ।**
**ಯೇನಾಹಮೇಕೋಽಪಿ ಭವಜ್ಜನಾನಾಂ**
**ಭೂತ್ವಾ ನಿಷೇವೇ ತವ ಪಾದಪಲ್ಲವಮ್ ॥ 30 ॥**

30. ಆದ್ದರಿಂದ, ನನ್ನೊಡೆಯ, ಈ ಜನ್ಮದಲ್ಲಿಯೇ ಆಗಲಿ, ಮತ್ತೊಂದು ಜನ್ಮದಲ್ಲಿಯೇ ಆಗಲಿ ತಿರ್ಯಗ್ಜಂತುಗಳ ಜನ್ಮದಲ್ಲಿಯೇ ಆಗಲಿ, ನಿನ್ನವರೊಳಗೆ ನಾನೂ ಒಬ್ಬನಾಗಿ ನಿನ್ನ ಪಾದಪಲ್ಲವವನ್ನು ಸೇವಿಸುವ ಸೌಭಾಗ್ಯವು ದೊರಕಲಿ!

**ಅಹೋಽತಿಧನ್ಯಾ ವ್ರಜಗೋರಮಣ್ಯಃ**
**ಸ್ತನ್ಯಾಮೃತಂ ಪೀತಮತೀವ ತೇ ಮುದಾ ।**
**ಯಾಸಾಂ ವಿಭೋ ವತ್ಸತರಾತ್ಮಜಾತ್ಮನಾ**
**ಯತ್ತೃಪ್ತಯೇಽದ್ಯಾಪಿ ನ ಚಾಲಮಧ್ವರಾಃ ॥ 31 ॥**

31. ಇಲ್ಲಿಯವರೆಗೂ ನಡೆದ ಯಾವ ಯಜ್ಞಗಳೂ ಯಾವ ನಿನ್ನನ್ನು ತೃಪ್ತಿಗೊಳಿಸಲಾರದೆ ಇವೆಯೋ, ಅಂಥ ನೀನು ಯಾವ ವ್ರಜದ ಗೋಗಳು ಮತ್ತು ಗೋಪಿಯರು – ಇವರ ಸ್ತನ್ಯವನ್ನು ಅಮೃತತುಲ್ಯವಾಗಿ ಭಾವಿಸಿ ಕರುಗಳ ರೂಪದಿಂದ ಮತ್ತು ಮಕ್ಕಳ ರೂಪದಿಂದ ಅತಿಸಂತೋಷದಿಂದ ಕುಡಿದೆಯೋ ಆ ಗೋಪಿಯರೇ ಪರಮಧನ್ಯರು!

**ಅಹೋ ಭಾಗ್ಯಮಹೋ ಭಾಗ್ಯಂ ನನ್ದಗೋಪವ್ರಜೌಕಸಾಮ್ ।**
**ಯನ್ಮಿತ್ರಂ ಪರಮಾನನ್ದಂ ಪೂರ್ಣಂ ಬ್ರಹ್ಮ ಸನಾತನಮ್ ॥ 32 ॥**

32. ನಂದಗೋಕುಲದಲ್ಲಿ ವಾಸಮಾಡುತ್ತಿರುವ ನಂದರದು ಎಂಥ ಹೆಚ್ಚಿನ ಭಾಗ್ಯವು! ಆಹಾ ಎಂಥ ಹೆಚ್ಚಿನ ಭಾಗ್ಯವದು! ಪರಮಾನಂದಸ್ವರೂಪ ಸನಾತನ ಪರಿಪೂರ್ಣ ಬ್ರಹ್ಮವೇ ಅವರಿಗೆ ಮಿತ್ರನಾಗಿರುವದಲ್ಲ!

**ಏಷಾಂ ತು ಭಾಗ್ಯಮಹಿಮಾಚ್ಯುತ ತಾವದಾಸ್ತಾ–**
**ಮೇಕಾದಶೈವ ಹಿ ವಯಂ ಬತ ಭೂರಿಭಾಗಾಃ ।**
**ಏತದ್ಧೃಷೀಕಚಷಕೈರಸಕೃತ್ ಪಿಬಾಮಃ**
**ಶರ್ವಾದಯೋಽಙ್ಘ್ರ್ಯುದಜಮಧ್ವಮೃತಾಸವಂ ತೇ ॥ 33 ॥**

33. ಇವರ ಭಾಗ್ಯದ ಮಹಿಮೆಯ ಮಾತಂತಿರಲಿ, ಹನ್ನೊಂದು ಇಂದ್ರಿಯಗಳಿಗೆ ಅಭಿಮಾನಿದೇವತೆಗಳಾದ ಶಿವನೇ ಮುಂತಾದ ನಾವು ಎಂಥ ಹೆಚ್ಚಿನ ಭಾಗ್ಯವಂತರು! ಏಕೆಂದರೆ ಇವರ ಇಂದ್ರಿಯಗಳ ಬಟ್ಟಲುಗಳಿಂದ ನಿನ್ನ ಮಾದಕವಾದ ಚರಣಕಮಲ ಮಕರಂದಾಮೃತವನ್ನು ಮತ್ತೆಮತ್ತೆ ಪಾನಮಾಡುತ್ತಿರುವೆವಲ್ಲ!

**ತದ್ಭೂರಿಭಾಗ್ಯಮಿಹ ಜನ್ಮ ಕಿಮಪ್ಯಟವ್ಯಾಂ**
**ಯದ್ಗೋಕುಲೇಽಪಿ ಕತಮಾಙ್ಘ್ರಿರಜೋಽಭಿಷೇಕಮ್ ।**
**ಯಜ್ಜೀವಿತಂ ತು ನಿಖಿಲಂ ಭಗವಾನ್ ಮುಕುನ್ದ–**
**ಸ್ತ್ವದ್ಯಾಪಿ ಯತ್ಪದರಜಃ ಶ್ರುತಿಮೃಗ್ಯಮೇವ ॥ 34 ॥**

34. ಈ ವಜ್ರಭೂಮಿಯು ಯಾವದಾದರೊಂದು ಅಡವಿಯಲ್ಲಿ, ಅದರಲ್ಲಿಯೂ ಗೋಕುಲದಲ್ಲಿಯೇ ಜನ್ಮವಾದರೆ, ಅದೇ ಹೆಚ್ಚಿನ ಸೌಭಾಗ್ಯವು!

ಯಾವ ಭಕ್ತರದ್ದಾದರೂ ಪಾದಧೂಳಿಯು ನಮ್ಮ ಮೇಲೆ ಬಿದ್ದೇಬೀಳುತ್ತದೆ. ಯಾರ ಪಾದಧೂಳಿಯನ್ನು ಶ್ರುತಿಗಳು ಇನ್ನೂ ಹುಡುಕುತ್ತಿರುವವೋ, ಆ ಮುಕುಂದಭಗವಂತನೇ ಅವರ ಜೀವವಾಗಿರುವನು!

**ತಾವದ್ರಾಗಾದಯಃ ಸ್ತೇನಾಸ್ತಾವತ್ಕಾರಾಗೃಹಂ ಗೃಹಮ್ ।**
**ತಾವನ್ಮೋಹೋಽಙ್ಘ್ರಿನಿಗಡೋ ಯಾವತ್ ಕೃಷ್ಣ ನ ತೇ ಜನಾಃ ॥ 36 ॥**

36. ಜನರು ಎಲ್ಲಿಯವರೆಗೆ, ಎಲೈ ಕೃಷ್ಣನೆ, ನಿನ್ನ ಜನರಾಗುವದಿಲ್ಲವೋ, ಅಲ್ಲಿಯವರೆಗೆ ರಾಗವೇ ಮುಂತಾದ ಕಳ್ಳರ ಕಾಟವಿರುವದು; ಅಲ್ಲಿಯವರೆಗೆ ಮನೆಯು ಸೆರೆಮನೆಯಾಗಿರುವದು, ಅಲ್ಲಿಯವರೆಗೇ ಮೋಹವು ಕಾಲಿಗೆ ಬಿದ್ದ ಬೇಡಿಯಾಗಿರುವದು.

*****

## ನಾಗಪತ್ನಿಯರು ಮಾಡಿದ ಶ್ರೀಕೃಷ್ಣನ ಸ್ತುತಿ

### (ದಶಮ ಸ್ಕಂಧ, ಹದಿನಾರನೆಯ ಅಧ್ಯಾಯ)

**ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।**
**ಭೂತಾವಾಸಾಯ ಭೂತಾಯ ಪರಾಯ ಪರಮಾತ್ಮನೇ ॥ 39 ॥**

39. ನಾಗಪತ್ನಿಯರು ಶ್ರೀಕೃಷ್ಣನನ್ನು ಹೀಗೆಂದು ಸ್ತುತಿಸಿದರು: ಭಗವಂತನಾದ ನಿನಗೆ ನಮಸ್ಕಾರ! ಸರ್ವತ್ರವೂ ತುಂಬಿಕೊಂಡಿರುವ ಮಹಾತ್ಮನೆ, ನಿನಗೆ ನಮಸ್ಕಾರ! ಎಲ್ಲಾ ಭೂತಗಳೊಳಗೆ ವಾಸಮಾಡಿಕೊಂಡಿ ರುವ, ಸರ್ವಭೂತಗಳ ರೂಪದಿಂದಲೂ ತೋರುವ, ಸರ್ವೋತ್ಕೃಷ್ಟನಾದ ಪರಮಾತ್ಮನೆ, ನಿನಗೆ ನಮಸ್ಕಾರ.

**ಜ್ಞಾನವಿಜ್ಞಾನನಿಧಯೇ ಬ್ರಹ್ಮಣೇಽನನ್ತಶಕ್ತಯೇ ।**
**ಅಗುಣಾಯ ವಿಕಾರಾಯ ನಮಸ್ತೇಽಪ್ರಾಕೃತಾಯ ಚ ॥ 40 ॥**

40. ಶಾಸ್ತ್ರೀಯಜ್ಞಾನದ ಮತ್ತು ಅನುಭವರೂಪವಾದ ಜ್ಞಾನದ ನಿಧಿಯೆ, ನಿನಗೆ ನಮಸ್ಕಾರ! ಯಾವ ಪರಿಚ್ಛೇದವೂ ಇಲ್ಲದ ಬ್ರಹ್ಮನ, ಇಷ್ಟೆಂಬ ಮಿತಿಯಿಲ್ಲದ ಶಕ್ತಿಗಳುಳ್ಳಾತನೆ, ಗುಣಗಳ ಪರಿಚ್ಛೇದವಿಲ್ಲದಾತನೆ, ಅದರಿಂದಲೇ ಯಾವ

ಮಾರ್ಪಾಡುಗಳೂ ಇಲ್ಲದಿರುವಾತನೆ, ಪ್ರಕೃತಿಧರ್ಮದ ಸೋಂಕಿಲ್ಲವಾತನೆ, ನಿನಗೆ ನಮಸ್ಕಾರ!

**ಕಾಲಾಯ ಕಾಲನಾಭಾಯ ಕಾಲಾವಯವಸಾಕ್ಷಿಣೇ ।**
**ವಿಶ್ವಾಯ ತದುಪದ್ರಷ್ಟ್ರೇ ತತ್ಕರ್ತ್ರೇವಿಶ್ವಹೇತವೇ ॥ 41 ॥**

41. ಕಾಲಸ್ವರೂಪನೆ, ಕಾಲಪರಿವರ್ತನೆಗೂ ಆಶ್ರಯನಾದವನೆ, ಕಲಾಕಾಷ್ಠಮುಹೂರ್ತಾದಿ ಕಾಲದ ಅವಯವಗಳಿಗೆಲ್ಲ ಸಾಕ್ಷಿಯಾದವನೆ, ವಿಶ್ವರೂಪನೆ, ವಿಶ್ವವನ್ನು ನೋಡುತ್ತಿರುವಾತನೆ, ಅದನ್ನು ಸೃಷ್ಟಿಸುವ ನಿಮಿತ್ತಕಾರಣನೆ, ಉಪಾದಾನವೂ ಆಗಿರುವಾತನೆ, ನಿನಗೆ ನಮಸ್ಕಾರ!

**ಭೂತಮಾತ್ರೇನ್ದ್ರಿಯಪ್ರಾಣಮನೋಬುದ್ಧ್ಯಾಶಯಾತ್ಮನೇ ।**
**ತ್ರಿಗುಣೇನಾಭಿಮಾನೇನ ಗೂಢಸ್ವಾತ್ಮಾನುಭೂತಯೇ ॥ 42 ॥**

42. ಪಂಚಭೂತಗಳ ತನ್ಮಾತ್ರೆಗಳ ಸ್ವರೂಪನೆ, ಇಂದ್ರಿಯಪ್ರಾಣ ಮನಸ್ಸುಬುದ್ಧಿ ವಾಸನಾಶಯಗಳ ಸ್ವರೂಪದಿಂದ ತೋರುತ್ತಿರುವಾತನೆ, ತ್ರಿಗುಣಗಳುಳ್ಳ ಅಹಂಕಾರವು ಮುಸುಕಿರುವದರಿಂದ ಅರಿಯದಂತೆ ಇರುವ ಸ್ವಾತ್ಮಾನುಭವಸ್ವರೂಪನೆ, ನಿನಗೆ ನಮಸ್ಕಾರ!

**ನಮೋಽನನ್ತಾಯ ಸೂಕ್ಷ್ಮಾಯ ಕೂಟಸ್ಥಾಯ ವಿಪಶ್ಚಿತೇ ।**
**ನಾನಾವಾದಾನುರೋಧಾಯ ವಾಚ್ಯವಾಚಕಶಕ್ತಯೇ ॥ 43 ॥**

43. ದೇಶಪರಿಚ್ಛೇದವಿಲ್ಲದ್ದರಿಂದ ಅನಂತನೆನಿಸಿರುವಾತನೆ, ಇಂದ್ರಿಯ ಗೋಚರನಲ್ಲದ್ದರಿಂದ ಸೂಕ್ಷ್ಮನಾಗಿರುವಾತನೆ, ನಿರ್ವಿಕಾರನೆ, ಸರ್ವಜ್ಞನೆ, ಬಗೆಬಗೆಯ ವಾದಗಳಿಗೆ ವಿಷಯನಾಗಿರುವವನೆ, ವಾಚಕಶಬ್ದದ ಮತ್ತು ವಾಚ್ಯವಾದ ಅರ್ಥದ ಮೂಲಶಕ್ತಿಯಾಗಿರುವಾತನೆ, ನಿನಗೆ ನಮಸ್ಕಾರ!

**ನಮಃ ಪ್ರಮಾಣಮೂಲಾಯ ಕವಯೇ ಶಾಸ್ತ್ರಯೋನಯೇ ।**
**ಪ್ರವೃತ್ತಾಯ ನಿವೃತ್ತಾಯ ನಿಗಮಾಯ ನಮೋ ನಮಃ ॥ 44 ॥**

44. ಪ್ರಮಾಣಗಳಿಗೆಲ್ಲ ಆಧಾರವಾಗಿರುವ ಅನುಭವಸ್ವರೂಪನೆ, ಇಂದ್ರಿಯಗಳಿಗೆ ಪ್ರಾಂತವಾಗಿರುವ ತತ್ತ್ವಗಳನ್ನೂ ನೇರಾಗಿ ಕಾಣಬಲ್ಲಾತನೆ,

ವೇದಾಂತಶಾಸ್ತ್ರಪ್ರಮಾಣದಿಂದ ತಿಳಿಯಬರುವಾತನೆ, ಪ್ರವೃತ್ತಿಧರ್ಮವನ್ನೂ ನಿವೃತ್ತಿಧರ್ಮವನ್ನೂ ಬೋಧಿಸುವ ವೇದಸ್ವರೂಪನೆ, ನಮಸ್ಕಾರ, ನಮಸ್ಕಾರ!

**ಕೃಷ್ಣಾಯ ರಾಮಾಯ ವಸುದೇವಸುತಾಯ ಚ ।**
**ಪ್ರದ್ಯುಮ್ನಾಯಾನಿರುದ್ಧಾಯ ಸಾತ್ತ್ವತಾಂ ಪತಯೇ ನಮಃ ॥ 45 ॥**

45. ಕೃಷ್ಣನೂ ಬಲರಾಮನೂ ಆಗಿರುವ ವಸುದೇಪುತ್ರನೇ ಪ್ರದ್ಯುಮ್ನನೆ, ಅನಿರುದ್ಧನೆ, ಸಾತ್ವತರೊಡೆಯನೆ, ನಿನಗೆ ನಮಸ್ಕಾರ!

**ನಮೋ ಗುಣಪ್ರದೀಪಾಯ ಗುಣಾತ್ಮಚ್ಛಾದನಾಯ ಚ ।**
**ಗುಣವೃತ್ತ್ಯುಪಲಕ್ಷ್ಯಾಯ ಗುಣದ್ರಷ್ಟ್ರೇ ಸ್ವಸಂವಿದೇ ॥ 46 ॥**

46. ಸತ್ತ್ವರಜಸ್ತಮೋಗುಣಗಳನ್ನು ಬೆಳಗುವಾತನೆ, ಗುಣಸ್ವರೂಪವನ್ನು ಮುಚ್ಚಿರುವ ಗುಣಗಳ ವ್ಯಾಪಾರದಿಂದ ತಿಳಿಯಬೇಕಾಗಿ ರುವ ಮೂಲರೂಪನೆ, ಗುಣಗಳಿಗೆಲ್ಲ ದೃಷ್ಟ್ಯವಾಗಿರುವ ಸ್ವಾನುಭವರೂಪನೆ, ನಮಸ್ಕಾರ!

**ಅವ್ಯಾಕೃತವಿಹಾರಾಯ ಸರ್ವವ್ಯಾಕೃತಸಿದ್ಧಯೇ ।**
**ಹೃಷೀಕೇಶ ನಮಸ್ತೇಽಸ್ತು ಮುನಯೇ ಮೌನಶೀಲಿನೇ ॥ 47 ॥**

47. ಯಾರಿಗೂ ತೋರಿಕೊಳ್ಳದ ಜಗನ್ಮೂಲದಲ್ಲಿಯೂ ವ್ಯಾಪಿಸಿಕೊಂಡು ಪರಿಹರಿಸುತ್ತಿರುವಾತನೆ, ವ್ಯಾಕೃತಜಗತ್ತಿನ ಸಿದ್ಧಿಗೆಲ್ಲ ಆಧಾರನಾಗಿರುವಾತನೆ ತತ್ತ್ವಾರ್ಥವನ್ನು ಬಲ್ಲ ನಿತ್ಯಮೌನಿಯಾದ ಹೃಷೀಕೇಶನೆ, ನಿನಗೆ ನಮಸ್ಕಾರ!

**ಪರಾಪರಗತಿಜ್ಞಾಯ ಸರ್ವಾಧ್ಯಕ್ಷಾಯ ತೇ ನಮಃ ।**
**ಅವಿಶ್ವಾಯ ಚ ವಿಶ್ವಾಯ ತದ್ದ್ರಷ್ಟ್ರೇಽಸ್ಯ ಚ ಹೇತವೇ ॥ 48 ॥**

48. ಅತ್ಯಂತೋತ್ಕೃಷ್ಟವಾದ, ಮತ್ತು ಅತ್ಯಂತನಿಕೃಷ್ಟವಾದ ಗತಿಯನ್ನು ಬಲ್ಲಾತನೆ, ಸರ್ವಕ್ಕೂ ಒಡೆಯನೆ, ನಿಷ್ಪ್ರಪಂಚನೆ, ಪ್ರಪಂಚರೂಪನೆ, ಅದಕ್ಕೂ ಸಾಕ್ಷಿಯಾದವನೆ, ಅದಕ್ಕೂ ಕಾರಣನಾದವನೆ, ನಿನಗೆ ನಮಸ್ಕಾರ!

**ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ ಪ್ರಭೋ**
**ಗುಣೈರನೀಹೋಽಕೃತ ಕಾಲಶಕ್ತಿಧೃತ್ ।**

**ತತ್ತತ್ಸ್ವಭಾವಾನ್ ಪ್ರತಿಬೋಧಯನ್ ಸತಃ**
**ಸಾಮೀಕ್ಷಯಾಽಮೋಘವಿಹಾರ ಈಹಸೇ ॥ 49 ॥**

49. ಪ್ರಭುವೇ, ನಿರ್ವ್ಯಾಪಾರನಾದ ನೀನು ಕಾಲಶಕ್ತಿಯನ್ನು ಭರಿಸಿ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಿರುವೆ. ಸತ್ಯಸಂಕಲ್ಪನೆ, ನಿನ್ನ ದೃಷ್ಟಿಮಾತ್ರದಿಂದ ಅವರವರ ಸ್ವಭಾವಗಳನ್ನು ಎಚ್ಚರಿಸುತ್ತಾ ವಿಹರಿಸುತ್ತಿರುವೆ.

**ತಸ್ಯೈವ ತೇಽಮೂಸ್ತನವಸ್ತ್ರಿಲೋಕ್ಯಾಂ**
**ಶಾನ್ತಾ ಅಶಾನ್ತಾ ಉತ ಮೂಢಯೋನಯಃ ।**
**ಶಾನ್ತಾಃ ಪ್ರಿಯಾಸ್ತೇ ಹ್ಯಧುನಾವಿತುಂ ಸತಾಂ**
**ಸ್ಥಾತುಶ್ಚ ತೇ ಧರ್ಮಪರೀಪ್ಸಯೇ ಹತಃ ॥ 50 ॥**

50. ಜಗತ್ತಿನಲ್ಲಿರುವ ಶಾಂತ, ಅಶಂತ, ಮೂಢ – ಈ ಮೂರು ಬಗೆಯ ಯೋನಿಗಳೂ ನಿನ್ನ ಮೂರ್ತಿಗಳೇ. ಸತ್ಪುರುಷರನ್ನೂ ಧರ್ಮವನ್ನೂ ರಕ್ಷಿಸುವದಕ್ಕೆ ಲೀಲೆಗಳನ್ನು ತೋರಿಸುತ್ತಿರುವ ನಿನಗೆ ಈಗ ಶಾಂತರೇ ಪ್ರಿಯರು.

*****

## ಅಕ್ರೂರನು ಮಾಡಿದ ಶ್ರೀಕೃಷ್ಣನ ಸ್ತುತಿ

**(ದಶಮ ಸ್ಕಂಧ, ಪೂ. ನಲವತ್ತನೆಯ ಅಧ್ಯಾಯ)**

**ತ್ರಯ್ಯಾ ಚ ವಿದ್ಯಯಾ ಕೇಚಿತ್ ತ್ವಾಂ ವೈ ವೈತಾನಿಕಾ ದ್ವಿಜಾಃ ।**
**ಯಜನ್ತೇ ವಿತತೈರ್ಯಜ್ಞೈರ್ನಾನಾರೂಪಾಮರಾಖ್ಯಯಾ ॥ 5 ॥**

5. ಕರ್ಮಕಾಂಡದಲ್ಲಿ ಶ್ರದ್ಧೆಯುಳ್ಳ ಬ್ರಾಹ್ಮಣರು ಋಗ್ವೇದ, ಯಜುರ್ವೇದ, ಸಾಮವೇದ – ಇವುಗಳಲ್ಲಿರುವ ತ್ರಯೀವಿದ್ಯೆಯ ಮಾರ್ಗದಿಂದ ವಿವಿಧವಾದ ಯಜ್ಞಗಳಿಂದ ಬಗೆಬಗೆಯ (ಇಂದ್ರ, ಅಗ್ನಿ–ಮುಂತಾದ) ನಾಮರೂಪಗಳುಳ್ಳ ದೇವತೆಗಳೆಂದು ನಿನ್ನನ್ನೇ ಪೂಜಿಸುತ್ತಿರುವರು.

**ಏಕೇ ತ್ವಾಽಖಿಲಕರ್ಮಾಣಿ ಸಂನ್ಯಸ್ಯೋಪಶಮಂ ಗತಾಃ ।**
**ಜ್ಞಾನಿನೋ ಜ್ಞಾನಯಜ್ಞೇನ ಯಜನ್ತಿ ಜ್ಞಾನವಿಗ್ರಹಮ್ ॥ 6 ॥**

6. ಕೆಲವರು ಜ್ಞಾನಿಗಳು ಎಲ್ಲಾ ಕರ್ಮಗಳನ್ನು ಸಂನ್ಯಾಸಮಾಡಿ,

ಉಪಶಾಂತಿಯನ್ನು ಹೊಂದಿ ಜ್ಞಾನಯಜ್ಞದಿಂದ ಜ್ಞಾನರೂಪನಾದ ನಿನ್ನನ್ನು ಪೂಜಿಸುತ್ತಿರುವರು.

**ಅನ್ಯೇ ಚ ಸಂಸ್ಕೃತಾತ್ಮಾನೋ ವಿಧಿನಾಽಭಿಹಿತೇನ ತೇ ।**
**ಯಜನ್ತಿ ತ್ವನ್ಮಯಾಸ್ತ್ವಾಂ ವೈ ಬಹುಮೂರ್ತ್ಯೇಕಮೂರ್ತಿಕಮ್ ॥ 7 ॥**

7. ಇನ್ನೂ ಕೆಲವರು ಅಂತಃಕರಣಸಂಸ್ಕಾರವನ್ನು ಹೊಂದಿದವರಾಗಿ ವಿಧ್ಯುಕ್ತರೀತಿಯಿಂದ ಚತುರ್ವ್ಯೂಹಗಳೇ ಮುಂತಾದ ಅನೇಕ ರೂಪಗಳುಳ್ಳವನೂ ವಾಸುದೇವಾತ್ಮಕವಾದ ಏಕರೂಪವುಳ್ಳವನೂ ಆದ ನಿನ್ನನ್ನು ಭಗವನ್ಮಯರಾಗಿ ಆರಾಧಿಸುತ್ತಿರುವರು.

**ತ್ವಾಮೇವಾನ್ಯೇ ಶಿವೋಕ್ತೇನ ಮಾರ್ಗೇಣ ಶಿವರೂಪಿಣಮ್ ।**
**ಬಹ್ವಾಚಾರ್ಯವಿಭೇದೇನ ಭಗವನ್ ಸಮುಪಾಸತೇ ॥ 8 ॥**

8. ಭಗವಂತನೆ, ಬಹುಜನ ಆಚಾರ್ಯರ ವಿಭೇದಗಳುಳ್ಳ, ಶಿವನಿಂದ ಪ್ರೋಕ್ತವಾಗಿರುವ ಮಾರ್ಗದಿಂದ ಶಿವರೂಪಿಯಾದ ನಿನ್ನನ್ನೇ ಮತ್ತೆ ಕೆಲವರು ಉಪಾಸನೆಮಾಡುತ್ತಿರುವರು.

**ಸರ್ವ ಏವ ಯಜನ್ತಿ ತ್ವಾಂ ಸರ್ವದೇವಮಯೇಶ್ವರಮ್ ।**
**ಯೇಽಪ್ಯನ್ಯದೇವತಾಭಕ್ತಾ ಯದ್ಯಪ್ಯನ್ಯಧಿಯಃ ಪ್ರಭೋ ॥ 9 ॥**

9. ಪ್ರಭುವೆ, ಅನ್ಯಬುದ್ಧಿಯಿಂದ ಕೂಡಿದವರಾಗಿದ್ದರೂ, ಅನ್ಯದೇವತೆಗಳ ಭಕ್ತರಾಗಿರುವವರೂ ಎಲ್ಲರೂ ಸರ್ವದೇವಮಯನಾದ ಈಶ್ವರನಾದ ನಿನ್ನನ್ನೇ ಪೂಜಿಸುತ್ತಿರುವರು.

**ಯಥಾದ್ರಿಪ್ರಭವಾ ನದ್ಯಃ ಪರ್ಜನ್ಯಾಪೂರಿತಾಃ ಪ್ರಭೋ ।**
**ವಿಶನ್ತಿ ಸರ್ವತಃ ಸಿನ್ಧುಂ ತದ್ವತ್ ತ್ವಾಂ ಗತಯೋಽನ್ತತಃ ॥ 10 ॥**

10. ಬೆಟ್ಟಗಳಲ್ಲಿ ಹುಟ್ಟಿದ ನದಿಗಳು, ಮಳೆಯಿಂದ ತುಂಬಿಕೊಂಡು, ಹೇಗೆ ಎಲ್ಲಾ ಕಡೆಗಳಿಂದಲೂ ಸಮುದ್ರವನ್ನೇ ಹೊಗುವವೋ, ಹಾಗೆಯೇ ಎಲೈ ಪ್ರಭುವೇ, ಎಲ್ಲಾ ಗತಿಗಳೂ ಕೊನೆಗೆ ನಿನ್ನನ್ನೇ ಸೇರುವವು.

**ಸತ್ತ್ವಂ ರಜಸ್ತಮ ಇತಿ ಭವತಃ ಪ್ರಕೃತೇರ್ಗುಣಾಃ ।**
**ತೇಷು ಹಿ ಪ್ರಾಕೃತಾಃ ಪ್ರೋತಾ ಆಬ್ರಹ್ಮಸ್ಥಾವರಾದಯಃ ॥ 11 ॥**

11. ಸತ್ತ್ವ, ರಜಸ್ಸು, ತಮಸ್ಸು – ಎಂಬಿವು ನಿನ್ನ ಪ್ರಕೃತಿಯ ಗುಣಗಳು. ಅವುಗಳಲ್ಲಿಲ್ಲವೆ, ಬ್ರಹ್ಮನಿಂದ ಹಿಡಿದು ಸ್ಥಾವರದವರೆಗೂ ಇರುವ ಪ್ರಾಕೃತಜಂತುಗಳೂ ಪೋಣಿಸಲ್ಪಟ್ಟಿರುತ್ತವೆ?

**ತುಭ್ಯಂ ನಮಸ್ತೇಽಸ್ತ್ವವಿಷಕ್ತದೃಷ್ಟಯೇ**
**ಸರ್ವಾತ್ಮನೇ ಸರ್ವಧಿಯಾಂ ಚ ಸಾಕ್ಷಿಣೇ ।**
**ಗುಣಪ್ರವಾಹೋಽಯಮವಿದ್ಯಯಾ ಕೃತಃ**
**ಪ್ರವರ್ತತೇ ದೇವನೃತಿರ್ಯಗಾತ್ಮಸು ॥ 12 ॥**

12. ಸರ್ವಾತ್ಮನಾಗಿಯೂ ಸರ್ವರ ಬುದ್ಧಿವೃತ್ತಿಗಳಿಗೂ ಸಾಕ್ಷಿಯಾಗಿಯೂ ಇರುವ ಅನಾಸಕ್ತದೃಷ್ಟಿಯುಳ್ಳ ನಿನಗೆ ನಮಸ್ಕಾರ! ಅವಿದ್ಯೆಯಿಂದ ಕಲ್ಪಿತವಾಗಿರುವ ಈ ಗುಣಪ್ರವಾಹವು ದೇವತೆಗಳು, ಮನುಷ್ಯರು, ತಿರ್ಯಗ್ಜಂತುಗಳು – ಎಂಬ ಜೀವರುಗಳಲ್ಲೆಲ್ಲ ಹರಿದುಬಂದಿರುತ್ತದೆ.

**ಅಗ್ನಿರ್ಮುಖಂ ತೇಽವನಿರಙ್ಘ್ರಿರೀಕ್ಷಣಂ**
**ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ ।**
**ದ್ಯೌಃ ಕಂ ಸುರೇನ್ದ್ರಾಸ್ತವ ಬಾಹವೋಽರ್ಣವಾಃ**
**ಕುಕ್ಷಿರ್ಮರುತ್ ಪ್ರಾಣಬಲಂ ಪ್ರಕಲ್ಪಿತಮ್ ॥ 13 ॥**

13. ಅಗ್ನಿಯೇ ನಿನ್ನ ಮುಖವು, ಭೂಮಿಯೇ ಪಾದವು, ಸೂರ್ಯನೇ ಕಣ್ಣು, ಆಕಾಶವೇ ಹೊಕ್ಕಳು, ದಿಕ್ಕುಗಳೇ ಕಿವಿ, ಅಂತರಿಕ್ಷವೇ ಕತ್ತು, ದೇವತೆಗಳೇ ನಿನ್ನ ತೋಳುಗಳು, ಸಮುದ್ರಗಳೇ ನಿನ್ನ ಹೊಟ್ಟೆ, ವಾಯುವೇ ನಿನ್ನ ಪ್ರಾಣಬಲವಾಗಿರುತ್ತದೆ.

**ರೋಮಾಣಿ ವೃಕ್ಷೌಷಧಯಃ ಶಿರೋರುಹಾ**
**ಮೇಘಾಃ ಪರಸ್ಯಾಸ್ಥಿನಖಾನಿ ತೇಽದ್ರಯಃ ।**
**ನಿಮೇಷಣಂ ರಾತ್ರ್ಯಹನೀ ಪ್ರಜಾಪತಿ–**
**ರ್ಮೇಢ್ರಸ್ತು ವೃಷ್ಟಿಸ್ತವ ವೀರ್ಯಮಿಷ್ಯತೇ ॥ 14 ॥**

14. ಮರಗಿಡಗಳು ಲೋಮಗಳು, ಮೋಡಗಳು ತಲೆಗೂದಲುಗಳು, ಪರ್ವತಗಳು ಪರಮಾತ್ಮನಾದ ನಿನ್ನ ಮೂಳೆಗಳು, ಉಗುರುಗಳು; ಹಗಲಿರುಳುಗಳು

ನಿನ್ನ ರೆಪ್ಪೆಯ ಬಡಿತ, ಪ್ರಜಾಪತಿಯು ಜನನೇಂದ್ರಿಯವು; ಮಳೆಯೇ ನಿನ್ನ ವೀರ್ಯವೆನಿಸುವದು.

**ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾ**
**ಲೋಕಾಃ ಸಪಾಲಾ ಬಹುಜೀವಸಙ್ಕುಲಾಃ ।**
**ಯಥಾ ಜಲೇ ಸಞ್ಜಿಹತೇ ಜಲೌಕಸೋಽ–**
**ಪ್ಯುದುಮ್ಬರೇ ಮಶಕಾ ಮನೋಮಯೇ ॥ 15 ॥**

15. ಅವ್ಯಯಸ್ವರೂಪನೆ, ಅನೇಕ ಜೀವರುಗಳಿಂದ ನಿಬಿಡವಾಗಿರುವ ಲೋಕಗಳೂ ಲೋಕಪಾಲಕರೂ ನೀರಿನಲ್ಲಿ ಮೀನುಗಳು ನಿದ್ರಿಸುತ್ತಿರುವಂತೆ, ಅಥವಾ ಅತ್ತಿಯ ಹಣ್ಣಿನಲ್ಲಿ ಗುಂಗುರುಹುಳಗಳು ಇರುವಂತೆ – ಮನೋಮಯ ಪುರುಷನಾದ ನಿನ್ನಲ್ಲಿದ್ದುಕೊಂಡಿರುವವು.

**ಯಾನಿ ಯಾನೀಹ ರೂಪಾಣಿ ಕ್ರೀಡನಾರ್ಥಂ ಬಿಭರ್ಷಿ ಹಿ ।**
**ತೈರಾಮೃಷ್ಟಶುಚೋ ಲೋಕಾ ಮುದಾ ಗಾಯನ್ತಿ ತೇ ಯತಃ ॥ 16 ॥**

16. ಯಾವಯಾವ ರೂಪಗಳನ್ನು ನೀನು ಲೀಲಾರ್ಥವಾಗಿ ಧರಿಸುತ್ತಿರುವೆಯೋ, ಅವುಗಳಿಂದ ಜನರು ಶೋಕವನ್ನು ನೀಗಿಕೊಂಡು ನಿನ್ನ ಕೀರ್ತಿಯನ್ನು ಸಂತೋಷದಿಂದ ಗಾನಮಾಡುತ್ತಿರುವರು.

**ನಮಃ ಕಾರಣಮತ್ಸ್ಯಾಯ ಪ್ರಲಯಾಬ್ಧಿಚರಾಯ ಚ ।**
**ಹಯಶೀರ್ಷ್ಣೇ ನಮಸ್ತುಭ್ಯಂ ಮಧುಕೈಟಭಮೃತ್ಯವೇ ॥ 17 ॥**

17. ಜಗತ್ಕಾರಣನಾದವನೂ ಪ್ರಲಯಕಾಲದಲ್ಲಿ ಸಮುದ್ರದಲ್ಲಿ ಸಂಚರಿಸುವವನೂ ಆದ ಮತ್ಸ್ಯನಿಗೆ ನಮಸ್ಕಾರ; ಮಧುಕೈಟಭರ ಮೃತ್ಯುವಾದ ಹಯಗ್ರೀವನೆ, ನಿನಗೆ ನಮಸ್ಕಾರ!

**ಅಕೂಪಾರಾಯ ಬೃಹತೇ ನಮೋ ಮನ್ದರಧಾರಿಣೇ ।**
**ಕ್ಷಿತ್ಯುದ್ಧಾರವಿಹಾರಾಯ ನಮಃ ಸೂಕರಮೂರ್ತಯೇ ॥ 18 ॥**

18. ಮಂದರಪರ್ವತವನ್ನು ಧರಿಸಿದ ಮಹಾಸಮುದ್ರನಿಗೆ ನಮಸ್ಕಾರ! ಭೂಮಿಯನ್ನು ಎತ್ತಿದ ಲೀಲೆಯ ವರಾಹಮೂರ್ತಿಗೆ ನಮಸ್ಕಾರ!

**ನಮಸ್ತೇಽದ್ಭುತಸಿಂಹಾಯ ಸಾಧುಲೋಕಭಯಾಪಹ ।**
**ವಾಮನಾಯ ನಮಸ್ತುಭ್ಯಂ ಕ್ರಾನ್ತತ್ರಿಭುವನಾಯ ಚ ॥ 19 ॥**

19. ಅದ್ಭುತರೂಪನಾದ ನರಸಿಂಹನೆ, ಸಾಧುಜನರ ಭಯವನ್ನು ಹೋಗಲಾಡಿಸಿದಾತನೆ, ನಿನಗೆ ನಮಸ್ಕಾರ! ಮೂರುಲೋಕಗಳನ್ನೂ ಹೆಜ್ಜೆಯಿಂದ ಅಳೆದ ವಾಮನನೆ, ನಿನಗೆ ನಮಸ್ಕಾರ!

**ನಮೋ ಭೃಗೂಣಾಂ ಪತಯೇ ದೃಪ್ತಕ್ಷತ್ರವನಚ್ಛಿದೇ ।**
**ನಮಸ್ತೇ ರಘುವರ್ಯಾಯ ರಾವಣಾನ್ತಕರಾಯ ಚ ॥ 20 ॥**

20. ದರ್ಪಿತರಾದ ಕ್ಷತ್ರಿಯರೆಂಬ ಕಾಡಿನ ಮರಗಳನ್ನು ಕತ್ತರಿಸಿದ ಭಾರ್ಗವ ಶ್ರೇಷ್ಠನೆ, ನಿನಗೆ ನಮಸ್ಕಾರ! ರಾವಣನನ್ನು ಕೊನೆಗಾಣಿಸಿದ ರಘುವರ್ಯನೆ, ನಿನಗೆ ನಮಸ್ಕಾರ!

**ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।**
**ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥ 21 ॥**

21. ವಾಸುದೇವನಿಗೆ ನಮಸ್ಕಾರ! ಸಂಕರ್ಷಣನಿಗೆ ನಮಸ್ಕಾರ! ಪ್ರದ್ಯುಮ್ನನೆ, ಅನಿರುದ್ಧನೆ, ಸಾತ್ವತರೊಡೆಯನಾದ ನಿನಗೆ ನಮಸಾರ!

**ನಮೋ ಬುದ್ಧಾಯ ಶುದ್ಧಾಯ ದೈತ್ಯದಾನವಮೋಹಿನೇ ।**
**ಮ್ಲೇಚ್ಛಪ್ರಾಯಕ್ಷತ್ರಹನ್ತ್ರೇ ನಮಸ್ತೇ ಕಲ್ಕಿರೂಪಿಣೇ ॥ 22 ॥**

22. ದೈತ್ಯದಾನವರನ್ನು ಭ್ರಮೆಗೊಳಿಸಿದ ಶುದ್ಧನಾದ ಬುದ್ಧನೆ, ನಿನಗೆ ನಮಸ್ಕಾರ! ಮ್ಲೇಚ್ಛಪ್ರಾಯರಾದ ಕ್ಷತ್ರಿಯರನ್ನು ಕೊಲ್ಲುವಾತನಾದ ಕಲ್ಕಿರೂಪಿಯೆ, ನಿನಗೆ ನಮಸ್ಕಾರ!

**ಭಗವಞ್ಜೀವಲೋಕೋಽಯಂ ಮೋಹಿತಸ್ತವ ಮಾಯಯಾ ।**
**ಅಹಂ ಮಮೇತ್ಯಸದ್ಗ್ರಾಹೋ ಭ್ರಾಮ್ಯತೇ ಕರ್ಮವರ್ತ್ಮಸು ॥ 23 ॥**

23. ಭಗವಂತನೆ, ಈ ಜೀವರಾದ ಜನರು ನಿನ್ನ ಮಾಯೆಯಿಂದ ಮೋಹಿತರಾಗಿ ನಾನು, ನನ್ನದು ಎಂಬ ತಪ್ಪುತಿಳಿವಳಿಕೆಯಿಂದ ಕೂಡಿದವರಾಗಿ ಕರ್ಮಮಾರ್ಗಗಳಲ್ಲಿ ತೊಳಲುತ್ತಿರುವರು.

**ಅಹಂ ಚಾತ್ಮಾತ್ಮಜಾಗಾರದಾರಾರ್ಥಸ್ವಜನಾದಿಷು ।**
**ಭ್ರಮಾಮಿ ಸ್ವಪ್ನಕಲ್ಪೇಷು ಮೂಢಃ ಸತ್ಯಧಿಯಾ ವಿಭೋ ॥ 24 ॥**

24. ನಾನೂ ಸ್ವಪ್ನದಂತಿರುವ ಶರೀರ, ಮಕ್ಕಳು, ಮನೆ, ಹೆಂಡತಿ, ಅರ್ಥ, ನೆಂಟರು – ಮೊದಲಾದವರಲ್ಲಿ ಇವೆಲ್ಲವೂ ಸತ್ಯವೆಂಬ ಭ್ರಮೆಯಿಂದ ಎಲೈ ವಿಭುವೆ, ತೊಳಲುತ್ತಿರುವೆನು.

**ಅನಿತ್ಯಾನಾತ್ಮದುಃಖೇಷು ವಿಪರ್ಯಯಮತಿರ್ಹ್ಯಹಮ್ ।**
**ದ್ವಂದ್ವಾರಾಮಸ್ತಮೋವಿಷ್ಟೋ ನ ಜಾನೇ ತ್ವಾತ್ಮನಃ ಪ್ರಿಯಮ್ ॥ 25 ॥**

25. ಅನಿತ್ಯವೂ, ಅನಾತ್ಮವೂ, ದುಃಖವೂ ಆಗಿರುವ ವಿಷಯಗಳಲ್ಲಿ ಇದಕ್ಕೆ ವಿಪರೀತವಾಗಿಯೇ ಇರುವ (ಇವು ನಿತ್ಯ, ನನ್ನ ಆತ್ಮ, ಸುಖರೂಪವಾಗಿ ರುವವೆಂಬ) ಬುದ್ಧಿಯುಳ್ಳವನಾಗಿ, ದ್ವಂದ್ವಗಳಲ್ಲಿಯೇ ಕ್ರೀಡಿಸುತ್ತಾ ಅಜ್ಞಾನದಿಂದ ಕೂಡಿ ನನಗೆ ಪ್ರಿಯನಾದ ನಿನ್ನನ್ನು ಅರಿತುಕೊಳ್ಳಲಾರದೆ ಇರುವೆನು.

**ಯಥಾಽಬುಧೋ ಜಲಂ ಹಿತ್ವಾ ಪ್ರತಿಚ್ಛನ್ನಂ ತದುದ್ಭವೈಃ ।**
**ಅಭ್ಯೇತಿ ಮೃಗತೃಷ್ಣಾಂ ವೈ ತದ್ವತ್ ತ್ವಾಹಂ ಪರಾಙ್ಮುಖಃ ॥ 26 ॥**

26. ಅಜ್ಞನು ತನ್ನಲ್ಲಿ ಹುಟ್ಟಿದ ಪಾಚಿಯೇ ಮುಂತಾದವುಗಳಿಂದ ಮುಚ್ಚಿಹೋಗಿರುವ ನೀರನ್ನು ಬಿಟ್ಟು, ಬಿಸಿಲುಕುದುರೆಯ ಬಳಿಗೆ ಹೇಗೆ ಹೋಗುತ್ತಿರುವನೋ ಹಾಗೆಯೇ ನಾನು ನಿನ್ನ ಕಡೆಗೆ ಬೆನ್ನುತಿರುಗಿಸಿರುವೆನು.

**ನೋತ್ಸಹೇಽಹಂ ಕೃಪಣಧೀಃ ಕಾಮಕರ್ಮಹತಂ ಮನಃ ।**
**ರೋದ್ಧುಂ ಪ್ರಮಾಥಿಭಿಶ್ಚಾಕ್ಷೈರ್ಹ್ರಿಯಮಾಣಮಿತಸ್ತತಃ ॥ 27 ॥**

27. ದೀನಬುದ್ಧಿಯುಳ್ಳ ನಾನು ಕಾಮಕರ್ಮಗಳ ಹೊಡೆತಕ್ಕೆ ಸಿಕ್ಕಿ, ಇಂದ್ರಿಯಗಳ ಉಪಟಳದಿಂದ ಅತ್ತಿತ್ತ ಹರಿದಾಡುತ್ತಿರುವ ಮನಸ್ಸನ್ನು ತಡೆದಿಟ್ಟುಕೊಳ್ಳಲಾರದೆ ಇರುವೆನು.

**ಸೋಽಹಂ ತವಾಙ್ಘ್ರ್ಯುಪಗತೋಽಸ್ಮ್ಯಸತಾಂ ದುರಾಪಂ**
**ತಚ್ಚಾಪ್ಯಹಂ ಭವದನುಗ್ರಹ ಈಶ ಮನ್ಯೇ ।**
**ಪುಂಸೋ ಭವೇದ್ ಯರ್ಹಿ ಸಂಸರಣಾಪವರ್ಗ**
**ಸ್ತ್ವಯ್ಯಬ್ಜನಾಭ ಸದುಪಾಸನಯಾ ಮತಿಃ ಸ್ಯಾತ್ ॥ 28 ॥**

28. ಆದ್ದರಿಂದ ಈ ನಾನು ದುರ್ಜನರಿಗೆ ಅಲಭ್ಯವಾಗಿರುವ ನಿನ್ನ ಪಾದತಲವನ್ನು ಸೇರಿರುತ್ತೇನೆ. ಎಲೈ ಪರಮೇಶ್ವರನೆ, ಇದೇ ನಿನ್ನ ಅನುಗ್ರಹವೆಂದು ನಾನು ಬಗೆಯುತ್ತಿದ್ದೇನೆ. ಏಕೆಂದರೆ ಸತ್ಸಂಗದಿಂದ ನಿನ್ನಲ್ಲಿ ಯಾವಾಗ ಮನಸ್ಸು ನಿಲ್ಲುವದೋ ಆಗಲೆ, ಎಲೈ ಕಮಲನೇತ್ರನೆ, ಸಂಸಾರದಿಂದ ಬಿಡುಗಡೆಯಾದೀತು.

**ನಮೋ ವಿಜ್ಞಾನಮಾತ್ರಾಯ ಸರ್ವಪ್ರತ್ಯಯಹೇತವೇ ।**
**ಪುರುಷೇಶಪ್ರಧಾನಾಯ ಬ್ರಹ್ಮಣೇಽನನ್ತಶಕ್ತಯೇ ॥ 29 ॥**

29. ಚೈತನ್ಯಮಾತ್ರಸ್ವರೂಪನಾದ, ಸರ್ವಜ್ಞಾನಗಳಿಗೂ ಮೂಲನಾಗಿರುವ, ಪುರುಷ, ಈಶ್ವರ, ಪ್ರಧಾನ – ಎಂಬೀ ರೂಪಗಳಿಂದ ಬೆಳಗುತ್ತಿರುವ ಅನಂತಶಕ್ತಿಯುಕ್ತವಾದ ಬ್ರಹ್ಮಸ್ವರೂಪನೆ, ನಿನಗೆ ನಮಸ್ಕಾರ!

**ನಮಸ್ತೇ ವಾಸುದೇವಾಯ ಸರ್ವಭೂತಕ್ಷಯಾಯ ಚ ।**
**ಹೃಷೀಕೇಶ ನಮಸ್ತುಭ್ಯಂ ಪ್ರಪನ್ನಂ ಪಾಹಿ ಮಾಂ ಪ್ರಭೋ ॥ 30 ॥**

30. ಸರ್ವಭೂತಗಳಿಗೂ ವಾಸಸ್ಥಾನವಾಗಿರುವ ವಾಸುದೇವನೆ, ನಿನಗೆ ನಮಸ್ಕಾರ! ಹೃಷೀಕೇಶನೆ, ನಿನಗೆ ನಮಸ್ಕಾರ! ಪ್ರಭುವೆ, ಶರಣಾಗತನಾದ ನನ್ನನ್ನು ಕಾಪಾಡು!

******

## ಮುಚುಕುಂದನು ಮಾಡಿದ ಶ್ರೀಕೃಷ್ಣಸ್ತುತಿ

**(ದಶಮ ಸ್ಕಂಧ, ಉತ್ತರಾರ್ಧ, ಐವತ್ತೊಂದನೆಯ ಅಧ್ಯಾಯ)**

**ಮುಚುಕುನ್ದ ಉವಾಚ –**
**ವಿಮೋಹಿತೋಽಯಂ ಜನ ಈಶ ಮಾಯಯಾ**
**ತ್ವದೀಯಯಾ ತ್ವಾಂ ನ ಭಜತ್ಯನರ್ಥದೃಕ್ ।**
**ಸುಖಾಯ ದುಃಖಪ್ರಭವೇಷು ಸಜ್ಜತೇ**
**ಗೃಹೇಷು ಯೋಷಿತ್ ಪುರುಷಶ್ಚ ವಞ್ಚಿತಃ ॥ 46 ॥**

46. ಮುಚುಕುಂದನು ಅಂದದ್ದೇನೆಂದರೆ: ಈಶ್ವರನೆ, ನಿನ್ನ ಮಾಯೆಯಿಂದ ವಿಮೂಢವಾಗಿರುವ ಈ ಜನವು ನಿನ್ನನ್ನು ಭಜಿಸದೆ ಇರುವದು. ಅನರ್ಥದಲ್ಲಿಯೇ ದೃಷ್ಟಿಯುಳ್ಳದ್ದಾಗಿರುವದು. ದುಃಖಕ್ಕೆ ಕಾರಣವಾಗಿರುವ ಮನೆಯಲ್ಲಿಯೇ ಸ್ತ್ರೀಯೂ

ಪುರುಷನೂ ಆಸಕ್ತನಾಗಿ ಮೋಸಹೋಗುತ್ತಿರುತ್ತಾರೆ.

**ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ**
**ಕಥಞ್ಚಿದವ್ಯಙ್ಗಮಯತ್ನತೋಽನಘ ।**
**ಪಾದಾರವಿನ್ದಂ ನ ಭಜತ್ಯಸನ್ಮತಿ–**
**ರ್ಗೃಹಾನ್ಧಕೂಪೇ ಪತಿತೋ ಯಥಾ ಪಶುಃ ॥ 47 ॥**

47. ಈ ಜನವು ದುರ್ಲಭವಾಗಿರುವ ಮನುಷ್ಯದೇಹವನ್ನು ಅನಾಯಾಸವಾಗಿ ಪಡೆದು ಯಾವ ಅಂಗಗಳೂ ಊನವಾಗದೆ ಇರುವಲ್ಲಿ, ಎಲೈ ಪಾಪರಹಿತನೆ, ದುರ್ಬುದ್ಧಿಯಿಂದ ನಿನ್ನ ಪಾದಾರವಿಂದವನ್ನು ಭಜಿಸದೆ ಮನೆಯೆಂಬ ಕಗ್ಗತ್ತಲೆಯ ಬಾವಿಯಲ್ಲಿ ಪಶುವಿನಂತೆ ಬಿದ್ದಿರುವದಲ್ಲ!

**ಮಮೈಷ ಕಾಲೋಽಜಿತ ನಿಷ್ಫಲೋ ಗತೋ**
**ರಾಜ್ಯಶ್ರಿಯೋನ್ನದ್ಧಮದಸ್ಯ ಭೂಪತೇಃ ।**
**ಮರ್ತ್ಯಾತ್ಮಬುದ್ಧೇಃ ಸುತದಾರಕೋಶಭೂ–**
**ಷ್ವಾಸಜ್ಯಮಾನಸ್ಯ ದುರನ್ತಚಿನ್ತಯಾ ॥ 49 ॥**

**ಕಲೇವರೇಽಸ್ಮಿನ್ ಘಟಕುಡ್ಯಸಂನಿಭೇ**
**ನಿರೂಢಮಾನೋ ನರದೇವ ಇತ್ಯಹಮ್ ।**
**ವೃತೋ ರಥೇಭಾಶ್ವಪದಾತ್ಯನೀಕಪೈ–**
**ರ್ಗಾಂ ಪರ್ಯಟಂಸ್ತ್ವಾಗಣಯನ್ ಸುದುರ್ಮದಃ ॥ 49 ॥**

48–49. ರಾಜನಾಗಿದ್ದು, ರಾಜ್ಯಲಕ್ಷ್ಮಿಯಿಂದುಂಟಾದ ಮದದಿಂದ ಸಾಯುವ ಈ ದೇಹವೇ ನಾನೆಂಬ ಬುದ್ಧಿಯಿಂದ ಮಕ್ಕಳು, ಹೆಂಡತಿ, ಬೊಕ್ಕಸ, ಭೂಮಿ – ಇವುಗಳಲ್ಲಿಯೇ ಆಸಕ್ತವಾಗಿ ಕೊನೆಯಿಲ್ಲದ ಅವುಗಳ ಚಿಂತೆಯಲ್ಲಿಯೇ ಕಾಲಹಾಕುತ್ತಿದ್ದ ನಾನು ಗಡಿಗೆ, ಗೋಡೆ – ಇವುಗಳಂತೆ ಅಚೇತನವಾಗಿರುವ ಈ ದೇಹದಲ್ಲಿ ಬಲವಾಗಿ ನೆಟ್ಟುಕೊಂಡಿರುವ ಅಭಿಮಾನವುಳ್ಳವನಾಗಿ, 'ರಾಜನು' ಎಂದುಕೊಂಡು ರಥ, ಆನೆಗಳು, ಕುದುರೆಗಳು, ಕಾಲಾಳುಗಳು, ಸೇನಾಧಿಪತಿಗಳು – ಇವರಿಂದ ಕೂಡಿಕೊಂಡು ಭೂಲೋಕದಲ್ಲಿ ಸುತ್ತುತ್ತಾ, ನಿನ್ನನ್ನು ಗಣಿಸದೆ ಅತ್ಯಂತದುರ್ಮದನಾಗಿದ್ದೇನು.

**ಪ್ರಮತ್ತಮುಚ್ಚೈರಿತಿ ಕೃತ್ಯಚಿನ್ತಯಾ**
**ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।**
**ತ್ವಮಪ್ರಮತ್ತಃ ಸಹಸಾಽಭಿಪದ್ಯಸೇ**
**ಕ್ಷುಲ್ಲೇಲಿಹಾನೋಽಹಿರಿವಾಖುಮನ್ತಕಃ ॥ 50 ॥**

50. ಹೀಗೆ ಮಾಡಬೇಕು, ಹಾಗೆ ಮಾಡಬೇಕು – ಎಂಬ ಯೋಚನೆಯಿಂದ ಎಚ್ಚರಿಕೆ ತಪ್ಪಿ ವಿಷಯುಗಳಲ್ಲಿ ಅತ್ಯಾಶೆಯನ್ನು ಬೆಳೆಯಿಸಿಕೊಳ್ಳುತ್ತಿರುವ ಅವಿವೇಕಿಯಮೇಲೆ ನೀನು ಅಪ್ರಮತ್ತನಾಗಿದ್ದುಕೊಂಡು ಇಲಿಯನ್ನು ಚಪ್ಪರಿಸುವ ಹಾವಿನಂತೆ – ಯಮನಾಗಿ ಎರಗುತ್ತೀಯೆ.

**ಪುರಾ ರಥೈರ್ಹೇಮಪರಿಷ್ಕೃತೈಶ್ಚರನ್**
**ಮತಙ್ಗಜೈರ್ವಾ ನರದೇವಸಂಜ್ಞಿತಃ ।**
**ಸ ಏವ ಕಾಲೇನ ದುರತ್ಯಯೇನ ತೇ**
**ಕಲೇವರೋ ವಿಟ್ಕ್ರಿಮಿಭಸ್ಮಸಂಜ್ಞಿತಃ ॥ 51 ॥**

51. ಮೊದಲು ಯಾವದು ಚಿನ್ನದಿಂದಲಂಕೃತವಾದ ರಥಗಳ ಮೇಲೆ ಅಥವಾ ಆನೆಗಳ ಮೇಲೆ ಸಂಚರಿಸುತ್ತಾ 'ಮನುಜರೊಡೆಯ' ನೆನಿಸಿಕೊಂಡಿತ್ತೋ ದಾಟಲಶಕ್ಯವಾದ ಕಾಲವಶದಿಂದ ಅದೇ ದೇಹವೇ ಮಲಕ್ರಿಮಿ, ಭಸ್ಮ – ಎಂಬ ಹೆಸರನ್ನು ಪಡೆಯುತ್ತದೆ.

**ನಿರ್ಜಿತ್ಯ ದಿಕ್ಚಕ್ರಮಭೂತವಿಗ್ರಹೋ**
**ವರಾಸನಸ್ಥಃ ಸಮರಾಜವನ್ದಿತಃ ।**
**ಗೃಹೇಷು ಮೈಥುನ್ಯಸುಖೇಷು ಯೋಷಿತಾಂ**
**ಕ್ರೀಡಾಮೃಗಃ ಪೂರುಷ ಈಶ ನೀಯತೇ ॥ 52 ॥**

52. ಪರಮೇಶ್ವರನೆ, ದಿಗಂತಗಳನ್ನೆಲ್ಲ ಜಯಿಸಿ, ಯುದ್ಧವೇ ಇಲ್ಲವೆನಿಸಿದವನಾಗಿ ಶ್ರೇಷ್ಠವಾದ ಸಿಂಹಾಸನದಲ್ಲಿದ್ದು ಸಾಮಂತರಾಜರಿಂದ ನಮಸ್ಕೃತನಾಗಿ ಮೈಥುನಸುಖದಿಂದೊಡಗೂಡಿದ ಮನೆಯಲ್ಲಿ ಮನುಷ್ಯನು ಸ್ತ್ರೀಯರ ಆಟದ ಮೃಗವಾಗಿಬಿಡುತ್ತಾನೆ.

**ಕರೋತಿ ಕರ್ಮಾಣಿ ತಪಃ ಸುನಿಷ್ಠಿತೋ**
**ನಿವೃತ್ತಭೋಗಸ್ತದಪೇಕ್ಷಯಾ ದದತ್ ।**

**ಪುನಶ್ಚ ಭೂಯೇಯಮಹಂ ಸ್ವರಾಡಿತಿ**
**ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ ॥ 53 ॥**

53. ಭೋಗಗಳನ್ನು ಬಿಟ್ಟು ಕರ್ಮಗಳನ್ನು ಮಾಡುತ್ತಾನೆ, ತಪಸ್ಸಿನಲ್ಲಿಯೇ ನಿಂತಿರುತ್ತಾನೆ, ದಾನವನ್ನು ಮಾಡುತ್ತಾನೆ; ಇದರಿಂದ ನನಗೆ ಇನ್ನೂ ಹೆಚ್ಚಿನ ಭೋಗಗಳು ಸಿಕ್ಕಬೇಕು, ಮತ್ತು ಸಮ್ರಾಜನಾಗಬೇಕು – ಎಂಬುದೇ ಅವನ ಇಚ್ಛೆ. ಹೀಗೆ ತೃಷ್ಣೆಯನ್ನು ಹೆಚ್ಚಿಸಿಕೊಂಡವನು ಸುಖಕ್ಕೆ ಅರ್ಹನಾಗುವದಿಲ್ಲ.

**ಭವಾಪವರ್ಗೋ ಭ್ರಮತೋ ಯದಾ ಭವೇ–**
**ಜ್ಜನಸ್ಯ ತರ್ಹ್ಯಚ್ಯುತ ಸತ್ಸಮಾಗಮಃ ।**
**ಸತ್ಸಙ್ಗಮೋ ಯರ್ಹಿ ತದೈವ ಸದ್ಗತೌ**
**ಪರಾವರೇಶೇ ತ್ವಯಿ ಜಾಯತೇ ಮತಿಃ ॥ 54 ॥**

54. ಆದರೆ ಅಚ್ಯುತನೆ, ಸಂಸಾರದಲ್ಲಿ ತೊಳಲುತ್ತಿರುವಾತನಿಗೆ ಅದರಿಂದ ಪಾರಾಗುವ ಸಮಯವು ಬಂದರೆ ಸತ್ಪುರುಷರ ಸಂಗವು ದೊರಕುವದು. ಯಾವಾಗ ಸತ್ಸಂಗವು ದೊರಕುವದೋ ಆಗಲೇ ಸದ್ಗತಿಯಾದ ಪರಾವರೇಶನಾದ ನಿನ್ನಲ್ಲಿ ಮನಸ್ಸು ಸೇರಿಕೊಳ್ಳುವದು.

**ಮನ್ಯೇ ಮಮಾನುಗ್ರಹ ಈಶ ತೇ ಕೃತೋ**
**ರಾಜ್ಯಾನುಬನ್ಧಾಪಗಮೋ ಯದೃಚ್ಛಯಾ ।**
**ಯಃ ಪ್ರಾರ್ಥ್ಯತೇ ಸಾಧುಭಿರೇವ ಚರ್ಯಯಾ**
**ವನಂ ವಿವಿಕ್ಷದ್ಭಿರಖಣ್ಡಭೂಮಿಪೈಃ ॥ 55 ॥**

55. ಎಲೈ ಈಶ್ವರನೆ, ನನಗೆ ರಾಜ್ಯಬಂಧನವು ತನಗೆತಾನೇ ತಪ್ಪಿಹೋದದ್ದು ನೀನು ನನ್ನ ಮೇಲೆ ಮಾಡಿದ ಅನುಗ್ರಹವೆಂದು ಬಗೆಯುತ್ತೇನೆ. ದೊಡ್ಡ ಚಕ್ರವರ್ತಿಗಳು ಕೂಡ, ಏಕನಿಷ್ಠೆಯಿಂದ ತಪಸ್ಸುಮಾಡುವದಕ್ಕೆಂದು ವನಪ್ರವೇಶವನ್ನು ಮಾಡುವದಕ್ಕಾಗಿ ಈ ರಾಜ್ಯಬಂಧದ ಬಿಡುಗಡೆಯನ್ನೇ ಬಯಸುತ್ತಿರುವರಲ್ಲವೆ?

**ನ ಕಾಮಯೇಽನ್ಯಂ ತವ ಪಾದಸೇವನಾ–**
**ದಕಿಞ್ಚನಪ್ರಾರ್ಥ್ಯತಮಾದ್ ವರಂ ವಿಭೋ ।**
**ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ**
**ವೃಣೀತ ಆರ್ಯೋ ಪರಮಾತ್ಮಬನ್ಧನಮ್ ॥ 56 ॥**

56. ವಿಭುವೆ, ನಿನ್ನ ಪಾದಸೇವೆಗಿಂತ ಬೇರೆ ಏನನ್ನೂ ಬೇಡುವದಿಲ್ಲ. ಸರ್ವಾಭಿಮಾನವನ್ನು ತೊರೆದಿರುವ ಮಹಾತ್ಮರು ಆ ವರವನ್ನಲ್ಲವೆ, ಮುಖ್ಯವಾಗಿ ಪ್ರಾರ್ಥಿಸುವವರು? ಹರಿಯೆ, ಮೋಕ್ಷಪ್ರದವಾದ ನಿನ್ನನ್ನು ಆರಾಧಿಸಿ, ಯಾವ ಆರ್ಯನುತಾನೆ, ತನ್ನ ಬಂಧನಕ್ಕೆ ವರವನ್ನು ಕೇಳಿಕೊಂಡಾನು?

**ತಸ್ಮಾದ್ ವಿಸೃಜ್ಯಾಶಿಷ ಈಶ ಸರ್ವತೋ**
**ರಜಸ್ತಮಃಸತ್ತ್ವಗುಣಾನುಬನ್ಧನಾಃ ।**
**ನಿರಞ್ಜನಂ ನಿರ್ಗುಣಮದ್ವಯಂ ಪದಂ**
**ತ್ವಾಂ ಜ್ಞಪ್ತಿಮಾತ್ರಂ ಪುರುಷಂ ವ್ರಜಾಮ್ಯಹಮ್ ॥ 57 ॥**

57. ಆದ್ದರಿಂದ ಎಲೈ ಈಶ್ವರನೆ, ಸತ್ತ್ವರಜಸ್ತಮೋಗುಣಗಳಿಂದಾಗುವ ಬಂಧಕ್ಕೆ ಕಾರಣವಾಗಿರುವ ಎಲ್ಲಾ ಬಯಕೆಗಳನ್ನೂ ಬಿಟ್ಟು, ನಿರಂಜನನೂ ನಿರ್ಗುಣನೂ ಅದ್ವಯನೂ ಆಗಿರುವ ಚೈತನ್ಯಮಾತ್ರನಾಗಿ ಪರಮಪುರುಷನಾದ ನಿನ್ನನ್ನೇ ಶರಣುಹೊಂದಲಿಚ್ಛಿಸುತ್ತೇನೆ.

**ಚಿರಮಿಹ ವೃಜಿನಾರ್ತಸ್ತಪ್ಯಮಾನೋಽನುತಾಪೈ-**
**ರವಿತೃಪಷಡಮಿತ್ರೋಽಲಬ್ಧಶಾನ್ತಿಃ ಕಥಞ್ಚಿತ್ ।**
**ಶರಣದ ಸಮುಪೇತಸ್ತ್ವತ್ಪದಾಬ್ಜಂ ಪರಾತ್ಮ-**
**ನ್ನಭಯಮೃತಮಶೋಕಂ ಪಾಹಿ ಮಾಪನ್ನಮೀಶಃ ॥ 58 ॥**

58. ಬಹುಕಾಲದಿಂದ ಪಾಪದ ಫಲವಾಗಿ ಸಂಕಟಪಡುತ್ತಾ ತಾಪಗಳಿಂದ ಸಂತಪಿಸುತ್ತಿದ್ದ ನಾನು, ಎಂದಿಗೂ ತೃಪ್ತರಾಗದ ಆರು ಶತ್ರುಗಳಿಂದ ಸಂಕಟಪಡುತ್ತಿದ್ದು ಶಾಂತಿಯಿಲ್ಲದೆ, ಎಲೈ ಶರಣದಾತೃವಾದ, ಪರಮಾತ್ಮನೆ, ಭಯರಹಿತವಾಗಿಯೂ ಶೋಕರಹಿತವಾಗಿಯೂ ಇರುವ ನಿನ್ನ ಪಾದಕಮಲವನ್ನು ಹೇಗೋ ಬಂದು ಸೇರಿದೆನು. ಆಪತ್ತಿನಲ್ಲಿರುವ ನನ್ನನ್ನು ಎಲೈ ಈಶನೆ, ನೀನು ಕಾಪಾಡಬೇಕು.

*****

## ಭೂಮಿದೇವಿಯು ಮಾಡಿದ ಭಗವಂತನ ಸ್ತುತಿ

**(ದಶಮ ಸ್ಕಂಧ, ಉತ್ತರಾರ್ಧ, ಐವತ್ತೊಂಬತ್ತನೆಯ ಅಧ್ಯಾಯ)**

**ಭೂಮಿರುವಾಚ –**

**ನಮಸ್ತೇ ದೇವದೇವೇಶ ಶಙ್ಖಚಕ್ರಗದಾಧರ ।**
**ಭಕ್ತೇಚ್ಛೋಪಾತ್ತರೂಪಾಯ ಪರಮಾತ್ಮನ್ ನಮೋಽಸ್ತು ತೇ ॥ 25 ॥**

25. ದೇವದೇವನೆ, ಈಶ್ವರನೆ, ಶಂಖಚಕ್ರಗದೆಗಳನ್ನು ಧರಿಸಿರುವಾತನೆ, ನಿನಗೆ ನಮಸ್ಕಾರ! ಪರಮಾತ್ಮನೆ, ಭಕ್ತರ ಇಚ್ಛೆಯಂತೆ ರೂಪವನ್ನು ಧರಿಸುವಾತನಾದ ನಿನಗೆ ನಮಸ್ಕಾರ!

**ನಮಃ ಪಙ್ಕಜನಾಭಾಯ ನಮಃ ಪಙ್ಕಜಮಾಲಿನೇ ।**
**ನಮಃ ಪಙ್ಕಜನೇತ್ರಾಯ ನಮಸ್ತೇ ಪಙ್ಕಜಾಙ್ಘ್ರಯೇ ॥ 26 ॥**

26. ಕಮಲನಾಭನಿಗೆ ನಮಸ್ಕಾರ! ಕಮಲದ ಮಾಲೆಯನ್ನು ಧರಿಸುವಾತನಿಗೆ ನಮಸ್ಕಾರ! ಕಮಲನೇತ್ರನಿಗೆ ನಮಸ್ಕಾರ! ಕಮಲಪಾದನೆ, ನಿನಗೆ ನಮಸ್ಕಾರ!

**ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ ।**
**ಪುರುಷಾಯಾದಿಬೀಜಾಯ ಪೂರ್ಣಬೋಧಾಯ ತೇ ನಮಃ ॥ 27 ॥**

27. ಭಗವಂತನಾದ ನಿನಗೆ ನಮಸ್ಕಾರ! ವಾಸುದೇವನೆ, ವಿಷ್ಣುವೆ, ಸರ್ವತ್ರಪೂರ್ಣನಾಗಿರುವಾತನೆ, ಮೂಲಕಾರಣನಾದ ಪುರುಷನೆ, ಪೂರ್ಣ ಜ್ಞಾನಸ್ವರೂಪನೆ, ನಿನಗೆ ನಮಸ್ಕಾರ!

**ಅಜಾಯ ಜನಯಿತ್ರೇಽಸ್ಯ ಬ್ರಹ್ಮಣೇಽನನ್ತಶಕ್ತಯೇ ।**
**ಪರಾವರಾತ್ಮನ್ ಭೂತಾತ್ಮನ್ ಪರಮಾತ್ಮನ್ ನಮೋಽಸ್ತು ತೇ ॥ 28 ॥**

28. ಜನ್ಮರಹಿತನೂ ಈ ಜಗತ್ತನ್ನು ಹುಟ್ಟಿಸುವಾತನೂ ಅನಂತವಾದ ಶಕ್ತಿಗಳುಳ್ಳಾತನೂ ಬ್ರಹ್ಮವೂ ಆಗಿರುವಾತನೆ, ಪರಾವರಾತ್ಮನೆ, ಸರ್ವಭೂತಗಳ ಆತ್ಮನೆ, ಪರಮಾತ್ಮನೆ, ನಿನಗೆ ನಮಸ್ಕಾರ!

**ತ್ವಂ ವೈ ಸಿಸೃಕ್ಷೂ ರಜ ಉತ್ಕಟಂ ಪ್ರಭೋ**
**ತಮೋ ನಿರೋಧಾಯ ಬಿಭರ್ಷ್ಯಸಂವೃತಃ ।**

**ಸ್ಥಾನಾಯ ಸತ್ತ್ವಂ ಜಗತೋ ಜಗತ್ಪತೇ**
**ಕಾಲಃ ಪ್ರಧಾನಂ ಪುರುಷೋ ಭವಾನ್ ಪರಃ ॥ 29 ॥**

29. ಪ್ರಭುವೆ, ಯಾವ ಆವರಣವೂ ಇಲ್ಲದೆ ನೀನು ಸೃಷ್ಟಿಮಾಡಲಿರುವಾಗ ತಮಸ್ಸನ್ನು ತೊಲಗಿಸುವದಕ್ಕಾಗಿ ಉತ್ಕಟವಾದ ರಜಸ್ಸನ್ನು ಧರಿಸುವೆ. ಜಗತ್ತಿನ ಸ್ಥಿತಿಗಾಗಿ ಸತ್ತ್ವಗುಣವನ್ನು ಧರಿಸುವೆ. ಜಗತ್ಪತಿಯೆ, ಪರಮಪುರುಷನಾದ ನೀನೇ ಕಾಲವು ಪ್ರಧಾನವೂ ಪುರುಷನೂ ಆಗಿರುವೆ.

**ಅಹಂ ಪಯೋ ಜ್ಯೋತಿರಥಾನಿಲೋ ನಭೋ**
**ಮಾತ್ರಾಣಿ ದೇವಾ ಮನ ಇನ್ದ್ರಿಯಾಣಿ ।**
**ಕರ್ತಾ ಮಹಾನಿತ್ಯಖಿಲಂ ಚರಾಚರಂ**
**ತ್ವಯ್ಯದ್ವಿತೀಯೇ ಭಗವನ್ನಯಂ ಭ್ರಮಃ ॥ 30 ॥**

30. ಭಗವಂತನೆ, ಪೃಥಿವಿಯಾದ ನಾನು, ಅಪ್ಪು, ತೇಜಸ್ಸು, ವಾಯು, ಆಕಾಶ, ತನ್ಮಾತ್ರೆಗಳು, ದೇವತೆಗಳು, ಮನಸ್ಸು, ಇಂದ್ರಿಯಗಳು, ಅಹಂಕಾರ, ಮಹತ್ತತ್ತ್ವ – ಎಂಬೀ ಎಲ್ಲಾ ಚರಾಚರವೂ ಅದ್ವಿತೀಯನಾದ ನಿನ್ನಲ್ಲಿ ತೋರುತ್ತಿರುವ ಭ್ರಾಂತಿಯು.

**[ಯದಾಹಮುದ್ಧೃತಾ ನಾಥ ತ್ವಯಾ ಸೂಕರಮೂರ್ತಿನಾ**
**ತ್ವತ್ಸ್ಪರ್ಶಸಂಭವಃ ಪುತ್ರಸ್ತದಾಯಂ ಮೇಽಭ್ಯಜಾಯತ ।**
**ಸೋಽಯಂ ತ್ವಯೈವ ದತ್ತೋ ಮೇ ತ್ವಯಾ ಚ ವಿನಿಪಾತಿತಃ ॥**

ವರಾಹಮೂರ್ತಿಯಾಗಿ ನೀನು ನನ್ನನ್ನು ಎತ್ತಿತಂದಾಗ ನಿನ್ನ ಸ್ಪರ್ಶದಿಂದ ಈ ಪುತ್ರನು ನನಗೆ ಉಂಟಾದನು. ಇವನನ್ನು ನೀನೇ ನನಗೆ ಕೊಟ್ಟೆ, ನೀನೇ ಇವನನ್ನು ಕೊಂದೇ.]

**ತಸ್ಯಾತ್ಮಜೋಽಯಂ ತವ ಪಾದಪಙ್ಕಜಂ**
**ಭೀತಃ ಪ್ರಪನ್ನಾರ್ತಿಹರೋಪಸಾದಿತಃ ।**
**ತತ್ಪಾಲಯೈನಂ ಕುರು ಹಸ್ತಪಙ್ಕಜಂ**
**ಶಿರಸ್ಯಮುಷ್ಯಾಖಿಲಕಲ್ಮಷಾಪಹಮ್ ॥ 31 ॥**

31. ಶರಣಾಗತರಾದವರ ಸಂಕಟವನ್ನು ಪರಿಹರಿಸುವ ಭಗವಂತನೆ, ಆ

ಭೌಮಾಸುರನ ಮಗನಾದ ಈ ಭಗದತ್ತನು ಭೀತನಾಗಿರುತ್ತಾನೆ. ಇವನನ್ನು ನಿನ್ನ ಚರಣಕಮಲದ ಬಳಿಗೆ ಶರಣೆಂದು ತಂದಿರುತ್ತೇನೆ, ಆದ್ದರಿಂದ ಇವನನ್ನು ಕಾಪಾಡು, ನಿನ್ನ ಸಮಸ್ತಪಾಪಹರವಾದ ಕರಕಮಲವನ್ನು ಇವನ ತಲೆಯಮೇಲೆ ಇಡು.

*****

## ಶ್ರೀರುದ್ರನು ಮಾಡಿದ ಶ್ರೀಕೃಷ್ಣಸ್ತುತಿ

**(ದಶಮ ಸ್ಕಂಧ, ಉತ್ತರಾರ್ಧ, ಅರವತ್ತುಮೂರನೆಯ ಅಧ್ಯಾಯ)**

**ಶ್ರೀ ರುದ್ರ ಉವಾಚ –**
**ತ್ವಂ ಹಿ ಬ್ರಹ್ಮ ಪರಂ ಜ್ಯೋತಿರ್ಗೂಢಂ ಬ್ರಹ್ಮಣಿ ವಾಙ್ಮಯೇ ।**
**ಯಂ ಪಶ್ಯನ್ತ್ಯಮಲಾತ್ಮಾನಃ ಆಕಾಶಮಿವ ಕೇವಲಮ್ ॥ 34 ॥**

34. ಶ್ರೀರುದ್ರನಿಂತೆಂದನು: ಭಗವಂತನೆ, ಶಬ್ದಬ್ರಹ್ಮವಾದ ವೇದದಲ್ಲಿ ಅಡಗಿರುವ ಪರಮಜ್ಯೋತಿಯಾದ ಬ್ರಹ್ಮವು ನೀನೇ. ವ್ಯವಹಾರದೃಷ್ಟಿಯಿಂದ ಅದ್ವಿತೀಯವಾಗಿರುವ ಆಕಾಶದಂತೆ (ಸರ್ವಗತನೂ ನಿತ್ಯನಿರ್ಲೇಪನೂ ಆಗಿ) ಇರುವ ನಿನ್ನನ್ನು ನಿರ್ಮಲಾಂತಃಕರಣವುಳ್ಳವರು (ಮಾತ್ರ) ಕಾಣಬಲ್ಲರು.

**ನಾಭಿರ್ನಭೋಽಗ್ನಿರ್ಮುಖಮಮ್ಬು ರೇತೋ**
**ದ್ಯೌಃ ಶೀರ್ಷಮಾಶಾ ಶ್ರುತಿರಙ್ಘ್ರಿರುರ್ವೀ ।**
**ಚನ್ದ್ರೋಮನೋ ಯಸ್ಯ ದೃಗರ್ಕ ಆತ್ಮಾ**
**ಅಹಂ ಸಮುದ್ರೋ ಜಠರಂ ಭುಜೇನ್ದ್ರಃ ॥ 35 ॥**
**ರೋಮಾಣಿ ಯಸ್ಯೌಷಧಯೋಽಮ್ಬುವಾಹಾಃ**
**ಕೇಶಾ ವಿರಿಞ್ಚೋ ಧಿಷಣಾ ವಿಸರ್ಗಃ ।**
**ಪ್ರಜಾಪತಿರ್ಹೃದಯಂ ಯಸ್ಯ ಧರ್ಮಃ**
**ಸ ವೈ ಭವಾನ್ ಪುರುಷೋ ಲೋಕಕಲ್ಪಃ ॥ 36 ॥**

35–36. ಆಕಾಶವೇ ನಿನ್ನ ಹೊಕ್ಕಳು, ಅಗ್ನಿಯೇ ಮುಖವು, ಜಲವೇ ರೇತಸ್ಸು, ಸ್ವರ್ಗವೇ ಶಿರಸ್ಸು, ದಿಕ್ಕೇ ಕಿವಿ, ಭೂಮಿಯೇ ಕಾಲು, ಚಂದ್ರನೇ ಮನಸ್ಸು, ಸೂರ್ಯನೇ ಕಣ್ಣು, ನಾನೇ ನಿನ್ನ ಆತ್ಮನು (ಅಹಂಕಾರವು), ಸಮುದ್ರವೇ ಹೊಟ್ಟೆ, ಇಂದ್ರನೇ ಭುಜವು, ಗಿಡಮರಗಳು ರೋಮಗಳು, ಮೋಡಗಳು

ತಲೆಕೂದಲುಗಳು, ಬ್ರಹ್ಮನೇ ಬುದ್ಧಿ, ಪ್ರಜಾಪತಿಯೇ ವಿಸರ್ಜನೇಂದ್ರಿಯವು, ಧರ್ಮವೇ ಹೃದಯ – ಹೀಗೆ ಸರ್ವಲೋಕಾತ್ಮನಾದ ಪುರುಷನೇ ನೀನು.

**ತವಾವತಾರೋಽಯಮಕುಣ್ಠಧಾಮನ್**
**ಧರ್ಮಸ್ಯ ಗುಪ್ತ್ಯೈ ಜಗತೋ ಭವಾಯ ।**
**ವಯಂ ಚ ಸರ್ವೇ ಭವತಾನುಭಾವಿತಾ**
**ವಿಭಾವಯಾಮೋ ಭುವನಾನಿ ಸಪ್ತ ॥ 37 ॥**

37. ಸ್ವಲ್ಪವೂ ಕುಂಠಿತವಾಗದ ತೇಜಸ್ಸುಳ್ಳಾತನೆ, ಈ ನಿನ್ನ ಅವತಾರವು ಧರ್ಮದ ರಕ್ಷಣೆಗಾಗಿಯೂ ಜಗತ್ತಿನ ಅಭ್ಯುದಯಕ್ಕಾಗಿಯೂ ಇದೆ. ನಾವೆಲ್ಲರೂ ನಿನ್ನಿಂದ ಅನುಗ್ರಹೀತನಾಗಿ ಏಳು ಲೋಕಗಳನ್ನೂ ನೋಡಿಕೊಳ್ಳುತ್ತಿರುವೆವು.

**ತ್ವಮೇಕ ಆದ್ಯಃ ಪುರುಷೋಽದ್ವಿತೀಯ–**
**ಸ್ತುರ್ಯಃ ಸ್ವದೃಗ್ಘೇತುರಹೇತುಕರೀಶಃ ।**
**ಪ್ರತೀಯಸೇಽಥಾಪಿ ಯಥಾ ವಿಕಾರಂ**
**ಸ್ವಮಾಯಯಾ ಸರ್ವಗುಣಪ್ರಸಿದ್ಧ್ಯೈ ॥ 38 ॥**

38. ನೀನು ಏಕನೂ ಎರಡನೆಯದಿಲ್ಲದವನೂ ಆಗಿರುವ ಆದ್ಯಪುರುಷನು, ಜಾಗ್ರದಾದ್ಯವಸ್ಥಾರಹಿತನಾದ ತುರೀಯಾತ್ಮನು, ಸ್ವಪ್ರಕಾಶನು, ಸರ್ವಕ್ಕೂ ಕಾರಣನು, ಕಾರಣರಹಿತನು, ಈಶ್ವರನು. ಹೀಗಿದ್ದರೂ ಸತ್ತ್ವಾದಿಗುಣಗಳನ್ನು ತೋರ್ಪಡಿಸುವದಕ್ಕಾಗಿ ನಿನ್ನ ಮಾಯೆಯಿಂದ ಆಯಾ ಕಾರ್ಯವಸ್ತುವನ್ನನು ಸರಿಸಿಕೊಂಡು ಕಾಣುತ್ತಿರುವೆ.

**ಯಥೈವ ಸೂರ್ಯಃ ಪಿಹಿತಶ್ಛಾಯಯಾ ಸ್ವಯಂ**
**ಛಾಯಾಂ ಚ ರೂಪಾಣಿ ಚ ಸಂಚಕಾಸ್ತಿ ।**
**ಏವಂ ಗುಣೇನಾಪಿಹಿತೋ ಗುಣಾಂಸ್ತ್ವ–**
**ಮಾತ್ಮಪ್ರದೀಪೋ ಗುಣಿನಶ್ಚ ಭೂಮನ್ ॥ 39 ॥**

39. ಹೇಗೆ ಸೂರ್ಯನು ತನ್ನ ಛಾಯೆಯಾದ ಮೋಡದಿಂದ ಮರೆಯಾಗಿದ್ದರೂ ಆ ಛಾಯೆಯನ್ನೂ ವಸ್ತುಗಳ ರೂಪಗಳನ್ನೂ ಬೆಳಗುತ್ತಿರುವನೋ, ಹಾಗೆಯೇ ಸ್ವಯಂಪ್ರಕಾಶನಾದ ನೀನು ಸತ್ತ್ವಾದಿಗುಣಗಳಿಂದ ಮರೆಯಾಗಿದ್ದರೂ ಗುಣಗಳನ್ನೂ ಆ ಗುಣಗಳುಳ್ಳ ಚಿದಚಿದ್ವಸ್ತುಗಳನ್ನೂ ಬೆಳಗುತ್ತಿರುವೆ!

**ಯನ್ಮಾಯಾಮೋಹಿತಧಿಯಃ ಪುತ್ರದಾರಗೃಹಾದಿಷು ।**
**ಉನ್ಮಜ್ಜನ್ತಿ ನಿಮಜ್ಜನ್ತಿ ಪ್ರಸಕ್ತಾ ವೃಜಿನಾರ್ಣವೇ ॥ 40 ॥**
**ದೇವದತ್ತಮಿಮಂ ಲಬ್ಧ್ವಾ ನೃಲೋಕಮಜಿತೇನ್ದ್ರಿಯಃ ।**
**ಯೋ ನಾದ್ರಿಯೇತ ತ್ವತ್ಪಾದೌ ಸ ಶೋಚ್ಯೋಹ್ಯಾತ್ಮವಞ್ಚಕಃ ॥ 41 ॥**

40–41. ಯಾವ ನಿನ್ನ ಮಾಯೆಯಿಂದ ಭ್ರಮೆಗೊಂಡಿರುವ ಬುದ್ಧಿಯುಳ್ಳ ಜನರು ಮಕ್ಕಳು, ಹೆಂಡಿರು, ಮನೆ – ಮುಂತಾದವುಗಳಲ್ಲಿ ಆಸಕ್ತಿಯುಳ್ಳವರಾಗಿ ಸಂಸಾರವೆಂಬ ಪಾಪಸಮುದ್ರದಲ್ಲಿ ಮುಳುಗಿ ಏಳುತ್ತಿರುವರೋ ಅಂಥ ಈಶ್ವರನಾದ ನೀನು ಕೊಟ್ಟಿರುವ ಈ ಮನುಷ್ಯ ಜನ್ಮವನ್ನು ಪಡೆದೂ ಯಾವನು ಇಂದ್ರಿಯನಿಗ್ರಹವನ್ನು ಮಾಡಿಕೊಳ್ಳದೆ ನಿನ್ನ ಪಾದಗಳನ್ನು ಸೇವಿಸದೆ ಇರುವನೋ ಅಂಥ ಆತ್ಮವಂಚಕನು ಶೋಚನೀಯನು.

**ಯಸ್ತ್ವಾಂ ವಿಸೃಜತೇ ಮರ್ತ್ಯ ಆತ್ಮಾನಂ ಪ್ರಿಯಮೀಶ್ವರಮ್ ।**
**ವಿಪರ್ಯಯೇನ್ದ್ರಿಯಾರ್ಥಾರ್ಥಂ ವಿಷಮತ್ತ್ಯಮೃತಂ ತ್ಯಜನ್ ॥ 42 ॥**

42. ಯಾವ ಮರ್ತ್ಯನು ಎಲ್ಲರಿಗೂ ಪ್ರಿಯನಾಗಿರುವ ಆತ್ಮನಾದ ನಿನ್ನನ್ನು, ಅದಕ್ಕಿಂತ ವಿಪರೀತವಾಗಿ (ಅಪ್ರಿಯವಾಗಿ)ರುವ ಇಂದ್ರಿಯಾರ್ಥ ಗಳಿಗಾಗಿ ಕೈಬಿಡುವನೋ, ಅವನು ಅಮೃತವನ್ನು ಬಿಟ್ಟು ವಿಷವನ್ನೇ ಭುಂಜಿಸಿದವನಾಗುವನು.

*****

## ಶ್ರೀಕೃಷ್ಣನನ್ನು ಕುರಿತು ಮುನಿಗಳ ಮಾತು

(ದಶಮ ಸ್ಕಂಧ, ಉತ್ತರಾರ್ಧ, ಎಂಭತ್ತನಾಲ್ಕನೆಯ ಅಧ್ಯಾಯ)

**ಯನ್ಮಾಯಯಾ ತತ್ತ್ವವಿದುತ್ತಮಾ ವಯಂ**
**ವಿಮೋಹಿತಾ ವಿಶ್ವಸೃಜಾಮಧೀಶ್ವರಾಃ ।**
**ಯದೀಶಿತವ್ಯಾಯತಿ ಗೂಢ ಈಹಯಾ**
**ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಮ್ ॥ 16 ॥**

16. ಶ್ರೀಕೃಷ್ಣನನ್ನು ಕುರಿತು ಮುನಿಗಳಿಂತೆಂದರು: ಯಾವ ನಿನ್ನ ಮಾಯೆಯಿಂದ ತತ್ತ್ವಜ್ಞಾನಿಗಳಲ್ಲಿ ಉತ್ತಮರೋ ಪ್ರಜಾಪತಿಗಳ ಅಧೀಶ್ವರರೂ

ಆಗಿರುವ ನಾವು ಮೋಹಿತವಾಗಿರುವೆವೋ ಅಂಥ ನೀನು ನಿನ್ನ ಈಶ್ವರತ್ವನ್ನು ಮುಚ್ಚಿಕೊಂಡು ಸಾಮಾನ್ಯಜೀವರಂತೆ ಆಚರಿಸುತ್ತಿರುವೆ. ಆಹಾ! ಭಗವಂತನಾದ ನಿನ್ನ ಲೀಲೆಯು ವಿಚಿತ್ರವಾಗಿರುತ್ತದೆ.

**ಅನೀಹ ಏತದ್ ಬಹುಧೈಕ ಆತ್ಮನಾ**
**ಸೃಜತ್ಯವತ್ಯತ್ತಿ ನ ಬಧ್ಯತೇ ಯಥಾ ।**
**ಭೌಮೈರ್ಹಿ ಭೂಮಿರ್ಬಹುನಾಮರೂಪಿಣೀ**
**ಅಹೋ ವಿಭೂಮ್ನಶ್ಚರಿತಂ ವಿಡಮ್ಬನಮ್ ॥ 17 ॥**

17. ನೀನು ನಿಷ್ಕ್ರಿಯನಾಗಿಯೇ ಇದ್ದು – ಭೂಮಿಯು ತನ್ನ ವಿಕಾರಗಳಿಂದ ಅನೇಕ ರೂಪಗಳನ್ನು ಧರಿಸುತ್ತಿದ್ದರೂ ತಾನು ಒಂದೇ ಆಗಿರುವಂತೆ – ಒಬ್ಬನೇ ನಾನಾರೂಪನಾಗಿ ಈ ಜಗತ್ತನ್ನು ಸೃಷ್ಟಿಮಾಡುತ್ತಲೂ, ಕಾಪಾಡುತ್ತಲೂ, ಸಂಹರಿಸುತ್ತಲೂ ಇದ್ದುಕೊಂಡು ಈ ಸೃಷ್ಟ್ಯಾದಿಗಳಿಂದ ಬದ್ಧನಾಗದೆ ಇರುವೆ. ಮಹಾಮಹಿಮನಾದ ನಿನ್ನ ಈ ನಡತೆಯು ಎಂಥ ವಿಚಿತ್ರಲೀಲೆಯು!

**ಅಥಾಪಿ ಕಾಲೇ ಸ್ವಜನಾಭಿಗುಪ್ತಯೇ**
**ಬಿಭರ್ಷಿ ಸತ್ತ್ವಂ ಖಲನಿಗ್ರಹಾಯ ।**
**ಸ್ವಲೀಲಯಾ ವೇದಪಥಂ ಸನಾತನಂ**
**ವರ್ಣಾಶ್ರಮಾತ್ಮಾ ಪುರುಷಃ ಪರೋ ಭವಾನ್ ॥ 18 ॥**

18. ಇಂಥ ಮಹಾಮಹಿಮನಾಗಿದ್ದರೂ ನೀನು ಭಕ್ತರನ್ನು ಕಾಪಾಡುವದಕ್ಕೂ ದುಷ್ಟರನ್ನು ನಿಗ್ರಹಿಸುವದಕ್ಕೂ ಸತ್ತ್ವಪ್ರಧಾನವಾದ ದೇಹವನ್ನು ನಿನ್ನ ಲೀಲಾಮಾತ್ರದಿಂದ ಧರಿಸುವೆ, ವರ್ಣಾಶ್ರಮರೂಪನಾದ ಪರಮಪುರುಷನೇ ನೀನಾಗಿದ್ದು ಸನಾತನವಾದ ವೇದಮಾರ್ಗವನ್ನು ಕಾಪಾಡುತ್ತಿರುವೆ.

**ಬ್ರಹ್ಮ ತೇ ಹೃದಯಂ ಶುಕ್ಲಂ ತಪಃಸ್ವಾಧ್ಯಾಯಸಂಯಮೈಃ ।**
**ಯತ್ರೋಪಲಬ್ಧಂ ಸದ್ವ್ಯಕ್ತಮವ್ಯಕ್ತಂ ಚ ತತಃ ಪರಮ್ ॥ 19 ॥**

19. ವೇದವು ನಿನ್ನ ಶುದ್ಧವಾದ ಹೃದಯವು; ತಪಸ್ಸು, ಅಧ್ಯಯನ, ಸಂಯಮ (ಧ್ಯಾನಧಾರಣಸಮಾಧಿಗಳು) – ಇವುಗಳ ಮೂಲಕ ಅವರಲ್ಲಿ ನಿನ್ನ ವ್ಯಕ್ತ, ಅವ್ಯಕ್ತ – ಈ ರೂಪಗಳೂ ಅವುಗಳಿಗಿಂತಲೂ ಆಚಿನ ಪರಮಾರ್ಥರೂಪವೂ ಕಂಡುಬರುತ್ತದೆ.

**ತಸ್ಮಾದ್ ಬ್ರಹ್ಮಕುಲಂ ಬ್ರಹ್ಮನ್ ಶಾಸ್ತ್ರಯೋನೇಸ್ತ್ವಮಾತ್ಮನಃ ।**
**ಸಭಾಜಯಸಿ ಸದ್ಧಾಮ ತದ್ಬ್ರಹ್ಮಣ್ಯಾಗ್ರಣೀರ್ಭವಾನ್ ॥ 20 ॥**

20. ಪರಬ್ರಹ್ಮಸ್ವರೂಪನೆ, ಆದ್ದರಿಂದ ಶಾಸ್ತ್ರಪ್ರಮಾಣಕನಾದ ನಿನ್ನ ಉತ್ತಮಸ್ಥಾನವಾದ ಬ್ರಾಹ್ಮಣಕುಲವನ್ನು ನೀನು ಗೌರವಿಸುತ್ತಿದ್ದೀಯೆ. ಆದ್ದರಿಂದ ನೀನು ಬ್ರಾಹ್ಮಣಾಗ್ರಗಣ್ಯನಾಗಿರುವೆ.

**ಅದ್ಯ ನೋ ಜನ್ಮಸಾಫಲ್ಯಂ ವಿದ್ಯಾಯಾಸ್ತಪಸೋ ದೃಶಃ ।**
**ತ್ವಯಾ ಸಂಗಮ್ಯ ಸದ್ಗತ್ಯಾ ಯದನ್ತಃಶ್ರೇಯಸಾಂ ಪರಃ ॥ 21 ॥**

21. ಇಂದು ನಿನ್ನ ಸಮಾಗಮವಾದ್ದರಿಂದ ನಮ್ಮ ಜನ್ಮ, ವಿದ್ಯೆ, ತಪಸ್ಸು, ಜ್ಞಾನ – ಇವುಗಳಿಗೆ ಸಾರ್ಥಕ್ಯವುಂಟಾಯಿತು. ಏಕೆಂದರೆ ಇದೇ ಶ್ರೇಯಸ್ಸುಗಳಿಗೆಲ್ಲ ಕೊನೆ.

**ನಮಸ್ತಸ್ಮೈ ಭಗವತೇ ಕೃಷ್ಣಾಯಾಕುಣ್ಠವೇಧಸೇ ।**
**ಸ್ವಯೋಗಮಾಯಯಾಚ್ಛನ್ನಮಹಿಮ್ನೇ ಪರಮಾತ್ಮನೇ ॥ 22 ॥**

22. ಸ್ವಲ್ಪವೂ ತಡೆಯಿಲ್ಲದ ಜ್ಞಾನವುಳ್ಳ ಕೃಷ್ಣನಾದ ಆ ಭಗವಂತನಿಗೆ ನಮಸ್ಕಾರ! ತನ್ನ ಯೋಗಮಾಯೆಯಿಂದ ಮುಚ್ಚಿಹೋಗಿರುವ ಮಹಿಮೆಯುಳ್ಳ ಪರಮಾತ್ಮನೆ, ನಿನಗೆ ನಮಸ್ಕಾರ!

**ನ ಯಂ ವಿದನ್ತ್ಯಮೀ ಭೂಪಾಃ ಏಕಾರಾಮಾಶ್ಚ ವೃಷ್ಣಯಃ ।**
**ಮಾಯಾಜವನಿಕಾಚ್ಛನ್ನಮಾತ್ಮಾನಂ ಕಾಲಮೀಶ್ವರಮ್ ॥ 23 ॥**

23. ಈ ಸಭೆಯಲ್ಲಿರುವ ರಾಜರೂ ನಿನ್ನೊಡನೆಯೇ ಆಡಿಕೊಂಡಿರುವ ವೃಷ್ಣಿಕುಲಜರೂ ಮಾಯೆ ಎಂಬ ತೆರೆಯಿಂದ ಮುಚ್ಚಿರುವ, ಪರಮಾತ್ಮನೂ ಕಾಲನೂ ಈಶ್ವರನೂ ಆದ ನಿನ್ನನ್ನು ಅರಿತುಕೊಳ್ಳಲಾರದೆ ಇರುವರು.

*****

## ಕರ್ಮದಿಂದಲೇ ಕರ್ಮವನ್ನು ನಾಶಗೊಳಿಸುವ ಬಗೆ

**(ದಶಮ ಸ್ಕಂಧ, ಉತ್ತರಾರ್ಧ, ಎಂಭತ್ತನಾಲ್ಕನೆಯ ಅಧ್ಯಾಯ)**

**ಕರ್ಮಣಾ ಕರ್ಮನಿರ್ಹಾರ ಏಷ ಸಾಧು ನಿರೂಪಿತಃ ।**
**ಯಚ್ಛ್ರದ್ಧಯಾ ಯಜೇದ್ವಿಷ್ಣುಂ ಸರ್ವಯಜ್ಞೇಶ್ವರಂ ಮಖೈಃ ॥ 35 ॥**

35. ಮುನಿಗಳು ವಸುದೇವನನ್ನು ಕುರಿತು ಇಂತೆಂದರು: ಕರ್ಮದಿಂದಲೇ ಕರ್ಮವನ್ನು ನಾಶಗೊಳಿಸುವ ಬಗೆಯು ಇದೇ ಎಂದು ಬಲ್ಲವರು ಗೊತ್ತುಪಡಿಸಿರುತ್ತಾರೆ. ಸರ್ವಯಜ್ಞಗಳಿಗೂ ಒಡೆಯನಾಗಿರುವ ವಿಷ್ಣುವನ್ನು ಯಜ್ಞಗಳ ಮೂಲಕವಾಗಿ ಶ್ರದ್ಧೆಯಿಂದ ಆರಾಧಿಸುವದೇ ಆ ಉಪಾಯವು.

**ಚಿತ್ತಸ್ಯೋಪಶಮೋಽಯಂ ವೈ ಕವಿಭಿಃ ಶಾಸ್ತ್ರಚಕ್ಷುಷಾ ।**
**ದರ್ಶಿತಃ ಸುಗಮೋ ಯೋಗೋ ಧರ್ಮಶ್ಚಾಽಽತ್ಮಮುದಾವಹಃ ॥ 36 ॥**

36. ಚಿತ್ತವನ್ನು ಉಪಶಾಂತಿಗೊಳಿಸುವದಕ್ಕೆ ಇದೇ ಉಪಾಯವು, ಇದೇ ಸುಲಭವಾದ ಯೋಗವು, ಮತ್ತು ಅಂತಃಕರಣಕ್ಕೆ ಆನಂದವನ್ನು ತರುವ ಸಾಧನವು ಎಂದು ಶಾಸ್ತ್ರಚಕ್ಷುಸ್ಸಿನಿಂದ ನೋಡಿ ದೂರದರ್ಶಿಗಳಾದವರು ತಿಳಿಸಿಕೊಟ್ಟಿರುತ್ತಾರೆ.

**ಅಯಂ ಸ್ವಸ್ತ್ಯಯನಃ ಪನ್ಥಾ ದ್ವಿಜಾತೇರ್ಗೃಹಮೇಧಿನಃ ।**
**ಯಚ್ಛ್ರದ್ಧಯಾಽಽಪ್ತವಿತ್ತೇನ ಶುಕ್ಲೇನೇಜ್ಯೇತ ಪೂರುಷಃ ॥ 37 ॥**

37. ನ್ಯಾಯಾರ್ಜಿತವಾದ ಧನದಿಂದ ಶ್ರದ್ಧಾಪೂರ್ವಕವಾಗಿ ಪರಮಪುರುಷನಾದ ಭಗವಂತನನ್ನು ಆರಾಧಿಸುವದೇ ದ್ವಿಜನಾದ ಗೃಹಸ್ಥನಿಗೆ ಕಲ್ಯಾಣಕ್ಕೆ ಮಾರ್ಗವಾಗಿರುತ್ತದೆ.

**ವಿತ್ತೈಷಣಾಂ ಯಜ್ಞದಾನೈರ್ಗೃಹೈರ್ದಾರಸುತೈಷಣಾಮ್ ।**
**ಆತ್ಮಲೋಕೈಷಣಾಂ ದೇವ ಕಾಲೇನ ವಿಸೃಜೇದ್ ಬುಧಃ ।**
**ಗ್ರಾಮೇ ತ್ಯಕ್ತೈಷಣಾಃ ಸರ್ವೇ ಯಯುರ್ಧೀರಾಸ್ತಪೋವನಮ್ ॥ 38 ॥**

38. ವಸುದೇವನೆ, ವಿವೇಕಿಯಾದವನು ವಿತ್ತೈಷಣೆಯನ್ನು ಯಜ್ಞಗಳಿಂದಲೂ ದಾನಗಳಿಂದಲೂ, ದಾರೈಷಣೆಯನ್ನೂ ಪುತ್ರೈಷಣೆಯನ್ನೂ ಗೃಹಸ್ಥನಾದವನಿಗೆ ಯೋಗ್ಯವಾದ ಭೋಗಗಳಿಂದಲೂ, ಕಾಲಕ್ರಮದಿಂದ ಲೋಕೈಷಣೆಯನ್ನೂ ತ್ಯಾಗಮಾಡಬೇಕು. ಹೀಗೆ ವಿವೇಕಿಗಳಾದವರು ಊರಲ್ಲಿ ತಮ್ಮ ಮನೆಯಲ್ಲಿ ಇದ್ದುಕೊಂಡೇ ಏಷಣಾತ್ರಯವನ್ನು ತ್ಯಜಿಸಿ ತಪೋವನಕ್ಕೆ ತೆರಳಿರುತ್ತಾರೆ.

**ಋಣೈಸ್ತ್ರಿಭಿರ್ದ್ವಿಜೋ ಜಾತೋ ದೇವರ್ಷಿಪಿತೃಣಾಂ ಪ್ರಭೋ ।**
**ಯಜ್ಞಾಧ್ಯಯನಪುತ್ರೈಸ್ತಾನ್ಯನಿಸ್ತೀರ್ಯ ತ್ಯಜನ್ ಪತೇತ್ ॥ 39 ॥**

39. ದೇವಋಣ, ಋಷಿಋಣ, ಪಿತೃಋಣ – ಎಂಬ ಮೂರು ಋಣಗಳಿಂದೊಡಗೂಡಿಯೇ ದ್ವಿಜನಾದವನು ಹುಟ್ಟಿರುತ್ತಾನೆ. ಯಜ್ಞದಿಂದ ದೇವಋಣವನ್ನೂ ಅಧ್ಯಯನದಿಂದ ಋಷಿಋಣವನ್ನೂ ಪುತ್ರರನ್ನು ಪಡೆಯುವದರಿಂದ ಪಿತೃಋಣಗಳನ್ನೂ ತೀರಿಸದೆ ಸಂನ್ಯಾಸವನ್ನು ಮಾಡುವಾತನು ಪತಿತನಾಗುವನು.

**ತ್ವಂ ತ್ವದ್ಯ ಮುಕ್ತೋ ದ್ವಾಭ್ಯಾಂ ವೈ ಋಷಿಪಿತ್ರೋರ್ಮಹಾಮತೇ ।**
**ಯಜ್ಞೈರ್ದೇವರ್ಣಮುನ್ಮುಚ್ಯ ನಿರ್ಋಣೋಽಶರಣೋ ಭವ ॥ 40 ॥**

40. ವಸುದೇವನೆ, ನೀನು ಈಗ ಋಷಿಋಣ, ಪಿತೃಋಣ – ಎರಡರಿಂದ ಮುಕ್ತನಾಗಿರುವೆ. ಇನ್ನು ಯಜ್ಞಗಳಿಂದ ದೇವಋಣವನ್ನು ತೀರಿಸಿಕೊಂಡು ಋಣಶೂನ್ಯನಾಗಿ ವಿರಕ್ತನಾಗು.

*****

## ವೇದಗಳು ಮಾಡಿದ ಭಗವಂತನ ಸ್ತುತಿ

(ದಶಮ ಸ್ಕಂಧ, ಉತ್ತರಾರ್ಧ, ಎಂಭತ್ತೇಳನೆಯ ಅಧ್ಯಾಯ)

**ಶ್ರುತಯ ಊಚುಃ –**

**ಜಯ ಜಯ ಜಹ್ಯಜಾಮಜಿತ ದೋಷಗೃಭೀತಗುಣಾಂ**
**ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।**
**ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ**
**ಕ್ವಚಿದಜಯಾಽತ್ಮನಾ ಚ ಚರತೋಽನುಚರೇನ್ನಿಗಮಃ ॥ 14 ॥**

14. ಶ್ರುತಿಗಳಿಂತೆಂದವು: ಅಜಿತನಾದ ಪರಮಾತ್ಮನೆ, ಜಯಜಯ! ಸ್ಥಾವರಜಂಗಮಶರೀರಿಗಳ ಅವಿದ್ಯೆಯನ್ನು ನಾಶಗೊಳಿಸು! ಈ ಅವಿದ್ಯೆಯ ದೋಷಕ್ಕೆಂದೇ ಗುಣಗಳನ್ನು ಧರಿಸಿಕೊಂಡಿರುತ್ತದೆ. ನೀನು ಸ್ವಭಾವದಿಂದಲೇ ಸಮಸ್ತೈಶ್ವರ್ಯವನ್ನೂ ಪಡೆದಿರುವವನಾಗಿರುವೆಯಲ್ಲವೆ? ಎಲ್ಲರ ಶಕ್ತಿಗಳನ್ನೂ

ಉದ್ಭೋಧಗೊಳಿಸುವಾತನಲ್ಲವೆ? ಕೆಲವು ವೇಳೆ ಮಾಯೆಯಿಂದೊಡಗೂಡಿ ದ್ದರೂ ನಿನ್ನ ನಿತ್ಯಸ್ವಭಾವವನ್ನು ಬಿಡದಿರುವ ನಿನ್ನನ್ನು ವೇದವು ಹೀಗಿರುವ ನೆಂದು ಪ್ರತಿಪಾದಿಸುತ್ತಿದೆ.

**ಬೃಹದುಪಲಬ್ಧಮೇತದವಯನ್ತ್ಯವಶೇಷತಯಾ**
**ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾऽವಿಕೃತಾತ್ ।**
**ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ**
**ಕಥಮಯಥಾ ಭವನ್ತಿ ಭುವಿ ದತ್ತಪದಾನಿ ನೃಣಾಮ್ ॥ 15 ॥**

15. ಈ ಕಾಣುತ್ತಿರುವದೆಲ್ಲವೂ ಮಣ್ಣಿನಲ್ಲಿ ಘಟಾದಿಕಾರ್ಯಗಳ ಉತ್ಪತ್ತಿಪ್ರಲಯಗಳಾಗುತ್ತಿರುವಂತೆ, ನಿರ್ವಿಕಾರವಾದ ಯಾವ ಬ್ರಹ್ಮದಿಂದ ಉತ್ಪತ್ತಿಪ್ರಯಲಯಗಳಾಗುತ್ತಿರುವವೋ ಆ ಬ್ರಹ್ಮವಾಗಿಯೇ ಉಳಿದುಕೊಳ್ಳುವ ದರಿಂದ ಈಗಲೂ ಬ್ರಹ್ಮವೇ – ಎಂದು ವೇದಗಳು ತಿಳಿಯುತ್ತಿವೆ. ಆದ್ದರಿಂದ ಋಷಿಗಳು ತಮ್ಮ ಮನಸ್ಸಿನ ಮತ್ತು ವಾಕ್ಕಿನ ವ್ಯಾಪಾರವನ್ನು ನಿನ್ನಲ್ಲಿಯೇ ನಡೆಯಿಸುತ್ತಿರುವರು. ನೆಲದಮೇಲೆ ಇಟ್ಟ ಜನರ ಹೆಜ್ಜೆಗಳು ನೆಲವನ್ನು ಬಿಟ್ಟು ಮತ್ತೆಲ್ಲಿದ್ದಾವು?

**ಇತಿ ತವ ಸೂರಯಸ್ತ್ರ್ಯಧಿಪತೇऽಖಿಲಲೋಕಮಲ–**
**ಕ್ಷಪಣಕಥಾऽಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ ।**
**ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ**
**ಪರಮ ಭಜನ್ತಿ ಯೇ ಪದಮಜಸ್ರಸುಖಾನುಭವಮ್ ॥ 16 ॥**

16. ತ್ರಿಗುಣಾಧಿಪತಿಯೆ, ಹೀಗೆ ನೀನೇ ಪರಮಾರ್ಥವೆಂಬ ಕಾರಣದಿಂದ ವಿವೇಕಿಗಳಾದವರು ಸಮಸ್ತಜನರ ಪಾಪವನ್ನೂ ಕಳೆಯುವ ನಿನ್ನ ಕಥಾಮೃತಸಾಗರದಲ್ಲಿ ಮುಳುಗಿ ತಾಪಗಳನ್ನು ಕಳೆದುಕೊಳ್ಳುತ್ತಾರೆ. ಹೀಗಿರಲು, ಯಾರು ಆತ್ಮಸ್ವರೂಪಜ್ಞಾನದಿಂದಲೇ ಮನೋಗುಣಗಳಾದ ರಾಗಾದಿಗಳನ್ನೂ, ಕಾಲಕೃತವಾದ ಜರಾವ್ಯಾಧ್ಯಾದಿಗಳನ್ನೂ ಹೋಗಲಾಡಿಸಿಕೊಂಡು ನಿನ್ನ ನಿತ್ಯಾನಂದಾನುಭವದ ಪದವನ್ನೇ ಸೇವಿಸುವರೋ ಅವರು ಸಕಲ ದುಃಖಗಳನ್ನೂ ನೀಗಿಕೊಳ್ಳುವರೆಂದು ಹೇಳುವದೇನಿದೆ?

**ದೃತಯ ಇವ ಶ್ವಸನ್ತ್ಯಸುಭೃತೋ ಯದಿ ತೇऽನುವಿಧಾ**
**ಮಹದಹಮಾದಯೋऽಣ್ಡಮಸೃಜನ್ ಯದನುಗ್ರಹತಃ ।**

**ಪುರುಷವಿಧೋಽನ್ವಯೋಽತ್ರ ಚರಮೋಽನ್ನಮಯಾದಿಷು ಯಃ**
**ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಮ್ ॥ 17 ॥**

17. ನಿನ್ನ ಭಕ್ತರೇ ಆಗಿದ್ದರೆ ಅವರು ಬದುಕಿದ್ದಂತೆ, ಇಲ್ಲದೆಇದ್ದರೆ ಆ ಜೀವರುಗಳು ಬರಿಯ ತಿದಿಗಳಂತೆ ಉಸಿರುಬಿಡುತ್ತಿರುವರು. ಮಹತ್ತು, ಅಹಂಕಾರ – ಮುಂತಾದವುಗಳು ಯಾವಾತನ ಅನುಗ್ರಹದಿಂದ ಅಂಡವನ್ನು ಸೃಷ್ಟಿಸಿದವೋ, ಯಾವನು ಅನ್ನಮಯಾದಿಗಳಲ್ಲಿ ಅನುಗತವಾಗಿ ಪುರುಷವಿಧನೆನಿಸಿರುವನೋ, ಕೊನೆಯಲ್ಲಿ 'ಬ್ರಹ್ಮಪುಚ್ಛಮ್' ಎನಿಸಿ, ಸತ್ತು, ಅಸತ್ತು – ಎರಡನ್ನೂ ಮೀರಿದವನಾಗಿ, ಎಲ್ಲಕ್ಕೂ ಆಧಾರವಾಗಿ ಉಳಿದಿರುವನೋ ಆ ಸತ್ಯ ಸ್ವರೂಪನೇ ನೀನು!

**ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ**
**ಪರಿಸರಪದ್ಧತಿಂ ಹೃದಯಮಾರುಣಯೋ ದಹರಮ್ ।**
**ತತ ಉದಗಾದನನ್ತ ತವ ಧಾಮ ಶಿರಃ ಪರಮಂ**
**ಪುನರಿಹ ಯತ್ಸಮೇತ್ಯ ನ ಪತನ್ತಿ ಕೃತಾನ್ತಮುಖೇ ॥ 18 ॥**

18. ಋಷಿಗಳ ಸಂಪ್ರದಾಯಮಾರ್ಗವನ್ನನುಸರಿಸುವ ಶಾರ್ಕರಾಕ್ಷರು ಉದರಾಶಯದಲ್ಲಿರುವ ಮಣಿಪೂರಕಸ್ಥಬ್ರಹ್ಮವನ್ನು ಉಪಾಸನೆಮಾಡುತ್ತಿರುವರು; ಅರುಣಿಗಳು ನೇರಾಗಿ ನಾಡಿಗಳು ಎಲ್ಲಾ ಕಡೆಗೂ ಹರಡಿಕೊಳ್ಳುವ ಸ್ಥಾನವಾದ ಹೃದಯದಲ್ಲಿ ಬ್ರಹ್ಮವನ್ನು ಉಪಾಸನೆಮಾಡುತ್ತಿರುವರು; ಮತ್ತೆ ಕೆಲವರು ಆ ಹೃದಯದ ಮೂಲಕವಾಗಿ ಮೇಲಕ್ಕೆ ಹೋಗಿರುವ ಸುಷುಮ್ನಾ ನಾಡಿಯ ಮೂಲಕ ನಿನ್ನ ಉಪಲಬ್ಧಸ್ಥಾನವಾದ ಶಿರಸ್ಸಿನಲ್ಲಿಯೇ ಉಪಾಸನೆ ಮಾಡುವರು; ಆ ಸ್ಥಾನಕ್ಕೆ ಹೋದವರು ಈ ಮೃತ್ಯುಮುಖವಾದ ಸಂಸಾರಕ್ಕೆ ಮತ್ತೆ ಬೀಳುವದೇಇಲ್ಲ.

**ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ**
**ತರತಮತಶ್ಚ ಕಾಸ್ತ್ಯನಲವತ್ ಸ್ವಕೃತಾನುಕೃತಿಃ ।**
**ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ**
**ವಿರಜಧಿಯೋಽನ್ವಯನ್ತ್ಯಭಿವಿಪಣ್ಯವ ಏಕರಸಮ್ ॥ 19 ॥**

19. ನಿನ್ನಿಂದಲೇ ರಚಿತವಾಗಿರುವ ಬಗೆಬಗೆಯ ಅಭಿವ್ಯಕ್ತಿಸ್ಥಾನಗಳಾದ ದೇಹಾದಿಗಳಲ್ಲಿ ಉಪಾದಾನಕಾರಣವಾಗಿರುವದರಿಂದ, ಪ್ರವೇಶಿಸುವವನಂತೆ ತಾರತಮ್ಯದಿಂದ ನಿನ್ನಿಂದ ರಚಿತವಾದ ಸ್ಥಾನಗಳನ್ನು ಅನುಸರಿಸಿಕೊಂಡು,

ಕಟ್ಟಿಗೆಯೇ ಮುಂತಾದವುಗಳನ್ನುಸರಿಸುವ ಬೆಂಕಿಯಂತೆ, ಬೆಳಗುತ್ತಿರುವೆ. ಆದ್ದರಿಂದ ಹುಸಿಯಾಗಿರುವ ಆ ಸ್ಥಾನಗಳಲ್ಲಿ ಸಮನಾಗಿರುವ ಸತ್ಯವಾದ ನಿನ್ನ ಸ್ವರೂಪವು ವಿಕರಸವಾಗಿರುವದೆಂದು ನಿರ್ಮಲಚಿತ್ತರಾದ, ವ್ಯವಹಾರಾತೀತರಾದ ನಿಷ್ಕರ್ಮಿಗಳು ಅರಿತಿರುವರು.

**ಸ್ವಕೃತಪುರೇಷ್ವಮೀಷ್ವಬಹಿರನ್ತರಸಂವರಣಮ್**
**ತವ ಪುರುಷಂ ವದನ್ತ್ಯಖಿಲಶಕ್ತಿಧೃತೋಽಂಶಕೃತಮ್ ।**
**ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ**
**ಭವತ ಉಪಾಸತೇಽಙ್ಘ್ರಿಮಭವಂ ಭುವಿ ವಿಶ್ವಸಿತಾಃ ॥ 20 ॥**

20. ಸ್ವಕರ್ಮದಿಂದ ಮಾಡಿಕೊಂಡ ಈ ದೇಹಗಳಲ್ಲಿರುವ ಜೀವರೂಪವಾದ ಪುರುಷನನ್ನು ಸಮಸ್ತಶಕ್ತಿಯುಕ್ತನಾದ ನಿನ್ನ ಅಂಶವಿದ್ದಂತೆ ಇರುವವನೆಂದೂ ಬಾಹ್ಯಾಂತರಾವರಣ ವರ್ಜಿತನೆಂದೂ ಹೇಳುತ್ತಾರೆ. ಹೀಗೆ ಜೀವನ ತತ್ತ್ವವನ್ನು ವಿವೇಚಿಸಿರುವ ಜ್ಞಾನಿಗಳು ಶಾಸ್ತ್ರೋಕ್ತಕರ್ಮಗಳ ಅರ್ಪಣೆಗೆ ನೀನೇ ವಿಷಯನೆಂದು ಕೊಂಡು ಸಂಸಾರನಿವರ್ತಕವಾದ ನಿನ್ನ ಪಾದವನ್ನು ನೆರೆನಂಬಿ ಆರಾಧಿಸುತ್ತಿರುವರು.

**ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋ-**
**ಶ್ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ।**
**ನ ಪರಿಲಷನ್ತಿ ಕೇಚಿದಪವರ್ಗಮಪೀಶ್ವರ ತೇ**
**ಚರಣಸರೋಜಹಂಸಕುಲಸಙ್ಗವಿಸೃಷ್ಟಗೃಹಾಃ ॥ 21 ॥**

21. ಎಲೈ ಈಶ್ವರನೆ, ಅರಿಯಲಸದಳವಾದ ಆತ್ಮತತ್ತ್ವವನ್ನು ತಿಳಿಸಿಕೊಡುವದಕ್ಕಾಗಿ ದೇಹಧಾರಿಯಾದ ನಿನ್ನ ಚರಿತೆಯೆಂಬ ಮಹಾಮೃತ ಸಾಗರದಲ್ಲಿ ಮುಳುಗಿ ವಿಶ್ರಾಂತಿಯನ್ನು ಪಡೆದಿರುವ ಕೆಲವರು, ನಿನ್ನ ಚರಣಕಮಲದಲ್ಲಿ ಹಂಸಗಳಂತೆ ರಮಿಸುತ್ತಾ ಗೃಹವನ್ನು ಬಿಟ್ಟವರಾಗಿ ಮೋಕ್ಷವನ್ನುಕೂಡ ಬಯಸದೆ ಇರುವರು.

**ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವ-**
**ಚ್ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ।**
**ನ ಬತ ರಮನ್ತ್ಯಹೋ ಅಸದುಪಾಸನಯಾಽಽತ್ಮಹನೋ**
**ಯದನುಶಯಾ ಭ್ರಮನ್ತ್ಯುರುಭಯೇ ಕುಶರೀರಭೃತಃ ॥ 22 ॥**

22. ನಿನ್ನನ್ನು ಅನುಸರಿಸುವದಕ್ಕೆ ಯೋಗ್ಯವಾಗಿರುವ ಈ ಶರೀರವು ತಮ್ಮ ಆತ್ಮನಂತೆ, ಸ್ನೇಹಿತನಂತೆ, ಪ್ರಿಯನಂತೆ ಸ್ವಾಧೀನವಾಗಿರುತ್ತದೆ. ಹೀಗಿದ್ದರೂ ಅಭಿಮುಖನಾಗಿ, ಹಿತನೂ ಪ್ರಿಯನೂ ತಮ್ಮ ಆತ್ಮನೂ ಆಗಿರುವ ನಿನ್ನಲ್ಲಿ ಜನರು ರತಿಯಿಲ್ಲದವರಾಗಿರುವರು. ಮಾಡಬಾರದ ಸೇವೆಯನ್ನೇ ಮಾಡುವ ವಾಸನೆಯಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾ ಅತ್ಯಂತಭಯ ರೂಪವಾದ ಸಂಸಾರದಲ್ಲಿ ಕುತ್ಸಿತಶರೀರವನ್ನು ಧರಿಸಿಕೊಂಡು ತೊಳಲುತ್ತಿರುವರಲ್ಲ! ಆಹಾ, ಏನಿದಾಶ್ಚರ್ಯ!

**ನಿಭೃತಮರುನ್ಮನೋಽಕ್ಷದೃಢಯೋಗಯುಜೋ ಹೃದಿ**
**ಯನ್ಮುನಯ ಉಪಾಸತೇ ತದರಯೋಽಪಿ ಯಯುಃ ಸ್ಮರಣಾತ್ ।**
**ಸ್ತ್ರಿಯ ಉರಗೇನ್ದ್ರಭೋಗಭುಜದಣ್ಡವಿಷಕ್ತಧಿಯೋ**
**ವಯಮಪಿ ತೇ ಸಮಾಃ ಸಮದೃಶೋಽಙ್ಘ್ರಿಸರೋಜಸುಧಾಃ ॥ 23 ॥**

23. ಪ್ರಾಣ, ಮನಸ್ಸು, ಇಂದ್ರಿಯಗಳು – ಇವನ್ನು ಬಿಗಿಹಿಡಿದು ದೃಢಯೋಗದಿಂದೊಡಗೂಡಿದ ಮುನಿಗಳು ಹೃದಯದಲ್ಲಿ ಯಾವದನ್ನು ಉಪಾಸನೆಮಾಡುತ್ತಿರುವರೋ ಅದನ್ನೇ ಶತ್ರುಗಳುಕೂಡ ಸ್ಮರಣೆಯಿಂದ ಪಡೆದುಕೊಂಡಿರುತ್ತಾರೆ. ಸ್ತ್ರೀಯರೂ ನಾಗೇಂದ್ರನ ಹೆಡೆಗೆ ಸದೃಶವಾದ ನಿನ್ನ ಭುಜದಂಡದಲ್ಲಿ ಮನಸ್ಸನ್ನು ಇಟ್ಟುಕೊಂಡು ಸೇವಿಸುತ್ತಾರೆ. ಸಮದೃಷ್ಟಿಯುಳ್ಳವರಾಗಿ ನಿನ್ನ ಪಾದಸರೋಜಾಮೃತವನ್ನು ಧಾರಣೆಮಾಡಿರುವ ನಾವೂ ನಿನ್ನ ಸಮರೇ ಆಗಿರುವೆವು!

**ಕ ಇಹ ನು ವೇದ ಬತಾವರಜನ್ಮಲಯೋಽಗ್ರಸರಂ**
**ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ ।**
**ತರ್ಹಿ ನ ಸನ್ನ ಚಾಸಮುಭಯಂ ನ ಚ ಕಾಲಜವಃ**
**ಕಿಮಪಿ ನ ತತ್ರ ಶಾಸ್ತ್ರಮವಕೃಷ್ಯ ಶಯೀತ ಯದಾ ॥ 24 ॥**

24. ಆಹಾ! ಎಲ್ಲಕ್ಕೂ ಮೊದಲೇ ಇದ್ದುಕೊಂಡಿರುವ ನಿನ್ನನ್ನು ಇತ್ತಲಾಗಿ ಹುಟ್ಟಿ ಲಯವಾಗುವ ಯಾವನುತಾನೆ ಅರಿತಾನು? ನಿನ್ನಿಂದಲ್ಲವೆ, ಬ್ರಹ್ಮನು ಹುಟ್ಟಿದನು, ಆ ಬ್ರಹ್ಮನು ಜನಿಸಿದ ಮೇಲೆ ಎರಡು ಪ್ರಕಾರದ ಬ್ರಹ್ಮಪುತ್ರರು ಜನಿಸಿರುತ್ತಾರೆ! ನೀನು ಎಲ್ಲವನ್ನೂ ನಿನ್ನಲ್ಲಿ ಉಪಸಂಹಾರ ಮಾಡಿಕೊಂಡು ಮಲಗಿರುವಾಗ ಸತ್ತೆನಿಸುವ ಆಕಾಶಾದಿಗಳಾಗಲಿ, ಅಸತ್ತೆನಿಸುವ ಮಹದಾದಿಯಾಗಲಿ,

ಎರಡರಿಂದಲೂ ಆಗಿರುವ ಶರೀರವಾಗಲಿ, ಕಾಲವೈಷಮ್ಯವಾಗಲಿ, ಏನೊಂದೂ ಇರುವದೇಇಲ್ಲ, ಶಾಸ್ತ್ರವೂ ಇರುವದಿಲ್ಲ.

**ಜನಿಮಸತಃ ಸತೋ ಮೃತಿಮುತಾತ್ಮನಿ ಯೇ ಚ ಭಿದಾಂ**
**ವಿಪಣಭೃತಂ ಸ್ಮರನ್ತ್ಯುಪದಿಶನ್ತಿ ತ ಆರೋಪಿತೈಃ ।**
**ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ**
**ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ ॥ 25 ॥**

25. ಅಸತ್ತಾಗಿರುವದಕ್ಕೆ ಉತ್ಪತ್ತಿಯನ್ನೂ, ಸತ್ತಾಗಿರುವದಕ್ಕೆ ನಾಶವನ್ನೂ ಮತ್ತು ಆತ್ಮನಲ್ಲಿ ಭೇದವನ್ನು ಕರ್ಮಫಲದ ಸತ್ಯತ್ವವನ್ನೂ ಯಾರು ಹೇಳುತ್ತಿರುವರೋ ಅವರು ಆರೋಪಿತವಾದ ಧರ್ಮಗಳಿಂದ ಹಾಗೆಂದು ಹೇಳುತ್ತಿರುವರು. ಅದೂ ಪುರುಷನು ತ್ರಿಗುಣಮಯನಾಗಿರುತ್ತಾನೆಂಬುದೂ ನಿನ್ನನ್ನು ಅರಿಯದ್ದರಿಂದ ಆಗಿರುತ್ತದೆ. ಆ ಅಜ್ಞಾನವನ್ನು ಮೀರಿರುವ ಚೈತನ್ಯರಸನಾದ ನಿನ್ನಲ್ಲಿ ಆ ಭೇದವು ಎಂದಿಗೂ ಇರಲಾರದು.

**ಸದಿವ ಮನಸ್ತ್ರಿವೃತ್ತ್ವಯಿ ವಿಭಾತ್ಯಸದಾಮನುಜಾತ್**
**ಸದಭಿಮೃಶನ್ತ್ಯಶೇಷಮಿದಮಾತ್ಮತಯಾಽಽತ್ಮವಿದಃ ।**
**ನ ಹಿ ವಿಕೃತಿಂ ತ್ಯಜನ್ತಿ ಕನಕಸ್ಯ ತದಾತ್ಮತಯಾ**
**ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾವಸಿತಮ್ ॥ 26 ॥**

26. ಮನಃಕಲ್ಪಿತವಾದ ಈ ತ್ರಿಗುಣಾತ್ಮಕವಾದ ಮನುಷ್ಯಾಂತವಾಗಿರುವ ಈ ಜಗತ್ತು ಅಸತ್ತಾಗಿದ್ದರೂ ಸತ್ತಾಗಿರುವಂತೆ ನಿನ್ನಲ್ಲಿ ತೋರುತ್ತಿರುವದು. ಜ್ಞಾನಿಗಳು ಇದೆಲ್ಲವೂ ಆತ್ಮನೆಂದೇ ಅರಿತಿರುವರು. ಚಿನ್ನದ ಕಾರ್ಯವಾದ ಒಡವೆಯನ್ನು ಅದರ ಸ್ವರೂಪವೇ ಎಂದು ಬಲ್ಲವರು ಬಿಡುವದಿಲ್ಲವಷ್ಟೆ? ನೀನೇ ಇದನ್ನುಂಟು ಮಾಡಿ ಇದರೊಳಗೆ ಪ್ರವೇಶಿಸಿರುವದರಿಂದ ನಿನ್ನ ಸ್ವರೂಪವೇ ಎಂದು ನಿಶ್ಚಿತವಾಯಿತು.

**ತವ ಪರಿ ಯೇ ಚರನ್ತ್ಯಖಿಲಸತ್ತ್ವನಿಕೇತತಯಾ**
**ತ ಉತ ಪದಾಽಽಕ್ರಮನ್ತ್ಯವಿಗಣಯ್ಯ ಶಿರೋ ನಿರ್ಋತೇಃ ।**
**ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾಂ–**
**ಸ್ತ್ವಯಿ ಕೃತಸೌಹೃದಾಃ ಖಲು ಪುನನ್ತಿ ನ ಯೇ ವಿಮುಖಾಃ ॥ 27 ॥**

27. ಯಾರು ನಿನ್ನನ್ನು ಅಖಿಲಭೂತನಿವಾಸನೆಂದು ಸೇವಿಸುತ್ತಿರುವರೋ ಅವರು ಯಾವದೊಂದನ್ನೂ ಗಣಿಸದೆ ಮೃತ್ಯುವಿನ ತಲೆಯಮೇಲೆ ಪದಾರ್ಪಣವನ್ನು ಮಾಡುವರು. ಯಾರು ನಿನ್ನ ವಿಷಯಕ್ಕೆ ವಿಮುಖವಾಗಿರುವರೋ ಅವರು ತಿಳಿದವರಾಗಿದ್ದರೂ ಪಶುಗಳನ್ನು ಕಟ್ಟಿಹಾಕುವಂತೆ ಅವರನ್ನು ಮಾತೆಂಬ ಕಣ್ಣಿನಿಂದ ಕಟ್ಟಿಹಾಕುತ್ತಿರುವೆ. ನಿನ್ನಲ್ಲಿ ಸ್ನೇಹವುಳ್ಳವರು ತಮ್ಮನ್ನೂ ಮತ್ತೊಬ್ಬರನ್ನೂ ಪವಿತ್ರಗೊಳಿಸುವರು, ವಿಮುಖರಾದವರು ಹಾಗೆ ಮಾಡಲಾರರು.

**ತ್ವಮಕರಣಃ ಸ್ವರಾಡಖಿಲಕಾರಕಶಕ್ತಿಧರ–**
**ಸ್ತವ ಬಲಿಮುದ್ವಹನ್ತಿ ಸಮದನ್ತ್ಯಜಯಾಽನಿಮಿಷಾಃ ।**
**ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ**
**ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ ॥ 28 ॥**

28. ನಿನಗೆ ಯಾವ ಕರಣವೂ ಇಲ್ಲದಿದ್ದರೂ ನಿನ್ನಲ್ಲಿ ಎಲ್ಲಾ ಇಂದ್ರಿಯಶಕ್ತಿಗಳೂ ಇರುತ್ತವೆ. ನೀನು ಸ್ವಯಂಪ್ರಕಾಶನು. ಮಾಯಾವೃತರಾದ ದೇವತೆಗಳೂ ವಿಶ್ವಸೃಷ್ಟಿಯನ್ನು ಮಾಡುವ ಬ್ರಹ್ಮಾದಿಗಳೂ ಸಾಮಂತರಾಜರು ಛತ್ರಪತಿಗೆ ಕರವನ್ನೊಪ್ಪಿಸುವಂತೆ ನಿನಗೆ ಅಂಜಿಕೊಂಡು ಕಾಣಿಕೆಯನ್ನೊಪ್ಪಿಸುತ್ತಿರುವರು, ಮತ್ತು ತಮಗೆ ಮನುಷ್ಯರು ಕೊಡುವ ಹವ್ಯಕವ್ಯಾದಿ ರೂಪವಾದ ಬಲಿಯನ್ನೂ ಅನುಭವಿಸುತ್ತಿರುವರು.

**ಸ್ಥಿರಚರಜಾತಯಃ ಸ್ಯುರಜಯೋತ್ಥನಿಮಿತ್ತಯುಜೋ**
**ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ ।**
**ನ ಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇ–**
**ದಿವಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ ॥ 29 ॥**

29. ಎಲೈ ನಿತ್ಯಮುಕ್ತನೆ, ಮಾಯೆಯೊಡನೆ ಯಾವಾಗ ಪರಮಾತ್ಮನಾದ ನಿನ್ನ ವಿಹಾರವಾಗುವದೋ ಆಗ ನಿನ್ನ ಈಕ್ಷಣಮಾತ್ರದಿಂದ ಎದ್ದುಕೊಂಡ ಕರ್ಮಗಳಿಂದೊಡಗೂಡಿದ ಸ್ಥಾವರಜಂಗಮಜೀವರುಂಟಾಗು ವರು. ಆಕಾಶದಂತೆ ಸರ್ವಸಮನಾಗಿರುವ, ವಾಙ್ಮನಸುಗಳಿಗೆ ಗೋಚರನಲ್ಲದ್ದ ರಿಂದ ಶೂನ್ಯಕಲ್ಪನಾದ ನಿನಗೆ ತನ್ನವರು, ತನ್ನವರೆಲ್ಲದವರು – ಎಂಬ ಭೇದವಿಲ್ಲವಲ್ಲವೆ?

**ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾ-**
**ಸ್ತರ್ಹಿ ನ ಶಾಸ್ಯತೇತಿ ನಿಯತೋ ಧ್ರುವ ನೇತರಥಾ ।**
**ಅಜನಿ ಚ ಯನ್ಮಯಂ ತದವಿಮುಚ್ಯ ನಿಯನ್ತೃ ಭವೇತ್**
**ಸಮಮನುಜಾನತಾಂ ಯದಮತಂ ಮತದುಷ್ಟತಯಾ ॥ 30 ॥**

30. ಎಲೈ ನಿತ್ಯಸ್ವರೂಪನೆ, ದೇವರುಗಳು ಅನಂತರೂ ನಿತ್ಯರೂ ಸರ್ವಗತಸ್ವರೂಪವರು ಆಗಿದ್ದರೆ ಅವರು ಈಶಿತವ್ಯರಾಗಲಾರರು; ಆಗ ನೀನು ನಿಯಂತೃವೂ ಆಗಲಾರೆ; ಆದರೆ ಯಾವ ನಿನ್ನ ವಿಕಾರವಾಗಿ ಯಾವದು ಹುಟ್ಟಿರುವದೋ ಆ ನೀನು ಅದಕ್ಕೆ ಬಿಡದೆ ಇರುವ ನಿಯಂತೃ ಎಂದಾಗುವದು. ಆದರೆ ನೀನು ಅದನ್ನು ಸಮವಾಗಿಯೇ ಸೇರಿಕೊಂಡು ಅಂತರ್ಯಾಮಿಯಾಗಿರುವೆ. ಈ ನಿನ್ನ ಸ್ವರೂಪವು ಯಾವದೆಂಬುದನ್ನು ತಿಳಿಯುವದು ಕಷ್ಟವಾಗಿರುತ್ತದೆ. ಅದನ್ನು ಅರಿತಿರುವೆವೆನ್ನುವವರಿಗೆ ಗೊತ್ತಾಗದೆ ಇರುತ್ತದೆ; ಏಕೆಂದರೆ ಯಾವದು ಅರಿಯಲ್ಪಟ್ಟಿರುವದೋ ಅದು ದೋಷಗ್ರಸ್ತವಾಗಿರುತ್ತದೆ.

**ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋ-**
**ರುಭಯಯುಜಾ ಭವನ್ತ್ಯಸುಭೃತೋ ಜಲಬುದ್ಬುದವತ್ ।**
**ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ**
**ಸರಿತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ ॥ 31 ॥**

31. ಜನ್ಮರಹಿತವಾಗಿರುವ ಪ್ರಕೃತಿ, ಪುರುಷ – ಇಬರಿಬ್ಬರಿಗೂ ಜನ್ಮವೆಂಬುದು ಹೊಂದುವಂತಿಲ್ಲ. ಇವೆರಡರ ಸಂಯೋಗದಿಂದ ಮಾತ್ರ ಜೀವರು ನೀರುಗುಳ್ಳೆಗಳಂತೆ ವಿವಿಧವಾದ ನಾಮಗಳಿಂದಲೂ ಗುಣಗಳಿಂದಲೂ ಕೂಡ ಹುಟ್ಟುತ್ತಿರುವರು. ಪರಮಾತ್ಮನಾದ ನಿನ್ನಲ್ಲಿಯೇ ಇವುಗಳು ಸಮುದ್ರದಲ್ಲಿ ನದಿಗಳಂತೆಯೂ ಬಗೆಬಗೆಯ ರಸಗಳು ಜೇನುತುಪ್ಪದಲ್ಲಿಯೂ ಲಯವಾಗುವಂತೆ ಲಯವಾಗುವವು.

**ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ**
**ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಮ್ ।**
**ಕಥಮನುವರ್ತತಾಂ ಭವಭಯಂ ತವ ಯದ್ಭ್ರುಕುಟಿಃ**
**ಸೃಜತಿ ಮುಹುಸ್ತ್ರಿಣೇಮಿರಭವಚ್ಛರಣೇಷು ಭಯಮ್ ॥ 32 ॥**

32. ಈ ಜೀವರುಗಳಲ್ಲಿ ಮತ್ತೆಮತ್ತೆ ಜನ್ಮಗಳನ್ನುಂಟುಮಾಡುವ ಸಂಸಾರಭ್ರಮಣೆಯನ್ನು ಕಂಡುಕೊಂಡು ವಿವೇಕಿಗಳಾದವರು ಜನ್ಮರಹಿತವಾದ ಭಕ್ತಿಭಾವವನ್ನು ಮಾಡಿಕೊಂಡಿರುವರು. ಯಾವ ನಿನ್ನ ಮೂರುಸುತ್ತುಗಳ ಹುಬ್ಬು ನಿನ್ನಲ್ಲಿ ಶರಣರಾಗದೆ ಇರುವವನಿಗೆ ಭಯವನ್ನುಂಟುಮಾಡುತ್ತಿರುವಂತೆ ಅವರಿಗೆ ಸಂಸಾರಭಯವು ಹೇಗೆತಾನೇ ಆದೀತು?

**ವಿಜಿತಹೃಷೀಕವಾಯುಭಿರದಾನ್ತಮನಸ್ತುರಗಂ**
**ಯ ಇಹ ಯತನ್ತಿ ಯನ್ತುಮತಿಲೋಲಮುಪಾಯಖಿದಃ ।**
**ವ್ಯಸನಶತಾನ್ವಿತಾಃ ಸಮವಹಾಯ ಗುರೋಶ್ಚರಣಂ**
**ವಣಿಜ ಇವಾಜ ಸನ್ತ್ಯಕೃತಕರ್ಣಧರಾ ಜಲಧೌ ॥ 33 ॥**

33. ಎಲೈ ಜನ್ಮರಹಿತನಾದ ಪರಮಾತ್ಮನೆ, ಇಂದ್ರಿಯಗಳನ್ನೂ ಪ್ರಾಣವನ್ನೂ ಗೆದ್ದುಕೊಂಡು, ಪಳಗಿಸಲಾರದ ಅತಿ ಚಂಚಲವಾದ ಮನಸ್ಸೆಂಬ ಕುದುರೆಯನ್ನು ಬಿಗಿ ಹಿಡಿಯುವದಕ್ಕೆ ಗುರುಪಾದವನ್ನು ಬಿಟ್ಟು ಬೇರೆ ಸಾಧನಗಳಿಂದ ಕ್ಲೇಶಪಡುತ್ತಾ ಯಾರು ಪ್ರಯತ್ನಿಸುತ್ತಿರುವರೋ ಅವರು ನೂರಾರು ದುಃಖಗಳಿಂದ ಕೂಡಿ ಈ ಸಂಸಾರಸಮುದ್ರದಲ್ಲಿ ಕರ್ಣಧಾರನಿಲ್ಲದೆ ಸಮುದ್ರದ ವ್ಯಾಪಾರಮಾಡುತ್ತಿರುವವರಂತೆ ಇರುತ್ತಾರೆ.

**ಸ್ವಜನಸುತಾತ್ಮದಾರಧನಧಾಮಧರಾಸುರಥೈ-**
**ಸ್ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ ।**
**ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ**
**ಸುಖಯತಿ ಕೋ ನ್ವಿಹ ಸ್ವವಿಹತೇ ಸ್ವನಿರಸ್ತಭಗೇ ॥ 34 ॥**

34. ಪರಮಾನಂದಸ್ವರೂಪನಾದ ನೀನು ಇರುವಲ್ಲಿ ನೆಂಟರು, ಮಕ್ಕಳು, ಶರೀರ, ಹೆಂಡತಿ, ಮನೆ, ಭೂಮಿ, ಪ್ರಾಣ, ರಥ – ಇವುಗಳಿಂದ ಏನು ಆಗಬೇಕಾದದ್ದಿದೆ? – ಎಂಬ ಪರಮಾರ್ಥವನ್ನು ಅರಿತುಕೊಳ್ಳದೆ ಸ್ತ್ರೀಯೊಡನೆ ಬೆರೆಯುವದರಲ್ಲಿಯೇ ಇದ್ದುಕೊಂಡಿರುವವರಿಗೆ ಸ್ವಯಂ ನಶ್ವರವಾದ, ತಾನೇ ನಿಸ್ಸಾರವಾಗಿರುವ ಈ ಸಂಸಾರದಲ್ಲಿ ಯಾವದುತಾನೆ ಸುಖವನ್ನು ಕೊಟ್ಟೀತು?

**ಭುವಿ ಪುರುಪುಣ್ಯತೀರ್ಥಸದನಾನ್ಯೃಷಯೋ ವಿಮದಾ-**
**ಸ್ತ ಉತ ಭವತ್ಪದಾಮ್ಬುಜಹೃದೋಽಘಭಿದಙ್ಘ್ರಿ ಜಲಾಃ ।**

**ದಧತಿ ಸಕೃನ್ಮನಸ್ತ್ವಯಿ ಯ ಆತ್ಮನಿ ನಿತ್ಯಸುಖೇ**
**ನ ಪುನರುಪಾಸತೇ ಪುರುಷಸಾರಹರಾವಸಥಾನ್ ॥ 35 ॥**

35. ಯಾರು ಒಮ್ಮೆ ನಿತ್ಯಸುಖಸ್ವರೂಪನಾದ ನಿನ್ನಲ್ಲಿ ಮನಸ್ಸನ್ನಿಡುವರೋ, ಅವರು ಮತ್ತೆ ಮನುಷ್ಯನ ಸಾರವನ್ನೇ ಅಪಹರಿಸುವ ಮನೆಯನ್ನು ಸೇವಿಸರು. ಅವರೇ ಭೂಮಿಯಲ್ಲಿ ಬಹು ಪುಣ್ಯಪ್ರದವಾದ ತೀರ್ಥಸ್ಥಾನವು, ಋಷಿಗಳು, ಮದವಿಲ್ಲದವರು. ಅವರು ನಿನ್ನ ಪಾದಕಮಲವನ್ನು ಹೃದಯದಲ್ಲಿಟ್ಟು ಕೊಂಡಿರುತ್ತಾರೆ. ಅವರ ಪಾದಜಲವೇ ಪಾಪಹರವಾಗಿರುತ್ತದೆ.

**ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ**
**ವ್ಯಭಿಚರತಿ ಕ್ವ ಚ ಕ್ವ ಚ ಮೃಷಾ ನ ತಥೋಭಯಯುಕ್ ।**
**ವ್ಯವಹೃತಯೇ ವಿಕಲ್ಪ ಇಷಿತೋಽನ್ಧಪರಮ್ಪರಯಾ**
**ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್ ॥ 36 ॥**

36. ಸತ್ತಿನಿಂದ ಹುಟ್ಟಿರುವದರಿಂದ ಈ ವಿಶ್ವವು ಸತ್ತು ಎಂದರೆ ತರ್ಕವಿರುದ್ಧವಾಗುವದು; ಅಸತ್ತು ಎಂದರೆ ಆ ಹೇತುವಿಗೆ ವ್ಯಭಿಚರಿತತ್ವವೆಂಬ ದೋಷವು ಕೆಲವು ಕಡೆಗಳಲ್ಲಿ ಕಾಣುತ್ತದೆ; ಸತ್ತು, ಅಸತ್ತು – ಎರಡೂ ಎಂದರೂ ಆಗುವಂತಿಲ್ಲ. ನಿನ್ನ ವಾಣಿಯಾಗಿರುವ ವೇದವು, ಅನೇಕ ವೃತ್ತಿಗಳಿಂದ ಕರ್ಮಜಡರಾಗಿರುವವರನ್ನು, ಕುರುಡರನ್ನು ನಂಬಿ ನಡೆಯುವ ಕುರುಡರನ್ನು ಹೇಗೋ ಹಾಗೆ, ಭ್ರಾಂತಿಗೊಳಿಸುತ್ತಿರುವದು.

**ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾ–**
**ದನುಮಿತಮನ್ತರಾ ತ್ವಯಿ ವಿಭಾತಿ ಮೃಷೈಕರಸೇ ।**
**ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈ–**
**ರ್ವಿತಥಮನೋವಿಲಾಸಮೃತಮಿತ್ಯವಯನ್ತ್ಯಬುಧಾಃ ॥ 37 ॥**

37. ಇದು ಮೊದಲು ಇರಲಿಲ್ಲ, ಪ್ರಲಯವಾದಮೇಲೂ ಇರುವದಿಲ್ಲ; ಆದ್ದರಿಂದ ನಡುವೆಯೂ ಏಕರಸವಾಗಿರುವ ನಿನ್ನಲ್ಲಿ ಮಿಥ್ಯಾರೂಪವಾಗಿಯೇ ತೋರುತ್ತಿರುತ್ತದೆ ಎಂದು ನಿಶ್ಚಿತವಾಗುತ್ತದೆ. ಆದ್ದರಿಂದ ದ್ರವ್ಯದಂತೆ ಕಾಣುತ್ತಿರುವ ವಿಕಲ್ಪಗಳಿಗೆ ಸಮಾನವಾಗಿರುತ್ತದೆ ಎಂದು ಹೇಳಬೇಕಾಗಿದೆ. ಹುಸಿಯಾಗಿರುವ ಮನೋವಿಲಾಸವನ್ನೇ ಅವಿವೇಕಿಗಳು ಸತ್ಯವೆಂದು ತಿಳಿಯುತ್ತಿರುವರು.

**ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್**
**ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ ।**
**ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ**
**ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ ॥ 38 ॥**

38. ಆ ಜೀವನು ಅವಿದ್ಯೆಯಿಂದ ಮಾಯೆಯನ್ನು ಅಪ್ಪಿಕೊಳ್ಳುತ್ತಾನೆ. ಸತ್ತ್ವರಜಸ್ತಮೋಗುಣಗಳನ್ನು ಸೇವಿಸುತ್ತಾ ಅವುಗಳ ತಾದಾತ್ಮ್ಯವನ್ನು ಹೊಂದಿ, ತನ್ನ ಆನಂದಾದಿ ಸ್ವಭಾವವು ಮುಚ್ಚಿಹೋಗಲು ಮರಣವನ್ನೈದುವನು, ನೀನಾದರೊ, ಪರೆಯನ್ನುಗಿದ ಹಾವಿನಂತೆ ಆ ಮಾಯೆಯನ್ನು ತ್ಯಜಿಸಿ ನಿತ್ಯಪ್ರಾಪ್ತವಾದ ಐಶ್ವರ್ಯದಿಂದೊಡಗೂಡಿ ನಿನ್ನ ಮಹಿಮೆಯಲ್ಲಿದ್ದುಕೊಂಡು ಅನಂತವಾಗಿರುವ ಅಣಿಮಾದ್ಯಷ್ಟೈಶ್ವರ್ಯಗಳಿಂದ ಪೂಜ್ಯನೆನಿಸಿರುವೆ.

**ಯದಿ ನ ಸಮುದ್ಧರನ್ತಿ ಯತಯೋ ಹೃದಿ ಕಾಮಜಟಾ**
**ದುರಧಿಗಮೋಽಸತಾ ಹೃದಿ ಗತೋಽಸ್ಮೃತಕಣ್ಠಮಣಿಃ ।**
**ಅಸುತೃಪಯೋಗಿನಾಮುಭಯತೋಽಪ್ಯಸುಖಂ ಭಗವ-**
**ನ್ನನಪಗತಾನ್ತಕಾದನಧಿರೂಢಪದಾದ್ ಭವತಃ ॥ 39 ॥**

39. ಎಲೈ ಭಗವಂತನೆ, ಯತಿಗಳು ಹೃದಯದಲ್ಲಿರುವ ಕಾಮವಾಸನೆಗಳನ್ನು ಕಿತ್ತುಹಾಕದೆ ಇರುವರಾದರೆ, ಆ ಅಸಜ್ಜನರಿಗೆ ಕೊರಳಲ್ಲಿಯೇ ಇದ್ದರೂ ಮರೆತ್ತಿರುವ ರತ್ನದಂತೆ ಇರುವ ನೀನು ಹೃದಯದಲ್ಲಿಯೇ ಇದ್ದರೂ ದುಷ್ಪ್ರಾಪ್ಯನಾಗಿರುವೆ. ಇಂದ್ರಿಯಗಳ ತೃಪ್ತಿಯಲ್ಲಿಯೇ ತತ್ಪರರಾಗಿರುವ ಆ ವೇಷಧಾರಿಯೋಗಿಗಳಿಗೆ, ಮೃತ್ಯುವನ್ನು ತೊಲಗಿಸಿಕೊಳ್ಳದೆ, ನಿನ್ನ ಪರಮಪದವನ್ನು ಪಡೆದುಕೊಳ್ಳದೆ ಇರುವದರಿಂದ ಇಹಪರಗಳೆರಡರಲ್ಲಿಯೂ ದುಃಖವೇ.

**ತ್ವದಗಮೀ ನ ವೇತ್ತಿ ಭವದುತ್ಥಶುಭಾಶುಭಯೋ-**
**ರ್ಗುಣವಿಗುಣಾನ್ವಯಾಂಸ್ತರ್ಹಿ ದೇಹಭೃತಾಂ ಚ ಗಿರಃ ।**
**ಅನುಯುಗಮನ್ವಹಂ ಸಗುಣ ಗೀತಪರಂಪರಯಾ**
**ಶ್ರವಣಭೃತೋ ಯತಸ್ತ್ವಮಪವರ್ಗಗತಿರ್ಮನುಜೈಃ ॥ 40 ॥**

40. ಎಲೈ ಷಡ್ಗುಣೈಶ್ವರ್ಯಸಂಪನ್ನನೆ, ನಿನ್ನನ್ನು ಅರಿತುಕೊಂಡಿರುವಾತನು ನೀನು ಕೊಡುವ ಪುಣ್ಯಪಾಪಫಲಗಳ ಸುಖದುಃಖ ಸಂಬಂಧಗಳನ್ನರಿಯದೆ ಇರುತ್ತಾನೆ. ದೇಹಾಭಿಮಾನಿಗಳ ಪ್ರವೃತ್ತಿ ನಿವೃತ್ತಿಪರವಾದ ಮಾತುಗಳನ್ನೂ ಅರಿಯದೆ ಇರುತ್ತಾನೆ. ಏಕೆಂದರೆ ಪ್ರತಿಯುಗದಲ್ಲಿಯೂ ಪ್ರತಿದಿನವೂ ಸದುಪದೇಶ ಪರಂಪರೆ ಗಳಿಂದ ಶ್ರವಣದ ಮೂಲಕ ನಿನ್ನನ್ನು ಹೃದಯದಲ್ಲಿಟ್ಟುಕೊಂಡಿರುವದರಿಂದ ಜನರಿಗೆ ನೀನು ಮುಕ್ತಿಯನ್ನು ಕೊಡುತ್ತಿರುವೆ.

**ದ್ಯುಪತಯ ಏವ ತೇ ನ ಯಯುರನ್ತಮನನ್ತತಯಾ**
**ತ್ವಮಪಿ ತದನ್ತರಾಽಣ್ಡನಿಚಯಾ ನನು ಸಾವರಣಾಃ ।**
**ಖ ಇವ ರಜಾಂಸಿ ವಾನ್ತಿ ವಯಸಾ ಸಹ ಯಚ್ಛ್ರುತಯ-**
**ಸ್ತ್ವಯಿ ಹಿ ಫಲನ್ತ್ಯತನ್ನಿರಸನೇನ ಭವನ್ನಿಧನಾಃ ॥ 41 ॥**

41. ಸ್ವರ್ಗಾದಿಪಾಲಕರಾದ ಬ್ರಹ್ಮಾದಿಗಳೇ ಅನಂತನಾಗಿರುವದರಿಂದ ನಿನ್ನ ಅಂತವನ್ನು ಅರಿಯರು, ನೀನೂ ಅದನ್ನು ಕಾಣದೆ ಇರುವೆ. ನಿನ್ನೊಳಗೆ ಹೆಚ್ಚುಹೆಚ್ಚಾಗಿ ಆವರಣಗಳುಳ್ಳ ಬ್ರಹ್ಮಾಂಡಸಮೂಹಗಳು ಕಾಲಚಕ್ರದಿಂದ ಆಕಾಶದಲ್ಲಿ ಧೂಳಿನ ಕಣಗಳಂತೆ ಒಂದೇ ಸಮನಾಗಿ ಸುತ್ತುತ್ತಿರುವವು. ಆದ್ದರಿಂದಲೇ ಶ್ರುತಿಗಳು ನಿನ್ನದಲ್ಲದ್ದನ್ನು ಅಲ್ಲಗಳೆದು ನಿನ್ನಲ್ಲಿ ಪರ್ಯವಸಾನವಾಗುತ್ತಿರುವವು.

******

## ನಿಮಿರಾಜನಿಗೆ ಕವಿಯೆಂಬ ಯೋಗಿಯ ಉಪದೇಶ

**(ಹನ್ನೊಂದನೆಯ ಸ್ಕಂಧ, ಎರಡನೆಯ ಅಧ್ಯಾಯ)**

**ಕವಿರುವಾಚ –**
**ಮನ್ಯೇಽಕುತಶ್ಚಿದ್ಭಯಮಚ್ಯುತಸ್ಯ**
**ಪಾದಾಮ್ಬುಜೋಪಾಸನಮತ್ರ ನಿತ್ಯಮ್ ।**
**ಉದ್ವಿಗ್ನಬುದ್ಧೇರಸದಾತ್ಮಭಾವಾದ್**
**ವಿಶ್ವಾತ್ಮನಾ ಯತ್ರ ನಿವರ್ತತೇ ಭೀಃ ॥ 33 ॥**

33. ಕವಿಯು ಹೇಳುತ್ತಾನೆ: ಈ ಸಂಸಾರದಲ್ಲಿ ಅಸತ್ತಾಗಿರುವ ದೇಹಾದಿಗಳಲ್ಲಿ ತಾನೆಂಬ ಭಾವನೆಯಿಂದ ತಳಮಳಗೊಂಡಿರುವ ಅಂತಃಕರಣವು ಅಚ್ಯುತ ಪರಮಾತ್ಮನ

ಪಾದಕಲಮವನ್ನು ನಿತ್ಯವೂ ಧ್ಯಾನಿಸುತ್ತಿರುವದೇ ಏತರ ಭಯವೂ ಇಲ್ಲದ್ದೆಂದೂ ನನ್ನ ಮತವು. ಅದರಲ್ಲಿ ಅಂಜಿಕೆಯೆಂಬುದು ಎಲ್ಲಾ ಬಗೆಯಿಂದಲೂ ತೊಲಗುತ್ತದೆ.

**ಯೇ ವೈ ಭಗವತಾ ಪ್ರೋಕ್ತಾ ಉಪಾಯಾ ಹ್ಯಾತ್ಮಲಬ್ಧಯೇ ।**
**ಅಞ್ಜಃ ಪುಂಸಾಮವಿದುಷಾಂ ವಿದ್ಧಿ ಭಾಗವತಾನ್ ಹಿ ತಾನ್ ॥ 34 ॥**

34. ಅಜ್ಞರಾದ ಜನರಿಗೆ ಸುಲಭವಾಗಿ ಪರಮಾತ್ಮಪ್ರಾಪ್ತಿಗೆ ಉಪಾಯಗಳೆಂದು ಯಾವದನ್ನು ಭಗವಂತನೇ ಹೇಳಿರುವನೋ ಅವುಗಳೇ ಭಾಗವತಧರ್ಮಗಳೆಂದು ತಿಳಿದುಕೊ.

**ಯಾನಾಸ್ಥಾಯ ನರೋ ರಾಜನ್ನ ಪ್ರಮಾದ್ಯೇತ ಕರ್ಹಿಚಿತ್ ।**
**ಧಾವನ್ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ ॥ 35 ॥**

35. ರಾಜನೆ, ಆ ಧರ್ಮಗಳನ್ನು ಅನುಷ್ಠಾನಮಾಡಿದ ಮನುಷ್ಯನು ಎಂದಿಗೂ ತಪ್ಪುಮಾಡುವದಿಲ್ಲ. ಕಣ್ಣುಗಳನ್ನು ಮುಚ್ಚಿಕೊಂಡು ಓಡುತ್ತಿದ್ದರೂ, ಎಡಹುವದಿಲ್ಲ, ಬೀಳುವದೂ ಇಲ್ಲ.

**ಕಾಯೇನ ವಾಚಾ ಮನಸೇನ್ದ್ರಿಯೈರ್ವಾ**
**ಬುದ್ಧ್ಯಾತ್ಮನಾ ವಾಽನುಸೃತಸ್ವಭಾವಾತ್ ।**
**ಕರೋತಿ ಯದ್ಯತ್ ಸಕಲಂ ಪರಸ್ಮೈ**
**ನಾರಾಯಣಾಯೇತಿ ಸಮರ್ಪಯೇತ್ ತತ್ ॥ 36 ॥**

36. ಶರೀರದಿಂದಲಾಗಲಿ, ವಾಕ್ಕಿನಿಂದಾಗಲಿ, ಮನಸ್ಸಿನಿಂದಲಾಗಲಿ ಇಂದ್ರಿಯಗಳಿಂದಲಾಗಲಿ ಬುದ್ಧಿಯಿಂದಲಾಗಲಿ ಚಿತ್ತದಿಂದಲಾಗಲಿ ಸ್ವಭಾವವನ್ನು ಅನುಸರಿಸಿ ಏನೇನು ಮಾಡುವನೋ ಅದನ್ನು 'ನಾರಾಯಣನಿಗೆ' ಎಂದು ಸಮರ್ಪಿಸಬೇಕು.

**ಭಯಂ ದ್ವಿತೀಯಾಭಿನಿವೇಶತಃ ಸ್ಯಾ-**
**ದೀಶಾದಪೇತಸ್ಯ ವಿಪರ್ಯಯೋಽಸ್ಮೃತಿಃ ।**
**ತನ್ಮಾಯಯಾತೋ ಬುಧ ಆಭಜೇತ್ತಂ**
**ಭಕ್ತ್ಯೈಕಯೇಶಂ ಗುರುದೇವತಾತ್ಮಾ ॥ 37 ॥**

37. ಈಶ್ವರಪರಾಙ್ಮುಖನಾದವನಿಗೆ ಆತನ ಮಾಯೆಯಿಂದ ಭೇದ ಬುದ್ಧಿಯೂ, ಭಗವತ್ಸ್ವರೂಪವನ್ನು ಮರೆಯುವದೂ ಉಂಟಾಗುವವು. ಆದ್ದರಿಂದ ವಿವೇಕಿಯಾದವನು ಗುರುದೇವತೆಗಳಲ್ಲಿ ಮನಸ್ಸಿಟ್ಟವನಾಗಿ ಭಕ್ತಿಯಿಂದ ಆ ಈಶ್ವರನನ್ನು ಭಜಿಸುತ್ತಿರಬೇಕು.

**ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ**
**ಧ್ಯಾತುರ್ಧಿಯಾ ಸ್ವಪ್ನಮನೋರಥೌ ಯಥಾ ।**
**ತತ್ ಕರ್ಮಸಙ್ಕಲ್ಪವಿಕಲ್ಪಕಂ ಮನೋ**
**ಬುಧೋ ನಿರುನ್ಧ್ಯಾದಭಯಂ ತತಃ ಸ್ಯಾತ್ ॥ 38 ॥**

38. ದ್ವೈತವು ಇಲ್ಲದಿದ್ದರೂ ಅಂತಃಕರಣದಲ್ಲಿ ಅದನ್ನೇ ಧ್ಯಾನಿಸುವವನಿಗೆ ಕನಸೂ ಮನಸ್ಸಿನ ಕಲ್ಪನೆಯೂ ತೋರುವಂತೆ ಅದು ತೋರಿಕೊಳ್ಳುತ್ತಿರುವದು. ಆದ್ದರಿಂದ ವಿವೇಕಿಯಾದವನು ಕರ್ಮಗಳನ್ನು ಸಂಕಲ್ಪಿಸುತ್ತಲೂ ವಿಕಲ್ಪಿಸುತ್ತಲೂ ಇರುವ ಮನಸ್ಸನ್ನು ತಡೆಗಟ್ಟಬೇಕು. ಅದರಿಂದ ಅಭಯವಾಗುವದು.

**ಶೃಣ್ವನ್ ಸುಭದ್ರಾಣಿ ರಥಾಙ್ಗಪಾಣೇ**
**ರ್ಜನ್ಮಾನಿ ಕರ್ಮಾಣಿ ಚ ಯಾನಿ ಲೋಕೇ ।**
**ಗೀತಾನಿ ನಾಮಾನಿ ತದರ್ಥಕಾನಿ**
**ಗಾಯನ್ ವಿಲಜ್ಜೋ ವಿಚರೇದಸಙ್ಗಃ ॥ 39 ॥**

39. ಚಕ್ರಪಾಣಿಯಾದ ಪರಮಾತ್ಮನ ಜನ್ಮಗಳನ್ನೂ ಕರ್ಮಗಳನ್ನೂ ಶ್ರವಣಮಾಡುತ್ತಲೂ ಅವುಗಳನ್ನು ತಿಳಿಸುವವಾಗಿ ಲೋಕದಲ್ಲಿ ಭಕ್ತರು ಹೇಳುತ್ತಿರುವ ನಾಮಗಳನ್ನು ನಾಚಿಕೆಯಿಲ್ಲದೆ ಹಾಡಿಕೊಳ್ಳುತ್ತಲೂ ಯಾವ ಸಂಗವೂ ಇಲ್ಲದೆ ವ್ಯವಹಾರಮಾಡುತ್ತಿರಬೇಕು.

**ಏವಂವ್ರತಃ ಸ್ವಪ್ರಿಯನಾಮಕೀರ್ತ್ಯಾ**
**ಜಾತಾನುರಾಗೋ ದ್ರುತಚಿತ್ತ ಉಚ್ಚೈಃ ।**
**ಹಸತ್ಯಥೋ ರೋದಿತಿ ರೌತಿ ಗಾಯ–**
**ತ್ಯುನ್ಮಾದವನ್ನೃತ್ಯತಿ ಲೋಕಬಾಹ್ಯಃ ॥ 40 ॥**

40. ಈ ನಿಯಮವನ್ನಿಟ್ಟುಕೊಂಡವನು ತನ್ನ ಪ್ರಿಯನಾದ ಭಗವಂತನ ನಾಮವನ್ನು ಕೀರ್ತನೆಮಾಡುತ್ತಾ ಅವನಲ್ಲಿ ಅನುರಾಗವುಂಟಾಗಿ ಚಿತ್ತವು ಕರಗಿ

ಹುಚ್ಚನಂತೆ ಗಟ್ಟಿಯಾಗಿ ನಗುತ್ತಿರುವನು, ಅಳುತ್ತಲೂ ಇರುವನು, ಕೂಗಿಕೊಳ್ಳುತ್ತಿರುವನು, ಕುಣಿದಾಡುತ್ತಿರುವನು– ಜನರ ವ್ಯವಹಾರಕ್ಕೇ ಹೊರಚ್ಚಾಗಿರುವನು.

**ಖಂ ವಾಯುಮಗ್ನಿಂ ಸಲಿಲಂ ಮಹೀಂ ಚ**
**ಜ್ಯೋತೀಂಷಿ ಸತ್ತ್ವಾನಿ ದಿಶೋ ದ್ರುಮಾದೀನ್ ।**
**ಸರಿತ್ಸಮುದ್ರಾಂಶ್ಚ ಹರೇಃ ಶರೀರಂ**
**ಯತ್ಕಿಂಚ ಭೂತಂ ಪ್ರಣಮೇದನನ್ಯಃ ॥ 41 ॥**

41. ಭಗವದ್ಭಕ್ತನಾದವನು ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ, ನಕ್ಷತ್ರಗಳು, ಪ್ರಾಣಿಗಳು, ದಿಕ್ಕು, ಗಿಡಮರಬಳ್ಳಿಗಳು, ನದಿಗಳು, ಸಮುದ್ರಗಳು – ಹೀಗೆ ಯಾವಯಾವದಿದ್ದರೂ ಇದು ಹರಿಯ ಶರೀರವೆಂದು ಅನನ್ಯಭಕ್ತಿಯಿಂದ ನಮಸ್ಕರಿಸುತ್ತಿರುವನು.

**ಭಕ್ತಿಃ ಪರೇಶಾನುಭವೋ ವಿರಕ್ತಿ–**
**ರನ್ಯತ್ರ ಚೈಷ ತ್ರಿಕ ಏಕಕಾಲಃ ।**
**ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯು–**
**ಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್ ॥ 42 ॥**

42. ಪರಮಾತ್ಮನಿಗೆ ಶರಣುಹೊಕ್ಕವನಿಗೆ ಪ್ರೇಮರೂಪವಾದ ಭಕ್ತಿ, ಅದಕ್ಕೆ ವಿಷಯವಾದ ಭಗವದ್ರೂಪದ ಸ್ಫೂರ್ತಿ, ಅದರ ಹೊರತು ಮಿಕ್ಕದ್ದರಲ್ಲಿ ವೈರಾಗ್ಯ – ಇವು ಮೂರೂ ಊಟ ಮಾಡುವವನಿಗೆ ತುಷ್ಟಿಯೂ ಪುಷ್ಟಿಯೂ ಹಸಿವು ಅಡಗುವದೂ ತುತ್ತುತುತ್ತಿಗೂ ಹೇಗೆ ಆಗುತ್ತಿರುವವೋ ಹಾಗೆ ಒಮ್ಮೆಗೇ ಆಗುತ್ತಿರುವವು.

**ಇತ್ಯಚ್ಯುತಾಙ್ಘ್ರಿಂ ಭಜತೋಽನುವೃತ್ತ್ಯಾ**
**ಭಕ್ತಿರ್ವಿರಕ್ತಿರ್ಭಗವತ್ಪ್ರಬೋಧಃ ।**
**ಭವನ್ತಿ ವೈ ಭಾಗವತಸ್ಯ ರಾಜಂ–**
**ಸ್ತತಃ ಪರಾಂ ಶಾನ್ತಿಮುಪೈತಿ ಸಾಕ್ಷಾತ್ ॥ 43 ॥**

43. ರಾಜನೆ, ಈ ರೀತಿಯಲ್ಲಿ ಅಚ್ಯುತನ ಪಾದವನ್ನೇ ಅನುಸರಿಸಿಕೊಂಡು

ಭಜಿಸುತ್ತಿರುವ ಭಾಗವತರಿಗೆ ಭಕ್ತಿ, ವೈರಾಗ್ಯ, ಭಗವಜ್ಜ್ಞಾನಗಳು ಉಂಟಾಗಿಯೇ ತೀರುವವು; ಬಳಿಕ ಅವನಿಗೆ ಸಾಕ್ಷಾತ್ಪರಮಶಾಂತಿಯೇ ದೊರಕುವದು.

*****

## ನಿಮಿರಾಜನಿಗೆ ಹರಿಯೆಂಬ ಯೋಗಿಯ ಉಪದೇಶ

### (ಹನ್ನೊಂದನೆಯ ಸ್ಕಂಧ, ಎರಡನೆಯ ಅಧ್ಯಾಯ)

**ರಾಜೋವಾಚ –**

**ಅಥ ಭಾಗವತಂ ಬ್ರೂತ ಯದ್ಧರ್ಮೋ ಯಾದೃಶೋ ನೃಣಾಮ್ ।**
**ಯಥಾ ಚರತಿ ಯದ್ ಬ್ರೂತೇ ಯೈರ್ಲಿಂಗೈರ್ಭಗವತ್ಪ್ರಿಯಃ ॥ 44 ॥**

44. ರಾಜನಿಂತೆಂದನು: ಎಲೈ ಋಷಿಗಳಿರ, ಇನ್ನು ಮನುಷ್ಯರೊಳಗೆ ಭಾಗವತನು ಯಾವ ಧರ್ಮವನ್ನು ಆಚರಿಸುತ್ತಾನೆ, ಅವನು ಹೇಗೆ ಇರುತ್ತಾನೆ? ಏನನ್ನು ನುಡಿಯುತ್ತಿರುತ್ತಾನೆ? ಯಾವ ಲಕ್ಷಣಗಳಿಂದ ಕೂಡಿರುವದರಿಂದ ಭಗವಂತನಿಗೆ ಪ್ರಿಯನಾಗಿರುತ್ತಾನೆ? ಇದನ್ನು ಹೇಳಿರಿ.

**ಹರಿರುವಾಚ –**

**ಸರ್ವಭೂತೇಷು ಯಃ ಪಶ್ಯೇತ್ ಭಗವದ್ಭಾವಮಾತ್ಮನಃ ।**
**ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತೋತ್ತಮಃ ॥ 45 ॥**

45. ಹರಿಯು ಇಂತೆಂದನು: ಯಾವನು ಸರ್ವಭೂತಗಳಲ್ಲಿಯೂ ಇರುವ ಆತ್ಮನ ವಿಷಯದಲ್ಲಿ ಭಗವದ್ಭಾವನ್ನೇ ಕಾಣುತ್ತಿರುವನೋ, ಭಗವಂತನಾದ ತನ್ನ ಆತ್ಮನಲ್ಲಿ ಎಲ್ಲಾ ಭೂತಗಳನ್ನೂ ಕಾಣುತ್ತಿರುವನೋ, ಅವನೇ ಭಾಗವತೋತ್ತಮನು.

**ಈಶ್ವರೇ ತದಧೀನೇಷು ಬಾಲಿಶೇಷು ದ್ವಿಷತ್ಸು ಚ ।**
**ಪ್ರೇಮಮೈತ್ರೀಕೃಪೋಪೇಕ್ಷಾಂ ಯಃ ಕರೋತಿ ಸ ಮಧ್ಯಮಃ ॥ 46 ॥**

46. ಭಗವಂತನಲ್ಲಿ ಪ್ರೇಮವನ್ನೂ ಅವನ ಭಕ್ತರಲ್ಲಿ ಮಿತ್ರಭಾವವನ್ನೂ ಅಜ್ಞರಲ್ಲಿ ಕೃಪೆಯನ್ನೂ ತನ್ನನ್ನು ದ್ವೇಷಮಾಡುವವರಲ್ಲಿ ಉಪೇಕ್ಷೆಯನ್ನೂ ಯಾವನು ಮಾಡುತ್ತಿರುವನೋ ಅವನು ಮಧ್ಯಮಭಕ್ತನು.

**ಅರ್ಚಾಯಾಮೇವ ಹರಯೇ ಪೂಜಾಂ ಯಃ ಶ್ರದ್ಧಯೇಹತೇ ।**
**ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ ॥ 47 ॥**

47. ಯಾವನು ಪ್ರತಿಮೆಯಲ್ಲಿಯೇ ಹರಿಯ ಪೂಜೆಯನ್ನು ಶ್ರದ್ಧೆಯಿಂದ ಮಾಡುತ್ತಿರುವನೋ, ಆತನ ಭಕ್ತರಲ್ಲಾಗಲಿ, ಉಳಿದವರಲ್ಲಾಗಲಿ ಹರಿಪೂಜೆಯನ್ನು ಮಾಡದೆ ಇರುವನೋ ಅವನು ಪ್ರಾಕೃತಭಕ್ತನು.

**ಗೃಹೀತ್ವಾಪೀನ್ದ್ರಿಯೈರರ್ಥಾನ್ ಪಶ್ಯನ್ ಯೋ ನ ದ್ವೇಷ್ಟಿ ನ ಹೃಷ್ಯತಿ ।**
**ವಿಷ್ಣೋರ್ಮಾಯಾಮಿದಂ ಪಶ್ಯನ್ ಸ ವೈ ಭಾಗವತೋತ್ತಮಃ ॥ 48 ॥**

48. ಇಂದ್ರಿಯಗಳಿಂದ ವಿಷಯಗಳನ್ನು ಸೇವಿಸಿಯೂ ಯಾವನು ಅವುಗಳಲ್ಲಿ ದ್ವೇಷವನ್ನಾಗಲಿ ಹರ್ಷವನ್ನಾಗಲಿ ಮಾಡದೆ ಇರುತ್ತಾನೊ, ಇದೆಲ್ಲವೂ ವಿಷ್ಣುವಿನ ಮಾಯೆಯೆಂದೇ ಕಾಣುತ್ತಿರುವನೋ ಅವನು ಉತ್ತಮನಾದ ಭಾಗವತನು.

**ದೇಹೇನ್ದ್ರಿಯಪ್ರಾಣಮನೋಧಿಯಾಂ ಯೋ**
**ಜನ್ಮಾಪ್ಯಯಕ್ಷುದ್ಭಯತರ್ಷಕೃಚ್ಛ್ರೈಃ ।**
**ಸಂಸಾರಧರ್ಮೈರವಿಮುಹ್ಯಮಾನಃ**
**ಸ್ಮೃತ್ಯಾ ಹರೇರ್ಭಾಗವತಪ್ರಧಾನಃ ॥ 49 ॥**

49. ದೇಹದ ಜನ್ಮಮರಣಗಳೂ ಪ್ರಾಣಗಳ ಹಸಿವುಬಾಯಾರಿಕೆಗಳೂ ಇಂದ್ರಿಯಗಳ ಶ್ರಮ, ಮನಸ್ಸಿನ ಭಯ, ಬುದ್ಧಿಯ ತೃಷ್ಣೆ – ಎಂಬ ಸಂಸಾರಧರ್ಮಗಳೂ ಆಗುತ್ತಲೇ ಇದ್ದರೂ ಹರಿಸ್ಮರಣೆಯಲ್ಲಿಯೇ ಇದ್ದು ಯಾವನು ಮೋಹವನ್ನು ಹೊಂದದೆ ಇರುವನೋ ಅವನು ಉತ್ತಮಭಾಗವತನು.

**ನ ಕಾಮಕರ್ಮಬೀಜಾನಾಂ ಯಸ್ಯ ಚೇತಸಿ ಸಮ್ಭವಃ ।**
**ವಾಸುದೇವೈಕನಿಲಯಃ ಸ ವೈ ಭಾಗವತೋತ್ತಮಃ ॥ 50 ॥**

50. ಯಾವನ ಚಿತ್ತದಲ್ಲಿ ಕಾಮ, ಕರ್ಮ, ಇವುಗಳಿಂದಾಗಿರುವ ಅವಿದ್ಯಾವಾಸನೆಗಳು – ಇವುಗಳಿಗೆ ಅವಕಾಶವಿರುವದಿಲ್ಲವೋ, ಯಾವನು ವಾಸುದೇವನಲ್ಲಿಯೇ ನಿಷ್ಠನಾಗಿರುವನೋ ಅವನೇ ಉತ್ತಮಭಾಗವತನು.

**ನ ಯಸ್ಯ ಜನ್ಮಕರ್ಮಭ್ಯಾಂ ನ ವರ್ಣಾಶ್ರಮಜಾತಿಭಿಃ ।**
**ಸಜ್ಜತೇಽಸ್ಮಿನ್ನಹಂಭಾವೋ ದೇಹೇ ವೈ ಸ ಹರೇಃ ಪ್ರಿಯಃ ॥ 51 ॥**

51. ಯಾವನಿಗೆ ಜನ್ಮಕರ್ಮಗಳಿಂದಾಗಲಿ ವರ್ಣಾಶ್ರಮಜಾತಿಗಳಿಂದಾಗಲಿ ಈ ದೇಹವು ನಾನೆಂಬ ಭಾವವು ಅಂಟಿಕೊಳ್ಳದೆ ಇರುವನೋ ಅವನೇ ಹರಿಗೆ ಪ್ರಿಯನು.

**ನ ಯಸ್ಯ ಸ್ವಃ ಪರ ಇತಿ ವಿತ್ತೇಷ್ವಾತ್ಮನಿ ವಾ ಭಿದಾ ।**
**ಸರ್ವಭೂತಸಮಃ ಶಾನ್ತಃ ಸ ವೈ ಭಾಗವತೋತ್ತಮಃ ॥ 52 ॥**

52. ಯಾವನಿಗೆ ವಿತ್ತಗಳಲ್ಲಿ ನನ್ನದು ಮತ್ತೊಬ್ಬರದು ಎಂದಾಗಲಿ ದೇಹದಲ್ಲಿ ನಾನು ಮತ್ತೊಬ್ಬರು ಎಂಬ ಭೇದವಾಗಲಿ ಆಗದೆ ಇರುವದೋ ಯಾವನು ಸರ್ವಪ್ರಾಣಿಗಳಲ್ಲಿಯೂ ಸಮದೃಷ್ಟಿಯುಳ್ಳವನಾಗಿ ಶಾಂತನಾಗಿರುವನೋ ಅವನೇ ಭಾಗವತೋತ್ತಮನು.

**ತ್ರಿಭುವನವಿಭವಹೇತವೇಽಪ್ಯಕುಣ್ಠ-**
**ಸ್ಮೃತಿರಜಿತಾತ್ಮಸುರಾದಿಭಿರ್ವಿಮೃಗ್ಯಾತ್ ।**
**ನ ಚಲತಿ ಭಗವತ್ಪದಾರವಿನ್ದಾ-**
**ಲ್ಲವನಿಮಿಷಾರ್ಧಮಪಿ ಯಃ ಸ ವೈಷ್ಣವಾಗ್ರ್ಯಃ ॥ 53 ॥**

53. ತ್ರೈಲೋಕ್ಯದ ರಾಜ್ಯದ ನಿಮಿತ್ತದಿಂದಲಾದರೂ ಸ್ಮರಣೆಯನ್ನು ಬಿಡದೆ ಋಷಿಮುನಿಗಳು ದೇವತೆಗಳೂ ಹುಡುಕುತ್ತಿರುವ ಭಗವತ್ಪಾದಾರವಿಂದದಲ್ಲಿ ಒಂದು ಅರ್ಧಲವ ಅರ್ಧನಿಮಿಷವಾದರೂ ಚಲಿಸದೆ ಇರುವವನು ಯಾವನೋ ಅವನು ವೈಷ್ಣವಶ್ರೇಷ್ಠನು.

**ಭಗವತ ಉರುವಿಕ್ರಮಾಙ್ಘ್ರಿಶಾಖಾ-**
**ನಖಮಣಿಚನ್ದ್ರಿಕಯಾ ನಿರಸ್ತತಾಪೇ ।**
**ಹೃದಿ ಕಥಮುಪಸೀದತಾಂ ಪುನಃ ಸ**
**ಪ್ರಭವತಿ ಚನ್ದ್ರ ಇವೋದಿತೇಽರ್ಕತಾಪಃ ॥ 54 ॥**

54. ಭಗವಂತನ ವಿಸ್ತೀರ್ಣಕ್ರಮವುಳ್ಳ ಪಾದಗಳ ಬೆರಳುಗಳ ಉಗುರುಗಳೆಂಬ

ರತ್ನಗಳ ಬೆಳದಿಂಗಳಿಂದ ಕಾಮಾದಿತಾಪವನ್ನು ಕಳೆದುಕೊಂಡಿರುವ ಭಕ್ತರ ಹೃದಯದಲ್ಲಿ ಮತ್ತೆ ಆ ತಾಪವು ಹೇಗೆ ಉದಿಸೀತು? ಚಂದ್ರನು ಉದಯಿಸಲು ಸೂರ್ಯನ ತಾಪವು ಹೇಗೆ ಮತ್ತೆ ಉಂಟಾದೀತು?

**ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾದ್**
**ಹರಿರವಶಾಭಿಹಿತೋಽಪ್ಯಘೌಘನಾಶಃ ।**
**ಪ್ರಣಯರಶನಯಾ ಧೃತಾಙ್ಘ್ರಿಪದ್ಮಃ**
**ಸ ಭವತಿ ಭಾಗವತಪ್ರಧಾನ ಉಕ್ತಃ ॥ 55 ॥**

55. ಪರವಶನಾಗಿ ನಾಮಕೀರ್ತನೆಯನ್ನು ಮಾಡಿದರೂ ಪಾಪರಾಶಿಯನ್ನು ನಾಶಪಡಿಸುವ ಹರಿಯು ಪ್ರೇಮವೆಂಬ ಹಗ್ಗದಿಂದ ಕಟ್ಟಿದ ಪಾದಪದ್ಮವುಳ್ಳವನಾಗಿ ತಾನೇ ಯಾವನ ಹೃದಯದಲ್ಲಿ ಬಿಡದೆ ಇದ್ದುಕೊಂಡಿರುವನೋ, ಅವನೇ ಭಾಗವತೋತ್ತಮನೆನಿಸುತ್ತಾನೆ.

*****

## ನಿಮಿರಾಜನಿಗೆ ಅಂತರಿಕ್ಷನೆಂಬ ಯೋಗಿಯ ಉಪದೇಶ

**(ಹನ್ನೊಂದನೆಯ ಸ್ಕಂಧ, ಮೂರನೆಯ ಅಧ್ಯಾಯ)**

**ರಾಜೋವಾಚ –**
**ಪರಸ್ಯ ವಿಷ್ಣೋರೀಶಸ್ಯ ಮಾಯಿನಾಮಪಿ ಮೋಹಿನೀಮ್ ।**
**ಮಾಯಾಂ ವೇದಿತುಮಿಚ್ಛಾಮೋ ಭಗವನ್ತೋ ಬ್ರುವನ್ತು ನಃ ॥ 1 ॥**

**ನಾನುತೃಪ್ಯೇ ಜುಷನ್ ಯುಷ್ಮದ್ವಚೋ ಹರಿಕಥಾಮೃತಮ್ ।**
**ಸಂಸಾರತಾಪನಿಸ್ತಪ್ತೋ ಮರ್ತ್ಯಸ್ತತ್ತಾಪಭೇಷಜಮ್ ॥ 2 ॥**

1–2. ನಿಮಿರಾಜನಿಂತೆಂದನು: ಪುಜ್ಯರೆ, ಮಾಯಿಗಳನ್ನು ಮೋಹಗೊಳಿಸುತ್ತಿರುವ ಪರಮೇಶ್ವರನಾದ ವಿಷ್ಣುವಿನ ಮಾಯೆಯನ್ನು ತಿಳಿಯಬೇಕೆಂದು ಇಚ್ಛೆಯಾಗಿದೆ. ದಯವಿಟ್ಟು ತಿಳಿಸಿಕೊಡಿರಿ. ಸಂಸಾರತಾಪದಿಂದ ಬೆಂದುಬೆಂಡಾಗಿರುವ ಮರ್ತ್ಯನಾದ ನಾನು ಆ ತಾಪಕ್ಕೆ ಔಷಧಿಯಂತಿರುವ ತಮ್ಮ ಹರಿಕಥಾರೂಪವಾದ ಅಮೃತವನ್ನು ಎಷ್ಟು ಸೇವಿಸಿದರೂ ತೃಪ್ತನಾಗದೆ ಇರುತ್ತೇನೆ.

**ಅನ್ತರಿಕ್ಷ ಉವಾಚ –**

**[ನಿರ್ಗುಣೇ ಕೇವಲೇ ಸಾಕ್ಷಾದಾತ್ಮನೋ ಯದ್ವಿಪರ್ಯಯಃ ।**
**ಸೈಷಾ ಭಗವತೋ ಮಾಯಾ ಯಯೇದಂ ನಿರ್ಮಮೇ ವಿಭುಃ ॥ 1 ॥**

1. ಅಂತರಿಕ್ಷನಿಂತೆಂದನು: ಕೇವಲನಾದ ನಿರ್ಗುಣನಾದ ಪರಮಾತ್ಮನಲ್ಲಿ ಆತ್ಮನ ವಿಪರ್ಯಾಸವಾಗುತ್ತದೆಯಲ್ಲ, ಇದೇ ಭಗವಂತನ ಮಾಯೆಯು. ಇದರಿಂದ ಆ ವಿಭುವು ಈ ಜಗತ್ತನ್ನು ಸೃಷ್ಟಿಸಿರುತ್ತಾನೆ.

**ಇನ್ದ್ರಿಯಾರ್ಥಭ್ರಮೋ ಜಾಗ್ರತ್ ಸ್ವಾಪ್ನೋಽನ್ತಃಕರಣಭ್ರಮಃ ।**
**ಸುಪ್ತಂ ತದ್ವಾಸನಾಬೀಜಂ ತುರ್ಯಮೂರ್ತಿಸ್ತದನ್ವಯಃ ॥ 2 ॥**

2. ಇಂದ್ರಿಯಗಳು, ವಿಷಯಗಳು – ಎಂಬ ಭ್ರಮೆಯೇ ಎಚ್ಚರವು. ಅಂತಃಕರಣ ಭ್ರಮೆಯೇ ಸ್ವಪ್ನವು. ಅದರ ವಾಸನೆಯ ಬೀಜವೇ ತನಿನಿದ್ರೆಯು. ಈ ಮೂರರಲ್ಲಿಯೂ ಅನುಗತನಾಗಿರುವವನೇ ತುರ್ಯಮೂರ್ತಿಯು.

**ವಿಶುದ್ಧಂ ಜ್ಞಾನಮೇವೈಕಂ ಮಾಯಯಾ ಭಾಸತೇ ತ್ರಿಧಾ ।**
**ಗ್ರಾಹಕಾದ್ಯೈರ್ಯದಾ(ಥಾ?) ಸ್ವಪ್ನೇ ತತ್ತತ್ಸಂವಿತ್ಕ್ರಿಯಾಫಲಮ್ ॥ 3 ॥**

3. ವಿಶುದ್ಧನಾದ ಒಂದೇ ಜ್ಞಾನವೇ ಮಾಯೆಯಿಂದ ಗ್ರಾಹಕ, ಗ್ರಹಣ, ಗ್ರಾಹ್ಯ – ಮುಂತಾದ ಮೂರು ಬಗೆಯಾಗಿ ಸ್ವಪ್ನದಲ್ಲಿ ತೋರುವಂತೆ ತೋರಿಕೊಳ್ಳುತ್ತಿರುವದು. ಆಯಾ ಜ್ಞಾನ, ಕ್ರಿಯೆ, ಫಲ – ಇವುಗಳ ರೂಪದಲ್ಲಿಯೂ ತೋರುತ್ತಿರುವದು.

**ವೈತಥ್ಯಾದ್ವ್ಯಭಿಚಾರಾಚ್ಚ ಮಾಯಾ ತ್ರೈವಿಧ್ಯಮಾತ್ಮನಿ ।**
**ಯಥಾ ಮನೋರಥಃ ಸಪ್ನ ಇತ್ಯಾಮೃಶ್ಯೋಪಶಾಮ್ಯತಿ ॥ 4 ॥**

4. 'ಹುಸಿಯಾಗುವದರಿಂದಲೂ ಬೇರ್ಪಡುತ್ತಿರುವದರಿಂದಲೂ ಮನೋರಥದಂತೆಯೂ ಸ್ವಪ್ನದಂತೆಯೂ ಮೂರು ಬಗೆಯ ಮಾಯೆಯು ತೋರುತ್ತಿರುವದು' – ಎಂದು ವಿಮರ್ಶೆಮಾಡಿಕೊಂಡರೆ ಉಪಶಾಂತಿಯನ್ನು ಹೊಂದುವನು.[1]

[1. ಈ ನಾಲ್ಕು ಶ್ಲೋಕಗಳು ವಿಶಿಷ್ಟಾದ್ವೈತಿಗಳ ಪಾಠದಲ್ಲಿ ಅಧಿಕವಾಗಿವೆ. ಇವು ಇದ್ದರೇ ಈ ಅಧ್ಯಾಯದ ಅರ್ಥವು ಪರಿಪೂರ್ಣವಾಗುವದೆಂದು ನಮಗೆ ತೋರುತ್ತಿದೆ. ಏಕೆಂದರೆ

ಆಗ "ಎಚ್ಚರ, ಕನಸು, ನಿದ್ರೆ; ಜನ್ಮ, ಜೀವನ, ಮರಣ; ಸೃಷ್ಟಿ, ಸ್ಥಿತಿ, ಪ್ರಲಯ – ಎಂಬ ಮೂರು ಬಗೆಯಲ್ಲಿ ತೋರುತ್ತಿರುವದೆಲ್ಲವೂ ಭಗವನ್ಮಾಯೆಯೇ" ಎಂಬ ಅಭಿಪ್ರಾಯವು ಎದ್ದು ತೋರುವದು.]

**ಏಭಿರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ ।**
**ಸಸರ್ಜೋಚ್ಚಾವಚಾನ್ಯಾದ್ಯಃ ಸ್ವಮಾತ್ರಾತ್ಮಪ್ರಸಿದ್ಧಯೇ ॥ 3 ॥**

3. ಎಲೈ ಮಹಾಬಾಹುವೆ, ಈ ಮಹಾಭೂತಗಳಿಂದ ಸರ್ವಭೂತಗಳಿಗೂ ಆತ್ಮನಾಗಿರುವ ಆದ್ಯಪುರುಷನಾದ ಭಗವಂತನು ತನ್ನ ಆತ್ಮಸ್ವರೂಪವನ್ನು ಪ್ರಖ್ಯಾತಿಗೊಳಿಸುವದಕ್ಕಾಗಿ ಉಚ್ಚನೀಚವಾಗಿರುವ ಪ್ರಾಣಿಗಳನ್ನು ಸೃಷ್ಟಿಸಿದನು.

**ಏವಂ ಸೃಷ್ಟಾನಿ ಭೂತಾನಿ ಪ್ರವಿಷ್ಟಃ ಪಞ್ಚಧಾತುಭಿಃ ।**
**ಏಕಧಾ ದಶಧಾಽಽತ್ಮಾನಂ ವಿಭಜಞ್ಜುಷತೇ ಗುಣಾನ್ ॥ 4 ॥**

4. ಪಂಚಭೂತಗಳಿಂದ ಸೃಷ್ಟವಾಗಿರುವ ಪ್ರಾಣಿಗಳನ್ನು ಒಳಹೊಕ್ಕು ಮನಸ್ಸೆಂಬ ಒಂದು ರೂಪದಿಂದಲೂ ಇಂದ್ರಿಯಗಳೆಂಬ ಹತ್ತು ರೂಪಗಳಿಂದಲೂ ವಿಂಗಡಿಸಿಕೊಂಡು ಗುಣಗಳನ್ನು ಅನುಭವಿಸುವದಕ್ಕೆ ಮೊದಲುಮಾಡುವದು.

**ಗುಣೈರ್ಗುಣಾನ್ ಸ ಭುಞ್ಜಾನ ಆತ್ಮಪ್ರದ್ಯೋತಿತೈಃ ಪ್ರಭುಃ ।**
**ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ ॥ 5 ॥**

5. ಆ ಪ್ರಭುವು ತನ್ನಿಂದಲೇ ಬೆಳಗುತ್ತಿರುವ ಗುಣರೂಪವಾದ ಇಂದ್ರಿಯಗಳಿಂದ ವಿಷಯರೂಪವಾದ ಗುಣಗಳನ್ನು ಭೋಗಿಸುತ್ತಾ ಈ ಸೃಷ್ಟಿಯಾದ ಪದಾರ್ಥವನ್ನು ತಾನೆಂದೇ ಬಗೆಯುತ್ತಾ ಇದರಲ್ಲಿ ಆಸಕ್ತನಾಗುತ್ತಾನೆ.

**ಕರ್ಮಾಣಿ ಕರ್ಮಭಿಃ ಕುರ್ವನ್ ಸನಿಮಿತ್ತಾನಿ ದೇಹಭೃತ್ ।**
**ತತ್ತತ್ಕರ್ಮಫಲಂ ಗೃಹ್ಣನ್ ಭ್ರಮತೀಹ ಸುಖೇತರಮ್ ॥ 6 ॥**

6. ಕರ್ಮೇಂದ್ರಿಯಗಳಿಂದ ರಾಗದ್ವೇಷನಿಮಿತ್ತವಾದ ಕರ್ಮಗಳನ್ನು ಮಾಡುತ್ತಾ ಆ ದೇಹಿಯು ಆಯಾ ಕರ್ಮಫಲವನ್ನು ಅನುಭವಿಸುತ್ತಾ ಸುಖದುಃಖಗಳನ್ನು ಹೊಂದಿ ತೊಳಲುತ್ತಿರುವನು.

**ಇತ್ಥಂ ಕರ್ಮಗತೀರ್ಗಚ್ಛನ್ ಬಹ್ವಭದ್ರವಹಾಃ ಪುಮಾನ್ ।**
**ಆಭೂತಸಂಪ್ಲವಾತ್ ಸರ್ಗಪ್ರಲಯಾವಶ್ನುತೇಽವಶಃ ॥ 7 ॥**

7. ಈ ರೀತಿಯಲ್ಲಿ ಈ ಪುರುಷನು ಅನೇಕ ಅಮಂಗಲಕರವಾದ ಕರ್ಮಗತಿಗಳನ್ನು ಪಡೆಯುತ್ತಾ ಪರವಶನಾಗಿ ಪ್ರಲಯವಾಗುವವರೆಗೂ ಜನನಮರಣಗಳನ್ನು ಅನುಭವಿಸುತ್ತಿರುವನು.

**ಧಾತೂಪಪ್ಲವ ಆಸನ್ನೇ ವ್ಯಕ್ತಂ ದ್ರವ್ಯಗುಣಾತ್ಮಕಮ್ ।**
**ಅನಾದಿನಿಧನಃ ಕಾಲೋ ಹ್ಯವ್ಯಕ್ತಾಯಾಪಕರ್ಷತಿ ॥ 8 ॥**

8. ಪಂಚಭೂತಗಳೂ ಮಹಾಪ್ರಲಯವನ್ನು ಹೊಂದುವ ಸಮಯವು ಬರಲಾಗಿ ದ್ರವ್ಯಗುಣಗಳ ರೂಪದಲ್ಲಿರುವ ಈ ವ್ಯಕ್ತಪ್ರಪಂಚವನ್ನು ಆದ್ಯಂತರಹಿತವಾಗಿರುವ ಕಾಲವು ಅವ್ಯಕ್ತಸ್ಥಿತಿಗೆ ಒಯ್ಯುವದು.

**ಶತವರ್ಷಾಣ್ಯನಾವೃಷ್ಟಿರ್ಭವಿಷ್ಯತ್ಯುಲ್ಬಣಾ ಭುವಿ ।**
**ತತ್ಕಾಲೋಪಚಿತೋಷ್ಣಾರ್ಕೋ ಲೋಕಾಂಸ್ತ್ರೀನ್ ಪ್ರತಪಿಷ್ಯತಿ ॥ 9 ॥**

9. ಭೂಲೋಕದಲ್ಲಿ ನೂರು ವರ್ಷಗಳವರೆಗೆ ಉಲ್ಬಣವಾದ ಅನಾವೃಷ್ಟಿ ಯಾಗುವದು. ಆ ಕಾಲಕ್ಕೆ ಸರಿಯಾಗಿ ಕಾವೇರಿದ ಸೂರ್ಯನು ಮೂರು ಲೋಕಗಳನ್ನೂ ಸುಡುವನು.

**ಪಾತಾಲತಲಮಾರಭ್ಯ ಸಙ್ಕರ್ಷಣಮುಖಾನಲಃ ।**
**ದಹನ್ನೂರ್ಧ್ವಶಿಖೋ ವಿಷ್ವಗ್ವರ್ಧತೇ ವಾಯುನೇರಿತಃ ॥ 10 ॥**

10. ಪಾತಾಲದ ಬುಡದಿಂದ ಸಂಕರ್ಷಣಸರ್ಪನ ಮುಖದಿಂದ ಎದ್ದುಕೊಂಡ ಬೆಂಕಿಯು ಮೇಲಕ್ಕೇರುತ್ತಾ ಬಿರುಗಾಳಿಯ ಹೊಡೆತದಿಂದ ಎಲ್ಲೆಲ್ಲಿಯೂ ಹಬ್ಬಿಕೊಳ್ಳುವದು.

**ಸಾಂವರ್ತಕೋ ಮೇಘಗಣೋ ವರ್ಷತಿ ಸ್ಮ ಶತಂ ಸಮಾಃ ।**
**ಧಾರಾಭಿರ್ಹಸ್ತಿಹಸ್ತಾಭಿರ್ಲೀಯತೇ ಸಲಿಲೇ ವಿರಾಟ್ ॥ 11 ॥**

11. ಕಾಲಮೇಘಗಳ ಗುಂಪು ನೂರು ವರ್ಷಗಳವರೆಗೆ ಆನೆಯ ಸೊಂಡಿಲಿನಷ್ಟು ಗಾತ್ರದ ಧಾರೆಗಳಿಂದ ಮಳೆಸುರಿಸುವದು. ಆಗ ನೀರಿನಲ್ಲಿ ವಿರಾಟ್ಪುರುಷನ ದೇಹವು ಕರಗಿಹೋಗುವದು.

**ತತೋ ವಿರಾಜಮುತ್ಸೃಜ್ಯ ವೈರಾಜಃ ಪುರುಷೋ ನೃಪ ।**
**ಅವ್ಯಕ್ತಂ ವಿಶತೇ ಸೂಕ್ಷ್ಮಂ ನಿರಿನ್ಧನ ಇವಾನಲಃ ॥ 12 ॥**

12. ಎಲೈ ರಾಜನೆ, ಆಗ ವಿರಾಟ್ಪುರುಷನು ವಿರಾಡ್ದೇಹವನ್ನು ಬಿಟ್ಟು ಕಟ್ಟಿಗೆಯನ್ನು ಸುಟ್ಟುಹಾಕಿದ ಬೆಂಕಿಯಂತೆ ಸೂಕ್ಷ್ಮವಾದ ಅವ್ಯಕ್ತದಲ್ಲಿ ಬೆರೆತುಕೊಳ್ಳುವನು.

**ವಾಯುನಾ ಹೃತಗನ್ಧಾ ಭೂಃ ಸಲಿಲತ್ವಾಯ ಕಲ್ಪತೇ ।**
**ಸಲಿಲಂ ತದ್ಧೃತರಸಂ ಜ್ಯೋತಿಷ್ಟ್ವಾಯೋಪಕಲ್ಪತೇ ॥ 13 ॥**

13. ಗಾಳಿಯು ವಾಸನೆಯನ್ನೆಲ್ಲ ಒಯ್ಯಲಾಗಿ ಭೂಮಿಯು ನೀರಾಗುವದು. ಆ ನೀರು ರಸವನ್ನು ಕಳೆದುಕೊಂಡು ಅಗ್ನಿಯಾಗುವದು.

**ಹೃತರೂಪಂ ತು ತಮಸಾ ವಾಯೌ ಜ್ಯೋತಿಃ ಪ್ರಲೀಯತೇ ।**
**ಹೃತಸ್ಪರ್ಶೋಽವಕಾಶೇನ ವಾಯುರ್ನಭಸಿ ಲೀಯತೇ ।**
**ಕಾಲಾತ್ಮನಾ ಹೃತಗುಣಂ ನಭ ಆತ್ಮನಿ ಲೀಯತೇ ॥ 14 ॥**

14. ಅಗ್ನಿಯ ರೂಪವು ತಮಸ್ಸಿನಿಂದ ಹೋಗಲಾಗಿ ಅಗ್ನಿಯು ವಾಯುವಿನಲ್ಲಿ ಲಯವಾಗುವದು; ವಾಯುವಿನ ಸ್ಪರ್ಶವನ್ನು ಆಕಾಶವು ಅಪಹರಿಸಲಾಗಿ ವಾಯುವು ಆಕಾಶದಲ್ಲಿ ಅಡಗುವದು. ಆಕಾಶದ ಗುಣವನ್ನು ಕಾಲವು ಅಪಹರಿಸಲಾಗಿ ಆಕಾಶವು ಆತ್ಮನಲ್ಲಿ – ತಾಮಸಾಹಂಕಾರದಲ್ಲಿ – ಲಯವಾಗುವದು.

**ಇನ್ದ್ರಿಯಾಣಿ ಮನೋ ಬುದ್ಧಿಃ ಸಹ ವೈಕಾರಿಕೈರ್ನೃಪ ।**
**ಪ್ರವಿಶನ್ತಿ ಹ್ಯಹಙ್ಕಾರಂ ಸ್ವಗುಣೈರಹಮಾತ್ಮನಿ ॥ 15 ॥**

15. ಇಂದ್ರಿಯಗಳೂ ಬುದ್ಧಿಯೂ ರಾಜಸಾಹಂಕಾರವನ್ನೂ ಮನಸ್ಸು ವೈಕಾರಿಕ ದೇವತೆಗಳೊಡನೆ ಸಾತ್ತ್ವಿಕಾಹಂಕಾರವನ್ನೂ ತನ್ನ ಕಾರ್ಯಗಳೊಡಗೂಡಿದ ಅಹಂಕಾರವು ಮಹತ್ತತ್ತ್ವರೂಪನಾದ ಆತ್ಮನಲ್ಲಿಯೂ ಅವನು ಅವ್ಯಕ್ತದಲ್ಲಿಯೂ ಲಯವಾಗುವದು.

**ಏಷಾ ಮಾಯಾ ಭಗವತಃ ಸರ್ಗಸ್ಥಿತ್ಯನ್ತಕಾರಿಣೀ ।**
**ತ್ರಿವರ್ಣಾ ವರ್ಣಿತಾಽಸ್ಮಾಭಿಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ 16 ॥**

16. ರಾಜನೆ, ಹೀಗೆ ಸೃಷ್ಟಿಸ್ಥಿತಿಲಯಗಳನ್ನು ಮಾಡುವ ತ್ರಿಗುಣಾತ್ಮಕವಾದ ಭಗವಂತನ ಮಾಯೆಯನ್ನು ವರ್ಣಿಸಿರುತ್ತೇವೆ. ಇನ್ನೇನು ಕೇಳಲಿಚ್ಛಿಸುವೆ?

*****

# ನಿಮಿರಾಜನಿಗೆ ಪ್ರಬುದ್ಧನೆಂಬ ಯೋಗಿಯ ಉಪದೇಶ

## (ಹನ್ನೊಂದನೆಯ ಸ್ಕಂಧ, ಮೂರನೆಯ ಅಧ್ಯಾಯ)

**ರಾಜೋವಾಚ –**

**ಯಥೇಮಾಮೈಶ್ವರೀಂ ಮಾಯಾಂ ದುಸ್ತರಾಮಕೃತಾತ್ಮಭಿಃ ।**
**ತರನ್ತ್ಯಞ್ಜಃ ಸ್ಥೂಲಧಿಯೋ ಮಹರ್ಷ ಇದಮುಚ್ಯತಾಮ್ ॥ 17 ॥**

17. ನಿಮಿರಾಜನಿಂತೆಂದನು: ಈ ಈಶ್ವರಮಾಯೆಯನ್ನು ಅಸಂಸ್ಕೃತಾತ್ಮರಾದವರು ದಾಟಲಾರರಷ್ಟೆ? ಸ್ಥೂಲಬುದ್ಧಿಯುಳ್ಳವರು ಇದನ್ನು ಸುಲಭವಾಗಿ ಹೇಗೆ ದಾಟಬಹುದೆಂಬುದನ್ನು ಎಲೈ ಮಹರ್ಷಿಯೆ, ದಯವಿಟ್ಟು ಹೇಳಬೇಕು.

**ಪ್ರಬುದ್ಧ ಉವಾಚ –**
**ಕರ್ಮಾಣ್ಯಾರಭಮಾಣಾನಾಂ ದುಃಖಹತ್ಯೈ ಸುಖಾಯ ಚ ।**
**ಪಶ್ಯೇತ್ ಪಾಕವಿಪರ್ಯಾಸಂ ಮಿಥುನೀಚಾರಿಯಣಾಂ ನೃಣಾಮ್ ॥ 18 ॥**

18. ಪ್ರಬುದ್ಧಋಷಿ ಇಂತೆಂದನು: ದುಃಖದ ಪರಿಹಾರಕ್ಕಾಗಿಯೂ ಸುಖದ ಪ್ರಾಪ್ತಿಗಾಗಿಯೂ ಕರ್ಮಗಳನ್ನು ಮಾಡುತ್ತಿರುವ ಕಾಮಾಸಕ್ತಜನರಿಗೆ ಫಲವು ವಿಪರೀತವಾಗಿಯೇ ಆಗುತ್ತಿರುವದನ್ನು ನೋಡುತ್ತಿರಬೇಕು.

**ನಿತ್ಯಾರ್ತಿದೇನ ವಿತ್ತೇನ ದುರ್ಲಭೇನಾಽಽತ್ಮಮೃತ್ಯುನಾ ।**
**ಗೃಹಾಪತ್ಯಾಪ್ತಪಶುಭಿಃ ಕಾ ಪ್ರೀತಿಃ ಸಾಧಿತೈಶ್ಚಲೈಃ ॥ 19 ॥**

19. ನಿತ್ಯವೂ ದುಃಖವನ್ನೇ ಕೊಡುತ್ತಿರುವ, ಸಂಪಾದಿಸಿಕೊಳ್ಳುವದು ಕಷ್ಟವಾಗಿರುವ, ತನಗೆ ಮೃತ್ಯುವಾಗಿರುವ ಧನವನ್ನು ಸಂಪಾದಿಸಿಕೊಂಡೂ ಯಾವ ಸಂತೋಷವಾದೀತು? ಮನೆ, ಮಕ್ಕಳು, ಆಪ್ತರು, ಪಶುಗಳು – ಇವುಗಳನ್ನು ಸಂಪಾದಿಸಿಕೊಂಡರೆತಾನೆ ಆ ಚಂಚಲವಾಗಿರುವ ವಸ್ತುಗಳಿಂದ ಏನು ಪ್ರಯೋಜವಾದೀತು?

**ಏವಂ ಲೋಕಂ ಪರಂ ವಿದ್ಯಾತ್ ನಶ್ವರಂ ಕರ್ಮನಿರ್ಮಿತಮ್ ।**
**ಸತುಲ್ಯಾತಿಶಯಧ್ವಂಸಂ ಯಥಾ ಮಣ್ಡಲವರ್ತಿನಾಮ್ ॥ 20 ॥**

20. ಹೀಗೆಯೇ ಪರಲೋಕವೂ ಕರ್ಮಸಾಧ್ಯವಾಗಿರುವದರಿಂದ

ನಾಶವಾಗತಕ್ಕದ್ದೆಂದೂ ಮಂಡಲಾಧಿಪತಿಗಳಿಗೂ ಇರುವಂತೆ ಅಲ್ಲಿಯೂ ಸಮಾನರೊಡನೆ ಸ್ಪರ್ಧೆ, ಹೆಚ್ಚಿನವರಲ್ಲಿ ಅಸೂಯೆ, ನಾಶವಾಗುವದೆಂಬ ಭಯ – ಇವುಗಳಾಗುತ್ತಿರುವವೆಂಬುದನ್ನು ಆಲೋಚಿಸುತ್ತಿರಬೇಕು.

**ತಸ್ಮಾದ್ಗುರುಂ ಪ್ರಪದ್ಯೇತ ಜಿಜ್ಞಾಸುಃ ಶ್ರೇಯ ಉತ್ತಮಮ್ ।**
**ಶಾಬ್ದೇಪರೇ ಚ ನಿಷ್ಣಾತಂ ಬ್ರಹ್ಮಣ್ಯುಪಶಮಾಶ್ರಯಮ್ ॥ 21 ॥**

21. ಆದ್ದರಿಂದ ಉತ್ತಮವಾದ ಶ್ರೇಯಸ್ಸನ್ನು ಅರಿತುಕೊಳ್ಳಬೇಕೆಂಬುವನು ಶಬ್ದಬ್ರಹ್ಮದಲ್ಲಿಯೂ ಪರಬ್ರಹ್ಮದಲ್ಲಿಯೂ ತತ್ತ್ವಜ್ಞನಾಗಿರುವ ಉಪಶಾಂತನಾದ ಗುರುವನ್ನು ಬಳಿಸಾರಬೇಕು.

**ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇದ್ಗುರ್ವಾತ್ಮದೈವತಃ ।**
**ಅಮಾಯಯಾಽನುವೃತ್ತ್ಯಾ ಯೈಸ್ತುಷ್ಯೇದಾತ್ಮಾಽಽತ್ಮದೋ ಹರಿಃ ॥ 22 ॥**

22. ಆ ಗುರುವಿನ ಬಳಿಯಲ್ಲಿ ಗುರುವೇ ತನ್ನ ಆತ್ಮನು, ಆರಾಧ್ಯ ದೇವತೆ – ಎಂಬ ಭಾವನೆಯಿಂದ ನಿರ್ಮಾಯವಾಗಿ ಸೇವಿಸುತ್ತಾ ಎಲ್ಲರಿಗೂ ಆತ್ಮನೂ ಆತ್ಮತತ್ತ್ವವನ್ನೇ ಅನುಗ್ರಹಿಸುವವನೂ ಆದ ಶ್ರೀಹರಿಗೆ ಸಂತೋಷ ವನ್ನುಂಟುಮಾಡುವದಕ್ಕೆ ಭಾಗವತಧರ್ಮಗಳನ್ನು ಕಲಿತುಕೊಳ್ಳಬೇಕು.

**ಸರ್ವತೋ ಮನಸೋಽಸಙ್ಗಮಾದೌ ಸಙ್ಗಂ ಚ ಸಾಧುಷು ।**
**ದಯಾಂ ಮೈತ್ರೀಂ ಪ್ರಶ್ರಯಂ ಚ ಭೂತೇಷ್ವದ್ಧಾ ಯಥೋಚಿತಮ್ ॥ 23 ॥**

**ಶೌಚಂ ತಪಸ್ತಿತಿಕ್ಷಾಂ ಚ ಮೌನಂ ಸ್ವಾಧ್ಯಾಯಮಾರ್ಜವಮ್ ।**
**ಬ್ರಹ್ಮಚರ್ಯಮಹಿಂಸಾಂ ಚ ಸಮತ್ವಂ ದ್ವಂದ್ವಸಂಜ್ಞಯೋಃ ॥ 24 ॥**

**ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಮನಿಕೇತತಾಮ್ ।**
**ವಿವಿಕ್ತಚೀರವಸನಂ ಸನ್ತೋಷಂ ಯೇನ ಕೇನಚಿತ್ ॥ 25 ॥**

**ಶ್ರದ್ಧಾಂ ಭಾಗವತೇ ಶಾಸ್ತ್ರೇಽನಿನ್ದಾಮನ್ಯತ್ರ ಚಾಪಿ ಹಿ ।**
**ಮನೋವಾಕ್ಕರ್ಮದಣ್ಡಂ ಚ ಸತ್ಯಂ ಶಮದಮಾವಪಿ ॥ 26 ॥**

**ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತಕರ್ಮಣಃ ।**
**ಜನ್ಮಕರ್ಮಗುಣಾನಾಂ ಚ ತದರ್ಥೇಽಖಿಲಚೇಷ್ಟಿಯಮ್ ॥ 27 ॥**

23–27. ಅಂಥ ಭಾಗವತಧರ್ಮಗಳು ಯಾವವೆಂದರೆ: ಮನಸ್ಸು ಏತರಲ್ಲಿಯೂ ಆಸಕ್ತಿಯಿಲ್ಲದೆ ಇರುವದು, ಮೊದಲು ಸಾಧುಗಳಲ್ಲಿಯೇ ಸಂಗವನ್ನು ಮಾಡಿಕೊಳ್ಳುವದು, ತನಗಿಂತ ಕಡಿಮೆಯ ಅಂತಸ್ತಿನವರಲ್ಲಿ ದಯೆ, ಸಮಾನರಲ್ಲಿ ಮೈತ್ರಿ, ದೊಡ್ಡವರಲ್ಲಿ ನಮ್ರಭಾವವಿರುವದು, ಇತರ ಪ್ರಾಣಿಗಳಲ್ಲಿಯೂ ಯಥೋಚಿತವಾಗಿ ಪ್ರೀತಿಯಿಂದ ನಡೆದುಕೊಳ್ಳುವದು; ಶರೀರ ವನ್ನೂ ಮನಸ್ಸನ್ನೂ ಶುಚಿಯಾಗಿಟ್ಟುಕೊಳ್ಳುವದು; ತಪಸ್ಸು, ಸರ್ವದುಃಖಗಳನ್ನೂ ತಡೆದುಕೊಳ್ಳುವದು, ಮೌನ, ಅಧ್ಯಯನಮಾಡುತ್ತಿರುವದು, ಋಜು ಭಾವ, ಬ್ರಹ್ಮಚರ್ಯೆ, ಅಹಿಂಸೆ, ಸುಖದುಃಖಾದಿಗಳಲ್ಲಿ ಏರುಪೇರಿಲ್ಲದಿರುವದು, ಎಲ್ಲೆಲ್ಲಿಯೂ ಆತ್ಮನಾದ ಈಶ್ವರನನ್ನು ಕಾಣುತ್ತಿರುವದು, ಏಕಾಂತವಾಸ, ಗೊತ್ತಾದ ಮನೆಯಿಲ್ಲದಿರುವದು, ಶುಭ್ರವಾದ ನಾರುಬಟ್ಟೆಯನ್ನುಡುವದು, ಎಷ್ಟು ಸಿಕ್ಕಿದರೆ ಅಷ್ಟರಿಂದ ತೃಪ್ತನಾಗುವದು, ಭಗವಂತನ ವಿಷಯುಕವಾದ ಶಾಸ್ತ್ರದಲ್ಲಿ ಶ್ರದ್ಧೆ, ಅದಕ್ಕಿಂತ ಬೇರೆಯಾದದ್ದನ್ನು ನಿಂದೆಮಾಡದಿರುವದು, ಮನಸ್ಸು, ವಾಕ್ಕು, ಕಾಯ – ಎಂಬ ಕರಣತ್ರಯವನ್ನು ಹಿಡಿತದಲ್ಲಿಟ್ಟುಕೊಳ್ಳುವದು, ಸತ್ಯವಚನ, ಶಾಂತಿದಾಂತಿಗಳು, ಶ್ರೀಹರಿಯ ಅದ್ಭುತಲೀಲಾಕರ್ಮಗಳೆ ಮತ್ತು ಆತನ ಜನ್ಮಕರ್ಮಗುಣಗಳ ವಿಷಯವಾಗಿ ಶ್ರವಣಮಾಡುತ್ತಿರುವದು, ಕೀರ್ತನಮಾಡುವದು, ಆತನನ್ನು ಧ್ಯಾನಮಾಡುತ್ತಿರುವದು, ಆತನಿಗಾಗಿಯೇ ತನ್ನ ವ್ಯಾಪಾರವನ್ನೆಲ್ಲ ಮೀಸಲಾಗಿಡುವದು.

**ಇಷ್ಟಂ ದತ್ತಂ ತಪೋ ಜಪ್ತಂ ವೃತ್ತಂ ಯಚ್ಚಾತ್ಮನಃ ಪ್ರಿಯಮ್ ।**
**ದಾರಾನ್ ಸುತಾನ್ಗೃಹಾನ್ಪ್ರಾಣಾನ್ ಯತ್ ಪರಸ್ಮೈ ನಿವೇದನಮ್ ॥ 28 ॥**

**ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಮ್ ।**
**ಪರಿಚರ್ಯಾಂಚೋಭಯತ್ರ ಮಹತ್ಸು ನೃಷು ಸಾಧುಷು ॥ 29 ॥**

**ಪರಸ್ಪರಾನುಕಥನಂ ಪಾವನಂ ಭಗವದ್ಯಶಃ ।**
**ಮಿಥೋ ರತಿರ್ಮಿಥಸ್ತುಷ್ಟಿರ್ನಿವೃತ್ತಿರ್ಮಿಥ ಆತ್ಮನಃ ॥ 30 ॥**

28–30. ತಾನು ಮಾಡುವ ಯಜ್ಞ, ದಾನ, ತಪಸ್ಸು, ಜಪ – ಇವನ್ನೂ ತನ್ನ ನಡತೆ; ತನಗೆ ಯಾವದು ಪ್ರಿಯವಾಗಿದ್ದರೂ ಅದು; ಹೆಂಡತಿ, ಮಕ್ಕಳು, ಮನೆ, ಪ್ರಾಣ – ಎಲ್ಲವನ್ನೂ ಪರಮಾತ್ಮನಿಗೆ ಅರ್ಪಿಸುವದು; ಕೃಷ್ಣನೇ ತಮ್ಮ ಆತ್ಮನು, ಸ್ವಾಮಿ – ಎಂದು ತಿಳಿದುಕೊಂಡಿರುವವರಲ್ಲಿಯೂ ಸಾಧಾರಣ

ಮನುಷ್ಯರಲ್ಲಿಯೂ ಸುಹೃದ್ಭಾವದಿಂದಿರುವದು, ಮಹಾಪುರುಷರಲ್ಲಿಯೂ ಸಾಧುಗಳಲ್ಲಿಯೂ ಸೇವಕವೃತ್ತಿಯಿಂದಿರುವದು, ಪವಿತ್ರವಾದ ಭಗವಂತನ ಕೀರ್ತಿಯನ್ನು ಒಬ್ಬರಿಗೊಬ್ಬರು ಹೇಳುತ್ತಿರುವದು; ತನ್ನಲ್ಲಿಯೇ ಇದ್ದುಕೊಂಡು ಆತ್ಮರೂ, ಆತ್ಮನಿಂದ ತುಷ್ಟಿ, ಮಿಕ್ಕದ್ದೆಲ್ಲವನ್ನೂ ಬಿಟ್ಟು ತನ್ನಲ್ಲಿ ಇದ್ದುಕೊಂಡಿರುವದು – ಇವುಗಳು.

**ಸ್ಮರನ್ತಃ ಸ್ಮಾರಯನ್ತಶ್ಚ ಮಿಥೋಽಘೌಘಹರಂ ಹರಿಮ್ ।**
**ಭಕ್ತ್ಯಾ ಸಞ್ಜಾತಯಾ ಬಿಭ್ರತ್ಯುತ್ಪುಲಕಾಂ ತನುಮ್ ॥ 31 ॥**

31. ಪಾಪರಾಶಿಯನ್ನೆಲ್ಲ ಹರಣಮಾಡುವ ಶ್ರೀಹರಿಯನ್ನು ಸ್ಮರಿಸಿಕೊಳ್ಳುತ್ತಲೂ ಇನ್ನೊಬ್ಬರ ನೆನಪಿಗೆ ತರುತ್ತಲೂ ಇಂಥ ಗೌಣಭಕ್ತಿಯಿಂದ ಉಂಟಾದ ಪರಭಕ್ತಿಯಿಂದ ರೋಮಾಂಚದ ಶರೀರವನ್ನು (ಭಾಗವತರು) ಧರಿಸಿರುವರು.

**ಕ್ವಚಿದ್ರುದನ್ತ್ಯಚ್ಯುತಚಿನ್ತಯಾ ಕ್ವಚಿ–**
**ದ್ಧಸನ್ತಿ ನನ್ದನ್ತಿ ವದನ್ತ್ಯಲೌಕಿಕಾಃ ।**
**ನೃತ್ಯನ್ತಿ ಗಾಯನ್ತ್ಯನುಶೀಲಯನ್ತ್ಯಜಂ**
**ಭವನ್ತಿ ತೂಷ್ಣೀಂ ಪರಮೇತ್ಯ ನಿರ್ವೃತಾಃ ॥ 32 ॥**

32. ಕೆಲವು ವೇಳೆ ಅಚ್ಯುತನ ಚಿಂತೆಯಿಂದ ಅಳುತ್ತಿರುವರು, ಕೆಲವು ವೇಳೆ ನಗುತ್ತಿರುವರು, ಆನಂದದಿಂದಿರುವರು, ಲೋಕದ ಜನರ ಸ್ವಭಾವಕ್ಕೆ ವಿಲಕ್ಷಣವಾಗಿ ಏನನ್ನೋ ಮಾತನಾಡಿಕೊಳ್ಳುತ್ತಿರುವರು, ಕುಣಿಯುತ್ತಿರುವರು, ಹಾಡುತ್ತಿರುವರು, ಪರಮಾತ್ಮನ ಲೀಲೆಗಳನ್ನೇ ಅಭಿನಯಿಸುತ್ತಿರುವರು, ಪರಮಾತ್ಮನನ್ನೇ ಸೇರಿ ಆನಂದದಿಂದ ಸುಮ್ಮನಿರುವರು.

**ಇತಿ ಭಾಗವತಾನ್ ಧರ್ಮಾಞ್ಶಿಕ್ಷನ್ ಭಕ್ತ್ಯಾ ತದುತ್ಥಯಾ ।**
**ನಾರಾಯಣಪರೋ ಮಾಯಾಮಞ್ಜಸ್ತರತಿ ದುಸ್ತರಾಮ್ ॥ 33 ॥**

33. ಇಂತೀ ಭಗವತಧರ್ಮಗಳನ್ನು ಕಲಿತುಕೊಳ್ಳುತ್ತಾ ನಾರಾಯಣನಲ್ಲಿಯೇ ನಿಷ್ಠನಾಗಿರುವಾತನು ದುಸ್ತರವಾದ ಮಾಯೆಯನ್ನು ಸುಲಭವಾಗಿ ದಾಟುವನು.

* * * * *

# ನಿಮಿರಾಜನಿಗೆ ಪಿಪ್ಪಲಾಯನೆಂಬ ಯೋಗಿಯ ಉಪದೇಶ

## (ಹನ್ನೊಂದನೆಯ ಸ್ಕಂಧ, ಮೂರನೆಯ ಅಧ್ಯಾಯ)

**ರಾಜೋವಾಚ –**

**ನಾರಾಯಣಾಭಿಧಾನಸ್ಯ ಬ್ರಹ್ಮಣಃ ಪರಮಾತ್ಮನಃ ।**
**ನಿಷ್ಠಾಮರ್ಹಥ ನೋ ವಕ್ತುಂ ಯೂಯಂ ಹಿ ಬ್ರಹ್ಮವಿತ್ತಮಾಃ ॥ 34 ॥**

34. ನಿಮಿರಾಜನಿಂತೆಂದನು: ಋಷಿವರ್ಯರೆ, ನಾರಾಯಣನೆಂಬ ಹೆಸರಿನ ಬ್ರಹ್ಮವಾಗಿರುವ ಪರಮಾತ್ಮನ ಪರಸ್ವರೂಪವನ್ನು ನಮಗೆ ದಯವಿಟ್ಟು ತಿಳಿಸಿಕೊಡಿರಿ. ಬ್ರಹ್ಮಜ್ಞಾನಿಗಳಲ್ಲಿ ನೀವೇ ಶ್ರೇಷ್ಠರಷ್ಟೆ? ಆದ್ದರಿಂದ ನಿಮ್ಮ ಅಭಿಪ್ರಾಯವನ್ನು ತಿಳಿಸಿಕೊಡಿರಿ.

**ಪಿಪ್ಪಲಾಯನ ಉವಾಚ –**

**ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ**
**ಯತ್ ಸ್ವಪ್ನಜಾಗರಸುಷುಪ್ತಿಷು ಸದ್ಬಹಿಶ್ಚ ।**
**ದೇಹೇನ್ದ್ರಿಯಾಸುಹೃದಯಾನಿ ಚರನ್ತಿ ಯೇನ**
**ಸಞ್ಜೀವಿತಾನಿ ತದವೇಹಿ ಪರಂ ನರೇನ್ದ್ರ ॥ 35 ॥**

35. ಪಿಪ್ಪಲಾಯನನಿಂತೆಂದನು: ಎಲೈ ನರೇಂದ್ರನೆ, ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಯಾರು ಹೇತುವೋ, ಯಾವದಕ್ಕೆ ಮತ್ತೊಂದು ಕಾರಣವಿಲ್ಲವೋ, ಯಾವದು ಎಚ್ಚರ, ಕನಸು, ನಿದ್ರೆ – ಈ ಅವಸ್ಥೆಗಳ ಒಳಗೂ ಹೊರಗೂ ತಾನೇ ಇದ್ದುಕೊಂಡಿರುವದೋ, ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು – ಇವು ಯಾವದರ ಬಲದಿಂದ ಸದಾ ಜೀವಿತವಾಗಿ ತಮ್ಮ ತಮ್ಮ ವ್ಯಾಪಾರವನ್ನು ಮಾಡುತ್ತಿರುವವೋ, ಅದೇ ಪರಬ್ರಹ್ಮವೆಂದು ತಿಳಿ.

**ನೈತನ್ಮನೋ ವಿಶತಿ ವಾಗುತ ಚಕ್ಷುರಾತ್ಮಾ**
**ಪ್ರಾಣೇನ್ದ್ರಿಯಾಣಿ ಚ ಯಥಾಽನಲಮರ್ಚಿಷಃ ಸ್ವಾಃ ।**
**ಶಬ್ದೋಽಪಿ ಬೋಧಕನಿಷೇಧತಯಾಽಽತ್ಮಮೂಲ–**
**ಮರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ ॥ 36 ॥**

36. ಈ ಬ್ರಹ್ಮದ ಸ್ವರೂಪವನ್ನು ಮನಸ್ಸಾಗಲಿ, ವಾಕ್ಕಾಗಲಿ,

ಚಕ್ಷುರಿಂದ್ರಿಯವಾಗಲಿ, ಬುದ್ಧಿಯಾಗಲಿ, ಪ್ರಾಣವಾಗಲಿ, ಇತರ ಇಂದ್ರಿಯಗಳಾಗಲಿ – ಕಿಡಿಗಳು ಹೇಗೆ ಬೆಂಕಿಯನ್ನು ವಿಷಯೀಕರಿಸಿ ಸುಡಲಾರದೆ ಬೆಳಗಲಾರದೆ ಇರುವವೋ ಹಾಗೆ – ವಿಷಯೀಕರಿಸಲಾರವು. ಶಬ್ದವೂ ಕೂಡ ಇದನ್ನು ಬೋಧಿಸುವ ಮಾತಿಲ್ಲವೆಂದು ತಿಳಿಸುವದರಿಂದಲೇ ತನ್ನ ಮೂಲವಾದ ಈ ಅರ್ಥವನ್ನು ತಿಳಿಸುತ್ತಿರುವದು. ಈ ಪರಮಾತ್ಮತತ್ತ್ವವಿಲ್ಲದೆ ಯಾವದನ್ನೂ ಅಲ್ಲಗಳೆಯುವದುಕೂಡ ಆಗಲಾರದು.

**ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ**
**ಸೂತ್ರಂ ಮಹಾನಹಮಿತಿ ಪ್ರವದನ್ತಿ ಜೀವಮ್ ।**
**ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ**
**ಬ್ರಹ್ಮೈವ ಭಾತಿ ಸದಸಚ್ಚ ತಯೋಃ ಪರಂ ಯತ್ ॥ 37 ॥**

37. ಯಾವದು ಮೊದಲು ತಾನೊಂದೇ ಇರುವದೋ ಅದನ್ನೇ ಸತ್ತ್ವ, ರಜಸ್ಸು, ತಮಸ್ಸು – ಎಂದು ಮೂರು ಬಗೆಯಾಗಿರುವ ಪ್ರಧಾನವೆಂದೂ ಸೂತ್ರಾತ್ಮನೆಂದೂ ಮಹಾನಾತ್ಮನೆಂದೂ ಅಹಂಕಾರನೆಂದೂ ಜೀವನೆಂದೂ ಕರೆಯುತ್ತಿರುವರು. ಜ್ಞಾನಕ್ರಿಯೆ, ಅರ್ಥ, ಫಲ – ಈ ಎಲ್ಲಾ ರೂಪದಿಂದಲೂ ಬ್ರಹ್ಮವೇ ತೋರಿಕೊಳ್ಳುತ್ತಿರುವದು. ಸತ್ತು, ಅಸತ್ತು, ಅವೆರಡಕ್ಕಿಂತಲೂ ಮೀರಿರುವದು – ಎಲ್ಲವೂ ಬ್ರಹ್ಮವೇ.

**ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ**
**ನ ಕ್ಷೀಯತೇ ಸವನವಿದ್ವ್ಯಭಿಚಾರಿಣಾಂ ಹಿ ।**
**ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ**
**ಪ್ರಾಣೋ ಯಥೇನ್ದ್ರಿಯಬಲೇನ ವಿಕಲ್ಪಿತಂ ಸತ್ ॥ 38 ॥**

38. ಈ ಪರಮಾತ್ಮನು ಹುಟ್ಟಿರುವದಿಲ್ಲ, ಸಾಯುವದಿಲ್ಲ, ಬೆಳೆಯುವದಿಲ್ಲ, ಕ್ಷಯವಾಗುವದಿಲ್ಲ, ವ್ಯಭಿಚರಿತಸ್ವರೂಪವಾದ ದೇಹಾದಿಗಳ ಅವಸ್ಥೆಗಳನ್ನು ನೋಡಿ ಅರಿಯುತ್ತಿರುವನು, ಎಲ್ಲೆಲ್ಲಿಯೂ ಶಾಶ್ವತವಾಗಿ ನಾಶವಾಗದ ಚೈತನ್ಯಮಾತ್ರ ಸ್ವರೂಪನಾಗಿರುತ್ತಾನೆ. ಹೇಗೆ ಪ್ರಾಣವೊಂದೇ ಇದ್ದು ಬಗೆಬಗೆಯಾಗಿ ವಿಕಲ್ಪಿತವಾಗಿರುವದೋ ಹಾಗೆಯೇ ಇಂದ್ರಿಯಗಳ ನಿಮಿತ್ತದಿಂದ ಬಗೆಬಗೆಯಾಗಿ ವಿಕಲ್ಪನಾಗಿರುತ್ತಾನೆ.

**ಅಣ್ಡೇಷು ಪೇಶಿಷು ತರುಷ್ವವಿನಿಶ್ಚಿತೇಷು**
**ಪ್ರಾಣೋ ಹಿ ಜೀವನಮುಪಧಾವತಿ ತತ್ರ ತತ್ರ ।**
**ಸನ್ನೇ ಯದಿನ್ದ್ರಿಯಗಣೇಽಹಮಿ ಚ ಪ್ರಸುಪ್ತೇ**
**ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ॥ 39 ॥**

39. ಅಂಡಗಳಲ್ಲಿಯೂ ಜರಾಯುಜಗಳಲ್ಲಿಯೂ ಉದ್ಭಿಜ್ಜವಾದ ವೃಕ್ಷಗಳಲ್ಲಿಯೂ ನಿಶ್ಚಿತವಾಗದ ಸ್ವೇದಜಗಳಲ್ಲಿಯೂ ಅಲ್ಲಲ್ಲಿ ಜೀವನನ್ನು ಪ್ರಾಣವು ಅನುಸರಿಸಿಕೊಂಡಿರುತ್ತದೆಯಲ್ಲವೆ? ಇಂದ್ರಿಯಸಮೂಹವು ಸುಮ್ಮನಾಗಿ ಅಹಂಕಾರವೂ ಸುಪ್ತವಾಗಲಾಗಿ ಲಿಂಗಶರೀರಸಂಬಂಧವೇ ಇಲ್ಲದೆ ಆತ್ಮನು ಕೂಟಸ್ಥನಾಗಿ ಹಾಗೇ ಇರುತ್ತಾನೆ. ಆದ್ದರಿಂದಲೇ ನಮಗೆ 'ಈವರೆಗೆ ಏನೂ ಅರಿಯದೆ ಇದ್ದೆವು' ಎಂಬ ಸ್ಮರಣೆಯು ಎಚ್ಚತ್ತಬಳಿಕ ಆಗುತ್ತಿರುವದು.

**ಯರ್ಹ್ಯಬ್ಜನಾಭಚರಣೈಷಣಯೋರುಭಕ್ತ್ಯಾ**
**ಚೇತೋ ಮಲಾನಿ ವಿಧಮೇದ್ಗುಣಕರ್ಮಜಾನಿ ।**
**ತಸ್ಮಿನ್ ವಿಶುದ್ಧ ಉಪಲಭ್ಯತ ಆತ್ಮತತ್ತ್ವಂ**
**ಸಾಕ್ಷಾದ್ಯಥಾಮಲದೃಶೋಃ ಸವಿತೃಪ್ರಕಾಶಃ ॥ 40 ॥**

40. ಯಾವಾಗ ಕಮಲನಾಭನಾದ ಶ್ರೀಹರಿಯ ಚರಣವನ್ನೇ ಬಯಸುವ ಹೆಚ್ಚಿನ ಭಕ್ತಿಯಿಂದ ಚಿತ್ತವು ಗುಣಕರ್ಮಗಳಿಂದಾಗುವ ಕಲ್ಮಷಗಳನ್ನು ತೊಳೆದುಕೊಳ್ಳುವದೋ, ಆಗ ಅದು ವಿಶುದ್ಧವಾಗಲು – ನಿರ್ಮಲವಾದ ಕಣ್ಣುಗಳಿಗೆ ಮೊದಲಿಂದಲೂ ಇದ್ದುಕೊಂಡೇ ಇರುವ ಸೂರ್ಯಪ್ರಕಾಶವು ಕಾಣುವಂತೆ ಆತ್ಮತತ್ತ್ವವು ನೇರಾಗಿ ಕಾಣಬರುವದು.

*****

## ನಿಮಿರಾಜನಿಗೆ ಅವಿಹೋತ್ರನೆಂಬ ಯೋಗಿಯ ಉಪದೇಶ

### (ಹನ್ನೊಂದನೆಯ ಸ್ಕಂಧ, ಮೂರನೆಯ ಅಧ್ಯಾಯ)

**ರಾಜೋವಾಚ –**
**ಕರ್ಮಯೋಗಂ ವದತ ನಃ ಪುರುಷೋ ಯೇನ ಸಂಸ್ಕೃತಃ ।**
**ವಿಧೂಯೇಹಾಶು ಕರ್ಮಾಣಿ ನೈಷ್ಕರ್ಮ್ಯಂ ವಿನ್ದತೇ ಪರಮ್ ॥ 41 ॥**

**ಏವಂ ಪ್ರಶ್ನಮೃಷೀನ್ ಪೂರ್ವಮಪೃಚ್ಛಂ ಪಿತುರನ್ತಿಕೇ ।**
**ನಾಬ್ರುವನ್ ಬ್ರಹ್ಮಣಃ ಪುತ್ರಾಃ ತತ್ರ ಕಾರಣಮುಚ್ಯತಾಮ್ ॥ 42 ॥**

41–42. ನಿಮಿರಾಜನಿಂತೆಂದನು: ಋುಷಿಗಳಿರ, ಯಾವದನ್ನು ಅನುಷ್ಠಾನಮಾಡಿದರೆ ಪುರುಷನು ಸಂಸ್ಕೃತನಾಗಿ ಕರ್ಮಗಳನ್ನೆಲ್ಲ ನಾಶಮಾಡಿಕೊಂಡು ಪರಮನೈಷ್ಕರ್ಮ್ಯವನ್ನು ಪಡೆದುಕೊಳ್ಳುವನೋ ಆ ಕರ್ಮಯೋಗವನ್ನು ತಿಳಿಸಿರಿ. ಹಿಂದಕ್ಕೆ ನಮ್ಮ ತಂದೆಯ ಬಳಿಯಲ್ಲಿದ್ದ ಋುಷಿಗಳನ್ನು ಹೀಗೆಯೇ ಕೇಳಿದ್ದೆನು. ಆದರೆ ಅವರು ಉತ್ತರವನ್ನು ಹೇಳಲಿಲ್ಲ. ಅದಕ್ಕೆ ಕಾರಣವೇನು? ಹೇಳಿರಿ.

**ಅವಿರ್ಹೋತ್ರ ಉವಾಚ –**
**ಕರ್ಮಾಕರ್ಮವಿಕರ್ಮೇತಿ ವೇದವಾದೋ ನ ಲೌಕಿಕಃ ।**
**ವೇದಸ್ಯ ಚೇಶ್ವರಾತ್ಮತ್ವಾತ್ ತತ್ರ ಮುಹ್ಯನ್ತಿ ಸೂರಯಃ ॥ 43 ॥**

43. ಅವಿರ್ಹೋತ್ರನು ಹೇಳಿದನೇನೆಂದರೆ: ಕರ್ಮ, ಅಕರ್ಮ, ವಿಕರ್ಮ – ಎಂಬಿದು ವೇದವಾದವು, ಲೋಕಬುದ್ಧಿಯಿಂದ ತಿಳಿಯ ಬರುವದಲ್ಲ, ವೇದವು ಈಶ್ವರಾತ್ಮಕವಾಗಿರುವದರಿಂದ ಈ ವಿಷಯದಲ್ಲಿ ವಿದ್ವಾಂಸರೂ ಭ್ರಾಂತರಾಗಿರುತ್ತಾರೆ.

**ಪರೋಕ್ಷವಾದೋ ವೇದೋಽಯಂ ಬಾಲಾನಾಮನುಶಾಸನಮ್ ।**
**ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ ॥ 44 ॥**

44. ಪರೋಕ್ಷವಾದಿಯಾದ ಈ ವೇದವು ಹುಡುಗರಿಗೆ (ತಾಯಿಯು) ಔಷಧಿಯನ್ನು ಉಪಾಯದಿಂದ ಕುಡಿಸುವಂತೆ, ಕರ್ಮದಿಂದ ಬಿಡುಗಡೆಯನ್ನು ಮಾಡಿಸುವದಕ್ಕೆಂದೇ ಕರ್ಮಗಳನ್ನು ವಿಧಿಸುತ್ತಿರುವದು.

**ನಾಚರೇದ್ ಯಸ್ತು ವೇದೋಕ್ತಂ ಸ್ವಯಮಜ್ಞೋಽಜಿತೇನ್ದ್ರಿಯಃ ।**
**ವಿಕರ್ಮಣಾ ಹ್ಯಧರ್ಮೇಣ ಮೃತ್ಯೋರ್ಮೃತ್ಯುಮುಪೈತಿ ಸಃ ॥ 45 ॥**

45. ತಾನು ಅಜ್ಞನೂ ಇಂದ್ರಿಯನಿಗ್ರಹವಿಲ್ಲದವನೂ ಆಗಿದ್ದು ಯಾವನು ವೇದೋಕ್ತವಾದ ಕರ್ಮವನ್ನು ಮಾಡದೆ ಇರುವನೋ ಅವನು ನಿಷಿದ್ಧವಾದ ಕರ್ಮವನ್ನು ಮಾಡಿದ ಅಧರ್ಮದಿಂದ ಸಾವಿನಮೇಲೆ ಸಾವನ್ನು ಹೊಂದುತ್ತಿರುವನು.

**ವೇದೋಕ್ತಮೇವ ಕುರ್ವಾಣೋ ನಿಃಸಙ್ಗೋಽರ್ಪಿತಮೀಶ್ವರೇ ।**
**ನೈಷ್ಕರ್ಮ್ಯಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ ॥ 46 ॥**

46. ವೇದೋಕ್ತಕರ್ಮವನ್ನೇ ಸಂಗವನ್ನು ಬಿಟ್ಟು ಈಶ್ವರಾರ್ಪಣವಾಗಿ ಮಾಡುತ್ತಿರುವವನು ನೈಷ್ಕರ್ಮ್ಯಸಿದ್ಧಿಯನ್ನು ಪಡೆಯುವನು. ಕರ್ಮಕ್ಕೆ ಫಲವನ್ನು ಹೇಳಿರುವದು ಕರ್ಮದಲ್ಲಿ ಅಭಿರುಚಿಯನ್ನುಂಟುಮಾಡುವದಕ್ಕೆ.

**ಯ ಆಶು ಹೃದಯಗ್ರನ್ಥಿಂ ನಿರ್ಜಿಹೀರ್ಷುಃ ಪರಾತ್ಮನಃ ।**
**ವಿಧಿನೋಪಚರೇದ್ದೇವಂ ತನ್ತ್ರೋಕ್ತೇನ ಚ ಕೇಶವಮ್ ॥ 47 ॥**

**ಲಬ್ಧಾನುಗ್ರಹ ಆಚಾರ್ಯಾತ್ ತೇನ ಸಂದರ್ಶಿತಾಗಮಃ ।**
**ಮಹಾಪುರುಷಮಭ್ಯರ್ಚ್ಯ ಮೂರ್ತ್ಯಾಽಭಿಮತಯಾಽಽತ್ಮನಃ ॥ 48 ॥**

**ಶುಚಿಃ ಸಮ್ಮುಖಮಾಸೀನಃ ಪ್ರಾಣಸಂಯಮನಾದಿಭಿಃ ।**
**ಪಿಣ್ಡಂ ವಿಶೋಧ್ಯ ಸನ್ನ್ಯಾಸಕೃತರಕ್ಷೋಽರ್ಚಯೇದ್ ಹರಿಮ್ ॥ 49 ॥**

47–49. ಯಾವನು ನಿಜವಾಗಿ ಪರಮಾತ್ಮನೇ ಆಗಿರುವ ಜೀವನ ಹೃದಯಗ್ರಂಥಿಯನ್ನು ಬಿಚ್ಚಿಕೊಳ್ಳಲು ಹವಣಿಸುವನೋ ಅವನು ವೇದೋಕ್ತವಿಧಿಯಿಂದಲೂ ತಂತ್ರೋಕ್ತ ಪ್ರಕಾರದಿಂದಲೂ ದೇವನಾದ ಕೇಶವನನ್ನು ಸೇವಿಸಬೇಕು. ಆಚಾರ್ಯನಿಂದ ಅನುಗ್ರಹವನ್ನು ಪಡೆದು ಅವನು ತೋರಿಸಿಕೊಟ್ಟ ಸಂಪ್ರದಾಯವನ್ನು ಅನುಸರಿಸಿ ತನಗೆ ಇಷ್ಟವಾದ ಭಗವನ್ಮೂರ್ತಿಯ ದ್ವಾರದಿಂದ ಮಹಾಪುರುಷನಾದ ಭಗವಂತನನ್ನು ಅರ್ಚನೆಮಾಡಬೇಕು. ಶುಚಿಯಾಗಿ ಭಗವಂತನ ಮೂರ್ತಿಯ ಸಮ್ಮುಖದಲ್ಲಿ ಕುಳಿತು ಪ್ರಾಣಾಯಾಮಾದಿಗಳಿಂದ ದೇಹಶುದ್ಧಿಯನ್ನು ಮಾಡಿಕೊಂಡು ನ್ಯಾಸದಿಂದ ಅಂಗರಕ್ಷೆಯನ್ನು ಮಾಡಿಕೊಂಡು ಹರಿಯನ್ನು ಅರ್ಚಿಸಬೇಕು.

**ಅರ್ಚಾದೌ ಹೃದಯೇ ಚಾಪಿ ಯಥಾಲಬ್ಧೋಪಚಾರಕೈಃ ।**
**ದ್ರವ್ಯಕ್ಷಿತ್ಯಾತ್ಮಲಿಙ್ಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್ ॥ 50 ॥**

**ಪಾದ್ಯಾದೀನುಪಕಲ್ಪ್ಯಾಥ ಸನ್ನಿಧಾಪ್ಯ ಸಮಾಹಿತಃ ।**
**ಹೃದಾದಿಭಿಃ ಕೃತನ್ಯಾಸೋ ಮೂಲಮನ್ತ್ರೇಣ ಚಾರ್ಚಯೇತ್ ॥ 51 ॥**

**ಸಾಙ್ಗೋಪಾಙ್ಗಾಂ ಸಪಾರ್ಷದಾಂ ತಾಂ ತಾಂ ಮೂರ್ತಿಂ ಸ್ವಮನ್ತ್ರತಃ ।**
**ಪಾದ್ಯಾರ್ಘ್ಯಾಚಮನೀಯಾದ್ಯೈಃ ಸ್ನಾನವಾಸೋವಿಭೂಷಣೈಃ ॥ 52 ॥**

**ಗನ್ಧಮಾಲ್ಯಾಕ್ಷತಸ್ರಗ್ಭಿರ್ಧೂಪದೀಪೋಪಹಾರಕೈಃ ।**
**ಸಾಙ್ಗಂ ಸಂಪೂಜ್ಯ ವಿಧಿವತ್ ಸ್ತವೈಃ ಸ್ತುತ್ವಾ ನಮೇದ್ ಹರಿಮ್ ॥ 53 ॥**

50–53. ಮೂರ್ತಿಯಲ್ಲಿಯೂ ಹೃದಯದಲ್ಲಿಯೂ ಯಥಾಶಕ್ತಿಯಾಗಿ ಸಂಪಾದಿಸಿಕೊಂಡ ಉಪಚಾರಗಳಿಂದ – ಪೂಜಾದ್ರವ್ಯಗಳನ್ನು, ಭೂಮಿಯನ್ನು, ಶರೀರವನ್ನು, ಮೂರ್ತಿಯನ್ನು ಯೋಗ್ಯವಾಗಿ ಮಾಡಿಟ್ಟುಕೊಂಡಿದ್ದು – ಆಸನವನ್ನು ಪ್ರೋಕ್ಷಣೆಮಾಡಿ ಪಾದ್ಯಾದಿಗಳನ್ನು ಸಜ್ಜುಗೊಳಿಸಿಕೊಂಡು ದೇವರ ಮುಂದಿಟ್ಟು ಸಮಾಹಿತಮನಸ್ಕನಾಗಿ ಹೃದಯಾದಿಗಳಲ್ಲಿ ನ್ಯಾಸವನ್ನು ಮಾಡಿಕೊಂಡು ಮೂಲಮಂತ್ರದಿಂದಲೂ ಅರ್ಚಿಸಬೇಕು. ಅಂಗೋಪಾಂಗಗಳಿಂದ ಕೂಡಿ ಸಪರಿವಾರವಾಗಿರುವ ಆಯಾ ಮೂರ್ತಿಯನ್ನು ಅದರ ಮಂತ್ರದಿಂದ ಪಾದ್ಯ, ಅರ್ಘ್ಯ, ಆಚಮನೀಯ – ಮುಂತಾದವುಗಳಿಂದಲೂ ಸ್ನಾನ, ವಸ್ತ್ರ, ಅಲಂಕಾರಗಳಿಂದಲೂ ಗಂಧ, ಪುಷ್ಪ, ಅಕ್ಷತೆ, ಮಾಲಿಕೆ, ಧೂಪ, ದೀಪ, ನೈವೇದ್ಯ – ಇವುಗಳಿಂದಲೂ ಸಾಂಗವಾಗಿ ವಿಧ್ಯನುಸಾರವಾಗಿ ಪೂಜಿಸಿ ಸ್ತೋತ್ರಗಳಿಂದ ಸ್ತುತಿಗೈದು ಹರಿಯನ್ನು ನಮಸ್ಕರಿಸಬೇಕು.

**ಆತ್ಮಾನಂ ತನ್ಮಯಂ ಧ್ಯಾಯನ್ ಮೂರ್ತಿಂ ಸಂಪೂಜಯೇದ್ ಹರೇಃ ।**
**ಶೇಷಾಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್ ॥ 54 ॥**

**ಏವಮಗ್ನ್ಯರ್ಕತೋಯಾದಾವತಿಥೌ ಹೃದಯೇ ಚ ಯಃ ।**
**ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ॥ 55 ॥**

54–55. ತನ್ನನ್ನು ತನ್ಮಯನಾಗಿರುವಂತೆ ಭಾವಿಸಿಕೊಂಡು ಹರಿಯ ಮೂರ್ತಿಯನ್ನು ಪೂಜಿಸಬೇಕು. ನಿರ್ಮಾಲ್ಯವನ್ನು ಶಿರಸಾಧರಿಸಿ ಸತ್ಕಾರ ಪೂರ್ವಕವಾಗಿ ಸ್ವಸ್ಥಾನಕ್ಕೆ ಉದ್ವಾಸನೆಮಾಡಬೇಕು. ಇಂತು ಅಗ್ನಿ, ಸೂರ್ಯ, ಜಲಾದಿಗಳು, ಅತಿಥಿ – ಇವರಲ್ಲಿಯೂ ಹೃದಯದಲ್ಲಿಯೂ ಯಾವನು ಆತ್ಮನಾಗಿರುವ ಈಶ್ವರನನ್ನು ಪೂಜಿಸುವನೋ ಅವನು ಬೇಗನೆ ಮುಕ್ತನಾಗುವನು.

*****

## ನಿಮಿರಾಜನಿಗೆ ದ್ರುಮಿಲನೆಂಬ ಯೋಗಿಯ ಉಪದೇಶ

(ಹನ್ನೊಂದನೆಯ ಸ್ಕಂಧ, ನಾಲ್ಕನೆಯ ಅಧ್ಯಾಯ)

**ರಾಜೋವಾಚ –**

**ಯಾನಿ ಯಾನೀಹ ಕರ್ಮಾಣಿ ಯೈರ್ಯೈಃ ಸ್ವಚ್ಛನ್ದಜನ್ಮಭಿಃ ।**
**ಚಕ್ರೇ ಕರೋತಿ ಕರ್ತಾ ವಾ ಹರಿಸ್ತಾನಿ ಬ್ರುವನ್ತು ನಃ ॥ 1 ॥**

1. ನಿಮಿರಾಜನಿಂತೆಂದನು: ಋಷಿಶ್ರೇಷ್ಠರೆ, ಶ್ರೀಹರಿಯು ಯಾವ ಯಾವ ಸ್ವೇಚ್ಛಾಗೃಹೀತವಾದ ಜನ್ಮಗಳಲ್ಲಿ ಯಾವಯಾವ ಕರ್ಮಗಳನ್ನು ಮಾಡಿದನೋ, ಮಾಡುತ್ತಿರುವನೋ, ಅಥವಾ ಮುಂದೆ ಮಾಡುವನೋ ಅವುಗಳನ್ನು ನಮಗೆ ತಿಳಿಸಿರಿ.

**ದ್ರುಮಿಲ ಉವಾಚ –**
**ಯೋ ವಾ ಅನನ್ತಸ್ಯ ಗುಣಾನನನ್ತಾ–**
**ನನುಕ್ರಮಿಷ್ಯನ್ ಸ ತು ಬಾಲಬುದ್ಧಿಃ ।**
**ರಜಾಂಸಿ ಭೂಮೇರ್ಗಣಯೇತ್ ಕಥಞ್ಚಿತ್**
**ಕಾಲೇನ ನೈವಾಖಿಲಶಕ್ತಿಧಾಮ್ನಃ ॥ 2 ॥**

2. ದ್ರುಮಿಲನಿಂತೆಂದನು: ಅನಂತನಾಗಿರುವ ಭಗವಂತನ ಅನಂತಗುಣಗಳನ್ನು ಒಂದೊಂದಾಗಿ ಎಣಿಸುವೆನೆಂದು ಯಾವನು ಬಗೆಯುವನೋ ಅವನು ಹುಡುಗಬುದ್ಧಿಯವನು. ಭೂಮಿಯ ಧೂಳೀಕಣಗಳನ್ನು ಹೇಗೋ ಕಾಲಾನುಕಾಲಕ್ಕೆ ಎಣಿಸಿದರೂ ಎಣಿಸಿ ಪೂರೈಸಬಹುದು; ಅಖಿಲಶಕ್ತಿಗಳಿಗೆ ಆಶ್ರಯನಾಗಿರುವ ಭಗವಂತನ ಗುಣಗಳನ್ನು ಎಣಿಸಿ ಮುಗಿಸುವದು ಎಂದಿಗೂ ಆಗಲಾರದು.

**ಭೂತೈರ್ಯದಾ ಪಞ್ಚಭಿರಾತ್ಮಸೃಷ್ಟೈಃ**
**ಪುರಂ ವಿರಾಜಂ ವಿರಚಯ್ಯ ತಸ್ಮಿನ್ ।**
**ಸ್ವಾಂಶೇನ ವಿಷ್ಟಃ ಪುರುಷಾಭಿಧಾನ–**
**ಮವಾಪ ನಾರಾಯಣ ಆದಿದೇವಃ ॥ 3 ॥**

3. ಆದಿದೇವನಾದ ನಾರಾಯಣನು ಯಾವಾಗ ತಾನು ಸೃಷ್ಟಿಸಿದ ಪಂಚಭೂತಗಳಿಂದ ವಿರಾಟ್ಶರೀರವನ್ನು ವಿರಚಿಸಿ ಅದರೊಳಗೆ ತನ್ನ ಅಂಶದಿಂದ ಪ್ರವೇಶಿಸಿದನೋ ಆಗ ಪುರುಷ ಎಂಬ ಹೆಸರನ್ನು ಪಡೆದನು.

**ಯತ್ಕಾಯ ಏಷ ಭುವನತ್ರಯಸಂನಿವೇಶೋ**
**ಯಸ್ಯೇನ್ದ್ರಿಯೈಸ್ತನುಭೃತಾಮುಭಯೇನ್ದ್ರಿಯಾಣಿ**
**ಜ್ಞಾನಂ ಸ್ವತಃ ಶ್ವಸನತೋ ಬಲಮೋಜ ಈಹಾ ।**
**ಸತ್ತ್ವಾದಿಭಿಃ ಸ್ಥಿತಿಲಯೋದ್ಭವ ಆದಿಕರ್ತಾ ॥ 4 ॥**

4. ಆ ಶರೀರದಲ್ಲಿ ಈ ಮೂರು ಲೋಕಗಳು ಇದ್ದುಕೊಂಡಿರುವವು. ಆತನ ಆ ಇಂದ್ರಿಯಗಳಿಂದ ಶರೀರಗಳ ಜ್ಞಾನಕರ್ಮೇಂದ್ರಿಯಗಳು ಆಗಿರುತ್ತವೆ. ಜ್ಞಾನವು ಸ್ವತಃಸಿದ್ಧವಾಗಿರುವದು ಆತನ ಜ್ಞಾನದಿಂದಲೇ. ಆತನ ಶ್ವಾಸದಿಂದಲೇ ಬಲ, ಓಜಸ್ಸು, ಕರ್ಮವ್ಯಾಪಾರ – ಇವುಗಳುಂಟಾಗಿರುವವು. ಸತ್ತ್ವವೇ ಮುಂತಾದ ಗುಣಗಳಿಂದ ಸೃಷ್ಟಿಸ್ಥಿತಿಲಯಗಳಾಗುತ್ತಿರುವವು. ಆತನೇ ಆದಿಕರ್ತನು.

**ಆದಾವಭೂಚ್ಛತಧೃತೀ ರಜಸಾಽಸ್ಯ ಸರ್ಗೇ**
**ವಿಷ್ಣುಃ ಸ್ಥಿತೌ ಕ್ರತುಪತಿರ್ದ್ವಿಜಧರ್ಮಸೇತುಃ ।**
**ರುದ್ರೋಽಪ್ಯಯಾಯ ತಮಸಾ ಪುರುಷಾಃ ಸ ಆದ್ಯ**
**ಇತ್ಯುದ್ಭವಸ್ಥಿತಿಲಯಾಃ ಸತತಂ ಪ್ರಜಾಸು ॥ 5 ॥**

5. ಮೊದಲು ಈತನ ರಜೋಗುಣದಿಂದ ಸೃಷ್ಟಿಗೆ ಕಾರಣನಾದ ಬ್ರಹ್ಮನಾದನು. ಯಜ್ಞಗಳ ಪತಿಯಾದ ದ್ವಿಜರ ಧರ್ಮಗಳಿಗೆ ಅಣೆಗಟ್ಟಿ ನಂತಿರುವ ವಿಷ್ಣುವು ಸತ್ತ್ವಾಂಶದಿಂದ ಸ್ಥಿತಿಗೆ ಕಾರಣವಾದ ವಿಷ್ಣುವಾದನು. ತಮೋಗುಣದಿಂದ ರುದ್ರನಾಗಿ ಪ್ರಲಯಕ್ಕೆ ಕಾರಣನಾಗಿ ಅದೇ ಆದ್ಯಪುರುಷನು ಆದನು. ಹೀಗೆ ಸಂತತವಾಗಿ ಪ್ರಜೆಗಳ ಸೃಷ್ಟಿಸ್ಥಿತಿಲಯಗಳು ಆಗುತ್ತಿರುವವು.

**ಧರ್ಮಸ್ಯ ದಕ್ಷದುಹಿತರ್ಯಜನಿಷ್ಟ ಮೂರ್ತ್ಯಾಂ**
**ನಾರಾಯಣೋ ನರಋಷಿಪ್ರವರಃ ಪ್ರಶಾನ್ತಃ ।**
**ನೈಷ್ಕರ್ಮ್ಯಲಕ್ಷಣಮುವಾಚ ಚಚಾರ ಕರ್ಮ**
**ಯೋಽದ್ಯಾಪಿ ಚಾಸ್ತ ಋಷಿವರ್ಯನಿಷೇವಿತಾಙ್ಘ್ರಿಃ ॥ 6 ॥**

6. ದಕ್ಷನ ಮಗನಾದ ಧರ್ಮನಿಗೆ ಪ್ರಶಾಂತನಾದ ನಾರಾಯಣ, ನರಋಷಿಶ್ರೇಷ್ಠ – ಎಂಬ ರೂಪದಿಂದ ಹುಟ್ಟಿದನು; ನೈಷ್ಕರ್ಮ್ಯಲಕ್ಷಣವನ್ನು ಉಪದೇಶಿಸಿದನು; ಕರ್ಮವನ್ನು ಆಚರಿಸಿದನು. ಆತನು ಈಗಲೂ ಋಷಿವರ್ಯರಿಂದ ಸೇವಿತವಾದ ಪಾದಗಳುಳ್ಳವನಾಗಿರುತ್ತಾನೆ.

**ಇನ್ದ್ರೋ ವಿಶಙ್ಕ್ಯ ಮಮ ಧಾಮ ಜಿಘೃಕ್ಷತೀತಿ**
**ಕಾಮಂ ನ್ಯಯುಙ್ಕ್ತ ಸಗಣಂ ಸ ಬದರ್ಯುಪಾಖ್ಯಮ್ ।**
**ಗತ್ವಾಽಪ್ಸರೋಗಣವಸನ್ತಸುಮನ್ದವಾತೈಃ**
**ಸ್ತ್ರೀಪ್ರೇಕ್ಷಣೇಷುಭಿರಭಿಧ್ಯದತನ್ಮಹಿಜ್ಞಃ ॥ 7 ॥**

**ವಿಜ್ಞಾಯ ಶಕ್ರಕೃತಮಕ್ರಮಮಾದಿದೇವಃ**
**ಪ್ರಾಹ ಪ್ರಹಸ್ಯ ಗತವಿಸ್ಮಯ ಏಜಮಾನಾನ್ ।**
**ಮಾಭೈರ್ವಿಭೋ ಮದನ ಮಾರುತ ದೇವವಧ್ವೋ**
**ಗೃಹ್ಣೀತ ನೋ ಬಲಿಮಶೂನ್ಯಮಿಮಂ ಕುರುಧ್ವಮ್ ॥ 8 ॥**

8. 'ತನ್ನ ಸ್ಥಾನವನ್ನು ಕಸಿದುಕೊಳ್ಳುವದಕ್ಕೆ ಇಚ್ಛಿಸುತ್ತಿರುವನೆಂದು ಶಂಕಿಸಿ' ಇಂದ್ರನು ಕಾಮನನ್ನು ಸಪರಿವಾರವಾಗಿ ಕಳುಹಿಸಿಕೊಟ್ಟನು. ಆ ಕಾಮನು ಬದರಿಕಾಶ್ರಮಕ್ಕೆ ಅಪ್ಸರಸ್ತ್ರೀಯರ ಗುಂಪು, ವಸಂತ, ಮಂದಮಾರುತ – ಇವರೊಡನೆ ಹೋಗಿ ಸ್ತ್ರೀಯರ ನೋಟವೆಂಬ ಬಾಣಗಳಿಂದ ಆತನ ಮಹಿಮೆಯನ್ನರಿಯದೆ ಹೊಡೆದನು. ಇಂದ್ರನು ಮಾಡಿದ ಅಕ್ರಮಾಚರಣೆಯನ್ನು ಅರಿತ ಆದಿದೇವನು ನಕ್ಕು – ಆಶ್ಚರ್ಯವಿಲ್ಲದೆಯೇ ನಡುಗುತ್ತಿರುವ ಅವರನ್ನೆಲ್ಲ ಕುರಿತು 'ವಿಭುವಾದ ಕಾಮನೆ, ಮಾರುತನೆ, ದೇವಸ್ತ್ರೀಯರಿರಾ, ಅಂಜದಿರಿ. ನಮ್ಮ ಆತಿಥ್ಯವನ್ನು ಸ್ವೀಕರಿಸಿರಿ, ಇಲ್ಲಿಯೇ ಇರಿ, ಈ ಆಶ್ರಮವನ್ನು ಶೂನ್ಯವಾಗಿ ಮಾಡದಿರಿ!' ಎಂದನು.

**ಇತ್ಥಂ ಬ್ರುವತ್ಯಭಯದೇ ನರದೇವ ದೇವಾಃ**
**ಸವ್ರೀಡನಮ್ರಶಿರಸಃ ಸಘೃಣಂ ತಮೂಚುಃ ।**
**ನೈತದ್ವಿಭೋ ತ್ವಯಿ ಪರೇಽವಿಕೃತೇ ವಿಚಿತ್ರಂ**
**ಸ್ವಾರಾಮಧೀರನಿಕರಾನತಪಾದಪದ್ಮೇ ॥ 9 ॥**

9. ಎಲೈ ರಾಜನೆ, ಅಭಯಪ್ರದನಾದ ನಾರಾಯಣನು ಹೀಗೆನ್ನಲು ದೇವತೆಗಳು ನಾಚಿಕೆಯಿಂದ ತಲೆಯನ್ನು ತಗ್ಗಿಸಿ ಆ ಕರುಣಾಕರನನ್ನು ಕುರಿತು ಇಂತೆಂದರು: ವಿಭುವೆ, ಎಲ್ಲಕ್ಕೂ ಪರನಾದ, ಯಾವ ವಿಕಾರವೂ ಇಲ್ಲದೆ, ಆತ್ಮಾರಾಮಧೀರರ ಸಮೂಹಗಳೂ ನಮಸ್ಕರಿಸುತ್ತಿರುವ ಪಾದಕಮಲವುಳ್ಳ ನಿನ್ನ ವಿಷಯದಲ್ಲಿ ಇದೇನೂ ಆಶ್ಚರ್ಯಕರವಲ್ಲ.

**ತ್ವಾಂ ಸೇವತಾಂ ಸುರಕೃತಾ ಬಹವೋಽನ್ತರಾಯಾಃ**
**ಸ್ವೌಕೋ ವಿಲಙ್ಘ್ಯ ಪರಮಂ ವ್ರಜತಾಂ ಪದಂ ತೇ ।**
**ನಾನ್ಯಸ್ಯ ಬರ್ಹಿಷಿ ಬಲೀನ್ ದದತಃ ಸ್ವಭಾಗಾನ್**
**ಧತ್ತೇ ಪದಂ ತ್ವಮವಿತಾ ಯದಿ ವಿಘ್ನಮೂರ್ಧ್ನಿ ॥ 10 ॥**

10. ನಿನ್ನನ್ನೇ ಸೇವಿಸುತ್ತಾ ತಮ್ಮ ದೇವತಾಸ್ಥಾನವನ್ನು ಮೀರಿ ನಿನ್ನ ಪರಮಪದವನ್ನು ಸೇರುವೆವೆನ್ನುವವರಿಗೆ ದೇವತೆಗಳು ಮಾಡುವ ಅಡ್ಡಿಗಳು ಬಹಳವಾಗಿರುತ್ತವೆ. ತಮಗೆ ತಮ್ಮತಮ್ಮ ಭಾಗದ ಬಲಿಯನ್ನು ಸಮರ್ಪಣೆ ಮಾಡುವ ಮತ್ತೊಬ್ಬನಿಗೆ ಅಡ್ಡಿಗಳು ಇರುವದಿಲ್ಲ. ಆದರೆ ನೀನು ರಕ್ಷಕನಾಗಿರುವಲ್ಲಿ ನಿನ್ನ ಭಕ್ತನು ಅಡ್ಡಿಗಳ ತಲೆಯಮೇಲೆ ಕಾಲಿಟ್ಟಿರುವನು.

**ಕ್ಷುತ್ತೃಟ್ತ್ರಿಕಾಲಗುಣಮಾರುತಜೈಹ್ವ್ಯಶೈಶ್ನ್ಯಾನ್**
**ಅಸ್ಮಾನಪಾರಜಲಧೀನತಿತೀರ್ಯ ಕೇಚಿತ್ ।**
**ಕ್ರೋಧಸ್ಯ ಯಾನ್ತಿ ವಿಫಲಸ್ಯ ವಶಂ ಪದೇ ಗೋ–**
**ರ್ಮಜ್ಜನ್ತಿ ದುಶ್ಚರತಪಶ್ಚ ವೃಥೋತ್ಸೃಜನ್ತಿ ॥ 11 ॥**

11. ಹಸಿವುಬಾಯಾರಿಕೆಗಳು, ಮೂರುಕಾಲಗಳ ಗುಣಗಳಾದ ಶೀತ, ಉಷ್ಣ, ಮಳೆ, ಗಾಳಿ, ನಾಲಗೆಯ ಮತ್ತು ಶಿಶ್ನದ ಚಟಗಳು – ಎಂಬೀ ಅಪಾರವಾದ ಸಮುದ್ರಗಳನ್ನು ದಾಟಿದಮೇಲೂ ಕೆಲವರು ನಿಷ್ಫಲವಾದ ಕ್ರೋಧಕ್ಕೆ ವಶರಾಗುವರು; ಹಸುವಿನ ಹೆಜ್ಜೆಯಷ್ಟು ನೀರಿನಲ್ಲಿ ಮುಳುಗಿದವರಂತಾಗುತ್ತಾರೆ. ತಪಸ್ಸನ್ನುಕೂಡ ವ್ಯರ್ಥವಾಗಿ ಬಿಟ್ಟುಬಿಡುತ್ತಾರೆ!

**ಇತಿ ಪ್ರಗೃಣತಾಂ ತೇಷಾಂ ಸ್ತ್ರಿಯೋಽತ್ಯದ್ಭುತದರ್ಶನಾಃ ।**
**ದರ್ಶಯಾಮಾಸ ಶುಶ್ರೂಷಾಂ ಸ್ವರ್ಚಿತಾಃ ಕುರ್ವತೀರ್ವಿಭುಃ ॥ 12 ॥**

12. ಹೀಗೆಂದು ಅವರು ಹೊಗಳುತ್ತಿರಲು ಆ ವಿಭುವು ಅತ್ಯದ್ಭುತವಾದ ಸೌಂದರ್ಯವುಳ್ಳವರಾಗಿ ತನ್ನನ್ನು ಸೇವೆಗೈಯುತ್ತಿರುವ ಸ್ತ್ರೀಯರನ್ನು ಅವರಿಗೆ ಕಾಣಿಸಿದನು.

**ತೇ ದೇವಾನುಚರಾ ದೃಷ್ಟ್ವಾ ಸ್ತ್ರಿಯಃ ಶ್ರೀರಿವ ರೂಪಿಣೀಃ ।**
**ಗನ್ಧೇನ ಮುಮುಹುಸ್ತಾಸಾಂ ರೂಪೌದಾರ್ಯಹತಶ್ರಿಯಃ ॥ 13 ॥**

13. ಆ ದೇವಸೇವಕರು ಲಕ್ಷ್ಮಿಯಂತೆ ಸುಂದರವಾದ ಆ ಸ್ತ್ರೀಯರನ್ನು ಕಂಡು ಅವರ ರೂಪದ ಅತಿಶಯದಿಂದ ತಮ್ಮ ತೇಜಸ್ಸು ಮಂಕಾಗಲಾಗಿ ಅವರ ಶರೀರದಿಂದ ಹೊರಹೊಮ್ಮುತ್ತಿದ್ದ ಸುವಾಸನೆಯಿಂದ ಬೆರಗಾದರು.

**ತಾನಾಹ ದೇವದೇವೇಶಃ ಪ್ರಣತಾನ್ ಪ್ರಹಸನ್ನಿವ ।**
**ಆಸಾಮೇಕತಮಾಂ ವೃಙ್ಧ್ವಂ ಸವರ್ಣಾಂ ಸ್ವರ್ಗಭೂಷಣಾಮ್ ॥ 14 ॥**

14. ನಮಸ್ಕರಿಸಿದ ಅವರನ್ನು ಕುರಿತು ಆ ದೇವದೇವೇಶ್ವರನು ನಗುತ್ತಾ ಇರುವವನಂತೆ 'ಈ ರೂಪವತಿಯರಾದವರ ಪೈಕಿ ಸ್ವರ್ಗಕ್ಕೆ ಅಲಂಕಾರವಾಗಿರುವ ಒಬ್ಬಾಕೆಯನ್ನು ಬೇಕಾದಂತೆ ಆರಿಸಿಕೊಳ್ಳಿರಿ' ಎಂದನು.

**ಓಮಿತ್ಯಾದೇಶಮಾದಾಯ ನತ್ವಾ ತಂ ಸುರುಬನ್ದಿನಃ ।**
**ಉರ್ವಶೀಮಪ್ಸರಃಶ್ರೇಷ್ಠಾಂ ಪುರಸ್ಕೃತ್ಯ ದಿವಂ ಯಯುಃ ॥ 15 ॥**

15. ಹಾಗೇ ಆಗಲೆಂದು ಆ ಇಂದ್ರಭೃತ್ಯರು ಆತನ ಅಪ್ಪಣೆಯನ್ನು ತೆಗೆದುಕೊಂಡು ಅವನು ಕೊಟ್ಟ 'ಉರ್ವಶಿ' ಎಂಬ ಅಪ್ಸರಶ್ರೇಷ್ಠಳನ್ನು ಕರೆದುಕೊಂಡು ಸ್ವರ್ಗಕ್ಕೆ ಹೊರಟುಹೋದರು.

**ಇನ್ದ್ರಾಯಾನಮ್ಯ ಸದಸಿ ಶೃಣ್ವತಾಂ ತ್ರಿದಿವೌಕಸಾಮ್ ।**
**ಊಚುರ್ನಾರಾಯಣಬಲಂ ಶಕ್ರಸ್ತತ್ರಾಸ ವಿಸ್ಮಿತಃ ॥ 16 ॥**

16. ಇಂದ್ರನಿಗೆ ನಮಸ್ಕರಿಸಿ ಸಭೆಯಲ್ಲಿರುವ ದೇವತೆಗಳು ಕೇಳುವಂತೆ ನಾರಾಯಣ ಋಷಿಯ ಬಲವನ್ನು ಹೇಳಿದರು. ಇದರಿಂದ ಬೆರಗಾದ ಇಂದ್ರನೂ ಬೆಚ್ಚಿದನು!

*****

## ನಿಮಿರಾಜನಿಗೆ ಚಮಸನೆಂಬ ಯೋಗಿಯ ಉಪದೇಶ

(ಹನ್ನೊಂದನೆಯ ಸ್ಕಂಧ, ಐದನೆಯ ಅಧ್ಯಾಯ)

**ಶ್ರೀರಾಜೋವಾಚ –**

**ಭಗವನ್ತಂ ಹರಿಂ ಪ್ರಾಯೋ ನ ಭಜನ್ತ್ಯಾತ್ಮವಿತ್ತಮಾಃ ।**
**ತೇಷಾಮಶಾನ್ತಕಾಮಾನಾಂ ಕಾ ನಿಷ್ಠಾವಿಜಿತಾತ್ಮನಾಮ್ ॥ 1 ॥**

1. ನಿಮಿರಾಜನಿಂತೆಂದನು: ಆತ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರೆ, ಭಗವಂತನಾದ ಹರಿಯನ್ನು ಭಜಿಸದವರೆ ಬಲುಮಂದಿ; ಕಾಮವನ್ನು ಆರಿಸಿಕೊಳ್ಳದೆ ಇರುವ ಅಜಿತಾತ್ಮರಾದ ಆ ಜನರಿಗೆ ಯಾವ ಗತಿಯಾಗುವದು?

**ಶ್ರೀಚಮಸ ಉವಾಚ–**
**ಮುಖಬಾಹೂರುಪಾದೇಭ್ಯಃ ಪುರುಷಸ್ಯಾಶ್ರಮೈಃ ಸಹ ।**
**ಚತ್ವಾರೋ ಜಜ್ಞಿರೇ ವರ್ಣಾ ಗುಣೈರ್ವಿಪ್ರಾದಯಃ ಪೃಥಕ್ ॥ 2 ॥**

2. ಚಮಸನಿಂತೆಂದನು: ಪರಮಪುರುಷನ ಮುಖ, ಬಾಹುಗಳು, ತೊಡೆಗಳು, ಪಾದ ಇವುಗಳಿಂದ ಬ್ರಾಹ್ಮಣಾದಿಚತುರ್ವರ್ಣಗಳೂ ಬ್ರಹ್ಮಚರ್ಯಾದ್ಯಾಶ್ರಮಗಳೂ ಸತ್ತ್ವಾದಿಗುಣಗಳ ನಿಮಿತ್ತದಿಂದ ಬೇರೆಬೇರೆಯಾಗಿ ಹುಟ್ಟಿರುವವು.

**ಯ ಏಷಾಂ ಪುರುಷಂ ಸಾಕ್ಷಾದಾತ್ಮಪ್ರಭವಮೀಶ್ವರಮ್ ।**
**ನ ಭಜನ್ತ್ಯವಜಾನನ್ತಿ ಸ್ಥಾನಾದ್ಭ್ರಷ್ಟಾಃ ಪತನ್ತ್ಯಧಃ ॥ 3 ॥**

3. ಇದರೊಳಗೆ ಯಾರು ಸಾಕ್ಷಾತ್ಸ್ವಯಂಭುಪುರುಷನಾದ ಈಶ್ವರನನ್ನು ತಿಳಿಯದೆ ಭಜಿಸುವದಿಲ್ಲವೋ ಮತ್ತು ತಿಳಿದೂ ತಿರಸ್ಕರಿಸುವರೋ ಅವರು ತಮ್ಮ ಸ್ಥಾನದಿಂದ ಭ್ರಷ್ಟರಾಗಿ ಕೆಳಕ್ಕೆ ಬೀಳುವರು.

**ದೂರೇ ಹರಿಕಥಾಃ ಕೇಚಿದ್ದೂರೇ ಚಾಚ್ಯುತಕೀರ್ತನಾಃ ।**
**ಸ್ತ್ರಿಯಃ ಶೂದ್ರಾ ದಯಶ್ಚೈವ ತೇಽನುಕಮ್ಪ್ಯಾ ಭವಾದೃಶಾಮ್ ॥ 4 ॥**

4. ಕೆಲವರು ಸ್ತ್ರೀಯರೂ ಶೂದ್ರಾದಿಗಳೂ ಹರಿಕಥೆಯನ್ನು ಶ್ರವಣಮಾಡದೆ ಅದರಿಂದ ದೂರರಾಗಿರುವರು; ಅಚ್ಯುತನ ಕೀರ್ತನವನ್ನು ಮಾಡದೆ ದೂರರಾಗಿರುವರು. ಅವರಲ್ಲಿ ನಿಮ್ಮಂತವರು ಮರುಕವನ್ನು ತೋರಿಸಬೇಕು.

**ವಿಪ್ರೋ ರಾಜನ್ಯವೈಶ್ಯೌ ವಾ ಹರೇಃ ಪ್ರಾಪ್ತಾಃ ಪದಾನ್ತಿಕಮ್ ।**
**ಶ್ರೌತೇನ ಜನ್ಮನಾಥಾಪಿ ಮುಹ್ಯನ್ತ್ಯಾಮ್ನಾಯವಾದಿನಃ ॥ 5 ॥**

5. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ – ಇವರುಗಳು ವೈದಿಕಜನ್ಮವನ್ನು ಹೊಂದಿ ಹರಿಯ ಸಾಮೀಪ್ಯವನ್ನು ಪಡೆದುಕೊಂಡಿರುತ್ತಾರೆ. ಆದರೂ ವೇದವಾದಿಗಳು ಭ್ರಾಂತರಾಗಿರುತ್ತಾರೆ.

**ಕರ್ಮಣ್ಯಕೋವಿದಾಃ ಸ್ತಬ್ಧಾ ಮೂರ್ಖಾಃ ಪಣ್ಡಿತಮಾನಿನಃ ।**
**ವದನ್ತಿ ಚಾಟುಕಾನ್ಮೂಢಾ ಯಯಾ ಮಾಧ್ವ್ಯಾ ಗಿರೋತ್ಸುಕಾಃ ॥ 6 ॥**

6. ಕರ್ಮದಲ್ಲಿ ಕೌಶಲವಿಲ್ಲದೆ, ಸೆಟೆದುಕೊಂಡು, ಮೂರ್ಖರಾಗಿದ್ದರೂ ತಾವು ಪಂಡಿತರೆಂದುಕೊಂಡು ರುಚ್ಯುತ್ಪಾದಕವಾದ ಜೇನುತುಪ್ಪದಂತಿರುವ ಸವಿಯಾದ ವಾಕ್ಯಗಳಲ್ಲಿ ಔತ್ಸುಕ್ಯವುಳ್ಳವರಾಗಿ ಆ ವೇದಗಳನ್ನೇ ಆಡುತ್ತಿರುವರು.

**ರಜಸಾ ಘೋರಸಙ್ಕಲ್ಪಾಃ ಕಾಮುಕಾ ಅಹಿಮನ್ಯವಃ ।**
**ದಾಮ್ಭಿಕಾ ಮಾನಿನಃ ಪಾಪಾ ವಿಹಸನ್ತ್ಯಚ್ಯುತಪ್ರಿಯಾನ್ ॥ 7 ॥**

7. ರಜೋಗುಣದಿಂದ ಉಗ್ರವಾದ ಸಂಕಲ್ಪವುಳ್ಳವರಾಗಿ ಕಾಮಶೀಲರೂ ಅತಿಕ್ರೋಧವುಳ್ಳವರೂ ದಾಂಭಿಕರೂ ಹೆಮ್ಮೆಯುಳ್ಳವರೂ ಆದ ಆ ಪಾಪಿಗಳು ಭಗವದ್ಭಕ್ತರನ್ನು ಹಾಸ್ಯಮಾಡುತ್ತಿರುತ್ತಾರೆ.

**ವದನ್ತಿ ತೇಽನ್ಯೋನ್ಯಮುಪಾಸಿತಸ್ತ್ರಿಯೋ**
**ಗೃಹೇಷು ಮೈಥುನ್ಯಪರೇಷು ಚಾಶಿಷಃ ।**
**ಯಜನ್ತ್ಯಸೃಷ್ಟಾನ್ನವಿಧಾನದಕ್ಷಿಣಂ**
**ವೃತ್ತ್ಯೈ ಪರಂ ಘ್ನನ್ತಿ ಪಶೂನತದ್ವಿದಃ ॥ 8 ॥**

8. ಅವರು ಸ್ತ್ರೀಯರಲ್ಲಿಯೇ ತತ್ಪರರಾಗಿ ಕಾಮಭೋಗಗಳಿಂದ ಕೂಡಿರುವ ಗೃಹಗಳಲ್ಲಿಯೇ ಆಸಕ್ತರಾಗಿದ್ದುಕೊಂಡು ಅದೇ ಮಾತನ್ನೇ ಒಬ್ಬರೊಡನೊಬ್ಬರು ಆಡುತ್ತಿರುವರು. ವಿಧ್ಯುಕ್ತವಾದ ಅನ್ನದಾನದಕ್ಷಿಣಾದಾನಗಳಿಲ್ಲದ ಯಜ್ಞವನ್ನು ಮಾಡುತ್ತಾ ಕೇವಲ ಸ್ವವೃತ್ತಿಗಾಗಿ ಪಶುಘಾತವನ್ನು ಮಾಡುತ್ತಿರುವರು.

**ಶ್ರಿಯಾ ವಿಭೂತ್ಯಾಭಿಜನೇನ ವಿದ್ಯಯಾ**
**ತ್ಯಾಗೇನ ರೂಪೇಣ ಬಲೇನ ಕರ್ಮಣಾ ।**
**ಜಾತಸ್ಮಯೇನಾನ್ಧಧಿಯಃ ಸಹೇಶ್ವರಾನ್**
**ಸತೋಽವಮನ್ಯನ್ತಿ ಹರಿಪ್ರಿಯಾನ್ಖಲಾಃ ॥ 9 ॥**

9. ಆ ದುಷ್ಟರು ಸಿರಿಯಿಂದಲೂ ಮಹಿಮೆಯಿಂದಲೂ ವಂಶದಿಂದಲೂ ವಿದ್ಯೆಯಿಂದಲೂ ತ್ಯಾಗದಿಂದಲೂ ರೂಪದಿಂದಲೂ ಕರ್ಮದಿಂದಲೂ ಗರ್ವವುಂಟಾದವರಾಗಿ ಕಂಗಾಡದೆ ಭಗವಂತನನ್ನೂ ಭಗವತ್ಪ್ರಿಯರಾದ ಹರಿಭಕ್ತರನ್ನೂ ಕಡೆಗಣಿಸುತ್ತಿರುವರು.

**ಸರ್ವೇಷು ಶಶ್ವತ್ತನುಭೃತ್ಸ್ವವಸ್ಥಿತಂ**
**ಯಥಾ ಖಮಾತ್ಮಾನಮಭೀಷ್ಟಮೀಶ್ವರಮ್ ।**
**ವೇದೋಪಗೀತಂ ಚ ನ ಶೃಣ್ವತೇಽಬುಧಾಃ**
**ಮನೋರಥಾನಾಂ ಪ್ರವದನ್ತಿ ವಾರ್ತಯಾ ॥ 10 ॥**

10. ಆಕಾಶದಂತೆ ವ್ಯಾಪಿಸಿಕೊಂಡು ಸರ್ವದೇಹಿಗಳಲ್ಲಿಯೂ ತಮ್ಮಲ್ಲಿರುವಂತೆಯೇ ವಾಸಮಾಡಿಕೊಂಡಿರುವ ಪ್ರಿಯನಾದ ವೇದೋಕ್ತನಾದ ಈಶ್ವರನನ್ನು ಕುರಿತು ಮಾತುಗಳನ್ನು ಕೇಳದೆಇರುತ್ತಾರೆ; ಈ ಅಜ್ಞಾನಿಗಳು ತಮ್ಮತಮ್ಮ ಮನೋರಥಗಳನ್ನು ಕುರಿತ ಮಾತನ್ನೇ ಆಡುತ್ತಿರುತ್ತಾರೆ.

**ಲೋಕೇ ವ್ಯವಾಯಾಮಿಷಮದ್ಯಸೇವಾ**
**ನಿತ್ಯಾ ಹಿ ಜನ್ತೋರ್ನ ಹಿ ತತ್ರ ಚೋದನಾ ।**
**ವ್ಯವಸ್ಥಿತಿಸ್ತೇಷು ವಿವಾಹಯಜ್ಞ–**
**ಸುರಾಗ್ರಹೈರಾಸು ನಿವೃತ್ತಿರಿಷ್ಟಾ ॥ 11 ॥**

11. ಮೈಥುನ, ಮಾಂಸಭಕ್ಷಣ, ಮದ್ಯಪಾನ – ಇವುಗಳಲ್ಲಿ ಜೀವನಿಗೆ ಪ್ರವೃತ್ತಿಯು ಸ್ವಾಭಾವಿಕವಾಗಿರುವದು; ಆ ವಿಷಯದಲ್ಲೇನೂ ಶಾಸ್ತ್ರವಿಧಿಯಿರುವದಿಲ್ಲ. ವಿವಾಹ, ಯಜ್ಞ, ಸುರಾಘ್ರಾಣ – ಇವುಗಳಿಂದ ಅವುಗಳಲ್ಲಿ ಕಟ್ಟಳೆಯನ್ನು ಕಲ್ಪಿಸುವದು ಶಾಸ್ತ್ರಕ್ಕೆ ವಿವಕ್ಷಿತವಾಗಿದೆ.

**ಧನಂ ಚ ಧರ್ಮೈಕಫಲಂ ಯತೋ ವೈ**
**ಜ್ಞಾನಂ ಸವಿಜ್ಞಾನಮನುಪ್ರಶಾನ್ತಿ**
**ಗೃಹೇಷು ಯುಞ್ಜನ್ತಿ ಕಲೇವರಸ್ಯ**
**ಮೃತ್ಯುಂ ನ ಪಶ್ಯನ್ತಿ ದುರನ್ತವೀರ್ಯಮ್ ॥ 12 ॥**

12. ಏಕೆಂದರೆ ಧನಕ್ಕೆ ಧರ್ಮವೊಂದೇ ಮುಖ್ಯಫಲವೆಂದೂ ಜ್ಞಾನವೂ ವಿಜ್ಞಾನವೂ ಅನಂತರ ಶಾಂತಿಯೂ ಅದರಿಂದ ಶಾಸ್ತ್ರವು ಹೇಳುತ್ತಿದೆ. ಆದರೆ ಅವರು ಮನೆಯಲ್ಲಿ ಆಸಕ್ತರಾಗಿರುತ್ತಾರೆ. ದೇಹಕ್ಕೆ ಕೊನೆಗಾಣದ ವೀರ್ಯವುಳ್ಳ ಮೃತ್ಯುವು ನಿಶ್ಚಿತವೆಂಬುದನ್ನು ಮಾತ್ರ ಕಾಣದೆಇರುತ್ತಾರೆ.

**ಯದ್ಘ್ರಾಣಭಕ್ಷೋ ವಿಹಿತಃ ಸುರಾಯಾ–**
**ಸ್ತಥಾ ಪಶೋರಾಲಭನಂ ನ ಹಿಂಸಾ ।**

**ಏವಂ ವ್ಯವಾಯಃ ಪ್ರಜಯಾ ನ ರತ್ಯಾ**
**ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್ ॥ 13 ॥**

13. ಸೌತ್ರಾಮಣೀಯಾಗದಲ್ಲಿ ಸುರಾಘ್ರಾಣವನ್ನು ಮಾತ್ರ ವಿಧಿಸಿದೆ; ಯಜ್ಞದಲ್ಲಿ ಪಶ್ವಾಲಂಭನವನ್ನು ವಿಧಿಸಿದೆಯೇ ಹೊರತು ಹಿಂಸೆಯನ್ನು ವಿಧಿಸಿಲ್ಲ; ಹೀಗೆಯೇ ಮೈಥುನವನ್ನು ಪ್ರಜಾಸಂತತಿಗಾಗಿ ವಿಧಿಸಿದೆ, ಕೇವಲ ರತಿಗಾಗಿಯಲ್ಲ. ಇದೇ ವಿಶುದ್ಧವಾದ ಸ್ವಧರ್ಮವೆಂಬುದನ್ನು ಅವರು ಅರಿಯದೆಇರುತ್ತಾರೆ.

**ಯೇ ತ್ವನೇವಂವಿದೋಽಸನ್ತಃ ಸ್ತಬ್ಧಾಃ ಸದಭಿಮಾನಿನಃ ।**
**ಪಶೂನ್ದ್ರುಹ್ಯನ್ತಿ ವಿಸ್ರಬ್ಧಾಃ ಪ್ರೇತ್ಯ ಖಾದನ್ತಿ ತೇ ಚ ತಾನ್ ॥ 14 ॥**

14. ಹೀಗೆಂಬುದನ್ನು ತಿಳಿಯದ ಯಾವ ಅಸತ್ಪುರುಷರು ಸೆಟೆದುಕೊಂಡು ತಾವೇ ಸಜ್ಜನರೆಂದು ಭಾವಿಸಿಕೊಂಡು ವಿಶ್ವಾಸದಿಂದ ಪಶುಗಳನ್ನು ವಧಿಸುತ್ತಿರುವರೋ ಅವರನ್ನು ಸತ್ತಬಳಿಕ ಅವು ತಿನ್ನುವವು.

**ದ್ವಿಷನ್ತಃ ಪರಕಾಯೇಷು ಸ್ವಾತ್ಮಾನಂ ಹರಿಮೀಶ್ವರಮ್ ।**
**ಮೃತಕೇ ಸಾನುಬನ್ಧೇಽಸ್ಮಿನ್ಬದ್ಧಸ್ನೇಹಾಃ ಪತನ್ತ್ಯಧಃ ॥ 15 ॥**

15. ಯಾರು ಮತ್ತೊಬ್ಬರ ದೇಹದಲ್ಲಿರುವ ಆತ್ಮನಾದ ಹರಿಯನ್ನು ಈ ಪುತ್ರಾದಿಸಹಿತವಾದ ಮರ್ತ್ಯದೇಹದಲ್ಲಿರುವ ಆಸಕ್ತಿಯಿಂದ ದ್ವೇಷಿಸುತ್ತಿರುವರೋ ಅವರಿಗೆ ಅಧೋಗತಿಯಾಗುವದು.

**ಯೇ ಕೈವಲ್ಯಮಸಮ್ಪ್ರಾಪ್ತಾ ಯೇ ಚಾತೀತಾಶ್ಚ ಮೂಢತಾಮ್ ।**
**ತ್ರೈವರ್ಗಿಕಾ ಹ್ಯಕ್ಷಣಿಕಾ ಆತ್ಮಾನಂ ಘಾತಯನ್ತಿ ತೇ ॥ 16 ॥**

16. ಯಾರು ಕೈವಲ್ಯವನ್ನು ಪಡೆದಿರುವದಿಲ್ಲವೋ ಮೌಢ್ಯವನ್ನು (ಅತ್ಯಂತ ಜಡತೆಯನ್ನು ಮಾತ್ರ) ದಾಟಿರುವರೋ ತ್ರಿವರ್ಗದಲ್ಲಿಯೇ ಪ್ರೀತರಾಗಿರುವ ಉಪಶಾಂತಿಯಿಲ್ಲದ ಅವರು ಆತ್ಮಹತ್ಯೆಯನ್ನು ಮಾಡಿಕೊಂದಿರುವರಾಗುವರು.

**ಏತ ಆತ್ಮಹನೋಽಶಾನ್ತಾ ಅಜ್ಞಾನೇ ಜ್ಞಾನಮಾನಿನಃ ।**
**ಸೀದನ್ತ್ಯಕೃತಕೃತ್ಯಾ ವೈ ಕಾಲಧ್ವಸ್ತಮನೋರಥಾಃ ॥ 17 ॥**

17. ಈ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಅಶಾಂತರಾದ, ಅಜ್ಞಾನವನ್ನೇ ಜ್ಞಾನವೆಂದು ತಿಳಿದುಕೊಂಡಿರುವ ಇವರು ತಮ್ಮ ಮನೋರಥವು ಕಾಲಾನುಕಾಲಕ್ಕೆ ಧ್ವಂಸವಾಗಲು ಕೃತಕೃತ್ಯರಾಗದೆ ಕುಸಿಯುವರು.

**ಹಿತ್ವಾತ್ಮಮಾಯಾರಚಿತಾ ಗೃಹಾಪತ್ಯಸುಹೃಚ್ಛ್ರಿಯಃ ।**
**ತಮೋ ವಿಶನ್ತ್ಯನಿಚ್ಛನ್ತೋ ವಾಸುದೇವಪರಾಙ್ಮುಖಾಃ ॥ 18 ॥**

18. ವಾಸುದೇವನಿಗೆ ಪರಾಙ್ಮುಖರಾಗಿರುವವರು ತಾವು ಅತ್ಯಾಯಾಸದಿಂದ ಸಂಪಾದಿಸಿದ್ದ ಮನೆ, ಮಕ್ಕಳು, ಸ್ನೇಹಿತರು, ಸಿರಿ – ಎಲ್ಲವನ್ನೂ ತಮಗೆ ಇಷ್ಟವಿಲ್ಲದಿದ್ದರೂ ಬಿಟ್ಟು ತಮಸ್ಸನ್ನು ಹೊಂದುವರು.

******

## ನಿಮಿರಾಜನಿಗೆ ಕರಭಾಜನನೆಂಬ ಯೋಗಿಯ ಉಪದೇಶ

**(ಹನ್ನೊಂದನೆಯ ಸ್ಕಂಧ, ಐದನೆಯ ಅಧ್ಯಾಯ)**

**ರಾಜೋವಾಚ –**
**ಕಸ್ಮಿನ್ ಕಾಲೇ ಸ ಭಗವಾನ್ ಕಿಂವರ್ಣಃ ಕೀದೃಶೋ ನೃಭಿಃ ।**
**ನಾಮ್ನಾ ವಾ ಕೇನ ವಿಧಿನಾ ಪೂಜ್ಯತೇ ತದಿಹೋಚ್ಯತಾಮ್ ॥ 19 ॥**

19. ನಿಮಿರಾಜನಿಂತೆಂದನು: ಋಷಿಗಳಿರಾ, ಆ ಭಗವಂತನು ಯಾವಯಾವ ಕಾಲದಲ್ಲಿ ಯಾವಯಾವ ಬಣ್ಣದವನಾಗಿರುವನು? ಹೇಗಿರುವನು? ಜನರು ಯಾವ ಹೆಸರಿನಿಂದ ಯಾವ ವಿಧಿಯಿಂದ ಆತನನ್ನು ಪೂಜಿಸುವರು? ಇದನ್ನು ನನಗೆ ಹೇಳಿರಿ.

**ಕರಭಾಜನ ಉವಾಚ –**
**ಕೃತಂ ತ್ರೇತಾ ದ್ವಾಪರಂ ಚ ಕಲಿರಿತ್ಯೇಷು ಕೇಶವಃ ।**
**ನಾನಾವರ್ಣಾಭಿಧಾಕಾರೋ ನಾನೈವ ವಿಧಿನೇಜ್ಯತೇ ॥ 20 ॥**

20. ಕರಭಾಜನಮುನಿ ಹೇಳಿದನೇನೆಂದರೆ: ಕೃತ, ತ್ರೇತ, ದ್ವಾಪರ, ಕಲಿ – ಎಂಬೀ ಯುಗಗಳಲ್ಲಿ ಆ ಕೇಶವನು ಬೇರೆಬೇರೆಯ ಬಣ್ಣ, ಹೆಸರು, ಆಕಾರ, ಇವುಗಳಿಂದ ಕೂಡಿರುತ್ತಾನೆ. ಆತನನ್ನು ಜನರು ಬೇರೆಬೇರೆಯ ವಿಧಿಯಿಂದಲೇ ಪೂಜಿಸುತ್ತಾರೆ.

**ಕೃತೇ ಶುಕ್ಲಶ್ಚತುರ್ಬಾಹುರ್ಜಟಿಲೋ ವಲ್ಕಲಾಮ್ಬರಃ ।**
**ಕೃಷ್ಣಾಜಿನೋಪವೀತಾಕ್ಷಾನ್ ಬಿಭ್ರದ್ದಣ್ಡಕಮಣ್ಡಲೂ ॥ 21 ॥**

**ಮನುಷ್ಯಾಸ್ತು ತದಾ ಶಾನ್ತಾಃ ನಿರ್ವೈರಾಃ ಸುಹೃದಃ ಸಮಾಃ ।**
**ಯಜನ್ತಿ ತಪಸಾ ದೇವಂ ಶಮೇನ ಚ ದಮೇನ ಚ ॥ 22 ॥**

**ಹಂಸಃ ಸುಪರ್ಣೋ ವೈಕುಣ್ಠೋ ಧರ್ಮೋ ಯೋಗೇಶ್ವರೋಽಮಲಃ ।**
**ಈಶ್ವರಃ ಪುರುಷೋಽವ್ಯಕ್ತಃ ಪರಮಾತ್ಮೇತಿ ಗೀಯತೇ ॥ 23 ॥**

21–23. ಕೃತಯುಗದಲ್ಲಿ ಭಗವಂತನು ಬಿಳಿಯಬಣ್ಣದವನಾಗಿರುವನು; ನಾಲ್ಕು ಭುಜಗಳುಳ್ಳವನು, ಜಟಾಧರನು, ನಾರುಬಟ್ಟೆಯನ್ನುಟ್ಟವನು, ಕೃಷ್ಣಾಜಿನ, ಯಜ್ಞೋಪವೀತ, ಅಕ್ಷಮಾಲೆ – ಇವುಗಳನ್ನೂ ದಂಡಕಮಂಡಲಗಳನ್ನೂ ಧರಿಸಿರುವನು. ಆಗ ಮನುಷ್ಯರು ಶಾಂತರಾಗಿ ವೈರವಿಲ್ಲದವರಾಗಿ ಸುಹೃದ್ರೂಪದಿಂದ ಸಮದೃಷ್ಟಿಯುಳ್ಳವರಾಗಿ ತಪಸ್ಸಿನಿಂದಲೂ ಶಮದಮಗಳಿಂದಲೂ ಕೂಡಿದವರಾಗಿ ಆದೇವನನ್ನು ಪೂಜಿಸುತ್ತಿರುವರು, ಹಂಸ, ಸುಪರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ, ಪರಮಾತ್ಮ – ಎಂಬ ನಾಮಗಳಿಂದ ಆತನನ್ನು ಸ್ತುತಿಗೈಯುವರು.

**ತ್ರೇತಾಯಾಂ ರಕ್ತವರ್ಣೋಽಸೌ ಚತುರ್ಬಾಹುಸ್ತ್ರಿಮೇಖಲಃ ।**
**ಹಿರಣ್ಯಕೇಶಸ್ತ್ರಯ್ಯಾತ್ಮಾ ಸ್ರುಕ್ಸ್ರುವಾದ್ಯುಪಲಕ್ಷಣಃ ॥ 24 ॥**

**ತಂ ತದಾ ಮನುಜಾ ದೇವಂ ಸರ್ವದೇವಮಯಂ ಹರಿಮ್ ।**
**ಯಜನ್ತಿ ವಿದ್ಯಯಾ ತ್ರಯ್ಯಾ ಧರ್ಮಿಷ್ಠಾ ಬ್ರಹ್ಮವಾದಿನಃ ॥ 25 ॥**

**ವಿಷ್ಣುರ್ಯಜ್ಞಃ ಪೃಶ್ನಿಗರ್ಭಃ ಸರ್ವದೇವ ಉರುಕ್ರಮಃ ।**
**ವೃಷಾಕಪಿರ್ಜಯನ್ತಶ್ಚ ಉರುಗಾಯ ಇತೀರ್ಯತೇ ॥ 26 ॥**

24–26. ಎಲೈ ರಾಜನೆ, ತ್ರೇತೆಯಲ್ಲಿ ಆತನು ರಕ್ತವರ್ಣನಾಗಿರುತ್ತಾನೆ. ನಾಲ್ಕು ಭುಗಳುಳ್ಳವನೂ ಮೂರು ಉಡಿದಾರವುಳ್ಳವನೂ ಚಿನ್ನದ ಕೂದಲುಳ್ಳವನೂ, ವೇದಾತ್ಮನೂ ಸ್ರಕ್ಕು, ಸ್ರುವ – ಮುಂತಾದ ಯಜ್ಞಪಾತ್ರಗಳನ್ನು ಧರಿಸಿರುವನು. ಸರ್ವದೇವನುಯನಾದ ಆ ಹರಿಯನ್ನು ಆಗ ಮನುಷ್ಯರು ಧರ್ಮಿಷ್ಠರಾದ ಬ್ರಹ್ಮವಾದಿಗಳೂ ಆಗಿದ್ದುಕೊಂಡು ವೇದವಿದ್ಯೆಯಿಂದ ಪೂಜಿಸುತ್ತಿರುವರು. ವಿಷ್ಣು, ಯಜ್ಞ, ಪೃಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತ, ಉರುಗಾಯ – ಎಂಬೀ ಹೆಸರುಗಳಿಂದ ಆತನನ್ನು ಕರೆಯುತ್ತಿರುವರು.

**ದ್ವಾಪರೇ ಭಗವಾನ್ ಶ್ಯಾಮಃ ಪೀತವಾಸಾ ನಿಜಾಯುಧಃ ।**
**ಶ್ರೀವತ್ಸಾದಿಭಿರಙ್ಕೈಶ್ಚ ಲಕ್ಷಣೈರುಪಲಕ್ಷಿತಃ ॥ 27 ॥**

**ತಂ ತದಾ ಪುರುಷಂ ಮರ್ತ್ಯಾ ಮಹಾರಾಜೋಪಲಕ್ಷಣಮ್ ।**
**ಯಜನ್ತಿ ವೇದತನ್ತ್ರಾಭ್ಯಾಂ ಪರಂ ಜಿಜ್ಞಾಸವೋ ನೃಪ ॥ 28 ॥**

**ನಮಸ್ತೇ ವಾಸುದೇವಾಯ ನಮಃ ಸಙ್ಕರ್ಷಣಾಯ ಚ ।**
**ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ ॥ 29 ॥**

**ನಾರಾಯಣಾಯ ಋಷಯೇ ಪುರುಷಾಯ ಮಹಾತ್ಮನೇ ।**
**ವಿಶ್ವೇಶ್ವರಾಯ ವಿಶ್ವಾಯ ಸರ್ವಭೂತಾತ್ಮನೇ ನಮಃ ॥ 30 ॥**

**ಇತಿ ದ್ವಾಪರ ಉರ್ವೀಶ ಸ್ತುವಿನ ಜಗದೀಶ್ವರಮ್ ।**
**ನಾನಾತನ್ತ್ರವಿಧಾನೇನ ಕಲಾವಪಿ ಯಥಾ ಶೃಣು ॥ 31 ॥**

27–31. ದ್ವಾಪರಯುಗದಲ್ಲಿ ಆ ಭಗವಂತನು ಮೇಘಶ್ಯಾಮನಾಗಿರುವನು, ಪೀತಾಂಬರಧಾರಿಯಾಗಿರುತ್ತಾನೆ; ಶಂಖಚಕ್ರಾದಿನಿಜಾಯುಧಧಾರಿಯಾಗಿರುತ್ತಾನೆ; ಶ್ರೀವತ್ಸವೇಮುಂತಾದ ಚಿಹ್ನೆಗಳಿಂದ ಕೂಡಿರುತ್ತಾನೆ. ಎಲೈ ನೃಪತಿಯೆ, ಆಗ ಪರತತ್ತ್ವವನ್ನು ತಿಳಿಯಬೇಕೆಂದು ಜನರು ಮಹಾರಾಜಲಕ್ಷಣವುಳ್ಳ ಆ ಪುರುಷನನ್ನು ವೇದತಂತ್ರಗಳಿಂದ ಪೂಜಿಸುತ್ತಿರುವದು. "ವಾಸುದೇವನಾದ ನಿನಗೆ ನಮಸ್ಕಾರ! ಸಂಕರ್ಷಣನಾದ ನಿನಗೆ ನಮಸ್ಕಾರ! ಪ್ರದ್ಯುಮ್ನನೂ ಅನಿರುದ್ಧನೂ ಆಗಿರುವ ಭಗವಂತನೆ, ನಿನಗೆ ನಮಸ್ಕಾರ! ನಾರಾಯಣ ಋಷಿಯೆ, ಮಹಾತ್ಮನಾದ ಪುರುಷನೆ, ವಿಶ್ವೇಶ್ವರನೂ ವಿಶ್ವರೂಪನೂ ಆದ ಸರ್ವಭೂತಾತ್ಮನೆ, ನಿನಗೆ ನಮಸ್ಕಾರ!" ಹೀಗೆಂದು ಎಲೈ ಭೂಪತಿಯೆ, ದ್ವಾಪರದಲ್ಲಿ ಜಗದೀಶ್ವರನನ್ನು ನಾನಾತಂತ್ರವಿಧಾನದಿಂದ ಸ್ತುತಿಸುತ್ತಿರುವರು. ಕಲಿಯುಗದಲ್ಲಿ ಹೇಗೆಂಬುದನ್ನು ಹೇಳುವೆನು ಕೇಳು –

**ಕೃಷ್ಣವರ್ಣಂ ತ್ವಿಷಾಽಕೃಷ್ಣಂ ಸಾಙ್ಗೋಪಾಙ್ಗಾಸ್ತ್ರಪಾರ್ಷದಮ್ ।**
**ಯಜ್ಞೈಃ ಸಙ್ಕೀರ್ತನಪ್ರಾಯೈರ್ಯಜನ್ತಿ ಹಿ ಸುಮೇಧಸಃ ॥ 32 ॥**

**ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ ।**
**ತೀರ್ಥಾಸ್ಪದಂ ಶಿವವಿರಿಞ್ಚಿನುತಂ ಶರಣ್ಯಮ್ ।**

**ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ ।**
**ವನ್ದೇ ಮಹಾಪುರುಷ ತೇ ಚರಣಾರವಿನ್ದಮ್ ॥ 33 ॥**

**ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ**
**ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।**
**ಮಾಯಾಮೃಗಂ ದಯಿತಯೇಪ್ಸಿತಮನ್ವಧಾವದ್**
**ವನ್ದೇ ಮಹಾಪುರುಷ ತೇ ಚರಣಾರವಿನ್ದಮ್ ॥ 34 ॥**

32–34. ಕಪ್ಪುಬಣ್ಣದವನೂ ಕಾಂತಿಯಿಂದ ಅಕೃಷ್ಣನೂ, ಅಂಗ, ಉಪಾಂಗ, ಅಸ್ತ್ರ, ದ್ವಾರಪಾಲಕರು – ಇವರಿಂದ ಕೂಡಿರುವವನೂ ಆಗಿರುವ ಆತನನ್ನು ಸಂಕೀರ್ತನ ಪ್ರಚುರವಾಗಿರುವ ಯಜ್ಞಗಳಿಂದ ವಿವೇಕಿಗಳಾದವರು ಪೂಜಿಸುತ್ತಿರುವರು. "ಯಾವಾಗಲೂ ಧ್ಯೇಯನಾಗಿರುವ, ಪರಿಭವವನ್ನು ನಾಶಗೊಳಿಸುವ, ಅಭೀಷ್ಟವನ್ನು ಹಾಲಿನಂತೆ ಕರೆಯುತ್ತಿರುವ, ತೀರ್ಥಗಳನ್ನು ಆಶ್ರಯಿಸಿಕೊಂಡಿರುವ, ಶಿವಬ್ರಹ್ಮರುಗಳಿಂದ ಸ್ತುತನಾಗಿರುವ ಎಲ್ಲರಿಗೂ ಶರಣ್ಯನಾಗಿರುವ, ಭೃತ್ಯರ ಸಂಕಟವನ್ನು ಪರಿಹರಿಸುವವನೂ ನಮಸ್ಕರಿಸಿದವರಿಗೆ ಸಂಸಾರಸಮುದ್ರವನ್ನು ದಾಟಿಸುವ ಹಡಗಿನಂತಿರುವಾತನೂ ಆದ ಮಹಾಪುರುಷನೆ, ನಿನ್ನ ಚರಣಕಮಲವನ್ನು ನಮಸ್ಕರಿಸುತ್ತೇನೆ; ಬಿಡುವದು ಕಷ್ಟವಾಗಿ ದೇವತೆಗಳು ಬಯಸುವಂಥ ರಾಜ್ಯಲಕ್ಷ್ಮಿಯನ್ನು ಬಿಟ್ಟು ಧರ್ಮಿಷ್ಠನಾದ ನೀನು ಪಿತೃವಾಕ್ಯದಂತೆ ಅರಣ್ಯಕ್ಕೆ ಹೋದೆಯಲ್ಲ! ಪತ್ನಿಗೆ ಬೇಕಾಗಿದ್ದ ಮಾಯಾಮೃಗವನ್ನು ಅನುಸರಿಸಿ ಓಡಿದ ಆ ನಿನ್ನ ಚರಣಕಮಲವನ್ನು, ಎಲೈ ಮಹಾಪುರುಷನೆ, ನಮಸ್ಕರಿಸುತ್ತೇನೆ".

**ಏವಂ ಯುಗಾನುರೂಪಾಭ್ಯಾಂ ಭಗವಾನ್ ಯುಗವರ್ತಿಭಿಃ ।**
**ಮನುಜೈರಿಜ್ಯತೇ ರಾಜನ್ ಶ್ರೇಯಸಾಮೀಶ್ವರೋ ಹರಿಃ ॥ 35 ॥**

35. ಎಲೈ, ರಾಜನೆ, ಶ್ರೇಯಸ್ಸುಗಳಿಗೆಲ್ಲ ಒಡೆಯನಾಗಿರುವ ಹರಿಯನ್ನು ಹೀಗೆ ಯುಗಕ್ಕೆ ಅನುಗುಣವಾಗಿರುವ ನಾಮರೂಪಗಳಿಂದ ಯುಗವನ್ನನುಸರಿಸುವ ಜನರು ಪೂಜಿಸುತ್ತಿರುವರು.

**ಕಲಿಂ ಸಭಾಜಯನ್ತ್ಯಾರ್ಯಾಃ ಗುಣಜ್ಞಾಃ ಸಾರಭಾಗಿನಃ ।**
**ಯತ್ರ ಸಙ್ಕೀರ್ತನೇನೈವ ಸರ್ವಃ ಸ್ವಾರ್ಥೋಽಭಿಲಭ್ಯತೇ ॥ 36 ॥**

36. ರಾಜನೆ, ಗುಣಜ್ಞರೂ ಸಾರಗ್ರಾಹಿಗಳೂ ಆಗಿರುವ ಆರ್ಯರು ಕಲಿಯುಗವನ್ನು ಬಹುಮಾನಿಸುವರು; ಏಕೆಂದರೆ ಆ ಯುಗದಲ್ಲಿ ಸಕಲಪುರುಷಾರ್ಥವೂ ಸಂಕೀರ್ತನೆಯೊಂದರಿಂದಲೇ ಲಭಿಸುತ್ತಿರುವದು.

**ನ ಹ್ಯತಃ ಪರಮೋ ಲಾಭೋ ದೇಹಿನಾಂ ಭ್ರಾಮ್ಯತಾಮಿಹ ।**
**ಯತೋ ವಿನ್ದೇತ ಪರಮಾಂ ಶಾನ್ತಿಂ ನಶ್ಯತಿ ಸಂಸೃತಿಃ ॥ 37 ॥**

37. ಪರಮಶಾಂತಿಯಾದ ಮುಕ್ತಿಯ ಲಾಭ, ಸಂಸಾರದುಃಖದ ನಿವೃತ್ತಿ – ಇದಕ್ಕಿಂತಲೂ ಹೆಚ್ಚಿನ ಲಾಭವು ಸಂಸಾರದಲ್ಲಿ ತೊಳಲುತ್ತಿರುವವರಿಗೆ ಮತ್ತೆ ಯಾವದೂ ಇಲ್ಲವಷ್ಟೆ ?

**ಕೃತಾದಿಷು ಪ್ರಜಾ ರಾಜನ್ ಕಲಾವಿಚ್ಛನ್ತಿ ಸಂಭವಮ್ ।**
**[ಯತ್ರ ಸಙ್ಕೀರ್ತನಾನ್ನೃಣಾಂ ಹರಿರ್ದಾಸ್ಯತ್ಯಸಂಭವಮ್ ॥]**

ಕೃತವೇ ಮುಂತಾದ ಯುಗಗಳಲ್ಲಿರುವ ಜನರು ಕಲಿಯುಗದಲ್ಲಿ ತಮಗೆ ಜನ್ಮವಾಗಲೆಂದು ಹಾರೈಸುತ್ತಿರುವರು. [ಏಕೆಂದರೆ ಸಂಕೀರ್ತನೆಯೊಂದರಿಂದಲೇ ಹರಿಯು ಜನರಿಗೆ ಮುಕ್ತಿಯನ್ನು ಕೊಡುತ್ತಿರುವನು.]

**ಕಲೌ ಖಲು ಭವಿಷ್ಯನಿ ನಾರಾಯಣಪರಾಯಣಾಃ ॥ 38 ॥**
**ಕ್ವಚಿತ್ಕ್ವಚಿನ್ಮಹಾರಾಜ ದ್ರವಿಡೇಷು ಚ ಭೂರಿಶಃ ।**

**ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ ॥ 39 ॥**

**ಕಾವೇರೀ ಚ ಮಹಾಪುಣ್ಯಾ ಪ್ರತೀಚೀ ಚ ಮಹಾನದೀ ।**
**ಯೇ ಪಿಬನ್ತಿ ಜಲಂ ತಾಸಾಂ ಮನುಜಾ ಮನುಜೇಶ್ವರ ।**
**ಪ್ರಾಯೋ ಭಕ್ತಾ ಭಗವತಿ ವಾಸುದೇವೇऽಮಲಾಶಯಾಃ ॥ 40 ॥**

38–40. ಎಲೈ ಮನುಜೇಶ್ವರನೆ, ಕಲಿಯುಗದಲ್ಲಿ ತಾಮ್ರಪರ್ಣೀ ನದಿಯು ಇರುವೆಡೆಯಲ್ಲಿ, ಕೃತಮಾಲಾನದಿಯಿರುವಲ್ಲಿ, ಮಹಾಪುಣ್ಯಪ್ರದವಾದ ಕಾವೇರಿಯು ಇರುವಲ್ಲಿ, ಪ್ರತೀಚೀಮಹಾನದಿಯಿರುವಲ್ಲಿ – ಹೀಗೆ ಅಲ್ಲಲ್ಲಿ ದ್ರವಿಡದೇಶದಲ್ಲಿ ಬಹಳವಾಗಿ ನಾರಾಯಣ ಪರಾಯಣರಾದವರು ಇರುತ್ತಾರೆ. ಆ ನದಿಗಳ ನೀರನ್ನು ಕುಡಿಯುವವರು ಬಲುಮಟ್ಟಿಗೆ ವಾಸುದೇವ ಭಗವಂತನಲ್ಲಿ ಭಕ್ತರಾಗಿರುವ ಮಹಾಶಯರಾಗಿರುವರು.

**ದೇವರ್ಷಿಭೂತಾಪ್ತನೃಣಾಂ ಪಿತೃಣಾಂ**
**ನ ಕಿಙ್ಕರೋ ನಾಯಮೃಣೀ ಚ ರಾಜನ್ ।**
**ಸರ್ವಾತ್ಮನಾ ಯಃ ಶರಣಂ ಶರಣ್ಯಂ**
**ಗತೋ ಮುಕುನ್ದಂ ಪರಿಹೃತ್ಯ ಕರ್ತಮ್ ॥ 41 ॥**

41. ರಾಜನೆ, ಯಾವನು ಮಿಕ್ಕ ಕೆಲಸವನ್ನು ಬಿಟ್ಟು ಶರಣ್ಯನಾದ ಮುಕುಂದನನ್ನೇ ಶರಣುಹೊಂದಿರುವನೋ ಅವನು ದೇವತೆಗಳಿಗೆ, ಋಷಿಗಳಿಗೆ, ಭೂತಗಳಿಗೆ, ಆಪ್ತರಿಗೆ, ಮನುಷ್ಯರಿಗೆ, ಪಿತೃಗಳಿಗೆ, ಯಾರಿಗೂ ಕಿಂಕರನಲ್ಲ; ಯಾರಿಗೂ ಋಣಿಯಾಗಿರುವದಿಲ್ಲ.

**ಸ್ವಪಾದಮೂಲಂ ಭಜತಃ ಪ್ರಿಯಸ್ಯ**
**ತ್ಯಕ್ತಾನ್ಯಭಾವಸ್ಯ ಹರಿಃ ಪರೇಶಃ ।**
**ವಿಕರ್ಮ ಯಚ್ಚೋತ್ಪತಿತಂ ಕಥಞ್ಚಿ-**
**ದ್ಧುನೋತಿ ಸರ್ವಂ ಹೃದಿ ಸನ್ನಿವಿಷ್ಟಃ ॥ 42 ॥**

42. ಮಿಕ್ಕ ಭಾವವನ್ನು ಬಿಟ್ಟು ತನ್ನ ಪಾದಮೂಲವನ್ನೇ ಭಜಿಸುತ್ತಿರುವ ಪ್ರಿಯ ಭಕ್ತನಿಗೆ ಯಾವದಾದರೂ ಕಾರಣದಿಂದ ಬಂದೊದಗಿದ ವಿಕರ್ಮವನ್ನು ಹರಿಯು ಹೃದಯದಲ್ಲಿಯೇ ಇದ್ದುಕೊಂಡು ತೊಳೆದುಹಾಕುವನು.

*****

## ಶ್ರೀಕೃಷ್ಣನನ್ನು ಕುರಿತು ದೇವತೆಗಳ ಪ್ರಾರ್ಥನೆ

(ಹನ್ನೊಂದನೆಯ ಸ್ಕಂಧ, ಆರನೆಯ ಅಧ್ಯಾಯ)

**ದೇವಾ ಊಚುಃ –**
**ನತಾಃ ಸ್ಮ ತೇ ನಾಥ ಪದಾರವಿನ್ದಂ**
**ಬುದ್ಧೀನ್ದ್ರಿಯಪ್ರಾಣಮನೋವಚೋಭಿಃ ।**
**ಯಚ್ಚಿನ್ತ್ಯತೇಽನ್ತರ್ಹೃದಿ ಭಾವಯುಕ್ತೈ-**
**ರ್ಮುಮುಕ್ಷುಭಿಃ ಕರ್ಮಮಯೋರುಪಾಶಾತ್ ॥ 7 ॥**

7. ಎಲೈ ಲೋಕರಕ್ಷಕನೆ, ಕರ್ಮಮಯವಾದ ಭವಬಂಧದಿಂದ ಬಿಡುಗಡೆಯಾಗಲಿಚ್ಛಿಸುವವರು, ಭಾವಯುಕ್ತರಾಗಿ ತಮ್ಮ ಹೃದಯಾಂತರಾಳ

ದಲ್ಲಿ ಯಾವನನ್ನು ಧ್ಯಾನಿಸುತ್ತಿರುವರೋ ಆ ನಿನ್ನ ಪಾದಕಮಲವನ್ನು ಬುದ್ಧಿ, ಇಂದ್ರಿಯ, ಪ್ರಾಣ, ಮನಸ್ಸು ಮತ್ತು ವಾಕ್ಕು – ಇವುಗಳಿಂದೊಡಗೂಡಿ ನಮಸ್ಕರಿಸುತ್ತಿದ್ದೇವೆ.

**ತ್ವಂ ಮಾಯಯಾ ತ್ರಿಗುಣಯಾಽಽತ್ಮನಿ ದುರ್ವಿಭಾವ್ಯಂ**
**ವ್ಯಕ್ತಂ ಸೃಜಸ್ಯವಸಿ ಲುಮ್ಪಸಿ ತದ್ಗುಣಸ್ಥಃ ।**
**ನೈತೈರ್ಭವಾನಜಿತ ಕರ್ಮಭಿರಜ್ಯತೇ ವೈ**
**ಯತ್ ಸ್ವೇ ಸುಖೇಽವ್ಯವಹಿತೇಽಭಿರತೋಽನವದ್ಯಃ ॥ 8 ॥**

8. ನೀನು ತ್ರಿಗುಣಾತ್ಮಕವಾದ ಮಾಯೆಯಿಂದ – ಮಿಕ್ಕವರು ಮನಸ್ಸಿನಲ್ಲಿ ಚಿಂತಿಸುವದಕ್ಕೆ ಕಷ್ಟವಾಗಿರುವ ಈ ವ್ಯಕ್ತಪ್ರಪಂಚವನ್ನು ಆ ಮಾಯೆಯ ಗುಣಗಳಲ್ಲಿಯೇ ಇದ್ದುಕೊಂಡು ಸೃಷ್ಟಿಮಾಡುತ್ತಿರುವೆ, ರಕ್ಷಿಸುತ್ತಿರುವೆ, ಲಯಗೊಳಿಸುತ್ತಿರುವೆ, ಎಲೈ ಅಜಿತನೆ, ಈ ಕರ್ಮಗಳಿಂದ ನಿನಗೇನೂ ಲೇಪವಾಗುತ್ತಿರುವದಿಲ್ಲ. ಏಕೆಂದರೆ ನಿನಗೆ ಸ್ವಲ್ಪವೂ ಅಂತರವಿಲ್ಲದಿರುವ ಆತ್ಮಾನಂದದಲ್ಲಿಯೇ ರತನಾಗಿ ನಿರ್ದುಷ್ಟನಾಗಿರುವೆ.

**ಶುದ್ಧಿರ್ನೃಣಾಂ ನ ತು ತಥೇಡ್ಯ ದುರಾಶಯಾನಾಂ**
**ವಿದ್ಯಾಶ್ರುತಾಧ್ಯಯನದಾನತಪಃಕ್ರಿಯಾಭಿಃ ।**
**ಸತ್ತ್ವಾತ್ಮನಾಮೃಷಭ ತೇ ಯಶಸಿ ಪ್ರವೃದ್ಧ-**
**ಸಚ್ಛ್ರದ್ಧಯಾ ಶ್ರವಣಸಂಭೃತಯಾ ಯಥಾ ಸ್ಯಾತ್ ॥ 9 ॥**

9. ಸ್ತೋತ್ರಾರ್ಹನಾದ ಭಗವಂತನೆ, ವಿದ್ಯೆ, ಶಾಸ್ತ್ರಶ್ರವಣ, ಅಧ್ಯಯನ, ದಾನ, ತಪಸ್ಸು, ಕರ್ಮ – ಇವುಗಳಿಂದಲೇನೂ ದುಷ್ಟಾಂತಃಕರಣವುಳ್ಳವರಿಗೆ ಅಷ್ಟಾಗಿ ಶುದ್ಧಿಯಾಗಲಾರದು. ಸತ್ತ್ವಪ್ರಧಾನವಾಗಿರುವ ಅಂತಃಕರಣವುಳ್ಳವರಿಗೆ ನಿನ್ನ ಕೀರ್ತಿಯನ್ನು ಶ್ರವಣ ಮಾಡಿಮಾಡಿ ವೃದ್ಧಿಯಾಗುತ್ತಿರುವ ಸಚ್ಛ್ರದ್ಧೆಯಿಂದ ಎಂಥ ಶುದ್ಧಿಯಾಗುವದೋ ಅಂಥದ್ದು ಮಿಕ್ಕವರಿಗೆ ವಿದ್ಯಾದಿಗಳಿಂದ ಎಂದಿಗೆ ಆದೀತು?

**ಸ್ಯಾನ್ನಸ್ತವಾಙ್ಘ್ರಿರಶುಭಾಶಯಧೂಮಕೇತುಃ**
**ಕ್ಷೇಮಾಯ ಯೋ ಮುನಿಭಿರಾರ್ದ್ರಹೃದೋಹ್ಯಮಾನಃ ।**
**ಯಃ ಸಾತ್ವತೈಃ ಸಮವಿಭೂತಯ ಆತ್ಮವದ್ಭಿ-**
**ರ್ವ್ಯೂಹೇಽರ್ಚಿತಃ ಸವನಶಃ ಸ್ವರತಿಕ್ರಮಾಯ ॥ 10 ॥**

10. ದುಷ್ಟಾಶಯಕ್ಕೆ ಅಗ್ನಿರೂಪವಾಗಿರುವ ನಿನ್ನ ಪಾದವು ನಮಗೆ ಕ್ಷೇಮಂಕರವಾಗಲಿ! ಅದನ್ನೇ ಮುನಿಗಳು ಆರ್ದ್ರಾಂತಃಕರಣದಿಂದ ಭಾವಿಸಿ ಕೊಳ್ಳುತ್ತಿರುವರು. ಸಾತ್ವತಜನರು ಶುದ್ಧಾಂತಃಕರಣರಾಗಿ ಚತುರ್ವ್ಯೂಹದಲ್ಲಿ ಮೂರು ಕಾಲಗಳಲ್ಲಿಯೂ ಅರ್ಚಿಸಿ ಸ್ವರ್ಗವನ್ನು ದಾಟುವರು.

**ಯಚ್ಚಿನ್ತ್ಯತೇ ಪ್ರಯತಪಾಣಿಭಿರಧ್ವರಾಗ್ನೌ**
**ತ್ರಯ್ಯಾ ನಿರುಕ್ತವಿಧಿನೇಶ ಹವಿರ್ಗೃಹೀತ್ವಾ ।**
**ಅಧ್ಯಾತ್ಮಯೋಗ ಉತ ಯೋಗಿಭಿರಾತ್ಮಮಾಯಾಂ**
**ಜಿಜ್ಞಾಸುಭಿಃ ಪರಮಭಾಗವತೈಃ ಪರೀಷ್ಟಃ ॥ 11 ॥**

11. ಯಜ್ಞಾಗ್ನಿಯಲ್ಲಿ ವೇದೋಕ್ತವಿಧಿಯಿಂದ ಹವಿಸ್ಸನ್ನು ಅರ್ಪಣೆ ಮಾಡುವಾಗ ಅದನ್ನು ಪರಿಶುದ್ಧವಾದ ಕೈಯಲ್ಲಿಟ್ಟುಕೊಂಡು ಆ ನಿನ್ನ ಪಾದವನ್ನೇ ಚಿಂತಿಸುತ್ತಿರುವರು. ಯೋಗಿಗಳು ಪರಮಾತ್ಮಮಾಯೆಯ ಸ್ವರೂಪವನ್ನು ಅರಿತುಕೊಳ್ಳುವದಕ್ಕಾಗಿ ಅಧ್ಯಾತ್ಮಯೋಗದಲ್ಲಿ ಆ ಪಾದವನ್ನೇ ಧ್ಯಾನಿಸುತ್ತಿರುವರು. ಪರಮಭಾಗವತರಾದವರು ಆ ಪಾದವನ್ನೇ ನೋಡುವದಕ್ಕೆ ಹವಣಿಸುತ್ತಿರುವರು.

**ಪರ್ಯುಷ್ಟಯಾ ತವ ವಿಭೋ ವನಮಾಲಯೇಯಂ**
**ಸಂಸ್ಪರ್ಧಿನೀ ಭಗವತೀ ಪ್ರತಿಪತ್ನಿವಚ್ಛ್ರೀಃ ।**
**ಯಃ ಸುಪ್ರಣೀತಮಮುಯಾರ್ಹಣಮಾದದನ್ನೋ**
**ಭೂಯಾತ್ ಸದಾಙ್ಘ್ರಿರಶುಭಾಶಯಧೂಮಕೇತುಃ ॥ 12 ॥**

12. ವಿಭುವೆ, ಈ ನಿನ್ನ ಒಣಗಿದ ವನಮಾಲೆಯೊಡನೆ, ಭಗವತಿಯಾದ ಲಕ್ಷ್ಮೀದೇವಿಯು ಕೂಡ ಸವತಿಯಂತೆ ಸ್ಪರ್ಧೆಯನ್ನು ಮಾಡುತ್ತಿರುವಳು. ಆದರೂ ಈಕೆಯು ಸಮರ್ಪಿಸಿದ ಸೇವಾರೂಪವಾದ ಪೂಜೆಯನ್ನು ಸ್ವೀಕರಿಸುತ್ತಿರುವ, ಈ ನಿನ್ನ ಪಾದವು ಎಂದೆಂದಿಗೂ ನಮ್ಮ ಅಂತಃಕರಣದೋಷಗಳನ್ನು ದಹಿಸುವದಾಗಲಿ!

**ಕೇತುಸ್ತ್ರಿವಿಕ್ರಮಯುತಸ್ತ್ರಿಪತತ್ಪತಾಕೋ**
**ಯಸ್ತೇ ಭಯಾಭಯಕರೋಽಸುರದೇವಚಮ್ವೋಃ ।**
**ಸ್ವರ್ಗಾಯ ಸಾಧುಷು ಖಲೇಷ್ವಿತರಾಯ ಭೂಮನ್**
**ಪಾದಃ ಪುನಾತು ಭಗವನ್ ಭಜತಾಮಘಂ ನಃ ॥ 13 ॥**

13. ಭೂಮಬ್ರಹ್ಮಸ್ವರೂಪನಾದ ಭಗವಂತನೆ, ಮೂರು ಹೆಜ್ಜೆಗಳಿಂದೊಡಗೂಡಿದ ನಿನ್ನ ಪಾದವೆಂಬ ಧ್ವಜವು ಮೂರು ಲೋಕಗಳಲ್ಲಿಯೂ ಹಾರಾಡುತ್ತಿರುವ ಗಂಗೆಯೆಂಬ ಬಾವುಟವುಳ್ಳದ್ದಾಗಿ ಅಸುರಸೇನೆಗೂ ದೇವತೆಗಳ ಸೇನೆಗೂ ಯಥಾಕ್ರಮವಾಗಿ ಭಯವನ್ನೂ ಅಭಯವನ್ನೂ ಉಂಟುಮಾಡುತ್ತಾ ಸಜ್ಜನರಿಗೆ ಸ್ವರ್ಗಫಲಪ್ರದವೂ ದುರ್ಜನರಿಗೆ ಅಧೋಗತಿಪ್ರದವೂ ಆಗಿದೆಯಲ್ಲ, ಆ ಪಾದವು ಭಜಿಸುತ್ತಿರುವ ನಮ್ಮಗಳ ಪಾಪವನ್ನು ತೊಳೆದು ಶುದ್ಧಿಮಾಡಲಿ!

**ನಸ್ಯೋತಗಾವ ಇವ ಯಸ್ಯ ವಶೇ ಭವನ್ತಿ**
**ಬ್ರಹ್ಮಾದಯಸ್ತನುಭೃತೋ ಮಿಥುರರ್ದ್ಯಮಾನಾಃ ।**
**ಕಾಲಸ್ಯ ತೇ ಪ್ರಕೃತಿಪೂರುಷಯೋಃ ಪರಸ್ಯ**
**ಶಂ ನಸ್ತನೋತು ಚರಣಃ ಪುರುಷೋತ್ತಮಸ್ಯ ॥ 14 ॥**

14. ಬ್ರಹ್ಮಾದಿಜೀವರುಗಳು ಪರಸ್ಪರವಾಗಿ ಯುದ್ಧಾದಿಗಳಿಂದ ಪೀಡಿತರಾಗಿ, ಪ್ರಕೃತಿಪುರುಷರಿಬ್ಬರನ್ನೂ ಮೀರಿರುವ ಕಾಲರೂಪನಾದ ಯಾವ ನಿನಗೆ – ಮೂಗುದಾರವನ್ನು ಹಾಕಿರುವ ಎತ್ತುಗಳಂತೆ – ವಶರಾಗಿರುವರೋ ಆ ಪುರುಷೋತ್ತಮನಾದ ನಿನ್ನ ಪಾದವು ನಮಗೆ ಸುಖವನ್ನುಂಟುಮಾಡಲಿ!

**ಅಸ್ಯಾಸಿ ಹೇತುರುದಯಸ್ಥಿತಿಸಂಯಮಾನಾ–**
**ಮವ್ಯಕ್ತಜೀವಮಹತಾಮಪಿ ಕಾಲಮಾಹುಃ ।**
**ಸೋಽಯಂ ತ್ರಿಣಾಭಿರಖಿಲಾಪಚಯೇ ಪ್ರವೃತ್ತಃ**
**ಕಾಲೋ ಗಭೀರರಯ ಉತ್ತಮಪೂರುಷಸ್ತ್ವಮ್ ॥ 15 ॥**

15. ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನು ನೀನು. ಅವ್ಯಕ್ತ, ಜೀವ, ಮಹತ್ತತ್ತ್ವ – ಇವುಗಳಿಗೂ ನಿಯಂತೃವಾದ ಕಾಲವು ನೀನು ಎನ್ನುತ್ತಾರೆ. ಇಂಥ ಮೂರು ಚಾತುರ್ಮಾಸ್ಯಗಳೆಂಬ ನಾಭಿಗಳುಳ್ಳ, ಎಲ್ಲರ ಕ್ಷಯಕ್ಕೆಂದು ಪ್ರವೃತ್ತನಾಗಿರುವ ಮಹಾವೇಗವುಳ್ಳ ಕಾಲರೂಪನಾದ ಪುರುಷೋತ್ತಮನೇ ನೀನು.

**ತ್ವತ್ತಃ ಪುಮಾನ್ ಸಮಧಿಗಮ್ಯ ಯಯಾ ಸ್ವವೀರ್ಯಂ**
**ಧತ್ತೇ ಮಹಾನ್ತಮಿವ ಗರ್ಭಮಮೋಘವೀರ್ಯಃ ।**
**ಸೋಽಯಂ ತಯಾನುಗತ ಆತ್ಮನ ಅಣ್ಡಕೋಶಂ**
**ಹೈಮಂ ಸಸರ್ಜ ಬಹಿರಾವರಣೈರುಪೇತಮ್ ॥ 16 ॥**

16. ಪುರುಷನು ನಿನ್ನಿಂದ ಶಕ್ತಿಯನ್ನು ಪಡೆದುಕೊಂಡು, ಅಮೋಘವೀರ್ಯನಾಗಿ ಯಾವ ಮಾಯೆಯಿಂದ ಈ ವಿಶ್ವದ ಗರ್ಭವನ್ನು ಧಾರಣೆಮಾಡಿದಂತೆ ಮಹತ್ತತ್ತ್ವವನ್ನು ಧರಿಸುವನೋ, ಆ ಈ ಮಹಾನ್ ಆತ್ಮನೇ ಅದೇ ಮಾಯೆಯಿಂದ ಅನುಸೃತನಾಗಿ ಹೊರಗಿನ ಆವರಣಗಳಿಂದೊಡಗೂಡಿದ ಸುವರ್ಣದ ಅಂಡಕೋಶವನ್ನು ಸೃಷ್ಟಿಸಿರುತ್ತಾನೆ.

**ತತ್ತಸ್ಥುಷಶ್ಚ ಜಗತಶ್ಚ ಭವಾನಧೀಶೋ**
**ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।**
**ಅರ್ಥಾಞ್ಜುಷನ್ನಪಿ ಹೃಷೀಕಪತೇ ನ ಲಿಪ್ತೋ**
**ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿ ಸ್ಮ ॥ 17 ॥**

17. ಆದ್ದರಿಂದ ಎಲೈ ಹೃಷೀಕೇಶನೆ, ಸ್ಥಾವರಜಂಗಮಕ್ಕೂ ನೀನು ಒಡೆಯನಾಗಿರುತ್ತೀಯೆ. ಏಕೆಂದರೆ ಮಾಯೆಯಿಂದ ಉಂಟಾಗಿರುವ ಸತ್ತ್ವಾದಿಗುಣಗಳ ವಿಕಾರದಿಂದ ಕೂಡಿರುವ ವಿಷಯಗಳನ್ನು ಸೇವಿಸಿದರೂ ಅವುಗಳಿಂದ ಲಿಪ್ತನಾಗದೆ ಇರುತ್ತೀಯೆ. ಮಿಕ್ಕವರು ತಮಗೆತಾವೇ ಪರಿಹಾರವಾಗಿದ್ದರೂ ಮಾಯಾಗುಣಗಳಿಂದ ಅಂಜಿಕೊಂಡಿರುತ್ತಾರೆ.

**ಸ್ಮಾಯಾವಲೋಕಲವದರ್ಶಿತಭಾವಹಾರಿ-**
**ಭ್ರೂಮಣ್ಡಲಪ್ರಹಿತಸೌರತಮನ್ತ್ರಶೌಣ್ಡೈಃ ।**
**ಪತ್ನ್ಯಸ್ತು ಷೋಡಶಸಹಸ್ರಮನಙ್ಗಬಾಣೈ-**
**ರ್ಯಸ್ಯೇನ್ದ್ರಿಯಂ ವಿಮಥಿತುಂ ಕರಣೈರ್ನ ವಿಭ್ವ್ಯಃ ॥ 18 ॥**

18. ನಸುನಗೆಯ ನೋಟದ ಕುಡಿಯಿಂದಲೇ ಭಾವವನ್ನು ತೋರಿಸುತ್ತಾ ಮನೋಹರವಾಗಿರುವ ಭ್ರೂಮಂಡಲದಿಂದ ಕಳುಹಿಸಿದ ಸುರತಮಂತ್ರದಲ್ಲಿ ಜಾಣತನವುಳ್ಳ ಕಾಮಬಾಣಗಳಿಂದಾಗಿರುವ ಕರಣಗಳಿಂದ ನಿನ್ನ ಮನಸ್ಸನ್ನು ಕಲಕುವದಕ್ಕೆ ಹದಿನಾರುಸಾವಿರ ಪತ್ನಿಯರೂ ಸಮರ್ಥರಾಗಿಲ್ಲ!

**ವಿಭ್ವ್ಯಸ್ತವಾಮೃತಕಥೋದವಹಾಸ್ತ್ರಿಲೋಕ್ಯಾಃ**
**ಪಾದಾವನೇಜಸರಿತಃ ಶಮಲಾನಿ ಹನ್ತುಮ್ ।**
**ಅನುಶ್ರವಂ ಶ್ರುತಿಭಿರಙ್ಘ್ರಿಜಮಙ್ಗಸಙ್ಗೈ-**
**ಸ್ತೀರ್ಥದ್ವಯಂ ಶುಚಿಷದಸ್ತ ಉಪಸ್ಪೃಶನ್ತಿ ॥ 19 ॥**

19. ನಿನ್ನ ಅಮೃತರೂಪವಾದ ಕಥೋದಕವನ್ನು ಹರಿಯಿಸುತ್ತಿರುವ ಕೀರ್ತನಾದಿಗಳೂ ಮತ್ತು ಪಾದವನ್ನು ತೊಳೆದು ಹರಿಯುವ ಗಂಗಾದಿ ನದಿಗಳೂ ಮೂರು ಲೋಕದ ಪಾಪಗಳನ್ನು ನಾಶಗೊಳಿಸಬಲ್ಲವಾಗಿವೆ. ಸ್ವಾಶ್ರಮಧರ್ಮದಲ್ಲಿ ನಿಷ್ಠರಾದವರು ವೇದದಿಂದ ತಿಳಿದುಬರುವ ನದಿಯನ್ನು ಶ್ರೋತ್ರೇಂದ್ರಿಯ ಗಳಿಂದಲೂ, ಪಾದದಿಂದ ಬಂದಿರುವ ನದಿಗಳನ್ನು ಸ್ನಾನರೂಪವಾದ ಅಂಗಸಂಗದಿಂದಲೂ – ಹೀಗೆ ಎರಡು ತೀರ್ಥಗಳನ್ನೂ ಸೇವಿಸುತ್ತಿರುವರು.

******

## ಉದ್ಧವನಿಗೆ ಭಗವಂತನ ಉಪದೇಶ

### (ಹನ್ನೊಂದನೆಯ ಸ್ಕಂಧ, ಏಳನೆಯ ಅಧ್ಯಾಯ)

**ಯರ್ಹ್ಯೇವಾಯಂ ಮಯಾ ತ್ಯಕ್ತೋ ಲೋಕೋಽಯಂ ನಷ್ಟಮಙ್ಗಲಃ ।**
**ಭವಿಷ್ಯತ್ಯಚಿರಾತ್ ಸಾಧೋ ಕಲಿನಾಪಿ ನಿರಾಕೃತಃ ॥ 4 ॥**

4. ಭಗವಂತನಿಂತೆಂದನು: ಎಲೈ ಸಾಧುವಾದ ಉದ್ಧವನೆ, ಯಾವಾಗ ಈ ಲೋಕವನ್ನು ಬಿಡುವೆನೋ, ಕಲಿಯೂ ಇದನ್ನು ತಿರಸ್ಕರಿಸುವನೋ, ಆಗ ಇದು ಬೇಗನೆ ಮಂಗಲವಾದದ್ದೆಲ್ಲವನ್ನೂ ಕಳೆದುಕೊಳ್ಳುವದು.

**ನ ವಸ್ತವ್ಯಂ ತ್ವಯೈವೇಹ ಮಯಾ ತ್ಯಕ್ತೇ ಮಹೀತಲೇ ।**
**ಜನೋಽಧರ್ಮರುಚಿರ್ಭದ್ರ ಭವಿಷ್ಯತಿ ಕಲೌ ಯುಗೇ ॥ 5 ॥**

5. ಅಪ್ಪ, ನಾನು ಭೂಲೋಕವನ್ನು ಬಿಟ್ಟುಹೋದಮೇಲೆ ನೀನೊಬ್ಬನೇ ಇಲ್ಲಿರಬಾರದು. ಏಕೆಂದರೆ ಕಲಿಯುಗದಲ್ಲಿ ಜನರು ಅಧರ್ಮದಲ್ಲಿ ಆಸಕ್ತರಾಗುವರು.

**ತ್ವಂ ತು ಸರ್ವಂ ಪರಿತ್ಯಜ್ಯ ಸ್ನೇಹಂ ಸ್ವಜನಬನ್ಧುಷು ।**
**ಮಯ್ಯಾವೇಶ್ಯ ಮನಃ ಸಮ್ಯಕ್ ಸಮದೃಕ್ ವಿಚರಸ್ವ ಗಾಮ್ ॥ 6 ॥**

6. ನೀನು ಮಾತ್ರ ಸ್ವಜನಬಂಧುಗಳಲ್ಲಿ ಸರ್ವಸ್ನೇಹವನ್ನೂ ಬಿಟ್ಟು ನನ್ನಲ್ಲಿಯೇ ಚೆನ್ನಾಗಿ ಮನಸ್ಸನ್ನು ಇಟ್ಟುಕೊಂಡು ಸಮದರ್ಶಿಯಾಗಿ ಭೂಮಿಯಮೇಲೆ ಸಂಚರಿಸುತ್ತಿರು.

**ಯದಿದಂ ಮನಸಾ ವಾಚಾ ಚಕ್ಷುರ್ಭ್ಯಾಂ ಶ್ರವಣಾದಿಭಿಃ ।**
**ನಶ್ವರಂ ಗೃಹ್ಯಮಾಣಂ ಚ ವಿದ್ಧಿ ಮಾಯಾಮನೋಮಯಮ್ ॥ 7 ॥**

7. ಮನಸ್ಸಿಗೂ ವಾಕ್ಕಿಗೂ ಕಣ್ಣುಗಳಿಗೂ ಶ್ರೋತ್ರೇಂದ್ರಿಯಾದಿಗಳಿಗೂ ಗೋಚರವಾಗಿರುವ ಈ ಪ್ರಪಂಚವು ನಶ್ವರವು, ಮಾಯಾಮನೋಮಯವು – ಎಂದು ತಿಳಿ.

**ಪುಂಸೋಽಯುಕ್ತಸ್ಯ ನಾನಾರ್ಥೋ ಭ್ರಮಃ ಸ ಗುಣದೋಷಭಾಕ್ ।**
**ಕರ್ಮಾಕರ್ಮವಿಕರ್ಮೇತಿ ಗುಣದೋಷಧಿಯೋ ಭಿದಾ ॥ 8 ॥**

8. ಅಸಮಾಹಿತಚಿತ್ತನಾದ ಪುರುಷನಿಗೆ ಭಿನ್ನಭಿನ್ನವಾಗಿ ಕಾಣುತ್ತಿರುವದೆಲ್ಲ ಭ್ರಮವು, ಅದು ಗುಣದೋಷಗಳಿಂದ ಕೂಡಿರುತ್ತದೆ. ಗುಣದೋಷಗಳನ್ನು ಕಾಣುವ ಬುದ್ಧಿಗೆ ಕರ್ಮ, ಅಕರ್ಮ, ವಿಕರ್ಮ – ಎಂಬ ಭೇದವು ತೋರುತ್ತಿರುವದು.

**ತಸ್ಮಾದ್ ಯುಕ್ತೇನ್ದ್ರಿಯಗ್ರಾಮೋ ಯುಕ್ತಚಿತ್ತ ಇದಂ ಜಗತ್ ।**
**ಆತ್ಮನೀಕ್ಷಸ್ವ ವಿತತಮಾತ್ಮಾನಂ ಮಯ್ಯಧೀಶ್ವರೇ ॥ 9 ॥**

9. ಆದ್ದರಿಂದ ಇಂದ್ರಿಯಗ್ರಾಮವನ್ನು ಹಿಡಿತದಲ್ಲಿಟ್ಟುಕೊಂಡು, ಚಿತ್ತವನ್ನು ಬಿಗಿಹಿಡಿದುಕೊಂಡು ಈ ಜಗತ್ತು ನಿನ್ನ ಆತ್ಮನಲ್ಲಿಯೇ ವಿಸ್ತರಿಸಿಕೊಂಡು ತೋರುತ್ತಿರುವದೆಂಬುದನ್ನು ಕಂಡುಕೊ, ಆತ್ಮನನ್ನು ಅಧೀಶ್ವರನಾದ ನನ್ನಲ್ಲಿ ಕಂಡುಕೊ!

**ಜ್ಞಾನವಿಜ್ಞಾನಸಂಯುಕ್ತ ಆತ್ಮಭೂತಃ ಶರೀರಿಣಾಮ್ ।**
**ಆತ್ಮಾನುಭವತುಷ್ಟಾತ್ಮಾ ನಾನ್ತರಾಯೈರ್ವಿಹನ್ಯಸೇ ॥ 10 ॥**

10. ಜ್ಞಾನವಿಜ್ಞಾನಗಳಿಂದೊಡಗೂಡಿ ಎಲ್ಲಾ ದೇಹಿಗಳಿಗೂ ಆತ್ಮನಾಗಿ ಆತ್ಮಾನುಭವದಿಂದಲೇ ಸಂತುಷ್ಟನಾಗಿದ್ದರೆ ಯಾವ ವಿಘ್ನಗಳ ಹೊಡೆತಕ್ಕೂ ಸಿಕ್ಕದೆ ಇರುವೆ.

**ದೋಷಬುದ್ಧ್ಯೋಭಯಾತೀತೋ ನಿಷೇಧಾನ್ನ ನಿವರ್ತತೇ ।**
**ಗುಣಬುದ್ಧ್ಯಾ ಚ ವಿಹಿತಂ ನ ಕರೋತಿ ಯಥಾರ್ಭಕಃ ॥ 11 ॥**

11. ದೋಷವೆಂಬ ಬುದ್ಧಿಯಿಂದ (ಗುಣದೋಷ)ಗಳೆರಡನ್ನೂ ಮೀರಿರುವಾತನು ನಿಷೇಧವನ್ನು ಬಿಟ್ಟು ಹಿಂಜಗ್ಗುವದಿಲ್ಲ; ವಿಹಿತವಾದದ್ದನ್ನು ಒಳ್ಳೆಯದೆಂದು ಮಾಡುವದೂ ಇಲ್ಲ, ಮಗುವಿನಂತೆಯೇ ವರ್ತಿಸುವನು.

**ಸರ್ವಭೂತಸುಹೃಚ್ಛಾನ್ತೋ ಜ್ಞಾನವಿಜ್ಞಾನನಿಶ್ಚಯಃ ।**
**ಪಶ್ಯನ್ ಮದಾತ್ಮಕಂ ವಿಶ್ವಂ ನ ವಿಪದ್ಯೇತ ವೈ ಪುನಃ ॥ 12 ॥**

12. ಸರ್ವಪ್ರಾಣಿಗಳಿಗೂ ಉಪಕಾರನಿರಪೇಕ್ಷನಾಗಿರುವ ಸುಹೃತ್ತೆನಿಸಿ, ಜ್ಞಾನ ವಿಜ್ಞಾನಗಳಲ್ಲಿ ನಿಶ್ಚಿತಬುದ್ಧಿಯುಳ್ಳವನು ವಿಶ್ವವೆಲ್ಲವನ್ನೂ ಭಗವಂತನಾದ ನನ್ನ ಸ್ವರೂಪವೆಂದೇ ಕಾಣುತ್ತಾ ಮತ್ತೆ ವಿಪತ್ತಿಗೆ ಒಳಗಾಗದೆ ಇರುವನು.

**ಉದ್ಧವ ಉವಾಚ –**

**ಯೋಗೇಶ ಯೋಗವಿನ್ಯಾಸ ಯೋಗಾತ್ಮನ್ ಯೋಗಸಂಭವ ।**
**ನಿಃಶ್ರೇಯಸಾಯ ಮೇ ಪ್ರೋಕ್ತಃ ತ್ಯಾಗಃ ಸಂನ್ಯಾಸಲಕ್ಷಣಃ ॥ 14 ॥**

14. ಉದ್ಧವನಿಂತೆಂದನು: ಯೋಗಫಲವನ್ನು ಕೊಡುವ, ಯೋಗಗಳಿಗೆ ಆಶ್ರಯನಾದ, ಯೋಗಸ್ವರೂಪನಾದ, ಯೋಗಗಳಿಗೆ ಉತ್ಪತ್ತಿಸ್ಥಾನನಾಗಿರುವ ಕೃಷ್ಣನೆ, ಸಂನ್ಯಾಸಸ್ವರೂಪನಾದ ತ್ಯಾಗವನ್ನು ಮೋಕ್ಷಸಾಧನವಾಗಿ ನೀನು ನನಗೆ ಉಪದೇಶಿಸಿದೆಯಷ್ಟೆ !

**ತ್ಯಾಗೋಽಯಂ ದುಷ್ಕರೋ ಭೂಮನ್ ಕಾಮಾನಾಂ ವಿಷಯಾತ್ಮಭಿಃ ।**
**ಸುತರಾಂ ತ್ವಯಿ ಸರ್ವಾತ್ಮನ್ ನ ಭಕ್ತೈರಿತಿ ಮೇ ಮತಿಃ ॥ 15 ॥**

15. ಎಲೈ ಭೂಮಸ್ವರೂಪನೆ, ವಿಷಯಲಂಪಟರಾದ, ನಿನ್ನಲ್ಲಿ ಸ್ವಲ್ಪವೂ ಭಕ್ತರಲ್ಲದ ಪ್ರಾಕೃತರಿಗೆ ಕಾಮಗಳನ್ನು ಬಿಡುವದೆಂಬ ಈ ತ್ಯಾಗವು ಕಷ್ಟಸಾಧ್ಯವೆಂದು ನನ್ನ ಭಾವನೆ.

**ಸೋಽಹಂ ಮಮಾಹಮಿತಿ ಮೂಢಮತಿರ್ವಿಗಾಢ**
**ಸ್ತ್ವನ್ಮಾಯಯಾ ವಿರಚಿತಾತ್ಮನಿ ಸಾನುಬನ್ಧೇ ।**
**ತತ್ತ್ವಞ್ಜಸಾ ನಿಗದಿತಂ ಭವತಾ ಯಥಾಽಹಂ**
**ಸಂಸಾಧಯಾಮಿ ಭಗವನ್ ಅನುಶಾಧಿ ಭೃತ್ಯಮ್ ॥ 16 ॥**

16. ಅಂಥ ಪ್ರಾಕೃತನಾದ ಮೂಢಬುದ್ಧಿಯಾದ, ನಿನ್ನ ಮಾಯೆಯಿಂದ ತೋರುತ್ತಿರುವ ಜಗತ್ತಿನಲ್ಲಿ ನಾನು ನನ್ನದೆಂಬ ಭ್ರಾಂತಿಯಿಂದ ಮುಳುಗಿರುವ, ಈ ಸೇವಕನಾದ ನನಗೆ ನೀನು ಹೇಳಿದ ಉಪದೇಶವನ್ನು ಹೇಗೆ ಸಾಧಿಸಬೇಕೆಂಬ ಬಗ್ಗೆ ಸ್ವಲ್ಪಸ್ವಲ್ಪವಾಗಿ ಅನುಶಾಸನಮಾಡುವವನಾಗು.

**ಸತ್ಯಸ್ಯ ತೇ ಸ್ವದೃಶ ಆತ್ಮನ ಆತ್ಮನೋಽನ್ಯಂ**
**ವಕ್ತಾರಮೀಶ ವಿಬುಧೇಷ್ವಪಿ ನಾನುಚಕ್ಷೇ ।**
**ಸರ್ವೇ ವಿಮೋಹಿತಧಿಯಸ್ತವ ಮಾಯಯೇಮೇ**
**ಬ್ರಹ್ಮಾದಯಸ್ತನುಭೃತೋ ಬಹಿರರ್ಥಭಾವಾಃ ॥ 17 ॥**

17. ಸ್ವಪ್ರಕಾಶಸ್ವರೂಪನೂ ಸತ್ಯನೂ ಆದ ನಿನ್ನನ್ನು ಬಿಟ್ಟು ದೇವತೆಗಳಲ್ಲಿಯೂ ನಾನು ಮತ್ತೊಬ್ಬ ವಕ್ತೃವನ್ನು ಕಾಣಲಾರೆನು. ಏಕೆಂದರೆ ದೇಹಧಾರಿಗಳಾದ ಆ ಬ್ರಹ್ಮಾದಿಗಳೂ ಬಾಹ್ಯಪದಾರ್ಥಗಳಲ್ಲಿಯೇ ಆಸಕ್ತರಾಗಿದ್ದು ನಿನ್ನ ಮಾಯೆಯಿಂದ ಮೋಹಿತವಾದ ಜ್ಞಾನವುಳ್ಳವರಾಗಿದ್ದಾರೆ.

**ತಸ್ಮಾದ್ಭವನ್ತಮನವದ್ಯಮನನ್ತಪಾರಂ**
**ಸರ್ವಜ್ಞಮೀಶ್ವರಮಕುಣ್ಠವಿಕುಣ್ಠಧಿಷ್ಣ್ಯಮ್ ।**
**ನಿರ್ವಿಣ್ಣಧೀರಹಮು ಹ ವೃಜಿನಾಭಿತಪ್ತೋ**
**ನಾರಾಯಣಂ ನರಸಖಂ ಶರಣಂ ಪ್ರಪದ್ಯೇ ॥ 18 ॥**

18. ಆದ್ದರಿಂದ ದೋಷರಹಿತನೂ ದೇಶಕಾಲಾಪರಿಚ್ಛಿನ್ನನೂ ಸರ್ವಜ್ಞನೂ ಈಶ್ವರನೂ ಪ್ರತಿಘಾತವಿಲ್ಲದ ನಾಶವಾಗದ ಸ್ಥಾನವುಳ್ಳವನೂ ನಾರಾಯಣನೂ ನರಸಖನೂ ಆದ ನಿನ್ನನ್ನು ಪಾಪಗಳಿಂದ ಬಹಳವಾಗಿ ನೊಂದಿರುವ ನಾನು ಶರಣಾಗತನಾಗಿರುತ್ತೇನೆ.

**ಶ್ರೀಭಗವಾನುವಾಚ –**
**ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।**
**ಸಮುದ್ಧರನ್ತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್ ॥ 19 ॥**

19. ಶ್ರೀಭಗವಂತನಿಂತೆಂದನು: ಲೋಕದ ಅಸಾರತೆಯನ್ನು ಬಲ್ಲ ಜಾಣರಾದ ಮನುಷ್ಯರು ಅಶುಭಗಳ ವಾಸನೆಯಿಂದ ತಮ್ಮನ್ನು ತಾವೇ ಪ್ರಾಯಶಃ ಉದ್ಧಾರಮಾಡಿಕೊಳ್ಳುವರು.

**ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ ।**
**ಯತ್ ಪ್ರತ್ಯಕ್ಷಾನುಮಾನಾಭ್ಯಾಂ ಶ್ರೇಯೋಽಸಾವನು ವಿನ್ದತೇ ॥ 20 ॥**

20. ಪ್ರತ್ಯಕ್ಷ ಹಾಗೂ ಅನುಮಾನಗಳಿಂದ ಕಂಡುಬಂದಿರುವಂತೆ ಪುರುಷನಿಗೆ ವಿಶೇಷವಾಗಿ ತನ್ನ ಆತ್ಮನೇ ತನಗೆ ಗುರುವು. ಏಕೆಂದರೆ ತನ್ನ ಸ್ವಪ್ರಯತ್ನದಿಂದಲೇ ತಾನು ಶ್ರೇಯಸ್ಸನ್ನು ಪಡೆಯುವವನಾಗುತ್ತಾನೆ.

**ಪುರುಷತ್ವೇ ಚ ಮಾಂ ಧೀರಾಃ ಸಾಙ್ಖ್ಯಯೋಗವಿಶಾರದಾಃ ।**
**ಆವಿಸ್ತರಾಂ ಪ್ರಪಶ್ಯನ್ತಿ ಸರ್ವಶಕ್ತ್ಯುಪಬೃಂಹಿತಮ್ ॥ 21 ॥**

21. ಜೀವರು ಮನುಷ್ಯಶರೀರವು ಬಂದಾಗ ಹೆಚ್ಚಿನ ವಿವೇಕಸಂಪನ್ನರಾಗಿ, ಧೀರರಾಗಿ, ಸಾಂಖ್ಯ, ಯೋಗ – ಮುಂತಾದ ಸಾಧನಗಳಲ್ಲಿ ನಿಪುಣರಾಗಿ ಎಲ್ಲಾ ಶಕ್ತಿಗಳಿಂದಲೂ ತುಂಬಿ ಹರಡಿಕೊಂಡಿರುವ ನನ್ನನ್ನು ಚೆನ್ನಾಗಿ ಕಾಣುವವರಾಗುತ್ತಾರೆ.

**ಏಕದ್ವಿತ್ರಿಚತುಷ್ಪಾದೋ ಬಹುಪಾದಸ್ತಥಾಪದಃ ।**
**ಬಹ್ವ್ಯಃ ಸನ್ತಿ ಪುರಃ ಸೃಷ್ಟಾಃ ತಾಸಾಂ ಮೇ ಪೌರುಷೀ ಪ್ರಿಯಾ ॥ 22 ॥**

22. ಒಂದು ಕಾಲಿನ ಹಾಗೂ ಎರಡು, ಮೂರು, ನಾಲ್ಕು ಕಾಲುಗಳ, ಅನೇಕ ಕಾಲುಗಳ, ಕಾಲುಗಳೇ ಇಲ್ಲದ ಎಷ್ಟೋ ಶರೀರಗಳು ಸೃಷ್ಟಿಯಲ್ಲಿ ಇದ್ದುಕೊಂಡಿವೆ. ಇವುಗಳಲ್ಲೆಲ್ಲ ನನಗೆ ಮನುಷ್ಯಶರೀರವೇ ತುಂಬ ಪ್ರಿಯವಾದುದು.

*****

## ಅವಧೂತೋಪದೇಶ

(ಹನ್ನೊಂದನೆಯ ಸ್ಕಂಧ, ಏಳನೆಯ ಅಧ್ಯಾಯ)

**ಬ್ರಾಹ್ಮಣ ಉವಾಚ –**
**ಸನ್ತಿ ಮೇ ಗುರವೋ ರಾಜನ್ ಬಹವೋ ಬುದ್ಧ್ಯುಪಾಶ್ರಿತಾಃ ।**
**ಯತೋ ಬುದ್ಧಿಮುಪಾದಾಯ ಮುಕ್ತೋಽಟಾಮೀಹ ತಾನ್ ಶೃಣು ॥ 32 ॥**

32. ಬ್ರಾಹ್ಮಣ(ಅವಧೂತ)ನಿಂತೆಂದನು: ಎಲೈ ಯದುರಾಜನೆ, ಕೇಳು, ತಿಳಿವಳಿಕೆಯನ್ನು ಪಡೆದುಕೊಂಡಿರುವ ಬಹಳ ಗುರುಗಳು ನನಗೆ ಇದ್ದಾರೆ. ಇವರುಗಳ ಬುದ್ಧಿಯನ್ನು ಸ್ವೀಕರಿಸಿ ನಾನು ವಿಮುಕ್ತನಾಗಿ ಸಂಚರಿಸುತ್ತಿರುವೆನು.

**ಪೃಥಿವೀ ವಾಯುರಾಕಾಶಮಾಪೋಽಗ್ನಿಶ್ಚನ್ದ್ರಮಾ ರವಿಃ ।**
**ಕಪೋತೋಽಜಗರಃ ಸಿನ್ಧುಃ ಪತಙ್ಗೋ ಮಧುಕೃತ್ ಗಜಃ ॥ 33 ॥**

**ಮಧುಹಾ ಹರಿಣೋ ಮೀನಃ ಪಿಙ್ಗಲಾ ಕುರರೋಽರ್ಭಕಃ ।**
**ಕುಮಾರೀ ಶರಕೃತ್ ಸರ್ಪ ಊರ್ಣನಾಭಿಃ ಸುಪೇಶಕೃತ್ ॥ 34 ॥**
**ಏತೇ ಮೇ ಗುರವೋ ರಾಜನ್ ಚತುರ್ವಿಂಶತಿರಾಶ್ರಿತಾಃ ।**

33–35. ಎಲೈ ರಾಜನೆ, ಭೂಮಿ, ಗಾಳಿ, ಆಕಾಶ, ನೀರು, ಬೆಂಕಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗದ ಹುಳು, ಜೇನುದುಂಬಿ, ಆನೆ, ಜೇನುತುಪ್ಪವನ್ನು ಅಪಹರಿಸುವವನು, ಜಿಂಕೆ, ಮೀನು, ಪಿಂಗಲಾ ಎಂಬ ವೇಶ್ಯೆ, ಹದ್ದು, ಚಿಕ್ಕಮಗು, ಹೆಣ್ಣುಹುಡುಗಿ, ಬಾಣಗಳನ್ನು ತಯಾರಿಸುವವನು, ಹಾವು, ಜೇಡರಹುಳು, ಚಿಟ್ಟೆಹುಳು – ಈ ರೀತಿ ಇಪ್ಪತ್ತನಾಲ್ಕು ಗುರುಗಳು ನನಗೆ ಇರುತ್ತಾರೆ.

**ಶಿಕ್ಷಾವೃತ್ತಿಭಿರೇತೇಷಾಮನ್ವಶಿಕ್ಷಮಿಹಾತ್ಮನಃ ॥ 35 ॥**

**ಯತೋ ಯದನುಶಿಕ್ಷಾಮಿ ಯಥಾ ವಾ ನಾಹುಷಾತ್ಮಜ ।**
**ತತ್ತಥಾ ಪುರುಷವ್ಯಾಘ್ರ ನಿಬೋಧ ಕಥಯಾಮಿ ತೇ ॥ 36 ॥**

35–36. ಎಲೈ ಯಯಾತಿಪುತ್ರನೆ, ಕೇಳು, ಇವರುಗಳ ವರ್ತನೆಯಿಂದ (ನಡೆವಳಿಕೆಯಿಂದ) ನನಗೆ ಅಗತ್ಯವಾದ, ಕಲಿಯಬೇಕಾದ ವಿಷಯಗಳನ್ನು ಕಲಿತುಕೊಂಡೆನು. ಯಾವದರಿಂದ ಹೇಗೆ ಏನನ್ನು ಕಲಿತುಕೊಂಡೆನೋ ಅದನ್ನು ಎಲೈ ಪುರುಷಶ್ರೇಷ್ಠನೆ, ಹೇಳುವೆನು, ಕೇಳುವವನಾಗು.

**ಭೂತೈರಾಕ್ರಮ್ಯಮಾಣೋಽಪಿ ಧೀರೋ ದೈವವಶಾನುಗೈಃ ।**
**ತದ್ವಿದ್ವಾನ್ನ ಚಲೇನ್ಮಾರ್ಗಾದನ್ವಶಿಕ್ಷಂ ಕ್ಷಿತೇರ್ವ್ರತಮ್ ॥ 37 ॥**

37. ದೈವಾಯತ್ತವಾಗಿ ಪ್ರಾಪ್ತವಾಗುವ ಪಂಚಭೂತಗಳ ವಿಕಾರಗಳಿಂದ ಸುತ್ತುವರಿಯಲ್ಪಟ್ಟಿದ್ದರೂ ಜ್ಞಾನಿಯಾದವನು ತನ್ನ ದಾರಿಯನ್ನು ಬಿಟ್ಟು ಅಳ್ಳಾಡಬಾರದು. ಈ ತಿಳಿವಳಿಕೆಯನ್ನು ಸ್ಥಿರಸ್ವಭಾವಳಾದ ಭೂದೇವಿಯ ನಡೆವಳಿಕೆಯಿಂದ ಕಲಿತೆನು.

**ಶಶ್ವತ್ ಪರಾರ್ಥಸರ್ವೇಹಃ ಪರಾರ್ಥೈಕಾನ್ತಸಂಭವಃ ।**
**ಸಾಧುಃ ಶಿಕ್ಷೇತ ಭೂಭೃತ್ತೋ ನಗಶಿಷ್ಯಃ ಪರಾತ್ಮತಾಮ್ ॥ 38 ॥**

38. ಪರ್ವತರೂಪವಾಗಿರುವ ಭೂಮಿಯಿಂದ ಎಲ್ಲಾ ಅರ್ಥಗಳನ್ನು (ಪ್ರಯೋಜನಗಳನ್ನೂ) ಮತ್ತೊಬ್ಬರಿಗಾಗಿಯೇ ನಿಯತವಾಗಿ ಬಯಸಬೇಕೆಂಬುದನ್ನೂ ವೃಕ್ಷರೂಪವಾಗಿರುವ ಪೃಥ್ವಿಯಿಂದ ಸಾಧುವು ಮತ್ತೊಬ್ಬರಿಗಾಗಿಯೇ ಬದುಕಿದ್ದು ಪರೋಪಕಾರ ಬುದ್ಧಿಯಿಂದಲೇ ವ್ಯವಹಾರಮಾಡಬೇಕೆಂಬುದನ್ನೂ

ಕಲಿತುಕೊಂಡೆನು.

**ಪ್ರಾಣವೃತ್ತ್ಯೈವ ಸನ್ತುಷ್ಯೇತ್ ಮುನಿರ್ನೈವೇನ್ದ್ರಿಯಪ್ರಿಯೈಃ ।**
**ಜ್ಞಾನಂ ಯಥಾ ನ ನಶ್ಯೇತ ನಾವಕೀರ್ಯೇತ ವಾಙ್ಮನಃ ॥ 39 ॥**

**ವಿಷಯೇಷ್ವಾವಿಶನ್ ಯೋಗೀ ನಾನಾಧರ್ಮೇಷು ಸರ್ವತಃ ।**
**ಗುಣದೋಷವ್ಯಪೇತಾತ್ಮಾ ನ ವಿಷಜ್ಜೇತ ವಾಯುವತ್ ॥ 40 ॥**

39–40. ಮುನಿಯಾದವನು ಕೇವಲ ಪ್ರಾಣಧಾರಣಮಾತ್ರದಿಂದ ತೃಪ್ತನಾಗಿರಬೇಕು. ಇಂದ್ರಿಯಗಳನ್ನು ಸಂತೋಷಗೊಳಿಸುವ ಭೋಗಗಳಿಗೆ ಆಶೆಪಡಬಾರದು. ಯೋಗಿಯು ಕಾಮಾದಿದೋಷಗಳಿಂದ ಜ್ಞಾನವು ಹಾಳಾಗದಂತೆ, ಮಾತುಮನಸ್ಸುಗಳು ಚದರಿಹೋಗದಂತೆ, ಎಲ್ಲೆಲ್ಲಿಯೂ ಎಲ್ಲಾ ವಿಷಯಧರ್ಮಗಳಲ್ಲಿಯೂ ವ್ಯವಹರಿಸುತ್ತಿದ್ದರೂ ಗುಣದೋಷಗಳಿಂದ ದೂರನಾಗಿದ್ದುಕೊಂಡು ವಾಯುವಿನಂತೆ ನಿರ್ಲಿಪ್ತನಾಗಿರಬೇಕು.

**ಪಾರ್ಥಿವೇಷ್ವಿಹ ದೇಹೇಷು ಪ್ರವಿಷ್ಟಸ್ತದ್ಗುಣಾಶ್ರಯಃ ।**
**ಗುಣೈರ್ನ ಯುಜ್ಯತೇ ಯೋಗೀ ಗನ್ಧೈರ್ವಾಯುರಿವಾತ್ಮದೃಕ್ ॥ 41 ॥**

41. ಗಾಳಿಯು ಗಂಧವೇ ಮೊದಲಾದ ಗುಣಗಳಿಂದ ಕೂಡಿರುವಂತೆ ತೋರಿದರೂ ನಿಜವಾಗಿ ಯಾವ ಗುಣಗಳ ಸಂಬಂಧವೂ ಇಲ್ಲದ್ದಾಗಿರುವದೋ ಅದರಂತೆ ಆತ್ಮದರ್ಶಿಯಾದ ಯೋಗಿಯೂ ಪಾರ್ಥಿವಶರೀರಗಳಲ್ಲಿ ಪ್ರವಿಷ್ಟನಾಗಿದ್ದರೂ ಅವುಗಳ ಗುಣಗಳಿಂದ ಅಂಟಿಕೊಳ್ಳದೆ ಇರುವವನಾಗಿರಬೇಕು.

**ಅನ್ತರ್ಹಿತಶ್ಚ ಸ್ಥಿರಜಙ್ಗಮೇಷು**
**ಬ್ರಹ್ಮಾತ್ಮಭಾವೇನ ಸಮನ್ವಯೇನ ।**
**ವ್ಯಾಪ್ತ್ಯಾಽವ್ಯವಚ್ಛೇದಮಸಙ್ಗಮಾತ್ಮನೋ**
**ಮುನಿರ್ನಭಸ್ತ್ವಂ ವಿತತಸ್ಯ ಭಾವಯೇತ್ ॥ 42 ॥**

42. ಸ್ಥಾವರಜಂಗಮಪ್ರಾಣಿಗಳಲ್ಲಿ ಒಳಗಿದ್ದುಕೊಂಡು ಬ್ರಹ್ಮಾತ್ಮಭಾವದಿಂದ ಎಲ್ಲೆಲ್ಲಿಯೂ ಪರಿಚ್ಛೇದವಿಲ್ಲದೆ ವ್ಯಾಪಿಸಿಕೊಂಡಿದ್ದರೂ ತಾನು ಅಸಂಗನಾಗಿರುವೆನು ಎಂದು ಮುನಿಯು ಆಕಾಶದಂತೆ ತನ್ನ ಸ್ವರೂಪವನ್ನು ಭಾವಿಸಬೇಕು.

**ತೇಜೋಽಬನ್ನಮಯೈರ್ಭಾವೈರ್ಮೇಘಾದ್ಯೈರ್ವಾಯುನೇರಿತೈಃ ।**
**ನ ಸ್ಪೃಶ್ಯತೇ ನಭಸ್ತದ್ವತ್ ಕಾಲಸೃಷ್ಟೈರ್ಗುಣೈಃ ಪುಮಾನ್ ॥ 43 ॥**

43. ತೇಜಸ್ಸು, ಅಪ್ಪು, ಅನ್ನ – ಇವುಗಳ ವಿಕಾರಗಳಾದ ಗಾಳಿಯಿಂದ ಪ್ರೇರಿತವಾದ ಮೋಡವೇ ಮುಂತಾದ ಪದಾರ್ಥಗಳಿಂದ ತುಂಬಿರುತ್ತಿದ್ದರೂ ಆಕಾಶವು ಹೇಗೆ ಆ ವಸ್ತುಗಳ ಸಂಪರ್ಕವಿಲ್ಲದ್ದಾಗಿರುವದೋ ಹಾಗೆ ಪುರುಷನು ಕಾಲದಿಂದುಂಟಾದ ಗುಣಗಳ ಸಂಪರ್ಕವಿಲ್ಲದವನಾಗಿರಬೇಕು.

**ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಾಧುರ್ಯಸ್ತೀರ್ಥಭೂ ನೃಣಾಮ್ ।**
**ಮುನಿಃ ಪುನಾತ್ಯಪಾಂ ಮಿತ್ರಮೀಕ್ಷೋಪಸ್ಪರ್ಶಕೀರ್ತನೈಃ ॥ 44 ॥**

44. ಸ್ವಭಾವದಿಂದಲೇ ತಿಳಿಯಾಗಿಯೂ, ಅಂಟಾಗಿಯೂ, ಮಧುರವಾಗಿಯೂ, ಪವಿತ್ರವಾಗಿಯೂ ಇರುವ ನೀರಿನಂತೆ (ತತ್ತ್ವವನ್ನು ಬಲ್ಲ) ಮುನಿಯು ತನ್ನನ್ನು ಬಳಿಸಾರುವ ಮಿತ್ರನನ್ನು ದರ್ಶನ, ಸ್ಪರ್ಶನ, ಸಂಭಾಷಣ ಗಳಿಂದ ನೀರು ಹೇಗೆ ತನ್ನ ಬಳಿಗೆ ಬಂದವರನ್ನು ನೋಟ, ಮುಟ್ಟುವಿಕೆ, ಕೀರ್ತನೆಗಳಿಂದ ಪವಿತ್ರಗೊಳಿಸುವದೋ ಹಾಗೆ ಪವಿತ್ರಗೊಳಿಸುವನು. (ಎಂದರೆ ಈ ಗುಣಗಳನ್ನು ನೀರಿನ ದೃಷ್ಟಾಂತದಿಂದ ಕಲಿತುಕೊಂಡೆನು ಎಂದರ್ಥ).

**ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋದರಭಾಜನಃ ।**
**ಸರ್ವಭಕ್ಷೋಽಪಿ ಯುಕ್ತಾತ್ಮಾ ನಾದತ್ತೇ ಮಲಮಗ್ನಿವತ್ ॥ 45 ॥**

**ಕ್ವಚಿಚ್ಛನ್ನ ಕ್ವಚಿತ್ ಸ್ಪಷ್ಟ ಉಪಾಸ್ಯಃ ಶ್ರೇಯ ಇಚ್ಛತಾಮ್ ।**
**ಭುಙ್ಕ್ತೇ ಸರ್ವತ್ರ ದಾತೄಣಾಂ ದಹನ್ ಪ್ರಾಗುತ್ತರಾ ಶುಭಮ್ ॥ 46 ॥**

**ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ ।**
**ಪ್ರವಿಷ್ಟ ಈಯತೇ ತತ್ತತ್ ಸ್ವರೂಪೋಽಗ್ನಿರಿವೈಧಸಿ ॥ 47 ॥**

45–47. ಅಗ್ನಿಯು ಹೇಗೆ ಸರ್ವಭಕ್ಷಕನಾಗಿದ್ದರೂ ಪಾಪವನ್ನು ಸ್ವೀಕರಿಸುವದಿಲ್ಲವೋ, ಹಾಗೆ ತೇಜಸ್ವಿಯೂ ತಪೋಗ್ನಿಯಿಂದ ಕಾಂತಿಯುಕ್ತನೂ ಮತ್ತೊಬ್ಬರಿಂದ ಹಿಮ್ಮೆಟ್ಟಿಸಲಸಾಧ್ಯನೂ ಹೊಟ್ಟೆಯನ್ನೇ ಪಾತ್ರೆಯಾಗುಳ್ಳವನೂ ಆಗಿ ಮುನಿಯಾದವನು ಪಾಪರಹಿತನಾಗಿರಬೇಕು. ಕೆಲವುಬಾರಿ ಮರೆಯಾಗಿಯೂ ಕೆಲವುಬಾರಿ ಪ್ರತ್ಯಕ್ಷವಾಗಿಯೂ ಶ್ರೇಯಸ್ಸನ್ನು ಬಯಸುವವರಿಂದ ಉಪಾಸ್ಯನಾಗಿಯೂ

ಮತ್ತೊಬ್ಬರ ಇಚ್ಛೆಯಿಂದಲೇ ತಿನ್ನುವವನಾಗಿಯೂ ಸೇವಿಸಿದವರ ಹಿಂದಿನ ಮತ್ತು ಮುಂದಿನ ಪಾಪಗಳನ್ನು ಪರಿಹರಿಸುವವನಾಗಿಯೂ (ಅಗ್ನಿಯಂತೆ) ಇದ್ದುಕೊಂಡಿರುವ ಮುನಿಯು ತನ್ನ ಮಾಯೆಯಿಂದಲೇ ಸೃಷ್ಟವಾಗಿರುವ ಸದಸದ್ರೂಪವಾದ ಈ ಪ್ರಪಂಚವನ್ನು ಒಳಹೊಕ್ಕು ಶ್ರೇಷ್ಠತ್ವವನ್ನು ಹೊಂದುವನು. (ಎಂದರೆ ಈ ಗುಣಗಳನ್ನು ಅಗ್ನಿಯಿಂದ ಕಲಿತುಕೊಂಡೆನು ಎಂದರ್ಥ).

**ವಿಸರ್ಗಾದ್ಯಾಃ ಶ್ಮಶಾನಾನ್ತಾಃ ಭಾವಾ ದೇಹಸ್ಯ ನಾತ್ಮನಃ ।**
**ಕಲಾನಾಮಿವ ಚನ್ದ್ರಸ್ಯ ಕಾಲೇನಾವ್ಯಕ್ತವರ್ತ್ಮನಾ ॥ 48 ॥**

48. ಚಂದ್ರನ ಕಲೆಗಳಿಗೆ ಹೇಗೆ ಉತ್ಪತ್ತಿವೃದ್ಧಿಕ್ಷಯಾದಿಗಳು ಕಾಲಾನುಗುಣವಾಗಿ ಉಂಟಾಗುತ್ತವೆಯೋ, ಇದರಿಂದ ಚಂದ್ರನ ಸ್ವರೂಪಕ್ಕೆ ಹೇಗೆ ವಿಕಾರಗಳಿಲ್ಲವೋ ಹಾಗೆ ಉತ್ಪತ್ತಿಯಿಂದ ವಿನಾಶದವರೆಗಿನ ವಿಕಾರಗಳೆಲ್ಲವೂ ಕಾಲವಶವಾಗಿರುವ ದೇಹಕ್ಕೆ ಹೊರತು ಆತ್ಮನಿಗಿರುವದಿಲ್ಲ. (ಈ ಪಾಠವನ್ನು ಚಂದ್ರನಿಂದ ಕಲಿತೆನು).

**ಕಾಲೇನ ಹ್ಯೋಘವೇಗೇನ ಭೂತಾನಾಂ ಪ್ರಭವಾಪ್ಯಯೌ ।**
**ನಿತ್ಯಾವಪಿ ನ ದೃಶ್ಯೇತೇ ಆತ್ಮನೋಽಗ್ನೇರ್ಯಥಾರ್ಚಿಷಾಮ್ ॥ 49 ॥**

49. ಅಗ್ನಿಯಲ್ಲಿ ನಿತ್ಯವಾಗಿಯೇ ಇರುವ ಜ್ವಾಲೆಗಳು ಹೇಗೆ ಎಲ್ಲಾ ಕಾಲದಲ್ಲೂ ಕಾಣುವದಿಲ್ಲವೋ ಹಾಗೆ ದೇಹಾದಿಗಳ ಉತ್ಪತ್ತಿವಿನಾಶಗಳು ಆತ್ಮನಿಗೆ ಆಗುತ್ತಲೇ ಇದ್ದರೂ ಪ್ರವಾಹದಂತಿರುವ ಕಾಲದಲ್ಲಿ ಅವ್ಯಕ್ತವಾಗಿದ್ದು ಕೊಂಡು ಕಾಣದೆ ಇವೆ.

**ಗುಣೈರ್ಗುಣಾನುಪಾದತ್ತೇ ಯಥಾಕಾಲಂ ವಿಮುಞ್ಚತಿ ।**
**ನ ತೇಷು ಯುಜ್ಯತೇ ಯೋಗೀ ಗೋಭಿರ್ಗಾ ಇವ ಗೋಪತಿಃ ॥ 50 ॥**

50. ಸೂರ್ಯನು ಹೇಗೆ ತನ್ನ ಕಿರಣಗಳಿಂದ ನೀರನ್ನು ಸ್ವೀಕರಿಸಿ ಯೋಗ್ಯಕಾಲದಲ್ಲಿ ಪರ್ಜನ್ಯರೂಪದಿಂದ ಬಿಡುತ್ತಾನೋ ಹಾಗೆ ಯೋಗಿಯು ಇಂದ್ರಿಯಗಳಿಂದ ವಿಷಯಗಳನ್ನು ಸ್ವೀಕರಿಸಿ ಸಮಯಾನುಗುಣವಾಗಿ ಬಿಡುತ್ತಿದ್ದರೂ ಅವುಗಳಲ್ಲಿ ಸಕ್ತನಾಗಿರುವದಿಲ್ಲ.

**ಬುಧ್ಯತೇ ಸ್ವೇನ ಭೇದೇನ ವ್ಯಕ್ತಿಸ್ಥ ಇವ ತದ್ಗತಃ ।**
**ಲಕ್ಷ್ಯತೇ ಸ್ಥೂಲಮತಿಭಿರಾತ್ಮಾ ಚಾವಸ್ಥಿತೋಽರ್ಕವತ್ ॥ 51 ॥**

51. ಸೂರ್ಯನು ಪ್ರತಿಬಿಂಬಿತನಾಗಿರುವದನ್ನು ನೋಡಿ ಮೂಢಮತಿಗಳು ಹೇಗೆ ಅನೇಕ ಸೂರ್ಯರಿದ್ದಾರೆಂದು ಭ್ರಮಿಸಿ ವ್ಯವಹರಿಸುವರೋ ಹಾಗೆ ಆತ್ಮನೂ ಮಂದಬುದ್ಧಿಯವರಿಗೆ ಒಂದೊಂದು ವಸ್ತುವಿನಲ್ಲೂ ಒಬ್ಬೊಬ್ಬನಿರುವಂತೆ ಬಹುವಾಗಿ ತೋರುತ್ತಿರುವನು.

**ನಾತಿಸ್ನೇಹಃ ಪ್ರಸಙ್ಗೋ ವಾ ಕರ್ತವ್ಯಃ ಕ್ವಾಪಿ ಕೇನಚಿತ್ ।**
**ಕುರ್ವನ್ ವಿನ್ದೇತ ಸನ್ತಾಪಂ ಕಪೋತ ಇವ ದೀನಧೀಃ ॥ 52 ॥**

52. ಯಾವನೊಡನೆಯೂ ಎಂದೆಂದಿಗೂ ಅತಿಯಾದ ಪ್ರೀತಿಯನ್ನಾಗಲಿ ಸಂಬಂಧವನ್ನಾಗಲಿ ಮಾಡಬಾರದು. ಹಾಗೆ ಮಾಡಿದರೆ ಕಪೋತ (ಪಾರಿವಾಳ) ದಂತೆ ದೈನ್ಯದಿಂದ ಕೂಡಿದವನಾಗಿ ದುಃಖವನ್ನು ಹೊಂದುವನು. (ಮುನಿಯಾದವನು ಯಾರೊಡನೆಯೂ ಅತಿಸ್ನೇಹಮಾಡ ಬಾರದೆಂಬುದನ್ನು ಕಪೋತದಿಂದ ಕಲಿತೆನು).

******

# ಅವಧೂತೋಪದೇಶ

**(ಹನ್ನೊಂದನೆಯ ಸ್ಕಂಧ, ಎಂಟನೆಯ ಅಧ್ಯಾಯ)**

**ಬ್ರಾಹ್ಮಣ ಉವಾಚ –**
**ಸುಖಮೈನ್ದ್ರಿಯಕಂ ರಾಜನ್ ಸ್ವರ್ಗೇ ನರಕ ಏವ ಚ ।**
**ದೇಹಿನಾಂ ಯದ್ಯಥಾ ದುಃಖಂ ತಸ್ಮಾನ್ನೇಚ್ಛೇತ ತದ್ಬುಧಃ ॥ 1 ॥**

1. ಅವಧೂತನಿಂತೆಂದನು: ಎಲೈ ರಾಜನೆ, ಶರೀರಗಳಿಗೆ ಸ್ವರ್ಗದಲ್ಲಾಗಲಿ, ನರಕದಲ್ಲಾಗಲಿ ವಿಷಯೇಂದ್ರಿಯಗಳ ಸಂಯೋಗವಿಯೋಗಗಳಿಂದ ಸುಖದುಃಖಗಳು ಅವಶ್ಯವಾಗಿ ಆಗಿಯೇತೀರುವವು. ಬೇಡವೆಂದರೂ ಹೇಗೆ ದುಃಖವು ಉಂಟಾಗಿಯೇತೀರುವದೋ ಹಾಗೆಯೇ ಸುಖವೂ ತಾನಾಗಿಯೇ ಆಗುವದು. ಆದ್ದರಿಂದ ಜಾಣನು ಸುಖದ ಪ್ರಾಪ್ತಿಗಾಗಿ ಬಯಸುತ್ತಾ ಕಾಲಹರಣಮಾಡಬಾರದು.

**ಗ್ರಾಸಂ ಸಮೃಷ್ಟಂ ವಿರಸಂ ಮಹಾನ್ತಂ ಸ್ತೋಕಮೇವ ವಾ ।**
**ಯದೃಚ್ಛಯೈವಾಪತಿತಂ ಗ್ರಸೇದಜಗರೋಽಕ್ರಿಯಃ ॥ 2 ॥**

2. ಪರಿಪಕ್ವವಾದ ಅಥವಾ ನೀರಸವಾದ ಬಹಳವಾದ ಅಥವಾ ಸ್ವಲ್ಪವೇ ಆಗಿರುವ ತಾನಾಗಿಯೇ ಬಂದೊದಗಿದ ಆಹಾರವನ್ನು ಹೆಬ್ಬಾವು ಹೇಗೆ ತಿನ್ನುವದೋ ಹಾಗೆ ಜ್ಞಾನಿಯಾದವನು ಯದೃಚ್ಛಾಲಾಭಸಂತುಷ್ಟನಾಗಿ ಜೀವನಯಾತ್ರೆಯನ್ನು ನಿರ್ವಹಿಸಬೇಕು.

**ಶಯೀತಾಹಾನಿ ಭೂರೀಣಿ ನಿರಾಹಾರೋಽನುಪಕ್ರಮಃ ।**
**ಯದಿ ನೋಪನಮೇದ್ ಗ್ರಾಸೋ ಮಹಾಹಿರಿವ ದಿಷ್ಟಭುಕ್ ॥ 3 ॥**

3. ಒಂದು ವೇಳೆ ಆಹಾರವೇನೂ ದೊರಕದೆ ಇದ್ದರೆ ಯಾವ ಪ್ರಯತ್ನವನ್ನೂ ಮಾಡದೆ ನಿರಾಹಾರನಾಗಿಯೇ ದೈವವೇ ಒದಗಿಸುವದೆಂಬ ಧೈರ್ಯವುಳ್ಳವನಾಗಿ ಎಷ್ಟುದಿನಗಳಾದರೂ ಹೆಬ್ಬಾವಿನಂತೆಯೇ ಮಲಗಿರಬೇಕು – ಎಂದರೆ ಪ್ರವೃತ್ತಿರಹಿತನಾಗಿರಬೇಕು.

**ಓಜಃ ಸಹೋಬಲಯುತಂ ಬಿಭ್ರದ್ದೇಹಮಕರ್ಮಕಮ್ ।**
**ಶಯಾನೋ ವೀತನಿದ್ರಶ್ಚ ನೇಹೇತೇನ್ದ್ರಿಯವಾನಪಿ ॥ 4 ॥**

4. ಇಂದ್ರಿಯಮನೋಬಲಗಳಿಂದ ಕೂಡಿದ ಈ ಶರೀರವನ್ನು ಯಾವ ಕರ್ಮವೂ ಇಲ್ಲದೆ ಧರಿಸಿಕೊಂಡಿರುತ್ತಾ ನಿದ್ರಾರಹಿತನಾಗಿ ಇಂದ್ರಿಯವ್ಯಾಪಾರಗಳನ್ನೂ ಸಹ ಬಯಸದೆ ಕರ್ಮರಹಿತನಾಗಿರಬೇಕು.

**ಮುನಿಃ ಪ್ರಸನ್ನಗಮ್ಭೀರಃ ದುರ್ವಿಗಾಹ್ಯೋ ದುರತ್ಯಯಃ ।**
**ಅನನ್ತಪಾರೋ ಹ್ಯಕ್ಷೋಭ್ಯಃ ಸ್ತಿಮಿತೋದ ಇವಾರ್ಣವಃ ॥ 5 ॥**

5. ಮುನಿಯಾದವನು ಪ್ರಶಾಂತವಾದ ಸಮುದ್ರದಂತೆ ಪ್ರಸನ್ನನಾಗಿಯೂ ಗಂಭೀರನಾಗಿಯೂ ಮತ್ತೊಬ್ಬರಿಂದ ಅರಿಯಲಸಾಧ್ಯವಾಗಿಯೂ ಅನತಿಕ್ರಮಣೀಯನಾಗಿಯೂ ಕಾಲದೇಶಗಳಿಂದ ಅಪರಿಚ್ಛೇದ್ಯನಾಗಿಯೂ ವಿಕಾರರಹಿತನಾಗಿಯೂ ನಿಶ್ಚಲನಾಗಿಯೂ ಇರಬೇಕು.

**ಸಮೃದ್ಧಕಾಮೋ ಹೀನೋ ವಾ ನಾರಾಯಣಪರೋ ಮುನಿಃ ।**
**ನೋತ್ಸರ್ಪೇತ ನ ಶುಷ್ಯೇತ ಸರಿದ್ಭಿರಿವ ಸಾಗರಃ ॥ 6 ॥**

6. ನಾರಾಯಣನಲ್ಲಿಯೇ ಚಿತ್ತವನ್ನಿಟ್ಟಿರುವ ಮನನಶೀಲನಾದ ಯತಿಯು ತಾನು ಕಾಮಗಳಿಂದ ತುಂಬಿದವನಾಗಿರಲಿ, ದರಿದ್ರನಾಗಿರಲಿ – ಸಮುದ್ರವು

ಹೇಗೆ ನದಿಗಳ ಪ್ರವಾಹದಿಂದ ಹಿಗ್ಗುವದಾಗಲಿ ಪ್ರವಾಹವಿಲ್ಲದ್ದರಿಂದ ಕುಗ್ಗುವದಾಗಲಿ ಆಗಲಾರದೋ ಹಾಗೆ – ಹಿಗ್ಗದೆ ಕುಗ್ಗದೆ ಇರುವನು.

**ದೃಷ್ಟ್ವಾ ಸ್ತ್ರಿಯಂ ದೇವಮಾಯಾಂ ತದ್ಭಾವೈರಜಿತೇನ್ದ್ರಿಯಃ ।**
**ಪ್ರಲೋಭಿತಃ ಪತತ್ಯನ್ಧೇ ತಮಸ್ಯಗ್ನೌ ಪತಙ್ಗವತ್ ॥ 7 ॥**

7. ದೇವಮಾಯೆಯಾದ ಹೆಂಗಸನ್ನು ಕಂಡು ಆಕೆಯ ರೂಪ, ನಡೆನುಡಿಗಳಿಂದ ಇಂದ್ರಿಯಗ್ರಹರಹಿತನಾಗಿ ವಂಚಿಸಲ್ಪಟ್ಟು ಪತಂಗದಹುಳುವು ಬೆಂಕಿಯ ರೂಪಕ್ಕೆ ಮರುಳಾಗಿ ಬಿದ್ದು ಸಾಯುವಂತೆ ಪ್ರಾಕೃತನಾದವನು ಕಗ್ಗತ್ತಲೆಯ ಸಂಸಾರದಲ್ಲಿ ಬೀಳುವನು.

**ಯೋಷಿದ್ಧಿರಣ್ಯಾಭರಣಾಮ್ಬರಾದಿ–**
**ದ್ರವ್ಯೇಷು ಮಾಯಾರಚಿತೇಷು ಮೂಢಃ ।**
**ಪ್ರಲೋಭಿತಾತ್ಮಾ ಹ್ಯುಪಭೋಗಬುದ್ಧ್ಯಾ**
**ಪತಙ್ಗವನ್ನಶ್ಯತಿ ನಷ್ಟದೃಷ್ಟಿಃ ॥ 8 ॥**

8. ಸ್ತ್ರೀಯರು, ಹಣ, ಒಡವೆಗಳು, ವಸ್ತ್ರಗಳು – ಮುಂತಾದ ಮಾಯಾರಚಿತವಾದ ವಸ್ತುಗಳಲ್ಲಿ ಮೂಢನಾಗಿ ಅವುಗಳಿಂದ ಸೆಳೆಯಲ್ಪಟ್ಟವನಾಗಿ ಭೋಗಾಶೆಯಿಂದ ವಿವೇಕದೃಷ್ಟಿಯನ್ನು ಕಳೆದುಕೊಂಡು ಪತಂಗದಂತೆ ಹಾಳಾಗುವನು.

**ಸ್ತೋಕಂ ಸ್ತೋಕಂ ಗ್ರಸೇದ್ ಗ್ರಾಸಂ ದೇಹೋ ವರ್ತೇತ ಯಾವತಾ ।**
**ಗೃಹಾನಹಿಂಸನ್ನಾತಿಷ್ಠೇದ್ ವೃತ್ತಿಂ ಮಾಧುಕರೀಂ ಮುನಿಃ ॥ 9 ॥**

9. ಶರೀರಧಾರಣೆಗೆ ಅವಶ್ಯವಾದಷ್ಟು ಭಿಕ್ಷೆಯನ್ನು ಎಲ್ಲಿಯೂ ನಿಲ್ಲದೆ, ಗೃಹಸ್ಥರನ್ನು ಹಿಂಸೆ ಮಾಡದೆ, ಸ್ವಲ್ಪಸ್ವಲ್ಪವೇ ಸ್ವೀಕರಿಸುತ್ತಾ ದುಂಬಿಯ ಹುಳುವು ಹೂವುಗಳನ್ನು ನೋಯಿಸದೆ ರಸವನ್ನು ಸ್ವೀಕರಿಸುವಂತೆ ಮುನಿಯು ಆಹಾರವನ್ನು ಸಂಗ್ರಹಿಸಿ ಊಟಮಾಡಬೇಕು.

**ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ ।**
**ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥ 10 ॥**

10. ಸೂಕ್ಷ್ಮವಾಗಿರುವ ಮತ್ತು ಮಹತ್ತಾಗಿರುವ ಎಲ್ಲಾ ಶಾಸ್ತ್ರಗಳಿಂದಲೂ

ಜಾಣನಾದ ಮನುಷ್ಯನು ದುಂಬಿಯು ಹೂಗಳಿಂದ (ರಸವನ್ನು ತೆಗೆದುಕೊಳ್ಳುವಂತೆ) ಸಾರವಾದ ವಿಷಯಗಳನ್ನು ಗ್ರಹಿಸಬೇಕು.

**ಸಾಯನ್ತನಂ ಶ್ವಸ್ತನಂ ವಾ ನ ಸಙ್ಗೃಹ್ಣೀತ ಭಿಕ್ಷಿತಮ್ ।**
**ಪಾಣಿಪಾತ್ರೋದರಾಮತ್ರೋ ಮಕ್ಷಿಕೇವ ನ ಸಙ್ಗ್ರಹೀ ॥ 11 ॥**

11. ಯತಿಯು ಸಂಜೆಗೆ ಅಥವಾ ನಾಳೆಗೆ – ಎಂದು ಭಿಕ್ಷೆಯನ್ನು ಕೂಡಿಹಾಕಬಾರದು. ಕೈಯೇ ಪಾತ್ರೆಯಾಗಿಯೋ ಅಥವಾ ಹೊಟ್ಟೆಯೇ ಪಾತ್ರೆಯಾಗಿಯೋ ಇರುವವನಾಗಿ (ಹೊಟ್ಟೆತುಂಬುವಷ್ಟು ಮಾತ್ರ) ಸ್ವೀಕರಿಸಬೇಕು. ಜೇನುಹುಳದಂತೆ ಕೂಡಿಡುವವನಾಗಬಾರದು.

**ಸಾಯನ್ತನಂ ಶ್ವಸ್ತನಂ ವಾ ನ ಸಙ್ಗೃಹ್ಣೀತ ಭಿಕ್ಷುಕಃ ।**
**ಮಕ್ಷಿಕಾ ಇವ ಸಙ್ಗೃಹ್ಣನ್ ಸಹ ತೇನ ವಿನಶ್ಯತಿ ॥ 12 ॥**

12. ಸಂಜೆಗಾಗಲಿ ನಾಳೆಗಾಗಲಿ ಇರಲಿ – ಎಂದು ಭಿಕ್ಷುವು ಎಂದೂ ಸಂಗ್ರಹ ಮಾಡಬಾರದು. ಹಾಗೆ ಕೂಡಿಟ್ಟರೆ ಜೇನುಹುಳುವಿನಂತೆ ಆ ಕೂಡಿಟ್ಟಿದ್ದರೊಡನೆಯೇ ನಾಶವಾಗುವನು.

**ಪದಾಪಿ ಯುವತೀಂ ಭಿಕ್ಷುರ್ನ ಸ್ಪೃಶೇದ್ ದಾರವೀಮಪಿ ।**
**ಸ್ಪೃಶನ್ ಕರೀವ ಬಧ್ಯೇತ ಕರಿಣ್ಯಾ ಅಙ್ಗಸಙ್ಗತಃ ॥ 13 ॥**

13. ಯತಿಯಾದವನು ಮರದಿಂದ ಮಾಡಿದ ಹೆಂಗಸನ್ನು (ಬೊಂಬೆಯನ್ನೂ) ಸಹ ಕಾಲಿನಿಂದಕೂಡ ಮುಟ್ಟಬಾರದು. ಹಾಗೇನಾದರೂ ಮುಟ್ಟಿದರೆ ಹೆಣ್ಣಾನೆಯ ಶರೀರ ಸ್ಪರ್ಶದಿಂದ ಕಟ್ಟಿಹಾಕಲ್ಪಡುವ ಆನೆಯಂತೆ ಸಂಸಾರಬಂಧಕ್ಕೊಳಗಾಗುವನು.

**ನಾಧಿಗಚ್ಛೇತ್ ಸ್ತ್ರಿಯಂ ಪ್ರಾಜ್ಞಃ ಕರ್ಹಿಚಿತ್ ಮೃತ್ಯುಮಾತ್ಮನಃ ।**
**ಬಲಾಧಿಕೈಃ ಸ ಹನ್ಯೇತ ಗಜೈರನ್ಯೈರ್ಗಜೋ ಯಥಾ ॥ 14 ॥**

14. ಬುದ್ಧಿವಂತನಾದವನು ಯಾವಾಗಲೂ ತನ್ನ ಶ್ರೇಯಸ್ಸಿಗೆ ಮೃತ್ಯುವಿನಂತಿರುವ ಸ್ತ್ರೀಯನ್ನು ಉಪಭೋಗಮಾಡಬಾರದು. ಹಾಗೆ ಬೆರೆಯುವವನಾದರೆ ಹೆಣ್ಣಾನೆಗಳೊಡನೆ ಸೇರಿದ ಆನೆಯಂತೆ ಹಾಳಾಗುವನು.

**ನ ದೇಯಂ ನೋಪಭೋಗ್ಯಂ ಚ ಲುಬ್ಧೈರ್ಯದ್ದುಃಖಸಞ್ಚಿತಮ್ ।**
**ಭುಙ್ಕ್ತೇ ತದಪಿ ತಚ್ಚಾನ್ಯೋ ಮಧುಹೇವಾರ್ಥವಿನ್ಮಧು ॥ 15 ॥**

15. ಜಿಪುಣರಾದವರು ಕಷ್ಟದಿಂದ ಕೂಡಿಹಾಕಿದ ಧನವು ದಾನಕ್ಕಾಗಲಿ, ಭೋಗಕ್ಕಾಗಲಿ ಆಗಲಾರದು. ಬೇರೊಬ್ಬನು ಅದನ್ನು ಅನುಭವಿಸುವನು. ಆದ್ದರಿಂದ ಜ್ಞಾನನಾದವನು ಜೇನುಬೇಟೆಯಾಡುವವನಂತೆ ವಸ್ತುಗಳನ್ನು ಯುಕ್ತಿಯಿಂದ ಸಂಪಾದಿಸಿ ಅನುಭವಿಸಬೇಕು.

**ಸುದುಃಖೋಪಾರ್ಜಿತೈರ್ವಿತ್ತೈರಾಶಾಸಾನಾಂ ಗೃಹಾಶಿಷಃ ।**
**ಮಧುಹೇವಾಗ್ರತೋ ಭುಙ್ಕ್ತೇ ಯತಿರ್ವೈಗೃಹಮೇಧಿನಾಮ್ ॥ 16 ॥**

16. ಬಹಳ ಕಷ್ಟದಿಂದ ಸಂಪಾದಿಸಿದ ಗೃಹವೇ ಮುಂತಾದ ಕಾಮಗಳನ್ನು ಬಯಸುವ ಗೃಹಸ್ಥರ ಸುಖವನ್ನು ಮಧುಹರನಂತೆ (ಜೇನನ್ನು ಸಂಗ್ರಹಿಸುವವನಂತೆ) ಯತಿಯು ಮುಂದಾಗಿಯೇ ಅನುಭವಿಸುವನು. (ಗೃಹಸ್ಥನು ಸಿದ್ಧಗೊಳಿಸಿದ ಭೋಜನವನ್ನು ಯತಿಯು ಮೊದಲು ಊಟಮಾಡುತ್ತಾನೆ – ಎಂದರ್ಥ).

**ಗ್ರಾಮ್ಯಗೀತಂ ನ ಶೃಣುಯಾತ್ ಯತಿರ್ವನಚರಃ ಕ್ವಚಿತ್ ।**
**ಶಿಕ್ಷೇತ ಹರಿಣಾದ್ ಬದ್ಧಾತ್ ಮೃಗಯೋರ್ಗೀತಮೋಹಿತಾದ್ ॥ 17 ॥**

17. ಕಾಡಿನಲ್ಲಿ ಸಂಚರಿಸುವ ಯತಿಯು ಯಾವಾಗಲೂ ಗ್ರಾಮ್ಯವಾದ ಸಂಗೀತವನ್ನು ಕೇಳಬಾರದು. ಹಾಗೆ ಕೇಳಿದರೆ ಬೇಟೆಗಾರನ ಗೀತದಿಂದ ಆಕರ್ಷಿಸಲ್ಪಟ್ಟ ಜಿಂಕೆಯಂತೆ ಪರವಶನಾಗಿ ದುಃಖಿಯಾಗುವನು.

**ನೃತ್ಯವಾದಿತ್ರಗೀತಾನಿ ಜುಷನ್ ಗ್ರಾಮ್ಯಾಣಿ ಯೋಷಿತಾಮ್ ।**
**ಆಸಾಂ ಕ್ರೀಡನಕೋ ವಶ್ಯ ಋಷ್ಯಶೃಙ್ಗೋ ಮೃಗೀಸುತಃ ॥ 18 ॥**

18. ಸ್ತ್ರೀಯರ ಕುಣಿತ, ವಾದ್ಯಧ್ವನಿ, ಸಂಗೀತ – ಮೊದಲಾದ ಗ್ರಾಮ್ಯವಿಷಯಗಳನ್ನು ಸೇವಿಸುವದರಿಂದ ಮೃಗೀಪುತ್ರನಾದ ಋಷ್ಯಶೃಂಗನು ಪರವಶನಾದಂತೆ ಸಾಧಕನು ಅವರುಗಳ ಆಟದ ಗೊಂಬೆಯಾಗಿಬಿಡುತ್ತಾನೆ, ಎಂದರೆ ಮಾರ್ಗಭ್ರಷ್ಟನಾಗಿ ಹಾಳಾಗುತ್ತಾನೆ.

**ಜಿಹ್ವಯಾತಿಪ್ರಮಾಥಿನ್ಯಾ ಜನೋ ರಸವಿಮೋಹಿತಃ ।**
**ಮೃತ್ಯುಮೃಚ್ಛತ್ಯಸದ್ಬುದ್ಧಿಃ ಮೀನಸ್ತು ಬಡಿಶೈರ್ಯಥಾ ॥ 19 ॥**

19. ದಡ್ಡನಾದ ಮನುಷ್ಯನು ಬಹಳವಾಗಿ ಸಂಕಟಗೊಳಿಸುವ ನಾಲಗೆಯ ರುಚಿಗೆ ಮನಸೋತವನಾಗಿ ಮೀನು ಗಾಳಕ್ಕೆ ಸಿಕ್ಕಿ ಸಾಯುವಂತೆ ಮೃತ್ಯುವಶನಾಗುವನು.

**ಇನ್ದ್ರಿಯಾಣಿ ಜಯನ್ತ್ಯಾತು ನಿರಾಹಾರಾ ಮುನೀಷಿಣಃ ।**
**ವರ್ಜಯಿತ್ವಾ ತು ರಸನಂ ತನ್ನಿರನ್ನಸ್ಯ ವರ್ಧತೇ ॥ 20 ॥**

20. ಜಾಣರಾದವರು ಆಹಾರವನ್ನು ತ್ಯಜಿಸಿ ನಾಲಗೆಯೊಂದನ್ನು ಬಿಟ್ಟು ಉಳಿದ ಇಂದ್ರಿಯಗಳನ್ನೆಲ್ಲ ಜಯಿಸುವರು. ಆದರೆ ನಿರನ್ನನಾದವನಿಗೆ (ನಾಲಗೆಯ ಚಾಪಲ್ಯವಾದರೋ) ಹೆಚ್ಚಾಗಿಯೇ ಇರುತ್ತದೆ.

**ತಾವಜ್ಜಿತೇನ್ದ್ರಿಯೋ ನ ಸ್ಯಾತ್ ವಿಜಿತಾನ್ಯೇನ್ದ್ರಿಯಃ ಪುಮಾನ್ ।**
**ನ ಜಯೇದ್ ರಸನಂ ಯಾವತ್ ಜಿತಂ ಸರ್ವಂ ಜಿತೇ ರಸೇ ॥ 21 ॥**

21. ಮನುಷ್ಯನು ಎಲ್ಲಿಯವರೆಗೆ ನಾಲಗೆಯನ್ನು ಜಯಿಸಿರುವದಿ ಲ್ಲವೋ ಅಲ್ಲಿಯವರೆಗೂ ಉಳಿದ ಇಂದ್ರಿಯಗಳನ್ನು ಗೆದ್ದಿದ್ದರೂ ಜಿತೇಂದ್ರಿಯ ನೆನಿಸಿಕೊಳ್ಳಲಾರನು. ಏಕಂದರೆ ರಸವನ್ನು (ನಾಲಗೆಯನ್ನು) ಗೆದ್ದರೆ ಎಲ್ಲವನ್ನೂ ಗೆದ್ದಂತೆಯೇ.

**ಪಿಙ್ಗಲಾ ನಾಮ ವೇಶ್ಯಾಽಽಸೀದ್ ವಿದೇಹನಗರೇ ಪುರಾ ।**
**ತಸ್ಯಾ ಮೇ ಶಿಕ್ಷಿತಂ ಕಿಞ್ಚಿತ್ ನಿಬೋಧ ನೃಪಸತ್ತಮ ॥ 22 ॥**

22. ಎಲೈ ರಾಜನೆ, ಹಿಂದೆ ವಿದೇಹನಗರಿಯಲ್ಲಿ ಪಿಂಗಳೆ ಎಂಬ ವೇಶ್ಯೆಯಿದ್ದಳು. ಆಕೆಯಿಂದ ನಾನು ಕಲಿತ (ನೈರಾಸ್ಯವೆಂಬ) ಪಾಠವನ್ನು ಕೇಳು.

**ಪಿಙ್ಗಲೋವಾಚ –**
**ಅಹೋ ಮೇ ಮೋಹವಿತತಿಂ ಪಶ್ಯತಾವಿಜಿತಾತ್ಮನಃ ।**
**ಯಾ ಕಾನ್ತಾದಸತಃ ಕಾಮಂ ಕಾಮಯೇ ಯೇನ ಬಾಲಿಶಾ ॥ 30 ॥**

30. ಪಿಂಗಳೆಯು ಹೇಳಿದಳೇಂದರೆ: ಅಯ್ಯೋ, ಇಂದ್ರಿಯನಿಗ್ರಹರಹಿತ ಳಾದ ನನ್ನ ಅಜ್ಞಾನವನ್ನು ಏನು ಹೇಳಲಿ? ತುಚ್ಛರಾದ ಮನುಷ್ಯರುಗಳಿಂದ ನನ್ನ ವಿತ್ತಾಶೆಯನ್ನು ಪೂರೈಸಿಕೊಳ್ಳಲು ಹವಣಿಸಿದೆನಲ್ಲ! ಇದು ನನ್ನ ಮೂರ್ಖತನವೇ ಸರಿ.

**ಸನ್ತಂ ಸಮೀಪೇ ರಮಣಂ ರತಿಪ್ರದಂ**
**ವಿತ್ತಪ್ರದಂ ನಿತ್ಯಮಿಮಂ ವಿಹಾಯ ।**
**ಅಕಾಮದಂ ದುಃಖಭಯಾಧಿಶೋಕ–**
**ಮೋಹಪ್ರದಂ ತುಚ್ಛಮಹಂ ಭಜೇಽಜ್ಞಾ॥ 31 ॥**

31. ಸಮೀಪದಲ್ಲಿಯೇ ಇದ್ದುಕೊಂಡು ಆನಂದವನ್ನೂ ಐಶ್ವರ್ಯವನ್ನೂ ಕೊಡುತ್ತಿರುವ ನಿತ್ಯನಾದ ಈ ಪತಿಯನ್ನು (ನನ್ನ ಆತ್ಮನೇ ಆಗಿರುವ ಪರಿಪೂರ್ಣಕಾಮನಾದ ಭಗವಂತನನ್ನು) ಬಿಟ್ಟು, ಅಜ್ಞಳಾದ ನಾನು ಇಷ್ಟಾರ್ಥಗಳನ್ನು ಕೊಡದೆ ಇರುವ ದುಃಖ, ಭಯ, ಶೋಕ, ಮೋಹ – ಇವುಗಳನ್ನುಂಟುಮಾಡುವ ಅಲ್ಪನಾದವನನ್ನು ನಾನು ಸೇವಿಸಲು ಬಯಸಿದೆನು.

**ಅಹೋ ಮಯಾತ್ಮ ಪರಿತಾಪಿತೋ ವೃಥಾ**
**ಸಾಙ್ಕೇತ್ಯವೃತ್ತ್ಯಾಽತಿವಿಗರ್ಹ್ಯವಾರ್ತಯಾ ।**
**ಸ್ತ್ರೈಣಾನ್ನರಾದ್ಯಾರ್ಥತೃಷೋಽನುಶೋಚ್ಯಾ**
**ಕ್ರೀತೇನ ವಿತ್ತಂ ರತಿಮಾತ್ಮನೇಚ್ಛತೀ ॥ 32 ॥**

32. ಅಯ್ಯೋ, ನಾನು ಅತ್ಯಂತಹೇಯವಾದ ಈ ವೇಶ್ಯಾವೃತ್ತಿಯಿಂದ, ಸ್ತ್ರೀಲಂಪಟನಾದ ಮನುಷ್ಯನ ನಿಮಿತ್ತದಿಂದ ರತಿಯನ್ನೂ ವಿತ್ತವನ್ನೂ ಬಯಸಿದವಳಾಗಿ ಹಣದ ಮೇಲಿನ ಆಶೆಯಿಂದ ಅನುಶೋಚ್ಯಳಾಗಿ ನನ್ನ ಆತ್ಮನನ್ನು ಬಹಳ ಸಂಕಟಗೊಳಿಸಿದೆನಲ್ಲ!

**ಯದಸ್ಥಿಭಿರ್ನಿರ್ಮಿತವಂಶವಂಶ್ಯ**
**ಸ್ಥೂಣಂ ತ್ವಚಾ ರೋಮನಖೈಃ ಪಿನದ್ಧಮ್ ।**
**ಕ್ಷರನ್ನವದ್ವಾರಮಗಾರಮೇತದ್**
**ವಿಣ್ಮೂತ್ರಪೂರ್ಣಂ ಮದುಪೈತಿ ಕಾಽನ್ಯಾ ॥ 33 ॥**

33. ಯಾವ (ಪುರುಷ) ಶರೀರವು ಮೂಳೆಗಳಿಂದ ನಿರ್ಮಿತವಾದ ಕಂಬವಾಗಿದ್ದು ಚರ್ಮ, ಕೂದಲು ಉಗುರುಗಳಿಂದ ಮುಚ್ಚಲ್ಪಟ್ಟು, ಸೋರುತ್ತಿರುವ ಒಂಭತ್ತು ಬಾಗಿಲುಗಳುಳ್ಳದ್ದಾಗಿ ಮಲಮೂತ್ರಗಳಿಂದ ಕೂಡಿದ ಹೇಯವಾದ ಮನೆಯಂತಿರುವದೋ (ಇಂಥ ದೇಹವನ್ನು) ನನ್ನ ಹೊರತು ಮತ್ತೆ ಯಾವಳುತಾನೆ ಆಶೆಪಟ್ಟಾಳು?

**ವಿದೇಹಾನಾಂ ಪುರೇ ಹ್ಯಸ್ಮಿನ್ ಅಹಮೇಕೈವ ಮೂಢಧೀಃ ।**
**ಯಾಽನ್ಯಮಿಚ್ಛನ್ತ್ಯಸತ್ಯಸ್ಮಾದಾತ್ಮದಾತ್ ಕಾಮಮಚ್ಯುತಾತ್ ॥ 34 ॥**

34. ಈ ವಿದೇಹನಗರಿಯಲ್ಲಿ ದಡ್ಡಳಾದ ನಾನೊಬ್ಬಳು ಹೊರತು ಬೇರೆ ಯಾವಳೂ ಅಚ್ಯುತನನ್ನು ಹೊರತಾಗಿ ಉಳಿದ ಅಸತ್ತಾದ ಕಾಮಭೋಗಗಳನ್ನು ಬಯಸುವವಳು ಇರಲಾರಳು.

**ಸುಹೃತ್ ಪ್ರೇಷ್ಠತಮೋ ನಾಥ ಆತ್ಮಾ ಚಾಯಂ ಶರೀರಿಣಾಮ್ ।**
**ತಂ ವಿಕ್ರೀಯಾತ್ಮನೈವಾಹಂ ರೇಮೇಽನೇನ ಯಥಾ ರಮಾ ॥ 35 ॥**

35. (ಈ ಅಚ್ಯುತನು) ಶರೀರಿಗಳೆಲ್ಲರಿಗೂ ಸ್ನೇಹಿತನೂ ಪ್ರಿಯತಮನೂ ಯಜಮಾನನೂ ಆತ್ಮನೂ ಆಗಿದ್ದಾನೆ. ಲಕ್ಷ್ಮೀದೇವಿಯು ಹೇಗೋ ಹಾಗೆ ನಾನೂ ನನ್ನನ್ನೇ ಅರ್ಪಿಸಿಕೊಳ್ಳುವದರ ಮೂಲಕ ಇವನನ್ನು ಕೊಂಡುಕೊಂಡು ಆನಂದವನ್ನು ಹೊಂದುವೆನು.

**ಕಿಯತ್ ಪ್ರಿಯಂ ತೇ ವ್ಯಭಜನ್ ಕಾಮಾ ಯೇ ಕಾಮದಾ ನರಾಃ ।**
**ಆದ್ಯನ್ತವನ್ತೋ ಭಾರ್ಯಾಯಾ ದೇವಾ ವಾ ಕಾಲವಿದ್ರುತಾಃ ॥ 36 ॥**

36. ಮೊದಲುಕೊನೆಗಳುಳ್ಳ ಕಾಮಸುಖಗಳಾಗಲಿ, ಕಾಮಗಳನ್ನು ಕೊಡುವ ಮನುಷ್ಯರೇ ಆಗಲಿ, ಕಾಲವಶರಾಗಿರುವ ದೇವತೆಗಳೇ ಆಗಲಿ ಹೆಂಡತಿಗೆ ಏನುತಾನೆ ಪ್ರಿಯವನ್ನು ಉಂಟುಮಾಡಿಯಾರು? (ಎಂದರೆ ಯಾರನ್ನೂ ಸುಖಪ್ರದರೆಂದು ಹೇಳಲಾಗುವದಿಲ್ಲ).

**ನೂನಂ ಮೇ ಭಗವಾನ್ ಪ್ರೀತೋ ವಿಷ್ಣುಃ ಕೇನಾಪಿ ಕರ್ಮಣಾ ।**
**ನಿರ್ವೇದೋಽಯಂ ದುರಾಶಾಯಾ ಯನ್ಮೇ ಜಾತಃ ಸುಖಾವಹಃ ॥ 37 ॥**

37. ನನ್ನ ಯಾವದೋ ಸತ್ಕರ್ಮದಿಂದ ಪೂಜ್ಯನಾದ ಮಹಾವಿಷ್ಣುವು ಸುಪ್ರೀತನಾಗಿರಬೇಕು. ಏಕೆಂದರೆ ದುರಾಶೆಯಿಂದ ಕೂಡಿದ್ದ ನನಗೆ ಈ ಸುಖವನ್ನುಂಟುಮಾಡುವ ವೈರಾಗ್ಯವು (ಅವನ ಪ್ರಸಾದದಿಂದ) ಉಂಟಾಯಿತಲ್ಲ! (ನಾನೇ ಧನ್ಯಳು).

**ಮೈವಂ ಸ್ಯುರ್ಮನ್ದಭಾಗ್ಯಾಯಾಃ ಕ್ಲೇಶನಿರ್ವೇದಹೇತವಃ ।**
**ಯೇನಾನುಬನ್ಧಂ ನಿರ್ಹೃತ್ಯ ಪುರುಷಃ ಶಮಮೃಚ್ಛತಿ ॥ 38 ॥**

38. ನಾನು ಹತಭಾಗ್ಯಳಾಗಿದಿದ್ದಿದ್ದರೆ ಆನಂದವನ್ನು ಕೊಡುವ ಇಂಥ ವೈರಾಗ್ಯಕಾರಣಗಳು ಉಂಟಾಗುತ್ತಿರಲಿಲ್ಲ. ಏಕೆಂದರೆ ಮನುಷ್ಯನು ಇಂಥ ನಿರ್ವೇದಗಳಿಂದಲೇ ಗೃಹವೇ ಮುಂತಾದ ಬಂಧಗಳನ್ನು ಕಳಚಿಹಾಕಿ ಸುಖವನ್ನು ಹೊಂದುವನು.

**ತೇನೋಪಕೃತಮಾದಾಯ ಶಿರಸಾ ಗ್ರಾಮ್ಯಸಂಗತಾಃ ।**
**ತ್ಯಕ್ತ್ವಾ ದುರಾಶಾಃ ಶರಣಂ ವ್ರಜಾಮಿ ತಮಧೀಶ್ವರಮ್ ॥ 39 ॥**

39. ಆ (ಭಗವಂತನಿಂದ) ಪ್ರಾಪ್ತವಾಗಿರುವ ಈ ಉಪಕಾರವನ್ನು ಶಿರಸಾ ಸ್ವೀಕರಿಸಿ ಪ್ರಾಕೃತರ ಸಂಗದಿಂದ ಉಂಟಾಗಿದ್ದ ದುರಾಶೆಗಳನ್ನು ಬಿಟ್ಟು ಜಗದೀಶ್ವರನಾದ ಆತನನ್ನೇ ಶರಣುಹೋಗುವೆನು.

**ಸಂತುಷ್ಟಾ ಶ್ರದ್ದಧತ್ಯೇತತ್ ಯಥಾ ಲಾಭೇನ ಜೀವತೀ ।**
**ವಿಹರಾಮ್ಯಮುನೈವಾಹಮಾತ್ಮನಾ ರಮಣೇನ ವೈ ॥ 40 ॥**

40. ಈ ಉಪಕಾರದಿಂದ ತೃಪ್ತಳಾಗಿ ಬಂದಷ್ಟು ಧನದಿಂದಲೇ ಜೀವಿಸುತ್ತಾ ಈ ಆತ್ಮಸ್ವರೂಪನಾದ ರಮಣನೊಡನೆಯೇ ಶ್ರದ್ಧೆಯಿಂದ ಇನ್ನುಮುಂದೆ ವಿಹರಿಸುವೆನು.

**ಸಂಸಾರಕೂಪೇ ಪತಿತಂ ವಿಷಯೈರ್ಮುಷಿತೇಕ್ಷಣಮ್ ।**
**ಗ್ರಸ್ತಂ ಕಾಲಾಹಿನಾತ್ಮಾನಂ ಕೋಽನ್ಯಸ್ತ್ರಾತುಮಧೀಶ್ವರಃ ॥ 41 ॥**

41. ಸಂಸಾರವೆಂಬ ಭಾವಿಯಲ್ಲಿ ಬಿದ್ದಿರುವ ವಿಷಯಗಳಿಂದ ಅಪಹರಿಸಲ್ಪಟ್ಟ ವಿವೇಕದೃಷ್ಟಿಯುಳ್ಳ ಕಾಲಸರ್ಪದಿಂದ ನುಂಗಲ್ಪಟ್ಟಿರುವ (ಈ ಜಂತುವನ್ನು) ಆ ಭಗವಂತನಲ್ಲದೆ ಬೇರೆ ಯಾರುತಾನೆ ಕಾಪಾಡಿಯಾರು?

**ಆತ್ಮೈವ ಹ್ಯಾತ್ಮನೋ ಗೋಪ್ತಾ ನಿರ್ವಿದ್ಯೇತ ಯದಾಽಖಿಲಾತ್ ।**
**ಅಪ್ರಮತ್ತ ಇದಂ ಪಶ್ಯೇದ್ ಗ್ರಸ್ತಂ ಕಾಲಾಹಿನಾ ಜಗತ್ ॥ 42 ॥**

42. ಜಗತ್ತೆಲ್ಲವೂ ಕಾಲನೆಂಬ ಹೆಬ್ಬಾವಿನಿಂದ ನುಂಗಲ್ಪಟ್ಟಿರುವದನ್ನು ಅಪ್ರಮತ್ತನಾಗಿ ಅರಿತುಕೊಂಡು ಈ ಎಲ್ಲಾ ಪ್ರಾಪಂಚಿಕಸುಖಗಳಿಂದಲೂ ಮನುಷ್ಯರು ಯಾವಾಗ ವಿರಕ್ತನಾಗುವರೋ ಆಗ ಅವನು ತನ್ನನ್ನೇ ತಾನು ಕಾಪಾಡಿಕೊಳ್ಳುವನು.

**ಬ್ರಾಹ್ಮಣ ಉವಾಚ –**
**ಏವಂ ವ್ಯವಸಿತಮತಿಃ ದುರಾಶಾಂ ಕಾನ್ತತರ್ಷಜಾಮ್ ।**
**ಛಿತ್ವೋಪಶಮಮಾಸ್ಥಾಯ ಶಯ್ಯಾಮುಪವಿವೇಶ ಸಾ ॥ 43 ॥**

43. ಬ್ರಾಹ್ಮಣ(ಅವಧೂತ)ನಿಂತೆಂದನು: ಈ ರೀತಿಯಾಗಿ ನಿಶ್ಚಿತವಾದ ಬುದ್ಧಿಯುಳ್ಳ ಆಕೆಯು ಕಾಂತನ ಸಂಗವೆಂಬ ದುರಾಶೆಯ ಬಾಯಾರಿಕೆಯನ್ನು ಕಳೆದುಕೊಂಡು ಮನಶ್ಶಾಂತಿಯನ್ನು ಹೊಂದಿ ಹಾಸಿಗೆಯನ್ನು ಆಶ್ರಯಿಸಿದಳು.

**ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್ ।**
**ಯಥಾ ಸಂಛಿದ್ಯ ಕಾನ್ತಾಶಾಂ ಸುಖಂ ಸುಷ್ವಾಪ ಪಿಙ್ಗಲಾ ॥ 44 ॥**

44. ಪಿಂಗಳೆಯು ರಮಣನ ಆಶೆಯನ್ನು ಕಳೆದುಹಾಕಿ ಸುಖವಾಗಿ ಮಲಗಿದ್ದನ್ನು ನೋಡಿದರೆ ಆಶೇಯೇ ದುಃಖಕ್ಕೆ ಮೂಲವು, ವೈರಾಗ್ಯವೇ ಪರಮಸುಖವು – ಎಂಬುದು ಸಿದ್ಧವಾಗುವದು.

******

## ಅವಧೂತೋಪದೇಶ

(ಹನ್ನೊಂದನೆಯ ಸ್ಕಂಧ, ಒಂಬತ್ತನೆಯ ಅಧ್ಯಾಯ)

**ಬ್ರಾಹ್ಮಣ ಉವಾಚ –**
**ಪರಿಗ್ರಹೋ ಹಿ ದುಃಖಾಯ ಯದ್ಯತ್ ಪ್ರಿಯತಮಂ ನೃಣಾಮ್ ।**
**ಅನನ್ತಂ ಸುಖಮಾಪ್ನೋತಿ ತದ್ವಿದ್ವಾನ್ ಯಸ್ತ್ವಕಿಞ್ಚನಃ ॥ 1 ॥**

1. ಬ್ರಾಹ್ಮಣ(ಅವಧೂತ)ನಿಂತೆಂದನು: ಮನುಷ್ಯರಿಗೆ ಅತ್ಯಂತ ಇಷ್ಟವಾದ ಯಾವಯಾವ ವಸ್ತುಗಳಿರುವವೋ ಅವುಗಳ ಪರಿಗ್ರಹವು ದುಃಖಕ್ಕೇ ಮೂಲವು. ಇದನ್ನು ಬಲ್ಲ ಜಾಣನಾದ ಯಾವ ತ್ಯಾಗಿಯಿರುವನೋ ಅವನು ಹೆಚ್ಚಿನ ಸುಖವನ್ನು ಪಡೆಯುವನು.

**ಸಾಮಿಷಂ ಕುರರಂ ಜಘ್ನುರ್ಬಲಿನೋ ಯೇ ನಿರಾಮಿಷಾಃ ।**
**ತದಾಮಿಷಂ ಪರಿತ್ಯಜ್ಯ ಸ ಸುಖಂ ಸಮವಿನ್ದತ ॥ 2 ॥**

2. ಕೊಕ್ಕಿನಲ್ಲಿ ಮಾಂಸದ ತುಂಡಿಲ್ಲದ ಬಲಿಷ್ಠವಾದ ಹದ್ದುಗಳು ಮಾಂಸವನ್ನು

ಕಚ್ಚಿಕೊಂಡಿದ್ದ ಹದ್ದನ್ನು ಹಿಂಸೆಗೊಳಿಸಿದವು. ಆ ಮಾಂಸವನ್ನು ಬಿಸುಟು ಹದ್ದು ಸುಖವನ್ನು ಹೊಂದಿತು. [ತ್ಯಾಗದಿಂದಲೇ (ಅಪರಿಗ್ರಹದಿಂದಲೇ) ಅದು ಸುಖವನ್ನು ಪಡೆಯಿತು ಎಂದರ್ಥ.]

**ನ ಮೇ ಮಾನಾಪಮಾನೌ ಸ್ತೋ ನ ಚಿನ್ತಾ ಗೇಹಪುತ್ರಿಣಾಮ್ ।**
**ಆತ್ಮಕ್ರೀಡ ಆತ್ಮರತಿರ್ವಿಚರಾಮಿ ಹಿ ಬಾಲವತ್ ॥ 3 ॥**

3. ನನಗೆ ಮಾನಾಪಮಾನಗಳ ಯೋಚನೆಯಿಲ್ಲ. ಮನೆ, ಮಕ್ಕಳುಮರಿಗಳುಳ್ಳ ಗೃಹಸ್ಥರಿಗಿರುವಂತೆ ನನಗೆ ಯಾವ ಚಿಂತೆಯೂ ಇರುವದಿಲ್ಲ; ಬಾಲಕನಂತೆ ಇದ್ದುಕೊಂಡು ಆತ್ಮಕ್ರೀಡನೂ ಆತ್ಮರತಿಯೂ ಆಗಿ ಸಂಚರಿಸುತ್ತಿರುವೆನು.

**ದ್ವಾವೇವ ಚಿನ್ತಯಾ ಮುಕ್ತೌ ಪರಮಾನನ್ದ ಆಪ್ಲುತೌ ।**
**ಯೋ ವಿಮುಗ್ಧೋ ಜಡೋ ಬಾಲೋ ಯೋ ಗುಣೇಭ್ಯಃ ಪರಂಗತಃ ॥ 4 ॥**

4. ಪರಮಾನಂದದಲ್ಲಿ ಅದ್ದಲ್ಪಟ್ಟಿರುವ ಏನೂ ಅರಿಯದ ಹುಡುಗನೊಬ್ಬ, ಗುಣತ್ರಯಗಳನ್ನು ಮೀರಿರುವ ಜ್ಞಾನಿಯೊಬ್ಬ – ಇವರಿಬ್ಬರೇ ಚಿಂತೆಯಿಲ್ಲದವರಾಗಿರುತ್ತಾರೆ. (ಈ ಪಾಠವನ್ನು ಹುಡುಗನಿಂದ ಕಲಿತೆನು.)

**ಕ್ವಚಿತ್ ಕುಮಾರೀ ತ್ವಾತ್ಮಾನಂ ವೃಣಾನಾನ್ ಗೃಹಮಾಗತಾನ್ ।**
**ಸ್ವಯಂ ತಾನರ್ಹಯಾಮಾಸ ಕ್ವಾಪಿ ಯಾತೇಷು ಬನ್ಧುಷು ॥ 5 ॥**

5. ಒಬ್ಬ ಹೆಣ್ಣು ಹುಡುಗಿಯು ತನ್ನನ್ನು ವರಿಸಲು ಬಂದ ಅತಿಥಿಗಳನ್ನು, ಬಂಧುಗಳು ಎಲ್ಲೋ ಹೋಗಿದ್ದುದರಿಂದ ತಾನೇ ಉಪಚರಿಸಲಾರಂಭಿಸಿದಳು.

**ತೇಷಾಮಭ್ಯವಹಾರಾರ್ಥಂ ಶಾಲೀನ್ ರಹಸಿ ಪಾರ್ಥಿವ ।**
**ಅವಘ್ನನ್ತ್ಯಾಃ ಪ್ರಕೋಷ್ಠಸ್ಥಾಶ್ಚಕ್ರುಃ ಶಙ್ಖಾಃ ಸ್ವನಂ ಮಹತ್ ॥ 6 ॥**

6. ಎಲೈರಾಜನೆ, ಆ ಅತಿಥಿಗಳ ಸತ್ಕಾರಕ್ಕಾಗಿ ಗುಟ್ಟಾಗಿ ಭತ್ತವನ್ನು ಕುಟ್ಟುತ್ತಿದ್ದಾಗ ಆಕೆಯ ಮುಂಗೈಗಳಲ್ಲಿದ್ದ ಬಳೆಗಳು ಬಹಳ ಶಬ್ದಮಾಡಿದವು.

**ಸಾ ತಜ್ಜುಗುಪ್ಸಿತಂ ಮತ್ವಾ ಮಹತೀ ವ್ರೀಡಿತಾ ತತಃ ।**
**ಬಭಞ್ಜೈಕೈಕಶಃ ಶಙ್ಖಾನ್ ದ್ವೌ ದ್ವೌ ಪಾಣ್ಯೋರಶೇಷಯತ್ ॥ 7 ॥**

7. ಆಕೆಯು ಈ ಅಸಹ್ಯವಾದ ಶಬ್ದದಿಂದ ನಾಚಿಕೆಗೊಂಡವಳಾಗಿ

ಒಂದೊಂದಾಗಿ ಬಳೆಗಳನ್ನು ಒಡೆದುಹಾಕಿ ಎರಡು ಕೈಗಳಲ್ಲೂ ಎರಡೆರಡು (ಬಳೆಗಳನ್ನು) ಮಾತ್ರ ಉಳಿಸಿಕೊಂಡಳು.

**ಉಭಯೋರಪ್ಯಭೂದ್ ಘೋಷೋ ಹ್ಯವಘ್ನನ್ತ್ಯಾಃ ಸ್ಮ ಶಙ್ಖಯೋಃ ।**
**ತತ್ರಾಪ್ಯೇಕಂ ನಿರಭಿದದೇಕಸ್ಮಾನ್ನಾಭವದ್ ಧ್ವನಿಃ ॥ 8 ॥**

8. ಎರಡು ಬಳೆಗಳು ಉಳಿದುಕೊಂಡಾಗಲೂ ಆಕೆಯು ಕುಟ್ಟುತ್ತಿರುವಾಗ ಮತ್ತೆ ಶಬ್ದವಾಯಿತು. ಆಗ ಅವುಗಳಲ್ಲಿ ಒಂದನ್ನು ಮತ್ತೆ ಒಡೆದಳು. ಉಳಿದ ಒಂದು ಶಬ್ದಮಾಡಲಿಲ್ಲ.

**ಅನ್ವಶಿಕ್ಷಮಿಮಂ ತಸ್ಯಾ ಉಪದೇಶಮರಿನ್ದಮ ।**
**ಲೋಕಾನನುಚರನ್ನೇತಾನ್ ಲೋಕತತ್ತ್ವವಿವಿತ್ಸಯಾ ॥ 9 ॥**

9. ಎಲೈ ಶತ್ರುತಾಪನನೆ, ಲೋಕದ ತತ್ತ್ವವನ್ನು ತಿಳಿಯುವ ಇಚ್ಛೆಯಿಂದ ಭೂಮಿಯಲ್ಲಿ ಸಂಚರಿಸುವವನು ಹೇಗೆ ಇರಬೇಕೆಂಬ ವಿಷಯಕ್ಕೆ ಆಕೆಯಿಂದ ಈ ಉಪದೇಶವನ್ನು ಕಲಿತೆನು.

**ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ ।**
**ಏಕ ಏವ ಚರೇತ್ ತಸ್ಮಾತ್ ಕುಮಾರ್ಯಾ ಇವ ಕಙ್ಕಣಃ ॥ 10 ॥**

10. ಬಹಳ ಜನರ ನಡುವೆ ವಾಸಮಾಡುವದರಿಂದ ಜಗಳವೂ ಇಬ್ಬರೇ ಇರುವಲ್ಲಿ ಮಾತು(ಹರಟೆ)ಗಳೂ ಸಂಭವಿಸುತ್ತವೆ. ಆದ್ದರಿಂದ ಹುಡುಗಿಯ ಬಳೆಯಂತೆ ಒಬ್ಬನೇ ಏಕಾಕಿಯಾಗಿ ಸಂಚರಿಸಬೇಕು.

**ಮನ ಏಕತ್ರ ಸಂಯುಞ್ಜ್ಯಾಜ್ಜಿತಶ್ವಾಸೋ ಜಿತಾಸನಃ ।**
**ವೈರಾಗ್ಯಾಭ್ಯಾಸಯೋಗೇನ ಧ್ರಿಯಮಾಣಮತನ್ದ್ರಿತಃ ॥ 11 ॥**

11. ಆಸನವನ್ನೂ ಉಸಿರನ್ನೂ ಜಯಿಸಿದವನಾಗಿ ವೈರಾಗ್ಯದಿಂದಲೂ ಅಭ್ಯಾಸಯೋಗದಿಂದಲೂ ಕೂಡಿದವನಾಗಿ ಬೇಜಾರಿಲ್ಲದೆ, ನಿಗ್ರಹಿಸಲ್ಪಟ್ಟ ಮನಸ್ಸನ್ನು ಆತ್ಮನಲ್ಲಿ ಏಕಾಗ್ರವಾಗಿ ಮಾಡಿಕೊಳ್ಳಬೇಕು.

**ಯಸ್ಮಿನ್ ಮನೋ ಲಬ್ಧಪದಂ ಯದೇತತ್**
**ಶನೈಃ ಶನೈರ್ಮುಞ್ಚತಿ ಕರ್ಮರೇಣೂನ್ ।**

**ಸತ್ತ್ವೇನ ವೃದ್ಧೇನ ರಜಸ್ತಮಶ್ಚ**
**ವಿಧೂಯ ನಿರ್ವಾಣಮುಪೈತ್ಯನಿನ್ಧನಮ್ ॥ 12 ॥**

12. ಈ ಮನಸ್ಸು ಯಾವ (ಆತ್ಮಸ್ವರೂಪದಲ್ಲಿ) ನಿಶ್ಚಲವಾಗಿ ನೆಲೆನಿಲ್ಲುವದೋ ಆಗ ಮೆಲ್ಲಮೆಲ್ಲನೆ ಕರ್ಮಶೇಷಗಳನ್ನು ಬಿಟ್ಟು, ಅಭಿವೃದ್ಧಿಯಾದ ಸತ್ತ್ವಗುಣದಿಂದ ರಜಸ್ತಮೋಗುಣಗಳನ್ನು ಕೊಡವಿ ಕಟ್ಟಿಗೆಯನ್ನೆಲ್ಲ ಸುಟ್ಟ ಬೆಂಕಿಯಂತೆ ಶಾಂತವಾಗಿ ನಿರ್ವಾಣ(ಸುಖ)ವನ್ನು ಹೊಂದುವದು.

**ತದೈವಮಾತ್ಮನ್ಯವರುದ್ಧಚಿತ್ತೋ**
**ನ ವೇದ ಕಿಞ್ಚಿದ್ ಬಹಿರನ್ತರಂ ವಾ ।**
**ಯಥೇಷುಕಾರೋ ನೃಪತಿಂ ವ್ರಜನ್ತ–**
**ಮಿಷೌ ಗತಾತ್ಮಾ ನ ದದರ್ಶ ಪಾರ್ಶ್ವೇ ॥ 13 ॥**

13. ಹೀಗೆ ಮನಸ್ಸು ನಿಂತಾಗಲೇ ಆತ್ಮನಲ್ಲಿಯೇ ಕಟ್ಟಿಹಾಕಲ್ಪಟ್ಟ ಚಿತ್ತವುಳ್ಳ ಯೋಗಿಯು ತನಗಿಂತ ಬೇರೆಯಾಗಿ ಒಳಗಾಗಲಿ ಹೊರಗಾಗಲಿ ಏನನ್ನೂ ಅರಿಯದವನಾಗಿ, ಹೇಗೆ ಬಾಣಗಳನ್ನು ಹೂಡುವದರಲ್ಲಿಯೇ ಆಸಕ್ತನಾಗಿದ್ದ ಇಷುಕಾರನು ತನ್ನ ಮುಂದೆಯೇ ಹಾದುಹೋದ ರಾಜನನ್ನು ಕೂಡ ನೋಡಲಿಲ್ಲವೋ ಹಾಗೆ ತಾನೇತಾನಾಗಿರುವನು.

**ಏಕಚಾರ್ಯನಿಕೇತಃ ಸ್ಯಾದಪ್ರಮತ್ತೋ ಗುಹಾಶಯಃ ।**
**ಅಲಕ್ಷ್ಯಮಾಣ ಆಚಾರೈರ್ಮುನಿರೇಕೋಽಲ್ಪಭಾಷಣಃ ॥ 14 ॥**

14. ಮುನಿಯಾದವನು ತಾನೊಬ್ಬನೇ ಸಂಚರಿಸುತ್ತಾ ಗೃಹವಿಲ್ಲದವನಾಗಿ ಸದಾ ಎಚ್ಚರವುಳ್ಳವನಾಗಿ, ಗುಹೆಯಲ್ಲಿ ವಾಸಿಸುತ್ತಾ ತನ್ನ ನಡತೆಗಳನ್ನು ಹೊರತೋರಿಸಿಕೊಳ್ಳದೆ ಅಲ್ಪಭಾಷಣನಾಗಿ ಇರಬೇಕು.

**ಗೃಹಾರಮ್ಭೋ ಹಿ ದುಃಖಾಯ ವಿಫಲಶ್ಚಾಧ್ರುವಾತ್ಮನಃ ।**
**ಸರ್ಪಃ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ ॥ 15 ॥**

15. ನಶ್ವರವಾದ ಈ ದೇಹಕ್ಕಾಗಿ ಮನೆಯನ್ನು ಕಟ್ಟಲು ಉಪಕ್ರಮಿಸುವದು ದುಃಖಕ್ಕೆ ಮೂಲವು. ಹಾವು ಮತ್ತೊಬ್ಬರು ನಿರ್ಮಿಸಿದ (ಗೆದ್ದಲುಹುಳುಗಳು ರಚಿಸಿದ) ಹುತ್ತದಲ್ಲಿ ಪ್ರವೇಶಿಸಿ ಸುಖವಾಗಿ ವಾಸಮಾಡಿಕೊಂಡಿರುವದು.

**ಏಕೋ ನಾರಾಯಣೋ ದೇವಃ ಪೂರ್ವಸೃಷ್ಟಂ ಸ್ವಮಾಯಯಾ ।**
**ಸಂಹೃತ್ಯ ಕಾಲಕಲಯಾ ಕಲ್ಪಾನ್ತ ಇದಮೀಶ್ವರಃ ॥ 16 ॥**

**ಏಕ ಏವಾಽದ್ವಿತೀಯೋಽಭೂದಾತ್ಮಾಧಾರೋಽಖಿಲಾಶ್ರಯಃ ।**
**ಕಾಲೇನಾತ್ಮಾನುಭಾವೇನ ಸಾಮ್ಯಂ ನೀತಾಸು ಶಕ್ತಿಷು ।**
**ಸತ್ತ್ವಾದಿಷ್ವಾದಿಪುರುಷಃ ಪ್ರಧಾನಪುರುಷೇಶ್ವರಃ ॥ 17 ॥**

**ಪರಾವರಾಣಾಂ ಪರಮ ಆಸ್ತೇ ಕೈವಲ್ಯಸಂಜ್ಞಿತಃ ।**
**ಕೇವಲಾನುಭವಾನನ್ದಸನ್ದೋಹೋ ನಿರುಪಾಧಿಕಃ ॥ 18 ॥**

16–18. ಒಬ್ಬನೇ ಆಗಿರುವ ನಾರಾಯಣದೇವನು ತನ್ನ ಮಾಯೆಯಿಂದ ಹಿಂದೆ ಸೃಷ್ಟಿಸಲ್ಪಟ್ಟ (ಈ ಪ್ರಪಂಚವನ್ನು) ಕಲ್ಪಾಂತದಲ್ಲಿ ಕಾಲರೂಪದಿಂದ ಸಂಹರಿಸಿ ಆ ಈಶ್ವರನಾದ ತಾನೊಬ್ಬನೇ ಆದ ಸಕಲಕ್ಕೂ ಆಧಾರ್‌ನೂ ಆಶ್ರಯನೂ ಆದ, ಅದ್ವಿತೀಯನಾದ, ಆದಿಪುರುಷನೂ ಪ್ರಧಾನ ಪುರುಷರುಗಳಿಗೆ ಒಡೆಯನೂ ಆದ, ಕೈವಲ್ಯವೆಂಬ ಹೆಸರಿನವನಾದ, ಮೇಲು ಕೀಳೆನಿಸಿರುವ ದ್ವೈತಪ್ರಪಂಚವೆಲ್ಲಕ್ಕೂ ಪರಮನಾದ ತಾನು ಕೇವಲ ಅನುಭವ ರೂಪನೂ ಆನಂದ ರೂಪನೂ ನಿರುಪಾಧಿಕನೂ ಆಗಿ ಸತ್ತ್ವಾದಿಸಕಲ ಶಕ್ತಿಗಳನ್ನೂ ತನ್ನ ರೂಪದಲ್ಲಿಯೇ ಅಗಡಿಸಿಟ್ಟುಕೊಂಡವನಾಗಿರುತ್ತಾನೆ.

**ಕೇವಲಾತ್ಮಾನುಭಾವೇನ ಸ್ವಮಾಯಾಂ ತ್ರಿಗುಣಾತ್ಮಿಕಾಮ್ ।**
**ಸಂಕ್ಷೋಭಯನ್ ಸೃಜತ್ಯಾದೌ ತಯಾ ಸೂತ್ರಮರಿನ್ದಮ ॥ 19 ॥**

**ತಾಮಾಹುಸ್ತ್ರಿಗುಣವ್ಯಕ್ತಿಂ ಸೃಜನ್ತೀಂ ವಿಶ್ವತೋಮುಖಮ್ ।**
**ಯಸ್ಮಿನ್ ಪ್ರೋತಮಿದಂ ವಿಶ್ವಂ ಯೇನ ಸಂಸರತೇ ಪುಮಾನ್ ॥ 20 ॥**

19–20. ಎಲೈ ರಾಜನೆ, ಈ ನಾರಾಯಣನು ತನ್ನ ಆತ್ಮಸ್ವರೂಪನೇ ಆಗಿರುವ ತ್ರಿಗುಣಾತ್ಮಕವಾದ ಮಾಯೆಯನ್ನು ಕ್ಷೋಭಗೊಳಿಸಿ ಮೊದಲು ಸೃಷ್ಟಿಸುವನು. ಎಲ್ಲೆಲ್ಲಿಯೂ ಹರಡಿರುವ ಈ ಜಗತ್ತೆಲ್ಲವನ್ನೂ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ, ಮನುಷ್ಯನಿಗೆ ಬಂಧಕಾರಣವಾದ ಈ ಮಾಯೆಯನ್ನೇ ತ್ರಿಗುಣರೂಪವಾದ ವ್ಯಕ್ತಿಯೆನ್ನುವರು.

**ಯಥೋರ್ಣನಾಭಿರ್ಹೃದಯಾದೂರ್ಣಾಂ ಸಂತತ್ಯ ವಕ್ತ್ರತಃ ।**
**ತಯಾ ವಿಹೃತ್ಯ ಭೂಯಸ್ತಾನ್ ಗ್ರಸತ್ಯೇವಂ ಮಹೇಶ್ವರಃ ॥ 21 ॥**

21. ಜೇಡರಹುಳುವು ಹೇಗೆ ತನ್ನ ಶರೀರದಿಂದ ಬಲೆಯನ್ನು ಮುಖದ ಮೂಲಕ ಹರಡಿ ಅದರೊಡನೆ ವಿಹರಿಸಿ ಕೊನೆಯಲ್ಲಿ ನುಂಗುವದೋ ಹಾಗೆಯೇ ಈಶ್ವರನೂ ಈ ಜಗತ್ತನ್ನು ತನ್ನಲ್ಲೇ ಉಪಸಂಹಾರ ಮಾಡಿಕೊಳ್ಳುವನು.

**ಯತ್ರ ಯತ್ರ ಮನೋ ದೇಹೀ ಧಾರಯೇತ್ ಸಕಲಂ ಧಿಯಾ ।**
**ಸ್ನೇಹಾದ್ ದ್ವೇಷಾದ್ ಭಯಾದ್ವಾಪಿ ಯಾತಿ ತತ್ತತ್ಸರೂಪತಾಮ್ ॥ 22 ॥**

22. ಶರೀರಧಾರಿಯಾದವನು ತನ್ನ ಮನಸ್ಸನ್ನು ಸ್ನೇಹದಿಂದಲೋ, ದ್ವೇಷದಿಂದಲೋ, ಅಂಜಿಕೆಯಿಂದಲೋ, ಎಲ್ಲೆಲ್ಲಿ ಇಡುತ್ತಾನೆಯೋ ಆಯಾ ಪದಾರ್ಥದ ಸಾರೂಪ್ಯವನ್ನೇ ಹೊಂದುವನು.

**ಕೀಟಃ ಪೇಶಸ್ಕೃತೋ ಧ್ಯಾಯನ್ ಕುಡ್ಯಾಂ ತೇನ ಪ್ರವೇಶಿತಃ ।**
**ಯಾತಿ ತತ್ಸಾತ್ಮ್ಯತಾಂ ರಾಜನ್ ಪೂರ್ವರೂಪಮಸಂತ್ಯಜನ್ ॥ 23 ॥**

23. ಕ್ಷುದ್ರವಾದ ಒಂದು ಹುಳುವು ಕಣಜದಿಂದ ಹಿಡಿಯಲ್ಪಟ್ಟು ಅದರ ಗೂಡಿನಲ್ಲಿ ಕೂಡಿಹಾಕಲ್ಪಡಲು ಅದು ಭಯದಿಂದ ಕಣಜವನ್ನೇ ಚಿಂತಿಸುತ್ತಾ ತನ್ನ ಹಿಂದಿನ ರೂಪವನ್ನು ಬಿಡದೆ ತಾನೂ ಕಣಜದ ಸ್ವರೂಪವನ್ನೇ ಪಡೆಯಿತು.

**ಏವಂ ಗುರುಭ್ಯ ಏತೇಭ್ಯಃ ಏಷಾ ಮೇ ಶಿಕ್ಷಿತಾ ಮತಿಃ ।**
**ಸ್ವಾತ್ಮೋಪಶಿಕ್ಷಿತಾಂ ಬುದ್ಧಿಂ ಶೃಣು ಮೇ ವದತಃ ಪ್ರಭೋ ॥ 24 ॥**

24. ಎಲೈ ರಾಜನೆ, ಈ ರೀತಿಯಾಗಿ ನಾನು ಹಿಂದೆ ಹೇಳಿದ (ಇಪ್ಪತ್ತುನಾಲ್ಕು) ಗುರುಗಳಿಂದ ಬುದ್ಧಿಯನ್ನು ಕಲಿತುಕೊಂಡೆನು. ಇನ್ನು ನನ್ನ ದೇಹದಿಂದಲೇ ನಾನು ಅರಿತುಕೊಂಡಿರುವ ಉಪದೇಶವನ್ನು ಕೇಳು.

**ದೇಹೋ ಗುರುರ್ಮಮ ವಿರಕ್ತಿವಿವೇಕಹೇತುಃ**
**ಬಿಭ್ರತ್ ಸ್ಮ ಸತ್ತ್ವನಿಧನಂ ಸತತಾತ್ತ್ಯುದರ್ಕಮ್ ।**
**ತತ್ತ್ವಾನ್ಯನೇನ ವಿಮೃಶಾಮಿ ಯಥಾ ತಥಾಽಪಿ**
**ಪಾರಕ್ಯಮಿತ್ಯವಸಿತೋ ವಿಚರಾಮ್ಯಸಙ್ಗಃ ॥ 25 ॥**

25. ಉತ್ಪತ್ತಿವಿನಾಶಗಳನ್ನು ಹೊಂದಿರುವ, ಮುಂದೆ ದುಃಖಫಲವನ್ನೇ ಕೊಡುವಂಥ ಈ ನನ್ನ ದೇಹವು ವಿವೇಕವೈರಾಗ್ಯಗಳಿಗೆ ಕಾರಣವಾಗಿದೆ. ಈ

ದೇಹದಿಂದಲೇ ತತ್ತ್ವವಿಚಾರವನ್ನೇನೋ ಮಾಡುತ್ತೇನೆ. ಆದರೂ ಇದು ಮತ್ತೊಬ್ಬರ ಸ್ವತ್ತೆಂದು ಭಾವಿಸಿ ಅಸಂಗನಾಗಿ ಸಂಚರಿಸುತ್ತೇನೆ.

**ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್**
**ಪುಷ್ಣಾತಿ ಯತ್ಪ್ರಿಯಚಿಕೀರ್ಷಯಾ ವಿತನ್ವನ್ ।**
**ಸ್ವಾನ್ತೇ ಸಕೃಚ್ಛ್ರಮವರುದ್ಧಧನಃ ಸ ದೇಹಃ**
**ಸೃಷ್ಟ್ವಾಽಸ್ಯ ಬೀಜಮವಸೀದತಿ ವೃಕ್ಷಧರ್ಮಾ: ॥ 26 ॥**

26. ಯಾವ ದೇಹವನ್ನು ಸಂತೋಷಗೊಳಿಸಲು ಹೆಂಡತಿ, ಮಕ್ಕಳು, ಹಣ, ಪಶುಗಳು, ಸೇವಕರು, ಮನೆ, ಸ್ನೇಹಿತರು – ಮುಂತಾದವರುಗಳನ್ನು ಬೆಳಸುತ್ತಾನೆಯೋ ಮತ್ತು ಯಾವ ದೇಹಕ್ಕಾಗಿ ಆಯಾಸದಿಂದ ಧನವನ್ನು ಕೂಡಿಹಾಕುವರೋ ಆ ದೇಹವು ಮರದಂತೆ ಮುಂದಿನ ಹುಟ್ಟಿಗೆ ಒಂದು ಬೀಜವನ್ನು ಉಂಟುಮಾಡಿ ಆಯಸ್ಸಿನ ಕೊನೆಯಲ್ಲಿ ನಾಶವಾಗುವದು.

**ಜಿಹ್ವೈ ಕತೋಽಮುಮುಪಕರ್ಷತಿ ತರ್ಹಿ ತರ್ಷಾ**
**ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।**
**ಘ್ರಾಣೋಽನ್ಯತಶ್ಚಪಲದೃಕ್ ಕ್ವ ಚ ಕರ್ಮಶಕ್ತಿಃ**
**ಬ್ರಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನನ್ತಿ ॥ 27 ॥**

27. ಈ ದೇಹವನ್ನು ನಾಲಗೆಯು ರುಚಿಗಾಗಿ ಒಂದು ಕಡೆಗೆ, ಬಾಯಾರಿಕೆಯಾದಾಗ ಮತ್ತೊಂದು ಕಡೆಗೆ, ಉಪಸ್ಥೇನ್ದ್ರಿಯವು ಇನ್ನೊಂದು ಕಡೆಗೆ, ಹಾಗೆಯೇ ತ್ವಗಿಂದ್ರಿಯ, ಹೊಟ್ಟೆ, ಕಿವಿಗಳು – ಒಂದೊಂದು ಕಡೆಗೆ, ಮತ್ತು ಮೂಗು, ಚಂಚಲನೋಟವುಳ್ಳ ಕಣ್ಣುಗಳು – ಬೇರೊಂದೊಂದು ಕಡೆಗೆ, ವಾಗಾದಿಕರ್ಮೇಂದ್ರಿಯಗಳು ಬೇರೆಬೇರೆ ಕಡೆಗೆ – ಹೀಗೆ ಅನೇಕಸವತಿಯರನ್ನುಳ್ಳ ಯಜಮಾನನನ್ನು ಅವರುಗಳು ಹೇಗೋ ಹಾಗೆ ಜಗ್ಗಿ ಹಿಂಸಿಸುತ್ತವೆ.

**ಸೃಷ್ಟ್ವಾ ಪುರಾಣಿ ವಿವಿಧಾನ್ಯಜಯಾಽಽತ್ಮಶಕ್ತ್ಯಾ**
**ವೃಕ್ಷಾನ್ ಸರೀಸೃಪಪಶೂನ್ ಖಗದಂಶಮತ್ಸ್ಯಾನ್ ।**
**ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ**
**ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ॥ 28 ॥**

28. ದೇವನಾದ ಪರಮೇಶ್ವರನು ತನ್ನ ಆತ್ಮಶಕ್ತಿಯಾದ ಪ್ರಕೃತಿಯ

ದ್ವಾರದಿಂದ ನಾನಾವಿಧವಾದ ಮರಗಳು, ಹಾವುಗಳು, ಪಶುಗಳು, ಹಕ್ಕಿಗಳು, ಕ್ರಿಮಿಕೀಟಗಳು, ಮೀನುಗಳು – ಮುಂತಾದ ಶರೀರಗಳನ್ನು ಸೃಷ್ಟಿಸಿಯೂ ತೃಪ್ತನಾಗಲಿಲ್ಲ. ಅನಂತರ ಬ್ರಹ್ಮಸ್ವರೂಪವನ್ನು ಕಾಣುವ ಸಾಮರ್ಥ್ಯವುಳ್ಳ ಪುರುಷನನ್ನು ಉಂಟುಮಾಡಿ ಸಂತೋಷಗೊಂಡನು.

**ಲಬ್ಧ್ವಾ ಸುದುರ್ಲಭಮಿದಂ ಬಹು ಸಂಭವಾನ್ತೇ**
**ಮಾನುಷ್ಯಮರ್ಥದಮನಿತ್ಯಮಪೀಹ ಧೀರಃ ।**
**ತೂರ್ಣಂ ಯತೇತ ನ ಪತೇದನು ಮೃತ್ಯು ಯಾವತ್**
**ನಿಃಶ್ರೇಯಸಾಯ ವಿಷಯಃ ಖಲು ಸರ್ವತಃ ಸ್ಯಾತ್ ॥ 29 ॥**

29. ಅನೇಕ ಜನ್ಮಗಳ ಕೊನೆಯಲ್ಲಿ ಈ ಅನಿತ್ಯವಾದರೂ ಪುರುಷಾರ್ಥ ಯೋಗ್ಯವಾದ ಸುದುರ್ಲಭವಾದ ಈ ಮನುಷ್ಯಜನ್ಮವನ್ನು ಪಡೆದಾಗ ಧೀರ ನಾದವನು ಜಾಗ್ರತೆಯಾಗಿ ಮೃತ್ಯುವು ಒದಗುವದರೊಳಗಾಗಿ ಮೋಕ್ಷಕ್ಕೆ ಎಲ್ಲಾ ರೀತಿಯಿಂದಲೂ ಪ್ರಯತ್ನಿಸಬೇಕು.

*****

## ಇಹಾಮುತ್ರಭೋಗಗಳ ನಿರೂಪಣೆ

(ಹನ್ನೊಂದನೆಯ ಸ್ಕಂಧ, ಹತ್ತನೆಯ ಅಧ್ಯಾಯ)

**ಶ್ರೀಭಗವಾನುವಾಚ –**

**ಮಯೋದಿತೇಷ್ವವಹಿತಃ ಸ್ವಧರ್ಮೇಷು ಮದಾಶ್ರಯಃ ।**
**ವರ್ಣಾಶ್ರಮಕುಲಾಚಾರಮಕಾಮಾತ್ಮಾ ಸಮಾಚರೇತ್ ॥ 1 ॥**

1. ಭಗವಂತನಿಂತೆಂದನು: ನಾನು ಹೇಳಿದ ಉಪದೇಶಗಳಲ್ಲಿ ಸ್ಥಿರ ಬುದ್ಧಿಯುಳ್ಳವನಾಗಿ ನನ್ನನ್ನೇ ಆಶ್ರಯಿಸಿಕೊಂಡು ಸ್ವಧರ್ಮವನ್ನು ಆಚರಿಸುತ್ತಾ ವರ್ಣಾಶ್ರಮಕುಲಾಚಾರಗಳನ್ನು ಕಾಮರಹಿತನಾಗಿ ನಡೆಸುತ್ತಿರಬೇಕು.

**ಅನ್ವೀಕ್ಷೇತ ವಿಶುದ್ಧಾತ್ಮಾ ದೇಹಿನಾಂ ವಿಷಯಾತ್ಮನಾಮ್ ।**
**ಗುಣೇಷು ತತ್ತ್ವಧ್ಯಾನೇನ ಸರ್ವಾರಮ್ಭವಿಪರ್ಯಯಮ್ ॥ 2 ॥**

2. (ಧರ್ಮಾಚರಣೆಯಿಂದ) ಶುದ್ಧಚಿತ್ತನಾಗಿ ವಿಷಯಲಂಪಟರಾದ ದೇಹಿಗಳಾದವರ ಕರ್ಮಗಳಿಗೆ ವಿಪರೀತಫಲಗಳಾಗುವದನ್ನು ಕಂಡು ಗುಣಗಳಲ್ಲಿ

ವಿರಕ್ತನಾಗಿ ತತ್ತ್ವಚಿಂತನೆಯಿಂದ ಸ್ವಸ್ಥನಾಗಿರಬೇಕು.

**ಸುಪ್ತಸ್ಯ ವಿಷಯಾಲೋಕೋ ಧ್ಯಾಯತೋ ವಾ ಮನೋರಥಃ ।**
**ನಾನಾತ್ಮಕತ್ವಾದ್ವಿಫಲಃ ತಥಾ ಭೇದಾತ್ಮಧೀರ್ಗುಣೈಃ ॥ 3 ॥**

3. ಕನಸುಕಾಣುತ್ತಿರುವವನಿಗೆ ಹೇಗೆ ವಿಷಯದರ್ಶನವು ಭ್ರಾಂತಿಯೋ ಮತ್ತು ಮನಸ್ಸಿನಲ್ಲಿಯೇ ವಿಷಯಗಳನ್ನು ಚಿಂತಿಸುವವನ ಕಲ್ಪನೆಗಳೆಲ್ಲವೂ ಮಿಥ್ಯೆಯೋ ಹಾಗೆ ಭೇದಬುದ್ಧಿಯು ಗುಣಗಳಿಂದ ಆತ್ಮನಲ್ಲಿ ಸುಳ್ಳಾಗಿಯೇ ತೋರುತ್ತಿರುವದು.

**ನಿವೃತ್ತಂ ಕರ್ಮ ಸೇವೇತ ಪ್ರವೃತ್ತಂ ಮತ್ಪರಸ್ತ್ಯಜೇತ್ ।**
**ಜಿಜ್ಞಾಸಾಯಾಂ ಸಂಪ್ರವೃತ್ತೋ ನಾದ್ರಿಯೇತ್ ಕರ್ಮಚೋದನಾಮ್ ॥ 4 ॥**

4. ನನ್ನಲ್ಲಿಯೇ ಮನಸ್ಸಿಟ್ಟವನಾಗಿ, ಪ್ರವೃತ್ತಿಕರ್ಮಗಳನ್ನು ಬಿಟ್ಟು ನಿವೃತ್ತಿಕರ್ಮಗಳನ್ನು ಸೇವಿಸುತ್ತಾ ಅದರಲ್ಲಿಯೂ ಕಾಮದಿಂದ ಪ್ರೇರಿತನಾಗದೆ ತತ್ತ್ವಜಿಜ್ಞಾಸೆಯಲ್ಲಿಯೇ ಪ್ರವೃತ್ತನಾಗಿರಬೇಕು.

**ಯಮಾನಭೀಕ್ಷ್ಣಂ ಸೇವೇತ ನಿಯಮಾನ್ ಮತ್ಪರಃ ಕ್ವಚಿತ್ ।**
**ಮದಭಿಜ್ಞಂ ಗುರುಂ ಶಾನ್ತಮುಪಾಸೀತ ಮದಾತ್ಮಕಮ್ ॥ 5 ॥**

5. ನನ್ನಲ್ಲಿಯೇ ತತ್ಪರನಾಗಿ ಯಥಾಶಕ್ತಿಯಾಗಿ ತಪಸ್ಸೇ ಮುಂತಾದ ನಿಯಮಗಳನ್ನೂ ಮತ್ತೆಮತ್ತೆ ಅಹಿಂಸೆಯೇ ಮುಂತಾದ ಯಮಗಳನ್ನೂ ಸೇವಿಸಬೇಕು. ಶಾಂತನಾದ, ತತ್ತ್ವವನ್ನು ಬಲ್ಲ, ನನ್ನಲ್ಲಿಯೇ ನಿಷ್ಠನಾಗಿರುವ ಗುರುವನ್ನು ಉಪಾಸನೆಮಾಡಬೇಕು.

**ಅಮಾನ್ಯಮತ್ಸರೋ ದಕ್ಷೋ ನಿರ್ಮಮೋ ದೃಢಸೌಹೃದಃ ।**
**ಅಸತ್ವರೋಽರ್ಥಜಿಜ್ಞಾಸುರನಸೂಯರಮೋಘವಾಕ್ ॥ 6 ॥**

**ಜಾಯಾಪತ್ಯಗೃಹಕ್ಷೇತ್ರಸ್ವಜನದ್ರವಿಣಾದಿಷು ।**
**ಉದಾಸೀನಃ ಸಮಂ ಪಶ್ಯನ್ ಸರ್ವೇಷ್ವರ್ಥಮಿವಾತ್ಮನಃ ॥ 7 ॥**

6–7. ಗುರೂಪಾಸಕನಾದವನು ಅಭಿಮಾನರಹಿತನಾಗಿ, ದ್ವೇಷರಹಿತ ನಾಗಿ ದಕ್ಷನಾಗಿ ಮಮಕಾರವಿಲ್ಲದವನಾಗಿ ಗುರುವಿನಲ್ಲಿ ದೃಢಭಕ್ತಿಯುಳ್ಳವನಾಗಿ ಅವ್ಯಗ್ರನಾಗಿ ತತ್ತ್ವವಿಚಾರಶೀಲನಾಗಿ ಅಸೂಯೆಯಿಲ್ಲದವನಾಗಿ ವ್ಯರ್ಥವಾದ ಮಾತುಗಳಿಲ್ಲದವನಾಗಿ ಹೆಂಡಿರು, ಮಕ್ಕಳು, ಮನೆ, ಹೊಲ, ಬಂಧುಗಳು, ಧನ

– ಇವುಗಳಲ್ಲಿ ಉದಾಸೀನನೂ ತನ್ನ ಪ್ರಯೋಜನಕ್ಕಾಗಿ ಎಲ್ಲವನ್ನೂ ಸಮವಾಗಿ ನೋಡುವವನೂ ಆಗಿರಬೇಕು.

**ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾದಾತ್ಮೇಕ್ಷಿತಾ ಸ್ವದೃಕ್ ।**
**ಯಥಾಗ್ನಿರ್ದಾರುಣೋ ದಾಹ್ಯಾದ್ದಾಹಕೋಽನ್ಯಃ ಪ್ರಕಾಶಕಃ ॥ 8 ॥**

8. ಹೇಗೆ ಬೆಂಕಿಯು ತಾನು ಸುಡುತ್ತಿರುವ ಕಟ್ಟಿಗೆಗಿಂತ ಬೇರೆಯಾದ ಪ್ರಕಾಶಕವಾದ ವಸ್ತುವೋ ಹಾಗೆ ಸ್ಥೂಲಸೂಕ್ಷ್ಮದೇಹಗಳಿಗಿಂತ ವಿಲಕ್ಷಣನಾದ ದೃಗ್ರೂಪನೇ ಆಗಿರುವ ಆತ್ಮನು ಅವುಗಳಿಗಿಂತ ಬೇರೆಯಾಗಿದ್ದು ಎಲ್ಲವನ್ನೂ ನೋಡುವವನಾಗಿರುತ್ತಾನೆ.

**ನಿರೋಧೋತ್ಪತ್ತ್ಯಣು ಬೃಹನ್ನಾನಾತ್ವಂ ತತ್ಕೃತಾನ್ ಗುಣಾನ್ ।**
**ಅನ್ತಃಪ್ರವಿಷ್ಟ ಆಧತ್ತ ಏವಂ ದೇಹಗುಣಾನ್ ಪರಃ ॥ 9 ॥**

9. (ಅಗ್ನಿಯು ಕಟ್ಟಿಗೆಯ ಸಂಬಂಧದಿಂದ) ಉತ್ಪತ್ತಿ, ನಾಶ, ಚಿಕ್ಕದು, ದೊಡ್ಡದು, ಅನೇಕ – ಎಂಬೀ ರೀತಿಯ ವಿಕಾರಧರ್ಮಗಳನ್ನು ಹೇಗೆ ಹೊಂದುವದೋ ಹಾಗೆ ದೇಹಗಳೊಳಗೆ ಪ್ರವಿಷ್ಟನಾಗಿರುವ ಪರಮಾತ್ಮನು ದೇಹಧರ್ಮಗಳನ್ನು ಅವಿದ್ಯೆಯಿಂದ ಹೊಂದಿರುವನು.

**ಯೋಽಸೌ ಗುಣೈರ್ವಿರಚಿತೋ ದೇಹೋಽಯಂ ಪುರುಷಸ್ಯ ಹಿ ।**
**ಸಂಸಾರಸ್ತನ್ನಿಬನ್ಧೋಽಯಂ ಪುಂಸೋ ವಿದ್ಯಾಚ್ಛಿದಾತ್ಮನಃ ॥ 10 ॥**

10. ಗುಣಗಳಿಂದ ಉಂಟಾದ ಈ ದೇಹವು ಪುರುಷನಿಗೆ ಅವಿದ್ಯೆಯಿಂದಾದದ್ದು – ಇದರಿಂದಲೇ ಸಂಸಾರವುಂಟಾಗಿರುವದು. ಆತ್ಮವಿದ್ಯೆಯಿಂದ ಇದು ನಾಶವಾಗುವದು.

**ತಸ್ಮಾಜ್ಜಿಜ್ಞಾಸಯಾತ್ಮಾನಮಾತ್ಮಸ್ಥಂ ಕೇವಲಂ ಪರಮ್ ।**
**ಸಂಗಮ್ಯ ನಿರಸೇದೇತದ್ ವಸ್ತುಬುದ್ಧಿಂ ಯಥಾಕ್ರಮಮ್ ॥ 11 ॥**

11. ಆದ್ದರಿಂದ ತನ್ನಲ್ಲಿಯೇ ಇರುವ ಕೇವಲನಾದ ಪರನಾದ ಆತ್ಮನನ್ನು ಜಿಜ್ಞಾಸೆಯಿಂದ ಹೊಂದಿದವನಾಗಿ ಕ್ರಮಕ್ರಮವಾಗಿ ದೇಹಾದಿಗಳಲ್ಲಿ ಸತ್ಯಬುದ್ಧಿಯನ್ನು ನಿರಾಸಮಾಡಿಕೊಳ್ಳಬೇಕು.

**ಆಚಾರ್ಯೋಽರಣಿರಾದ್ಯಃ ಸ್ಯಾದನ್ತೇವಾಸ್ಯುತ್ತರಾರಣಿಃ ।**
**ತತ್ಸನ್ಧಾನಂ ಪ್ರವಚನಂ ವಿದ್ಯಾ ಸನ್ಧಿಃ ಸುಖಾವಹಃ ॥ 12 ॥**

12. ಗುರುವೆಂಬವನು (ಒರಳುಕಲ್ಲಿನಂತೆ) ತಳಭಾಗದ ಅರಣಿಯು. ಶಿಷ್ಯನೆಂಬವನು ಕಡೆಯುವ ಸಾಧನ (ಒನಕೆ ಕಡೆಗೋಲುಗಳಂತೆ). ಇವರಿಬ್ಬರ ಸೇರುವಿಕೆಯು ಪ್ರವಚನವು. ಸುಖವನ್ನುಂಟುಮಾಡುವ ವಿದ್ಯೆಯೇ ಸಂಧಿಯು. (ಗುರುಶಿಷ್ಯಸಂಯೋಗದಿಂದ ವಿದ್ಯೋತ್ಪತ್ತಿಯಾಗುವದೆಂದು ಭಾವ.)

**ವೈಶಾರದೀ ಸಾತಿವಿಶುದ್ಧಬುದ್ಧಿ-**
**ರ್ಧುನೋತಿ ಮಾಯಾಂ ಗುಣಸಂಪ್ರಸೂತಾಮ್ ।**
**ಗುಣಾಂಶ್ಚ ಸಂದಹ್ಯ ಯದಾತ್ಮಮೇತತ್**
**ಸ್ವಯಂ ಚ ಶಾಮ್ಯತ್ಯಸಮಿದ್ ಯಥಾಗ್ನಿಃ ॥ 13 ॥**

13. ಆಚಾರ್ಯನಿಂದ ಪ್ರಾಪ್ತವಾದ ಆ ನಿಪುಣತರವಾದ ಪವಿತ್ರಜ್ಞಾನವು ಗುಣಗಳಿಂದ ತೋರಿಕೊಂಡ ಮಾಯೆಯನ್ನು ಹೋಗಲಾಡಿಸುತ್ತದೆ. ಹೀಗೆ ಈ ವಿಶ್ವಕ್ಕೆಲ್ಲ ಕಾರಣವಾಗಿರುವ ಗುಣಗಳನ್ನು ಸುಟ್ಟು ನಾಶಮಾಡಿ ಈ ಜ್ಞಾನವು ಕಟ್ಟಿಗೆಯಿಲ್ಲದ ಬೆಂಕಿಯು ತಣ್ಣಗಾಗುವಂತೆ ತಾನೂ ಶಾಂತವಾಗುವದು.

**ಅಥೈಷಾಂ ಕರ್ಮಕರ್ತೄಣಾಂ ಭೋಕ್ತೄಣಾಂ ಸುಖದುಃಖಯೋಃ ।**
**ನಾನಾತ್ವಮಥ ನಿತ್ಯತ್ವಂ ಲೋಕಕಾಲಾಗಮಾತ್ಮನಾಮ್ ॥ 14 ॥**

**ಮನ್ಯಸೇ ಸರ್ವಭಾವಾನಾಂ ಸಂಸ್ಥಾ ಹ್ಯೌತ್ಪತ್ತಿಕೀ ಯಥಾ ।**
**ತತ್ತದಾಕೃತಿಭೇದೇನ ಜಾಯತೇ ಭಿದ್ಯತೇ ಚ ಧೀಃ ॥ 15 ॥**

**ಏವಮಪ್ಯಙ್ಗ ಸರ್ವೇಷಾಂ ದೇಹಿನಾಂ ದೇಹಯೋಗತಃ ।**
**ಕಾಲಾವಯವತಃ ಸನ್ತಿ ಭಾವಾ ಜನ್ಮಾದಯೋಽಸಕೃತ್ ॥ 16 ॥**

14–16. ಎಲೈ ಉದ್ಧವನೆ, ಇನ್ನು ಈ ಸುಖದುಃಖಭೋಕ್ತೃಗಳಾದ ಕರ್ಮಿಗಳಾದ ಜೀವರುಗಳು ಅನೇಕರೆಂದೂ ಅವರುಗಳಿಗೆ ಉಂಟಾಗುತ್ತಿರುವ ಲೋಕಗಳು, ಕಾಲ, ಅವಸ್ಥೆಗಳು – ಇವೆಲ್ಲ ನಿತ್ಯವೆಂದೂ ಎಲ್ಲಾ ವಸ್ತುಗಳೂ ನಿಜವಾಗಿಯೂ ಹುಟ್ಟುತ್ತವೆಯೆಂದೂ ಭಾವಿಸುವೆಯಾದರೆ, ಮತ್ತು ಆಯಾ ಆಕಾರಕ್ಕನುಗುಣವಾಗಿ ಬುದ್ಧಿಯೂ ಭಿನ್ನಭಿನ್ನವಾಗಿದ್ದು ಹುಟ್ಟುವದಕ್ಕೆ (ಕಾರಣ

ವಾಗುವ)ದೆಂದೂ ತಿಳಿಯುವೆಯಾದರೆ ಆಗಲೂ ಎಲ್ಲಾ ದೇಹಿಗಳಿಗೂ ಶರೀರ ನಿಮಿತ್ತವಾದ, ಕಾಲಕರ್ಮಾನುಸಾರವಾದ ಜನ್ಮಾದಿವಿಕಾರಗಳು ಅನೇಕಸಲ ಆಗಿಯೇ ತೀರುವವು. (ಸೃಷ್ಟಿಯು ಸತ್ಯವೆಂದು ತಿಳಿದರೂ ವೈರಾಗ್ಯಕ್ಕೇ ಕಾರಣವಾಗಿದೆ – ಎಂದು ಭಾವ.)

**ತತ್ರಾಪಿ ಕರ್ಮಣಾಂ ಕರ್ತುರಸ್ವಾತನ್ತ್ರ್ಯಂ ಚ ಲಕ್ಷ್ಯತೇ ।**
**ಭೋಕ್ತುಶ್ಚ ದುಃಖಸುಖಯೋಃ ಕೋಽನ್ವರ್ಥೋ ವಿವಶಂ ಭಜೇತ್ ॥ 17 ॥**

17. ಅಲ್ಲಿಯೂ ಕರ್ಮಿಯಾದ ಮತ್ತು ಸುಖದುಃಖಭೋಕ್ತೃವಾದ ಜೀವನಿಗೆ ಅಸ್ವಾತಂತ್ರ್ಯವೇ ಕಂಡುಬರುತ್ತದೆ. ಇಂಥ ವಿವಶನಾದ (ಅಸಮರ್ಥನಾದ) ಜೀವನಿಗೆ ಏನು ತಾನೆ ಪುರುಷಾರ್ಥವು ಈ ಸೃಷ್ಟಿಯಲ್ಲಿ ದೊರೆತೀತು?

**ನ ದೇಹಿನಾಂ ಸುಖಂ ಕಿಞ್ಚಿದ್ ವಿದ್ಯತೇ ವಿದುಷಾಮಪಿ ।**
**ತಥಾ ಚ ದುಃಖಂ ಮೂಢಾನಾಂ ವೃಥಾಹಙ್ಕರಣಂ ಪರಮ್ ॥ 18 ॥**

18. ವಿದ್ವಾಂಸರಾಗಿದ್ದರೂ ದೇಹಿಗಳಾದವರಿಗೆ ಸ್ವಲ್ಪವೂ ಸುಖವೆಂಬುದಿಲ್ಲ. ಹಾಗೆಯೇ ಮೂಢರಾದವರಿಗೆ ದುಃಖವೂ ಇರುವದಿಲ್ಲ. ಆದ್ದರಿಂದ ನಾವು ಜಾಣರು, ನಮಗೆ ಸುಖವಿದೆ ಎಂದು ಭಾವಿಸುವದು ವ್ಯರ್ಥವಾದ ಅಹಂಕಾರವೇ ಸರಿ. (ಸುಖದುಃಖಗಳೆಂಬಿವು ದೇಹಧರ್ಮಗಳೇ ಹೊರತು ಆತ್ಮನವಲ್ಲ ಎಂದು ಭಾವ.)

**ಯದಿ ಪ್ರಾಪ್ತಿಂ ವಿಘಾತಂ ಚ ಜಾನನ್ತಿ ಸುಖದುಃಖಯೋಃ ।**
**ತೇಽಪ್ಯದ್ಧಾ ನ ವಿದುರ್ಯೋಗಂ ಮೃತ್ಯುರ್ನ ಪ್ರಭವೇದ್ಯಥಾ ॥ 19 ॥**

19. ಒಂದು ವೇಳೆ ತಾವು ಜಾಣರೆಂದುಕೊಂಡಿರುವವರು, ಸುಖಪ್ರಾಪ್ತಿಗೂ ದುಃಖನಾಶಕ್ಕೂ ಉಪಾಯವನ್ನು ಕಂಡುಕೊಂಡಿದ್ದರೂ ಅಯ್ಯೋ, ಅವರೂ ಸಹ ಮೃತ್ಯುವು ಎಂದಿಗೂ ಬರದಂತೆ ಮಾಡಿಕೊಳ್ಳುವ ಉಪಾಯವನ್ನು ಮಾತ್ರ ಅರಿಯರು.

**ಕೋಽನ್ವರ್ಥಃ ಸುಖಯತ್ಯೇನಂ ಕಾಮೋ ವಾ ಮೃತ್ಯುರನ್ತಿಕೇ ।**
**ಆಘಾತಂ ನೀಯಮಾನಸ್ಯ ವಧ್ಯಸ್ಯೇವ ನ ತುಷ್ಟಿದಃ ॥ 20 ॥**

20. ವಧಸ್ಥಾನಕ್ಕೆ ಒಯ್ಯಲ್ಪಡುತ್ತಿರುವ ಪಶುವಿಗೆ ಹೇಗೋ ಹಾಗೆ ಮೃತ್ಯುವಿನ

ಸಮೀಪಕ್ಕೆ ಹೋಗುತ್ತಿರುವ ಈ ಜಂತುವಿನ ಯಾವ ಅರ್ಥಕಾಮಗಳು ತಾನೆ ಸುಖವನ್ನುಂಟುಮಾಡಿಯಾವು?

**ಶ್ರುತಂ ಚ ದೃಷ್ಟವದ್ದುಷ್ಟಂ ಸ್ಪರ್ಧಾಸೂಯಾತ್ಯಯವ್ಯಯೈಃ ।**
**ಬಹ್ವನ್ತರಾಯಕಾಮತ್ವಾತ್ಕೃಷಿವಚ್ಚಾಪಿ ನಿಷ್ಫಲಮ್ ॥ 21 ॥**

21. ಸ್ವರ್ಗವೇ ಮುಂತಾದ ಫಲಗಳೂ ಸ್ಪರ್ಧೆ, ಹೊಟ್ಟೆಕಿಚ್ಚು, ನಾಶ, ಕ್ಷಯ – ಮುಂತಾದ ದೋಷಗಳಿಂದ ಮತ್ತು ಅನೇಕ ವಿಘ್ನಗಳಿಂದ ಕೂಡಿದ್ದು ಬೇಸಾಯದಂತೆ ವ್ಯರ್ಥವೇ ಆಗಿರುತ್ತದೆ.

**ಅನ್ತರಾಯೈರವಿಹತೋ ಯದಿ ಧರ್ಮಃ ಸ್ವನುಷ್ಠಿತಃ ।**
**ತೇನಾಪಿ ನಿರ್ಜಿತಂ ಸ್ಥಾನಂ ಯಥಾ ಗಚ್ಛತಿ ತಚ್ಛೃಣು ॥ 22 ॥**

22. ವಿಘ್ನಗಳ ತೊಂದರೆಯಿಲ್ಲದೆ ಚೆನ್ನಾಗಿ ಧರ್ಮಾನುಷ್ಠಾನವನ್ನು ಮಾಡಿದವನು ತಾನು ಗೆದ್ದುಕೊಂಡಿರುವ ಲೋಕಗಳನ್ನು ಹೇಗೆ ಪಡೆಯುತ್ತಾನೆಂಬುದನ್ನು ಕೇಳು.

**ಇಷ್ಟ್ವೇಹ ದೇವತಾ ಯಜ್ಞೈಃ ಸ್ವರ್ಲೋಕಂ ಯಾತಿ ಯಾಜ್ಞಿಕಃ ।**
**ಭುಞ್ಜೀತ ದೇವವತ್ತತ್ರ ಭೋಗಾನ್ ದಿವ್ಯಾನ್ ನಿಜಾರ್ಜಿತಾನ್ ॥ 23 ॥**

23. ಯಜ್ಞಮಾಡುವವನು ದೇವತೆಗಳನ್ನು ಯಜ್ಞಗಳಿಂದ ಆರಾಧಿಸಿ ಸ್ವರ್ಗಲೋಕವನ್ನು ಸೇರಿ ಅಲ್ಲಿ ತನ್ನ (ಕರ್ಮಗಳಿಂದ) ಸಂಪಾದಿಸಿದ ದಿವ್ಯಭೋಗಗಳನ್ನು ದೇವತೆಗಳಂತೆಯೇ ಅನುಭವಿಸುತ್ತಾನೆ.

**ಸ್ವಪುಣ್ಯೋಪಚಿತೇ ಶುಭ್ರೇ ವಿಮಾನ ಉಪಗೀಯತೇ ।**
**ಗನ್ಧರ್ವೈರ್ವಿಹರನ್ ಮಧ್ಯೇ ದೇವೀನಾಂ ಹೃದ್ಯವೇಷಧೃಕ್ ॥ 24 ॥**

**ಸ್ತ್ರೀಭಿಃ ಕಾಮಗಯಾನೇನ ಕಿಙ್ಕಣೀಜಾಲಮಾಲಿನಾ ।**
**ಕ್ರೀಡನ್ನ ವೇದಾತ್ಮಪಾತಂ ಸುರಾಕ್ರೀಡೇಷು ನಿರ್ವೃತಃ ॥ 25 ॥**

24–25. ತನ್ನ ಪುಣ್ಯದಿಂದ ಸಂಪಾದಿಸಲ್ಪಟ್ಟ ಶುಭ್ರವಾದ ವಿಮಾನದಲ್ಲಿ ಕುಳಿತು ಮನೋಹರವಾದ ವೇಷಭೂಷಣಗಳಿಂದ ಕೂಡಿ ಸ್ತ್ರೀಯರೊಡನೆ ಗಂಧರ್ವರ ಜೊತೆಯಲ್ಲಿ ವಿಹರಿಸುತ್ತಾ ಸ್ತುತಿಸಲ್ಪಡುವನು; ಮತ್ತು

ಇಚ್ಛಾನುಗುಣವಾಗಿ ಓಡಾಡುವ, ಸಣ್ಣಘಂಟೆಗಳ ಶಬ್ದದಿಂದ ಕೂಡಿದ ವಿಮಾನದಲ್ಲಿ ತಿರುಗುತ್ತಾ ಸ್ತ್ರೀಯರೊಡಗೂಡಿ ಸುರತಕ್ರೀಡೆಗಳಲ್ಲಿ ಆಸಕ್ತನಾಗಿ ತನ್ನ ಆತ್ಮನಾಶವನ್ನೂ ಅರಿಯದೆ ಇರುತ್ತಾನೆ.

**ತಾವತ್ಪ್ರಮೋದತೇ ಸ್ವರ್ಗೇ ಯಾವತ್ಪುಣ್ಯಂ ಸಮಾಪ್ಯತೇ ।**
**ಕ್ಷೀಣಪುಣ್ಯಃ ಪತತ್ಯರ್ವಾಕ್ ಅನಿಚ್ಛನ್ ಕಾಲಚಾಲಿತಃ ॥ 26 ॥**

26. ಪುಣ್ಯವು ಮುಗಿಯುವವರೆಗೂ ಸ್ವರ್ಗದಲ್ಲಿ ಸುಖವನ್ನನುಭವಿಸಿ ಕಾಲನಿಂದ ತಳ್ಳಲ್ಪಟ್ಟವನಾಗಿ ಪುಣ್ಯಕ್ಷಯವಾಗಲು ತನಗೆ ಇಷ್ಟವಿಲ್ಲದಿದ್ದರೂ ಕೆಳಗೆ ಬೀಳುವನು.

**ಯದ್ಯಧರ್ಮರತಃ ಸಙ್ಗಾತ್ ಅಸತಾಂ ಚಾಜಿತೇನ್ದ್ರಿಯಃ ।**
**ಕಾಮಾತ್ಮಾ ಕೃಪಣೋ ಲುಬ್ಧಃ ಸ್ತ್ರೈಣೋ ಭೂತವಿಹಿಂಸಕಃ ॥ 27 ॥**

27. ಇನ್ನು ಕೆಟ್ಟವರ ಸಹವಾಸದಿಂದ ಜಿತೇಂದ್ರಿಯನಲ್ಲದವನಾಗಿ ಅಧರ್ಮರತನೇ ಆಗಿಬಿಟ್ಟರೆ ಕಾಮಾತ್ಮನೂ ಜಿಪುಣನೂ ಕರುಬತನದವನೂ ಸ್ತ್ರೀಲಂಪಟನೂ ಪ್ರಾಣಿಹಿಂಸಕನೂ ಆಗುವನು.

**ಪಶೂನವಿಧಿನಾಽಽಲಭ್ಯ ಪ್ರೇತಭೂತಗಣಾನ್ ಯಜನ್ ।**
**ನರಕಾನವಶೋ ಜನ್ತುರ್ಗಚ್ಛನ್ ಯಾತ್ಯುಲ್ಬಣಂ ತಮಃ ॥ 28 ॥**

28. ಶಾಸ್ತ್ರನಿಷಿದ್ಧವಾದ ರೀತಿಯಲ್ಲಿ ಪಶುಗಳನ್ನು ಕೊಂದು ಭೂತಪ್ರೇತಗಳನ್ನು ಆರಾಧಿಸಿ ಪಾಪವಶನಾದ ಜಂತುವು ನರಕಗಳನ್ನೂ ದಟ್ಟವಾದ ತಮಸ್ಸಿನಿಂದ ಕೂಡಿದ ಲೋಕಗಳನ್ನೂ ಹೊಂದುವನು.

**ಕರ್ಮಾಣಿ ದುಃಖೋದರ್ಕಾಣಿ ಕುರ್ವನ್ ದೇಹೇನ ತೈಃ ಪುನಃ ।**
**ದೇಹಮಾಭಜತೇ ತತ್ರ ಕಿಂ ಸುಖಂ ಮರ್ತ್ಯಧರ್ಮಿಣಃ ॥ 29 ॥**

29. ದುಃಖವನ್ನೇ ಉಂಟುಮಾಡುವ ಕರ್ಮಗಳನ್ನು ಮಾಡುತ್ತಾ ಅವುಗಳ ಫಲವಾಗಿ ದೇಹವನ್ನು ಹೊಂದಿ ಮತ್ತೆ ಕರ್ಮಗಳನ್ನು ಮಾಡಿ ಶರೀರವು ನಾಶವಾದಮೇಲೆ ದೇಹಾಂತರವನ್ನು ಪಡೆಯುವ ಈ ಮರಣಸ್ವಭಾವದ ಜೀವಿಗೆ ಸುಖವೇನಿದೆ?

**ಲೋಕಾನಾಂ ಲೋಕಪಾಲಾನಾಂ ಮದ್ಭಯಂ ಕಲ್ಪಜೀವಿನಾಮ್ ।**
**ಬ್ರಹ್ಮಣೋಽಪಿ ಭಯಂ ಮತ್ತೋ ದ್ವಿಪರಾರ್ಧಪರಾಯುಷಃ ॥ 30 ॥**

30. ಕಲ್ಪಜೀವಿಗಳಾದ ಲೋಕಪಾಲಕರಿಗೂ ಅವರ (ಭೋಗಸ್ಥಾನಗಳಾದ) ಲೋಕಗಳಿಗೂ ಎರಡು ಪರಾರ್ಧಸಂಖ್ಯಾಕವಾದ ಆಯುಸ್ಸುಳ್ಳ (ಚತುರ್ಮುಖ) ಬ್ರಹ್ಮನಿಗೂ ನನ್ನಿಂದಭಯವಿದ್ದೇ ಇದೆ.

**ಗುಣಾಃ ಸೃಜನ್ತಿ ಕರ್ಮಾಣಿ ಗುಣೋಽನುಸೃಜತೇ ಗುಣಾನ್ ।**
**ಜೀವಸ್ತು ಗುಣಸಂಯುಕ್ತೋ ಭುಙ್ಕ್ತೇ ಕರ್ಮಫಲಾನ್ಯಸೌ ॥ 31 ॥**

31. ಇಂದ್ರಿಯಗಳು ಕರ್ಮಗಳನ್ನು ಉಂಟುಮಾಡುತ್ತವೆ. ಸತ್ತ್ವಾದಿಗುಣಗಳು ಇಂದ್ರಿಯಗಳನ್ನು ಸೃಷ್ಟಿಸುತ್ತವೆ. ಜೀವನಾದರೋ ಇಂದ್ರಿಯಗಳಲ್ಲಿ ಅಭಿಮಾನಯುಕ್ತನಾಗಿ ಕರ್ಮಫಲಗಳನ್ನು ಅನುಭವಿಸುತ್ತಾನೆ.

**ಯಾವತ್ ಸ್ಯಾದ್ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ ।**
**ನಾನಾತ್ವಮಾತ್ಮನೋ ಯಾವತ್ ಪಾರತನ್ತ್ರ್ಯಂ ತದೈವ ಹಿ ॥ 32 ॥**

32. ಎಲ್ಲಿಯವರೆಗೆ ಗುಣಗಳು ಅಹಂಕಾರಾದಿಕಾರ್ಯರೂಪಗಳಿಂದ ಪರಿಣಮಿಸುತ್ತಿರುವವೋ ಅಲ್ಲಿಯವರೆಗೆ ಆತ್ಮನಲ್ಲಿ ನಾನಾತ್ವವು ತೋರುತ್ತಿರುವದು. ಜೀವನಲ್ಲಿ ನಾನಾತ್ವವು ಇರುವವರೆಗೂ ಪಾರತಂತ್ರ್ಯವು ಇದ್ದೇ ಇರುವದು.

**ಯಾವದಸ್ಯಾಸ್ವತನ್ತ್ರತ್ವಂ ತಾವದೀಶ್ವರತೋ ಭಯಮ್ ।**
**ಯ ಏತತ್ ಸಮುಪಾಸೀರನ್ ತೇ ಮುಹ್ಯನ್ತಿ ಶುಚಾರ್ಪಿತಾಃ ॥ 33 ॥**

33. ಈ (ಜೀವನು) ಅಸ್ವತಂತ್ರನಾಗಿರುವವರೆಗೂ ಈಶ್ವರನಿಂದ ಭಯವಿದ್ದೇ ಇದೆ. ಈ ಗುಣವೈಷಮ್ಯವನ್ನು ಸೇವಿಸುವವರು ಶೋಕಗ್ರಸ್ತರಾಗಿ ಮೋಹಗೊಳ್ಳುವರು.

**ಕಾಲ ಆತ್ಮಾಽಽಗಮೋ ಲೋಕಃ ಸ್ವಭಾವೋ ಧರ್ಮ ಏವ ಚ ।**
**ಇತಿ ಮಾಂ ಬಹುಧಾ ಪ್ರಾಹುರ್ಗುಣವ್ಯತಿಕರೇ ಸತಿ ॥ 34 ॥**

34. ಕಾಲವು, ಆತ್ಮ (ಶರೀರೇಂದ್ರಿಯಾದಿಗಳು), ವೇದಗಳು, ಪ್ರಾಣಿಗಳು, ಪ್ರಕೃತಿಯು, ಧರ್ಮವು – ಹೀಗೆಂದು ಗುಣಗಳೊಡನೆ ಬೆರೆತ ನನ್ನನ್ನೇ ಅನೇಕಪ್ರಕಾರವಾಗಿ ಬಲ್ಲವರು ಹೇಳುವರು.

**ಉದ್ಧವ ಉವಾಚ –**

**ಗುಣೇಷು ವರ್ತಮಾನೋऽಪಿ ದೇಹಜೇಷ್ವನಪಾವೃತಃ ।**
**ಗುಣೈರ್ನ ಬಧ್ಯತೇ ದೇಹೀ ಬಧ್ಯತೇ ವಾ ಕಥಂ ವಿಭೋ ॥ 35 ॥**

**ಕಥಂ ವರ್ತೇತ ವಿಹರೇತ್ ಕೈರ್ವಾ ಜ್ಞಾಯೇತ ಲಕ್ಷಣೈಃ ।**
**ಕಿಂ ಭುಞ್ಜೀತೋऽತ ವಿಸೃಜೇತ್ ಶಯೀತಾಸೀತ ಯಾತಿ ವಾ ॥ 36 ॥**

**ಏತದಚ್ಯುತ ಮೇ ಬ್ರೂಹಿ ಪ್ರಶ್ನಂ ಪ್ರಶ್ನವಿದಾಂವರ ।**
**ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಭ್ರಮಃ ॥ 37 ॥**

35–37. ಉದ್ಧವನಿಂತೆಂದನು: ಎಲೈ ಪ್ರಶ್ನವಿದರಲ್ಲಿ ಶ್ರೇಷ್ಠನಾದ ಅಚ್ಯುತನೆ, ದೇಹಿಯಾದ ಜೀವನು ದೇಹೋತ್ಪನ್ನವಾದ ಕರ್ಮ ಮತ್ತು ಸುಖಗಳಲ್ಲಿಯೇ ಸಕ್ತನಾಗಿ ಇರುತ್ತಿದ್ದರೂ ಅವುಗಳಿಂದ ಮುಚ್ಚಲ್ಪಡದವನಾಗಿ ಗುಣಗಳಿಂದ ಕಟ್ಟಲ್ಪಡುವದಿಲ್ಲವೋ, ಅಥವಾ ಕಟ್ಟಲ್ಪಡುವನೋ, ಹೇಗೆ? ಈ ಆತ್ಮನು ಗುಣಮುಕ್ತನಾದಾಗ ಹೇಗೆ ಇರುತ್ತಾನೆ? ಯಾವ ಗುರುತುಗಳಿಂದ ಇವನನ್ನು (ಮುಕ್ತನೆಂದು) ತಿಳಿಯಬೇಕು? ಇಂಥ ಮುಕ್ತನು ಊಟಮಾಡುತ್ತಾನೆಯೆ? ಮಲಗಳನ್ನು ಬಿಡುತ್ತಾನೆಯೇ? ಮಲಗುತ್ತಾನೆಯೆ? ಅಥವಾ ಹೋಗುತ್ತಾನೊ, ಕುಳಿತಿರುತ್ತಾನೊ? ಈ ವಿಚಾರವನ್ನು ನನಗೆ ತಿಳಿಯಹೇಳು. ನನ್ನ ಅಬಿಪ್ರಾಯದಂತೆ ನಿತ್ಯಮುಕ್ತನೆಂದರೂ ನಿತ್ಯಬದ್ಧನೆಂದರೂ ಒಬ್ಬನೇ ಎಂಬ ಭ್ರಾಂತಿಯುಂಟಾಗಿದೆ.

******

## ಬದ್ಧಮುಕ್ತರ ಸ್ವರೂಪ

**(ಹನ್ನೊಂದನೆಯ ಸ್ಕಂಧ, ಹನ್ನೊಂದನೆಯ ಅಧ್ಯಾಯ)**

**ಶ್ರೀ ಭಗವಾನುವಾಚ –**

**ಬದ್ಧೋ ಮುಕ್ತ ಇತಿ ವ್ಯಾಖ್ಯಾ ಗುಣತೋ ಮೇ ನ ವಸ್ತುತಃ ।**
**ಗುಣಸ್ಯ ಮಾಯಾಮೂಲತ್ವಾತ್ ನ ಮೇ ಮೋಕ್ಷೋ ನ ಬನ್ಧನಮ್ ॥ 1 ॥**

1. ಶ್ರೀಭಗವಂತನಿಂತೆಂದನು: ಬದ್ಧನು, ಮುಕ್ತನು – ಎಂಬ ವ್ಯವಹಾರವು ಆತ್ಮನಿಗೆ ಗುಣಗಳ ಸಂಗದಿಂದಾದದ್ದೇ ಹೊರತು ಪರಮಾರ್ಥವಲ್ಲ. ಗುಣಗಳು ಮಾಯಾ ಕಲ್ಪಿತವಾಗಿರುವದರಿಂದ ನನಗೆ (ಆತ್ಮನಿಗೆ) ಬಂಧವಾಗಲಿ ಮೋಕ್ಷವಾಗಲಿ ಇರುವದಿಲ್ಲ – ಎಂದು ನನ್ನ ಮತವು.

**ಶೋಕಮೋಹೌ ಸುಖಂ ದುಃಖಂ ದೇಹಾಪತ್ತಿಶ್ಚ ಮಾಯಯಾ ।**
**ಸ್ವಪ್ನೋ ಯಥಾತ್ಮನಃ ಖ್ಯಾತಿಃ ಸಂಸೃತಿರ್ನ ತು ವಾಸ್ತವೀ ॥ 2 ॥**

2. ಸ್ವಪ್ನವೆಂದುದು ಹೇಗೆ ತನ್ನೊಳಗೆ ತೋರುವ ದೃಶ್ಯಮಾತ್ರವೋ ಹಾಗೆ ಜೀವನಿಗೆ ಉಂಟಾಗುವ ಶೋಕಮೋಹಗಳು, ಸುಖದುಃಖಗಳು, ದೇಹಪ್ರಾಪ್ತಿ – ಇವುಗಳೆಲ್ಲವೂ ಮಾಯಾಮಾತ್ರವೇ ಆಗಿವೆ. ಸಂಸಾರವು ಯಥಾರ್ಥವಲ್ಲವೇ ಅಲ್ಲ.

**ವಿದ್ಯಾವಿದ್ಯೇ ಮಮ ತನೂ ವಿದ್ಧ್ಯುದ್ಧವ ಶರೀರಿಣಾಮ್ ।**
**ಮೋಕ್ಷಬನ್ಧಕರೀ ಆದ್ಯೇ ಮಾಯಯಾ ಮೇ ವಿನಿರ್ಮಿತೇ ॥ 3 ॥**

3. ಎಲೈ ಉದ್ಧವನೆ, ಶರೀಗಳಾದವರಿಗೆ ಬಂಧಮೋಕ್ಷಗಳನ್ನು ಉಂಟು ಮಾಡುವ, ನನ್ನ ಮಾಯೆಯಿಂದ ನಿರ್ಮಿತವಾದ ಅವಿದ್ಯೆ–ವಿದ್ಯೆ ಎಂಬಿವೆರಡೂ ನನ್ನ ಆದ್ಯವಾದ ಶರೀರಗಳೇ ಎಂದು ತಿಳಿ.

**ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ ।**
**ಬನ್ಧೋಽಸ್ಯಾವಿದ್ಯಯಾಽನಾದಿರ್ವಿದ್ಯಯಾ ಚ ತಥೇತರಃ ॥ 4 ॥**

4. ಎಲೈ ಮಹಾಮತಿಯೆ, ಒಬ್ಬನೇ ಆದ ನನ್ನ ಅಂಶವೇ ಆಗಿರುವ ಜೀವನಿಗೆ ಅವಿದ್ಯೆಯಿಂದ ಅನಾದಿಯಾದ ಬಂಧವೂ ವಿದ್ಯೆಯಿಂದ ಮೋಕ್ಷವೂ ಆಗುತ್ತದೆ.

**ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ ।**
**ವಿರುದ್ಧಧರ್ಮಿಣೋಸ್ತಾತ ಸ್ಥಿತಯೋರೇಕಧರ್ಮಿಣಿ ॥ 5 ॥**

5. ಅಪ್ಪ, ಇನ್ನು ನಿನಗೆ ಒಬ್ಬನೇ ಧರ್ಮಿಯಲ್ಲಿರುವ ಅನ್ಯೋನ್ಯವಿರುದ್ಧ ಧರ್ಮವುಳ್ಳ ಬದ್ಧಮುಕ್ತರ ಸ್ವರೂಪದ ವೈಲಕ್ಷಣ್ಯವನ್ನು ಹೇಳುವೆನು.

**ಸುಪರ್ಣಾವೇತೌ ಸದೃಶೌ ಸಖಾಯೌ**
**ಯದೃಚ್ಛಯಾ ಕೃತನೀಡೌ ಚ ವೃಕ್ಷೇ ।**
**ಏಕಸ್ತಯೋಃ ಖಾದತಿ ಪಿಪ್ಪಲಾನ್ನ–**
**ಮನ್ಯೋ ನಿರನ್ನೋಽಪಿ ಬಲೇನ ಭೂಯಾನ್ ॥ 6 ॥**

6. ಒಂದೇ ವೃಕ್ಷದಲ್ಲಿ ಗೂಡುಕಟ್ಟಿಕೊಂಡಿರುವ ಶೋಭನವಾದ ರೆಕ್ಕೆಗಳುಳ್ಳ

ಅನ್ಯೋನ್ಯಸಾದೃಶ್ಯವುಳ್ಳ ಸ್ನೇಹಿತರಾದ ಎರಡು ಹಕ್ಕಿಗಳಲ್ಲಿ ಒಂದು ಮಾಯೆಯಿಂದ ಸಂಸಾರಭೋಗವನ್ನು ಅನುಭವಿಸುತ್ತಿರುವದು; ಮತ್ತೊಂದು ಭೋಗವಿಲ್ಲದಿದ್ದರೂ ಬಲಿಷ್ಠವಾಗಿದ್ದುಕೊಂಡಿರುವದು.

**ಆತ್ಮಾನಮನ್ಯಂ ಚ ಸ ವೇದ ವಿದ್ವಾನ್**
**ಅಪಿಪ್ಪಲಾದೋ ನ ತು ಪಿಪ್ಪಲಾದಃ ।**
**ಯೋऽವಿದ್ಯಯಾ ಯುಕ್ ಸ ತು ನಿತ್ಯಬದ್ಧೋ**
**ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ ॥ 7 ॥**

7. ಅಪ್ಪಿಪ್ಪಲಾದನಾದ (ಸಂಸಾರಫಲವನ್ನುಪಭೋಗಿಸದೆ ಇರುವ) ಆ ಜ್ಞಾನಿಯು ತನ್ನನ್ನೂ ಮತ್ತೊಬ್ಬನನ್ನೂ ಬಲ್ಲವನಾಗಿರುತ್ತಾನೆ. ಅವನು ಪಿಪ್ಪಲಾದನಲ್ಲ. ಆದರೆ ಯಾವನು ಅವಿದ್ಯೆಯಿಂದ ಕೂಡಿರುವನೋ ಅವನು ನಿತ್ಯಬದ್ಧನು. ಯಾವನು ವಿದ್ಯಾವಂತನೋ ಅವನು ನಿತ್ಯಮುಕ್ತನು.

**ದೇಹಸ್ಥೋಽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ ಯಥೋತ್ಥಿತಃ ।**
**ಅದೇಹಸ್ಥೋऽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ ಯಥಾ ॥ 8 ॥**

8. ಜ್ಞಾನಿಯು ಕನಸಿನಿಂದ ಎಚ್ಚತ್ತವನಂತೆ ದೇಹದಲ್ಲಿದ್ದರೂ ದೇಹದಲ್ಲಿರುವವನಾಗಿರುವದಿಲ್ಲ. (ಅಜ್ಞಾನಿಯು) ಕನಸುಕಾಣುತ್ತಿರುವವನಂತೆ ದೇಹದಲ್ಲಿಲ್ಲದೆ ಇದ್ದರೂ ದೇಹದಲ್ಲಿರುವನು.

**ಇನ್ದ್ರಿಯೈರಿನ್ದ್ರಿಯಾರ್ಥೇಷು ಗುಣೈರಪಿ ಗುಣೇಷು ಚ ।**
**ಗೃಹ್ಯಮಾಣೇಷ್ವಹಂ ಕುರ್ಯಾನ್ನ ವಿದ್ವಾನ್ ಯಸ್ತ್ವವಿಕ್ರಿಯಃ ॥ 9 ॥**

9. ಇನ್ನು ಯಾವ ಅವಿಕ್ರಿಯನಾದ ಜ್ಞಾನಿಯಿರುವನೋ ಅವನು ಇಂದ್ರಿಯಗಳಿಂದ ವಿಷಯಗಳೂ ಗುಣಗಳಿಂದ ಗುಣಗಳೂ ಗ್ರಹಿಸಲ್ಪಡುತ್ತಿದ್ದರೂ (ತಾನು ಮಾಡುತ್ತಿರುವೆನೆಂಬ) ಅಹಂಕಾರವನ್ನು ಹೊಂದುವದಿಲ್ಲ.

**ದೈವಾಧೀನೇ ಶರೀರೇऽಸ್ಮಿನ್ ಗುಣಭಾವ್ಯೇನ ಕರ್ಮಣಾ ।**
**ವರ್ತಮಾನೋऽಬುಧಸ್ತತ್ರ ಕರ್ತಾऽಸ್ಮೀತಿ ನಿಬಧ್ಯತೇ ॥ 10 ॥**

10. ದೈವ(ಪೂರ್ವಕರ್ಮಗಳ) ಅಧೀನವಾದ ಈ ಶರೀರದಲ್ಲಿ

ಗುಣಗಳಿಂದುಂಟಾದ ಕರ್ಮಗಳಿಂದ ಇರುವವನಾಗಿ ಅಜ್ಞಾನಿಯಾದವನು ಅದರಲ್ಲಿ ತಾನೇ ಕರ್ತನು ಎಂದು ಭಾವಿಸುತ್ತಾ ಬದ್ಧನಾಗುತ್ತಾನೆ.

**ಏವಂ ವಿರಕ್ತಃ ಶಯನ ಆಸನಾಟನಮಜ್ಜನೇ ।**
**ದರ್ಶನಸ್ಪರ್ಶನಘ್ರಾಣಭೋಜನಶ್ರವಣಾದಿಷು ॥ 11 ॥**
**ನ ತಥಾ ಬಧ್ಯತೇ ವಿದ್ವಾಂಸ್ತತ್ರ ತತ್ರಾದಯನ್ ಗುಣಾನ್ ।**
**ಪ್ರಕೃತಿಸ್ಥೋಽಪ್ಯಸಂಸಕ್ತೋ ಯಥಾ ಖಂ ಸವಿತಾಽನಿಲಃ ॥ 12 ॥**

11–22. ಜ್ಞಾನಿಯು ಮಾತ್ರ ಶರೀರದಲ್ಲಿಯೇ ಇದ್ದರೂ ಆಕಾಶವು ಹೇಗೆ ಸರ್ವವ್ಯಾಪಕವಾಗಿದ್ದರೂ ಯಾವದಕ್ಕೂ ಅಂಟಿಕೊಳ್ಳುವದಿಲ್ಲವೋ, ಸೂರ್ಯನೂ ವಾಯುವೂ ಹೇಗೆ ತಮ್ಮತಮ್ಮ ಸ್ವರೂಪದಿಂದ ಅಸಂಗರಾಗಿಯೇ ಇರುವರೋ ಹಾಗೆ – ತಿಳಿದವನು ನೋಟ, ಮುಟ್ಟುವದು, ಮೂಸುವದು, ಊಟಮಾಡುವದು, ಕೇಳುವದು – ಇವುಗಳಲ್ಲಿ ಅಂಟಿಕೊಳ್ಳದೆ, ಅಲ್ಲಲ್ಲಿ ಗುಣಗಳನ್ನು ಭೋಗಿಸುತ್ತಿದ್ದರೂ ಬದ್ಧನಾಗದೆ ಅಸಕ್ತನಾಗಿಯೇ ಇರುವನು.

**ವೈಶಾರದ್ಯೇ ಕ್ಷಯಾಽಸಂಗತಿತಯಾ ಚ್ಛಿನ್ನಸಂಶಯಃ ।**
**ಪ್ರತಿಬುದ್ಧ ಇವ ಸ್ವಪ್ನಾನ್ನಾನಾತ್ವಾದ್ ವಿನಿವರ್ತತೇ ॥ 13 ॥**

13. ವೈರಾಗ್ಯದಿಂದ ಹರಿತವಾದ (ಶಸ್ತ್ರದಿಂದ) ಸಂಶಯಗಳೆಲ್ಲವನ್ನೂ ಕತ್ತರಿಸಿ ಜ್ಞಾನದಲ್ಲಿ ನಿರತನಾಗಿ, ಕನಸಿನಿಂದ ಎಚ್ಚತ್ತವನಂತೆ ನಾನಾತ್ವದಿಂದ (ವಿದ್ವಾಂಸನು) ಹಿಂತಿರುಗುವನು.

**ಯಸ್ಯ ಸ್ಯುರ್ವೀತಸಂಕಲ್ಪಾಃ ಪ್ರಾಣೇನ್ದ್ರಿಯಮನೋಧಿಯಾಮ್ ।**
**ವೃತ್ತಯಃ ಸ ವಿನಿರ್ಮುಕ್ತೋ ದೇಹಸ್ಥೋಽಪಿ ಹಿ ತದ್ಗುಣೈಃ ॥ 14 ॥**

14. ಯಾವನ ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ – ಇವುಗಳ ವೃತ್ತಿಗಳು ಸಂಕಲ್ಪರಹಿತವಾಗಿರುವವೋ ಅವನು ದೇಹದಲ್ಲಿಯೇ ಇದ್ದರೂ ಅದರ ಗುಣಗಳಿಂದ ಮುಕ್ತನಾಗಿರುವನು.

**ಯಸ್ಯಾತ್ಮಾ ಹಿಂಸ್ಯತೇ ಹಿಂಸ್ರೈರ್ಯೇನ ಕಿಂಚಿದ್ ಯದೃಚ್ಛಯಾ ।**
**ಅರ್ಚ್ಯತೇ ವಾ ಕ್ವಚಿತ್ ತತ್ರ ನ ವ್ಯತಿಕ್ರಿಯತೇ ಬುಧಃ ॥ 15 ॥**

15. ಯಾವನ ಶರೀರವು ದುರ್ಜನರಿಂದ ಹಿಂಸಿಸಲ್ಪಟ್ಟರೂ

ಯಾವನಾದರೊಬ್ಬನಿಂದ ಪೂಜಿಸಲ್ಪಟ್ಟರೂ ವಿಕಾರವನ್ನು ಹೊಂದುವದಿಲ್ಲವೋ ಅವನೇ ಜ್ಞಾನಿಯು.

**ನ ಸ್ತುವೀತ ನ ನಿನ್ದೇತ ಕುರ್ವತಃ ಸಾಧ್ವಸಾಧು ವಾ ।**
**ವದತೋ ಗುಣದೋಷಾಭ್ಯಾಂ ವರ್ಜಿತಃ ಸಮದೃಙ್ ಮುನಿಃ ॥ 16 ॥**

16. ಒಳ್ಳೆಯದನ್ನು ಮಾಡಿದಾಗ ಹೊಗಳುವದಾಗಲಿ ಕೆಟ್ಟದ್ದನ್ನು ಮಾಡಿದಾಗ ತೆಗಳುವದಾಗಲಿ ಇಲ್ಲದೆ, ಗುಣದೋಷಗಳನ್ನು ಆಡಿಕೊಳ್ಳುತ್ತಿದ್ದರೂ ಯಾವನು ವ್ಯವಹಾರವಿಮುಖನಾಗಿ ಸಮಬುದ್ಧಿಯುಳ್ಳವನಾಗಿರುವನೋ ಅವನೇ ಮುನಿಯು.

**ನ ಕುರ್ಯಾನ್ನ ವದೇತ್ ಕಿಂಚಿನ್ನ ಧ್ಯಾಯೇದ್ ಸಾಧ್ವಸಾಧು ವಾ ।**
**ಆತ್ಮಾರಾಮೋऽನಯಾ ವೃತ್ತ್ಯಾ ವಿಚರೇಜ್ಜಡವನ್ಮುನಿಃ ॥ 17 ॥**

17. ಏನನ್ನೂ ಮಾಡದೆ, ಮಾತಾಡದೆ ಒಳ್ಳೆಯದನ್ನಾಗಲಿ, ಕೆಟ್ಟದ್ದನ್ನಾಗಲಿ ಏನನ್ನೂ ಚಿಂತಿಸದೆ ಜಡನಂತೆ ವೃತ್ತಿಯುಳ್ಳವನಾಗಿ ಆತ್ಮಾರಾಮನಾಗಿ ಇರುವವನೇ ಮುನಿಯು.

**ಶ್ರೀಭಗವಾನುವಾಚ –**
**ಕೃಪಾಲುರಕೃತದ್ರೋಹಸ್ತಿತಿಕ್ಷುಃ ಸರ್ವದೇಹಿನಾಮ್ ।**
**ಸತ್ಯಸಾರೋऽನವದ್ಯಾತ್ಮಾ ಸಮಃ ಸರ್ವೋಪಕಾರಕಃ ॥ 29 ॥**

**ಕಾಮೈರಹತಧೀರ್ದಾನ್ತಃ ಮೃದುಃ ಶುಚಿರಕಿಞ್ಚನಃ ।**
**ಅನೀಹೋ ಮಿತಭುಕ್ ಶಾನ್ತಃ ಸ್ಥಿರೋ ಮಚ್ಛರಣೋ ಮುನಿಃ ॥ 30 ॥**

**ಅಪ್ರಮತ್ತೋ ಗಭೀರಾತ್ಮಾ ಧೃತಿಮಾನ್ ಜಿತಷಡ್ಗುಣಃ ।**
**ಅಮಾನೀ ಮಾನದಃ ಕಲ್ಯೋ ಮೈತ್ರಃ ಕಾರುಣಿಕಃ ಕವಿಃ ॥ 31 ॥**

**ಅಜ್ಞಾಯೈವಂ ಗುಣಾನ್ ದೋಷಾನ್ ಮಯಾದಿಷ್ಟಾನಪಿ ಸ್ವಕಾನ್ ।**
**ಧರ್ಮಾನ್ ಸಂತ್ಯಜ್ಯ ಯಃ ಸರ್ವಾನ್ ಮಾಂ ಭಜೇತ ಸ ಸತ್ತಮಃ ॥ 32 ॥**

29–32. ಶ್ರೀ ಭಗವಂತನಿಂತೆಂದನು: ದಯಾಳುವೂ ಯಾವ ಪ್ರಾಣಿಗಳಿಗೂ ದ್ರೋಹಮಾಡದವನೂ ಶೀತೋಷ್ಣಸಹನಶೀಲನೂ ಸತ್ಯಸಾರನೂ, ನಿರ್ದುಷ್ಟಸ್ವಭಾವನೂ ಸಮನೂ ಎಲ್ಲರಿಗೂ ಉಪಕಾರಮಾಡುವವನೂ ಕಾಮಗಳಿಗೆ ಸೋಲದ ಬುದ್ಧಿಯುಳ್ಳವನೂ ಇಂದ್ರಿಯನಿಗ್ರಹವಂತನೂ ಮೃದುಸ್ವಭಾವನೂ

ಶುಚಿಯಾಗಿರುವವನೂ ಪರಿಗ್ರಹವಿಲ್ಲದವನೂ ಆಶೆಯಿಲ್ಲದವನೂ ಮಿತಾಹಾರಿಯೂ ಶಾಂತನೂ ಸ್ಥಿರಚಿತ್ತನೂ ನನ್ನನ್ನೇ ಶರಣುಹೊಂದಿದವನೂ ಮನನಶೀಲನೂ ಪ್ರಮಾದರಹಿತನೂ ನಿರ್ವಿಕಾರನೂ ಧೃತಿಯುಳ್ಳವನೂ ಷಡೂರ್ಮಿಗಳನ್ನು ಜಯಿಸಿದವನೂ ಅಭಿಮಾನರಹಿತನೂ ಮತ್ತೊಬ್ಬರನ್ನು ಗೌರವಿಸುವವನೂ ದಕ್ಷನೂ ಆ ವಂಚಕನೂ ಕರುಣಾವಂತನೂ ಕ್ರಾಂತಿದರ್ಶಿಯೂ (ಜ್ಞಾನಿಯೂ) ಆಗಿದ್ದು, ಮತ್ತು ಗುಣದೋಷಗಳನ್ನು ಬಲ್ಲವನಾಗಿ ವೇದರೂಪನಾದ ನನ್ನಿಂದ ಅರ್ಪಣೆಮಾಡಲ್ಪಟ್ಟ ಸ್ವಧರ್ಮಗಳನ್ನು ಕೂಡ ತ್ಯಾಗಮಾಡಿ ಯಾವನು ನನ್ನನ್ನೇ ಭಜಿಸುವನೋ ಅವನೇ ಶ್ರೇಷ್ಠನಾದ (ಸಾಧು)ವೆನಿಸುವನು.

**ಜ್ಞಾತ್ವಾಽಜ್ಞಾತ್ವಾಽಥ ಯೇ ವೈ ಮಾಂ ಯಾವಾನ್ ಯಶ್ಚಾಪಿ ಯಾದೃಶಃ ।**
**ಭಜನ್ತ್ಯನನ್ಯಭಾವೇನ ತೇ ಮೇ ಭಕ್ತತಮಾ ಮತಾಃ ॥ 33 ॥**

33. ಯಾರು ನನ್ನ ಸ್ವರೂಪವು ಎಷ್ಟು, ಯಾವದು, ಎಂಥದ್ದು – ಎಂಬುದನ್ನು ತಿಳಿದು ಅಥವಾ ತಿಳಿಯದೆ ಅನನ್ಯಭಕ್ತಿಭಾವವೊಂದರಿಂದಲೇ ಭಜಿಸುವರೋ ಅವರೇ ಭಕ್ತತಮರೆಂದು ನನ್ನ ಅಭಿಪ್ರಾಯವು.

**ಮಲ್ಲಿಙ್ಗಮದ್ಭಕ್ತಜನದರ್ಶನಸ್ಪರ್ಶನಾರ್ಚನಮ್ ।**
**ಪರಿಚರ್ಯಾಸ್ತುತಿಪ್ರಹ್ವಗುಣಕರ್ಮಾನುಕೀರ್ತನಮ್ ॥ 34 ॥**

**ಮತ್ಕಥಾಶ್ರವಣೇ ಶ್ರದ್ಧಾ ಮದನುಧ್ಯಾನಮುದ್ಧವ ।**
**ಸರ್ವಲಾಭೋಪಹರಣಂ ದಾಸ್ಯೇನಾತ್ಮನಿವೇದನಮ್ ॥ 35 ॥**

**ಮಜ್ಜನ್ಮಕರ್ಮಕಥನಂ ಮಮ ಪರ್ವಾನುಮೋದನಮ್ ।**
**ಗೀತತಾಣ್ಡವವಾದಿತ್ರಗೋಷ್ಠಿಭಿರ್ಮದ್ಗೃಹೋತ್ಸವಃ ॥ 34 ॥**

**ಯಾತ್ರಾಬಲಿವಿಧಾನಂ ಚ ಸರ್ವವಾರ್ಷಿಕಪರ್ವಸು ।**
**ವೈದಿಕೀ ತಾನ್ತ್ರಿಕೀ ದೀಕ್ಷಾ ಮದೀಯವ್ರತಧಾರಣಮ್ ॥ 35 ॥**

**ಮಮಾರ್ಚಾಸ್ಥಾಪನೇ ಶ್ರದ್ಧಾ ಸ್ವತಃ ಸಂಹತ್ಯ ಚೋದ್ಯಮಃ ।**
**ಉದ್ಯಾನೋಪವನಾಕ್ರೀಡಪುರಮನ್ದಿರಕರ್ಮಣಿ ॥ 36 ॥**

**ಸಂಮಾರ್ಜನೋಪಲೇಪಾಭ್ಯಾಂ ಸೇಕಮಣ್ಡಲವರ್ತನೈಃ ।**
**ಗೃಹಶುಶ್ರೂಷಣಂ ಮಹ್ಯಂ ದಾಸವದ್ಯದಮಾಯಯಾ॥ 37 ॥**

**ಅಮಾನಿತ್ವಮದಮ್ಭಿತ್ವಂ ಕೃತಸ್ಯಾಪರಿಕೀರ್ತನಮ್ ।**
**ಅಪಿ ದೀಪಾವಲೋಕಂ ಮೇ ನೋಪಯುಞ್ಜ್ಯಾನ್ನಿವೇದಿತಮ್ ॥ 40 ॥**

**ಯದ್ಯದಿಷ್ಟತಮಂ ಲೋಕೇ ಯಚ್ಚಾತಿಪ್ರಿಯಮಾತ್ಮನಃ ।**
**ತತ್ತನ್ನಿವೇದಯೇನ್ಮಹ್ಯಂ ತದಾನನ್ತ್ಯಾಯ ಕಲ್ಪತೇ ॥ 41 ॥**

34–40. ಎಲೈ ಉದ್ಧವನೆ, ನನ್ನ ಪ್ರತಿಮಾದಿಗಳನ್ನೂ ನನ್ನ ಭಕ್ತರನ್ನೂ ದರ್ಶನ, ಸ್ಪರ್ಶನಪೂಜಾದಿಗಳಿಂದ ಗೌರವಿಸುವದು, ನಮಸ್ಕಾರ, ಸ್ತೋತ್ರ, ನನ್ನ ಗುಣಕರ್ಮಗಳ ಕೀರ್ತನೆ, ನನ್ನ ಕಥಾಶ್ರವಣದಲ್ಲಿ ಶ್ರದ್ಧೆ, ನನ್ನ ಧ್ಯಾನ, ತನಗೆ ಪ್ರಾಪ್ತವಾದದ್ದನ್ನೆಲ್ಲ ನನಗೆ ಅರ್ಪಿಸುವದು, ದಾಸ್ಯಭಾವದಿಂದ ತನ್ನನ್ನು ಅರ್ಪಿಸಿಕೊಳ್ಳುವದು, ನನ್ನ ಜನ್ಮಕರ್ಮಗಳನ್ನು ಕೀರ್ತನೆಮಾಡುವದು, ಜಯಂತಿ – ಮುಂತಾದ ಹಬ್ಬಗಳನ್ನು ಆಚರಿಸುವದು, ಮನೆಯಲ್ಲಿ ಗೀತ ನೃತ್ಯವಾದ್ಯಗೋಷ್ಠಿಗಳಿಂದ ಉತ್ಸವಮಾಡುವದು, ಯಾತ್ರೆಮಾಡುವದು, ಚಾತುರ್ಮಾಸ್ಯಗಳಲ್ಲಿ ಪೂಜೆ, ವೈದಿಕತಾಂತ್ರಿಕದೀಕ್ಷಾಸ್ವೀಕಾರ, ನನ್ನ ವ್ರತಗಳನ್ನು ಅನುಸರಿಸುವದು, ನನ್ನ ಪ್ರತಿಮೆಗಳನ್ನು ಸ್ಥಾಪಿಸುವದರಲ್ಲಿ ಶ್ರದ್ಧೆಯುಳ್ಳವನಾಗುವದು, ಕೈದೋಟಹೂದೋಟಪೂಜಾಮಂದಿರಗಳ ನಿರ್ಮಾಣದಲ್ಲಿ ತಾನೂ ಭಾಗವಹಿಸುವದು, ಹಾಗೂ ಗುಡಿಸುವದು, ಸಾರಿಸುವದು, ರಂಗವಲ್ಲಿಗಳನ್ನಿಡುವದು – ಇವುಗಳಿಂದ ನನ್ನ ಮಂದಿರವನ್ನು ಸೇವಕನಂತೆ ವಂಚನೆಯಿಲ್ಲದೆ ಸೇವಿಸುವದು, ಅಮಾನಿತ್ವ, ಅದಂಭಿತ್ವ, ಮಾಡಿದ್ದನ್ನು ಹೊಗಳಿಕೊಳ್ಳದೆ ಇರುವದು, ನನಗೆ ಅರ್ಪಿಸಿದ ದೀಪದ ಬೆಳಕನ್ನುಕೂಡ ತಾನು ಸ್ವಂತಕ್ಕೆ ಉಪಯೋಗಿಸದಿರುವದು – (ಇವೇ ಭಕ್ತಿಯ ಲಕ್ಷಣ). ಯಾವಯಾವದು ತನಗೆ ಅತಿಪ್ರಿಯವೂ ಇಷ್ಟವೂ ಆಗಿರುವದೋ ಅದೆಲ್ಲವನ್ನೂ ನನಗೆ ಅರ್ಪಿಸುವದು ಭಕ್ತಿಯ ಗುರುತಾಗಿದೆ. ಅದು ಅನಂತವಾಗುವದು.

**ಸೂರ್ಯೋಽಗ್ನಿರ್ಬ್ರಾಹ್ಮಣೋ ಗಾವಃ ವೈಷ್ಣವಃ ಖಂ ಮರುಜ್ಜಲಮ್ ।**
**ಭೂರಾತ್ಮಾ ಸರ್ವಭೂತಾನಿ ಭದ್ರ ಪೂಜಾಪದಾನಿ ಮೇ ॥ 42 ॥**

42. ಎಲೈ ಮಂಗಳಕರನೆ, ಸೂರ್ಯ, ಅಗ್ನಿ, ಬ್ರಾಹ್ಮಣ, ಗೋವುಗಳು, ವಿಷ್ಣುಭಕ್ತನು, ಆಕಾಶ, ವಾಯು, ನೀರು, ಭೂಮಿ, ತನ್ನ ಶರಿರ, ಎಲ್ಲಾ ಪ್ರಾಣಿಗಳು – ಇವೆಲ್ಲವೂ ನನ್ನ ಪೂಜಾಸ್ಥಾನಗಳು.

**ಸೂರ್ಯೇ ತು ವಿದ್ಯಯಾ ತ್ರಯ್ಯಾ ಹವಿಷಾಽಗ್ನೌ ಯಜೇತ ಮಾಮ್ ।**
**ಆತಿಥ್ಯೇನ ತು ವಿಪ್ರಾಗ್ರ್ಯೇ ಗೋಷ್ವಙ್ಗ ಯವಸಾಧಿನಾ ॥ 43 ॥**

43. ಅಪ್ಪ, ಸೂರ್ಯನನ್ನು ವೇದಸೂಕ್ತಗಳಿಂದ ಹೊಗಳುವದರಿಂದಲೂ, ಹವಿಸ್ಸುಗಳಿಂದ ಹೋಮಮಾಡುವದರ ಮೂಲಕ ಅಗ್ನಿಯಲ್ಲಿಯೂ, ಬ್ರಾಹ್ಮಣಶ್ರೇಷ್ಠನಿಗೆ ಆತಿಥ್ಯಸತ್ಕಾರಗಳನ್ನು ಕೊಡುವದರಿಂದಲೂ, ಗೋವುಗಳಿಗೆ ಹುಲ್ಲು ಮುಂತಾದ ಗ್ರಾಸಗಳನ್ನು ಕೊಡುವ ಮೂಲಕವೂ ನನ್ನನ್ನು ಆರಾಧಿಸಬೇಕು.

**ವೈಷ್ಣವೇ ಬನ್ಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ ।**
**ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ ॥ 44 ॥**

44. ವಿಷ್ಣುಭಕ್ತನನ್ನು ಸಂಬಂಧಿಯಂತೆ ಗೌರವಿಸುವದರಿಂದ, ಹೃದಯಾಕಾಶದಲ್ಲಿ ಧ್ಯಾನನಿಷ್ಠೆಯಿಂದ, ವಾಯುವಿನಲ್ಲಿ ಪ್ರಾಣದೃಷ್ಟಿಯಿಂದ, ನೀರಿನಲ್ಲಿ ನೀರೇ ಮೊದಲಾದ ದ್ರವ್ಯಗಳಿಂದ ತರ್ಪಣಾದಿಗಳನ್ನು ಮಾಡುವದರ ಮೂಲಕ (ನನ್ನನ್ನು ಪೂಜಿಸಬೇಕು.)

**ಸ್ಥಣ್ಡಿಲೇ ಮನ್ತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ ।**
**ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್ ॥ 45 ॥**

45. ಭೂಮಿಯಲ್ಲಿ ರಹಸ್ಯಮಂತ್ರನ್ಯಾಸಗಳಿಂದ, ತನ್ನ ಶರೀರದಲ್ಲಿ (ಧರ್ಮಾವಿರುದ್ಧವಾದ) ಭೋಗಗಳನ್ನನುಭವಿಸುವದರಿಂದ, ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಆತ್ಮನು ಒಬ್ಬನೇ, ಸಮನೇ – ಎಂದೂ ನನ್ನನ್ನು ಆರಾಧಿಸಬೇಕು.

**ಧಿಷ್ಣ್ಯೇಷ್ವೇಷ್ವಿತಿ ಮದ್ರೂಪಂ ಶಙ್ಖಚಕ್ರಗದಾಮ್ಬುಜೈಃ ।**
**ಯುಕ್ತಂ ಚತುರ್ಭುಜಂ ಶಾನ್ತಂ ಧ್ಯಾಯನ್ನರ್ಚೇತ್ ಸಮಾಹಿತಃ ॥ 46 ॥**

46. ಈವರಗೆ ಹೇಳಿದ ಸ್ಥಾನಗಳಲ್ಲಿ ಶಂಖಚಕ್ರಗದಾಪದ್ಮಗಳಿಂದ ಕೂಡಿದ ಚತುರ್ಭುಜವುಳ್ಳ ಶಾಂತವಾದ ನನ್ನ ರೂಪವನ್ನು ಮನಸ್ಸಮಾಧಾನದಿಂದ ಕೂಡಿ ಧ್ಯಾನಿಸುತ್ತಾ ಪೂಜಿಸಬೇಕು.

**ಇಷ್ಟಾಪೂರ್ತೇನ ಮಾಮೇವಂ ಯೋ ಯಜೇತ ಸಮಾಹಿತಃ ।**
**ಲಭತೇ ಮಯಿ ಸದ್ಭಕ್ತಿಂ ಮತ್ಸ್ಮೃತಿಃ ಸಾಧುಸೇವಯಾ ॥ 47 ॥**

47. ಯಾವನು ಹೀಗೆ ಸಮಾಹಿತನಾಗಿ ಇಷ್ಟಾಪೂರ್ತಕರ್ಮಗಳಿಂದ

ನನ್ನನ್ನು ಆರಾಧಿಸುವನೋ ಅವನು ಸಾಧುಗಳ ಸೇನೆಯಿಂದ ನನ್ನ ನೆನಪುಳ್ಳವನಾಗಿ ನನ್ನಲ್ಲಿ ಉತ್ತಮವಾದ ಭಕ್ತಿಯನ್ನು ಪಡೆಯುವನು.

**ಪ್ರಾಯೇಣ ಭಕ್ತಿಯೋಗೇನ ಸತ್ಸಙ್ಗೇನ ವಿನೋದ್ಧವ ।**
**ನೋಪಾಯೋ ವಿದ್ಯತೇ ಸಮ್ಯಕ್ ಪ್ರಾಯಣಂ ಹಿ ಸತಾಮಹಮ್ ॥ 48 ॥**

48. ಎಲೈ ಉದ್ಧವನೆ, ಸತ್ಸಂಗದಿಂದ ದೊರಕುವ ಭಕ್ತಿಯೋಗವಲ್ಲದೆ ಬೇರೆ ಯಾವ ಉತ್ತಮ ಉಪಾಯವೂ (ಸಂಸಾರತರಣಕ್ಕೆ) ಇರುವದಿಲ್ಲ. ಏಕೆಂದರೆ ನಾನೇ ಸಜ್ಜನರಿಗೆ ಪರಮವಾದ ಆಶ್ರಯಸ್ಥಾನವು.

**ಅಥೈತತ್ ಪರಮಂ ಗುಹ್ಯಂ ಶೃಣ್ವತೋ ಯದುನನ್ದನ ।**
**ಸುಗೋಪ್ಯಮಪಿ ವಕ್ಷ್ಯಾಮಿ ತ್ವಂ ಮೇ ಭೃತ್ಯಃ ಸುಹೃತ್ ಸಖಾ ॥ 49 ॥**

49. ಎಲೈ ಯದುನಂದನನೆ, (ನನ್ನಿಂದ ತತ್ತ್ವವನ್ನು) ಕೇಳುತ್ತಿರುವ ನಿನಗೆ ಹೆಚ್ಚಿನ ಗೋಪ್ಯವಾಗಿದ್ದರೂ ಪರಮವಾದ ಈ ರಹಸ್ಯವನ್ನು ಹೇಳುವೆನು. ಏಕೆಂದರೆ ನೀನು ನನ್ನ (ಮೆಚ್ಚಿನ) ಸೇವಕನು, ಸ್ನೇಹಿತನು, ಮಿತ್ರನೂ (ಆಗಿದ್ದೀಯೆ).

*****

## ಪರಮಾತ್ಮಪದವಿಯನ್ನು ಪಡೆದುಕೊಳ್ಳುವ ಬಗೆ

### (ಹನ್ನೊಂದನೆಯ ಸ್ಕಂದ, ಹನ್ನೆರಡನೆಯ ಅಧ್ಯಾಯ)

**ನ ರೋಧಯತಿ ಮಾಂ ಯೋಗೋ ನ ಸಾಙ್ಖ್ಯಂ ಧರ್ಮ ಏವ ವಾ ।**
**ನ ಸ್ವಾಧ್ಯಾಯಸ್ತಪಸ್ತ್ಯಾಗೋ ನೇಷ್ಟಾಪೂರ್ತಂ ನ ದಕ್ಷಿಣಾ ॥ 1 ॥**

**ವ್ರತಾನಿ ಯಜ್ಞ ಚ್ಛನ್ದಾಂಸಿ ತೀರ್ಥಾನಿ ನಿಯಮಾ ಯಮಾಃ ।**
**ಯಥಾऽವರುನ್ಧೇ ಸತ್ಸಙ್ಗಃ ಸರ್ವಸಙ್ಗಾಪಹೋ ಹಿ ಮಾಮ್ ॥ 2 ॥**

1–2. ಯೋಗವಾಗಲಿ, ಆತ್ಮಾನಾತ್ಮವಿವೇಕ, ಧರ್ಮ, ವೇದಾಧ್ಯಯನ, ತಪಸ್ಸು, ಸಂನ್ಯಾಸ, ಇಷ್ಟಾಪೂರ್ತಕರ್ಮಗಳು, ದಾನದಕ್ಷಿಣೆಗಳು, ವ್ರತನಿಯಮಗಳು, ಯಜ್ಞಗಳು, ಮಂತ್ರಗಳು, ತೀರ್ಥಗಳು, ಯಮನಿಯಮಗಳು – ಇವು ಯಾವವೂ ನನ್ನನ್ನು ವಶಗೊಳಿಸಿಕೊಳ್ಳಲಾರವು. ಸರ್ವಸಂಗ(ದೋಷ) ಗಳನ್ನೂ ಪರಿಹರಿಸುವ ಸತ್ಸಂಗವೊಂದೇ ನನ್ನನ್ನು ವಶಮಾಡಿಕೊಳ್ಳಬಲ್ಲದು.

**ಸತ್ಸಙ್ಗೇನ ಹಿ ದೈತೇಯಾ ಯಾತುಧಾನಾಃ ಖಗಾ ಮೃಗಾಃ ।**
**ಗನ್ಧರ್ವಾಪ್ಸರಸೋ ನಾಗಾಃ ಸಿದ್ಧಾಶ್ಚಾರಣಗುಹ್ಯಕಾಃ ॥ 3 ॥**

**ವಿದ್ಯಾಧರಾ ಮನುಷ್ಯೇಷು ವೈಶ್ಯಾಃ ಶೂದ್ರಾಃ ಸ್ತ್ರಿಯೋಽನ್ತ್ಯಜಾಃ ।**
**ರಜಃಸ್ತಮಃಪ್ರಕೃತಯೋ ತಸ್ಮಿಂಸ್ತಸ್ಮಿನ್ ಯುಗೇಽನಘ ॥ 4 ॥**

3–4. ಎಲೈ ಪಾಪರಹಿತನಾದ ಉದ್ಧವನೆ, ದೈತ್ಯರು, ರಾಕ್ಷಸರು, ಪಕ್ಷಿವರ್ಗದವರು, ಮೃಗಗಳು, ಗಂಧರ್ವರು, ಅಪ್ಸರೆಯರು ನಾಗದೇವತೆಗಳು, ಸಿದ್ಧರು, ಚಾರಣರು, ಗುಹ್ಯಕರು, ವಿದ್ಯಾಧರರು, ಮನುಷ್ಯರಲ್ಲಿ (ಪಾಪಯೋನಿಗಳಾದ) ವೈಶ್ಯರು, ಶೂದ್ರರು, ಸ್ತ್ರೀಯರು, ಅಂತ್ಯಜರು, ರಜೋಗುಣತಮೋಗುಣಗಳಿಂದ ಕೂಡಿದ ಆಯಾ ಯುಗದಲ್ಲಿದ್ದ ಜೀವರುಗಳು – ಎಲ್ಲರೂ ಸತ್ಸಂಗದಿಂದ (ನನ್ನ ಪದವಿಯನ್ನು ಪಡೆದುಕೊಂಡಿರುತ್ತಾರೆ.)

**ಬಹವೋ ಮತ್ಪದಂ ಪ್ರಾಪ್ತಾ ತ್ವಾಷ್ಟ್ರಕಾಯಾಧವಾದಯಃ ।**
**ವೃಷಪರ್ವಾ ಬಲಿರ್ಬಾಣೋ ಮಯಶ್ಚಾಥ ವಿಭೀಷಣಃ ॥ 5 ॥**

**ಸುಗ್ರೀವೋ ಹನುಮಾನೃಕ್ಷೋ ಗಜೋ ಗೃಧ್ರೋ ವಣಿಕ್ಪಥಃ ।**
**ವ್ಯಾಧಃ ಕುಬ್ಜಾ ವ್ರಜೇ ಗೋಪ್ಯಃ ಯಜ್ಞಪತ್ನ್ಯಸ್ತಥಾಽಪರೇ ॥ 6 ॥**

5–6. ವೃತ್ರಾಸುರ, ಪ್ರಹ್ಲಾದ, ವೃಷಪರ್ವ, ಬಲಿರಾಜ, ಬಾಣಾಸುರ, ಮಯ, ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತ, ಗಜೇಂದ್ರ, ಜಟಾಯು, ತುಲಾಧಾರ, ಧರ್ಮವ್ಯಾಧ, ದೀಕ್ಷಿತರಾದ ಋಷಿಗಳ ಪತ್ನಿಯರು – ಹೀಗೆ ಇನ್ನೂ ಎಷ್ಟೋ ಜನರು (ಸತ್ಸಂಗದಿಂದ) ನನ್ನ ಪದವಿಯನ್ನು ಪಡೆದುಕೊಂಡಿದ್ದಾರೆ.

**ತೇ ನಾಧೀತಶ್ರುತಿಗಣಾ ನೋಪಾಸಿತಮಹತ್ತಮಾಃ ।**
**ಅವ್ರತಾಽತಪ್ತತಪಸೋ ಸತ್ಸಙ್ಗಾನ್ಮಾಮುಪಾಗತಾಃ ॥ 7 ॥**

7. ಅವರುಗಳು ಯಾರೂ ವೇದರಾಶಿಗಳನ್ನು ಅಧ್ಯಯನ ಮಾಡಿದವರಲ್ಲ, ಮಹಾತ್ಮರುಗಳ ಸೇವೆಯನ್ನು ಮಾಡಿದವರಲ್ಲ, ವ್ರತನಿಷ್ಠರಲ್ಲ, ತಪಸ್ವಿಗಳೂ ಅಲ್ಲ, ಆದರೂ ಕೇವಲ ಸತ್ಸಂಗವೊಂದರಿಂದಲೇ ನನ್ನನ್ನು ಬಂದು ಸೇರಿದರು.

**ಕೇವಲೇನ ಹಿ ಭಾವೇನ ಗೋಪ್ಯೋ ಗಾವೋ ನಗಾ ಮೃಗಾಃ ।**
**ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾ ಮಾಮೀಯುರಞ್ಜಸಾ ॥ 8 ॥**

8. ಗೋಪಿಯರು, ಗೋವುಗಳು, ಯಮಲಾರ್ಜುನಾದಿಗಳು, ಮೃಗಗಳು, ಇನ್ನೂ ಬೇರೆ ಕೆಲವು ಮೂಢಬುದ್ಧಿಯವರು, ಕಾಳೀಯನೇ ಮೊದಲಾದ ನಾಗಗಳು – ಇವರೆಲ್ಲರೂ ಸತ್ಸಂಗದಿಂದುಂಟಾದ ಭಕ್ತಿಭಾವದಿಂದ ಕೃತಕೃತ್ಯರಾಗಿ ನಿಜವಾಗಿಯೂ ನನ್ನನ್ನು ಪಡೆದರು.

**ಯನ್ನ ಯೋಗೇನ ಸಾಙ್ಖ್ಯೇನ ದಾನವ್ರತತಪೋಽಧ್ವರೈಃ ।**
**ವ್ಯಾಖ್ಯಾ ಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ ಯತ್ನವಾನಪಿ ॥ 9 ॥**

9. ಯೋಗಾಭ್ಯಾಸದಿಂದಲಾಗಲಿ, ಆತ್ಮಾನಾತ್ಮವಿವೇಕದಿಂದಲಾಗಲಿ ದಾನ, ವ್ರತ, ತಪಸ್ಸು, ಯಜ್ಞ, ಶಾಸ್ತ್ರವ್ಯಾಖ್ಯಾನ, ವೇದಾಧ್ಯಯನ, ಸಂನ್ಯಾಸ – ಇವುಗಳಿಂದಲಾಗಲಿ ಪ್ರಯತ್ನಶೀಲನೂ ಪಡೆದುಕೊಳ್ಳಲಾಗದಂಥ ನನ್ನ ಪದವಿಯನ್ನು (ಅವರುಗಳು ಪಡೆದುಕೊಂಡರು.)

**ತಸ್ಮಾತ್ ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್ ।**
**ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ ॥ 14 ॥**
**ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।**
**ಯಾಹಿ ಸರ್ವಾತ್ಮಭಾವೇನ ಮಯಾಸ್ಯಾ ಹ್ಯಕುತೋ ಭಯಃ ॥ 15 ॥**

14–15. ಎಲೈ ಉದ್ಧವನೆ, ಆದ್ದರಿಂದ ನೀನು ವಿಧಿನಿಷೇಧಗಳನ್ನೂ ಪ್ರವೃತ್ತಿನಿವೃತ್ತಿಗಳನ್ನೂ ಕೇಳಬೇಕಾದ್ದು, ಕೇಳಬಾರದ್ದು – ಎಂಬ ಭೇದಗಳೆಲ್ಲವನ್ನೂ ತ್ಯಾಗಮಾಡಿ ಸರ್ವದೇಹಿಗಳಿಗೂ ಆತ್ಮನಾಗಿರುವ ನನ್ನನ್ನೇ ಎಲ್ಲಾ ಭಾವದಿಂದಲೂ ಶರಣುಹೊಂದುವನಾಗು, ನನ್ನಿಂದ (ನನ್ನನ್ನು ಸೇರಿದ್ದರಿಂದ) ಭಯವೆಲ್ಲವನ್ನೂ ನೀಗಿಕೊಂಡು ಅಭಯಸ್ವರೂಪನಾಗು.

**ಉದ್ಧವ ಉವಾಚ –**

**ಸಂಶಯಃ ಶೃಣ್ವತೋ ವಾಚಂ ತವ ಯೋಗೇಶ್ವರೇಶ್ವರ ।**
**ನ ನಿವರ್ತತ ಆತ್ಮಸ್ಥೋ ಯೇನ ಭ್ರಾಮ್ಯತಿ ಮೇ ಮನಃ ॥ 16 ॥**

16. ಉದ್ಧವನಿಂತೆಂದನು: ಎಲೈ ಯೋಗೇಶ್ವರೇಶ್ವರನೇ, ನಿನ್ನ ಮಾತನ್ನು ಕೇಳುತ್ತಿರುವ ನನಗೆ ಒಳಗಿರುವ ಸಂಶಯವು ನಾಶವಾಗುತ್ತಿಲ್ಲವಲ್ಲ! ಇದರಿಂದ ನನ್ನ ಮನಸ್ಸು ಚಂಚಲವಾಗಿದೆ. (ಶಾಸ್ತ್ರೋಕ್ತಕರ್ಮವು ಅನುಷ್ಠೇಯವೊ, ತ್ಯಾಜ್ಯವೊ? ಎಂದು ಮನಸ್ಸಿನಲ್ಲಿ ಸಂದೇಹವಾಗಿದೆ.)

**ಶ್ರೀಭಗವಾನುವಾಚ –**

**ಸ ಏಷ ಜೀವೋ ವಿವರಪ್ರಸೂತಿಃ**
**ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ ।**
**ಮನೋಮಯಂ ಸೂಕ್ಷ್ಮಮುಪೇತ್ಯ ರೂಪಂ**
**ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಃ ॥ 17 ॥**

17. ಶ್ರೀಭಗವಂತನಿಂತೆಂದನು: ಈ ಜೀವನು ವ್ಯಕ್ತವಾದ ಪ್ರಾಣರೂಪದಿಂದ ಇಂದ್ರಿಯದ್ವಾರಗಳಮೂಲಕ ಶರೀರಗುಹೆಯನ್ನು ಪ್ರವೇಶಿಸಿ ಮನೋಮಯವಾದ ಸೂಕ್ಷ್ಮರೂಪವನ್ನು ಹೊಂದಿ (ಸಂಸಾರಿ)ಯಾಗಿದ್ದಾನೆ. ವಾಗಿಂದ್ರಿಯದ ಮೂಲಕ ಮಾತ್ರೆಗಳು, ಸ್ವರ, ವರ್ಣಗಳ ರೂಪದಿಂದ ಹೊರತೋರಿಕೊಂಡಿರುವನು.

**ಯಥಾऽನಲಃ ಖೇऽನಿಲಬನ್ಧುರೂಷ್ಮಾ**
**ಬಲೇನ ದಾರುಣ್ಯಭಿಮಥ್ಯಮಾನಃ ।**
**ಅಣುಃ ಪ್ರಜಾತೋ ಹವಿಷಾ ಸಮಿಧ್ಯತೇ**
**ತಥೈವ ಮೇ ವ್ಯಕ್ತಿರಿಯಂ ಹಿ ವಾಣೀ ॥ 18 ॥**

18. ಹೇಗೆ ಆಕಾಶದಲ್ಲಿ ಅಗ್ನಿಯು ವಾಯುವಿನ ಸಹಾಯದಿಂದ ಮರದಲ್ಲಿ ಮಥಿಸಲ್ಪಟ್ಟವನಾಗಿ ಅಣುವಾಗಿದ್ದವನು ಹವಿಸ್ಸಿನಿಂದ ಪ್ರಜ್ವಲಿತನಾಗುವನೋ ಹಾಗೆಯೇ ಈ ನನ್ನ ವಾಕ್ಕು ಅಭಿವ್ಯಕ್ತವಾಗಿರುವದು.

**ಏವಂ ಗದಿಃ ಕರ್ಮ ಗತಿರ್ವಿಸರ್ಗೋ**
**ಘ್ರಾಣೋ ರಸೋ ದೃಕ್ ಸ್ಪರ್ಶಃ ಶ್ರುತಿಶ್ಚ ।**
**ಸಂಕಲ್ಪವಿಜ್ಞಾನಮಥಾಭಿಮಾನಃ**
**ಸೂತ್ರಂ ರಜಃ ಸತ್ತ್ವತಮೋವಿಕಾರಃ ॥ 19 ॥**

19. ಹೀಗೆಯೇ ಮಾಡು, ಕೈಕೆಲಸ, ನಡೆಯುವಿಕೆ, ಮಲವಿಸರ್ಗ, ಗಂಧಗ್ರಹಣ, ರುಚಿನೋಡುವಿಕೆ, ನೋಟ, ಸ್ಪರ್ಶ, ಕೇಳುವಿಕೆ, ಮನಸ್ಸಿನ ವ್ಯಾಪಾರಗಳಾದ ಸಂಕಲ್ಪ, ವಿಜ್ಞಾನ, ಅಭಿಮಾನಗಳು, ಸೂತ್ರಾತ್ಮನು, ಸತ್ತ್ವರಜಸ್ತಮೋಗುಣಗಳು – (ಈ ಎಲ್ಲವೂ ನನ್ನ ಅಭಿವ್ಯಕ್ತಿಗಳೇ ಆಗಿವೆ).

**ಅಯಂ ಹಿ ಜೀವಸ್ತ್ರಿವೃದಬ್ಜಯೋನಿ-**
**ರವ್ಯಕ್ತ ಏಕೋ ವಯಸಾ ಸ ಆದ್ಯಃ ।**
**ವಿಶ್ಲಿಷ್ಟಶಕ್ತಿಃ ಬಹುಧೇವ ಭಾತಿ**
**ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್ ॥ 20 ॥**

20. ಈ ಜೀವರೂಪನಾದ ತ್ರಿಗುಣಾತ್ರಯನಾದ ಪದ್ಮಯೋನಿಯಾದ ಬ್ರಹ್ಮನು ಅವ್ಯಕ್ತನು, ಏಕನು, ಎಲ್ಲರಿಗಿಂತ ಹಿರಿಯನು, ಮಾಯಾಶಕ್ತಿಯಿಂದಾವೃತನು. ಆದ್ದರಿಂದಲೇ ಬೀಜಗಳು ಭೂಮಿಯನ್ನು ಹೊಕ್ಕು ಹೇಗೆ ಬೇರೆಬೇರೆ ರೂಪಗಳಾಗುವವೋ ಹಾಗೆ ನಾನಾರೂಪನಾಗಿರುವಂತೆ ತೋರುವನು.

**ಯಸ್ಮಿನ್ನಿದಂ ಪ್ರೋತಮಶೇಷಮೋತಂ**
**ಪಟೋ ಯಥಾ ತನ್ತುವಿತಾನಸಂಸ್ಥಃ ।**
**ಯ ಏಷ ಸಂಸಾರತರುಃ ಪುರಾಣಃ**
**ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥ 21 ॥**

21. ಹೇಗೆ ಬಟ್ಟೆಯನ್ನೆಲ್ಲ ನೂಲುಗಳು ವ್ಯಾಪಿಸಿಕೊಂಡಿರುವವೋ ಹಾಗೆ ಯಾವ ಭಗವಂತನಲ್ಲಿ ಈ (ಚರಾಚರ) ಜಗತ್ತೆಲ್ಲವೂ ಹಾಸುಹೊಕ್ಕಾಗಿ ಹೆಣೆದುಕೊಂಡಿರುವವೋ ಈ ಕರ್ಮಾತ್ಮಕವಾದ, ಪುರಾತನವಾದ ಸಂಸಾರವೆಂಬ ವೃಕ್ಷವು (ಭೋಗರೂಪವಾದ) ಹೂಹಣ್ಣುಗಳನ್ನು ಪ್ರಸವಿಸುತ್ತದೆ.

**ದ್ವೇ ಅಸ್ಯ ಬೀಜೇ ಶತಮೂಲಸ್ತ್ರಿನಾಲಃ**
**ಪಞ್ಚಸ್ಕನ್ಧಃ ಪಞ್ಚರಸಪ್ರಸೂತಿಃ ।**
**ದಶೈಕಶಾಖೋ ದ್ವಿಸುಪರ್ಣನೀಡಃ**
**ತ್ರಿವಲ್ಕಲೋ ದ್ವಿಫಲೋಽರ್ಕಂ ಪ್ರವಿಷ್ಟಃ ॥ 22 ॥**

22. ಈ (ಸಂಸಾರವೃಕ್ಷಕ್ಕೆ) ಪುಣ್ಯಪಾಪಗಳೆಂಬ ಎರಡು ಬೀಜಗಳು. ಅಪರಿಮಿತವಾದ ವಾಸನೆಗಳೇ ಬೇರು. ಮೂರು ಗುಣಗಳೇ ಕಾಂಡವು. ಪಂಚಭೂತಗಳೇ ಕೊಂಬೆಗಳು, ಐದು ಶಬ್ದಾದಿವಿಷಗಯಗಳೇ ಚಿಗುರುಗಳು. ಹನ್ನೊಂದು ಇಂದ್ರಿಯಗಳೇ ರೆಂಬೆಗಳು, ಜೀವಪರಮೇಶ್ವರರೆಂಬ ಎರಡು ಹಕ್ಕಿಗಳಿಗೆ ಇದು ಗೂಡೂ ಆಗಿದೆ. ಇದಕ್ಕೆ ವಾತಪಿತ್ತಶ್ಲೇಷ್ಮಗಳೆಂಬ ಮೂರು ತೊಗಟೆಗಳು, ಸುಖದುಃಖಗಳೇ ಫಲವು. ಇದು ಸೂರ್ಯಮಂಡಲದವರೆಗೂ ವ್ಯಾಪಿಸಿ ಬೆಳೆದಿರುವದು.

**ಅದನ್ತಿ ಚೈಕಂ ಫಲಮಸ್ಯ ಗೃಧ್ರಾಃ**
**ಗ್ರಾಮೇಚರಾ ಏಕಮರಣ್ಯವಾಸಾಃ ।**
**ಹಂಸಾ ಯ ಏಕಂ ಬಹುರೂಪಮಿಜ್ಯೈಃ**
**ಮಾಯಾಮಯಂ ವೇದ ಸ ವೇದ ಸರ್ವಮ್ ॥ 23 ॥**

23. ಗ್ರಾಮವಾಸಿಗಳಾದ ಗೃಹಸ್ಥರು ಈ ವೃಕ್ಷದ (ದುಃಖ)ವೆಂಬ ಒಂದು ಹಣ್ಣನ್ನು ತಿನ್ನುತ್ತಾರೆ. ಅರಣ್ಯವಾಸಿಗಳಾದ ಪರಮಹಂಸರಾದ (ಸಂನ್ಯಾಸಿಗಳು) ಸುಖವೆಂಬ ಮತ್ತೊಂದು ಹಣ್ಣನ್ನು ತಿನ್ನುತ್ತಾರೆ. ಏಕನಾದರೂ ಮಾಯೆಯಿಂದ ಬಹುರೂಪನಾದ ಇವನನ್ನು ಪೂಜ್ಯರಾದ ಗುರುಗಳ ಮೂಲಕ ಯಾವನು ಅರಿಯುವನೋ ಅವನು ಎಲ್ಲವನ್ನೂ ಅರಿತವನಾಗುವನು.

*****

## ಹಂಸರೂಪದಿಂದ ಸನಕಾದಿಗಳಿಗೆ ಮಾಡಿದ ಉಪದೇಶದ ವರ್ಣನೆ

### (ಹನ್ನೊಂದನೆಯ ಸ್ಕಂಧ, ಹದಿಮೂರನೆಯ ಅಧ್ಯಾಯ)

**ಶ್ರೀಭಗವಾನುವಾಚ** –

**ಸತ್ತ್ವಂ ರಜಸ್ತಮ ಇತಿ ಗುಣಾ ಬುದ್ಧೇರ್ನ ಚಾತ್ಮನಃ ।**
**ಸತ್ತ್ವೇನಾನ್ಯತಮೌ ಹನ್ಯಾತ್ ಸತ್ತ್ವಂ ಸತ್ತ್ವೇನ ಚೈವ ಹಿ ॥ 1 ॥**

1. ಶ್ರೀಭಗವಂತನಿಂತೆಂದನು: ಸತ್ತ್ವ, ರಜಸ್ಸು, ತಮಸ್ಸು – ಎಂಬಿವು ಬುದ್ಧಿಯ ಗುಣಗಳು, ಆತ್ಮನವಲ್ಲ. ಸತ್ತ್ವಗುಣದಿಂದ ಉಳಿದೆರಡನ್ನೂ ಗೆಲ್ಲಬೇಕು. ಸತ್ತ್ವವನ್ನು (ಶುದ್ಧ)ಸತ್ತ್ವಗುಣದಿಂದಲೇ ಗೆಲ್ಲಬೇಕು.

**ಸತ್ತ್ವಾದ್ಧರ್ಮೋ ಭವೇದ್ ವೃದ್ಧಾತ್ ಪುಂಸೋ ಮದ್ಭಕ್ತಿಲಕ್ಷಣಃ ।**
**ಸಾತ್ತ್ವಿಕೋಪಾಸಯಾ ಸತ್ತ್ವಂ ತತೋ ಧರ್ಮಃ ಪ್ರವರ್ತತೇ ॥ 2 ॥**

2. ಸತ್ತ್ವಗುಣವು ಬೆಳೆದುಕೊಂಡಂತೆಲ್ಲ ಮನುಷ್ಯನಿಗೆ ನನ್ನ ಭಕ್ತಿರೂಪವಾದ ಧರ್ಮವು ಉಂಟಾಗುವದು. ಸಾತ್ತ್ವಿಕಪದಾರ್ಥಗಳನ್ನು ಸೇವಿಸುವದರಿಂದ ಸತ್ತ್ವಗುಣವೂ ಅದರಿಂದ ಧರ್ಮವೂ ಪ್ರಾಪ್ತವಾಗುತ್ತದೆ.

**ಧರ್ಮೋ ರಜಸ್ತಮೋ ಹನ್ಯಾದ್ ಸತ್ತ್ವವೃದ್ಧಿರನುತ್ತಮಃ ।**
**ಆಶು ನಶ್ಯತಿ ತನ್ಮೂಲೋ ಹ್ಯಧರ್ಮ ಉಭಯೇ ಹತೇ ॥ 3 ॥**

3. ಸತ್ತ್ವವನ್ನು ಬೆಳೆಸುವ ಸರ್ವೋತ್ತಮವಾದ ಧರ್ಮವು ರಜಸ್ತಮೋಗುಣಗಳನ್ನು ನಾಶಮಾಡುವದು. ಇವೆರಡೂ ನಾಶವಾಗಲು ಇವುಗಳಿಗೆ ಮೂಲವಾದ ಅಧರ್ಮವು ನಾಶವಾಗುವದು.

**ಆಗಮೋಽಪಃ ಪ್ರಜಾ ದೇಶಃ ಕಾಲಃ ಕರ್ಮ ಚ ಜನ್ಮ ಚ ।**
**ಧ್ಯಾನಂ ಮನ್ತ್ರೋಽಥ ಸಂಸ್ಕಾರೋ ದಶೈತೇ ಗುಣಹೇತವಃ ॥ 4 ॥**

4. ಶಾಸ್ತ್ರ, ಜಲ, ಜನ, ದೇಶ, ಕಾಲ, ಕರ್ಮ, ಹುಟ್ಟು, ಧ್ಯಾನ, ಮಂತ್ರ, ಸಂಸ್ಕಾರ – ಇವು ಹತ್ತೂ ಗುಣಗಳಿಗೆ ಕಾರಣಗಳು.

**ತತ್ತತ್ ಸಾತ್ತ್ವಿಕಮೇವೈಷಾಂ ಯದ್ಯದ್ ವೃದ್ಧಾಃ ಪ್ರಚಕ್ಷತೇ ।**
**ನಿನ್ದನ್ತಿ ತಾಮಸಂ ತತ್ತದ್ರಾಜಸಂ ತದುಪೇಕ್ಷಿತಮ್ ॥ 5 ॥**

5. ಇವುಗಳಲ್ಲಿಯೇ ಶಾಸ್ತ್ರಜ್ಞರು ಯಾವಯಾವದನ್ನು ಹೊಗಳುವರೋ ಅದು ಸಾತ್ತ್ವಿಕವು. ಅವರು ನಿಂದೆಮಾಡಿದ್ದು ತಾಮಸವು. ಅವರು ಉದಾಸೀನಮಾಡಿ ಬಿಟ್ಟಿದ್ದು ರಾಜಸವು.

**ಸಾತ್ತ್ವಿಕಾನ್ಯೇವ ಸೇವೇತ ಪುಮಾನ್ ಸತ್ತ್ವವಿವೃದ್ಧಯೇ ।**
**ತತೋ ಧರ್ಮಸ್ತತೋ ಜ್ಞಾನಂ ಯಾವತ್ ಸ್ಮೃತಿರಪೋಹನಮ್ ॥ 6 ॥**

6. ಮನುಷ್ಯನು ಸತ್ತ್ವಗುಣವನ್ನು ಬೆಳೆಸಿಕೊಳ್ಳಲು ಸಾತ್ತ್ವಿಕಪದಾರ್ಥಗಳನ್ನೇ ಸೇವಿಸಬೇಕು. ಅದರಿಂದ ಧರ್ಮವೂ ಜ್ಞಾನವೂ ಭಗವತ್‌ಸ್ಮೃತಿಯೂ ರಜಸ್ತಮೋಗುಣಗಳ ನಾಶವೂ ಪ್ರಾಪ್ತವಾಗುವವು.

**ವೇಣುಸಂಘರ್ಷಜೋ ವಹ್ನಿಃ ದಗ್ಧ್ವಾ ಶಾಮ್ಯತಿ ತದ್ವನಮ್ ।**
**ಏವಂ ಗುಣವ್ಯತ್ಯಯಜೋ ದೇಹಃ ಶಾಮ್ಯತಿ ತತ್ಕ್ರಿಯಃ ॥ 7 ॥**

7. ಬಿದಿರಮೆಳೆಗಳ ಉಜ್ಜುವಿಕೆಯಿಂದ ಹುಟ್ಟಿದ ಬೆಂಕಿಯು ಹೇಗೆ ಆ ಕಾಡನ್ನು ಸುಟ್ಟು ತಣ್ಣಗಾಗುವದೋ ಹಾಗೆಯೇ ಗುಣಗಳ ಕ್ಷೋಭೆಯಿಂದುಂಟಾದ ದೇಹವು ಬೆಂಕಿಯಂತೆ ಗುಣಗಳನ್ನು ಸುಟ್ಟು ತಾನೂ ಇಲ್ಲವಾಗುವದು.

**ಉದ್ಧವ ಉವಾಚ –**

**ವಿದನ್ತಿ ಮರ್ತ್ಯಾಃ ಪ್ರಾಯೇಣ ವಿಷಯಾನ್ ಪದಮಾಪದಾಮ್ ।**
**ತಥಾಪಿ ಭುಞ್ಜತೇ ಕೃಷ್ಣ ತತ್ಕಥಂ ಶ್ವಖರಾಜವತ್ ॥ 8 ॥**

8. ಉದ್ಧವನಿಂತೆಂದನು: ಎಲೈ ಕೃಷ್ಣನೆ, ಮನುಷ್ಯರು ಪ್ರಾಯಶಃ ವಿಷಯ ಸೇವನೆಯು ದುಃಖಕ್ಕೆ ಕಾರಣವೆಂದು ತಿಳಿದಿದ್ದರೂ ನಾಯಿ, ಕತ್ತೆ, ಆಡುಗಳಂತೆ ಆ ವಿಷಯಗಳನ್ನೇ ಮತ್ತೆ ಭೋಗಿಸುವರಲ್ಲ, ಇದು ಹೇಗೆ?

**ಶ್ರೀಭಗವಾನುವಾಚ –**

**ಅಹಮಿತ್ಯನ್ಯಥಾಬುದ್ಧಿಃ ಪ್ರಮತ್ತಸ್ಯ ಯಥಾ ಹೃದಿ ।**
**ಉತ್ಸರ್ಪತಿ ರಜೋ ಘೋರಂ ತತೋ ವೈಕಾರಿಕಂ ಮನಃ ॥ 9 ॥**

**ರಜೋಯುಕ್ತಸ್ಯ ಮನಸಃ ಸಂಕಲ್ಪಃ ಸವಿಕಲ್ಪಕಃ ।**
**ತತಃ ಕಾಮೋ ಗುಣಧ್ಯಾನಾದ್ದುಸ್ಸಹಃ ಸ್ಯಾದ್ಧಿ ದುರ್ಮತೇ ॥ 10 ॥**

9–10. ಭಗವಂತನಿಂತೆಂದನು: ವಿವೇಕಶೂನ್ಯನಾದವನಿಗೆ ಅವನ ಚಿತ್ತದಲ್ಲಿ ನಾನು ಎಂಬ ಮಿಥ್ಯಾಬುದ್ಧಿಯು ಎದ್ದುಕೊಳ್ಳಲಾಗಿ ದುಃಖಾತ್ಮಕವಾದ ರಜೋಗುಣವೂ ಅದರ ವಿಕಾರವಾದ ಮನಸ್ಸೂ ಆಗುವವು. ರಜೋಗುಣ ದಿಂದ ಕೂಡಿದ ಮನಸ್ಸಿಗೆ ವಿಷಯವಿಕಲ್ಪಗಳಿಂದ ಕೂಡಿದ ಸಂಕಲ್ಪವೂ ಗುಣಗಳ ಚಿಂತನೆಯಿಂದ ಕಾಮವೂ ಎದ್ದುಕೊಂಡು ಆ ಮೂರ್ಖನಿಗೆ ದುಃಸಹವಾದ (ಸಂಸಾರವಾಸನೆ)ಯುಂಟಾಗುವದು.

**ಕರೋತಿ ಕಾಮವಶಗಃ ಕರ್ಮಾಣ್ಯವಿಜಿತೇನ್ದ್ರಿಯಃ ।**
**ದುಃಖೋದರ್ಕಾಣಿ ಸಂಪಶ್ಯನ್ ರಜೋವೇಗವಿಮೋಹಿತಃ ॥ 11 ॥**

11. ಕಾಮವಶನಾದ ಜಿತೇಂದ್ರಿಯನಲ್ಲದ, ರಜೋಗುಣದ ಹೊಡೆತ ದಿಂದ ಮೂಢನಾದ (ಜೀವನು) ದುಃಖವೊಂದೇ ಫಲವಾಗುಳ್ಳ ಕರ್ಮಗಳನ್ನು ಹಾಗೆಂದು ಬಲ್ಲವನಾದರೂ ಮಾಡುತ್ತಾನೆ.

**ರಜಸ್ತಮೋಭ್ಯಾಂ ಯದಪಿ ವಿದ್ವಾನ್ ವಿಕ್ಷಿಪ್ತಧೀಃ ಪುನಃ ।**
**ಅತನ್ದ್ರಿತೋ ಮನೋ ಯುಞ್ಜನ್ ದೋಷದೃಷ್ಟಿರ್ನ ಸಜ್ಜತೇ ॥ 12 ॥**

12. ರಜಸ್ತಮೋಗುಣಗಳಿಂದ ಚದರಿದ ಮನಸ್ಸುಳ್ಳವನಾದರೂ ವಿವೇಕಿಯು

ವಿಷಯಗಳಲ್ಲಿ ದೋಷದೃಷ್ಟಿಯುಳ್ಳವನಾಗಿ ಬೇಜಾರಿಲ್ಲದೆ ಮನಸ್ಸನ್ನು ಯೋಗದಲ್ಲಿ ತೊಡಗಿಸಿದವನಾದರೆ ದುಃಖಗಳಿಗೆ ಅಂಟಿಕೊಳ್ಳುವದಿಲ್ಲ.

**ಅಪ್ರಮತ್ತೋ ನಿಯುಞ್ಜೀತ ಮನೋ ಮಯ್ಯರ್ಪಯನ್ ಶನೈಃ ।**
**ಅನಿರ್ವಿಣ್ಣೋ ಯಥಾಕಾಲಂ ಜಿತಶ್ವಾಸೋ ಜಿತಾಸನಃ ॥ 13 ॥**

13. ಸಾಧಕನು ಪ್ರಮಾದವಿಲ್ಲದೆ ಆಸನಜಯ, ಪ್ರಾಣಾಯಾಮಾದಿಗಳಿಂದ ಕೂಡಿ ನಿರಾಶೆಗೊಳ್ಳದೆ ಕಾಲಾನುಗುಣವಾಗಿ ಮೆಲ್ಲಮೆಲ್ಲನೆ ಮನಸ್ಸನ್ನು ನನ್ನಲ್ಲಿ ಅರ್ಪಿಸುತ್ತಾ ಯೋಗತತ್ಪರನಾಗಬೇಕು.

**ಏತಾವಾನ್ ಯೋಗ ಆದಿಷ್ಟೋ ಮಚ್ಛಿಷ್ಯೈಃ ಸನಕಾದಿಭಿಃ ।**
**ಸರ್ವತೋ ಮನ ಆಕೃಷ್ಯ ಮಯ್ಯದ್ಧಾವೇಶ್ಯತೇ ಯಥಾ ॥ 14 ॥**

14. ಸನಕನೇ ಮೊದಲಾದ ನನ್ನ ಶಿಷ್ಯರಿಂದ ಉಪದೇಶಿಲ್ಪಟ್ಟ ಯೋಗವೆಂಬುದು ಇಷ್ಟೇ. ಏನೆಂದರೆ (ವಿಷಯ)ಗಳೆಲ್ಲದರಿಂದಲೂ ಮನಸ್ಸನ್ನು ಹಿಂತಿರುಗಿಸಿ (ಭಗವಂತನಾದ) ನನ್ನಲ್ಲಿ ಇಡುವದೇ ಆಗಿದೆ.

**ಉದ್ಧವ ಉವಾಚ –**

**ಯದಾ ತ್ವಂ ಸನಕಾದಿಭ್ಯೋ ಯೇನ ರೂಪೇಣ ಕೇಶವ ।**
**ಯೋಗಮಾದಿಷ್ಟವಾನೇತದ್ರೂಪಮಿಚ್ಛಾಮಿ ವೇದಿತುಮ್ ॥ 15 ॥**

15. ಉದ್ಧವನಿಂತೆಂದನು: ಎಲೈ ಕೇಶವನೆ, ನೀನು ಸನಕಾದಿಗಳಿಗೆ ಯಾವಾಗ ಯೋಗೋಪದೇಶವನ್ನು ಮಾಡಿದೆಯೋ ಆಗ ಯಾವ ರೂಪದಿಂದ ಉಪದೇಶಿಸಿದೆ – ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ.

**ಶ್ರೀಭಗವಾನುವಾಚ –**

**ಪುತ್ರಾ ಹಿರಣ್ಯಗರ್ಭಸ್ಯ ಮಾನಸಾಃ ಸನಕಾದಯಃ ।**
**ಪಪ್ರಚ್ಛುಃ ಪಿತರಂ ಸೂಕ್ಷ್ಮಾಂ ಯೋಗಸ್ಯೈಕಾನ್ತಿಕೀಂ ಗತಿಮ್ ॥ 16 ॥**

16. ಶ್ರೀಭಗವಂತನಿಂತೆಂದನು: ಹಿರಣ್ಯಗರ್ಭಬ್ರಹ್ಮನ ಮಾನಸ ಪುತ್ರರಾದ ಸನಕಾದಿಗಳು ಯೋಗದ ನಿಶ್ಚಯವಾದ ಸೂಕ್ಷ್ಮಗತಿಯ ವಿಚಾರವಾಗಿ ತಂದೆಯನ್ನು ಕೇಳಿದರು.

**ಸನಕಾದಯ ಊಚುಃ–**

**ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।**
**ಕಥಮನ್ಯೋನ್ಯಸಂತ್ಯಾಗೋ ಮುಮುಕ್ಷೋರತಿತಿತೀರ್ಷೋಃ ॥ 17 ॥**

17. ಸನಕನೇ ಮೊದಲಾದವರೆಂದರು: ಪ್ರಭುವೇ, ಮನಸ್ಸು ಗುಣಗಳಲ್ಲಿಯೂ ಗುಣಗಳು ಮನಸ್ಸಿನಲ್ಲಿಯೂ ಪರಸ್ಪರವಾಗಿ ಸೇರಿಕೊಂಡಿರುವಲ್ಲಿ ಸಂಸಾರವನ್ನು ದಾಟಬೇಕೆಂದು ಮುಮುಕ್ಷುವಿಗೆ ಈ ಅನ್ಯೋನ್ಯಗಾಮಿಗಳಾದ ಗುಣಮನಸ್ಸುಗಳ ವಿಂಗಡವು ಹೇಗಾದೀತು?

**ಶ್ರೀಭಗವಾನುವಾಚ –**

**ಏವಂ ಪೃಷ್ಟೋ ಮಹಾದೇವಃ ಸ್ವಯಂಭೂರ್ಭೂತಭಾವನಃ ।**
**ಧ್ಯಾಯಮಾನಃ ಪ್ರಶ್ನಬೀಜಂ ನಾಭ್ಯಪದ್ಯತ ಕರ್ಮಧೀಃ ॥ 18 ॥**

18. ಶ್ರೀಭಗವಂತನಿಂತೆಂದನು: ಪ್ರಾಣಿಗಳ ಸೃಷ್ಟಿಕರ್ತನಾದ ಸ್ವಯಂಭುವಾದ ಮಹಾದೇವನಾದ (ಬ್ರಹ್ಮನು) ಕರ್ಮ(ವಾಸಿತ) ಬುದ್ಧಿಯವನಾದ್ದರಿಂದ ಈ ಪ್ರಶ್ನೆಗೆ ಉತ್ತರವನ್ನು ಚಿಂತಿಸಿಯೂ ತಿಳಿಯಲಾರದವನಾದನು.

**ಸ ಮಾಮಚಿನ್ತಯದ್ದೇವಃ ಪ್ರಶ್ನಪಾರತಿತೀರ್ಷಯಾ ।**
**ತಸ್ಯಾಹಂ ಹಂಸರೂಪೇಣ ಸಕಾಶಮಗಮಂ ತದಾ ॥ 19 ॥**

19. ಪ್ರಶ್ನೆಗೆ ಪರಿಹಾರವನ್ನು ಕಂಡುಕೊಳ್ಳುವ ಇಚ್ಛೆಯಿಂದ ಆ ದೇವನು ನನ್ನನ್ನು ಚಿಂತಿಸಿದನು. ಆಗ ನಾನು ಹಂಸರೂಪದಿಂದ ಅವನ ಸಮೀಪಕ್ಕೆ ಬಂದೆನು.

**ದೃಷ್ಟ್ವಾ ಮಾಂ ತ ಉಪವ್ರಜ್ಯ ಕೃತ್ವಾ ಪದಾಭಿವನ್ದನಮ್ ।**
**ಬ್ರಹ್ಮಾಣಮಗ್ರತಃ ಕೃತ್ವಾ ಪಪ್ರಚ್ಛುಃ ಕೋ ಭವಾನಿತಿ ॥ 20 ॥**

20. ಅವರುಗಳು ನನ್ನನ್ನು ನೋಡಿ ನಮಸ್ಕರಿಸಿ ಬ್ರಹ್ಮನನ್ನು ಮುಂದಿಟ್ಟುಕೊಂಡು ಬಂದು 'ಪೂಜ್ಯನೆ, ನೀನು ಯಾರು?' ಎಂದು ಕೇಳಿದರು.

**ಇತ್ಯಹಂ ಮುನಿಭಿಃ ಪೃಷ್ಟಸ್ತತ್ತ್ವಜಿಜ್ಞಾಸುಭಿಸ್ತದಾ ।**
**ಯದವೋಚಮಹಂ ತೇಭ್ಯಃ ತದುದ್ಧವ ನಿಬೋಧ ಮೇ ॥ 21 ॥**

21. ಹೀಗೆ ನಾನು ತತ್ತ್ವವನ್ನರಿಯುವ ಇಚ್ಛೆಯುಳ್ಳ ಋಷಿಗಳಿಂದ ಕೇಳಲ್ಪಟ್ಟವನಾಗಿ ಅವರುಗಳಿಗೆ (ಹಂಸರೂಪದಿಂದ) ಏನನ್ನು ಹೇಳಿದೆನೋ, ಎಲೈ ಉದ್ಧವನ್ನೇ ಅದನ್ನು ಕೇಳು.

**ವಸ್ತುನೋ ಯದ್ಯನಾನಾತ್ವೇ ಆತ್ಮನಃ ಪ್ರಶ್ನ ಈದೃಶಃ ।**
**ಕಥಂ ಘಟೇತ ವೋ ವಿಪ್ರಾ ವಕ್ತುರ್ವಾ ಮೇಕ ಆಶ್ರಯಃ ॥ 22 ॥**

22. ಎಲೈ ಬ್ರಾಹ್ಮಣರೆ, (ನೀವು ಕೇಳಿದಂಥ) ಈ ಪ್ರಶ್ನೆಯು ಆತ್ಮನ ವಿಷಯದಲ್ಲಾದರೆ ಪರಮಾರ್ಥವಸ್ತುವಾದ ಅವನಲ್ಲಿ ನಾನಾತ್ವವಿಲ್ಲದ್ದರಿಂದ ನಿಮಗೂ (ಹೇಳುವ) ನನಗೂ ಒಂದೇ ಆಶ್ರಯವಾಗಿರುವ ಅವನ (ಬ್ರಹ್ಮದ) ಬಗ್ಗೆ ಪ್ರಶ್ನೆಯೇ ಹೊಂದಲಾರದು.

**ಪಞ್ಚಾತ್ಮಕೇಷು ಭೂತೇಷು ಸಮಾನೇಷು ಚ ವಸ್ತುತಃ ।**
**ಕೋ ಭವಾನಿತಿ ವಃ ಪ್ರಶ್ನೋ ವಾಚಾರಮ್ಭೋ ಹ್ಯನರ್ಥಕಃ ॥ 23 ॥**

23. ಪಂಚಭೂತಾತ್ಮಕವಾದ ಪ್ರಪಂಚದಲ್ಲೆಲ್ಲ ಆತ್ಮವಸ್ತುವು ಸಮಾನವಾಗಿಯೇ ವ್ಯಾಪಿಸಿಕೊಂಡು ಇರಲಾಗಿ 'ನೀನು ಯಾರು'? ಎಂಬ ನಿಮ್ಮಗಳ ಪ್ರಶ್ನೆಯು ಕೇವಲ ಮಾತು ವ್ಯರ್ಥವೇ ಸರಿ. (ಆತ್ಮನು ಯಾರಿಗೂ ಅಪರಿಚಿತನಲ್ಲ – ಎಂದರ್ಥ.)

**ಮನಸಾ ವಚಸಾ ದೃಷ್ಟ್ಯಾ ಗೃಹ್ಯತೇಽನ್ಯೈರಪೀನ್ದ್ರಿಯೈಃ ।**
**ಅಹಮೇವ ನ ಮತ್ತೋಽನ್ಯದಿತಿ ಬುಧ್ಯಧ್ವಮಞ್ಜಸಾ ॥ 24 ॥**

24. ಮನಸ್ಸಿನಿಂದ, ಮಾತಿನಿಂದ, ನೋಟದಿಂದ, ಇನ್ನೂ ಉಳಿದ ಇಂದ್ರಿಯಗಳಿಂದ ಗ್ರಹಿಸಲ್ಪಡುವದೆಲ್ಲವೂ ನಾನೇ, ನನಗಿಂತ ಬೇರೆಯಾದದ್ದು ಏನೂ ಇರುವದಿಲ್ಲ – ಎಂದು ತತ್ತ್ವವಿಚಾರದಿಂದ ತಿಳಿಯಿರಿ.

**ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಜಾಃ ।**
**ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಯದಾತ್ಮನಃ ॥ 25 ॥**

25. ಎಲೈ ಮಕ್ಕಳಿರಾ, ಮನಸ್ಸು ಗುಣಗಳಲ್ಲಿಯೂ ಗುಣಗಳು ಮನಸ್ಸಿನಲ್ಲಿಯೂ ಸಕ್ತವಾಗುವದು ಸ್ವಭಾವವೇ. ಆದರೆ ಗುಣಗಳೂ ಇಂದ್ರಿಯಗಳೂ ಆತ್ಮಸ್ವರೂಪನೇ ಆದ ಜೀವನಿಗೆ ಉಪಾಧಿಗಳೇ ಹೊರತು ಸ್ವರೂಪವಲ್ಲ.

**ಗುಣೇಷು ಚಾವಿಶಚ್ಚಿತ್ತಮಭೀಕ್ಷ್ಣಂ ಗುಣಸೇವಯಾ ।**
**ಗುಣಾಶ್ಚ ಚಿತ್ತಪ್ರಭವಾ ಮದ್ರೂಪ ಉಭಯಂ ತ್ಯಜೇತ್ ॥ 26 ॥**

26. ಆದ್ದರಿಂದ ಮತ್ತೆಮತ್ತೆ ಗುಣಗಳನ್ನು ಸೇವಿಸುವದರಿಂದ ಅವುಗಳಲ್ಲಿಯೇ ನಿರತವಾಗಿರುವ ಚಿತ್ತವು, ಅಂತಃಕರಣಜನ್ಯವಾದ ಗುಣಗಳು – ಇವೆರಡನ್ನೂ ನನ್ನ ರೂಪವನ್ನು ಪಡೆದುಕೊಂಡವನಾಗಿ ಬಿಡಬೇಕು.

**ಜಾಗ್ರತ್ ಸ್ವಪ್ನಃ ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯಃ ।**
**ತಾಸಾಂ ವಿಲಕ್ಷಣೋ ಜೀವಃ ಸಾಕ್ಷಿತ್ವೇನ ವಿನಿಶ್ಚಿತಃ ॥ 27 ॥**

27. ಎಚ್ಚರ, ಕನಸು, ತನಿನಿದ್ರೆ – ಎಂಬಿವು ಗುಣಗಳಿಂದಾದ ಬುದ್ಧಿವೃತ್ತಿಗಳೇ ಆಗಿವೆ. ಜೀವನಾದರೋ, ಇವುಗಳಿಗಿಂತ ವಿಲಕ್ಷಣನು, ಇವನೇ (ಆ ವೃತ್ತಿಗಳಿಗೆ) ಸಾಕ್ಷಿಯೆಂದೂ ಸಿದ್ಧನಾಗಿದ್ದಾನೆ.

**ಯರ್ಹಿ ಸಂಸೃತಿಬನ್ಧೋಽಯಮಾತ್ಮನೋ ಗುಣವೃತ್ತಿದಃ ।**
**ಮಯಿ ತುರ್ಯೇ ಸ್ಥಿತೋ ಜಹ್ಯಾತ್ ತ್ಯಾಗಸ್ತದ್ಗುಣಚೇತಸಾಮ್ ॥ 28 ॥**

28. ಗುಣಗಳ ವೃತ್ತಿಗಳಾದ (ಅವಸ್ಥೆಗಳಿಂದ) ಆತ್ಮನಿಗೆ ಉಂಟಾಗುವ ಸಂಸಾರಬಂಧವನ್ನು ತುರೀಯನಾದ ನನ್ನಲ್ಲಿ ನಿಂತವನಾಗಿ ಕಳೆದುಕೊಳ್ಳಬೇಕು. ಆಗ ಗುಣಗಳ ಮತ್ತು ಮನಸ್ಸಿನ ತ್ಯಾಗವು ಸಿದ್ಧವಾಗುವದು.

**ಅಹಂಕಾರಕೃತಂ ಬನ್ಧಮಾತ್ಮನೋಽರ್ಥವಿಪರ್ಯಯಮ್ ।**
**ವಿದ್ವಾನ್ನಿರ್ವಿದ್ಯ ಸಂಸಾರಚಿನ್ತಾಂ ತುರ್ಯೇ ಸ್ಥಿತಸ್ತ್ಯಜೇತ್ ॥ 29 ॥**

29. ಅಹಂಕಾರದಿಂದುಂಟಾದ ಸಂಸಾರಬಂಧವನ್ನೂ ತನ್ನ ಆನಂದ ಸ್ವರೂಪವು ಮರೆಯಾಗಿರುವದನ್ನೂ ತಿಳಿದು ಜ್ಞಾನನಾದವನು ವಿರಕ್ತನಾಗಿ ತುರೀಯಸ್ವರೂಪದಲ್ಲಿ ನಿಂತು ಸಂಸಾರದ ಚಿಂತೆಯನ್ನು ತೊಲಗಿಸಿಕೊಳ್ಳಬೇಕು.

**ಯಾವನ್ನಾನಾರ್ಥಧೀಃ ಪುಂಸೋ ನ ನಿವರ್ತೇತ ಯುಕ್ತಿಭಿಃ ।**
**ಜಾಗರ್ತ್ಯಪಿ ಸ್ವಪನ್ನಜ್ಞಃ ಸ್ವಪ್ನೇ ಜಾಗರಣಂ ಯಥಾ ॥ 30 ॥**

30. ಮನುಷ್ಯನಿಗೆ ಶಾಸ್ತ್ರಯುಕ್ತ್ಯಭ್ಯಾಸದಿಂದ ಮಿಥ್ಯಾಬುದ್ಧಿಯು ಎಲ್ಲಿಯವರೆಗೆ ತೊಲಗುವದಿಲ್ಲವೋ ಅಂಥ ಅಜ್ಞನು ಎಚ್ಚರವಾಗಿದ್ದರೂ ನಿದ್ರೆಮಾಡುತ್ತಿರುತ್ತಾನೆ. ಕನಸಿನಲ್ಲಿ ಎಚ್ಚರವಾಗಿದ್ದಂತೆ ಕಂಡರೆ ಹೇಗೋ ಇದೂ ಹಾಗೆಯೇ.

**ಅಸತ್ತ್ವಾದಾತ್ಮನೋಽನ್ಯೇಷಾಂ ಭಾವಾನಾಂ ತತ್ಕೃತಾ ಭಿದಾ ।**
**ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ ॥ 31 ॥**

31. ದೇಹವೇ ಮುಂತಾದ ಪದಾರ್ಥಗಳೂ ಅವುಗಳ ನಿಮಿತ್ತವಾದ ಭೇದವೂ ವರ್ಣಾಶ್ರಮಾದಿರೂಪವಾದ ಗತಿಗಳೂ ಅವುಗಳಿಗೆ ಕಾರಣವಾದ ಕರ್ಮಗಳೂ ಅವಿದ್ಯಾಕಲ್ಪಿತವಾದ್ದರಿಂದ ಆತ್ಮನಿಗೆ ಇಲ್ಲ. ಕನಸನ್ನು ಕಾಣುವವನಿಗೆ ತೋರುವ ದೃಶ್ಯಗಳು ಹೇಗೆ ಸುಳ್ಳೋ ಹಾಗೆ.

**ಯೋ ಜಾಗರೇ ಬಹಿರನುಕ್ಷಣಧರ್ಮಿಣೋಽರ್ಥಾನ್**
**ಭುಙ್ಕ್ತೇ ಸಮಸ್ತಕರಣೈಃ ಹೃದಿ ತತ್ಸದೃಕ್ಷಾನ್ ।**
**ಸ್ವಪ್ನೇ ಸುಷುಪ್ತ ಉಪಸಂಹರತೇ ಸ ಏಕಃ**
**ಸ್ಮೃತ್ಯನ್ವಯಾತ್ ತ್ರಿಗುಣವೃತ್ತಿದೃಗಿನ್ದ್ರಿಯೇಶಃ ॥ 32 ॥**

32. ಯಾವನು ಎಚ್ಚರದಲ್ಲಿ ಅನಿತ್ಯಧರ್ಮವುಳ್ಳ ಹೊರಗಿನ ವಿಷಯಗಳನ್ನು ತನ್ನ ಕರಣಗಳಿಂದ (ಸ್ಥೂಲವಾಗಿ) ಅನುಭವಿಸುವನೋ, ಸ್ವಪ್ನದಲ್ಲಿ ಅದೇ ಸಂಸ್ಕಾರದಿಂದ ವಾಸನಾಮಯವಾದ ಭೋಗಗಳನ್ನು (ಸೂಕ್ಷ್ಮವಾಗಿ) ಅನುಭವಿಸುವನೋ, ಸುಷುಪ್ತಿಯಲ್ಲಿ ಎಲ್ಲವನ್ನೂ ತನ್ನಲ್ಲಿಯೇ ಉಪಸಂಹಾರಮಾಡಿಕೊಳ್ಳುವನೋ ಅಂಥ, ಮೂರು ಗುಣವೃತ್ತಿಗಳ ಸಾಕ್ಷಿಯಾದ ಇಂದ್ರಿಯಗಳಿಗೆ ಒಡೆಯನಾದ ಆತ್ಮನು ಒಬ್ಬನೇ. (ನಾನೊಬ್ಬನೇ ಎಲ್ಲಾ ಅವಸ್ಥೆಗಳನ್ನೂ ಅನುಭವಿಸಿದೆನು – ಎಂಬ) ನೆನಪು ಅನುಗತವಾಗಿರುವದರಿಂದ ಇದು ಸಿದ್ಧವಾಗುತ್ತದೆ.

**ಏವಂ ವಿಮೃಶ್ಯ ಗುಣತೋ ಮನಸಸ್ತ್ರ್ಯವಸ್ಥಾಃ**
**ಮನ್ಮಾಯಯಾ ಮಯಿ ಕೃತಾ ಇತಿ ನಿಶ್ಚಿತಾರ್ಥಾಃ ।**
**ಸಂಛಿದ್ಯ ಹಾರ್ದಮನುಮಾನಸದುಕ್ತಿತೀಕ್ಷ್ಣ–**
**ಜ್ಞಾನಾಸಿನಾ ಭಜತ ಮಾಽಖಿಲಸಂಶಯಾಧಿಮ್ ॥ 33 ॥**

33. ಹೀಗೆ ಗುಣಗಳ ಸಂಪರ್ಕದಿಂದ ಮನಸ್ಸಿಗೆ ಉಂಟಾಗುವ ಮೂರು ಅವಸ್ಥೆಗಳನ್ನೂ ವಿಮರ್ಶಿಸಿ ಇವು 'ಆತ್ಮನ ತಿಳಿವಳಿಕೆಯಿಲ್ಲದ್ದರಿಂದ ನನ್ನಲ್ಲಿ ತೋರಿಕೊಳ್ಳುತ್ತಿವೆ' – ಎಂದು ನಿಶ್ಚಯಿಸಿ ಹೃದಯದಲ್ಲಿರುವ ಎಲ್ಲಾ ಸಂಶಯಗಳಿಗೂ ಆಶ್ರಯವಾದ ಅಹಂಕಾರವನ್ನು ಅನುಮಾನ(ತರ್ಕ)ದಿಂದಲೂ ಸತ್ಪುರುಷರ

ಉಪದೇಶಗಳಿಂದಲೂ ಉಂಟಾದ ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ ನನ್ನನ್ನು ಭಜಿಸಿರಿ.

**ಈಕ್ಷೇತ ವಿಭ್ರಮಮಿದಂ ಮನಸೋ ವಿಲಾಸಂ**
**ದೃಷ್ಟಂ ವಿನಷ್ಟಮತಿಲೋಲಮಲಾತಚಕ್ರಮ್ ।**
**ವಿಜ್ಞಾನಮೇಕಮುರುಧೇವ ವಿಭಾತಿ ಮಾಯಾ**
**ಸ್ವಪ್ನಸ್ತ್ರಿಧಾಗುಣವಿಸರ್ಗಕೃತೋ ವಿಕಲ್ಪಃ ॥ 34 ॥**

34. ಈ ಮನೋವಿಕಲ್ಪರೂಪವಾದ, ದೃಷ್ಟನಷ್ಟಸ್ವರೂಪವಾದ, ಬೆಂಕಿಯ ಕೊಳ್ಳಿಯ ತಿರುವಿನಿಂದಾದ ಚಕ್ರದಂತೆ ಅತಿಚಂಚಲವಾದ ಈ ವಿಭ್ರಮವನ್ನು ನೋಡುತ್ತಾ ವಿಜ್ಞಾನವೊಂದೇ ಮಾಯೆಯಿಂದ ನಾನಾ ರೂಪವಾಗಿರುವಂತೆ ತೋರುತ್ತದೆ – ಎಂದು ನಿಶ್ಚಯಿಸಿ ತ್ರಿಗುಣಗಳಿಂದಾದ ಈ ಭ್ರಮೆಯು ಸ್ವಪ್ನವೇ ಎಂದು ಕಂಡುಕೊಂಡು (ತನ್ನಲ್ಲಿಯೇ ತಾನು ನಿಲ್ಲಬೇಕು.)

**ದೃಷ್ಟಿಂ ತತಃ ಪ್ರತಿನಿವರ್ತ್ಯ ನಿವೃತ್ತತೃಷ್ಣಃ**
**ತೂಷ್ಣೀಂ ಭವೇನ್ನಿಜಸುಖಾನುಭವೋ ನಿರೀಹಃ ।**
**ಸಂದೃಶ್ಯತೇ ಕ್ವ ಚ ಯದೀದಮವಸ್ತು ಬುದ್ಧ್ಯಾ**
**ತ್ಯಕ್ತಂ ಭ್ರಮಾಯ ನ ಭವೇತ್ ಸ್ಮೃತಿರಾನಿಪಾತಾತ್ ॥ 35 ॥**

35. ದೃಶ್ಯಗಳ ದೆಸೆಯಿಂದ (ಸಾಧಕನು) ತನ್ನ ದೃಷ್ಟಿಯನ್ನು ಹಿಂತಿರುಗಿಸಿಕೊಂಡು, ಆಶೆಯಿಲ್ಲದವನಾಗಿ, ಇಂದ್ರಿಯಚೇಷ್ಟೆಗಳಿಲ್ಲದವನಾಗಿ ತನ್ನ ಸ್ವರೂಪಸುಖಾನುಭವದಲ್ಲಿಯೇ ಸುಮ್ಮನೆ ಇದ್ದುಕೊಂಡಿರಬೇಕು. ಬುದ್ಧಿಯ ವಿಲಾಸದಿಂದ ಯಾವ ಈ ದ್ವೈತವಸ್ತುವು ಕಾಣುವದೋ ಅದು ಬಿಡಲ್ಪಟ್ಟರೆ ಅದರ ಆಭಾಸವು ತೋರುತ್ತಿದ್ದರೂ ಭ್ರಮೆಗೆ ಕಾರಣವಾಗಲಾರದು.

**ದೇಹಂ ಚ ನಶ್ವರಮವಸ್ಥಿತಮುತ್ಥಿತಂ ವಾ**
**ಸಿದ್ಧೋ ನ ಪಶ್ಯತಿ ಯತೋಽಧ್ಯಗಮನ್ ಸ್ವರೂಪಮ್ ।**
**ದೈವಾದಪೇತಮುತ ದೈವವಶಾದುಪೇತಂ**
**ವಾಸೋ ಯಥಾ ಪರಿಕೃತಂ ಮದಿರಾಮದಾನ್ಧಃ ॥ 36 ॥**

36. ಸಿದ್ಧನಾದವನು ಅನಿತ್ಯವಾದ ಹಾಗೂ ಸ್ವರೂಪಜ್ಞಾನವನ್ನು ಪಡೆಯಲು ಸಾಧನವಾಗಿದ್ದ ಈ ದೇಹವನ್ನು ಎದ್ದಿರಲಿ, ಕುಳಿತಿರಲಿ – ದೈವ (ಸ್ವಭಾವ)ದಿಂದ

ಪ್ರಾಪ್ತವಾದ ಅಥವಾ ತೊಲಗಿದ ಇದನ್ನು ಯಾವ ರೀತಿಯಿಂದಲೂ ನೋಡುವದಿಲ್ಲ; (ದೇಹಾಭಿಮಾನರಹಿತನಾಗಿರುವವನು), ಹೇಗೆಂದರೆ: ಮದ್ಯಪಾನದಿಂದ ಮತ್ತನಾದವನು ತಾನು ಧರಿಸಿದ್ದ ಬಟ್ಟೆಯು ಶರೀರದಮೇಲೆ ಇರಲಿ, ಅಥವಾ ಇಲ್ಲದೆ ಇರಲಿ ಅದರಮೇಲೆ ಜ್ಞಾನವುಳ್ಳವನಾಗಿರುವದಿಲ್ಲವೋ ಹಾಗೆ (ಜಾನಿಯು ಶರೀರವನ್ನು ಬಿಟ್ಟಿದ್ದಿರುವನು).

**ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್**
**ಸ್ವಾರಂಭಕಂ ಪ್ರತಿ ಸಮೀಕ್ಷತ ಏವ ಸಾಸುಃ ।**
**ತಂ ಸಪ್ರಪಞ್ಚಮಧಿರೂಢಸಮಾಧಿಯೋಗಃ**
**ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ॥ 37 ॥**

37. ದೇಹವು ಕೂಡ ಪ್ರಾಣೇಂದ್ರಿಯಸಹಿತವಾಗಿ ದೈವಾಯತ್ತವಾಗಿ ಇದ್ದುಕೊಂಡಿದ್ದು ತನ್ನನ್ನು ಉಂಟುಮಾಡಿರುವ ಕರ್ಮವು ಇರುವವರೆಗೆ ಇದ್ದುಕೊಂಡಿರುತ್ತದೆ. ಸಮಾಧಿಯೋಗವನ್ನು ಏರಿದ, ಬ್ರಹ್ಮವನ್ನರಿತ (ಜ್ಞಾನಿಯು) ದ್ವೈತಸಹಿತವಾದ ಸ್ವಪ್ನಸದೃಶವಾದ ಆ (ದೇಹವನ್ನು) ಮತ್ತೆ ಪಡೆಯುವದಿಲ್ಲ.

******

## ಭಕ್ತಿ–ಧ್ಯಾನಯೋಗಗಳ ವರ್ಣನೆ

(ಹನ್ನೊಂದನೆಯ ಸ್ಕಂಧ, ಹದಿನಾಲ್ಕನೆಯ ಅಧ್ಯಾಯ)

**ಉದ್ಧವ ಉವಾಚ –**
**ವದನ್ತಿ ಕೃಷ್ಣ ಶ್ರೇಯಾಂಸಿ ಬಹೂನಿ ಬ್ರಹ್ಮವಾದಿನಃ ।**
**ತೇಷಾಂ ವಿಕಲ್ಪಪ್ರಾಧಾನ್ಯಮುತಾಹೋ ಏಕಮುಖ್ಯತಾ ॥ 1 ॥**

1. ಉದ್ಧವನಿಂತೆಂದನು: ಎಲೈ ಕೃಷ್ಣನೆ, ಬ್ರಹ್ಮವಾದಿಗಳು ಶ್ರೇಯಸ್ಸಾಧನಗಳನ್ನು ಬಹಳವಾಗಿ ಬೇರೆಬೇರೆ ಹೇಳುತ್ತಾರೆ. ಅವುಗಳಲ್ಲಿ ಎಲ್ಲವೂ ಮುಖ್ಯವೆ, ಅಥವಾ ಯಾವದೋ ಒಂದು ಮಾತ್ರ ಪ್ರಧಾನವಾದದ್ದೆ?

**ಭವತೋದಾಹೃತಃ ಸ್ವಾಮಿನ್ ಭಕ್ತಿಯೋಗೋಽನಪೇಕ್ಷಿತಃ ।**
**ನಿರಸ್ಯ ಸರ್ವತಃ ಸಙ್ಗಂ ಯೇನ ತ್ವಯ್ಯಾವಿಶೇನ್ಮನಃ ॥ 2 ॥**

2. ಪ್ರಭುವೆ, ನೀನಾದರೋ ಭಕ್ತಿಯೋಗವು ಯಾವ ಸಾಧನಗಳ ಸಹಾಯವೂ ಇಲ್ಲದೆ ಎಲ್ಲಾ ವಸ್ತುಗಳ ಸಂಗವನ್ನೂ ಬಿಡಿಸಿ ಮನಸ್ಸನ್ನು ನಿನ್ನಲ್ಲಿ ನಿಲ್ಲಿಸುವಂತೆ ಮಾಡುತ್ತದೆ – ಎಂದು ಹಿಂದೆ ಹೇಳಿದ್ದೀಯೆ.

**ಶ್ರೀಭಗವಾನುವಾಚ –**

**ಮನ್ಮಾಯಾಮೋಹಿತಧಿಯಃ ಪುರುಷಾಃ ಪುರುಷರ್ಷಭ ।**
**ಶ್ರೇಯೋ ವದನ್ತ್ಯನೇಕಾನ್ತಂ ಯಥಾಕರ್ಮ ಯಥಾರುಚಿ ॥ 3 ॥**

3. ಶ್ರೀಭಗವಂತನಿಂತೆಂದನು: ಎಲೈ ಪುರುಷಶ್ರೇಷ್ಠನೇ ಮನುಷ್ಯರು ನನ್ನ ಮಾಯೆಯಿಂದ ಮೋಹಿತವಾದ ಬುದ್ಧಿಯುಳ್ಳವರಾಗಿ ತಮ್ಮತಮ್ಮ ಕರ್ಮ ಹಾಗೂ ಇಚ್ಛೆಗೆ ಅನುಗುಣವಾಗಿ ನಾನಾವಿಧವಾಗಿ ಶ್ರೇಯಸ್ಸಾಧನವನ್ನು ಹೇಳುತ್ತಿರುವರು.

**ಧರ್ಮಮೇಕೇ ಯಶಶ್ಚಾನ್ಯೇ ಕಾಮಂ ಸತ್ಯಂ ದಮಂ ಶಮಮ್ ।**
**ಅನ್ಯೇ ವದನ್ತಿ ಸ್ವಾರ್ಥಂ ವೈ ಐಶ್ವರ್ಯಂ ತ್ಯಾಗಭೋಜನಮ್ ॥ 4 ॥**

4. ಕೆಲವರು ಧರ್ಮವನ್ನು, ಮತ್ತೆ ಕೆಲವರು ಕೀರ್ತಿಯನ್ನು ಹೀಗೆಯೇ ಕಾಮಶಾಸ್ತ್ರವನ್ನು, ಸತ್ಯವನ್ನು, ಬಾಹ್ಯಅಂತರ ಇಂದ್ರಿಯಗಳ ನಿಗ್ರಹವನ್ನು, ಬಾಹ್ಯವಾದ ಐಶ್ವರ್ಯವನ್ನು, ತ್ಯಾಗವನ್ನು, ಭೋಗವನ್ನು – ಈ ರೀತಿಯಾಗಿ ಬೇರೆಬೇರೆಯ ಶ್ರೇಯ(ಸ್ಸಾಧನ)ಗಳನ್ನು ಹೇಳುವರು.

**ಕೇಚಿದ್ಯಜ್ಞತಪೋ ದಾನಂ ವ್ರತಾನಿ ನಿಯಮಾನ್ ಯಮಾನ್ ।**
**ಆದ್ಯನ್ತವನ್ತ ಏವೈಷಾಂ ಲೋಕಾಃ ಕರ್ಮವಿನಿರ್ಮಿತಾಃ ॥ 5 ॥**

5. ಕೆಲವರು ಯಜ್ಞದಾನತಪಸ್ಸುಗಳನ್ನು, ಮತ್ತೆ ಕೆಲವರು ವ್ರತಗಳು, ತಪಸ್ಸೇ ಮುಂತಾದ ನಿಯಮಗಳು, ಅಹಿಂಸೆಯೇ ಮೊದಲಾದ ಯಮಗಳು – ಇವುಗಳನ್ನು ಶ್ರೇಯಸ್ಸಾಧನಗಳೆನ್ನುವರು. ಇವರೆಲ್ಲರ ಲೋಕಗಳು ಕರ್ಮಫಲದಿಂದುಂಟಾದವುಗಳಾದ್ದರಿಂದ ಆದ್ಯಂತವುಳ್ಳವುಗಳೇ ಆಗಿವೆ.

**ಮಯ್ಯರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ ।**
**ಮಯಾತ್ಮನಾ ಸುಖಂ ಯತ್ತತ್ಕುತಃ ಸ್ಯಾದ್ವಿಷಯಾತ್ಮನಾಮ್ ॥ 6 ॥**

6. ಎಲೈ ಸಭ್ಯನೆ, ನನ್ನಲ್ಲಿಯೇ ನೆಟ್ಟಮನಸ್ಸುಳ್ಳ, ಎಲ್ಲೆಲ್ಲಿಯೂ

ನಿರಪೇಕ್ಷನಾದವನಿಗೆ ಪರಮಾನಂದರೂಪನಾದ ಆತ್ಮನಾದ ನನ್ನಿಂದ ಯಾವ ಸುಖವು ದೊರೆಯುವದೋ ಅದು ವಿಷಯಾಸಕ್ತರಾದವರಿಗೆ ಹೇಗೆತಾನೆ ದೊರಕೀತು?

**ಅಕಿಞ್ಚನಸ್ಯ ದಾನ್ತಸ್ಯ ಶಾನ್ತಸ್ಯ ಸಮಚೇತಸಃ ।**
**ಮಯಾ ಸನ್ತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ॥ 7 ॥**

7. ತನ್ನದೆಂಬುದೇನೂ ಇಲ್ಲದ, ದಾಂತನೂ ಶಾಂತನೂ ಸಮಚಿತ್ತನೂ ಆದ, ನನ್ನ (ಪ್ರಸಾದದಿಂದ) ತೃಪ್ತವಾದ ಮನಸ್ಸುಳ್ಳ ಯೋಗಿಯಾದವನಿಗೆ ಎಲ್ಲಾ ದಿಕ್ಕುಗಳೂ ಸುಖಮಯವೇ ಆಗಿರುತ್ತದೆ.

**ನ ಪಾರಮೇಷ್ಠ್ಯಂ ನ ಮಹೇನ್ದ್ರಧಿಷ್ಣ್ಯಂ**
**ನ ಸಾರ್ವಭೌಮಂ ನ ರಸಾಧಿಪತ್ಯಮ್ ।**
**ನ ಯೋಗಸಿದ್ಧೀರಪುನರ್ಭವಂ ವಾ**
**ಮಯ್ಯರ್ಪಿತಾತ್ಮೇಚ್ಛತಿ ಮದ್ವಿನಾಽನ್ಯತ್ ॥ 8 ॥**

8. ನನ್ನಲ್ಲಿಯೇ ಅರ್ಪಿತವಾದ ಮನಸ್ಸುಳ್ಳ ಅನನ್ಯಭಕ್ತನು ಬ್ರಹ್ಮಪದವಿಯನ್ನಾಗಲಿ, ಇಂದ್ರಪದವಿಯನ್ನಾಗಲಿ, ಸಾರ್ವಭೌಮಾಧಿಕಾರವನ್ನಾಗಲಿ, ರಸಾತಲಲೋಕದ ಆಧಿಪತ್ಯವನ್ನಾಗಲಿ, ಯೋಗಸಿದ್ಧಿಗಳನ್ನಾಗಲಿ, ಕೊನೆಗೆ ಮೋಕ್ಷವನ್ನೇ ಆಗಲಿ – ನನಗಿಂತ ಬೇರೆಯಾದ ಏನನ್ನೂ ಬಯಸುವದಿಲ್ಲ.

**ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಙ್ಕರಃ ।**
**ನ ಚ ಸಂಕರ್ಷಣೋ ನ ಶ್ರೀಃ ನೈವಾತ್ಮಾ ಚ ಯಥಾ ಭವಾನ್ ॥ 9 ॥**

9. (ಪರಭಕ್ತನಾದ) ನೀನು ಪ್ರಿಯತಮನಾಗಿರುವಷ್ಟು ಬ್ರಹ್ಮವಾಗಲಿ, ಶಂಕರನಾಗಲಿ, ಬಲರಾಮನಾಗಲಿ, ಲಕ್ಷ್ಮಿಯೇ ಆಗಲಿ, ನನ್ನ ಮೂರ್ತಿಯೇ (ಶರೀರವೇ) ಆಗಲಿ – ಯಾವದೂ ನನಗೆ ಪ್ರಿಯವಲ್ಲ.

**ನಿರಪೇಕ್ಷಂ ಮುನಿಂ ಶಾನ್ತಂ ನಿರ್ವೈರಂ ಸಮದರ್ಶಿನಮ್ ।**
**ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಙ್ಘ್ರಿರೇಣುಭಿಃ ॥ 10 ॥**

10. ನಿರಪೇಕ್ಷನೂ ಮನನಶೀಲನೂ ಶಾಂತನೂ ನಿರ್ವೈರನೂ, ಸಮದರ್ಶಿಯೂ ಆದವನನ್ನು ಪಾದಧೂಳಿಯಿಂದ ಪವಿತ್ರನಾದೇನು – ಎಂದು ಭಾವಿಸಿ ಯಾವಾಗಲೂ ಅಂಥವನನ್ನೇ ನಾನು ಅನುಸಿರಿಸಿ ಹೋಗುವೆನು.

**ನಿಷ್ಕಿಞ್ಚನಾ ಮಯ್ಯನುರಕ್ತ ಚೇತಸಃ**
**ಶಾನ್ತಾ ಮಹಾನ್ತೋಽಖಿಲಜೀವವತ್ಸಲಾಃ ।**
**ಕಾಮೈರನಾಲಬ್ಧಧಿಯೋ ಜುಷನ್ತಿ ಯತ್**
**ತನ್ನೈರಪೇಕ್ಷ್ಯಂ ನ ವಿದುಃ ಸುಖಂ ಮಮ ॥ 17 ॥**

17. ಏನೊಂದೂ ಪರಿಗ್ರಹವಿಲ್ಲದವರಾಗಿ ನನ್ನಲ್ಲೇ ಆಸಕ್ತವಾಗಿರುವ ಚಿತ್ತವುಳ್ಳ, ಶಾಂತರಾದ, ಎಲ್ಲಾ ಪ್ರಾಣಿಗಳ ಹಿತವನ್ನು ಬಯಸುವ, ಕಾಮ ಗಳಿಗೆ ವಶವಾಗದ ಬುದ್ಧಿಯುಳ್ಳ ಮಹಾತ್ಮರುಮಾತ್ರವೇ ನನ್ನ (ಸ್ವರೂಪಭೂತವಾದ) ಯಾವ ನಿರಪೇಕ್ಷಸುಖವುಂಟೋ ಅದನ್ನು ಪಡೆಯುವರು. ಬೇರೆಯವರಿಗೆ ಈ ಆನಂದವು ದೊರಕಲಾರದು.

**ಬಾಧ್ಯಮಾನೋಽಪಿ ಮದ್ಭಕ್ತೋ ವಿಷಯೈರಜಿತೇನ್ದ್ರಿಯಃ ।**
**ಪ್ರಾಯಃ ಪ್ರಗಲ್ಭಯಾ ಭಕ್ತ್ಯಾ ವಿಷಯೈರ್ನಾಭಿಭೂಯತೇ ॥ 18 ॥**

18. ಜಿತೇಂದ್ರಿಯನಲ್ಲದಿರುವ ನನ್ನ ಭಕ್ತನು ವಿಷಯುಗಳಿಂದ ಸೆಳೆಯಲ್ಪಡುತ್ತಿದ್ದರೂ ದೃಢವಾದ ನನ್ನ ಭಕ್ತಿಯಿಂದ ಬಹಳಮಟ್ಟಿಗೆ ವಿಷಯಗಳಿಂದ ಸೋಲಿಸಲ್ಪಡದೆ ಇರುತ್ತಾನೆ.

**ಯಥಾಽಗ್ನಿಃ ಸುಸಮಿದ್ಧಾರ್ಚಿಃ ಕರೋತ್ಯೇಧಾಂಸಿ ಭಸ್ಮಸಾತ್ ।**
**ತಥಾ ಮದ್ವಿಷಯಾ ಭಕ್ತಿಃ ಉದ್ಧವೈನಾಂಸಿ ಕೃತ್ಸ್ನಶಃ ॥ 19 ॥**

19. ಎಲೈ ಉದ್ಧವನೆ, ಚೆನ್ನಾಗಿ ಹೊತ್ತಿಕೊಂಡು ಉರಿಯುತ್ತಿರುವ ಅಗ್ನಿಯು ಹೇಗೆ ಕಟ್ಟಿಗೆಗಳನ್ನು ಸುಟ್ಟು ಬೂದಿಗೈಯುವದೋ ಹಾಗೆಯೇ ನನ್ನ ವಿಷಯವಾದ ಭಕ್ತಿಯು ಪಾಪಗಳ್ನು ಪೂರ್ತಿಯಾಗಿ ಸುಟ್ಟು ನಾಶಗೊಳಿಸುವದು.

**ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ ।**
**ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ ॥ 20 ॥**

20. ಎಲೈ ಉದ್ಧವನೆ, ಯೋಗವಾಗಲಿ, (ಆತ್ಮಾನಾತ್ಮವಿವೇಕ ರೂಪವಾದ) ಸಾಂಖ್ಯವಾಗಲಿ, ವರ್ಣಾಶ್ರಮಧರ್ಮವಾಗಲಿ, ವೇದಾಧ್ಯಯನವಾಗಲಿ, ತಪಸ್ಸಾಗಲಿ, ಸಂನ್ಯಾಸವಾಗಲಿ – ಇವು ಯಾವವೂ ಚೆನ್ನಾಗಿ ಅಭ್ಯಾಸಮಾಡಲ್ಪಟ್ಟ ನನ್ನ ಭಕ್ತಿಯು ನನ್ನನ್ನು ಸ್ವಾಧೀನಗೊಳಿಸಿಕೊಳ್ಳುವಂತೆ ವಶಮಾಡಿಕೊಳ್ಳಲಾರವು.

**ಭಕ್ತ್ಯಾಽಹಮೇಕಯಾ ಗ್ರಾಹ್ಯಃ ಶ್ರದ್ಧಯಾಽಽತ್ಮಾ ಪ್ರಿಯಃ ಸತಾಮ್ ।**
**ಭಕ್ತಿಃ ಪುನಾತಿ ಮನ್ನಿಷ್ಠಾ ಶ್ವಪಾಕಾನಪಿ ಸಂಭವಾತ್ ॥ 21 ॥**

21. ಸತ್ಪುರುಷರಿಗೆ ಪ್ರಿಯನಾದ ಆತ್ಮನಾದ ನಾನು ಭಕ್ತಿಯೊಂದರಿಂದಲೇ ಸಿಕ್ಕುವವನು. ಎಂಥ ಚಂಡಾಲರನ್ನಾದರೂ ನನ್ನಲ್ಲಿಯೇ ದೃಢಗೊಳಿಸಿದ ಭಕ್ತಿಯು ಜನ್ಮದೋಷದಿಂದ ಪವಿತ್ರಗೊಳಿಸುವದು.

**ಧರ್ಮಃ ಸತ್ಯದಯೋಪೇತೋ ವಿದ್ಯಾ ವಾ ತಪಸಾನ್ವಿತಾ ।**
**ಮದ್ಭಕ್ತ್ಯಾಽಪೇತಮಾತ್ಮಾನಂ ನ ಸಮ್ಯಕ್ ಪ್ರಪುನಾತಿ ಹಿ ॥ 22 ॥**

22. ಸತ್ಯ, ದಯೆ – ಇವುಗಳಿಂದ ಕೂಡಿದ ಧರ್ಮವಾಗಿ, ತಪಸ್ಸಿನಿಂದ ಕೂಡಿದ ವಿದ್ಯೆಯಾಗಲಿ ನನ್ನ ಭಕ್ತಿರಹಿತನಾದವನನ್ನು ಎಂದಿಗೂ ಚೆನ್ನಾಗಿ ಪವಿತ್ರಗೊಳಿಸಲಾರದು.

**ಕಥಂ ವಿನಾ ರೋಮಹರ್ಷಂ ದ್ರವತಾ ಚೇತಸಾ ವಿನಾ ।**
**ವಿನಾಽಽನನ್ದಾಶ್ರುಕಲಯಾ ಶುಧ್ಯೇತ್ ಭಕ್ತ್ಯಾ ವಿನಾಽಽಶಯಃ ॥ 23 ॥**

23. ಮೈನವಿರೇಳುವಿಕೆಯಿಲ್ಲದೆ, ಕರಗಿದ ಅಂತಃಕರಣವಿಲ್ಲದೆ, ಆನಂದಬಾಷ್ಪವಿಲ್ಲದೆ ಭಕ್ತಿಯು ಹೇಗೆ ತೋರಿಕೊಂಡೀತು? ಈ ಚಿಹ್ನೆಗಳು ತೋರಿಕೊಳ್ಳದೆ ಹೃದಯವಾದರೂ ಹೇಗೆ ಶುದ್ಧಿಯಾದೀತು?

**ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।**
**ವಿಲಜ್ಜ ಉದ್ಗಾಯತಿ ನೃತ್ಯತೇ ಚ ಮದ್ಭಕ್ತಿಯುಕ್ತೋ ಭುವನಂ ಪುನಾತಿ ॥ 24 ॥**

24. ಯಾವನ ಮಾತುಗಳು ಭಕ್ತಿಭರದಿಂದ ತೊದಲುತ್ತವೆಯೋ, ಚಿತ್ತವು ಕರಗಿರುತ್ತದೆಯೋ, ಆಗಾಗ್ಗೆ ಅಳುತ್ತಿರುವನೋ, ಕೆಲವು ಸಲ ನಗುತ್ತಿರುವನೋ, ನಾಚಿಕೆಯನ್ನು ಬಿಟ್ಟು ಗಟ್ಟಿಯಾಗಿ ಕೂಗಿಹಾಡುವನೋ, ಅಂಥ ಪರಮಭಕ್ತನು ಜಗತ್ತನ್ನೆಲ್ಲ ಪವಿತ್ರಗೊಳಿಸುವನು.

**ಯಥಾಗ್ನಿನಾ ಹೇಮ ಮಲಂ ಜಹಾತಿ**
**ಧ್ಮಾತಂ ಪುನಃ ಸ್ವಂ ಭಜತೇ ಚ ರೂಪಮ್ ।**
**ಆತ್ಮಾ ಚ ಕರ್ಮಾನುಶಯಂ ವಿಧೂಯ**
**ಮದ್ಭಕ್ತಿಯೋಗೇನ ಭಜತ್ಯಥೋ ಮಾಮ್ ॥ 25 ॥**

25. ಹೇಗೆ ಚಿನ್ನವು ಬೆಂಕಿಯ ಸಂಪರ್ಕದಿಂದ ಕೊಳೆಯನ್ನು ಕಳೆದುಕೊಂಡು ಪುಟವಾಗಿ ತನ್ನ ನಿಜರೂಪವನ್ನು ಪಡೆಯುವದೋ ಹಾಗೆ ಜೀವನು ನನ್ನ ಭಕ್ತಿಯೋಗದ ಮಹಿಮೆಯಿಂದ ತನ್ನ ಕರ್ಮಗ್ರಂಥಿಗಳನ್ನು ಕೊಡವಿಕೊಂಡು ಇನ್ನು ನನ್ನನ್ನೇ ಸೇವಿಸುವನು.

**ಯಥಾ ಯಥಾऽऽತ್ಮಾ ಪರಿಮೃಜ್ಯತೇऽಸೌ**
**ಮತ್ಪುಣ್ಯಗಾಥಾಶ್ರವಣಾಭಿಧಾನೈಃ ।**
**ತಥಾ ತಥಾ ಪಶ್ಯತಿ ವಸ್ತು ಸೂಕ್ಷ್ಮಂ**
**ಚಕ್ಷುರ್ಯಥೈವಾಞ್ಜನಸಂಪ್ರಯುಕ್ತಮ್ ॥ 26 ॥**

26. ಪವಿತ್ರವಾದ ನನ್ನ ಕಥೆಗಳನ್ನು ಕೇಳುವದು, ಹೇಳುವದು – ಇವುಗಳಿಂದ (ಭಕ್ತನ) ಅಂತಃಕರಣವು ಎಷ್ಟು ಎಷ್ಟು ಶುದ್ಧವಾಗುವದೋ ಅಷ್ಟು ಅಷ್ಟು ಮಟ್ಟಿಗೆ ಅದು – ಹೇಗೆ ಅಂಜನವನ್ನು ಹಚ್ಚಿದ ಕಣ್ಣು ಸೂಕ್ಷ್ಮವಸ್ತುವನ್ನು ನೋಡಲು ಸಮರ್ಥವಾಗುವದೋ ಹಾಗೆ – ಆತ್ಮದರ್ಶನಕ್ಕೆ ತಕ್ಕದ್ದಾಗುವದು.

**ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।**
**ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ॥ 27 ॥**

27. ವಿಷಯಗಳನ್ನು ಚಿಂತಿಸುವವನ ಮನಸ್ಸು ವಿಷಯಗಳಲ್ಲೇ ಸಕ್ತವಾಗುತ್ತದೆ. ನನ್ನನ್ನು ಧ್ಯಾನಮಾಡುವವನ ಚಿತ್ತವು ನನ್ನಲ್ಲೇ ಮುಳುಗಿಬಿಡುತ್ತದೆ.

**ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥಮ್ ।**
**ಹಿತ್ವಾ ಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್ ॥ 28 ॥**

28. ಆದ್ದರಿಂದ (ಎಲೈ ಉದ್ಧವನೆ,) ಕನಸಿನ ಮನೋರಥದಂತೆ ಸುಳ್ಳಾಗಿರುವ ವಿಷಯಚಿಂತನೆಯನ್ನು ಬಿಟ್ಟು ನನ್ನ ಭಾವನೆಯಿಂದ ಭಾವಿತವಾದ ಮನಸ್ಸನ್ನು ನನ್ನಲ್ಲಿ ಸಮಾಧಾನಗೊಳಿಸು.

**ಸ್ತ್ರೀಣಾಂ ಸ್ತ್ರೀಸಙ್ಗಿನಾಂ ಸಙ್ಗಂ ತ್ಯಕ್ತ್ವಾ ದೂರತ ಆತ್ಮವಾನ್ ।**
**ಕ್ಷೇಮೇ ವಿವಿಕ್ತ ಆಸೀನಶ್ಚಿನ್ತಯೇನ್ಮಾಮತನ್ದ್ರಿತಃ ॥ 29 ॥**

29. ಸ್ತ್ರೀಯರ, ಸ್ತ್ರೀಸಂಗದಲ್ಲಿ ನಿರತರಾಗಿರುವವರ – ಸಹವಾಸವನ್ನು ದೂರವಾಗಿಬಿಟ್ಟು ಮನಸ್ಸಮಾಧಾನವುಳ್ಳವನಾಗಿ ಭಯವಿಲ್ಲದೆ, ಏಕಾಂತವಾದ (ಸ್ಥಳದಲ್ಲಿ) ಕುಳಿತು ಬೇಜಾರಿಲ್ಲದೆ ನನ್ನನ್ನು ಚಿಂತಿಸಬೇಕು.

**ನ ತಥಾಽಸ್ಯ ಭವೇತ್ ಕ್ಲೇಶೋ ಬನ್ಧಶ್ಚಾನ್ಯಪ್ರಸಙ್ಗತಃ ।**
**ಯೋಷಿತ್ಸಙ್ಗಾತ್ ಯಥಾ ಪುಂಸೋ ಯಥಾ ತತ್ಸಙ್ಗಿಸಙ್ಗತಃ ॥ 30 ॥**

30. ಮನುಷ್ಯನಿಗೆ ಸ್ತ್ರೀಸಂಗದಿಂದಲೂ ಸ್ತ್ರೈಣರಾದ ವಿಷಯಿಗಳ ಸಂಗದಿಂದಲೂ ಎಂಥ ಕ್ಲೇಶವಾಗುವದೋ ಅಂಥ ದುಃಖವು ಬೇರೆ ಸಂದರ್ಭದಿಂದ ಆಗಲಾರದು. (ವಿಷಯಸಂಗಗಳಲ್ಲಿ ಸ್ತ್ರೀಸಂಗವೂ ತತ್ಸಂಗಿಸಂಗವೂ ಅತಿದುಃಖಕರವೆಂದು ಭಾವ).

**ಉದ್ಧವ ಉವಾಚ –**

**ಯಥಾ ತ್ವಾಮರವಿನ್ದಾಕ್ಷ ಯಾದೃಶಂ ವಾ ಯದಾತ್ಮಕಮ್ ।**
**ಧ್ಯಾಯೇನ್ಮುಮುಕ್ಷುರೇತನ್ಮೇ ಧ್ಯಾನಂ ಮೇ ವಕ್ತುಮರ್ಹಸಿ ॥ 31 ॥**

31. ಉದ್ಧವನಿಂತೆಂದನು: ಎಲೈ ಪುಂಡರೀಕಾಕ್ಷನೆ, ಮುಮುಕ್ಷುವಾದವನು ನಿನ್ನನ್ನು ಏನೆಂದು ಮತ್ತು ಯಾವ ರೂಪದವನೆಂದು ಚಿಂತಿಸಬೇಕು? ಇಂಥ ಧ್ಯಾನವನ್ನು ನನಗೆ ಹೇಳುವ ಕೃಪೆಮಾಡು.

**ಶ್ರೀಭಗವಾನುವಾಚ –**

**ಸಮ ಆಸನ ಆಸೀನಃ ಸಮಕಾಯೋ ಯಥಾಸುಖಮ್ ।**
**ಹಸ್ತಾವುತ್ಸಙ್ಗ ಆಧಾಯ ಸ್ವನಾಸಾಗ್ರಕೃತೇಕ್ಷಣಃ ॥ 32 ॥**

**ಪ್ರಾಣಸ್ಯ ಶೋಧಯೇನ್ಮಾರ್ಗಂ ಪೂರಕುಮ್ಭಕರೇಚಕೈಃ ।**
**ವಿಪರ್ಯಯೇಣಾಪಿ ಶನೈರಭ್ಯಸೇನ್ನಿರ್ಜಿತೇನ್ದ್ರಿಯಃ ॥ 33 ॥**

32–33. ಶ್ರೀ ಭಗವಂತನಿಂತೆಂದನು: ಸಮವಾದ (ಅಲ್ಲಾಡದಿರುವ) ಆಸನದಲ್ಲಿ ಕುಳಿತ ಶರೀರವನ್ನು ಅನುಕೂಲಕ್ಕೆ ತಕ್ಕಂತೆ ನೆಟ್ಟಗೆ ನಿಲ್ಲಿಸಿಕೊಂಡು ಎರಡು ಕೈಗಳನ್ನೂ ತೊಡೆಯಮೇಲಿರಿಸಿಕೊಂಡು ಜಿತೇಂದ್ರಿಯನಾಗಿ ತನ್ನ ಮೂಗಿನ ತುದಿಯನ್ನು ನೋಡುತ್ತಾ ಪೂರಕ, ಕುಂಭಕ, ರೇಚಕ – ಈ ಕ್ರಮದಿಂದ ಅಥವಾ ವಿಪರೀತಕ್ರಮದಿಂದ ಪ್ರಾಣಮಾರ್ಗವನ್ನು ಶುದ್ಧಿಗೊಳಿಸಿಕೊಳ್ಳಬೇಕು. (ಪ್ರಾಣಾಯಾಮವನ್ನು ಮಾಡಬೇಕು.)

**ಹೃದ್ಯವಿಚ್ಛಿನ್ನಮೋಙ್ಕಾರಂ ಘಣ್ಟಾನಾದಂ ಬಿಸೋರ್ಣವತ್ ।**
**ಪ್ರಾಣೇನೋದೀರ್ಯ ತತ್ರಾಥ ಪುನಃ ಸಂವೇಶಯೇತ್ ಸ್ವರಮ್ ॥ 34 ॥**

**ಏವಂ ಪ್ರಣವಸಂಯುಕ್ತಂ ಪ್ರಾಣಮೇವ ಸಮಭ್ಯಸೇತ್ ।**
**ದಶ ಕೃತ್ವಃ ತ್ರಿಷವಣಂ ಮಾಸಾದರ್ವಾಗ್ ಜಿತಾನಿಲಃ ॥ 35 ॥**

34–35. ಹೃದಯದಲ್ಲಿ ಗಂಟೆಯ ಶಬ್ದಕ್ಕೆ ಸಮಾನವಾದ ಧ್ವನಿಯುಳ್ಳ ಕಮಲದ ನಾಳದ ದಾರದಂತೆ ಸೂಕ್ಷ್ಮವಾದ ನಿರಂತರವಾದ ಓಂಕಾರದ ಉಚ್ಚಾರಣೆಯನ್ನು ಪ್ರಾಣಯುಕ್ತ) ಪ್ರಾಣಾಯಾಮವನ್ನೇ ವಾಯುಜಯವನ್ನು ಮಾಡಿಕೊಂಡವನಾಗಿ ತಿಂಗಳಷ್ಟು ಕಾಲ ಮೂರು ಹೊತ್ತೂ ಹತ್ತುಬಾರಿಯಂತೆ ಮಾಡಬೇಕು.

**ಹೃತ್ಪುಣ್ಡರೀಕಮನ್ತಸ್ಥಮೂರ್ಧ್ವನಾಲಮಧೋಮುಖಮ್ ।**
**ಧ್ಯಾತ್ವೋರ್ಧ್ವಮುಖಮುನ್ನಿದ್ರಮಷ್ಟಪತ್ರಂ ಸಕರ್ಣಿಕಮ್ ॥ 36 ॥**

**ಕರ್ಣಿಕಾಯಾಂ ನ್ಯಸೇತ್ ಸೂರ್ಯಸೋಮಾಗ್ನೀನುತ್ತರೋತ್ತರಮ್ ।**
**ವಹ್ನಿಮಧ್ಯೇ ಸ್ಮರೇದ್ ರೂಪಂ ಮಮೈತತ್ ಧ್ಯಾನಮಙ್ಗಲಮ್ ॥ 37 ॥**

36–37. 'ಒಳಗಿರುವ, ಕೆಳಮುಖವಾಗಿ ಮೇಲಕ್ಕೆ ನಾಳವುಳ್ಳ, ಎಂಟು ದಳಗಳಿಂದಲೂ ಮಧ್ಯದ ದಂಟಿನಿಂದಲೂ ಕೂಡಿದ ಹೃದಯಕಮಲವನ್ನು ಮೇಲುಮುಖವಾಗಿ ಧ್ಯಾನಿಸಿ (ಅರಳಿದ ಆ ಹೃದಯಕಮಲದ) ದಂಟಿನಲ್ಲಿ ಸೂರ್ಯ, ಚಂದ್ರ, ಅಗ್ನಿಗಳನ್ನು ಕ್ರಮವಾಗಿ ಇಟ್ಟು ಅಗ್ನಿಯ ಮಧ್ಯದಲ್ಲಿ ಈ (ಮುಂದೆ ಹೇಳುವ) ಧ್ಯಾನಮಂಗಳವಾದ ನನ್ನ ರೂಪವನ್ನು ಚಿಂತಿಸಬೇಕು.

**ಸಮಂ ಪ್ರಶಾನ್ತಂ ಸುಮುಖಂ ದೀರ್ಘಚಾರುಚತುರ್ಭುಜಮ್ ।**
**ಸುಚಾರು ಸುನ್ದರಗ್ರೀವಂ ಸುಕಪೋಲಂ ಶುಚಿಸ್ಮಿತಮ್ ॥ 38 ॥**

**ಸಮಾನಕರ್ಣವಿನ್ಯಸ್ತಸ್ಫುರನ್ಮಕರಕುಣ್ಡಲಮ್ ।**
**ಹೇಮಾಮ್ಬರಂ ಘನಶ್ಯಾಮಂ ಶ್ರೀವತ್ಸಶ್ರೀನಿಕೇತನಮ್ ॥ 39 ॥**

**ಶಙ್ಖಚಕ್ರಗದಾಪದ್ಮವನಮಾಲಾವಿಭೂಷಿತಮ್ ।**
**ನೂಪುರೈರ್ವಿಲಸತ್ಪಾದಂ ಕೌಸ್ತುಭಪ್ರಭಯಾನ್ವಿತಮ್ ॥ 40 ॥**

**ದ್ಯುಮತ್ಕಿರೀಟಕಟಕಕಟಿಸೂತ್ರಾಙ್ಗದಾಯುತಮ್ ।**
**ಸರ್ವಾಙ್ಗಸುನ್ದರಂ ಹೃದ್ಯಂ ಪ್ರಸಾದಸುಮುಖೇಕ್ಷಣಮ್ ।**
**ಸುಕುಮಾರಮಭಿಧ್ಯಾಯೇತ್ ಸರ್ವಾಙ್ಗೇಷು ಮನೋ ದಧತ್ ॥ 41 ॥**

38–41. ಸಮನೂ ಪ್ರಶಂತನೂ ಸುಂದರವದನನೂ ಆದ, ಉದ್ದವಾದ ರುಚಿರವಾದ ನಾಲ್ಕು ತೋಳುಗಳುಳ್ಳ, ಸುಂದರವಾದ ಕಂಠವುಳ್ಳ, ಒಳ್ಳೆಯ ಕೆನ್ನೆಗಳುಳ್ಳ, ಶುಭ್ರವಾದ ಮುಗುಳುನಗೆಯಿಂದ ಕೂಡಿದ, ಸಾಟಿಯಾದ ಎರಡೂ ಕಿವಿಗಳಲ್ಲಿರುವ ಹೊಳೆಯುತ್ತಿರುವ ಕರ್ಣಕುಂಡಲಗಳಿಂದ ಕೂಡಿದ, ಪೀತಾಂಬರಧಾರಿಯಾದ, ನೀಲಮೇಘದಂತೆ ಕಪ್ಪಾದ ಕಾಂತಿಯುಳ್ಳ, ಶ್ರೀವತ್ಸಲಾಂಛನನಾದ, ಲಕ್ಷ್ಮಿಯನ್ನು ವಕ್ಷಸ್ಥಲದಲ್ಲಿ ಧರಿಸಿರುವ, ಶಂಖ, ಚಕ್ರ, ಗದೆ, ಪದ್ಮ, ವನಮಾಲೆಗಳಿಂದ ಅಲಂಕೃತನಾದ, ಗೆಜ್ಜೆಗಳಿಂದ ಕೂಡಿದ, ಹೊಳೆಯುತ್ತಿರುವ ಹೆಜ್ಜೆಗಳುಳ್ಳ, ಕೌಸ್ತುಭವೆಂಬ ರತ್ನದ ಕಾಂತಿಯಿಂದ ಕೂಡಿದ, ತೇಜೋಯುತವಾದ ಕಿರೀಟ, ಕೈಬಳೆ, ಉಡಿದಾರ, ತೋಳುಬಂದಿ – ಇವುಗಳಿಂದ ಸುತ್ತಲೂ ಪ್ರಭೆಯನ್ನು ಚೆಲ್ಲುತ್ತಿರುವ, ಸರ್ವಾಂಗಸುಂದರನಾದ, ಮನೋಹರನಾದ, ಅನುಗ್ರಹದೃಷ್ಟಿಯುಳ್ಳ ಅತಿಕೋಮಲವಾದ ಸ್ವರೂಪವುಳ್ಳ ನನ್ನನ್ನು – ಎಲ್ಲಾ ಅವಯವಗಳಲ್ಲಿಯೂ ಮನಸ್ಸನ್ನು ಚೆನ್ನಾಗಿ ನಿಲ್ಲಿಸಿ–ಧ್ಯಾನಮಾಡಬೇಕು.

**ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯೋ ಮನಸಾಽಽಕೃಷ್ಯ ತನ್ಮನಃ ।**
**ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ ॥ 42 ॥**

42. ವಿಷಯಗಳ ಕಡೆಯಿಂದ ಇಂದ್ರಿಯಗಳನ್ನು ಮನಸ್ಸಿನಿಂದ ಸೆಳೆದುಕೊಂಡು, ಆ ಮನಸ್ಸನ್ನು ಸಾರಥಿಯಾದ ಬುದ್ಧಿಯಿಂದ ನಿಗ್ರಹಿಸಿ ಧೀರನಾದವನು ಎಲ್ಲೆಲ್ಲೂ ಇರುವ ನನ್ನಲ್ಲಿ (ಆ ಬುದ್ಧಿಯನ್ನು) ಹೊಗಿಸಬೇಕು.

**ತತ್ಸರ್ವವ್ಯಾಪಕಂ ಚಿತ್ತಮಾಕೃಷ್ಯೈಕತ್ರ ಧಾರಯೇತ್ ।**
**ನಾನ್ಯಾನಿ ಚಿನ್ತಯೇದ್ ಭೂಯಃ ಸುಸ್ಮಿತಂ ಭಾವಯೇನ್ಮುಖಮ್ ॥ 43 ॥**

43. ಅಂಥ ಸರ್ವ(ಶರೀರ)ವ್ಯಾಪಕವಾದ ಚಿತ್ತವನ್ನು ಸೆಳೆದು ಒಂದೇ ಗುರಿಯಲ್ಲಿಡಬೇಕು. ಬೇರೇನನ್ನೂ ಮತ್ತೆ ಚಿಂತಿಸಬಾರದು. ಅಂದರೆ ಭಗವಂತನ ಧ್ಯೇಯವಾದ ಶರೀರಾವಯವಗಳಲ್ಲೆಲ್ಲ ವ್ಯಾಪಿಸಿದ್ದ ಮನಸ್ಸನ್ನು ಸುಸ್ಮಿತವಾದ ಮುಖವೊಂದರಲ್ಲೇ ನಿಲ್ಲಿಸಬೇಕು. (ಮುಖವೊಂದನ್ನೇ ಚಿಂತಿಸಬೇಕು).

**ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ ।**
**ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಞ್ಚಿದಪಿ ಚಿನ್ತಯೇತ್ ॥ 44 ॥**

44. ಅಲ್ಲಿ ನೆಲೆನಿಂತ ಚಿತ್ತವನ್ನು ಸೆಳೆದು ಆಕಾಶದಲ್ಲಿ ನಿಲ್ಲಿಸಬೇಕು.

ನನ್ನನ್ನು ಸೇರುವವನು ಅದನ್ನೂ ಬಿಟ್ಟು ಏನನ್ನೂ ಚಿಂತಿಸದೆ ಇರಬೇಕು.

**ಏವಂ ಸಮಾಹಿತಮತಿಃ ಮಾಮೇವಾತ್ಮಾನಮಾತ್ಮನಿ ।**
**ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತಿಷಿ ಸಂಯುತಮ್ ॥ 45 ॥**

45. ಎಲೈ ಸರ್ವಾತ್ಮನೆ, ಹೀಗೆ ಸಮಾಧಾನಚಿತ್ತವುಳ್ಳವನಾಗಿ ತನ್ನಲ್ಲಿಯೇ ತನ್ನನ್ನು ಧ್ಯಾನಿಸುತ್ತಾ ಬೆಳಕು ಬೆಳಕಿನಲ್ಲಿ ಸೇರಿದಂತೆ ನನ್ನನ್ನೇ (ಸಾಧಕನು) ಕಾಣುತ್ತಾನೆ.

**ಧ್ಯಾನೇನೇತ್ಥಂ ಸುತೀವ್ರೇಣ ಯುಞ್ಜತೋ ಯೋಗಿನೋ ಮನಃ ।**
**ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ ॥ 46 ॥**

46. ಹೀಗೆ ಬಹಳ ತೀವ್ರವಾದ ಧ್ಯಾನದಿಂದ ಮನಸ್ಸನ್ನು ನೆಲೆಗೊಳಿಸುವ ಯೋಗಿಗೆ ಜಾಗ್ರತೆಯಾಗಿ ದ್ರಷ್ಟೃದರ್ಶನದೃಶ್ಯವೆಂಬ ಭೇದಭ್ರಮೆಯು ನಾಶವಾಗಿಬಿಡುವದು.

*****

## ಸಿದ್ಧಿಗಳ ಹೆಸರು ಮತ್ತು ಲಕ್ಷಣ

### (ಹನ್ನೊಂದನೆಯ ಸ್ಕಂಧ, ಹದಿನೈದನೆಯ ಅಧ್ಯಾಯ)

**ಶ್ರೀಭಗವಾನುವಾಚ** –

**ಜಿತೇನ್ದ್ರಿಯಸ್ಯ ಯುಕ್ತಸ್ಯ ಜಿತಶ್ವಾಸಸ್ಯ ಯೋಗಿನಃ ।**
**ಮಯಿ ಧಾರಯತಶ್ಚೇತ ಉಪತಿಷ್ಠನ್ತಿ ಸಿದ್ಧಯಃ ॥ 1 ॥**

1. ಶ್ರೀಭಗವಂತನಿಂತೆಂದನು: ಜಿತೇಂದ್ರಿಯನಾಗಿ ಯುಕ್ತನಾಗಿ ಉಸಿರಿನ ವ್ಯಾಪಾರವನ್ನು ಸ್ವಾಧೀನಗೊಳಿಸಿಕೊಂಡಿರುವ, ನನ್ನಲ್ಲಿಯೇ ಚಿತ್ತವನ್ನಿಟ್ಟಿರುವ ಯೋಗಿಗೆ ಸಿದ್ಧಿಗಳು ಕಾಣಿಸಿಕೊಳ್ಳುವವು.

**ಉದ್ಧವ ಉವಾಚ** –

**ಕಯಾ ಧಾರಣಯಾ ಕಾಸ್ವಿತ್ ಕಥಂಸ್ವಿತ್ ಸಿದ್ಧಿರಚ್ಯುತ ।**
**ಕತಿ ವಾ ಸಿದ್ಧಯೋ ಬ್ರೂಹಿ ಯೋಗಿನಾಂ ಸಿದ್ಧಿದೋ ಭವಾನ್ ॥ 2 ॥**

2. ಉದ್ಧವನಿಂತೆಂದನು: ಎಲೈ ಅಚ್ಯುತನೆ, ಯಾವ ಧಾರಣೆ(ಯೋಗ)ಯಿಂದ ಎಂಥ ಸಿದ್ಧಿಯು, ಹೇಗೆ ಆಗುತ್ತದೆ? ಯೋಗಿಗಳಿಗೆ ಸಿದಧಿಗಳನ್ನು ಅನುಗ್ರಹಿಸುವ ನೀನು ಸಿದ್ಧಿಗಳು ಎಷ್ಟು? ಎಂಬುದನ್ನೂ ಹೇಳು.

**ಶ್ರೀಭಗವಾನುವಾಚ –**

**ಸಿದ್ಧಯೋಽಷ್ಟಾದಶ ಪ್ರೋಕ್ತಾ ಧಾರಣಾಯೋಗಪಾರಗೈಃ ।**
**ತಾಸಾಮಷ್ಟೌ ಮತ್ಪ್ರಧಾನಾ ದಶೈವ ಗುಣಹೇತವಃ ॥ 3 ॥**

3. ಶ್ರೀಭಗವಂತನಿಂತೆಂದನು: ಧಾರಣಾಯೋಗನಿಪುಣರಾದವರು ಸಿದ್ಧಿಗಳನ್ನು ಹದಿನೆಂಟು – ಎಂದು ಹೇಳುವರು. ಆ ಪೈಕಿ ಹತ್ತು ಮಾತ್ರ ನನ್ನನ್ನು ಸೇರಲು ಮುಖ್ಯವಾದವು. ಉಳಿದ ಎಂಟು ಸತ್ತ್ವಗುಣವನ್ನು ಹೆಚ್ಚಿಸುವಂಥವು.

**ಅಣಿಮಾ ಮಹಿಮಾ ಮೂರ್ತೇರ್ಲಘಿಮಾ ಪ್ರಾಪ್ತಿರಿನ್ದ್ರಿಯೈಃ ।**
**ಪ್ರಾಕಾಮ್ಯಂ ಶ್ರುತದೃಷ್ಟೇಷು ಶಕ್ತಿಪ್ರೇರಣಮೀಶಿತಾ ॥ 4 ॥**

**ಗುಣೇಷ್ವಸಙ್ಗೋ ವಶಿತಾ ಯತ್ಕಾಮಸ್ತದವಸ್ಯತಿ ।**
**ಏತಾ ಮೇ ಸಿದ್ಧಯಃ ಸೌಮ್ಯ ಅಷ್ಟಾವೌತ್ಪತ್ತಿಕಾ ಮತಾಃ ॥ 5 ॥**

4–5. ಎಲೈ ಸೋಮ್ಯನೆ, ಶರೀರವು ಸಣ್ಣದಾಗುವಿಕೆ, ದಪ್ಪಗಾಗುವಿಕೆ, ಹಗುರವಾಗುವಿಕೆ, (ಇವು ಮೂರು ಶರೀರಸಂಬಂಧವಾದವು) ಮನಸ್ಸಿನ ಬಯಕೆಗಳನ್ನು ಇಂದ್ರಿಯಗಳಿಂದ ಪಡೆದುಕೊಳ್ಳುವದು, ದೃಷ್ಟಾದೃಷ್ಟಭೋಗಗಳ ದರ್ಶನರೂಪವಾದ ಸಾಮರ್ಥ್ಯ, ಎಲ್ಲ ವಸ್ತುಗಳಮೇಲೂ ಆಳ್ವಿಕೆಯ ಶಕ್ತಿ, ವಿಷಯಭೋಗಗಳಲ್ಲಿ ಅನಾಸಕ್ತಿ, ಬೇಕಾದ ಕಾಮಗಳನ್ನು ಪಡೆಯುವಿಕೆ – ಈ ಎಂಟು ಸ್ವಾಭಾವಿಕವಾದ ಸಿದ್ಧಿಗಳು ಎಂದು ಬಲ್ಲವರ ಅಭಿಪ್ರಾಯ.

**ಅನೂರ್ಮಿಮತ್ತ್ವಂ ದೇಹೇಽಸ್ಮಿನ್ ದೂರಶ್ರವಣದರ್ಶನಮ್ ।**
**ಮನೋಜವಃ ಕಾಮರೂಪಂ ಪರಕಾಯಪ್ರವೇಶನಮ್ ॥ 6 ॥**

**ಸ್ವಚ್ಛನ್ದಮೃತ್ಯುರ್ದೇವಾನಾಂ ಸಹ ಕ್ರೀಡಾನುದರ್ಶನಮ್ ।**
**ಯಥಾಸಂಕಲ್ಪಸಂಸಿದ್ಧಿರಾಜ್ಞಾಪ್ರತಿಹತಾ ಗತಿಃ ॥ 7 ॥**

**ತ್ರಿಕಾಲಜ್ಞತ್ವಮದ್ವಂದ್ವಂ ಪರಚಿತ್ತಾದ್ಯಭಿಜ್ಞತಾ ।**
**ಅಗ್ನ್ಯರ್ಕಾಮ್ಬುವಿಷಾದೀನಾಂ ಪ್ರತಿಷ್ಟಮ್ಭೋಽಪರಾಜಯಃ ॥ 8 ॥**

**ಏತಾಶ್ಚೋದ್ದೇಶತಃ ಪ್ರೋಕ್ತಾ ಯೋಗಧಾರಣಸಿದ್ಧಯಃ ।**

6–8. ಈ ದೇಹದಲ್ಲಿ ಹಸಿವುಬಾಯಾರಿಕೆಗಳಿಲ್ಲದಿರುವಿಕೆ, ದೂರದಲ್ಲಿರುವ (ಪರೋಕ್ಷವಾಗಿರುವ) ವಸ್ತುಗಳ ನೋಟ, ಶಬ್ದಗಳ ಶ್ರವಣ, ಮನೋವೇಗದಿಂದ ದೇಹವನ್ನು ಒಯ್ಯುವಿಕೆ, ಬೇಕಾದ ರೂಪವನ್ನು ಧರಿಸಿಕೊಳ್ಳುವಿಕೆ, ಇನ್ನೊಬ್ಬರ ಶರೀರದಲ್ಲಿ ಹೊಗುವದು, ಬೇಕಾದಾಗ ಮಾತ್ರ ಮೃತ್ಯುವನ್ನು ಬರಮಾಡಿಕೊಳ್ಳುವದು, ದೇವತೆಗಳೊಡಗೂಡಿ ಆಟವಾಡುವದು, ವ್ಯವಹರಿಸುವದು, ಸಂಕಲ್ಪದಂತೆ ಸಿದ್ಧಿಯನ್ನು ಪಡೆಯುವದು, ಆಜ್ಞೆಮಾಡುವದು, ತಡೆಯಿಲ್ಲದ ಸಂಚಾರ, ಭೂತಭವಿಷ್ಯದ್ವರ್ತಮಾನಘಟನೆಗಳನ್ನೆಲ್ಲ ತಿಳಿಯುವದು, ಶೀತೋಷ್ಣಗಳಿಗೆ ಸಿಲುಕದೆ ಇರುವದು, ಮತ್ತೊಬ್ಬರ ಮನಸ್ಸಿನಲ್ಲಿ ರುವದನ್ನು ತಿಳಿದುಕೊಳ್ಳುವದು, ಬೆಂಕಿ, ಸೂರ್ಯ, ಜಲ, ವಿಷ – ಇವುಗಳನ್ನು ತಡೆಗಟ್ಟುವದು, ಸೋಲದೆ ಇರುವದು – ಇವೇ ಮೊದಲಾದ ಕೆಲವು ಯೋಗಧಾರಣಸಿದ್ಧಿಗಳನ್ನು ಉದಾಹರಣೆಗಾಗಿ ಹೇಳಿದ್ದೇನೆ.

**ಯಯಾ ಧಾರಣಯಾ ಯಾ ಸ್ಯಾತ್ ಯಥಾ ವಾ ಸ್ಯಾನ್ನಿಬೋಧ ಮೇ ॥ 9 ॥**

**ಭೂತಸೂಕ್ಷ್ಮಾತ್ಮನಿ ಮಯಿ ತನ್ಮಾತ್ರಂ ಧಾರಯೇತ್ ಮನಃ ।**
**ಅಣಿಮಾನಮವಾಪ್ನೋತಿ ತನ್ಮಾತ್ರೋಪಾಸಕೋ ಮಮ ॥ 10 ॥**

10. ಇನ್ನು ಯಾವ ಯಾವ ಧಾರಣೆಯಿಂದ ಯಾವಯಾವ ಸಿದ್ಧಿಗಳಾಗುವವೆಂಬುದನ್ನು ಹೇಳುವೆನು, ಕೇಳು. ಭೂತಸೂಕ್ಷ್ಮಗಳ ಆತ್ಮನಾದ ನನ್ನಲ್ಲಿ ಮನಸ್ಸನ್ನು ತಾನೇ ತಾನಾಗುವಂತೆ ನಿಲ್ಲಿಸಬೇಕು. ಅಂಥ ತನ್ಮಾತ್ರೋಪಾಸಕನು ಅಣಿಮಾ ಎಂಬ ಸಿದ್ಧಿಯನ್ನು ಪಡೆಯುವನು.

**ಮಹತ್ಯಾತ್ಮನ್ಮಯಿ ಪರೇ ಯಥಾಸಂಸ್ಥಂ ಮನೋ ದಧತ್ ।**
**ಮಹಿಮಾನಮವಾಪ್ನೋತಿ ಭೂತಾನಾಂ ಚ ಪೃಥಕ್ ಪೃಥಕ್ ॥ 11 ॥**

11. ಪರಮಜ್ಞಾನಶಕ್ತಿರೂಪನಾದ ಮಹದಾತ್ಮನಾದ ನನ್ನಲ್ಲಿ ಶಾಸ್ತ್ರದಲ್ಲಿ ಹೇಳಿದ ಪ್ರಕಾರವಾಗಿ ಮನಸ್ಸನ್ನು ನೆಲೆಗೊಳಿಸಿಕೊಂಡವನು ಬೇರೆಬೇರೆಯಾಗಿಯೇ ಎಲ್ಲಾ ಭೂತಗಳ ಮಹಿಮೆ(ಶಕ್ತಿ)ಯನ್ನೂ ಪಡೆದುಕೊಳ್ಳುವನು.

**ಪರಮಾಣುಮಯೇ ಚಿತ್ತಂ ಭೂತಾನಾಂ ಮಯಿ ರಞ್ಜಯನ್ ।**
**ಕಾಲಸೂಕ್ಷ್ಮಾರ್ಥತಾಂ ಯೋಗೀ ಲಘಿಮಾನಮವಾಪ್ನುಯಾತ್ ॥ 12 ॥**

12. ವಾಯುವೇ ಮುಂತಾದ ಭೂತಗಳ ಪರಮಾಣೂಪಾಧಿಕನಾದ ನನ್ನಲ್ಲಿ ಮನಸ್ಸನ್ನು ನಿಲ್ಲಿಸಿದ ಯೋಗಿಯು ಕಾಲಸೂಕ್ಷ್ಮತೆಯೆಂಬ ಲಘಿಮಾ ಸಿದ್ಧಿಯನ್ನು ಪಡೆಯುವನು.

**ಧಾರಯನ್ ಮಯ್ಯಹಂತತ್ತ್ವೇ ಮನೋ ವೈಕಾರಿಕೇಽಖಿಲಮ್ ।**
**ಸರ್ವೇನ್ದ್ರಿಯಾಣಾಮಾತ್ಮತ್ವಂ ಪ್ರಾಪ್ತಿಂ ಪ್ರಾಪ್ನೋತಿ ಮನ್ಮನಾಃ ॥ 13 ॥**

13. ಪ್ರಕೃತಿವಿಕಾರರೂಪವಾದ ಅಹಂಕಾರತತ್ತ್ವೋಪಾಧಿಕನಾದ ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸಿದ, ನನ್ನನ್ನೇ ಚಿಂತಿಸುವ ಯೋಗಿಯು ಎಲ್ಲಾ ಇಂದ್ರಿಯಗಳಿಗೂ ಆತ್ಮನಾಗುವಂಥ ಪ್ರಾಪ್ತಿಯೆಂಬ ಸಿದ್ಧಿಯನ್ನು ಹೊಂದುವನು.

**ಮಹತ್ಯಾತ್ಮನಿ ಯಃ ಸೂತ್ರೇ ಧಾರಯೇನ್ಮಯಿ ಮಾನಸಮ್ ।**
**ಪ್ರಾಕಾಶ್ಯಂ ಪಾರಮೇಷ್ಠ್ಯಂ ಮೇ ವಿನ್ದತೇಽವ್ಯಕ್ತಜನ್ಮನಃ ॥ 14 ॥**

14. ಸೂತ್ರಾತ್ಮನಾದ ಮಹದುಪಾಧಿಕನಾದ ನನ್ನಲ್ಲಿ ಯಾವನು ಮನಸ್ಸನ್ನು ಸ್ಥಿರಗೊಳಿಸುವನೋ ಅವನು ಅವ್ಯಕ್ತಜನ್ಮನಾದ ಸೂತ್ರಾತ್ಮನಾದ ನನ್ನನ್ನು ಪಡೆದು ಸರ್ವೋತ್ಕೃಷ್ಟತೆಯನ್ನೂ ಪ್ರಾಕಾಶ್ಯವೆಂದ ಸಿದ್ಧಿಯನ್ನೂ ಪಡೆಯುವನು.

**ವಿಷ್ಣೌ ತ್ರ್ಯಧೀಶ್ವರೇ ಚಿತ್ತಂ ಧಾರಯೇತ್ ಕಾಲವಿಗ್ರಹೇ ।**
**ಸ ಈಶಿತ್ವಮವಾಪ್ನೋತಿ ಕ್ಷೇತ್ರಕ್ಷೇತ್ರಜ್ಞಚೋದನಮ್ ॥ 15 ॥**

15. ತ್ರಿಗುಣಾತ್ಮಕವಾದ ಮಾಯೆಯ ಒಡೆಯನಾದ ಅಕಲಯಿತೃವಾದ ಅಂತರ್ಯಾಮಿಯಾದ ವಿಷ್ಣುವಾದ ನನ್ನಲ್ಲಿ ಯಾವನು ಚಿತ್ತವನ್ನು ನೆಲೆಗೊಳಿಸುವನೋ ಅವನು ಕ್ಷೇತ್ರ, ಕ್ಷೇತ್ರಜ್ಞರುಗಳ ಪ್ರೇರಕವಾದ ಈಶಿತ್ವವೆಂಬ ಸಿದ್ಧಿಯನ್ನು ಹೊಂದುವನು.

**ನಾರಾಯಣೇ ತುರೀಯಾಖ್ಯೇ ಭಗವಚ್ಛಬ್ದಶಬ್ದಿತೇ ।**
**ಮನೋ ಮಯ್ಯಾದಧನ್ ಯೋಗೀ ಮದ್ಧರ್ಮಾ ವಶಿತಾಮಿಯಾತ್ ॥ 16 ॥**

16. ಭಗವಾನ್ ಎಂಬ ಶಬ್ದವಾಚ್ಯನಾದ ತುರೀಯನಾದ ನಾರಾಯಣನಾದ

ನನ್ನಲ್ಲಿ ಮನಸ್ಸನ್ನು ಧಾರಣಮಾಡಿರುವ ಯೋಗಿಯು ನನ್ನ ಗುಣಗಳುಳ್ಳವನಾಗಿ ವಶಿತ್ವವೆಂಬ ಸಿದ್ಧಿಯನ್ನು ಪಡೆಯುವನು.

**ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ ವಿಶದಂ ಮನಃ ।**
**ಪರಮಾನನ್ದಮಾಪ್ನೋತಿ ಯತ್ರ ಕಾಮೋಽವಸೀಯತೇ ॥ 17 ॥**

17. ನಿರ್ಗುಣಬ್ರಹ್ಮನಾದ ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸಿದವನಾದರೆ ಎಲ್ಲಿ ಕಾಮಗಳೆಲ್ಲವೂ ಒಂದಾಗಿರುವವೋ ಅಂಥ ಪರಮಾನಂದಪದವಿಯನ್ನು ಪಡೆಯುವನು.

**ಶ್ವೇತದ್ವೀಪಪತೌ ಚಿತ್ತಂ ಶುದ್ಧೇ ಧರ್ಮಮಯೇ ಮಯಿ ।**
**ಧಾರಯನ್ ಶ್ವೇತತಾಂ ಯಾತಿ ಷಡೂರ್ಮಿರಹಿತೋ ನರಃ ॥ 18 ॥**

18. ಶ್ವೇತದ್ವೀಪಾಧಿಪತಿಯಾದ ಧರ್ಮಮಯನಾದ ಶುದ್ಧನಾದ ನನ್ನಲ್ಲಿ ಅಂತಃಕರಣವನ್ನು ನೆಲೆಗೊಳಿಸಿದವನಾದರೆ ಅಂಥ ಮನುಷ್ಯನು ಅಶನಾಯಾಪಿಪಾಸಗಳೇ ಮುಂತಾದ ಆರು ಸಂಸಾರಧರ್ಮಗಳನ್ನೂ ಮೀರಿ ಶುದ್ಧರೂಪನಾಗಿಬಿಡುವನು.

**ಮಯ್ಯಾಕಾಶಾತ್ಮನಿ ಪ್ರಾಣೇ ಮನಸಾ ಘೋಷಮುದ್ವಹನ್ ।**
**ತತ್ರೋಪಲಬ್ಧಾ ಭೂತಾನಾಂ ಹಂಸೋ ವಾಚಃ ಶೃಣೋತ್ಯಸೌ ॥ 19 ॥**

19. ಆಕಾಶಾತ್ಮಕನಾದ ಸಮಷ್ಟಿಪ್ರಾಣರೂಪನಾದ ನನ್ನಲ್ಲಿ ಮನಸ್ಸಿಟ್ಟವನಾಗಿ ಮನಸ್ಸಿನಿಂದ ನಾದವನ್ನು ಚಿಂತಿಸುವವನಾದರೆ ಈ ಜೀವನು ಆ ಆಕಾಶದಲ್ಲಿ ಎಲ್ಲಾ ಭೂತಗಳ ವಿಚಿತ್ರವಾದ ವಾಕ್ಕುಗಳನ್ನೂ ಕೇಳಬಲ್ಲವನಾಗುವನು.

**ಚಕ್ಷುಸ್ತ್ವಷ್ಟರಿ ಸಂಯೋಜ್ಯ ತ್ವಷ್ಟಾರಮಪಿ ಚಕ್ಷುಷಿ ।**
**ಮಾಂ ತತ್ರ ಮನಸಾ ಧ್ಯಾಯನ್ ವಿಶ್ವಂ ಪಶ್ಯತಿ ಸೂಕ್ಷ್ಮದೃಕ್ ॥ 20 ॥**

20. ಇನ್ನು ಯಾವನು ಕಣ್ಣನ್ನು ಆದಿತ್ಯನಲ್ಲಿಯೂ ಆದಿತ್ಯನನ್ನು ಕಣ್ಣಿನಲ್ಲಿಯೂ ಒಂದುಗೂಡಿಸಿ ಮನಸ್ಸಿನಿಂದ ಆ ಉಪಾಧಿಯಲ್ಲಿಯೂ ನನ್ನನ್ನೇ ಧ್ಯಾನಿಸುವನೋ ಅವನು ಸೂಕ್ಷ್ಮದೃಷ್ಟಿಯನ್ನು ಪಡೆದವನಾಗಿ ಜಗತ್ತನ್ನೆಲ್ಲ ನೋಡುವವನಾಗುವನು.

**ಮನೋ ಮಯಿ ಸುಸಂಯೋಜ್ಯ ದೇಹಂ ತದನು ವಾಯುನಾ ।**
**ಮದ್ಧಾರಣಾನುಭಾವೇನ ತತ್ರಾತ್ಮಾ ಯತ್ರ ವೈ ಮನಃ ॥ 21 ॥**

21. ಮನಸ್ಸನ್ನೂ ದೇಹವನ್ನೂ ಅದರೊಡನೆ ಇರುವ ವಾಯುವಿನೊಡನೆ ನನ್ನಲ್ಲಿಯೇ ಒಂದುಗೂಡಿಸಿ ನನ್ನ ರೂಪದಲ್ಲೇ ನೆಲೆಗೊಳಿಸುವದರಿಂದ ಮನಸ್ಸು ಎಲ್ಲಿರುವದೋ ಅದರೊಡನೆಯೇ ಹೋಗಿ ಒಂದಾಗಿರುವನು.

**ಯದಾ ಮನ ಉಪಾದಾಯ ಯದ್ಯದ್ರೂಪಂ ಬುಭೂಷತಿ ।**
**ತತ್ತದ್ಭವೇನ್ಮನೋರೂಪಂ ಮದ್ಯೋಗಬಲಮಾಶ್ರಯಃ ॥ 22 ॥**

22. ಯಾವಾಗ ಮನಸ್ಸನ್ನು ಕರಣವಾಗಿಮಾಡಿಕೊಂಡು ಯಾವ ಯಾವ ದೇವಾದಿಗಳ ರೂಪವನ್ನು ಧರಿಸಲಿಚ್ಛಿಸುವನೋ, ನನ್ನ ಯೋಗಬಲ ವನ್ನಾಶ್ರಯಿಸಿರುವ ಆ ಸಾಧಕನಿಗೆ ಆಯಾ ಮನಶ್ಚಿಂತಿತರೂಪವು ಬರುವದು.

**ಪರಕಾಯಂ ವಿಶೇತ್ ಸಿದ್ಧ ಆತ್ಮಾನಂ ತತ್ರ ಭಾವಯೇತ್ ।**
**ಪಿಣ್ಡಂ ಹಿತ್ವಾ ವಿಶೇತ್ ಪ್ರಾಣೋ ವಾಯುಭೂತಃ ಷಡಙ್ಘ್ರಿವತ್ ॥ 23 ॥**

**ಪಾರ್ಷ್ಣ್ಯಾಪೀಡ್ಯ ಗುದಂ ಪ್ರಾಣಂ ಹೃದುರಃಕಣ್ಠಮೂರ್ಧಸು ।**
**ಆರೋಪ್ಯ ಬ್ರಹ್ಮರನ್ಧ್ರೇಣಬ್ರಹ್ಮ ನೀತ್ವೋತ್ಸೃಜೇತ್ ತನುಮ್ ॥ 24 ॥**

23–24. ಯೋಗಿಯು ಮತ್ತೊಂದು ಶರೀರವನ್ನು ಪ್ರವೇಶಿಸುವನಾದಾಗ ತನ್ನ ಆತ್ಮನನ್ನೇ ಅಲ್ಲಿಯೂ ಚಿಂತಿಸಬೇಕು. ಶರೀರವನ್ನು ಬಿಟ್ಟೆದ್ದು ವಾಯುಭೂತವಾದ ಪ್ರಾಣರೂಪನಾಗಿ ದುಂಬಿಯಂತೆ ನಿರಾಯಾಸದಿಂದ ಹಾರುವನಾಗಿ ಹಿಮ್ಮಡಿಯಭಾಗದಿಂದ ಅಪಾನವನ್ನು ಒತ್ತಿಹಿಡಿದು ಪ್ರಾಣವನ್ನು ಕ್ರಮವಾಗಿ ಹೃದಯ, ಎದೆ, ಕುತ್ತಿಗೆ, ನೆತ್ತಿಯಮೂಲಕ ಬ್ರಹ್ಮರಂಧ್ರಕ್ಕೆ ಏರಿಸಿ ಉಪಾಸ್ಯವಾದ ಬ್ರಹ್ಮಕ್ಕೆ ಮುಟ್ಟಿಸಿ ಶರೀರವನ್ನು ಬಿಡಬೇಕು.

**ವಿಹರಿಷ್ಯನ್ ಸುರಾಕ್ರೀಡೇ ಮತ್ಸ್ಥಂ ಸತ್ತ್ವಂ ವಿಭಾವಯೇತ್ ।**
**ವಿಮಾನೇನೋಪತಿಷ್ಠನ್ತಿ ಸತ್ತ್ವವೃತ್ತೀಃ ಸುರಸ್ತ್ರಿಯಃ ॥ 25 ॥**

**ಯಥಾ ಸಂಕಲ್ಪಯೇದ್ ಬುದ್ಧ್ಯಾ ಯದಾ ವಾ ಮತ್ಪರಃ ಪುಮಾನ್ ।**
**ಮಯಿ ಸತ್ಯೇ ಮನೋ ಯುಞ್ಜನ್ ತಥಾ ತತ್ಸಮುಪಾಶ್ನುತೇ ॥ 26 ॥**

25–26. ಆಗ ದೇವತೆಗಳ ಕ್ರೀಡಾಂಗಣದಲ್ಲಿ ವಿಹರಿಸುತ್ತಾ ಇರುವಲ್ಲಿ

ಸಾತ್ತ್ವಿಕ ವೃತ್ತಿಯುಳ್ಳ ದೇವಾಂಗನೆಯರು ವಿಮಾನದೊಡನೆ ಆಗಮಿಸುವರು. ಸಾಧಕನು ತನ್ನ ಮನಸ್ಸಂಕಲ್ಪಕ್ಕೆ ತಕ್ಕಂತೆ ಅಥವಾ (ಭಗವಂತನಾದ) ಸತ್ಯರೂಪನಾದ ನನ್ನಲ್ಲಿ ತತ್ಪರನಾಗಿ ಮನಸ್ಸನ್ನು ಸಮಾಧಾನಗೊಳಿಸಿದರೆ ಅಂಥ – ಫಲವನ್ನೇ ಪಡೆಯುವನು.

**ಯೋ ವೈ ಮದ್ಭಾವಮಾಪನ್ನ ಈಶಿತುರ್ವಶಿತುಃ ಪುಮಾನ್ ।**
**ಕುತಶ್ಚಿನ್ನ ವಿಹನ್ಯೇತ ತಸ್ಯ ಚಾಜ್ಞಾ ಯಥಾ ಮಮ ॥ 27 ॥**

27. ಎಲ್ಲರನ್ನೂ ಆಳುವ, ಎಲ್ಲವನ್ನೂ ವಶದಲಿಟ್ಟುಕೊಂಡಿರುವ ನನ್ನ ಭಾವವನ್ನೇ ಯಾವನು ಪಡೆದಿರುವನೋ ಅಂಥವನ ಅಪ್ಪಣೆಯು ನನ್ನ ಅಪ್ಪಣೆಯಂತೆಯೇ ಎಲ್ಲೆಲ್ಲಿಯೂ ಅಪ್ರತಿಹತವಾಗಿರುತ್ತದೆ.

**ಮದ್ಭಕ್ತ್ಯಾ ಶುದ್ಧಸತ್ತ್ವಸ್ಯ ಯೋಗಿನೋ ಧಾರಣಾವಿದಃ ।**
**ತಸ್ಯ ತ್ರೈಕಾಲಿಕೀ ಬುದ್ಧಿರ್ಜನ್ಮಮೃತ್ಯೂಪಬೃಂಹಿತಾ ॥ 28 ॥**

28. ನನ್ನ ಭಕ್ತಿಯಿಂದ, ಶುದ್ಧವಾದ ಮನಸ್ಸುಳ್ಳ ಧಾರಣಾಯೋಗವನ್ನು ಬಲ್ಲ ಯೋಗಿಗೆ ತನ್ನ ಜನ್ಮಮರಣಗಳ ವಿಜ್ಞಾನದೊಡನೆ ತ್ರಿಕಾಲಗಳಲ್ಲಿ ಸಂಭವಿಸುವ ಘಟನೆಗಳ ಜ್ಞಾನವೂ ಉಂಟಾಗುತ್ತದೆ.

**ಉದಾಸೀನೇ ಮಯಿ ಪರೇ ಪ್ರಕೃತೇರ್ಗುಣವೃತ್ತಿಷು ।**
**ಚಿನ್ತಯೇದ್ಧಾರಯೇಚ್ಚೇತ್ತೋ ದ್ವನ್ದ್ವೈರ್ನೈವಾಭಿಭೂಯತೇ ॥ 29 ॥**

29. ಪ್ರಕೃತಿಯ ಗುಣವೃತ್ತಿ(ವ್ಯಾಪಾರ)ಗಳಲ್ಲಿ ಅಸಂಗನಾದ ಪರನಾದ ನನ್ನಲ್ಲಿ ಚಿತ್ತವನ್ನಿಟ್ಟು ಧ್ಯಾನಮಾಡುತ್ತಾ ಅಂತಃಕರಣವನ್ನು ಸ್ಥಿರಗೊಳಿಸಿದರೆ ಎಲ್ಲಾವಿಧವಾದ ದ್ವಂದ್ವಗಳಿಂದಲೂ ದೂರನಾಗುವನು.

**ಸರ್ವಭೂತಹೃದಿಸ್ಥಂ ಮಾಮಾತ್ಮಾನಂ ಸರ್ವಸಾಕ್ಷಿಣಮ್ ।**
**ಧಾರಯೇದಾತ್ಮನಶ್ಚಿತ್ತಂ ಪರೇಷಾಂ ಪರಿಪಶ್ಯತಿ ॥ 30 ॥**

30. ಎಲ್ಲಾ ಪ್ರಾಣಿಗಳ ಹೃದಯುದಲ್ಲಿಯೂ ವಾಸವಾಗಿರುವ, ಸರ್ವಸಾಕ್ಷಿಯಾದ, ಆತ್ಮನಾದ ನನ್ನನ್ನು ಚಿತ್ತದಲ್ಲಿ ಧರಿಸಿದವನಾದರೆ ಮತ್ತೊಬ್ಬರ ಮನಸ್ಸನ್ನೂ ನೋಡಬಲ್ಲವನಾಗುವನು.

**ಅಗ್ನ್ಯಾದಿಭಿರ್ನ ಹನ್ಯೇತ ಮುನೇರ್ಯೋಗಮಯಂ ವಪುಃ ।**
**ಮದ್ಯೋಗಶ್ರಾನ್ತಚಿತ್ತಸ್ಯ ಯಾದಸಾಮುದಕಂ ಯಥಾ ॥ 31 ॥**

31. ಸಮುದ್ರಗಳಿಗೆ ನೀರು ಹೇಗೆ ಘಾತಕವಲ್ಲವೋ ಹಾಗೆ ನನ್ನ ಯೋಗದಿಂದ ಪಳಗಿದ ಚಿತ್ತವುಳ್ಳ ಸಾಧಕನ ಯೋಗಮಯವಾದ ಶರೀರವು ಬೆಂಕಿ ಮೊದಲಾದವುಗಳಿಂದ ನಾಶವಾಗುವದಿಲ್ಲ.

**ಮದ್ವಿಭೂತೀರಭಿಧ್ಯಾಯನ್ ಶ್ರೀವತ್ಸಾಸ್ತ್ರವಿಭೂಷಿತಾಃ ।**
**ಧ್ವಜಾತಪತ್ರವ್ಯಜನೈಃ ಸ ಭವೇದಪರಾಜಿತಃ ॥ 32 ॥**

32. ಶ್ರೀವತ್ಸ, ಅಸ್ತ್ರಗಳು – ಇವುಗಳಿಂದ ಅಲಂಕೃತವಾದ ನನ್ನ ವಿಭೂತಿಗಳನ್ನು ಧ್ವಜ, ಛತ್ರಿ, ಬೀಸಣಿಗೆ – ಮುಂತಾದ ಉಪಚಾರದ್ರವ್ಯಗಳ ಸಮೇತವಾಗಿ ಯಾವನು ಧ್ಯಾನಿಸುವನೋ ಅವನು ಎಂದೆಂದಿಗೂ ಜಯಿಸಲಸಾಧ್ಯನಾಗುವನು.

**ಉಪಾಸಕಸ್ಯ ಮಾಮೇವಂ ಯೋಗಧಾರಣಯಾ ಮುನೇಃ ।**
**ಸಿದ್ಧಯಃ ಪೂರ್ವಕಥಿತಾ ಉಪತಿಷ್ಠನ್ತ್ಯಶೇಷತಃ ॥ 33 ॥**

33. ಈ ರೀತಿಯಾಗಿ ನನ್ನನ್ನು ಯೋಗಧಾರಣೆಯಿಂದ ಉಪಾಸನೆ ಮಾಡುವ ಮುನಿಗೆ ಹಿಂದೆ ಹೇಳಿದ ಎಲ್ಲಾ ಸಿದ್ಧಿಗಳೂ ಕೈವಶವಾಗುವವು.

**ಜಿತೇನ್ದ್ರಿಯಸ್ಯ ದಾನ್ತಸ್ಯ ಜಿತಶ್ವಾಸಾತ್ಮನೋ ಮುನೇಃ ।**
**ಮದ್ಧಾರಣಾಂ ಧಾರಯತಃ ಕಾ ಸಾ ಸಿದ್ಧಿಃ ಸುದುರ್ಲಭಾ ॥ 34 ॥**

34. ಜಿತೇಂದ್ರಿಯನಾದ ದಮಸಂಪನ್ನನಾದ ಪ್ರಾಣಾಯಾಮ ಸಿದ್ಧಿಯನ್ನು ಪಡೆದ ಮನನಶೀಲನಾದ ನನ್ನ ಸ್ವರೂಪದಲ್ಲೇ ಮನಸ್ಸನ್ನು ಸ್ಥಿರಗೊಳಿಸಿದ ಯೋಗಿಗೆ ಯಾವ ಸಿದ್ಧಿಯು ತಾನೆ ದುರ್ಲಭವಾದೀತು?

**ಅನ್ತರಾಯಾನ್ ವದನ್ತ್ಯೇತಾ ಯುಞ್ಜತೋ ಯೋಗಮುತ್ತಮಮ್ ।**
**ಮಯಾ ಸಂಪದ್ಯಮಾನಸ್ಯ ಕಾಲಕ್ಷಪಣಹೇತವಃ ॥ 35 ॥**

35. ನನ್ನ ಅನುಗ್ರಹದಿಂದ ಉಂಟಾಗುವ, ಕಾಲಹರಣಕ್ಕೆ ಕಾರಣವಾದ ಈ ಸಿದ್ಧಿಗಳನ್ನು ಮೋಕ್ಷಪ್ರಾಪ್ತಿಗಾಗಿ ಯೋಗಾಭ್ಯಾಸವನ್ನು ಮಾಡುತ್ತಿರುವ ಸಾಧಕನಿಗೆ ವಿಘ್ನಗಳೆಂದು ಬಲ್ಲವರು ಹೇಳುತ್ತಾರೆ.

**ಜನ್ಮೌಷಧಿತಪೋಮನ್ತ್ರೈರ್ಯಾವತೀರಿಹ ಸಿದ್ಧಯಃ ।**
**ಯೋಗೇನಾಪ್ನೋತಿ ತಾಸ್ಸರ್ವಾ ನಾನ್ಯೈರ್ಯೋಗಗತಿಂ ವ್ರಜೇತ್ ॥ 36 ॥**

36. ಹುಟ್ಟುವಾಗಲೇ ಇರುವಂಥ ಮತ್ತು ಔಷಧಿ, ತಪಸ್ಸು, ಮಂತ್ರ – ಇವುಗಳಿಂದ ದೊರಕುವ ಎಷ್ಟೆಷ್ಟು ಸಿದ್ಧಿಗಳಿವೆಯೋ ಆ ಎಲ್ಲವನ್ನೂ ಯೋಗದಿಂದ ಪಡೆಯಬಹುದಾಗಿದೆ. ಆದರೆ ಯೋಗದಿಂದ ಸಿಕ್ಕುವ ಗತಿಯು ಮಾತ್ರ ಬೇರೆ ಯಾವ ಸಾಧನಗಳಿಂದಲೂ ದೊರಕಲಾರದು.

**ಸರ್ವಾಸಾಮಪಿ ಸಿದ್ಧೀನಾಂ ಹೇತುಃ ಪತಿರಹಂ ಪ್ರಭುಃ ।**
**ಅಹಂ ಯೋಗಸ್ಯ ಸಾಙ್ಖ್ಯಸ್ಯ ಧರ್ಮಸ್ಯ ಬ್ರಹ್ಮವಾದಿನಾಮ್ ॥ 37 ॥**

37. ಎಲ್ಲಾ ವಿಧವಾದ ಸಿದ್ಧಿಗಳಿಗೂ ಯೋಗಕ್ಕೂ ಸಾಂಖ್ಯ (ತತ್ತ್ವವಿಚಾರ)ಕ್ಕೂ ಧರ್ಮಕ್ಕೂ ಬ್ರಹ್ಮವಾದಿಗಳಾದ ಮುನಿಗಳಿಗೂ ನಾನೇ ಕಾರಣನು, ನಾನೇ ಯಜಮಾನನು, ನಾನೇ ಪ್ರಭುವು.

**ಅಹಮಾತ್ಮಾಽನ್ತರೋ ಬಾಹ್ಯೋಽನಾವೃತಃ ಸರ್ವದೇಹಿನಾಮ್ ।**
**ಯಥಾ ಭೂತಾನಿ ಭೂತೇಷು ಬಹಿರನ್ತಃ ಸ್ವಯಂ ತಥಾ ॥ 38 ॥**

38. ಎಲ್ಲಾ ದೇಹಿಗಳಿಗೂ ನಾನೇ ಒಳಗೂ ಹೊರಗೂ ವ್ಯಾಪಿಸಿರುವ ಆತ್ಮನು. ಹೇಗೆ ಚತುರ್ವಿಧಭೂತಗ್ರಾಮಗಳಲ್ಲಿ ಮಹಾಭೂತಗಳು ಒಳಗೂ ಹೊರಗೂ ವ್ಯಾಪಿಸಿಕೊಂಡಿರುವವೋ ಹಾಗೆ ನಾನು ಇರುವೆನು.

******

## ಭಗವಂತನ ವಿಭೂತಿಗಳ ವರ್ಣನೆ

(ಹನ್ನೊಂದನೆ ಸ್ಕಂಧ, ಹದಿನಾರನೆಯ ಅಧ್ಯಾಯ)

**ಉದ್ಧವ ಉವಾಚ –**

**ತ್ವಂ ಬ್ರಹ್ಮ ಪರಮಂ ಸಾಕ್ಷಾದನಾದ್ಯನ್ತಮಪಾವೃತಮ್ ।**
**ಸರ್ವೇಷಾಮಪಿ ಭಾವಾನಾಂ ತ್ರಾಣಸ್ಥಿತ್ಯಪ್ಯಯೋದ್ಭವಃ ॥ 1 ॥**

**ಉಚ್ಚಾವಚೇಷು ಭೂತೇಷು ದುರ್ಜ್ಞೇಯಮಕೃತಾತ್ಮಭಿಃ ।**
**ಉಪಾಸತೇ ತ್ವಾಂ ಭಗವನ್ ಯಾಥಾತಥ್ಯೇನ ಬ್ರಾಹ್ಮಣಾಃ ॥ 2 ॥**

**ಯೇಷು ಯೇಷು ಚ ಭಾವೇಷು ಭಕ್ತ್ಯಾ ತ್ವಾಂ ಪರಮರ್ಷಯಃ ।**
**ಉಪಾಸೀನಾಃ ಪ್ರಪದ್ಯನ್ತೇ ಸಂಸಿದ್ಧಿಂ ತದ್ವದಸ್ವ ಮೇ ॥ 3 ॥**

1–3. ಉದ್ಧವನಿಂತೆಂದನು: ಎಲೈ ಪೂಜ್ಯನೆ, ನೀನೇ ಸಾಕ್ಷಾದ್ ಪರಬ್ರಹ್ಮನು, ಆದ್ಯಂತರಹಿತನು, ಮೋಕ್ಷಕಾರಣನು, ಎಲ್ಲಾ ವಸ್ತುಗಳ ಉತ್ಪತ್ತಿಸ್ಥಿತಿಲಯಕಾರಣನು, ಮೇಲುಕೀಳೆಂದು ಕಂಡುಬರುವ ಎಲ್ಲಾ ಪ್ರಾಣಿಗಳಲ್ಲೂ ಇದ್ದುಕೊಂಡಿರುವ, ಜಿತೇಂದ್ರಿಯರಲ್ಲದವರಿಗೆ ತಿಳಿಯಲಸಾಧ್ಯ ನಾದ, ನಿನ್ನನ್ನು ಬ್ರಾಹ್ಮಣರು ಚೆನ್ನಾಗಿ ಅರಿತು ಉಪಾಸನೆ ಮಾಡುವರು. ಇನ್ನು ಪರಮರಾದ ಋಷಿಗಳು ಭಕ್ತಿಯಿಂದ ಯಾವಯಾವ ಭಾವಗಳಿಂದ ನಿನ್ನನ್ನು ಉಪಾಸನೆಮಾಡಿ ಸಂಸಿದ್ಧಿಯನ್ನು ಪಡೆಯುವರೋ ಅದನ್ನು ನನಗೆ ಹೇಳು.

**ಗೂಢಶ್ಚರಸಿ ಭೂತಾತ್ಮಾ ಭೂತಾನಾಂ ಭೂತಭಾವನ ।**
**ನ ತ್ವಾಂ ಪಶ್ಯನ್ತಿ ಭೂತಾನಿ ಪಶ್ಯನ್ತಂ ಮೋಹಿತಾನಿ ತೇ ॥ 4 ॥**

**ಯಾಃ ಕಾಶ್ಚ ಭೂಮೌ ದಿವಿ ವೈ ರಸಾಯಾಂ**
**ವಿಭೂತಯೋ ದಿಕ್ಷು ಮಹಾವಿಭೂತೇ ।**
**ತಾ ಮಹ್ಯಮಾಖ್ಯಾಹ್ಯನುಭಾವಿತಾಸ್ತೇ**
**ನಮಾಮಿ ತೇ ತೀರ್ಥಪದಾಙ್ಘ್ರಿಪದ್ಮಮ್ ॥ 5 ॥**

4–5. ಎಲೈ ಭೂತಭಾವನನೆ, ನೀನು ಭೂತಗಳೊಳಗೆಲ್ಲ ಹೊಕ್ಕಿದ್ದು ಸಂಚರಿಸುತ್ತಿರುವೆ, ಹೀಗಿದ್ದರೂ ಮೋಹಿತರಾದ ಆ ಪ್ರಾಣಿಗಳು ನೋಡುತ್ತಿರುವ ನಿನ್ನನ್ನು ನೋಡಲಾರವು. ಎಲೈ ಮಹಾವಿಭೂತಿಯೆ, ಭೂಲೋಕದಲ್ಲಿ ಮತ್ತು ದ್ಯುಲೋಕ, ರಸಾತಲಲೋಕ, ದಿಕ್ಕುಗಳು – ಹೀಗೆ ಎಲ್ಲಕಡೆಗಳಲ್ಲೂ ಯಾವ ನಿನ್ನ ಮಹಿಮೆ(ವಿಭೂತಿ)ಗಳಿವೆಯೋ, ನಿನ್ನ ಶಕ್ತಿವಿಶೇಷದಿಂದಲೇ ನಿಯೋಜಿತ ವಾಗಿವೆಯೋ ಅಂಥವುಗಳನ್ನು ನನಗೆ ಹೇಳು. ನಿನ್ನ ಪೂಜ್ಯವಾದ ಪಾದಪದ್ಮಗಳಿಗೆ ವಂದಿಸುವೆನು.

**ಶ್ರೀಭಗವಾನುವಾಚ –**

**ಏವಮೇತದಹಂ ಪೃಷ್ಟಃ ಪ್ರಶ್ನಂ ಪ್ರಶ್ನವಿದಾಂ ವರ ।**
**ಯುಯುತ್ಸುನಾ ವಿನಶನೇ ಸಪತ್ನೈರರ್ಜುನೇನ ವೈ ॥ 6 ॥**

6. ಶ್ರೀಭಗವಂತನಿಂತೆಂದನು: ಎಲೈ ಪ್ರಶ್ನವಿದರಲ್ಲಿ ಶ್ರೇಷ್ಠನೆ, ಶತ್ರುಗಳೊಡನೆ ಯುದ್ಧಮಾಡುವ ಇಚ್ಛೆಯಿಂದ ಕುರುಕ್ಷೇತ್ರದಲ್ಲಿ ಬಂದು ಸೇರಿದ ಅರ್ಜುನನಿಂದ ನಾನು ಇದೇ ರೀತಿಯಾಗಿ ಕೇಳಲ್ಪಟ್ಟೆನು. (ಆಗ ನಾನು ಅವನಿಗೆ ತಿಳಿಸಿದ ವಿಭೂತಿಗಳನ್ನೇ ನಿನಗೂ ಹೇಳುವೆನು).

**ಜ್ಞಾತ್ವಾ ಜ್ಞಾತಿವಧಂ ಗರ್ಹ್ಯಮಧರ್ಮ್ಯಂ ರಾಜ್ಯಹೇತುಕಮ್ ।**
**ತತೋ ನಿವೃತ್ತೋ ಹನ್ತಾಹಂ ಹತೋಽಯಮಿತಿ ಲೌಕಿಕಃ ॥ 7 ॥**

**ಸ ತದಾ ಪುರುಷವ್ಯಾಘ್ರೋ ಯುಕ್ತ್ಯಾ ಮೇ ಪ್ರತಿಬೋಧಿತಃ ।**
**ಅಭ್ಯಭಾಷತ ಮಾಮೇವಂ ಯಥಾ ತ್ವಂ ರಣಮೂರ್ಧನಿ ॥ 8 ॥**

7–8. ಅಧರ್ಮಯುಕ್ತವಾದ, ರಾಜ್ಯದ ನಿಮಿತ್ತವಾಗಿ ಸಂಭವಿಸಲಿರುವ ಜ್ಞಾತಿಗಳ ವಧೆಯನ್ನು ಮನದಂದು 'ನಾನು ಕೊಲ್ಲುವವನು, ಇವನು ಕೊಲ್ಲಲ್ಪಡುವವನು' ಎಂಬ ಲೌಕಿಕಭಾವನೆಯಿಂದ, ಯುದ್ಧದಿಂದ ಹಿಂತಿರುಗಿದ ಪುರುಷಶ್ರೇಷ್ಠನಾದ (ಅರ್ಜುನನನ್ನು) ನಾನು ತಿಳಿವಳಿಕೆಯನ್ನು ಕೊಟ್ಟು ಎಚ್ಚಿಸಿದೆನು. ನೀನು ಈಗ ಕೇಳಿದಂತೆಯೇ ಯುದ್ಧರಂಗದಲ್ಲಿ ಅವನು ನನ್ನನ್ನು ಕೇಳಿದನು. (ಆಗ ಅವನಿಗೆ ಕೊಟ್ಟ ಉತ್ತರವನ್ನೇ ನಿನಗೆ ಹೇಳುವೆನು).

**ಅಹಮಾತ್ಮೋದ್ಧವಾಮೀಷಾಂ ಭೂತಾನಾಂ ಸುಹೃದೀಶ್ವರಃ ।**
**ಅಹಂ ಸರ್ವಾಣಿ ಭೂತಾನಿ ತೇಷಾಂ ಸ್ಥಿತ್ಯುದ್ಭವಾಪ್ಯಯಃ ॥ 9 ॥**

9. ಎಲೈ ಉದ್ಧವನೆ, ಈ ಎಲ್ಲಾ ಭೂತಗಳಿಗೂ ನಾನೇ ಆತ್ಮನು, ಸ್ನೇಹಿತನು, ಈಶ್ವರನು; ಎಲ್ಲಾ ಭೂತಗಳೂ ನಾನೇ. ಅವುಗಳ ಉತ್ಪತ್ತಿಸ್ಥಿತಿಲಯಗಳೂ ನಾನೇ.

**ಅಹಂ ಗತಿರ್ಗತಿಮತಾಂ ಕಾಲಃ ಕಲಯತಾಮಹಮ್ ।**
**ಗುಣಾನಾಂ ಚಾಪ್ಯಹಂ ಸಾಮ್ಯಂ ಗುಣಿನ್ಯೌತ್ಪತ್ತಿಕೋ ಗುಣಃ ॥ 10 ॥**

10. ಓಡಾಡುವವರ ಗತಿಯು ನಾನು. ಎಣಿಸುವವರಲ್ಲಿ ನಾನು ಕಾಲನು. ಗುಣಗಳ ಸಾಮ್ಯಾವಸ್ಥೆಯು ನಾನು. ಧರ್ಮಿಯಲ್ಲಿರುವ ಸ್ವಾಭಾವಿಕ ಗುಣವು ನಾನು.

**ಗುಣಿನಾಮಪ್ಯಹಂ ಸೂತ್ರಂ ಮಹತಾಂ ಚ ಮಹಾನಹಮ್ ।**
**ಸೂಕ್ಷ್ಮಾಣಾಮಪ್ಯಹಂ ಜೀವೋ ದುರ್ಜಯಾನಾಮಹಂ ಮನಃ ॥ 11 ॥**

11. ಗುಣಿಗಳಲ್ಲಿ ನಾನು ಪ್ರಥಮಕಾರ್ಯನು. ದೊಡ್ಡದರಲ್ಲಿ ದೊಡ್ಡದು ನಾನು. ಸೂಕ್ಷ್ಮಗಳಲ್ಲಿ ಸೂಕ್ಷ್ಮನಾದ ಜೀವನು ನಾನು. ಜಯಿಸಲಸಾಧ್ಯವಾದ ವಸ್ತುಗಳಲ್ಲಿ ಮನಸ್ಸು ನಾನು.

**ಹಿರಣ್ಯಗರ್ಭೋ ವೇದಾನಾಂ ಮನ್ತ್ರಾಣಾಂ ಪ್ರಣವಸ್ತ್ರಿವೃತ್ ।**
**ಅಕ್ಷರಾಣಾಮಕಾರೋಽಸ್ಮಿ ಪದಾನಿ ಛನ್ದಸಾಮಹಮ್ ॥ 12 ॥**

12. ವೇದಗಳಲ್ಲಿ (ಅಧ್ಯಯನವಂತರಲ್ಲಿ) ಹಿರಣ್ಯಗರ್ಭನು ನಾನು. ಮಂತ್ರಗಳಲ್ಲಿ ಮಾತ್ರಾತ್ರಯಾತ್ಮಕವಾದ ಓಂಕಾರವು ನಾನು. ಅಕ್ಷರಗಳಲ್ಲಿ ಅಕಾರವು ನಾನು. ಛಂದಸ್ಸುಗಳಲ್ಲಿ ತ್ರಿಪದವಾದ ಗಾಯತ್ರೀಛಂದಸ್ಸು ನಾನು.

**ಇನ್ದ್ರೋಽಹಂ ಸರ್ವದೇವಾನಾಂ ವಸೂನಾಮಸ್ಮಿ ಹವ್ಯವಾಟ್ ।**
**ಆದಿತ್ಯಾನಾಮಹಂ ವಿಷ್ಣೂ ರುದ್ರಾಣಾಂ ನೀಲಲೋಹಿತಃ ॥ 13 ॥**

13. ದೇವತೆಗಳಲ್ಲಿ ಇಂದ್ರನು ನಾನು. ವಸುಗಳಲ್ಲಿ ಅಗ್ನಿಯು ನಾನು. ಆದಿತ್ಯರುಗಳಲ್ಲಿ ವಿಷ್ಣುವೂ ರುದ್ರರಲ್ಲಿ ನೀಲಲೋಹಿತನೂ ಆಗಿರುತ್ತೇನೆ.

**ಬ್ರಹ್ಮರ್ಷೀಣಾಂ ಭೃಗುರಹಂ ರಾಜರ್ಷೀಣಾಮಹಂ ಮನುಃ ।**
**ದೇವರ್ಷೀಣಾಂ ನಾರದೋಽಹಂ ಹವಿರ್ಧಾನ್ಯಸ್ಮಿ ಧೇನುಷು ॥ 14 ॥**

14. ಬ್ರಹ್ಮರ್ಷಿಗಳಲ್ಲಿ ನಾನು ಭೃಗುವು. ರಾಜರ್ಷಿಗಳಲ್ಲಿ ನಾನು ಮನುವು, ದೇವರ್ಷಿಗಳಲ್ಲಿ ನಾರದನು. ಧೇನುಗಳಲ್ಲಿ ಕಾಮಧೇನುವು ನಾನು.

**ಸಿದ್ಧೇಶ್ವರಾಣಾಂ ಕಪಿಲಃ ಸುಪರ್ಣೋಽಹಂ ಪತತ್ರಿಣಾಮ್ ।**
**ಪ್ರಜಾಪತೀನಾಂ ದಕ್ಷೋಽಹಂ ಪಿತೄಣಾಮಹಮರ್ಯಮಾ ॥ 15 ॥**

15. ಸಿದ್ಧಶ್ರೇಷ್ಠರಲ್ಲಿ ನಾನು ಕಪಿಲನು. ಪಕ್ಷಿಗಳಲ್ಲಿ ಗರುಡನು ನಾನು, ಪ್ರಜಾಪತಿಗಳಲ್ಲಿ ನಾನು ದಕ್ಷನು. ಪಿತೃಗಳಲ್ಲಿ ನಾನು ಆರ್ಯಮನು.

**ಮಾಂ ವಿದ್ಧ್ಯುದ್ಧವ ದೈತ್ಯಾನಾಂ ಪ್ರಹ್ಲಾದಮಸುರೇಶ್ವರಮ್ ।**
**ಸೋಮಂ ನಕ್ಷತ್ರೌಷಧೀನಾಂ ಧನೇಶಂ ಯಕ್ಷರಾಕ್ಷಸಾಮ್ ॥ 16 ॥**

16. ಎಲೈ ಉದ್ಧವನೆ, ದೈತ್ಯರಲ್ಲಿ ಅಸುರೇಶ್ವರನಾದ ಪ್ರಹ್ಲಾದನೇ ನಾನೆಂದು ತಿಳಿ. ನಕ್ಷತ್ರಗಳು ಮತ್ತು ಸಸ್ಯಗಳಲ್ಲಿ ನಾನು ಚಂದ್ರನು. ಯಕ್ಷರಾಕ್ಷಸರಲ್ಲಿ (ನಾನು) ಕುಬೇರನು.

**ಐರಾವತಂ ಗಜೇನ್ದ್ರಾಣಾಂ ಯಾದಸಾಂ ವರುಣಂ ಪ್ರಭುಮ್ ।**
**ತಪತಾಂ ದ್ಯುಮತಾಂ ಸೂರ್ಯಂ ಮನುಷ್ಯಾಣಾಂ ಚಮೂಪತಿಮ್ ॥ 17 ॥**

17. ಆನೆಗಳಲ್ಲಿ ಶ್ರೇಷ್ಠವಾದ ಐರಾವತವು ನಾನು. ಜಲದೇವತೆಗಳಲ್ಲಿ ಪ್ರಭುವಾದ ವರುಣನು ನಾನು. ಬೆಳಗುವವರಲ್ಲಿ ಪ್ರಕಾಶಮಾನನಾದ ಸೂರ್ಯನು ನಾನು. ಮನುಷ್ಯರಲ್ಲಿ ಸೇನಾಪತಿಯು ನಾನು.

**ಉಚ್ಚೈಃಶ್ರವಾಸ್ತುರಙ್ಗಾಣಾಂ ಧಾತೂನಾಮಸ್ಮಿ ಕಾಞ್ಚನಮ್ ।**
**ಯಮಃ ಸಂಯಮತಾಂ ಚಾಹಂ ಸರ್ಪಾಣಾಮಸ್ಮಿ ವಾಸುಕಿಃ ॥ 18 ॥**

18. ಕುದುರೆಗಳಲ್ಲಿ ಉಚ್ಚೈಃಶ್ರವಸ್ಸು ನಾನು. ಲೋಹಗಳಲ್ಲಿ ಚಿನ್ನವು ನಾನು, ಸಂಯಮನಮಾಡುವವರಲ್ಲಿ ಯಮನು ನಾನು. ಸರ್ಪಗಳಲ್ಲಿ ವಾಸುಕಿಯು ನಾನು.

**ನಾಗೇನ್ದ್ರಾಣಾಮನನ್ತೋಽಹಂ ಮೃಗೇನ್ದ್ರಃ ಶೃಂಗಿದಂಷ್ಟ್ರಿಣಾಮ್ ।**
**ಆಶ್ರಮಾಣಾಮಹಂ ತುರ್ಯೋ ವರ್ಣಾನಾಂ ಪ್ರಥಮೋಽನಘ ॥ 19 ॥**

19. ಎಲೈ ಪಾಪರಹಿತನೆ, ನಾಗಶ್ರೇಷ್ಠರಲ್ಲಿ ನಾನು ಅನಂತನು, ಕೋಡು ಕೋರೆದಾಡೆಗಳುಳ್ಳ ಪ್ರಾಣಿಗಳೊಳಗೆ ಸಿಂಹವು ನಾನು, ಆಶ್ರಮಗಳಲ್ಲಿ ಸಂನ್ಯಾಸಾಶ್ರಮವು ನಾನು, ಜಾತಿಗಳಲ್ಲಿ ಬ್ರಾಹ್ಮಣನು ನಾನು.

**ತೀರ್ಥಾನಾಂ ಸ್ರೋತಸಾಂ ಗಙ್ಗಾ ಸಮುದ್ರಃ ಸರಸಾಮಹಮ್ ।**
**ಆಯುಧಾನಾಂ ಧನುರಹಂ ತ್ರಿಪುರಘ್ನೋ ಧನುಷ್ಮತಾಮ್ ॥ 20 ॥**

20. ನದಿಗಳಲ್ಲಿ ಮತ್ತು ಪವಿತ್ರತೀರ್ಥಗಳಲ್ಲಿ ಗಂಗೆಯು ನಾನು. ಸರೋವರಗಳಲ್ಲಿ ಸಮುದ್ರವು ನಾನು, ಆಯುಧಗಳಲ್ಲಿ ಧನಸ್ಸು ನಾನು, ಧನುರ್ಧಾರಿಗಳಲ್ಲಿ ಈಶ್ವರನು ನಾನು.

**ಧಿಷ್ಣ್ಯಾನಾಮಸ್ಮ್ಯಹಂ ಮೇರುಃ ಗಹನಾನಾಂ ಹಿಮಾಲಯಃ ।**
**ವನಸ್ಪತೀನಾಮಶ್ವತ್ಥಃ ಓಷಧೀನಾಮಹಂ ಯವಃ ॥ 21 ॥**

21. ನಿವಾಸಸ್ಥಾನಗಳಲ್ಲಿ ನಾನು ಮೇರುವು. ದುರ್ಗಮವಾದವುಗಳಲ್ಲಿ ಹಿಮಾಲಯವು ನಾನು, ವನಸ್ಪತಿಗಳಲ್ಲೆಲ್ಲ ಅರಳೀಮರವು ನಾನು. ಸಸ್ಯಗಳಲ್ಲಿ ಯವ(ಅಕ್ಕಿ)ವು ನಾನು.

**ಪುರೋಧಸಾಂ ವಸಿಷ್ಠೋಽಹಂ ಬ್ರಹ್ಮಿಷ್ಠಾನಾಂ ಬೃಹಸ್ಪತಿಃ ।**
**ಸ್ಕನ್ದೋಽಹಂ ಸರ್ವಸೇನಾನ್ಯಾಮಗ್ರಣ್ಯಾಂ ಭಗವಾನಜಃ ॥ 22 ॥**

22. ಪುರೋಹಿತರಲ್ಲಿ ನಾನು ವಸಿಷ್ಠನು, ವೇದಾರ್ಥನಿಷ್ಠರಲ್ಲಿ ಬೃಹಸ್ಪತಿಯು ನಾನು, ಸೇನಾಪತಿಗಳಲ್ಲಿ ನಾನು ಷಣ್ಮುಖನು. ಸನ್ಮಾರ್ಗಪ್ರವರ್ತಕರಲ್ಲಿ ನಾನು ಬ್ರಹ್ಮನು.

**ಯಜ್ಞಾನಾಂ ಬ್ರಹ್ಮಯಜ್ಞೋಽಹಂ ವ್ರತಾನಾಮವಿಹಿಂಸನಮ್ ।**
**ವಾಯ್ವಗ್ನ್ಯರ್ಕಾಮ್ಬುನಾಮಾತ್ಮಾ ಶುಚೀನಾಮಪ್ಯಹಂ ಶುಚಿಃ ॥ 23 ॥**

23. ಯಜ್ಞಗಳಲ್ಲಿ ಬ್ರಹ್ಮಯಜ್ಞವು (ವೇದಾಧ್ಯಯನವು) ನಾನು. ವ್ರತಗಳಲ್ಲಿ ಅಹಿಂಸೆಯು ನಾನು. ಗಾಳಿ, ಬೆಂಕಿ, ಸೂರ್ಯ, ನೀರು – ಇವುಗಳ ಆತ್ಮನು ನಾನು, ಶುಚಿಯಾಗಿರುವವರಲ್ಲಿಯೂ ನಾನು ಶುಚಿಯು.

**ಯೋಗಾನಾಮಾತ್ಮಸಂರೋಧೋ ಮನ್ತ್ರೋಽಸ್ಮಿ ವಿಜಿಗೀಷತಾಮ್ ।**
**ಆನ್ವೀಕ್ಷಕೀ ಕೌಶಲಾನಾಂ ವಿಕಲ್ಪಃ ಖ್ಯಾತಿವಾದಿನಾಮ್ ॥ 24 ॥**

24. ಯೋಗಗಳಲ್ಲಿ ಸಮಾಧಿಯು ನಾನು. ಗೆಲ್ಲುವವರ ನೀತಿಯು ನಾನು, ಜಾಣತನದಲ್ಲಿ ದಂಡನೀತಿಯು ನಾನು. ಖ್ಯಾತಿವಾದಿಗಳ ವಿಕಲ್ಪವು ನಾನು.

**ಸ್ತ್ರೀಣಾಂ ತು ಶತರೂಪಾಽಹಂ ಪುಂಸಾಂ ಸ್ವಾಯಂಭುವೋ ಮನುಃ ।**
**ನಾರಾಯಣೋ ಮುನೀನಾಂ ಚ ಕುಮಾರೋ ಬ್ರಹ್ಮಚಾರಿಣಾಮ್ ॥ 25 ॥**

25. ಹೆಂಗಸರಲ್ಲಿ ಶತರೂಪೆಯು ನಾನು. ಪುರುಷರಲ್ಲಿ ಸ್ವಾಯಂಭುವಮನುವು ನಾನು. ಮುನಿಗಳಲ್ಲಿ ನಾನು ನಾರಾಯಣನು. ಬ್ರಹ್ಮಚಾರಿಗಳಲ್ಲಿ ಸನತ್ಕುಮಾರನು ನಾನು.

**ಧರ್ಮಾಣಾಮಸ್ಮಿ ಸಂನ್ಯಾಸಃ ಕ್ಷೇಮಾಣಾಮಬಹಿರ್ಮತಿಃ ।**
**ಗುಹ್ಯಾನಾಂ ಸೂನೃತಂ ಮೌನಂ ಮಿಥುನಾನಾಮಜಸ್ತ್ವಹಮ್ ॥ 26 ॥**

26. ಧರ್ಮಗಳಲ್ಲಿ ಎಲ್ಲಾಭೂತಗಳಿಗೂ ಅಭಯದಾನಮಾಡುವ ಸಂನ್ಯಾಸವು ನಾನು. ಕ್ಷೇಮಗಳಲ್ಲಿ ಅಂತರ್ನಿಷ್ಠೆಯು (ಸುಮ್ಮನಿರುವದು) ನಾನು. ರಹಸ್ಯಗಳಲ್ಲಿ ಪ್ರಿಯವಚನವೂ ಮೌನವೂ ನಾನು. ಮಿಥುನಗಳಲ್ಲಿ ಪ್ರಜಾಪತಿಯು ನಾನು.

**ಸಂವತ್ಸರೋಽಸ್ಮ್ಯನಿಮಿಷಾಮೃತೂನಾಂ ಮಧುಮಾಧವೌ ।**
**ಮಾಸಾನಾಂ ಮಾರ್ಗಶೀರ್ಷೋಽಹಂ ನಕ್ಷತ್ರಾಣಾಂ ತಥಾಽಭಿಜಿತ್ ॥ 27 ॥**

27. ಅಪ್ರಮತ್ತರಲ್ಲಿ ಸಂವತ್ಸರವು ನಾನು, ಋತುಗಳಲ್ಲಿ ಚೈತ್ರ ವೈಶಾಖಗಳು ನಾನು. ಮಾಸಗಳಲ್ಲಿ ಮಾರ್ಗಶೀರ್ಷವು ನಾನು. ನಕ್ಷತ್ರಗಳಲ್ಲಿ ಅಭಿಜಿತ್ ಎಂಬುದು ನಾನು.

**ಅಹಂ ಯುಗಾನಾಂ ಚ ಕೃತಂ ಧೀರಾಣಾಂ ದೇವಲೋಽಸಿತಃ ।**
**ದ್ವೈಪಾಯನೋಽಸ್ಮಿ ವ್ಯಾಸಾನಾಂ ಕವೀನಾಂ ಕಾವ್ಯ ಆತ್ಮವಾನ್ ॥ 28 ॥**

28. ಯುಗಗಳಲ್ಲಿ ನಾನು ಕೃತಯುಗವು. ಧೀರರಲ್ಲಿ ಅಸಿತನೂ ದೇವಲನೂ ಆಗಿರುವೆನು. ವ್ಯಾಸರುಗಳಲ್ಲಿ ಕೃಷ್ಣದ್ವೈಪಾಯನನು ನಾನು. ವಿದ್ವಾಂಸರಲ್ಲಿ ಆತ್ಮಜ್ಞನಾದ ಶುಕ್ರನು ನಾನು.

**ವಾಸುದೇವೋ ಭಗವತಾಂ ತ್ವಂ ತು ಭಾಗವತೇಷ್ವಹಮ್ ।**
**ಕಿಂಪುರುಷಾಣಾಂ ಹನುಮಾನ್ ವಿದ್ಯಾಧ್ರಾಣಾಂ ಸುದರ್ಶನಃ ॥ 29 ॥**

29. ಭಗವಂತರುಗಳಲ್ಲಿ ವಾಸುದೇವನು ನಾನು. ಭಗವದ್ಭಕ್ತರಲ್ಲಿ ನೀನೇ ನಾನು. ಕಿಂಪುರುಷರಲ್ಲಿ ಹನುಮಂತನು ನಾನು. ವಿದ್ಯಾಧರರಲ್ಲಿ ಸುದರ್ಶನನು ನಾನು.

**ರತ್ನಾನಾಂ ಪದ್ಮರಾಗೋಽಸ್ಮಿ ಪದ್ಮಕೋಶಃ ಸುಪೇಶಸಾಮ್ ।**
**ಕುಶೋಽಸ್ಮಿ ದರ್ಭಜಾತೀನಾಂ ಗವ್ಯಮಾಜ್ಯಂ ಹವಿಷ್ಷಹಮ್ ॥ 30 ॥**

30. ರತ್ನಗಳಲ್ಲಿ ಪದ್ಮರಾಗವು ನಾನು. ಸುಂದರವಸ್ತು(ಮೃದು)ಗಳಲ್ಲಿ ತಾವರೆಯ ದಂಟು ನಾನು. ದರ್ಭೆ(ಹುಲ್ಲು)ಗಳಲ್ಲಿ ಕುಶವು ನಾನು. ಹವಿಸ್ಸುಗಳಲ್ಲಿ ಹಸುವಿನ ತುಪ್ಪವು ನಾನು.

**ವ್ಯವಸಾಯಿನಾಮಹಂ ಲಕ್ಷ್ಮೀಃ ಕಿತವಾನಾಂ ಛಲಗ್ರಹಃ ।**
**ತಿತಿಕ್ಷಾಽಸ್ಮಿ ತಿತಿಕ್ಷೂಣಾಂ ಸತ್ತ್ವಂ ಸತ್ತ್ವವತಾಮಹಮ್ ॥ 31 ॥**

31. ಉದ್ಯೋಗಶೀಲರಾದವರಿಗೆ ದೊರಕುವ ಸಂಪತ್ತು ನಾನು. ಮೋಸಗಾರರಲ್ಲಿ ದ್ಯೂತವು ನಾನು. ಸಹಿಷ್ಣುಗಳ ತಿತಿಕ್ಷೆಯು ನಾನು. ಸಾತ್ತ್ವಿಕರ ಸತ್ತ್ವಗುಣವೇ ನಾನು.

**ಓಜಃ ಸಹೋ ಬಲವತಾಂ ಕರ್ಮಾಽಹಂ ವಿದ್ಧಿ ಸಾತ್ವತಾಮ್ ।**
**ಸಾತ್ವತಾಂ ವನಮೂರ್ತೀನಾಮಾದಿಮೂರ್ತಿರಹಂ ಪರಾ ॥ 32 ॥**

32. ಬಲಶಾಲಿಗಳ ಬಲವೂ ಶಕ್ತಿಯೂ ನಾನು. ಭಕ್ತರ ಭಕ್ತಿಯಿಂದ ಕೂಡಿದ ಕರ್ಮವು ನಾನು. ಸಾತ್ವತರ ವಾಸುದೇವಾದಿನವವ್ಯೂಹಮೂರ್ತಿಗಳಲ್ಲಿ ಮೊದಲನೆಯ ಮೂರ್ತಿಯು ನಾನು.

**ವಿಶ್ವಾವಸುಃ ಪೂರ್ವಚಿತ್ತಿಃ ಗನ್ಧರ್ವಾಪ್ಸರಸಾಮಹಮ್ ।**
**ಭೂಧರಾಣಾಮಹಂ ಸ್ಥೈರ್ಯಂ ಗನ್ಧಮಾತ್ರಮಹಂ ಭುವಃ ॥ 33 ॥**

33. ಗಂಧರ್ವರಲ್ಲಿ ವಿಶ್ವಾವಸುವೂ, ಅಪ್ಸರಸ್ತ್ರೀಯರಲ್ಲಿ ಪೂರ್ವಚಿತ್ತಿಯೂ ನಾನು. ಬೆಟ್ಟಗಳಲ್ಲಿರುವ ಸ್ಥಿರತೆಯು ನಾನು. ಭೂಮಿಯೊಳಗಿರುವ ಗಂಧ(ವಾಸನೆ)ವು ನಾನು.

**ಅಪಾಂ ರಸಶ್ಚ ಪರಮಸ್ತೇಜಿಷ್ಠಾನಾಂ ವಿಭಾವಸುಃ ।**
**ಪ್ರಭಾ ಸೂರ್ಯೇನ್ದುತಾರಾಣಾಂ ಶಬ್ದೋಽಹಂ ನಭಸಃ ಪರಃ ॥ 34 ॥**

34. ನೀರುಗಳಲ್ಲಿರುವ ರಸ(ರುಚಿ)ವು ನಾನು. ತೇಜಸ್ವಿಗಳಲ್ಲಿರುವ ಅಗ್ನಿಯು ನಾನು, ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿರುವ ಬೆಳಕು ನಾನು. ಆಕಾಶದಲ್ಲಿರುವ ಹೆಚ್ಚಿನ ಶಬ್ದವು ನಾನು.

**ಬ್ರಹ್ಮಣ್ಯಾನಾಂ ಬಲಿರಹಂ ವೀರಾಣಾಮಹಮರ್ಜುನಃ ।**
**ಭೂತಾನಾಂ ಸ್ಥಿತಿರುತ್ಪತ್ತಿರಹಂ ವೈ ಪ್ರತಿಸಙ್ಕ್ರಮಃ ॥ 35 ॥**

35. ಭಗವದ್ಭಕ್ತರಲ್ಲಿ ಬಲಿಚಕ್ರವರ್ತಿಯು ನಾನು. ವೀರರಲ್ಲಿ ಅರ್ಜುನನು ನಾನು. ಪ್ರಾಣಿಗಳ ಉತ್ಪತ್ತಿ, ಸ್ಥಿತಿ, ಪ್ರಲಯಗಳೂ – ನಾನೇ.

**ಗತ್ಯುಕ್ತ್ಯುತ್ಸರ್ಗೋಪಾದಾನಮಾನನ್ದಸ್ಪರ್ಶಲಕ್ಷಣಮ್ ।**
**ಆಸ್ವಾದಶ್ರುತ್ಯವಘ್ರಾಣಮಹಂ ಸರ್ವೇನ್ದ್ರಿಯೇನ್ದ್ರಿಯಮ್ ॥ 36 ॥**

36. ಹೋಗುವಿಕೆ, ಮಾತಾಡುವಿಕೆ, ಬಿಡುವಿಕೆ, ತೆಗೆದುಕೊಳ್ಳುವಿಕೆ, ಆನಂದವನ್ನನುಭವಿಸುವಿಕೆ, ಮುಟ್ಟುವಿಕೆ, ರುಚಿನೋಡುವಿಕೆ, ಕೇಳುವಿಕೆ, ಮೂಸುವಿಕೆ – ಇವೆಲ್ಲವೂ ನಾನು. ಇಂದ್ರಿಯಗಳ ಇಂದ್ರಿಯತತ್ತ್ವ(ತಿರುಳು)ವೇ ನಾನು.

**ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರಹಂ ಮಹಾನ್ ।**
**ವಿಕಾರಃ ಪುರುಷೋಽವ್ಯಕ್ತಂ ರಜಃ ಸತ್ತ್ವಂ ತಮಃ ಪರಮ್ ॥ 37 ॥**

37. ಭೂಮಿ, ಗಾಳಿ, ಆಕಾಶ, ನೀರು, ಬೆಂಕಿ – ಇವುಗಳ ತನ್ಮಾತ್ರೆಗಳು ಮಹತ್ತತ್ವ, ಪಂಚಮಹಾಭೂತಗಳು, ಜೀವ, ಅವ್ಯಕ್ತ, ರಜಸ್ಸು, ಸತ್ತ್ವ, ತಮಸ್ಸು, ಪರಬ್ರಹ್ಮ – ಎಲ್ಲವೂ ನಾನು.

**ಅಹಮೇತತ್ ಪ್ರಸಙ್ಖ್ಯಾನಂ ಜ್ಞಾನಂ ತತ್ತ್ವವಿನಿಶ್ಚಯಃ ।**
**ಮಯೇಶ್ವರೇಣ ಜೀವೇನ ಗುಣೇನ ಗುಣಿನಾ ವಿನಾ ॥**

**ಸರ್ವಾತ್ಮನಾಪಿ ಸರ್ವೇಣ ನ ಭಾವೋ ವಿದ್ಯತೇ ಕ್ವಚಿತ್ ॥ 38 ॥**

38. ತತ್ತ್ವಗಳ ಗಣನೆಯೂ ಜ್ಞಾನವೂ ತತ್ತ್ವನಿಶ್ಚಯವೂ ನಾನೇ. ಜೀವೇಶ್ವರ ಭಾವವೂ ಗುಣಗುಣಿಭಾವವೂ ಎಲ್ಲಕ್ಕೂ ಆತ್ಮನಾಗಿರುವಿಕೆಯೂ ನಾನೇ. ನನ್ನ ಹೊರತು ಬೇರೆ ಯಾವ ವಸ್ತುವೂ ಎಲ್ಲಿಯೂ ಇಲ್ಲ.

**ಸಂಖ್ಯಾನಂ ಪರಮಾಣೂನಾಂ ಕಾಲೇನ ಕ್ರಿಯತೇ ಮಯಾ ।**
**ನ ತಥಾ ಮೇ ವಿಭೂತೀನಾಂ ಸೃಜತೋಽಣ್ಡಾನಿ ಕೋಟಿಶಃ ॥ 39 ॥**

39. ಪೃಥಿವ್ಯಾದಿಪರಮಾಣುಗಳ ಲೆಕ್ಕವನ್ನು ಬಹಳಕಾಲದ ವ್ಯಯದಿಂದ ನಾನೇ ಮಾಡಬಲ್ಲೆನು. ಆದರೆ ಕೋಟಿಗಟ್ಟಲೆಯ ಬ್ರಹ್ಮಾಂಡಗಳನ್ನುಂಟುಮಾಡುವ ನನ್ನ ವಿಭೂತಿಗಳನ್ನು ಮಾತ್ರ ಲೆಕ್ಕಮಾಡಲಾಗುವದಿಲ್ಲ.

**ತೇಜಃ ಶ್ರೀಃ ಕೀರ್ತಿರೈಶ್ವರ್ಯಂ ಹ್ರೀಸ್ತ್ಯಾಗಃ ಸೌಭಗಂ ಭಗಃ ।**
**ವೀರ್ಯಂ ತಿತಿಕ್ಷಾ ವಿಜ್ಞಾನಂ ಯತ್ರ ಯತ್ರ ಸ ಮೇಽಂಶಕಃ ॥ 40 ॥**

40. ಎಲ್ಲೆಲ್ಲಿ ತೇಜಸ್ಸು, ಸಂಪತ್ತು, ಕೀರ್ತಿ, ಸ್ವಾತಂತ್ರ್ಯ, ಪಾಪಗಳ ಆಚರಣೆಯ ಬಗ್ಗೆ ನಾಚಿಕೆ, ತ್ಯಾಗ, ಆಹ್ಲಾದಕತ್ವ, ಭಾಗ್ಯ, ಬಲ, ಸಹಿಷ್ಣುತೆ, ವಿಜ್ಞಾನ – ಇವುಗಳು ಕಂಡು ಬರುವವೋ ಅವೆಲ್ಲವೂ, ಅಂಥ ಗುಣಸಂಪನ್ನನೂ ನನ್ನ ಅಂಶವೇ (ಎಂದು ತಿಳಿಯಬೇಕು).

**ಏತಾಸ್ತೇ ಕೀರ್ತಿತಾಃ ಸರ್ವಾಃ ಸಂಕ್ಷೇಪೇಣ ವಿಭೂತಯಃ ।**
**ಮನೋವಿಕಾರಾ ಏವೈತೇ ಯಥಾ ವಾಚ್ಯಾಭಿಧೀಯತೇ ॥ 41 ॥**

41. ಈವರೆಗೆ ಸಂಕ್ಷೇಪವಾಗಿ ಹೇಳಿದ ವಿಭೂತಿಗಳೆಲ್ಲವೂ ಮನಸ್ಸಿನ ಕಲ್ಪನೆಗಳೇ ಹೊರತು ಪರಮಾರ್ಥವಲ್ಲ. ಕೇವಲ ಮಾತಿನಿಂದ ವರ್ಣಿಸಲ್ಪಟ್ಟ ಕಲ್ಪಿತವಸ್ತುಗಳಾಗಿವೆ.

**ವಾಚಂ ಯಚ್ಛ ಮನೋ ಯಚ್ಛ ಪ್ರಾಣಂ ಯಚ್ಛೇನ್ದ್ರಿಯಾಣಿ ಚ ।**
**ಆತ್ಮಾನಮಾತ್ಮನಾ ಯಚ್ಛ ನ ಭೂಯಃ ಕಲ್ಪಸೇಽಧ್ವನೇ ॥ 42 ॥**

42. ಆದ್ದರಿಂದ ವಾಕ್ಕು, ಮನಸ್ಸು, ಪ್ರಾಣ, ಇಂದ್ರಿಯಗಳು – ಇವುಗಳನ್ನು ಬಿಗಿಹಿಡಿ. ಸತ್ತ್ವಗುಣವಿಶಿಷ್ಟವಾದ ಮನಸ್ಸಿನಿಂದ ನಿಗ್ರಹಮಾಡು. ಹೀಗಾದರೆ ಮತ್ತೆ ನೀನು ಸಂಸಾರವನ್ನು ಪಡೆಯಲಾರೆ.

*****

## ಭಗವಂತನಿಂದ ವರ್ಣಾಶ್ರಮಧರ್ಮಗಳ ನಿರೂಪಣೆ

**(ಹನ್ನೊಂದನೆಯ ಸ್ಕಂಧ, ಹದಿನೇಳನೆಯ ಅಧ್ಯಾಯ)**

**ಶ್ರೀಭಗವಾನುವಾಚ –**

**ಧರ್ಮ್ಯ ಏಷ ತವ ಪ್ರಶ್ನೋ ನೈಃಶ್ರೇಯಸಕರೋ ನೃಣಾಮ್ ।**
**ವರ್ಣಾಶ್ರಮಾಚಾರವತಾಂ ತಮುದ್ಧವ ನಿಬೋಧ ಮೇ ॥ 9 ॥**

9. ಭಗವಂತನಿಂತೆಂದನು: ಉದ್ಧವನೆ, ನಿನ್ನ ಪ್ರಶ್ನೆಯು ಧರ್ಮಕ್ಕನುಗುಣವಾಗಿರುತ್ತದೆ. ಇದು ವರ್ಣಾಶ್ರಮಧರ್ಮವನ್ನು ಅನುಸರಿಸುವ ಜನರಿಗೆ ಮೋಕ್ಷಕ್ಕೆ ಸಾಧನವಾಗಿರುತ್ತದೆ. ಆದ್ದರಿಂದ ಅದನ್ನು ನಿನಗೆ ತಿಳಿಯಿಸುವೆನು, ಕೇಳು.

**ಆದೌ ಕೃತಯುಗೇ ವರ್ಣೋ ನೃಣಾಂ ಹಂಸ ಇತಿ ಸ್ಮೃತಃ ।**
**ಕೃತಕೃತ್ಯಾಃ ಪ್ರಜಾ ಜಾತ್ಯಾ ತಸ್ಮಾತ್ ಕೃತಯುಗಂ ವಿದುಃ ॥ 10 ॥**

10. ಮೊಟ್ಟಮೊದಲು ಕೃತಯುಗದಲ್ಲಿ ಜನರ ವರ್ಣವು ಹಂಸವೆನಿಸಿತ್ತು. ಪ್ರಜೆಗಳು ಜನ್ಮದಿಂದಲೇ ಕೃತಕೃತ್ಯರಾಗಿರುತ್ತಿದ್ದರು. ಆದ್ದರಿಂದ ಅದನ್ನು ಬಲ್ಲವರು 'ಕೃತಯುಗ'ವೆನ್ನುತ್ತಾರೆ.

**ವೇದಃ ಪ್ರಣವ ಏವಾಗ್ರೇ ಧರ್ಮೋಽಹಂ ವೃಷರೂಪಧೃತ್ ।**
**ಉಪಾಸತೇ ತಪೋನಿಷ್ಠಾ ಹಂಸಂ ಮಾಂ ಮುಕ್ತಕಿಲ್ಬಿಷಾಃ ॥ 11 ॥**

11. ವೇದವು ಮೊದಲು ಪ್ರಣವಮಾತ್ರವಾಗಿತ್ತು; ಧರ್ಮವು ವೃಷಭರೂಪನಾದ ನಾನೇ; (ಆಗ) ಮುಕ್ತಪಾಪರಾಗಿರುವ ಪ್ರಜೆಗಳು ಮನಸ್ಸಿನ ಮತ್ತು ಇಂದ್ರಿಯಗಳ ಏಕಾಗ್ರತಾರೂಪವಾದ ತಪಸ್ಸಿನಲ್ಲಿ ನಿಷ್ಠರಾಗಿ ಹಂಸನಾದ ನನ್ನನ್ನು ಉಪಾಸನೆ ಮಾಡುತ್ತಿದ್ದರು.

**ತ್ರೇತಾಮುಖೇ ಮಹಾಭಾಗ ಪ್ರಾಣಾನ್ಮೇ ಹೃದಯಾತ್ತ್ರಯೀ ।**
**ವಿದ್ಯಾ ಪ್ರಾದುರಭೂತ್ತಸ್ಯಾ ಅಹಮಾಸಂ ತ್ರಿವೃನ್ಮಖಃ ॥ 12 ॥**

12. ಎಲೈ ಮಹಾಭಾಗನೆ, ತ್ರೇತಾಯುಗದಲ್ಲಿ ವಿರಾಡ್ರೂಪನಾದ ನನ್ನ ಹೃದಯದ ಕಡೆಯಿಂದ ಋಗ್ಯಜುಸ್ಸಾಮರೂಪವಾದ ತ್ರಯೀವಿದ್ಯೆಯು ಹೊರತೋರಿಕೊಂಡಿತು. ಅದರಿಂದ ನಾನು ಹೋತೃ, ಅಧ್ವರ್ಯು, ಉದ್ಗಾತೃ – ಎಂಬ ಮೂರುರೂಪವಾದ ಯಜ್ಞನಾದೆನು.

**ವಿಪ್ರಕ್ಷತ್ರಿಯವಿಟ್ಶೂದ್ರಾ ಮುಖಬಾಹೂರುಪಾದಜಾಃ ।**
**ವೈರಾಜಾತ್ ಪುರುಷಾಜ್ಜಾತಾ ಯ ಆತ್ಮಾಚಾರಲಕ್ಷಣಾಃ ॥ 13 ॥**

13. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಇವರು ಅನುಕ್ರಮದಿಂದ ವಿರಾಟ್ಪುರುಷನ ಮುಖ, ಬಾಹುಗಳು, ತೊಡೆಗಳು, ಪಾದಗಳು – ಇವುಗಳಿಂದ ಹುಟ್ಟಿದರು. ಅವರಿಗೆ ಸ್ವಧರ್ಮದ ಆಚರಣೆಯೇ ಜ್ಞಾಪಕವಾಗಿತ್ತು.

**ಗೃಹಾಶ್ರಮೋ ಜಘನತೋ ಬ್ರಹ್ಮಚರ್ಯಂ ಹೃದೋ ಮಮ ।**
**ವಕ್ಷಃಸ್ಥಲಾದ್ ವನೇ ವಾಸೋ ನ್ಯಾಸಃ ಶೀರ್ಷಣಿ ಸಂಸ್ಥಿತಃ ॥ 14 ॥**

14. ಗೃಹಸ್ಥಾಶ್ರಮವು ನನ್ನ ಜಘನದಿಂದಲೂ ನೈಷ್ಠಿಕಬ್ರಹ್ಮಚರ್ಯವು ಹೃದಯದಿಂದಲೂ ವಾನಪ್ರಸ್ಥಾಶ್ರಮವು ವಕ್ಷಸ್ಥಲದಿಂದಲೂ ಉಂಟಾದವು. ಸಂನ್ಯಾಸವು ಶಿರಸ್ಸಿನಲ್ಲಿ ನಿಂತಿತ್ತು.

**ವರ್ಣಾನಾಮಾಶ್ರಮಾಣಾಂ ಚ ಜನ್ಮಭೂಮ್ಯನುಸಾರಿಣೀಃ ।**
**ಆಸನ್ ಪ್ರಕೃತಯೋ ನೃಣಾಂ ನೀಚೈರ್ನೀಚೋತ್ತಮೋತ್ತಮಾಃ ॥ 15 ॥**

15. ವರ್ಣಗಳಿಗೂ ಆಶ್ರಮಗಳಿಗೂ ತಮ್ಮತಮ್ಮ ಜನ್ಮಭೂಮಿಗೆ ಅನುಸಾರವಾಗಿ ಆಯಾ ವರ್ಣದವರ ಮತ್ತು ಆಶ್ರಮದವರ ಪ್ರಕೃತಿಗಳು ತಾರತಮ್ಯದಿಂದ ನೀಚ, ಉತ್ತಮ, ಉತ್ತಮೋತ್ತಮ – ಎಂಬ ಭೇದವನ್ನು ತಳೆದವು.

**ಶಮೋ ದಮಸ್ತಪಃ ಶೌಚಂ ಸಂತೋಷಃ ಕ್ಷಾನ್ತಿರಾರ್ಜವಮ್ ।**
**ಮದ್ಭಕ್ತಿಶ್ಚ ದಯಾ ಸತ್ಯಂ ಬ್ರಹ್ಮಪ್ರಕೃತಯಸ್ತ್ವಿಮಾಃ ॥ 16 ॥**

16. ಶಮ, ದಮ, ತಪಸ್ಸು, ಶುಚಿತ್ವ, ತೃಪ್ತಿ, ಕ್ಷಮೆ, ಋಜುತ್ವ, ಭಗವಂತನಾದ ನನ್ನಲ್ಲಿ ಭಕ್ತಿ, ದಯೆ, ಸತ್ಯ – ಇವುಗಳು ಬ್ರಾಹ್ಮಣ್ಯದ ಸ್ವಭಾವಗಳು.

**ತೇಜೋ ಬಲಂ ಧೃತಿಃ ಶೌರ್ಯಂ ತಿತಿಕ್ಷೌದಾರ್ಯಮುದ್ಯಮಃ ।**
**ಸ್ಥೈರ್ಯಂ ಬ್ರಹ್ಮಣ್ಯತೈಶ್ವರ್ಯಂ ಕ್ಷತ್ರಪ್ರಕೃತಯಸ್ತ್ವಿಮಾಃ ॥ 17 ॥**

17. ಪ್ರತಾಪ, ಬಲ, ಧೈರ್ಯ, ಶೂರತನ, ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳುವದು, ಉದಾರಭಾವ, ಕಾರ್ಯದಲ್ಲಿ ಉದ್ಯುಕ್ತನಾಗಿರುವದು, ಸ್ಥಿರತೆ, ಬ್ರಾಹ್ಮಣರಲ್ಲಿ ಭಕ್ತಿ, ಐಶ್ವರ್ಯ – ಇವು ಕ್ಷತ್ರಿಯಸ್ವಭಾವಗಳು.

**ಆಸ್ತಿಕ್ಯಂ ದಾನನಿಷ್ಠಾ ಚ ಅದಮ್ಭೋ ಬ್ರಹ್ಮಸೇವನಮ್ ।**
**ಅತುಷ್ಟಿರರ್ಥೋಪಚಯೈರ್ವೈಶ್ಯಪ್ರಕೃತಯಸ್ತ್ವಿಮಾಃ ॥ 18 ॥**

18. ಆಸ್ತಿಕ್ಯಬುದ್ಧಿ, ದಾನದಲ್ಲಿ ತತ್ಪರತೆ, ದಂಭವಿಲ್ಲದಿರುವದು, ಬ್ರಾಹ್ಮಣಸೇವೆ, ಧನಸಂಗ್ರಹದ ವಿಷಯಕ್ಕೆ ತೃಪ್ತಿಯಿಲ್ಲದಿರುವದು – ಇವು ವೈಶ್ಯಪ್ರಕೃತಿಗಳು.

**ಶುಶ್ರೂಷಣಂ ದ್ವಿಜಗವಾಂ ದೇವಾನಾಂ ಚಾಪ್ಯಮಾಯಯಾ ।**
**ತತ್ರ ಲಬ್ಧೇನ ಸಂತೋಷಃ ಶೂದ್ರಪ್ರಕೃತಯಸ್ತ್ವಿಮಾಃ ॥ 19 ॥**

19. ದ್ವಿಜರ ಸೇವೆ, ಗೋವುಗಳ ಸೇವೆ, ದೇವತೆಗಳ ಸೇವೆ – ಇವುಗಳನ್ನು ಕಪಟವಿಲ್ಲದೆ ಮಾಡುವದು, ಅದರಿಂದ ದೊರೆತಷ್ಟರಿಂದ ತೃಪ್ತನಾಗಿರುವದು – ಇವು ಶೂದ್ರನ ಪ್ರಕೃತಿಗಳು.

**ಅಶೌಚಮನೃತಂ ಸ್ತೇಯಂ ನಾಸ್ತಿಕ್ಯಂ ಶುಷ್ಕವಿಗ್ರಹಃ ।**
**ಕಾಮಃ ಕ್ರೋಧಶ್ಚ ತರ್ಷಶ್ಚ ಸ್ವಭಾವೋಽನ್ತೇವಸಾಯಿನಾಮ್ ॥ 20 ॥**

20. ಅಶುಚಿಯಾಗಿರುವದು, ಸುಳ್ಳುಹೇಳುವದು, ಕಳವುಮಾಡುವದು, ನಾಸ್ತಿಕನಾಗಿರುವದು, ಒಣಜಗಳದಲ್ಲಿ ತೊಡಗುವದು, ಕಾಮಕ್ರೋಧತೃಷ್ಣೆಗಳಿಗೆ ಒಳಗಾಗಿರುವದು – ಇವು ಅಂತ್ಯಜರ ಪ್ರಕೃತಿಯು.

**ಅಹಿಂಸಾ ಸತ್ಯಮಸ್ತೇಯಮಕಾಮಕ್ರೋಧಲೋಭತಾ ।**
**ಭೂತಪ್ರಿಯಹಿತೇಹಾ ಚ ಧರ್ಮೋಽಯಂ ಸಾರ್ವವರ್ಣಿಕಃ ॥ 21 ॥**

21. ಅಹಿಂಸೆ, ಸತ್ಯವನ್ನು ನುಡಿಯುವದು, ಕಾಮಕ್ರೋಧಲೋಭಗಳಿಗೆ

ಒಳಗಾಗದೆ ಇರುವದು, ಪ್ರಾಣಿಗಳಿಗೆ ಪ್ರಿಯವೂ ಹಿತವೂ ಆಗಿರುವದನ್ನು ಮಾಡುವದರಲ್ಲಿ ತೊಡಗುವದು – ಇವು ಎಲ್ಲಾ ವರ್ಣಗಳಿಗೂ ಸಮಾನವಾಗಿರುವ ಧರ್ಮವು.

**ದ್ವಿತೀಯಂ ಪ್ರಾಪ್ಯಾನುಪೂರ್ವ್ಯಾಜ್ಜನ್ಮೋಪನಯನಂ ದ್ವಿಜಃ ।**
**ವಸನ್ ಗುರುಕುಲೇ ದಾನ್ತೋ ಬ್ರಹ್ಮಾಧೀಯೀತ ಚಾಽಽಹುತಃ ॥ 22 ॥**

22. ದ್ವಿಜನಾದವನು ಸಂಸ್ಕಾರಕ್ರಮದಿಂದ ಎರಡನೆಯ ಜನ್ಮವನ್ನು ಪಡೆದು, ಬ್ರಹ್ಮಚರ್ಯದಿಂದ ಗುರುಕುಲದಲ್ಲಿ ಇಂದ್ರಿಯನಿಗ್ರಹಪೂರ್ವಕವಾಗಿ ಗುರುಗಳು ಕರೆದಾಗ ವೇದಾಧ್ಯಯನವನ್ನು ಮಾಡುತ್ತಿರಬೇಕು.

**ಮೇಖಲಾಜಿನದಣ್ಡಾಕ್ಷಬ್ರಹ್ಮಸೂತ್ರಕಮಣ್ಡಲೂನ್ ।**
**ಜಟಿಲೋಽಧೌತದದ್ವಾಸೋಽರಕ್ತಪೀಠಃ ಕುಶಾನ್ ದಧತ್ ॥ 23 ॥**

23. ಮೇಖಲೆ, ಅಜಿನ, ದಂಡ, ಅಕ್ಷಮಾಲೆ, ಯಜ್ಞೋಪವೀತ, ಕಮಂಡಲು – ಇವುಗಳನ್ನು ಧರಿಸಿ, ಜಟಾಧಾರಿಯಾಗಿ ತೋರಿಕೆಗಾಗಿ ದಂತವನ್ನೂ ವಸ್ತ್ರಗಳನ್ನೂ ಶುಭ್ರಗೊಳಸಿಕೊಳ್ಳದೆ, ಬಣ್ಣವನ್ನು ಹಾಕಿದ ಪೀಠದಮೇಲೆ ಕುಳಿತುಕೊಳ್ಳದೆ, ಕುಶಧಾರಿಯಾಗಿರಬೇಕು.

**ಸ್ನಾನಭೋಜನಹೋಮೇಷು ಜಪೋಚ್ಚಾರೇ ಚ ವಾಗ್ಯತಃ ।**
**ನ ಚ್ಛಿನ್ದ್ಯಾನ್ನಖರೋಮಾಣಿ ಕಕ್ಷೋಪಸ್ಥಗತಾನ್ಯಪಿ ॥ 24 ॥**

24. ಸ್ನಾನ, ಭೋಜನ, ಹೋಮಕರ್ಮ, ಜಪ, ಮಲಮೂತ್ರವಿಸರ್ಜನೆ – ಇವುಗಳ ಕಾಲದಲ್ಲಿ ಮೌನದಿಂದಿರಬೇಕು. ಕಂಕುಳು, ಜನನೇಂದ್ರಿಯ – ಇವುಗಳಲ್ಲಿರುವ ರೋಮಗಳನ್ನಾಗಲಿ, ಉಗುರನ್ನಾಗಲಿ ಕತ್ತರಿಸಿಕೊಳ್ಳಬಾರದು.

**ರೇತೋ ನಾವಕಿರೇಜ್ಜಾತು ಬ್ರಹ್ಮವ್ರತಧರಃ ಸ್ವಯಮ್ ।**
**ಅವಕೀರ್ಣೋಽವಗಾಹ್ಯಾಪ್ಸು ಯತಾಸುಸ್ತ್ರಿಪದೀಂ ಜಪೇತ್ ॥ 25 ॥**

25. ಬ್ರಹ್ಮಚಾರಿವ್ರತದಲ್ಲಿರುವಾತನು ಎಂದಿಗೂ ತನ್ನ ರೇತಸ್ಸನ್ನು ಕೆಳಕ್ಕೆ ಬೀಳಿಸಬಾರದು; ಯಾವದಾದರೂ ಕಾರಣದಿಂದ ರೇತಃಸ್ಖಲನವಾದರೆ ಅವಗಾಹನಸ್ನಾನವನ್ನು ಮಾಡಿ ಪ್ರಾಣಾಯಾಮವನ್ನು ಮಾಡಿ ಗಾಯತ್ರೀಜಪವನ್ನು ಮಾಡಬೇಕು.

**ಅಗ್ನ್ಯರ್ಕಾಚಾರ್ಯಗೋವಿಪ್ರಗುರುವೃದ್ಧಸುರಾಞ್ಛುಚಿಃ ।**
**ಸಮಾಹಿತ ಉಪಾಸೀತ ಸನ್ಧ್ಯೇ ಚ ಯತವಾಗ್ ಜಪನ್ ॥ 26 ॥**

26. ಅಗ್ನಿ, ಸೂರ್ಯ, ಆಚಾರ್ಯ, ಗೋವು, ವಿಪ್ರ, ಗುರುಗಳು, ಹಿರಿಯರು, ದೇವತೆಗಳು – ಇವರನ್ನು ಶುಚಿಯಾಗಿ ಸಮಾಧಾನಚಿತ್ತದಿಂದ ಉಪಾಸನೆಮಾಡಬೇಕು. ಸಂಧ್ಯಾಕಾಲದಲ್ಲಿ ಮೌನದಿಂದ ಜಪವನ್ನು ಮಾಡುತ್ತಿರಬೇಕು.

**ಆಚಾರ್ಯಂ ಮಾಂ ವಿಜಾನೀಯಾನ್ನಾವಮನ್ಯೇತ ಕರ್ಹಿಚಿತ್ ।**
**ನ ಮರ್ತ್ಯಬುದ್ಧ್ಯಾಽಸೂಯೇತ ಸರ್ವದೇವಮಯೋ ಗುರುಃ ॥ 27 ॥**

27. ಆಚಾರ್ಯನನ್ನು ಭಗವಂತನಾದ ನಾನೆಂದೇ ಭಾವಿಸಬೇಕು, ಎಂದಿಗೂ ಅಪಮಾನಗೊಳಿಸಬಾರದು. ಮರ್ತ್ಯಮಾತ್ರನೆಂದು ಭಾವಿಸಿ ಅವನಲ್ಲಿ ದೋಷಗಳನ್ನೆತ್ತಿ ಎಣಿಸಬಾರದು. ಏಕೆಂದರೆ ಗುರುವು ಸರ್ವದೇವತಾರೂಪನು.

**ಸಾಯಂಪ್ರಾತರುಪಾನೀಯ ಭೈಕ್ಷ್ಯಂ ತಸ್ಮೈ ನಿವೇದಯೇತ್ ।**
**ಯಚ್ಚಾನ್ಯದಪ್ಯನುಜ್ಞಾತಮುಪಯುಞ್ಜೀತ ಸಂಯತಃ ॥ 28 ॥**

28. ಸಂಜೆಯಲ್ಲಿಯೂ ಬೆಳಗಿನಕಾಲದಲ್ಲಿಯೂ ಭೈಕ್ಷ್ಯವನ್ನು ತಂದು ಆತನಿಗೆ ಅದನ್ನು ಅರ್ಪಿಸಬೇಕು. ಭೈಕ್ಷ್ಯವಲ್ಲದೆ, ಮತ್ತೇನನ್ನೇ ಆಗಲಿ, ಆತನ ಅನುಜ್ಞೆಯಿಂದಲೇ ಮೌನಪೂರ್ವಕವಾಗಿ ತಾನು ಉಪಯೋಗಿಸಿಕೊಳ್ಳಬೇಕು.

**ಶುಶ್ರೂಷಮಾಣ ಆಚಾರ್ಯಂ ಸದೋಪಾಸೀತ ನೀಚವತ್ ।**
**ಯಾನಶಯ್ಯಾಸನಸ್ಥಾನೈರ್ನಾತಿದೂರೇ ಕೃತಾಞ್ಜಲಿಃ ॥ 29 ॥**

29. ಆಚಾರ್ಯನನ್ನು ಶುಶ್ರೂಷೆಮಾಡುತ್ತಾ ಅವನನ್ನು ಆಳಿನಂತೆ ಯಾವಾಗಲೂ ಸೇವಿಸುತ್ತಿರಬೇಕು. ಆತನು ಹೋಗುತ್ತಿರುವಾಗ, ಮಲಗಿರುವಾಗ, ಕುಳಿತಿರುವಾಗ, ನಿಂತಿರುವಾಗ, ಸಮೀಪದಲ್ಲಿಯೇ ಕೈಮುಗಿದುಕೊಂಡಿರಬೇಕು.

**ಏವಂವೃತ್ತೋ ಗುರುಕುಲೇ ವಸೇದ್ ಭೋಗವಿವರ್ಜಿತಃ ।**
**ವಿದ್ಯಾ ಸಮಾಪ್ಯತೇ ಯಾವದ್ ಬಿಭ್ರದ್ವ್ರತಮಖಣ್ಡಿತಮ್ ॥ 30 ॥**

30. ವಿದ್ಯೆಯ ಗ್ರಹಣವು ಸಮಾಪ್ತಿಯಾಗುವವರೆಗೂ ಈ ನಡತೆಯಿಂದ,

ಭೋಗವರ್ಜಿತನಾಗಿ ಗುರುಕುಲದಲ್ಲಿ ವಾಸಮಾಡಿಕೊಂಡಿರಬೇಕು. ಬ್ರಹ್ಮಚಾರಿ ವ್ರತವನ್ನು ಅವಿರತವಾಗಿ ಪಾಲಿಸಿಕೊಂಡಿರಬೇಕು.

******

## ಬ್ರಹ್ಮಲೋಕ ಪ್ರಾಪ್ತಿಗಾಗಿ ನೈಷ್ಠಿಕ ಬ್ರಹ್ಮಚಾರಿ ಧರ್ಮಗಳು
### (ಹನ್ನೊಂದನೆಯ ಸ್ಕಂಧ, ಹದಿನೇಳನೆಯ ಅಧ್ಯಾಯ)

**ಯದ್ಯಸೌ ಛಂದಸಾಂ ಲೋಕಮಾರೋಕ್ಷ್ಯನ್ ಬ್ರಹ್ಮವಿಷ್ಟಪಮ್ ।**
**ಗುರವೇ ವಿನ್ಯಸೇದ್ದೇಹಂ ಸ್ವಾಧ್ಯಾಯಾರ್ಥಂ ಬೃಹದ್ವ್ರತಃ ॥ 31 ॥**

31. ಒಂದು ವೇಳೆ ಅವನು ವೇದಗಳ ಸ್ಥಾನವಾದ ಬ್ರಹ್ಮಲೋಕವನ್ನೇ ಪಡೆಯಲು ಬಯಸಿದರೆ ಯಾವಜ್ಜೀವ ನೈಷ್ಠಿಕ ಬ್ರಹ್ಮಚರ್ಯವನ್ನು ಸ್ವೀಕರಿಸಿ ವೇದಗಳ ಸ್ವಾಧ್ಯಾಯಕ್ಕಾಗಿ ಗುರುವಿನ ಸೇವೆಗಾಗಿಯೇ ಜೀವನವನ್ನು ಮುಡಿಪಾಗಿಡಬೇಕು.

**ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷು ಮಾಂ ಪರಮ್ ।**
**ಅಪೃಥಗ್ಧೀರುಪಸೀತ ಬ್ರಹ್ಮವರ್ಚಸ್ವ್ಯಕಲ್ಮಷಃ ॥ 32 ॥**

32. ಹೀಗೆ ಆಚರಿಸುತ್ತಾ ಅವನು ಬ್ರಹ್ಮವರ್ಚಸ್ವಿಯೂ ಪಾಪರಹಿತನೂ ಆಗುತ್ತಾನೆ. ಪರಮಾತ್ಮನಾದ ನಾನೇ ಅಗ್ನಿಯಲ್ಲಿಯೂ ಗುರುವಿನಲ್ಲಿಯೂ ತನ್ನಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದಾನೆ ಎಂದು ಭೇದದೃಷ್ಟಿಯಿಲ್ಲದೆ ಉಪಾಸನೆ ಮಾಡಬೇಕು.

**ಸ್ತ್ರೀಣಾಂ ನಿರೀಕ್ಷಣಸ್ಪರ್ಶಸಂಲಾಪಕ್ಷ್ವೇಲನಾದಿಕಮ್ ।**
**ಪ್ರಾಣಿನೋ ಮಿಥುನೀಭೂತಾನಗೃಹಸ್ಥೋಽಗ್ರತಸ್ತ್ಯಜೇತ್ ॥ 33 ॥**

33. ಗೃಹಸ್ಥನಲ್ಲದವನು ಸ್ತ್ರೀಯರನ್ನು ನೋಡುವದು, ಮುಟ್ಟುವದು, ಹರಟೆ ಹೊಡೆಯುವದು, ಹಾಸ್ಯವಿನೋದಾದಿಗಳನ್ನು ಮಾಡುವದು, ತನ್ನೆದುರಿಗೆ ಮೈಥುನದಲ್ಲಿರುವ ಪ್ರಾಣಿಗಳನ್ನು ನೋಡುವದು – ಇವುಗಳನ್ನು ಬಿಡಬೇಕು.

**ಶೌಚಮಾಚಮನಂ ಸ್ನಾನಂ ಸನ್ಧ್ಯೋಪಾಸನಮಾರ್ಜವಮ್ ।**
**ತೀರ್ಥಸೇವಾ ಜಪೋಽಸ್ಪೃಶ್ಯಾ ಭಕ್ಷ್ಯಾಸಮ್ಭಾಷ್ಯವರ್ಜನಮ್ ॥ 34 ॥**

**ಸರ್ವಾಶ್ರಮಪ್ರಯುಕ್ತೋಽಯಂ ನಿಯಮಃ ಕುಲನನ್ದನ ।**
**ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯಸಂಯಮಃ ॥ 35 ॥**

34–35. ಎಲೌ ಉದ್ಧವನೆ, ಬಾಹ್ಯಾಭ್ಯಂತರ ಶುಚಿತ್ವ, ಆಚಮನ, ಸ್ನಾನ, ಸಂಧ್ಯೋಪಾಸನೆ, ಸರಳತೆ, ಪುಣ್ಯಕ್ಷೇತ್ರಗಳಲ್ಲಿ ವಾಸಿಸುವದು, ಜಪ, ಮುಟ್ಟಬಾರದ್ದನ್ನು ಮುಟ್ಟದೆ, ತಿನ್ನಬಾರದ್ದನ್ನು ತಿನ್ನದೇ, ಮಾತನಾಡಬಾರದವರನ್ನು ಮಾತನಾಡಿಸದೇ ಇರುವದು; ಮನೋವಾಕ್ಕಾಯಗಳನ್ನು ನಿಗ್ರಹಿಸುವದು, ಸರ್ವಪ್ರಾಣಿಗಳಲ್ಲಿ ನನ್ನ ಭಾವನೆ ಮಾಡುವದು, ಇವು ಎಲ್ಲಾ ಆಶ್ರಮದವರಿಗೆ ಸಮಾನವಾದ ನಿಯಮಗಳು.

**ಏವಂ ಬೃಹದ್ವ್ರತಧರೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।**
**ಮದ್ಭಕ್ತಸ್ತೀವ್ರತಪಸಾ ದಗ್ಧಕರ್ಮಾಶಯೋಽಮಲಃ ॥ 36 ॥**

36. ಹೀಗೆ ನೈಷ್ಠಿಕ ಬ್ರಹ್ಮಚಾರಿವ್ರತವನ್ನು ಇಟ್ಟುಕೊಂಡವನು ಅಗ್ನಿಯಂತೆ ತೇಜಸ್ವಿಯಾಗಿ ಜ್ವಲಿಸುತ್ತಿರುವ ನನ್ನ ಭಕ್ತನು ತೀವ್ರ ತಪಸ್ಸಿನಿಂದ ಪೂರ್ವಕರ್ಮವನ್ನು ದಹಿಸಿಕೊಂಡವನು ಶುದ್ಧನಾಗಿ (ಬ್ರಹ್ಮಲೋಕಕ್ಕೆ ಹೋಗಲು ಯೋಗ್ಯನಾಗುತ್ತಾನೆ).

******

## ಮುಮುಕ್ಷುಗೃಹಸ್ಥರ ಧರ್ಮ

(ಹನ್ನೊಂದನೆಯ ಸ್ಕಂಧ, ಹದಿನೇಳನೆಯ ಅಧ್ಯಾಯ)

**ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರ ಕಾಮಾಯ ನೇಷ್ಯತೇ ।**
**ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನನ್ತಸುಖಾಯ ಚ ॥ 42 ॥**

42. ಬ್ರಾಹ್ಮಣನ ದೇಹವಿರುವದು ಕ್ಷುದ್ರವಾದ ಕಾಮಭೋಗಕ್ಕಲ್ಲ, ಆದರೆ, ಕ್ಲಿಷ್ಟವಾದ ತಪಸ್ಸನ್ನಾಚರಿಸಿ ನಂತರ ಅನಂತಸುಖವನ್ನು ಅನುಭವಿಸುವದಕ್ಕೋಸ್ಕರ ಇದೆ.

**ಶಿಲೋಞ್ಛವೃತ್ತ್ಯಾ ಪರಿತುಷ್ಟಚಿತ್ತೋ**
**ಧರ್ಮಂ ಮಹಾನ್ತಂ ವಿರಜಂ ಜುಷಾಣಃ ।**
**ಮಯ್ಯರ್ಪಿತಾತ್ಮಾ ಗೃಹ ಏವ ತಿಷ್ಠ–**
**ನ್ನಾತಿಪ್ರಸಕ್ತಃ ಸಮುಪೈತಿ ಶಾನ್ತಿಮ್ ॥ 43 ॥**

ಹೊಲ, ಅಂಗಡಿ, ಬೀದಿಮೊದಲಾದವುಗಳಲ್ಲಿ ಬಿದ್ದಿರುವ ಕಾಳುಗಳನ್ನು ಆರಿಸಿತಂದು ಅದರಿಂದ ಜೀವಿಸುತ್ತ ಸಂತೋಷವಾಗಿರುವವನು, ಉತ್ಕೃಷ್ಟವಾದ ಧರ್ಮವನ್ನು ನಿಷ್ಕಾಮವಾಗಿ ಮಾಡುವವನು ತನ್ನನ್ನು ತಾನು ಪೂರ್ಣವಾಗಿ ನನ್ನಲ್ಲಿ ಅರ್ಪಿಸಿಕೊಂಡು ಮನೆಯಲ್ಲೇ ಇರುತ್ತಾ ಯಾವದರಲ್ಲಿಯೂ ಆಸಕ್ತಿ ಇಲ್ಲದಿರುವ ಬ್ರಾಹ್ಮಣನು ಪರಮಶಾಂತಿಯನ್ನು ಪಡೆದುಕೊಳುತ್ತಾನೆ.

**ಸಮುದ್ಧರನ್ತಿ ಯೇ ವಿಪ್ರಂ ಸೀದನ್ತಂ ಮತ್ಪರಾಯಣಮ್ ।**
**ತಾನುದ್ಧರಿಷ್ಯೇ ನ ಚಿರಾದಾಪದ್ಭ್ಯೋ ನೌರಿವಾರ್ಣವಾತ್ ॥ 44 ॥**

44. ನನ್ನ ಭಕ್ತನಾದ ಕಷ್ಟಗಳಲ್ಲಿ ಸಿಲುಕಿರುವ ದರಿದ್ರಬ್ರಾಹ್ಮಣನಿಗೆ ಯಾರು ಸಹಾಯ ಮಾಡುತ್ತಾರೋ ಅಂತಹವರನ್ನು ಸಮುದ್ರದಲ್ಲಿ ಮುಳುಗುತ್ತಿರುವವರನ್ನು ನಾವೆಯು ಉಳಿಸುವಂತೆ ನಾನು ಬೇಗನೆ ಉದ್ಧಾರಮಾಡುತ್ತೇನೆ.

**ವೇದಾಧ್ಯಾಯಸ್ವಧಾಸ್ವಾಹಾಬಲ್ಯನ್ನಾದ್ಯೈರ್ಯಥೋದಯಮ್ ।**
**ದೇವರ್ಷಿಪಿತೃಭೂತಾನಿ ಮದ್ರೂಪಾಣ್ಯನ್ವಹಂ ಯಜೇತ್ ॥ 50 ॥**

50. ಗೃಹಸ್ಥನಾದವನು ಯಥಾಶಕ್ತಿಯಾಗಿ, ವೇದಾಧ್ಯಯನ, ತರ್ಪಣ, ಹವನ, ಪ್ರಾಣಿಗಳಿಗೆ ಆಹಾರ ನೀಡುವದು, ಅತಿಥಿಸತ್ಕಾರ ಇವುಗಳ ಮೂಲಕ ಋಷಿದೇವಪಿತೃಮನುಷ್ಯಪ್ರಾಣಿಗಳೆಲ್ಲರನ್ನು ನಾನೇ (ಪರಮಾತ್ಮನೇ) ಎಂಬ ಭಾವನೆಯಿಂದ ಪೂಜಿಸಬೇಕು.

**ಯದೃಚ್ಛಯೋಪಪನ್ನೇನ ಶುಕ್ಲೇನೋಪಾರ್ಜಿತೇನ ವಾ ।**
**ಧನೇನಾಪೀಡಯನ್ ಭೃತ್ಯಾನ್ ನ್ಯಾಯೇನೈವಾಹರೇತ್ ಕ್ರತೂನ್ ॥ 51 ॥**

51. ಅಯಾಚಿತವಾಗಿ ದೊರಕಿದ ಅಥವಾ ಧರ್ಮಮಾರ್ಗದಿಂದ ಸಂಪಾದಿಸಿದ ಹಣದಿಂದ ತನ್ನನ್ನು ಆಶ್ರಯಿಸಿರುವ ಕುಟುಂಬ ಸದಸ್ಯರು ಮತ್ತು ಸೇವಕರೇ ಮುಂತಾದವರಿಗೆ ತೊಂದರೆ ಕೊಡದೆ ವಿಧ್ಯುಕ್ತವಾಗಿ ಯಜ್ಞಗಳನ್ನು ಆಚರಿಸಬೇಕು.

**ಕುಟುಂಬೇಷು ನ ಸಜ್ಜೇತ ನ ಪ್ರಮಾದ್ಯೇತ್ ಕುಟುಂಬ್ಯಪಿ ।**
**ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ॥ 52 ॥**

52. ಕುಟುಂಬಿಯಾದವನು ಕುಟುಂಬದಲ್ಲಿ ಆಸಕ್ತನಾಗಬಾರದು, ಹಾಗೂ

ಜಗರೂಕನಾಗಿರಬೇಕು. ವಿವೇಕಿಯಾದವನು ಇಹ–ಪರಲೋಕಗಳ ಭೋಗಗಳು ಅನಿತ್ಯವೆಂದು ತಿಳಿಯಬೇಕು.

**ಪುತ್ರದಾರಾಪ್ತಬನ್ಧೂನಾಂ ಸಙ್ಗಮಃ ಪಾನ್ಥಸಙ್ಗಮಃ ।**
**ಅನುದೇಹಂ ವಿಯನ್ತ್ಯೇತೇ ಸ್ವಪ್ನೋ ನಿದ್ರಾನುಗೋ ಯಥಾ ॥ 53 ॥**

53. ಮಕ್ಕಳು, ಪತ್ನಿ, ಆಪ್ತರು, ಬಂಧುಗಳು – ಇವರೆಲ್ಲರ ಸಂಬಂಧವು ದಾರಿಹೋಕರೊಡನೆ ಆಗುವ ಸಂಗಮದಂತೆ, ನಿದ್ರೆಯನ್ನು ಬಿಟ್ಟಿರುವವನಿಗೆ, ಕನಸು ಹೇಗೆ ಬಿಟ್ಟು ಹೋಗುತ್ತದೆಯೋ ಹಾಗೆ ದೇಹಾಪಾಯವಾದಾಗ ಈ ಸಂಬಂಧಗಳೆಲ್ಲ ಬಿಟ್ಟುಹೋಗುತ್ತವೆ.

**ಇತ್ಥಂ ಪರಿಮೃಶನ್ ಮುಕ್ತಃ ಗೃಹೇಷ್ವತಿಥಿವದ್ವಸನ್ ।**
**ನ ಗೃಹೈರನುಬದ್ಧ್ಯೇತ ನಿರ್ಮಮೋ ನಿರಹಂಕೃತಃ ॥ 54 ॥**

54. ಹೀಗೆ ವಿಚಾರವನ್ನು ಮಾಡಿಕೊಳ್ಳುತ್ತಾ ಆಸಕ್ತಿಯಿಲ್ಲದೆ, ಮನೆಯಲ್ಲಿ, ಅತಿಥಿಯಂತೆ ವಾಸಿಸುತ್ತಾ, ಮಮಕಾರ ಮತ್ತು ಅಹಂಕಾರವಿಲ್ಲದೆಯೂ ಮನೆ ಮತ್ತು ಮನೆಯವರೊಡನೆಯೂ ಬದ್ಧನಾಗದೆ ಇರಬೇಕು.

**ಕರ್ಮಭಿರ್ಗೃಹಮೇಧೀಯೈರಿಷ್ಟ್ವಾ ಮಾಮೇವ ಭಕ್ತಿಮಾನ್ ।**
**ತಿಷ್ಠೇದ್ವನಂ ವೋಪವಿಶೇತ್ ಪ್ರಜಾವಾನ್ ವಾ ಪರಿವ್ರಜೇತ್ ॥ 55 ॥**

55. ಗೃಹಸ್ಥರಾದವರು ಭಕ್ತಿಯುಳ್ಳವರಾಗಿ ನನ್ನನ್ನು ತನಗೆ ವಿಹಿತವಾದ ಕರ್ಮಗಳಿಂದ ಆರಾಧಿಸುತ್ತಾ ಗೃಹಸ್ಥನಾಗಿಯೇ ಇರಬಹುದು, ಅಥವಾ ವಾನಪ್ರಸ್ಥನಾಗಬಹುದು ಅಥವಾ ಮಕ್ಕಳನ್ನುಳ್ಳವನು ಸಂನ್ಯಾಸಿಯೂ ಆಗಬಹುದು.

**ಯಸ್ತ್ವಾಸಕ್ತಮತಿರ್ಗೇಹೇ ಪುತ್ರವಿತ್ತೈಷಣಾತುರಃ ।**
**ಸ್ತ್ರೈಣಃ ಕೃಪಣಧೀರ್ಮೂಢೋ ಮಮಾಹಮಿತಿ ಬಧ್ಯತೇ ॥ 56 ॥**

56. ಯಾವನು ಮನೆ ಮುಂತಾದವುಗಳಲ್ಲಿ ಆಸಕ್ತನಾಗಿದ್ದು ಮಕ್ಕಳು ಹಣ ಮುಂತಾದವುಗಳ ಅತ್ಯಾಶೆಯಿಂದ ಪೀಡಿತನಾಗಿ ಸ್ತ್ರೀಲೋಲನಾಗಿ ಸದಾ ದೀನಬುದ್ಧಿಯವನಾಗಿ ಮಮಕಾರ ಅಹಂಕಾರವುಳ್ಳ ಮೂಢನು ಬದ್ಧನಾಗುತ್ತಾನೆ.

*****

## ವಾನಪ್ರಸ್ಥಧರ್ಮ

(ಹನ್ನೊಂದನೆಯ ಸ್ಕಂಧ – ಹದಿನೆಂಟನೇ ಅಧ್ಯಾಯ)

**ವನಂ ವಿವಿಕ್ಷುಃ ಪುತ್ರೇಷು ಭಾರ್ಯಾಂ ನ್ಯಸ್ಯ ಸಹೈವ ವಾ ।**
**ವನ ಏವ ವಸೇಚ್ಛಾನ್ತಸ್ತೃತೀಯಂ ಭಾಗಮಾಯುಷಃ ॥ 1 ॥**

ವಾನಪ್ರಸ್ಥನಾಗಲು ಇಚ್ಛಿಸುವವನು ಆಯುಸ್ಸಿನ ಮೂರನೆಯ ಭಾಗದಲ್ಲಿ (60ರ ನಂತರ) ಹೆಂಡತಿಯನ್ನು ಪುತ್ರರೊಂದಿಗೆ ಬಿಟ್ಟಾಗಲಿ ಅಥವಾ ತನ್ನೊಂದಿಗೆ ಕರೆದುಕೊಂಡಾಗಲಿ ಶಾಂತಮನಸಿನಿಂದ ಕಾಡಿನಲ್ಲಿ (ಏಕಾಂತದಲ್ಲಿ) ವಾಸಮಾಡಬೇಕು.

**ಕನ್ದಮೂಲಫಲೈರ್ವನ್ಯೈರ್ಮೇಧ್ಯೈರ್ವೃತ್ತಿಂ ಪ್ರಕಲ್ಪಯೇತ್ ।**
**ವಸೀತ ವಲ್ಕಲಂ ವಾಸಸ್ತೃಣಪರ್ಣಾಜಿನಾನಿ ವಾ ॥ 2 ॥**

ಕಾಡಿನಲ್ಲಿ ಸಿಕ್ಕುವ ಪವಿತ್ರವಾದ ಕಂದಮೂಲಫಲಗಳಿಂದಲೇ ಶರೀರ ನಿರ್ವಾಹವನ್ನು ಮಾಡಿಕೊಳ್ಳಬೇಕು. (ಆಡಂಬರವಿಲ್ಲದ) ನಾರುಬಟ್ಟೆ ಮುಂತಾದವುಗಳನ್ನು ಉಟ್ಟುಕೊಳ್ಳಬೇಕು.

**ಕೇಶರೋಮನಖಶ್ಮಶ್ರುಮಲಾನಿ ಬಿಭೃಯಾದ್ದತಃ ।**
**ನ ಧಾವೇದಪ್ಸು ಮಜ್ಜೇತ ತ್ರಿಕಾಲಂ ಸ್ಥಣ್ಡಿಲೇಶಯಃ ॥ 3 ॥**

3. ಕೂದಲು, ರೋಮ, ಉಗುರು, ಗಡ್ಡಮೀಸೆಗಳನ್ನು ಬೆಳೆಯುವದಕ್ಕೆ ಬಿಡಬೇಕು. ಹಲ್ಲುಗಳನ್ನು ಕೇವಲ ಶುದ್ಧಿಗಾಗಿಯೇ ಉಜ್ಜಬೇಕು, ಮೂರು ಹೊತ್ತು ಸ್ನಾನ ಮಾಡಬೇಕು. ನೆಲದಮೇಲೆಯೇ ಮಲಗಬೇಕು.

**ಅಗ್ನಿಹೋತ್ರಂ ಚ ದರ್ಶಶ್ಚ ಪೌರ್ಣಮಾಸಶ್ಚ ಪೂರ್ವವತ್ ।**
**ಚಾತುರ್ಮಾಸ್ಯಾನಿ ಚ ಮುನೇರಾಮ್ನಾತಾನಿ ಚ ನೈಗಮೈಃ ॥ 8 ॥**

8. ಅವಶ್ಯವಾದ್ದನ್ನು ಮಾತ್ರ ಇಟ್ಟುಕೊಂಡು ಋತುಗಳನ್ನು ಗಮನಿಸಿಕೊಂಡು ಸರಳವಾಗಿ ಇರುತ್ತಾ, ಗೃಹಸ್ಥನಿಗೆ ಶಾಸ್ತ್ರಗಳು ವಿಧಿಸಿದ ಅಗ್ನಿಹೋತ್ರ, ದರ್ಶಪೂರ್ಣ ಮಾಸಗಳು, ಚಾತುರ್ಮಾಸ್ಯವ್ರತ ಮುಂತಾದವನ್ನು ಮೊದಲಿನಂತೆಯೇ ಅನುಷ್ಠಾನಮಾಡಬೇಕು.

**ಯಸ್ತ್ವೇತತ್ಕೃಚ್ಛ್ರತಶ್ಚೀರ್ಣಂ ತಪೋ ನಿಃಶ್ರೇಯಸಂ ಮಹತ್ ।**
**ಕಾಮಾಯಾಲ್ಪೀಯಸೇ ಯುಞ್ಜ್ಯಾದ್ಬಾಲಿಶಃ ಕೋऽಪರಸ್ತತಃ ॥ 10 ॥**

10. ಅತ್ಯಂತ ಕಷ್ಟದಿಂದ ಮಾಡಿದ್ದಾದ ಮೋಕ್ಷವನ್ನೇ ಕೊಡುವಂತಹ ಈ (ವಾನಪ್ರಸ್ಥ) ತಪಸ್ಸನ್ನು (ಸ್ವರ್ಗವೇ ಮುಂತಾದ) ಅಲ್ಪಫಲಕ್ಕೋಸ್ಕರ ಯಾರು ಬಳಸುತ್ತಾರೋ ಅವನಿಗಿಂತ ಮೂರ್ಖನು ಇನ್ನು ಯಾರಿರುತ್ತಾನೆ?

*****

## ಸಂನ್ಯಾಸಧರ್ಮ

### (ಹನ್ನೊಂದನೆಯ ಸ್ಕಂಧ – ಹದಿನೆಂಟನೆ ಅಧ್ಯಾಯ)

**ಯದಾ ಕರ್ಮವಿಪಾಕೇಷು ಲೋಕೇಷು ನಿರಯಾತ್ಮಸು ।**
**ವಿರಾಗೋ ಜಾಯತೇ ಸಮ್ಯಙ್ನ್ಯಸ್ತಾಗ್ನಿಃ ಪ್ರವ್ರಜೇತ್ತತಃ ॥ 12 ॥**

12. ಯಾವಾಗ ಕರ್ಮಫಲರೂಪವಾದ ವಿವಿಧ ಲೋಕಗಳು ದುಃಖರೂಪವೆಂದು ತಿಳಿದು, ದೃಢವಾದ ವೈರಾಗ್ಯ ಉಂಟಾಗುತ್ತದೆಯೋ ಆಗ ಅಗ್ನಿಹೋತ್ರವೇ ಮುಂತಾದ ಕರ್ಮಗಳನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಬೇಕು.

**ಬಿಭೃಯಾಚ್ಚೇನ್ಮುನಿರ್ವಾಸಃ ಕೌಪೀನಾಚ್ಛಾದನಂ ಪರಮ್ ।**
**ತ್ಯಕ್ತಂ ನ ದಣ್ಡಪಾತ್ರಾಭ್ಯಾಮನ್ಯತ್ಕಿಞ್ಚಿದನಾಪದಿ ॥ 15 ॥**

15. ಸಂನ್ಯಾಸಿಯು ಬಟ್ಟೆಯನ್ನು ಉಡಬೇಕಾದರೆ ಕೌಪೀನವನ್ನು ಮತ್ತು ಒಂದು ಸುತ್ತುವ ಬಟ್ಟೆಯನ್ನು ಮಾತ್ರ ಉಟ್ಟುಕೊಳ್ಳಬೇಕು. ಆಪತ್ಕಾಲವಲ್ಲದ ಸಾಮಾನ್ಯಸಮಯದಲ್ಲಿ ದಂಡ ಕಮಂಡಲುಗಳನ್ನು ಬಿಟ್ಟು ಮಿಕ್ಕದ್ದೆಲ್ಲವನ್ನೂ ತ್ಯಾಗಮಾಡಬೇಕು.

**ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್ ।**
**ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥ 16 ॥**

16. ಸಂಚರಿಸುವಾಗ ದೃಷ್ಟಿಯಿಂದ ಶುದ್ಧವಾದ ಜಾಗದಲ್ಲೇ ಹೆಜ್ಜೆಯನ್ನಿಡಬೇಕು. ವಸ್ತ್ರದಿಂದ ಶೋಧಿಸಿ ಶುದ್ಧವಾದ ನೀರನ್ನೇ ಕುಡಿಯಬೇಕು. ಸತ್ಯದಿಂದ ಶುದ್ಧವಾದ ಮಾತುಗಳನ್ನೇ ಆಡಬೇಕು. ಮನಸ್ಸಿನಿಂದ ಪರಿಶೀಲಿಸಿದ ಶುದ್ಧವಾದ ಕಾರ್ಯಗಳನ್ನೇ ಆಚರಿಸಬೇಕು,

**ಮೌನಾನೀಹಾನಿಲಾಯಾಮಾ ದಣ್ಡಾ ವಾಗ್ದೇಹಚೇತಸಾಮ್ ।**
**ನ ಹ್ಯೇತೇ ಯಸ್ಯ ಸನ್ತ್ಯಙ್ಗ ವೇಣುಭಿರ್ನ ಭವೇದ್ಯತಿಃ ॥ 17 ॥**

17. ವಾಕ್ಕಿನಿಂದ ಮೌನಮಾಡುವದು, ಕರ್ಮಗಳೆಲ್ಲವನ್ನು ತ್ಯಾಗ ಮಾಡುವದು, ಮನಸ್ಸಿನಿಂದ ಪ್ರಾಣಾಯಾಮ ಧ್ಯಾನಗಳನ್ನಾಚರಿಸುವದು ಇವು ಮೂರು ದಂಡ(ನಿಗ್ರಹ)ಗಳು, ಈ ದಂಡಗಳಿಲ್ಲದಿದ್ದರೆ ಬರಿಯ ಬಿದಿರಿನ ತ್ರಿದಂಡದಿಂದ ಸಂನ್ಯಾಸಿಯಾಗುವದಿಲ್ಲ.

**ಭಿಕ್ಷಾಂ ಚತುರ್ಷು ವರ್ಣೇಷು ವಿಗರ್ಹ್ಯಾನ್ವರ್ಜಯಂಶ್ಚರೇತ್ ।**
**ಸಪ್ತಾಗಾರಾನಸಙ್ಕ್ಲೃಪ್ತಾಂಸ್ತುಷ್ಯೇಲ್ಲಬ್ಧೇನ ತಾವತಾ ॥ 18 ॥**

18. ಪತಿತ, ನಿಂದಿತ ಮುಂತಾದವರನ್ನು ಬಿಟ್ಟು, ಸಾಮಾನ್ಯವಾಗಿ ಮೂರೂ ವರ್ಣಗಳಿಂದಲೂ ಭಿಕ್ಷೆಯನ್ನು, ಆಪತ್ಕಾಲದಲ್ಲಿ ನಾಲ್ಕನೆಯ ವರ್ಣದಿಂದಲೂ ಭಿಕ್ಷೆಯನ್ನು ತೆಗೆದುಕೊಳ್ಳಬೇಕು. ಮೊದಲೇ ನಿಗದಿಗೊಳಿಸಿ ಕೊಂಡಿಲ್ಲದ ಏಳುಮನೆಗಳಿಂದ ಯಾಚಿಸಿ ಸಿಕ್ಕಿದ ಭಿಕ್ಷೆಯಿಂದಲೇ ತೃಪ್ತನಾಗಬೇಕು.

**ಬಹಿರ್ಜಲಾಶಯಂ ಗತ್ವಾ ತತ್ರೋಪಸ್ಪೃಶ್ಯ ವಾಗ್ಯತಃ ।**
**ವಿಭಜ್ಯ ಪಾವಿತಂ ಶೇಷಂ ಭುಞ್ಜೀತಾಶೇಷಮಾಹೃತಮ್ ॥ 19 ॥**

19. ಭಿಕ್ಷೆಯನ್ನು ತೆಗೆದುಕೊಂಡು ಊರಿನ ಹೊರಗೆ ಜಲಮೂಲವಿರುವಲ್ಲಿ ಹೋಗಿ, ಅಲ್ಲಿ ಹಸ್ತಪಾದಗಳನ್ನು ತೊಳೆದುಕೊಂಡು ಭಿಕ್ಷೆಯನ್ನು ಪ್ರೋಕ್ಷಣೆಮಾಡಿ ಪ್ರಾಣಿಗಳಿಗೆ ಸ್ವಲ್ಪಭಾಗವನ್ನು ಸಮರ್ಪಿಸಿ, ಪವಿತ್ರವಾದ ಮಿಕ್ಕದ್ದನ್ನು ಮೌನವಾಗಿ ತಿನ್ನಬೇಕು. ಹೆಚ್ಚಾಗಿ ಯಾಚಿಸಿ ತಂದು ಮುಂದಿನ ಸಮಯಕ್ಕೆ ಉಳಿಸಿಡಬಾರದು.

**ಏಕಶ್ಚರೇನ್ಮಹೀಮೇತಾಂ ನಿಃಸಙ್ಗಃ ಸಂಯತೇನ್ದ್ರಿಯಃ ।**
**ಆತ್ಮಕ್ರೀಡ ಆತ್ಮರತ ಆತ್ಮವಾನ್ಸಮದರ್ಶನಃ ॥ 20 ॥**

20. ಪೃಥ್ವಿಯಲ್ಲಿ ಎಲ್ಲ ಕಡೆಯಲ್ಲಿಯೂ ನಿಸ್ಸಂಗನಾಗಿ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಒಬ್ಬನೇ ಸಂಚರಿಸಬೇಕು. ಆತ್ಮನಲ್ಲಿಯೇ ನಿಂತು, ಆತ್ಮನಲ್ಲಿಯೇ ಆನಂದಿಸುತ್ತ, ಯಾವಾಗಲೂ ಧೈರ್ಯವಂತನಾಗಿ ಎಲ್ಲರಲ್ಲಿಯೂ ಸಮನಾಗಿರುವ ಪರಮಾತ್ಮನನ್ನೇ ದರ್ಶಿಸುತ್ತಿರಬೇಕು.

**ವಿವಿಕ್ತಕ್ಷೇಮಶರಣೋ ಮದ್ಭಾವವಿಮಲಾಶಯಃ ।**
**ಆತ್ಮಾನಂ ಚಿನ್ತಯೇದೇಕಮಭೇದೇನ ಮಯಾ ಮುನಿಃ ॥ 21 ॥**

21. ಏಕಾಂತವಾಗಿ ಯಾವ ವಿಕ್ಷೇಪವೂ ಇಲ್ಲದ ಸ್ಥಳದಲ್ಲಿ ಇರಬೇಕು. ಮನಸ್ಸು ಭಗವಧ್ಯಾನದಲ್ಲಿ ಮುಳುಗಿ ಶುದ್ಧವಾಗಿರಬೇಕು. ನನ್ನೊಡನೆ ಅಭಿನ್ನವಾಗಿರುವದರಿಂದ ಅದ್ವಿತೀಯನಾಗಿರುವ ಆತ್ಮನನ್ನೇ ಚಿಂತಿಸುತ್ತಿರಬೇಕು.

**ಅನ್ವೀಕ್ಷೇತಾತ್ಮನೋ ಬನ್ಧಂ ಮೋಕ್ಷಂ ಚ ಜ್ಞಾನನಿಷ್ಠಯಾ ।**
**ಬನ್ಧ ಇನ್ದ್ರಿಯವಿಕ್ಷೇಪೋ ಮೋಕ್ಷ ಏಷಾಂ ಚ ಸಂಯಮಃ ॥ 22 ॥**

22. ಜ್ಞಾನನಿಷ್ಠೆಯಿಂದ ತನ್ನ ಬಂಧವನ್ನೂ ಮೋಕ್ಷವನ್ನೂ ಚಿಂತಿಸಬೇಕು. ಇಂದ್ರಿಯಗಳ ಚಾಂಚಲ್ಯತೆಯೇ ಬಂಧವು, ಅವನ್ನು ನಿಗ್ರಹಿಸುವದು ಮೋಕ್ಷವು – ಎಂಬುದನ್ನು ಚಿಂಚಿಸಬೇಕು.

**ತಸ್ಮಾನ್ನಿಯಮ್ಯ ಷಡ್ವರ್ಗಂ ಮದ್ಭಾವೇನ ಚರೇನ್ಮುನಿಃ ।**
**ವಿರಕ್ತಃ ಕ್ಷುದ್ರ ಕಾಮೇಭ್ಯೋ ಲಬ್ಧ್ವಾತ್ಮನಿ ಸುಖಂ ಮಹತ್ ॥ 23 ॥**

23. ಆದ್ದರಿಂದ ಮುನಿಯು ಕಾಮಾದಿಗಳನ್ನು ನಿಗ್ರಹಿಸಿ, ಕ್ಷುದ್ರವಾದ ಕಾಮುಗಳಿಂದ ವೈರಾಗ್ಯವನ್ನು ಪಡೆದು, ತನ್ನಲ್ಲಿಯೇ ಹೆಚ್ಚಿನಸುಖವನ್ನು ಪಡೇಯುತ್ತಾ ನನ್ನ ಭಾವದಿಂದ ಸಂಚರಿಸಬೇಕು.

**ಪುರಗ್ರಾಮವ್ರಜಾನ್ಸಾರ್ಥಾನ್ಭಿಕ್ಷಾರ್ಥಂ ಪ್ರವಿಶಂಶ್ಚರೇತ್ ।**
**ಪುಣ್ಯದೇಶಸರಿಚ್ಛೈಲ ವನಾಶ್ರಮವತೀಂ ಮಹೀಮ್ ॥ 24 ॥**

24. ಭಿಕ್ಷೆಗಾಗಿ ಪಟ್ಟಣ, ಗ್ರಾಮ, ಗೋಮಾಳ, ಯಾತ್ರಿಕರಗುಂಪುಗಳಿಗೆ ಹೋಗುತ್ತಾ; ಪುಣ್ಯಪ್ರದೇಶ, ನದಿ, ಪರ್ವತ, ಕಾಡು, ಆಶ್ರಮ, ಇವುಗಳುಳ್ಳ ಭೂಪ್ರದೇಶದಲ್ಲಿ ಸಂಚರಿಸಬೇಕು.

**ವಾನಪ್ರಸ್ಥಾಶ್ರಮಪದೇಷ್ವಭೀಕ್ಷ್ಣಂ ಭೈಕ್ಷ್ಯಮಾಚರೇತ್ ।**
**ಸಂಸಿಧ್ಯತ್ಯಾಶ್ವಸಮ್ಮೋಹಃ ಶುದ್ಧಸತ್ತ್ವಃ ಶಿಲಾನ್ಧಸಾ ॥ 25 ॥**

25. ವಾನಪ್ರಸ್ಥರು ವಾಸಿಸುವ ಪ್ರದೇಶಗಳಲ್ಲಿ ಮತ್ತೆಮತ್ತೆ ಭಿಕ್ಷೆಯನ್ನು ಮಾಡಬೆಕು. ಏಕೆಂದರೆ ಶಿಲೋಂಛವೃತ್ತಿಯಿಂದ ಲಬ್ಧವಾದ ಅನ್ನದಿಂದ ಶುದ್ಧಮನಸ್ಕನಾಗಿ ಅಜ್ಞಾನದಿಂದ ಮುಕ್ತನಾಗುವನು.

**ನೈತದ್ವಸ್ತುತಯಾ ಪಶ್ಯೇದ್ದೃಶ್ಯಮಾನಂ ವಿನಶ್ಯತಿ ।**
**ಅಸಕ್ತಚಿತ್ತೋ ವಿರಮೇದಿಹಾಮುತ್ರಚಿಕೀರ್ಷಿತಾತ್ ॥ 26 ॥**

26. ಕಾಣುವದು ನಾಶಹೊಂದುವದಾದ್ದರಿಂದ ಈ ಪ್ರಪಂಚವನ್ನು ಸತ್ಯವಾಗಿ ನೋಡಬಾರದು. ಈಲೋಕ ಮತ್ತು ಪರಲೋಕವದಲ್ಲಿ ಆಸಕ್ತಿಯಿಲ್ಲ ದವನಾಗಿ ಕಾರ್ಯದಿಂದ ಹಿಂದಿರುಗಬೇಕು.

**ಯದೇತದಾತ್ಮನಿ ಜಗನ್ಮನೋವಾಕ್ಪ್ರಾಣಸಂಹತಮ್ ।**
**ಸರ್ವಂ ಮಾಯೇತಿ ತರ್ಕೇಣ ಸ್ವಸ್ಥಸ್ತ್ಯಕ್ತ್ವಾ ನ ತತ್ಸ್ಮರೇತ್ ॥ 27 ॥**

27. ಈ ಜಗತ್ತು ಮನಸ್ಸು, ಮಾತು, ಪ್ರಾಣಗಳಿಂದ ಕೂಡಿದ್ದು ಅವುಗಳಿಂದುಂಟಾದ ಎಲ್ಲವೂ ಆತ್ಮನಲ್ಲಿ ತೋರಿಕೆಮಾತ್ರವೆಂದು ತರ್ಕದಿಂದ ಬಿಟ್ಟು ಶಾಂತನಾಗಿ ಅದನ್ನು ಸ್ಮರಿಸಬಾರದು.

**ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾನಪೇಕ್ಷಕಃ ।**
**ಸಲಿಙ್ಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ॥ 28 ॥**

28. ಜ್ಞಾನನಿಷ್ಠನಾಗಲಿ, ವಿರಕ್ತನಾಗಲಿ, ನನ್ನ ಭಕ್ತನಾಗಲಿ, ಆಸಕ್ತಿಯಿಲ್ಲ ದವನಾಗಲಿ ದಂಡಾದಿ ಲಕ್ಷಣವುಳ್ಳ ಆಶ್ರಮವನ್ನು ಬಿಟ್ಟು ಯಾವ ವಿಧಿಗೂ ಒಳಪಡದೆ ಸಂಚರಿಸಬೇಕು.

**ಬುಧೋ ಬಾಲಕವತ್ಕ್ರೀಡೇತ್ಕುಶಲೋ ಜಡವಚ್ಚರೇತ್ ।**
**ವದೇದುನ್ಮತ್ತವದ್ವಿದ್ವಾನ್ಗೋಚರ್ಯಾಂ ನೈಗಮಶ್ಚರೇತ್ ॥ 29 ॥**

29. ವಿದ್ವಾಂಸನಾದರೂ ಬಾಲಕನಂತೆ ಆಡಬೇಕು, ನಿಪುಣನಾದರೂ ಮೂಢನಂತೆ ವ್ಯವಹರಿಸಬೇಕು, ವಿದ್ವಾಂಸನಾದರೂ ಹುಚ್ಚನಂತೆ ಮಾತನಾಡಬೆಕು, ವೇದಾರ್ಥನಿಪುಣನಾದರೂ ಪಶುಗಳಂತೆ ಆಚರಿಸಬೇಕು.

**ವೇದವಾದರತೋ ನ ಸ್ಯಾನ್ನ ಪಾಷಣ್ಡೀ ನ ಹೈತುಕಃ ।**
**ಶುಷ್ಕವಾದವಿವಾದೇ ನ ಕಞ್ಚಿತ್ಪಕ್ಷಂ ಸಮಾಶ್ರಯೇತ್ ॥ 30 ॥**

30. ವೇದಾರ್ಥನಿರೂಪಣೆಯಲ್ಲಿ ತೊಡಗಬಾರದು, ವೇದವಿರುದ್ಧ ಧರ್ಮವನ್ನು ಆಚರಿಸಬಾರದು, ತರ್ಕವನ್ನು ಮಾಡಬಾರದು, ಪ್ರಯೋಜನವಿಲ್ಲದ ವಾದವಿವಾದಗಳಲ್ಲಿ ಯವುದೊಂದು ಪಕ್ಷವನ್ನೂ ಆಶ್ರಯಿಸಬಾರದು.

**ನೋದ್ವಿಜೇತ ಜನಾದ್ಧೀರೋ ಜನಂ ಚೋದ್ವೇಜಯೇನ್ನ ತು ।**
**ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಞ್ಚನ ।**
**ದೇಹಮುದ್ದಿಶ್ಯ ಪಶುವದ್ವೈರಂ ಕುರ್ಯಾನ್ನ ಕೇನಚಿತ್ ॥ 31 ॥**

31. ಧೀರನಾದವನು ಜನರಿಗೆ ಹೆದರಬಾರದು, ಜನರನ್ನೂ ಹೆದರಿಸಬಾರದು. ಬೇಡದಮಾತುಗಳನ್ನು ಸೈರಿಸಬೇಕು. ಯಾರನ್ನೂ ಅವಮಾನಿಸಬಾರದು. ದೇಹವನ್ನು ಉದ್ದೇಶಿಸಿ ಪಶುಗಳಂತೆ ಯಾರಲ್ಲಿಯೂ ವೈರವನ್ನು ಮಾಡಬಾರದು.

**ಏಕ ಏವ ಪರೋ ಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ ।**
**ಯಥೇನ್ದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ ॥ 32 ॥**

32. ಒಬ್ಬನೇ ಪರಮಾತ್ಮನು ಸಕಲಭೂತಗಳಲ್ಲಿಯೂ ತನ್ನಲ್ಲಿಯೂ ಇರುವನು. ಹೇಗೆ ಚಂದ್ರನು ನೀರಿನಪಾತ್ರೆಗಳಲ್ಲಿಯೂ ಇರುತ್ತಾನೊ ಹಾಗೆಯೇ ಭೂತಗಳಲ್ಲೆಲ್ಲ ಒಬ್ಬನೇ ಆತ್ಮನು ಇರುವನು.

**ಅಲಬ್ಧ್ವಾ ನ ವಿಷೀದೇತ ಕಾಲೇ ಕಾಲೇಽಶನಂ ಕ್ವಚಿತ್ ।**
**ಲಬ್ಧ್ವಾ ನ ಹೃಷ್ಯೇದ್ಧೃತಿಮಾನುಭಯಂ ದೈವತನ್ತ್ರಿತಮ್ ॥ 33 ॥**

33. ಧೀರನಾದವನು ಕಾಲಕಾಲದಲ್ಲಿ ಆಹರವನ್ನು ಪಡೆಯದೆ ದುಃಖಿಸಬಾರದು. ಪಡೆದು ಹರ್ಷಿಸಬಾರದು. ಇವೆರಡೂ ದೈವಾಧೀನವೆಂದು ತಿಳಿಯಬೇಕು.

**ಆಹಾರಾರ್ಥಂ ಸಮೀಹೇತ ಯುಕ್ತಂ ತತ್ಪ್ರಾಣಧಾರಣಮ್ ।**
**ತತ್ತ್ವಂ ವಿಮೃಶ್ಯತೇ ತೇನ ತದ್ವಿಜ್ಞಾಯ ವಿಮುಚ್ಯತೇ ॥ 34 ॥**

34. ಆಹಾರಕ್ಕಾಗಿ ಅಪೇಕ್ಷಿಸುವದು ಸರಿಯಾಗಿದೆ, ಅದು ಪ್ರಾಣಧಾರಣೆಗೋಸ್ಕರ ಆಗಿದೆ. ಅದರಿಂದ ತತ್ತ್ವವನ್ನು ವಿಚಾರಮಾಡಲು ಸಾಧ್ಯ. ಅದನ್ನು ತಿಳಿದು ಮುಕ್ತನಾಗುವನು.

**ಯದೃಚ್ಛಯೋಪಪನ್ನಾನ್ನಮದ್ಯಾಚ್ಛ್ರೇಷ್ಠಮುತಾಪರಮ್ ।**
**ತಥಾ ವಾಸಸ್ತಥಾ ಶಯ್ಯಾಂ ಪ್ರಾಪ್ತಂ ಪ್ರಾಪ್ತಂ ಭಜೇನ್ಮುನಿಃ ॥ 35 ॥**

35. ಯತಿಯು ಪ್ರಯತ್ನವಿಲ್ಲದೆ ಪ್ರಾಪ್ತವಾದ ಅನ್ನವನ್ನು ಗುಣದೋಷವನ್ನು ಪರೀಕ್ಷಿಸದೆ ತಿನ್ನಬೇಕು. ಹಾಗೆಯೇ ದೊರೆತ ವಸ್ತ್ರವನ್ನೂ ಹಾಸಿಗೆಯನ್ನೂ ಉಪಯೋಗಿಸಬೇಕು.

**ಶೌಚಮಾಚಮನಂ ಸ್ನಾನಂ ನ ತು ಚೋದನಯಾ ಚರೇತ್ ।**
**ಅನ್ಯಾಂಶ್ಚ ನಿಯಮಾನ್ ಜ್ಞಾನೀ ಯಥಾಹಂ ಲೀಲಯೇಶ್ವರಃ ॥ 36 ॥**

36. ಹೇಗೆ ಈಶ್ವರನಾದ ನಾನು ಕರ್ತವ್ಯವಲ್ಲದಿದ್ದರೂ ಲೋಕದ ನಿಯಮವನ್ನು ಆಚರಿಸುತ್ತೇನೊ ಹಾಗೆ ಶೌಚ, ಆಚಮನ, ಸ್ನಾನಗಳನ್ನು ಮಾಡಬೇಕು. ನಿಯಮದಿಂದಲ್ಲ.

**ನ ಹಿ ತಸ್ಯ ವಿಕಲ್ಪಾಖ್ಯಾ ಯಾ ಚ ಮದ್ವೀಕ್ಷಯಾ ಹತಾ ।**
**ಆದೇಹಾನ್ತಾತ್ಕ್ವಚಿತ್ಖ್ಯಾತಿಸ್ತತಃ ಸಮ್ಪದ್ಯತೇ ಮಯಾ ॥ 37 ॥**

37. ಅವನಿಗೆ ಭೇದದ ತೋರುವಿಕೆಯು ಇಲ್ಲ. ಅದು ಜ್ಞಾನದಿಂದ ನಷ್ಟವಾಗಿದೆ. ಶರೀರವಿರುವವರೆಗೂ ಅದು ಇರುವಂತೆ ತೋರುವದು. ಅನಂತರ ನನ್ನೊಡನೆ ಸೇರುವನು.

**ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್ ।**
**ಅಜ್ಞಾಸಿತಮದ್ಧರ್ಮೋ ಮುನಿಂ ಗುರುಮುಪವ್ರಜೇತ್ ॥ 38 ॥**

38. ದುಃಖವೇ ಫಲವಾಗುಳ್ಳ ಕಾಮಗಳಲ್ಲಿ ಹೇಯಬುದ್ಧಿಯುಳ್ಳವನಾಗಿ, ಶುದ್ಧಾಂತಃಕರಣನಾಗಿ, ನನ್ನ ಧರ್ಮವನ್ನು ತಿಳಿಯದ ಮುನಿಯು ಗುರುವಿನ ಸಮೀಪಕ್ಕೆ ಹೋಗಬೇಕು.

**ತಾವತ್ಪರಿಚರೇದ್ಭಕ್ತಃ ಶ್ರದ್ಧಾವಾನನಸೂಯಕಃ ।**
**ಯಾವದ್ಬ್ರಹ್ಮ ವಿಜಾನೀಯಾನ್ಮಾಮೇವ ಗುರುಮಾದೃತಃ ॥ 39 ॥**

39. ಭಕ್ತನು ಎಲ್ಲಿಯವರೆಗೆ ಬ್ರಹ್ಮವನ್ನು ತಿಳಿಯುವನೊ ಅಲ್ಲಿಯವರೆಗೆ ಗುರುವನ್ನು ಭಗವಂತನಂತೆ ಆದರಿಸುತ್ತಾ ಶ್ರದ್ಧೆಯುಳ್ಳವನಾಗಿ ಅಸೂಯಾರಹಿತನಾಗಿ ಸೇವಿಸಬೇಕು.

**ಯಸ್ತ್ವಸಂಯತಷಡ್ವರ್ಗಃ ಪ್ರಚಣ್ಡೇನ್ದ್ರಿಯಸಾರಥಿಃ ।**
**ಜ್ಞಾನವೈರಾಗ್ಯರಹಿತಸ್ತ್ರಿದಣ್ಡಮುಪಜೀವತಿ ॥ 40 ॥**

40. ನಿಯಂತ್ರಿಸಲ್ಪಡದ ಆರು ಇಂದ್ರಿಯಗಳುಳ್ಳ, ಅತ್ಯಂತ ವಿಷಯಾಸಕ್ತವಾದ ಬುದ್ಧಿಯನ್ನು ಸಾರಥಿಯಾಗುಳ್ಳ, ಜ್ಞಾನವೈರಾಗ್ಯರಹಿತನಾದವನು ಯಾವನಿರುವನೊ, ಅವನು ಸಂನ್ಯಾಸಚಿಹ್ನೆಯಿಂದ ಜೀವಿಸುವನು.

**ಬಿಭೃಯಾಚ್ಚೇನ್ಮುನಿರ್ವಾಸಃ ಕೌಪೀನಾಚ್ಛಾದನಂ ಪರಮ್ ।**
**ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಧರ್ಮಹಾ ।**
**ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ ॥ 41 ॥**

41. ಧರ್ಮನಾಶಕನಾದ ಕಷಾಯಗಳು ಪಕ್ವವಾಗದ ಅವನು, ದೇವತೆಗಳನ್ನು, ತನ್ನನ್ನು, ಅವನಲ್ಲಿರುವ ನನ್ನನ್ನೂ ವಂಚಿಸುತ್ತಾನೆ. ಈ ಲೋಕ–ಪರಲೋಕದಿಂದಲೂ ಪತಿತನಾಗುತ್ತಾನೆ.

**ಭಿಕ್ಷೋರ್ಧರ್ಮಃ ಶಮೋಽಹಿಂಸಾ ತಪ ಈಕ್ಷಾ ವನೌಕಸಃ ।**
**ಗೃಹಿಣೋ ಭೂತರಕ್ಷೇಜ್ಯಾ ದ್ವಿಜಸ್ಯಾಚಾರ್ಯಸೇವನಮ್ ॥ 42 ॥**

42. ಸಂನ್ಯಾಸಿಗೆ ಶಮ ಮತ್ತು ಅಹಿಂಸೆಗಳು ಧರ್ಮ. ವಾನಪ್ರಸ್ಥರಿಗೆ ತಪಸ್ಸು, ಆತ್ಮಾನಾತ್ಮವಿಕೇವು ಧರ್ಮವು. ಗೃಸ್ಥನಿಗೆ ಪ್ರಾಣಿಗಳರಕ್ಷಣೆ, ಯಜ್ಞಗಳು ಧರ್ಮವು. ಬ್ರಹ್ಮಚಾರಿಗೆ ಆಚಾರ್ಯಸೇವನೆಯು ಧರ್ಮವು.

**ಬ್ರಹ್ಮಚರ್ಯಂ ತಪಃ ಶೌಚಂ ಸನ್ತೋಷೋ ಭೂತಸೌಹೃದಮ್ ।**
**ಗೃಹಸ್ಥಸ್ಯಾಪ್ಯೃತೌ ಗನ್ತುಃ ಸರ್ವೇಷಾಂ ಮದುಪಾಸನಮ್ ॥ 43 ॥**

43. ಗೃಹಸ್ಥನಾದವನು ಋತುಕಾಲದಲ್ಲಿ ಭಾರ್ಯಾಗಮನ ಮಾಡುವದು, ಬ್ರಹ್ಮಚರ್ಯ, ತಪಸ್ಸು, ಶೌಚ, ಸಂತೋಷ, ಸರ್ವಭೂತಪ್ರೇಮ ಇವು ಧರ್ಮಗಳು. ಎಲ್ಲರಿಗೂ ನನ್ನ ಉಪಾಸನೆಯೇ ಪರಮಧರ್ಮವು.

**ಇತಿ ಮಾಂ ಯಃ ಸ್ವಧರ್ಮೇಣ ಭಜೇನ್ನಿತ್ಯಮನನ್ಯಭಾಕ್ ।**
**ಸರ್ವಭೂತೇಷು ಮದ್ಭಾವೋ ಮದ್ಭಕ್ತಿಂ ವಿನ್ದತೇ ದೃಢಾಮ್ ॥ 44 ॥**

44. ಹೀಗೆ ಯಾವನು ಸ್ವಧರ್ಮದಲ್ಲಿದ್ದು ಅನನ್ಯಮನಸ್ಕನಾಗಿ ಭಜಿಸುವನೊ ಅವನು ಸರ್ವಭೂತಗಳಲ್ಲಿಯೂ ನನ್ನ ಭಾವವನ್ನು ಹೊಂದಿ ನನ್ನಲ್ಲಿ ದೃಢವಾದ ಭಕ್ತಿಯನ್ನು ಪಡೆಯುತ್ತಾನೆ.

**ಭಕ್ತ್ಯೋದ್ಧವಾನಪಾಯಿನ್ಯಾ ಸರ್ವಲೋಕಮಹೇಶ್ವರಮ್ ।**
**ಸರ್ವೋತ್ಪತ್ತ್ಯಪ್ಯಯಂ ಬ್ರಹ್ಮ ಕಾರಣಂ ಮೋಪಯಾತಿ ಸಃ ॥ 45 ॥**

45. ಅವನು ಸ್ಥಿರವಾದ ಭಕ್ತಿಯಿಂದ ಸರ್ವ ಲೋಕಗಳಿಗೂ ಒಡೆಯನಾದ ಎಲ್ಲರ ಹುಟ್ಟು, ಇರುವಿಕೆ, ಸಾವು – ಇವುಗಳಿಗೆ ಕಾರಣನಾದ ವೇದಗಳಿಗೂ ಕಾರಣನಾದ ನನ್ನನ್ನು ಬಂದು ಸೇರುವನು.

**ಇತಿ ಸ್ವಧರ್ಮನಿರ್ಣಿಕ್ತ ಸತ್ತ್ವೋ ನಿರ್ಜ್ಞಾತಮದ್ಗತಿಃ ।**
**ಜ್ಞಾನವಿಜ್ಞಾನಸಮ್ಪನ್ನೋ ನ ಚಿರಾತ್ಸಮುಪೈತಿ ಮಾಮ್ ॥ 46 ॥**

46. ಈ ವಿಧವಾದ ಸ್ವಧರ್ಮಾಚರಣೆಯಿಂದ ಶುದ್ಧಾಂತಃಕರಣನಾದ, ನನ್ನ ಸ್ವರೂಪವನ್ನು ತಿಳಿದಿರುವ, ಜ್ಞಾನವಿಜ್ಞಾನಸಂಪನ್ನನಾದ ವಿರಾಗಿಯು ನನ್ನನ್ನು ಹೊಂದುತ್ತಾನೆ.

**ವರ್ಣಾಶ್ರಮವತಾಂ ಧರ್ಮ ಏಷ ಆಚಾರಲಕ್ಷಣಃ ।**
**ಸ ಏವ ಮದ್ಭಕ್ತಿಯುತೋ ನಿಃಶ್ರೇಯಸಕರಃ ಪರಃ ॥ 47 ॥**

47. ಈ ಆಚಾರಲಕ್ಷಣವು ವರ್ಣಾಶ್ರಮಧರ್ಮವನ್ನು ಒಪ್ಪಿರುವವರ ಧರ್ಮವು. ಅದೇ ನಲ್ಲಿಲ್ಲಿ ಭಕ್ತಿಯುಳ್ಳವರಿಗೆ ಹೆಚ್ಚಿನ ಮೋಕ್ಷವನ್ನು ಕೊಡುವದಾಗಿದೆ.

**ಏತತ್ತೇಽಭಿಹಿತಂ ಸಾಧೋ ಭವಾನ್ಪೃಚ್ಛತಿ ಯಚ್ಚ ಮಾಮ್ ।**
**ಯಥಾ ಸ್ವಧರ್ಮಸಂಯುಕ್ತೋ ಭಕ್ತೋ ಮಾಂ ಸಮಿಯಾತ್ಪರಮ್ ॥ 48 ॥**

48. ಉದ್ಧವನೆ! ನೀನು ನನ್ನನ್ನು ಏನು ಕೇಳಿದೆಯೊ ಅದನ್ನು ಹೇಳಿದೆನು. ಹಾಗೆಯೇ ಅಂತಹ ಸ್ವಧರ್ಮಸಂಯುಕ್ತನಾದ ಭಕ್ತನು ನನ್ನನ್ನೇ ಹೇಗೆ ಸೇರುತ್ತಾನೆಂಬುದನ್ನು ತಿಳಿಸಿದೆನು.

******

## ಶ್ರೀಕೃಷ್ಣನಿಂದ ಉದ್ಧವನಿಗೆ ಸಾಧನೆಗಳ ಉಪದೇಶ
### (ಹನ್ನೊಂದನೆಯ ಸ್ಕಂದ – ಹತ್ತೊಂಬತ್ತನೆ ಅಧ್ಯಾಯ)

**ಶ್ರೀಭಗವಾನುವಾಚ –**

**ಯೋ ವಿದ್ಯಾಶ್ರುತಸಮ್ಪನ್ನಃ ಆತ್ಮವಾನ್ನಾನುಮಾನಿಕಃ ।**
**ಮಾಯಾಮಾತ್ರಮಿದಂ ಜ್ಞಾತ್ವಾ ಜ್ಞಾನಂ ಚ ಮಯಿ ಸನ್ನ್ಯಸೇತ್ ॥ 1 ॥**

1. ಯಾವನು ಅನುಭವಪರ್ಯಂತವಾದ ಶಾಸ್ತ್ರಾಧ್ಯಯನದಿಂದ ತಾರ್ಕಿಕನಾಗದೇ ಆತ್ಮವಂತನಾಗಿರುವನೊ, ಅವನು ಇದು ಮಾಯಾಮತ್ರವಾಗಿದೆ ಎಂಬುದನ್ನು ತಿಳಿದು ಆ ಶಾಸ್ತ್ರಜ್ಞಾನವನ್ನು ನನ್ನಲ್ಲಿ ಲೀನಮಾಡಬೇಕು.

**ಜ್ಞಾನಿನಸ್ತ್ವಹಮೇವೇಷ್ಟಃ ಸ್ವಾರ್ಥೋ ಹೇತುಶ್ಚ ಸಮ್ಮತಃ ।**
**ಸ್ವರ್ಗಶ್ಚೈವಾಪವರ್ಗಶ್ಚ ನಾನ್ಯೋಽರ್ಥೋ ಮದೃತೇ ಪ್ರಿಯಃ ॥ 2 ॥**

2. ಜ್ಞಾನಿಗಾದರೊ, ನಾನೇ ಪ್ರಿಯನು. ಫಲವು, ಫಲಸಾಧನವು, ಅಭ್ಯುದಯ–ನಿಶ್ರೇಯಸಗಳು, ನನ್ನನ್ನು ಬಿಟ್ಟು ಬೇರೆ ಯಾವದೂ ಪ್ರಿಯವಾದದ್ದಿಲ್ಲ.

**ಜ್ಞಾನವಿಜ್ಞಾನಸಂಸಿದ್ಧಾಃ ಪದಂ ಶ್ರೇಷ್ಠಂ ವಿದುರ್ಮಮ ।**
**ಜ್ಞಾನೀ ಪ್ರಿಯತಮೋಽತೋ ಮೇ ಜ್ಞಾನೇನಾಸೌ ಬಿಭರ್ತಿ ಮಾಮ್ ॥ 3 ॥**

3. ಶಾಸ್ತ್ರ ಮತ್ತು ಅನುಭವಜ್ಞಾನಗಳಿಂದ ಚೆನ್ನಗಿ ಅರಿತವನೇ ನನ್ನ ಶ್ರೇಷ್ಠವಾದ ಸ್ಥಾನವನ್ನು ತಿಳಿದುಕೊಳ್ಳುತ್ತಾನೆ. ಜ್ಞಾನಿಯು ನನಗೆ ಪ್ರಿಯತಮನು, ಅನನು ಜ್ಞಾನದಿಂದಲೇ ನನ್ನನ್ನು ಸೇವಿಸುವನು.

**ತಪಸ್ತೀರ್ಥಂ ಜಪೋ ದಾನಂ ಪವಿತ್ರಾಣೀತರಾಣಿ ಚ ।**
**ನಾಲಂ ಕುರ್ವನ್ತಿ ತಾಂ ಸಿದ್ಧಿಂ ಯಾ ಜ್ಞಾನಕಲಯಾ ಕೃತಾ ॥ 4 ॥**

4. ಯಾವದು ಜ್ಞಾನದಿಂದ ಉಂಟಾದದ್ದೊ ಆ ಸಿದ್ಧಿಯನ್ನು ತಪಸ್ಸು, ತೀರ್ಥಗಳು, ಜಪ, ದಾನವೇ ಮುಂತಾದ ಪವಿತ್ರ ಕ್ರಿಯೆಗಳು ಹೆಚ್ಚಿಸಲಾರವು.

**ತಸ್ಮಾಜ್ಜ್ಞಾನೇನ ಸಹಿತಂ ಜ್ಞಾತ್ವಾ ಸ್ವಾತ್ಮಾನಮುದ್ಧವ ।**
**ಜ್ಞಾನವಿಜ್ಞಾನಸಮ್ಪನ್ನೋ ಭಜ ಮಾಂ ಭಕ್ತಿಭಾವತಃ ॥ 5 ॥**

5. ಆದ್ದರಿಂದ ಎಲೈ ಉದ್ಧವನೆ, ಅನುಭವಪರ್ಯಂತವಾದ ಜ್ಞಾನದಿಂದ ಆತ್ಮನ್ನನ್ನು ತಿಳಿದು ಜ್ಞಾನವಿಜ್ಞಾನಸಂಪನ್ನನಾಗಿ ಭಕ್ತಿಭಾವದಿಂದ ನನ್ನನ್ನು ಭಜಿಸು.

**ಜ್ಞಾನವಿಜ್ಞಾನಯಜ್ಞೇನ ಮಾಮಿಷ್ಟ್ವಾತ್ಮಾನಮಾತ್ಮನಿ ।**
**ಸರ್ವಯಜ್ಞಪತಿಂ ಮಾಂ ವೈ ಸಂಸಿದ್ಧಿಂ ಮುನಯೋಽಗಮನ್ ॥ 6 ॥**

6. ಮುನಿಗಳು ಜ್ಞಾನ–ವಿಜ್ಞಾನದಿಂದ ಕೂಡಿದ ಯಜ್ಞದಿಂದ ಎಲ್ಲಾ ಯಜ್ಞಗಳ ಸ್ವಾಮಿಯಾದ ನನ್ನನ್ನು ಅಂತಃಕರಣದಲ್ಲಿ ಆರಾಧಿಸಿ ಸಿದ್ಧಿಯನ್ನು ಪಡೆದುಕೊಂಡರು.

**ತ್ವಯ್ಯುದ್ಧವಾಶ್ರಯತಿ ಯಸ್ತ್ರಿವಿಧೋ ವಿಕಾರೋ**
**ಮಾಯಾನ್ತರಾಪತತಿ ನಾದ್ಯಪವರ್ಗಯೋರ್ಯತ್ ।**

**ಜನ್ಮಾದಯೋಽಸ್ಯ ಯದಮೀ ತವ ತಸ್ಯ ಕಿಂ ಸ್ಯು–**
**ರಾದ್ಯನ್ತಯೋರ್ಯದಸತೋಽಸ್ತಿ ತದೇವ ಮಧ್ಯೇ ॥ 7 ॥**

7. ಉದ್ಧವನೆ, ನಿನ್ನಲ್ಲಿ ಯಾವ ದೇಹೇಂದ್ರಿಯಮನೋರೂಪವಾದ ಮಾಯಾರೂಪದ ತ್ರಿಗುಣಾತ್ಮಕವಾದ ವಿಕಾರಗಳ ಶರೀರವಿದೆಯೊ, ಅದನ್ನು ನೀನು ಆಶ್ರಯಿಸಿರುವೆ. ಯಾವ ಇವು ಆದ್ಯಂತಗಳಲ್ಲಿ ಇಲ್ಲದೆ ಮಧ್ಯದಲ್ಲಿ ತೋರುವವು. ಆದ್ದರಿಂದ ನಿನು ವಿಕಾರವಿಲ್ಲದವನೇ ಆಗಿರುವೆ.

**ನವೈಕಾದಶ ಪಂಚತ್ರೀನ್ ಭಾವಾನ್ ಭೂತೇಷು ಯೇನ ತತ್ ।**
**ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್ ॥ 14 ॥**

14. ಉದ್ಧವನೆ, ಪ್ರಕೃತಿ, ಪುರುಷ, ಮಹತ್ತತ್ತ್ವ, ಅಹಂಕಾರ, ಪಂಚತನ್ಮಾತ್ರೆಗಳು – ಇವು ಒಂಬತ್ತು; ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು – ಹನ್ನೊಂದು; ಪಂಚಮಹಾಭೂತಗಳು, ಸತ್ತ್ವರಜಸ್ತಮಸ್ಸೆಂಬ ಮೂರುಗುಣಗಳು – ಇವು ಎಂಟು; ಈ ಇಪ್ಪತ್ತೆಂಟು ತತ್ತ್ವಗಳು ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯವರೆಗೂ ಅನುಗತವಾದ ಈ ಪರಮಾತ್ಮತತ್ತ್ವವನ್ನು ನೋಡುವದೇ ತತ್ತ್ವಜ್ಞಾನವೆಂಬುದು ನನ್ನ ನಿಶ್ಚಿತವಾದ ಅಭಿಪ್ರಾಯವು.

**ಏತದೇವ ಹಿ ವಿಜ್ಞಾನಂ ನ ತಥೈಕೇನ ಯೇನ ಯತ್ ।**
**ಸ್ಥಿತ್ಯುತ್ಪತ್ತ್ಯಪ್ಯಯಾನ್ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್ ॥ 15 ॥**

15. ಹಾಗೆಯೇ ಯಾವದೊಂದು ಜ್ಞಾನದಿಂದ ನೋಡಲಾರನೊ, ಇದೇ ವಿಜ್ಞಾನವು. ತ್ರಿಗುಣಾತ್ಮಕವಾದ ಈ ತತ್ತ್ವಗಳು ಉತ್ಪತ್ತಿ, ಸ್ಥಿತಿ, ನಾಶವುಳ್ಳವು ಎಂದು ನೋಡಬೇಕು.

**ಆದಾವನ್ತೇ ಚ ಮಧ್ಯೇ ಚ ಸೃಜ್ಯಾತ್ಸೃಜ್ಯಂ ಯದನ್ವಿಯಾತ್ ।**
**ಪುನಸ್ತತ್ಪ್ರತಿಸಙ್ಕ್ರಾಮೇ ಯಚ್ಛಿಷ್ಯೇತ ತದೇವ ಸತ್ ॥ 16 ॥**

16. ಯಾವದು ಆದಿಯಲ್ಲಿ ಅಂತ್ಯದಲ್ಲಿ ಇದ್ದುಕೊಂಡು ಕಾರ್ಯಕಾರಣಗಳನ್ನು ಅನುಸರಿಸುವದೊ ಮರಳಿ ಮೂಲದಲ್ಲಿಯೇ ಉಳಿಯುವದೊ ಅದೇ ಸತ್ತೆನಿಸುವದು.

**ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್ ।**
**ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್ಸ ವಿರಜ್ಯತೇ ॥ 17 ॥**

17. ವೇದ, ಪ್ರತ್ಯಕ್ಷ, ಆಪ್ತವಾಕ್ಯ ಮತ್ತು ಅನುಮಾನ ಈ ನಾಲ್ಕು ಪ್ರಮಾಣಗಳಿಂದಲೂ ಜಗತ್ತು ಬಾಧೆಯಾಗುವದರಿಂದ, ದ್ವೈತಪ್ರಪಂಚದಿಂದ ವಿರಕ್ತನಾಗುವನು.

**ಕರ್ಮಣಾಂ ಪರಿಣಾಮಿತ್ವಾದಾವಿರಿಞ್ಚ್ಯಾದಮಙ್ಗಲಮ್ ।**
**ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ॥ 18 ॥**

18. ಅಗ್ನಿಹೋತ್ರಾದಿ ಕರ್ಮಗಳು ವಿಕಾರಗಳಾದುದರಿಂದ ಬ್ರಹ್ಮಲೋಕದವರೆಗಿನ ಲೋಕಗಳೂ ಈ ಲೋಕದಂತೆ ದುಃಖದಿಂದ ಕೂಡಿದವೇ ಆಗಿವೆ ಎಂಬುದನ್ನು ವಿದ್ವಾಂಸನಾದವನು ಕಾಣಬೇಕು.

**ಭಗವಾನುವಾಚ –**

**ಅಹಿಂಸಾ ಸತ್ಯಮಸ್ತೇಯಮಸಙ್ಗೋ ಹ್ರೀರಸಞ್ಚಯಃ ।**
**ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ ಕ್ಷಮಾಭಯಮ್ ॥ 33 ॥**

**ಶೌಚಂ ಜಪಸ್ತಪೋ ಹೋಮಃ ಶ್ರದ್ಧಾತಿಥ್ಯಂ ಮದರ್ಚನಮ್ ।**
**ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್ ॥ 34 ॥**

**ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ ।**
**ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹನ್ತಿ ಹಿ ॥ 35 ॥**

33–35. ಹಿಂಸೆಮಾಡದಿರುವದು, ಸತ್ಯನುಡಿಯುವದು, ಕಳ್ಳತನ ಮಾಡದಿರುವದು, ಸಂಗವಿಲ್ಲದಿರುವದು, ನಾಚಿಕೆ, ಸಂಗ್ರಹಿಸದಿರುವದು, ಆಸ್ತಿಕಬುದ್ಧಿ, ಬ್ರಹ್ಮಚರ್ಯ, ಮೌನ, ಕ್ಷಮೆ, ಅಭಯ – ಇವು ಹನ್ನೆರಡು ಯಮಗಳು. ಒಳಹೊರಗಿನ ಶುದ್ಧತೆ, ಜಪ, ತಪಸ್ಸು, ಹೋಮ, ಶ್ರದ್ಧೆ, ಆತಿಥ್ಯ, ಭಗವದರ್ಚನೆ, ತೀರ್ಥಯಾತ್ರೆ, ಪರೋಪಕಾರ, ತೃಪ್ತಿ, ಆಚಾರ್ಯರ ಸೇವೆ – ಇವು ಹನ್ನೆರಡು ನಿಯಮಗಳು. ಈ ಯಮ–ನಿಯಮಗಳನ್ನು ಪುರುಷನು ಆಚರಿಸಿದರೆ ಅವನಿಗೆ ಬಯಸಿದ್ದು ದೊರೆಯುತ್ತದೆ.

**ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇನ್ದ್ರಿಯಸಂಯಮಃ ।**
**ತಿತಿಕ್ಷಾ ದುಃಖಸಮ್ಮರ್ಷೋ ಜಿಹ್ವೋಪಸ್ಥಜಯೋ ಧೃತಿಃ ॥ 36 ॥**

36. ಬುದ್ಧಿಯನ್ನು ನನ್ನಲ್ಲಿ ತೊಡಗಿಸುವದು ಶಮವು, ಇಂದ್ರಿಯನಿಗ್ರಹವು ದಮವು, ದುಃಖವನ್ನು ತಡೆದುಕೊಳ್ಳುವದು ತಿತಿಕ್ಷೆಯು, ನಾಲಿಗೆ ಮತ್ತು ಜನನೇಂದ್ರಿಗಳ ಜಯವು ಧೃತಿಯು.

**ದಣ್ಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್ ।**
**ಸ್ವಭಾವವಿಜಯಃ ಶೌರ್ಯಂ ಸತ್ಯಂ ಚ ಸಮದರ್ಶನಮ್ ॥ 37 ॥**

37. ಯಾರನ್ನೂ ದಂಡಿಸದಿರುವದೇ ದಾನವು, ಬಯಕೆಗಳ ತ್ಯಾಗವೇ ತಪಸ್ಸು, ನಮ್ಮ ಸ್ವಭಾವವನ್ನು ಗೆಲ್ಲುವದೇ ಶೌರ್ಯವು, ಎಲ್ಲೆಡೆ ಸಮವಾಗಿ ಕಾಣುವದೇ ಸತ್ಯವು.

**ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ ।**
**ಕರ್ಮಸ್ವಸಙ್ಗಮಃ ಶೌಚಂ ತ್ಯಾಗಃ ಸಂನ್ಯಾಸ ಉಚ್ಯತೇ ॥ 38 ॥**

38. ಪ್ರಿಯವಚನವನ್ನು ಕವಿಗಳು ಋತವೆನ್ನುವರು. ಕರ್ಮಸಂಗವನ್ನು ಬಿಡುವದೇ ಶೌಚವು. ತ್ಯಾಗವನ್ನು ಸಂನ್ಯಾಸವೆನ್ನುವರು.

**ಧರ್ಮ ಇಷ್ಟಂ ಧನಂ ನೄಣಾಂ ಯಜ್ಞೋಽಹಂ ಭಗವತ್ತಮಃ ।**
**ದಕ್ಷಿಣಾ ಜ್ಞಾನಸನ್ದೇಶಃ ಪ್ರಾಣಾಯಾಮಃ ಪರಂ ಬಲಮ್ ॥ 39 ॥**

39. ಮನುಷ್ಯರಿಗೆ ಧರ್ಮವು ಇಷ್ಟವಾದ ಧನವು, ಭಗವಂತನಾದ ನಾನೇ ಯಜ್ಞವು, ಜ್ಞಾನವನ್ನು ಉಪದೇಶಿಸುವದೇ ದಕ್ಷಿಣೆಯು, ಪ್ರಾಣಾಯಾಮವೇ ಹೆಚ್ಚಿನ ಬಲವು.

**ಭಗೋ ಮ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ ।**
**ವಿದ್ಯಾತ್ಮನಿ ಭಿದಾಬಾಧೋ ಜುಗುಪ್ಸಾ ಹ್ರೀರಕರ್ಮಸು ॥ 40 ॥**

40. ನನ್ನ ಈಶ್ವರಭಾವವೇ ಭಗವು, ಉತ್ತಮವಾದ ಭಗವದ್ಭಕ್ತಿಯೇ ಲಾಭವು, ಜೀವೇಶ್ವರಭೇದವಳಿಯುವದೇ ಜ್ಞಾನವು, ಪಾಪಕರ್ಮದಲ್ಲಿ ಜುಗುಪ್ಸೆಪಡುವದೇ ನಾಚಿಕೆಯು.

**ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ ।**
**ದುಃಖಂ ಕಾಮಸುಖಾಪೇಕ್ಷಾ ಪಣ್ಡಿತೋ ಬನ್ಧಮೋಕ್ಷವಿತ್ ॥ 41 ॥**

41. ವೈರಾಗ್ಯವೇ ಸಂಪತ್ತು, ಸುಖ–ದುಃಖಗಳನ್ನು ಕುರಿತು ಚಿಂತಿಸದಿರುವದೇ ಸುಖವು, ಕಾಮಸುಖಾಪೇಕ್ಷೆಯೇ ದುಃಖವು, ಬಂಧ–ಮೋಕ್ಷಗಳನ್ನು ತಿಳಿದವನೇ ಪಂಡಿತನು.

**ಮೂರ್ಖೋ ದೇಹಾದ್ಯಹಂಬುದ್ಧಿಃ ಪನ್ಥಾ ಮನ್ನಿಗಮಃ ಸ್ಮೃತಃ ।**
**ಉತ್ಪಥಶ್ಚಿತ್ತವಿಕ್ಷೇಪಃ ಸ್ವರ್ಗಃ ಸತ್ತ್ವಗುಣೋದಯಃ ॥ 42 ॥**

42. ದೇಹಾದಿಗಳಲ್ಲಿ ನಾನೆಂಬ ಬುದ್ಧಿಯವನು ಮೂರ್ಖನು, ನನ್ನನ್ನು ತಿಳಿಸುವದೇ ಮಾರ್ಗವು, ಅಶಾಸ್ತ್ರೀಯಮಾರ್ಗದಲ್ಲಿ ಹೋಗುವದೇ ಚಿತ್ತವಿಕ್ಷೇಪವು, ಸತ್ತ್ವಗುಣದ ವೃದ್ಧಿಯೇ ಸ್ವರ್ಗವು.

**ನರಕಸ್ತಮಉನ್ನಾಹೋ ಬನ್ಧುರ್ಗುರುರಹಂ ಸಖೇ ।**
**ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ ॥ 43 ॥**

43. ತಮೋಗುಣದ ವೃದ್ಧಿಯೇ ನರಕವು, ಗುರುವೇ ನಿಜವಾದ ಬಂಧುವು, ಮನುಷ್ಯಶರೀರವೇ ಮನೆಯು, ಗುಣಾಢ್ಯನೇ ಯೋಗ್ಯನೆಂದು ಹೇಳುತ್ತಾರೆ.

**ದರಿದ್ರೋ ಯಸ್ತ್ವಸನ್ತುಷ್ಟಃ ಕೃಪಣೋ ಯೋಽಜಿತೇನ್ದ್ರಿಯಃ ।**
**ಗುಣೇಷ್ವಸಕ್ತಧೀರೀಶೋ ಗುಣಸಙ್ಗೋ ವಿಪರ್ಯಯಃ ॥ 44 ॥**

44. ಅಸಂತುಷ್ಟನು ದರಿದ್ರನು, ಅಜಿತೇಂದ್ರಿಯನು ಕೃಪಣನು, ಗುಣಗಳಲ್ಲಿ ಆಸಕ್ತಿಯಿಲ್ಲದವನು ಈಶನು, ವಿಷಯಾಸಕ್ತನು ಅಸಮರ್ಥನು.

**ಏತ ಉದ್ಧವ ತೇ ಪ್ರಶ್ನಾಃ ಸರ್ವೇ ಸಾಧು ನಿರೂಪಿತಾಃ ।**
**ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ ।**
**ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ॥ 45 ॥**

45. ಎಲೈ ಉದ್ಧವನೆ, ನೀನು ಕೇಳಿದಂತೆ ಗುಣದೋಷಗಳ ಲಕ್ಷಣವನ್ನು ತಿಳಿಸಿದ್ದೇನೆ. ಅವನ್ನು ಎಷ್ಟುವರ್ಣಿಸಿದರೇನು! ಗುಣ–ದೋಷಗಳನ್ನು ನೋಡುವದೇ ದೋಷವು; ಎರಡನ್ನೂ ಬಿಡುವದೇ ಗುಣವು.

*****

## ಶ್ರೀಕೃಷ್ಣನಿಂದ ಉದ್ಧವನಿಗೆ ಜ್ಞಾನ-ಕರ್ಮ-ಭಕ್ತಿಯೋಗಗಳ ಉಪದೇಶ

### (ಹನ್ನೊಂದನೆಯ ಸ್ಕಂದ – ಇಪ್ಪತ್ತನೆಯ ಅಧ್ಯಾಯ)

**ಶ್ರೀಭಗವಾನುವಾಚ –**

**ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।**
**ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್ ॥ 6 ॥**

6. ಜ್ಞಾನ-ಕರ್ಮ-ಭಕ್ತಿಯೋಗಗಳನ್ನು ಮನುಷ್ಯರ ಶ್ರೇಯಸ್ಸಿಗಾಗಿ ನಾನು ಹೇಳಿದ್ದೇನೆ. ಶ್ರೇಯಸ್ಸಿಗೆ ಅವಕ್ಕಿಂತ ಬೇರೆಯಾದ ಉಪಾಯವು ಇಲ್ಲ.

**ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು ।**
**ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್ ॥ 7 ॥**

7. ಅವರಲ್ಲಿ ಕರ್ಮಫಲದಲ್ಲಿ ವಿರಕ್ತರಾದವರಿಗೆ, ಅವನ್ನು ತ್ಯಜಿಸಿದವರಿಗೆ ಜ್ಞಾನಯೋಗವೂ, ಅದರಲ್ಲಿ ಆಸಕ್ತಿಯಿರುವ ಕಾಮಿಗಳಿಗೆ ಕರ್ಮಯೋಗವು (ಸಿದ್ಧಿಸುವದು).

**ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ ।**
**ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥ 8 ॥**

8. ನನ್ನ ಕಥೆಯೇ ಮೊದಲಾದವುಗಳಲ್ಲಿ ಶ್ರದ್ಧೆಯುಂಟಾದ ಮನುಷ್ಯನು ವಿರಕ್ತನೂ ಅಲ್ಲದೆ, ಅತ್ಯಾಸಕ್ತನೂ ಅಲ್ಲದೆ ಇದ್ದರೆ ಅವನಿಗೆ ಭಕ್ತಿಯೋಗವು ಸಿದ್ಧಿಸುವದು.

**ತಾವತ್ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ ।**
**ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ ॥ 9 ॥**

9. ನನ್ನ ಕಥೆಯೇ ಮೊದಲಾದವುಗಳಲ್ಲಿ ಎಲ್ಲಿಯವರೆಗೆ ಶ್ರದ್ಧೆಯು ಹುಟ್ಟುವದಿಲ್ಲವೋ, ಕರ್ಮ-ಕರ್ಮಫಲಗಳಲ್ಲಿ ಆಸಕ್ತಿಯು ಎಲ್ಲಿಯವರೆಗೆ ಕಡಿಮೆಯಾಗುವದಿಲ್ಲವೋ ಅಲ್ಲಿಯವರೆಗೆ ಕರ್ಮವನ್ನು ಮಾಡಬೇಕು.

**ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀಃ ಕಾಮ ಉದ್ಧವ ।**
**ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್ ॥ 10 ॥**

10. ಸ್ವಧರ್ಮದಲ್ಲಿ ನಿರತನಾಗಿ, ಫಲದಲ್ಲಿ ಆಸಕ್ತಿಯಿಲ್ಲದೆ ಯಜ್ಞಗಳನ್ನು ಮಾಡುತ್ತಾ, ಕಾಮ್ಯನಿಷಿದ್ಧ(ಕರ್ಮ)ಗಳನ್ನು ಆಚರಿಸದೇ ಇದ್ದವನು ಸ್ವರ್ಗನರಕಗಳನ್ನು ಹೊಂದುವದಿಲ್ಲ.

**ಅಸ್ಮಿಂಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋಽನಘಃ ಶುಚಿಃ ।**
**ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ ॥ 11 ॥**

11. ಈ ದೇಹದಲ್ಲಿರುತ್ತಾ ಪಾಪಾಚರಣೆಯನ್ನು ಮಾಡದೆ, ಸ್ವಧರ್ಮದಲ್ಲಿದ್ದು ಶುಚಿಯಾಗಿರುವವನು, ದೈವಯೋಗದಿಂದ ವಿಶುದ್ಧವಾದ ನನ್ನ ಭಕ್ತಿಯನ್ನು ಅಥವಾ ಜ್ಞಾನವನ್ನು ಹೊಂದುತ್ತಾನೆ.

**ಸ್ವರ್ಗಿಣೋಽಪ್ಯೇತಮಿಚ್ಛನ್ತಿ ಲೋಕಂ ನಿರಯಿಣಸ್ತಥಾ ।**
**ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್ ॥ 12 ॥**

12. ಜ್ಞಾನ-ಭಕ್ತಿಗಳನ್ನು ಸಾಧಿಸಲು ಈ ಲೋಕವೇ ಸಾಧಕವೆಂದು ದೇವತೆಗಳೂ, ನರಕದಲ್ಲಿರುವವರೂ ಈ ಲೋಕವನ್ನು ಬಯಸುತ್ತಾರೆ.

**ನ ನರಃ ಸ್ವರ್ಗತಿಂ ಕಾಙ್ಕ್ಷೇನ್ನಾರಕೀಂ ವಾ ವಿಚಕ್ಷಣಃ ।**
**ನೇಮಂ ಲೋಕಂ ಚ ಕಾಙ್ಕ್ಷೇತ ದೇಹಾವೇಶಾತ್ಪ್ರಮಾದ್ಯತಿ ॥ 13 ॥**

13. ವಿದ್ವಾಂಸನಾದ ಸಾಧಕನು ಸ್ವರ್ಗವನ್ನೂ ನರಕವನ್ನೂ ಈ ಲೋಕವನ್ನೂ ಬಯಸಬಾರದು. ಏಕೆಂದರೆ ದೇಹಬುದ್ಧಿಯು ಉಂಟಾಗಿ ಪ್ರಮಾದವಾಗುತ್ತದೆ.

**ಏತದ್ವಿದ್ವಾನ್ಪುರಾ ಮೃತ್ಯೋರಭವಾಯ ಘಟೇತ ಸಃ ।**
**ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್ ॥ 14 ॥**

14. ಆದ್ದರಿಂದ ಈ ಶರೀರವು ಮರಣಧರ್ಮದ್ದಾಗಿದ್ದರೂ ಪುರುಷಾರ್ಥಗಳನ್ನು ಕೊಡತಕ್ಕದ್ದು ಎಂದು ತಿಳಿದು ಜಾಗರೂಕನಾಗಿ ಮೃತ್ಯುವನ್ನು ಮೀರುವದಕ್ಕೆ ಪ್ರಯತ್ನಿಸಬೇಕು.

**ಛಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್ ।**
**ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಲಮ್ಪಟಃ ॥ 15 ॥**

**ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾಯುರ್ಭಯವೇಪಥುಃ ।**
**ಮುಕ್ತಸಙ್ಗಃ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ ॥ 16 ॥**

15–16. ಸಂಗವನ್ನು ಬಿಟ್ಟು ಸುಖವನ್ನು ಪಡೆಯುವದು ಎಂದರೆ – ಯಮರೂಪಿಗಳಾದ ಪುರುಷರಿಂದ ಕತ್ತರಿಸಲ್ಪಟ್ಟ ವೃಕ್ಷದಲ್ಲಿರುವ ಗೂಡನ್ನು ಬಿಟ್ಟು ತೊಲಗುವ ಪಕ್ಷಿಗಳು ಹೇಗೆ ಕ್ಷೇಮವನ್ನು ಹೊಂದುತ್ತವೊ ಹಾಗೆ – ವಿವೇಕಿಯಾದ ಪುರುಷನು ಅಹೋರಾತ್ರೆಗಳಿಂದ ಆಯುಸ್ಸು ಭೇದಿಸುತ್ತಿದೆ ಎಂಬುದನ್ನು ತಿಳಿದು ಶಾಂತನಾಗಿ ಮೋಕ್ಷವನ್ನು ಪಡೆದುಕೊಳ್ಳುವನು.

**ನೃದೇಹಮಾದ್ಯಂ ಸುಲಭಂ ಸುದುರ್ಲಭಂ**
**ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।**
**ಮಯಾನುಕೂಲೇನ ನಭಸ್ವತೇರಿತಂ**
**ಪುಮಾನ್ಭವಾಬ್ಧಿಂ ನ ತರೇತ್ಸ ಆತ್ಮಹಾ ॥ 17 ॥**

17. ಸಕಲ ಪುರುಷಾರ್ಥಸಾಧನವಾದ, ಅಪ್ರಯತ್ನವಾಗಿ ಲಭಿಸಿರುವ, ಕಷ್ಟಸಾಧ್ಯವಾದ ಮನುಷ್ಯದೇಹವನ್ನು ಪಡೆದು, ಗುರುವೆಂಬ ಒಳ್ಳೆಯ ನಾವಿಕನುಳ್ಳ ಯೋಗ್ಯವಾದ ನಾವೆಯನ್ನು ಏರಿ, ಭಗವಂತನು ಎಂಬ ಅನುಕೂಲವಾದ ಗಾಳಿಯಿಂದ ಪ್ರೇರಿಸಲ್ಪಟ್ಟ ಮನುಷ್ಯನು ಸಂಸಾರಸಾಗರವನ್ನು ದಾಟುವದಿಲ್ಲವೆಂದರೆ ಅವನು ಆತ್ಮದ್ರೋಹಿಯು.

**ಯದಾರಮ್ಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇನ್ದ್ರಿಯಃ ।**
**ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ ॥ 18 ॥**

18. ಯೋಗಿಯಾದವನು ಕರ್ಮಗಳಲ್ಲಿ ಆಸಕ್ತಿಯಿಲ್ಲದವನಾಗಿ ಇಂದ್ರಿಯನಿಗ್ರವನ್ನು ಮಾಡಿ ವಿರಕ್ತನಾಗಿ, ಅಭ್ಯಾಸದಿಂದ ಮನಸ್ಸನ್ನು ಅಚಲವಾಗಿ ಧರಿಸಬೇಕು.

**ಧಾರ್ಯಮಾಣಂ ಮನೋ ಯರ್ಹಿ ಭ್ರಾಮ್ಯದಶ್ವನವಸ್ಥಿತಮ್ ।**
**ಅತನ್ದ್ರಿತೋಽನುರೋಧೇನ ಮಾರ್ಗೇಣಾತ್ಮವಶಂ ನಯೇತ್ ॥ 19 ॥**

19. ಧರಿಸಿರುವ ಮನಸ್ಸು ಒಂದೆಡೆನಿಲ್ಲದೆ ಅಲೆಯತೊಡಗಿದರೆ ಜಾಗರೂಕನಾಗಿ ತಡೆಹಿಡಿಯುವ ಮಾರ್ಗದಿಂದ ತನ್ನವಶಕ್ಕೆ ತೆಗೆದುಕೊಳ್ಳಬೇಕು.

**ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇನ್ದ್ರಿಯಃ ।**
**ಸತ್ತ್ವಸಮ್ಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್ ॥ 20 ॥**

20. ಮನಸ್ಸಿನ ಚಲನೆಯನ್ನು ಉಪೇಕ್ಷಿಸದೆ, ಪ್ರಾಣ–ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಸತ್ತ್ವಗುಣದಿಂದ ಕೂಡಿದ ಬುದ್ಧಿಯಿಂದ ಮನಸ್ಸನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕು.

**ಏಷ ವೈ ಪರಮೋ ಯೋಗೋ ಮನಸಃ ಸಙ್ಗ್ರಹಃ ಸ್ಮೃತಃ ।**
**ಹೃದಯಜ್ಞತ್ವಮನ್ವಿಚ್ಛನ್ದಮ್ಯಸ್ಯೇವಾರ್ವತೋ ಮುಹುಃ ॥ 21 ॥**

21. ಚಂಚಲವಾದ ಕುದುರೆಯನ್ನು ಪಳಗಿಸುವಂತೆ ಮನಸ್ಸಿನ ಇಷ್ಟವಾದ ಗತಿಯನ್ನು ಅರಿತವನಾಗಿ ಅದನ್ನು ವಶಪಡಿಸಿಕೊಳ್ಳಬೇಕು. ಮನೋನಿಗ್ರಹವೇ ಹೆಚ್ಚಿನ ಯೋಗವೆಂದು ತಿಳೀಯಬೇಕು.

**ಸಾಙ್ಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ ।**
**ಭವಾಪ್ಯಯಾವನುಧ್ಯಾಯೇನ್ಮನೋ ಯಾವತ್ಪ್ರಸೀದತಿ ॥ 22 ॥**

22. ಸಾಂಖ್ಯಶಾಸ್ತ್ರದಲ್ಲಿ ಹೇಳಿರುವಂತೆ ಸಕಲಪದಾರ್ಥಗಳ ಭಾವಗಳನ್ನೂ ಪ್ರಕೃತಿಯಿಂದ ಶರೀರದವರೆಗೂ ಶರೀರದಿಂದ ಪ್ರಕೃತಿಯವರೆಗೂ ಅವುಗಳ ಹುಟ್ಟು ಹೊಂದುಗಳನ್ನು ಮನಸ್ಸು ಪ್ರಸನ್ನವಾಗುವವರೆಗೂ ಚಿಂತಿಸಬೇಕು.

**ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ ।**
**ಮನಸ್ತ್ಯಜತಿ ದೌರಾತ್ಮ್ಯಂ ಚಿನ್ತಿತಸ್ಯಾನುಚಿನ್ತಯಾ ॥ 23 ॥**

23. ಗುರೂಪದೇಶದಿಂದ ಸಂಸಾರದಲ್ಲಿ ಆಸಕ್ತಿಯಿಲ್ಲದ, ವಿರಕ್ತನಾದ ಪುರುಷನು ಮತ್ತೆಮತ್ತೆ ಸ್ವಸ್ವರೂಪಾನುಸಂಧಾನವನ್ನು ಮಾಡುತ್ತಾ ಇದ್ದರೆ ಮನಸ್ಸು ಅಭಿಮಾನವನ್ನು ಬಿಡುವದು.

**ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ ।**
**ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗ್ಯಂ ಸ್ಮರೇನ್ಮನಃ ॥ 24 ॥**

24. ಯಮವೇ ಮುಂತಾದ ಅಷ್ಟಾಂಗ ಯೋಗಮಾರ್ಗಗಳಿಂದಲೂ, ಪದಾರ್ಥವಿವೇಕರೂಪವಾದ ವಿದ್ಯೆಯಿಂದಲೂ, ನನ್ನ ಅರ್ಚನೆ, ಉಪಾಸನೆ ಗಳಿಂದಲೂ ಮನಸ್ಸು ಭಗವಚ್ಚಿಂತನೆಯಲ್ಲಿ ತೊಡಗುತ್ತದೆ. ಮತ್ತೇತರಿಂದಲೂ ಅಲ್ಲ.

**ಯದಿ ಕುರ್ಯಾತ್ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್ ।**
**ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ ॥ 25 ॥**

25. ಯೋಗಿಯಾದವನು ಒಂದುವೇಳೆ ಪ್ರಮಾದದಿಂದ ಶಾಸ್ತ್ರವಿರುದ್ಧ ವಾದ ಕರ್ಮವನ್ನು ಮಾಡಿದರೆ ಯೋಗದಿಂದಲೇ ಆ ಪಾಪವನ್ನು ದಹಿಸಿ ಕೊಳ್ಳುತ್ತಾನೆ.

**ಸ್ವೇ ಸ್ವೇऽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।**
**ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ ।**
**ಗುಣದೋಷವಿಧಾನೇನ ಸಙ್ಗಾನಾಂ ತ್ಯಾಜನೇಚ್ಛಯಾ ॥ 26 ॥**

26. ತಮ್ಮ ತಮ್ಮ ಅಧಿಕಾರಕ್ಕನುಸಾರವಾಗಿ ಆಚರಿಸುವದೇ ಗುಣವು. ಅದಕ್ಕೆ ವಿರುದ್ಧವಾಗಿ ಆಚರಿಸುವದೇ ದೋಷವು. ಏಕೆಂದರೆ ಕರ್ಮಗಳು ಸ್ವಭಾವತಃ ಅಶುದ್ಧವಾದುದು. ಕರ್ಮಗಳಲ್ಲಿ ಆಸಕ್ತಿಯನ್ನು ತೊಡೆದುಹಾಕಲೆಂದೇ ಗುಣ-ದೋಷಗಳ ವಿಧಾನವನ್ನು ಮಾಡಿದೆ.

**ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು ।**
**ವೇದ ದುಃಖಾತ್ಮಕಾನ್ಕಾಮಾನ್ಪರಿತ್ಯಾಗೇऽಪ್ಯನೀಶ್ವರಃ ॥ 27 ॥**

27. ನನ್ನ ಕೀರ್ತನೆಯಲ್ಲಿ ಶ್ರದ್ಧೆಹುಟ್ಟಿದವನು, ಕರ್ಮದಲ್ಲಿ ಆಸಕ್ತಿಯಿಲ್ಲ ದವನು, ಕರ್ಮಫಲಗಳು ದುಃಖಾತ್ಮಕವೆಂದು ತಿಳಿದಿದ್ದರೂ ಬಿಡಲು ಸಮರ್ಥನಲ್ಲ.

**ತತೋ ಭಜೇತ ಮಾಂ ಪ್ರೀತಃ ಶ್ರದ್ಧಾಲುರ್ದೃಢನಿಶ್ಚಯಃ ।**
**ಜುಷಮಾಣಶ್ಚ ತಾನ್ಕಾಮಾನ್ದುಃಖೋದರ್ಕಾಂಶ್ಚ ಗರ್ಹಯನ್ ॥ 28 ॥**

28. ಅನಂತರ ದೃಢನಿಶ್ಚಯನಾದ ಶ್ರದ್ಧಾಲುವು, ವಿಷಯಗಳನ್ನು ದುಃಖವುಳ್ಳವೆಂದು ತಿಳಿದು, ನಿಂದಿಸುತ್ತಾ, ಅಸಾಮರ್ಥ್ಯದಿಂದ ಅವನ್ನು ಸೇವಿಸುತ್ತಾ ಪ್ರೇಮವುಳ್ಳವನಾಗಿ ನನ್ನನ್ನು ಭಜಿಸಬೇಕು.

**ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಸಕೃನ್ಮುನೇಃ ।**
**ಕಾಮಾ ಹೃದಯ್ಯಾ ನಶ್ಯನ್ತಿ ಸರ್ವೇ ಮಯಿ ಹೃದಿ ಸ್ಥಿತೇ ॥ 29 ॥**

29. ಈ ವಿಧವಾದ ಭಕ್ತಿಯೋಗದಿಂದ ನಿರಂತರ ನನ್ನನ್ನು ಭಜಿಸುವದ ರಿಂದ ಅವನ ಹೃದಯದಲ್ಲಿರುವ ಕಾಮಗಳೆಲ್ಲವೂ ನಾಶವಾಗಲಾಗಿ ನಾನು ಹೃದಯದಲ್ಲಿ ಬಂದು ನೆಲೆಸುವೆನು.

**ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ ।**
**ಕ್ಷೀಯನ್ತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇಽಖಿಲಾತ್ಮನಿ ॥ 30 ॥**

30. ಹೀಗೆ ಸರ್ವಾತ್ಮಕನಾದ ನನ್ನ ದರ್ಶನದಿಂದ ಅವನ ಕರ್ಮಗಳು ನಾಶವಾಗುತ್ತವೆ. ಹೃದಯಗ್ರಂಥಿಯು ಬಿಚ್ಚಿಕೊಂಡು ಸರ್ವಸಂಶಯ(ಕಾಮ)ಗಳೂ ನಾಶವಾಗುತ್ತವೆ.

**ತಸ್ಮಾನ್ಮದ್ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।**
**ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ ॥ 31 ॥**

31. ಆದ್ದರಿಂದ ನನ್ನ ಭಕ್ತಿಯುಕ್ತನಾದ ಯೋಗಿಯು, ನನ್ನ ಚಿಂತನೆಯಲ್ಲೇ ಇದ್ದರೆ ಅವನಿಗೆ ಜ್ಞಾನ, ವೈರಾಗ್ಯಗಳ ಹಂಗಿಲ್ಲದೆ ಬಹಳವಾಗಿ ಶ್ರೇಯಸ್ಸು ಇಲ್ಲಿಯೇ ಆಗಿಬಿಡುತ್ತದೆ.

**ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।**
**ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ ॥ 32 ॥**

**ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಞ್ಜಸಾ ।**
**ಸ್ವರ್ಗಾಪವರ್ಗಂ ಮದ್ಧಾಮ ಕಥಞ್ಚಿದ್ಯದಿ ವಾಞ್ಛತಿ ॥ 33 ॥**

32. ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗ, ದಾನ, ಧರ್ಮಗಳಿಂದ ಯಾವ ಶ್ರೇಯಸ್ಸು ಸ್ವರ್ಗ, ಮೋಕ್ಷ, ನನ್ನಲೋಕ, ಮತ್ತೆ ಅವನು ಏನೇನನ್ನು ಬಯಸುತ್ತಾನೋ ಅವೆಲ್ಲವೂ ನನ್ನ ಭಕ್ತಿಯೋಗದಿಂದಲೇ ನನ್ನ ಭಕ್ತನಿಗೆ ದೊರೆಯುತ್ತದೆ.

**ನ ಕಿಞ್ಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾನ್ತಿನೋ ಮಮ ।**
**ವಾಞ್ಛನ್ತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್ ॥ 34 ॥**

34. ನನ್ನ ಅನನ್ಯಭಕ್ತರಾದ ಧೀರರಾದ ಕೆಲವು ಸಾಧುಗಳು ನಾನೇ ಕೈವಲ್ಯವನ್ನು ಮೋಕ್ಷವನ್ನು ಕೊಟ್ಟರೂ ಅದನ್ನು ಬಯಸುವದಿಲ್ಲ.

**ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಲ್ಪಕಮ್ ।**
**ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್ ॥ 35 ॥**

35. ಏನನ್ನೂ ಬಯಸದಿರುವದು ಹೆಚ್ಚಿನ ನಿಃಶ್ರೇಯಸ್ಸಿಗೆ ಕಾರಣವು. ಆದ್ದರಿಂದ ನನ್ನಲ್ಲಿ ಯಾವದೇ ಬಯಕೆಯಿಲ್ಲದ ಭಕ್ತಿಯನ್ನು ಮಾಡಬೇಕು.

**ನ ಮಯ್ಯೇಕಾನ್ತಭಕ್ತಾನಾಂ ಗುಣದೋಷೋದ್ಭವಾ ಗುಣಾಃ ।**
**ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್ ॥ 36 ॥**

36. ನನ್ನ ಏಕಾಂತ ಭಕ್ತರಿಗೂ ಸಮಚಿತ್ತರಾದ ಸಾಧುಗಳಿಗೂ ಪರವನ್ನು ಪಡೆದವರಿಗೂ ಗುಣದೋಷಗಳಿಂದಾಗುವ ಗುಣಗಳು ಅಂಟುವದಿಲ್ಲ.

**ಏವಮೇತಾನ್ಮಯಾ ದಿಷ್ಟಾನನುತಿಷ್ಠನ್ತಿ ಮೇ ಪಥಃ ।**
**ಕ್ಷೇಮಂ ವಿನ್ದನ್ತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ ॥ 37 ॥**

37. ಹೀಗೆ ನಾನು ಹೇಳಿದ ಜ್ಞಾನ, ಭಕ್ತಿ, ಕರ್ಮಯೋಗಗಳ ಅನುಷ್ಠಾನವನ್ನು ಮಾಡುತ್ತಾ ನನ್ನ ಅಭಿಮುಖರಾದ ಜನರು ಇಲ್ಲಿ ಕ್ಷೇಮವನ್ನು ಹೊಂದಿ ನನ್ನ ಪರಮವಾದ ಬ್ರಹ್ಮಪದವನ್ನು ಹೊಂದುತ್ತಾರೆ.

*****

## ಜನ್ಮಮರಣಗಳಿಂದ ಪಾರಾಗುವ ಬಗೆ

### (ಹನ್ನೊಂದನೆಯ ಸ್ಕಂದ – ಇಪ್ಪತ್ತೆರಡನೆಯ ಅಧ್ಯಾಯ)

**ಶ್ರೀಭಗವಾನುವಾಚ –**

**ಮನಃ ಕರ್ಮಮಯಂ ನೄಣಾಮಿನ್ದ್ರಿಯೈಃ ಪಞ್ಚಭಿರ್ಯುತಮ್ ।**
**ಲೋಕಾಲ್ಲೋಕಂ ಪ್ರಯಾತ್ಯನ್ಯ ಆತ್ಮಾ ತದನುವರ್ತತೇ ॥ 36 ॥**

36. ಭಗವಂತನಿಂತೆಂದನು: ಮನುಷ್ಯನ ಕರ್ಮಮಯವಾದ ಮನಸ್ಸು ಐದು ಇಂದ್ರಿಯಗಳಿಂದ ಕೂಡಿದ್ದಾಗಿ, ಶರೀರದಿಂದ ಶರೀರವನ್ನು ಹೊಂದುತ್ತದೆ. ಜೀವನು ಅದನ್ನು ಅನುಸರಿಸುತ್ತಾನೆ.

**ಧ್ಯಾಯನ್ಮನೋಽನು ವಿಷಯಾನ್ದೃಷ್ಟಾನ್ವಾನುಶ್ರುತಾನಥ ।**
**ಉದ್ಯತ್ಸೀದತ್ಕರ್ಮತನ್ತ್ರಂ ಸ್ಮೃತಿಸ್ತದನು ಶಾಮ್ಯತಿ ॥ 37 ॥**

37. ಕರ್ಮಾಧೀನವಾದ ಮನಸ್ಸು ನೋಡಿದ್ದ, ಕೇಳಿದ್ದ, ಶಾಸ್ತ್ರೋಕ್ತಗಳಾದ ವಿಷಯಗಳನ್ನು ಅನುಸರಿಸಿ ಚಿಂತಿಸುವದು, ಹರ್ಷಿಸುವದು, ದುಃಖಿಸುವದು ಮಾಡುತ್ತಿದ್ದು ಹೊಸವಿಷಯಗಳು ಬಂದನಂತರ ಹಿಂದಿನವಿಷಯಗಳ ಸ್ಮೃತಿಯು ನಾಶವಾಗಲಾಗಿ ಶಾಂತವಾಗುವದು.

**ವಿಷಯಾಭಿನಿವೇಶೇನ ನಾತ್ಮಾನಂ ಯತ್ಸ್ಮರೇತ್ಪುನಃ ।**
**ಜನ್ತೋರ್ವೈ ಕಸ್ಯಚಿದ್ಧೇತೋರ್ಮೃತ್ಯುರತ್ಯನ್ತವಿಸ್ಮೃತಿಃ ॥ 38 ॥**

38. ಈ ದೇಹದಲ್ಲಿರುವ ಅಭಿಮಾನದಿಂದ ಮತ್ತೆ ಯಾವದೇ ಕಾರಣದಿಂದ ತನ್ನ ಹಿಂದಿನದರ ಸ್ಮರಣೆಯಾಗುವದಿಲ್ಲ ಎಂಬುದೇನಿದೆ ಅದೇ ಮರಣವು.

**ಜನ್ಮ ತ್ವಾತ್ಮತಯಾ ಪುಂಸಃ ಸರ್ವಭಾವೇನ ಭೂರಿದ ।**
**ವಿಷಯಸ್ವೀಕೃತಿಂ ಪ್ರಾಹುರ್ಯಥಾ ಸ್ವಪ್ನಮನೋರಥಃ ॥ 39 ॥**

39. ಉದಾರನಾದ ಉದ್ಧವನೆ, ಪುರುಷನಿಗೆ ಸ್ವಪ್ನಮನೋರಥಗಳಂತೆ ಎಲ್ಲ ಭಾವನೆಗಳಿಂದಲೂ ಆತ್ಮರೂಪದಿಂದ ಶರೀರವನ್ನು ಪಡೆಯುವದನ್ನು ಜನ್ಮವೆನ್ನುವರು.

**ಸ್ವಪ್ನಂ ಮನೋರಥಂ ಚೇತ್ಥಂ ಪ್ರಾಕ್ತನಂ ನ ಸ್ಮರತ್ಯಸೌ ।**
**ತತ್ರ ಪೂರ್ವಮಿವಾತ್ಮಾನಮಪೂರ್ವಂ ಚಾನುಪಶ್ಯತಿ ॥ 41 ॥**

40. ಸ್ವಪ್ನದಲ್ಲಿರುವವನು ಹೇಗೆ ಹಿಂದಿನ ಸ್ವಪ್ನವನ್ನೂ ಮನೋರಥವನ್ನೂ ನೋಡುವದಿಲ್ಲವೋ ಹಾಗೆ ಇವನು ಹಿಂದಿನ ದೇಹವನ್ನು ಸ್ಮರಿಸುವದಿಲ್ಲ.

**ಇನ್ದ್ರಿಯಾಯನಸೃಷ್ಟ್ಯೇದಂ ತ್ರೈವಿಧ್ಯಂ ಭಾತಿ ವಸ್ತುನಿ ।**
**ಬಹಿರನ್ತರ್ಭಿದಾಹೇತುರ್ಜನೋಽಸಜ್ಜನಕೃದ್ಯಥಾ ॥ 41 ॥**

41. ಇಂದ್ರಿಯಗಳಿಗೆ ನೆಲೆಯಾದ ಮನಸ್ಸಿನ ದೇಹಾಂತರಾಭಿನಿವೇಶ ರೂಪವಾದ ಸೃಷ್ಟಿಯಿಂದ ಆತ್ಮನಲ್ಲಿ ಉತ್ತಮಮಧ್ಯಮನೀಚತ್ವಾದಿ ಭೇದತ್ರಯವು ತೋರುವದು. ಮಿಥ್ಯಾಭೂತವಾದ ದೇಹಗಳನ್ನು ನೋಡುವವನು, ಹೇಗೊ ಹಾಗೆ ಒಳಹೊರಗೆಂಬ ಭೇದವನ್ನು ನೋಡುವವನಾಗುತ್ತಾನೆ.

**ನಿತ್ಯದಾ ಹ್ಯಙ್ಗ ಭೂತಾನಿ ಭವನ್ತಿ ನ ಭವನ್ತಿ ಚ ।**
**ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ ॥ 42 ॥**

42. ಉದ್ಧವನೆ, ಲಕ್ಷ್ಯಕ್ಕೆ ಬರದ ವೇಗವುಳ್ಳ ಕಾಲದಿಂದ ಪ್ರತಿಕ್ಷಣ ದಲ್ಲಿಯೂ ಶರೀರಗಳು ಹುಟ್ಟುತ್ತವೆ, ನಾಶವಾಗುತ್ತವೆ. ಸೂಕ್ಷ್ಮವಾಗಿರುವದರಿಂದ ಅವು ಕಾಣಿಸುವದಿಲ್ಲ.

**ಯಥಾರ್ಚಿಷಾಂ ಸ್ರೋತಸಾಂ ಚ ಫಲಾನಾಂ ವಾ ವನಸ್ಪತೇಃ ।**
**ತಥೈವ ಸರ್ವಭೂತಾನಾಂ ವಯೋಽವಸ್ಥಾದಯಃ ಕೃತಾಃ ॥ 43 ॥**

43. ದೀಪದಜ್ವಾಲೆಗಳಿಗೂ, ನದಿಗಳಿಗೂ, ವನಸ್ಪತಿಗಳಿಗೂ, ಫಲಗಳಿಗೂ ಹೇಗೋ ಹಾಗೆಯೇ ಎಲ್ಲಾ ಭೂತಗಳಿಗೂ ಆಯುಸ್ಸು, ಅವಸ್ಥೆಗಳನ್ನು ಕಲ್ಪಿಸಿದೆ.

**ಸೋಽಯಂ ದೀಪೋಽರ್ಚಿಷಾಂ**
**ಯದ್ವತ್ಸ್ರೋತಸಾಂ ತದಿದಂ ಜಲಮ್ ।**
**ಸೋಽಯಂ ಪುಮಾನಿತಿ ನೃಣಾಂ**
**ಮೃಷಾ ಗೀರ್ಧೀರ್ಮೃಷಾಯುಷಾಮ್ ॥ 44॥**

44. ಜ್ವಾಲೆಗಳ ಹೋಲಿಕೆಯಿಂದ ಅದೇ ದೀಪವೆಂದೂ, ಪ್ರವಾಹಗಳ ಸಾಮ್ಯದಿಂದ ಅದೇ ಜಲವೆಂದೂ ಬಗೆಯುವದು ಹೇಗೋ ಹಾಗೆಯೇ ಅವನೇ ಇವನೆಂಬುದೂ ಸುಳ್ಳೇ ಆಗಿದೆ.

**ಮಾ ಸ್ವಸ್ಯ ಕರ್ಮಬೀಜೇನ ಜಾಯತೇ ಸೋಽಪ್ಯಯಂ ಪುಮಾನ್ ।**
**ಮ್ರಿಯತೇ ವಾಮರೋ ಭ್ರಾನ್ತ್ಯಾ ಯಥಾಗ್ನಿರ್ದಾರುಸಂಯುತಃ ॥ 45 ॥**

45. ಈ ಮನುಷ್ಯನು ತನ್ನ ಕರ್ಮಬೀಜದಿಂದ ಹುಟ್ಟುವದಿಲ್ಲ, ಸಾಯುವದಿಲ್ಲ. ಮರಣವಿಲ್ಲದವನಾದರೂ ಕಟ್ಟಿಗೆಯಿಂದ ಅಗ್ನಿಯು ಹುಟ್ಟುವಂತೆ ಭ್ರಾಂತಿಯಿಂದ ಹುಟ್ಟುವನು, ಸಾಯುವನು.

**ನಿಷೇಕಗರ್ಭಜನ್ಮಾನಿ ಬಾಲ್ಯಕೌಮಾರಯೌವನಮ್ ।**
**ವಯೋಮಧ್ಯಂ ಜರಾ ಮೃತ್ಯುರಿತ್ಯವಸ್ಥಾಸ್ತನೋರ್ನವ ॥ 46 ॥**

46. ಶರೀರಕ್ಕೆ ಗರ್ಭಪ್ರವೇಶ, ಜನ್ಮ, ಬಾಲ್ಯ, ಕುಮಾರಾವಸ್ಥೆ, ಯೌವನ, ಮಧ್ಯಾವಸ್ಥೆ, ಮುಪ್ಪು, ಮರಣ – ಎಂಬ ಒಂಬತ್ತು ಅವಸ್ಥೆಗಳು ಆಗುವವು.

**ಏತಾ ಮನೋರಥಮಯೀರ್ಹಾನ್ಯಸ್ಯೋಚ್ಚಾವಚಾಸ್ತನೂಃ ।**
**ಗುಣಸಙ್ಗಾದುಪಾದತ್ತೇ ಕ್ವಚಿತ್ಕಶ್ಚಿಜ್ಜಹಾತಿ ಚ ॥ 47 ॥**

47. ಶರೀರವು ಜೀವನಿಗಿಂತ ಭಿನ್ನವಾಗಿದ್ದು ಈ ಉಚ್ಚನೀಚಕಲ್ಪನೆಗಳು ಮನಸ್ಸಿನ ಕಲ್ಪನಾಮಾತ್ರವೇ ಆಗಿದೆ. ಗುಣಗಳ ಸಂಗದಿಂದ ನನ್ನದೆನ್ನುತ್ತಾನೆ, ವಿವೇಕವುಂಟಾದರೆ ಬಿಟ್ಟುಬಿಡುತ್ತಾನೆ.

**ಆತ್ಮನಃ ಪಿತೃಪುತ್ರಾಭ್ಯಾಮನುಮೇಯೌ ಭವಾಪ್ಯಯೌ ।**
**ನ ಭವಾಪ್ಯಯವಸ್ತೂನಾಮಭಿಜ್ಞೋ ದ್ವಯಲಕ್ಷಣಃ ॥ 48 ॥**

48. ತಂದೆ ಮಕ್ಕಳ ಜನನಮರಣಗಳಿಂದ ತನ್ನದನ್ನು ಊಹಿಸಿಕೊಳ್ಳಬೇಕು. ಜನನ ಮರಣಗಳು ಯಾವ ವಸ್ತುವಿನಲ್ಲಿ ಇವೆಯೋ ಅವುಗಳಿಗಿಂತ ಆತ್ಮನು ಸರ್ವಥಾ ಬೇರೆಯೇ ಆಗಿದ್ದಾನೆ.

**ತರೋರ್ಬೀಜವಿಪಾಕಾಭ್ಯಾಂ ಯೋ ವಿದ್ವಾಞ್ಜನ್ಮಸಂಯಮೌ ।**
**ತರೋರ್ವಿಲಕ್ಷಣೋ ದ್ರಷ್ಟಾ ಏವಂ ದ್ರಷ್ಟಾ ತನೋಃ ಪೃಥಕ್ ॥ 49 ॥**

49. ವೃಕ್ಷದ ಬೀಜ ಮತ್ತು ಪರಿಣಾಮಗಳಿಂದ ವಿದ್ವಾಂಸನು ಅದಕ್ಕಿಂತ ಬೇರೆಯಾಗಿದ್ದು ಅದರ ಹುಟ್ಟುಹೊಂದುಗಳನ್ನು ಕಾಣುತ್ತಾನೆ. ಅಂತೆಯೇ ದೇಹಸಾಕ್ಷಿಯು ಶರೀರಕ್ಕಿಂತ ಭಿನ್ನನು.

**ಪ್ರಕೃತೇರೇವಮಾತ್ಮಾನಮವಿವಿಚ್ಯಾಬುಧಃ ಪುಮಾನ್ ।**
**ತತ್ತ್ವೇನ ಸ್ಪರ್ಶಸಮ್ಮೂಢಃ ಸಂಸಾರಂ ಪ್ರತಿಪದ್ಯತೇ ॥ 50 ॥**

50. ಹೀಗೆ ಅಜ್ಞಾನಿಯಾದ ಪುರುಷನು ತತ್ತ್ವದೃಷ್ಟಿಯಿಂದ ಪ್ರಕೃತಿಯಿಂದ ಆತ್ಮನನ್ನು ವಿಂಗಡಿಸದೆ ವಿಷಯಗಳಿಂದ ಮೋಹಗೊಂಡವನಾಗಿ ಸಂಸಾರವನ್ನು ಹೊಂದುತ್ತಾನೆ.

**ಸತ್ತ್ವಸಙ್ಗಾದೃಷೀನ್ದೇವಾನ್ರಜಸಾಸುರಮಾನುಷಾನ್ ।**
**ತಮಸಾ ಭೂತತಿರ್ಯಕ್ತ್ವಂ ಭ್ರಾಮಿತೋ ಯಾತಿ ಕರ್ಮಭಿಃ ॥ 51 ॥**

51. ಸತ್ತ್ವಗುಣದಿಂದ ಋಷಿಗಳನ್ನೂ ದೇವತೆಗಳನ್ನೂ; ರಜೋಗುಣದಿಂದ ಅಸುರರನ್ನೂ, ಮನುಷ್ಯರನ್ನೂ; ತಮೋಗುಣದಿಂದ ಭೂತಗಳನ್ನೂ ತಿರ್ಯಗ್ಜಂತುಗಳನ್ನೂ ಕರ್ಮಗಳಿಂದ ತಿರುಗಿಸಲ್ಪಟ್ಟವನಾಗಿ ಪಡೆಯುತ್ತಾನೆ.

**ನೃತ್ಯತೋ ಗಾಯತಃ ಪಶ್ಯನ್ಯಥೈವಾನುಕರೋತಿ ತಾನ್ ।**
**ಏವಂ ಬುದ್ಧಿಗುಣಾನ್ಪಶ್ಯನ್ನನೀಹೋಽಪ್ಯನುಕಾರ್ಯತೇ ॥ 52 ॥**

52. ಕುಣಿಯುವವರನ್ನು, ಹಾಡುವವರನ್ನು ನೋಡುವವನು ಹೇಗೆ ಅನುಸರಿಸುತ್ತಾನೊ ಹಾಗೆಯೇ ಬುದ್ಧಿಗುಣಗಳನ್ನು ನೋಡುವ ಆತ್ಮನು ಅಸಂಗನಾದರೂ ಅನುಸರಿಸುವವನಂತೆ ಕಾಣುತ್ತಾನೆ.

**ಯಥಾಮ್ಭಸಾ ಪ್ರಚಲತಾ ತರವೋऽಪಿ ಚಲಾ ಇವ ।**
**ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ ॥ 53 ॥**

**ಯಥಾ ಮನೋರಥಧಿಯೋ ವಿಷಯಾನುಭವೋ ಮೃಷಾ ।**
**ಸ್ವಪ್ನದೃಷ್ಟಾಶ್ಚ ದಾಶಾರ್ಹ ತಥಾ ಸಂಸಾರ ಆತ್ಮನಃ ॥ 54 ॥**

53–54. ಉದ್ಧವನೆ, ಅಲ್ಲಾಡುವ ನೀರಿನಿಂದ ವೃಕ್ಷಗಳೂ ಅಲ್ಲಡುವಂತೆ; ತಿರುಗುವ ಕಣ್ಣಿನಿಂದ ಭೂಮಿಯೂ ತಿರುಗುವಂತೆ ಹೇಗೆ ಕಾಣುವದೊ; ಹಾಗೆಯೇ ಮನಸ್ಸಿನ ಕಲ್ಪನೆಗಳು, ಸ್ವಪ್ನದೃಶ್ಯಗಳು ಹೇಗೆ ಸುಳ್ಳೋ ಹಾಗೆಯೇ ವಿಷಯಾನುಭೋಗ ರೂಪವಾದ ಸಂಸಾರವು ಆತ್ಮನಿಗೆ ಸುಳ್ಳೇ ಆಗಿದೆ.

**ಅರ್ಥೇ ಹ್ಯವಿದ್ಯಮಾನೇऽಪಿ ಸಂಸೃತಿರ್ನ ನಿವರ್ತತೇ ।**
**ಧ್ಯಾಯತೋ ವಿಷಯಾನಸ್ಯ ಸ್ವಪ್ನೇऽನರ್ಥಾಗಮೋ ಯಥಾ ॥ 55 ॥**

55. ವಿಷಯಗಳನ್ನು ಧ್ಯಾನಿಸುವ ಜೀವನಿಗೆ ಸ್ವಪ್ನದಲ್ಲಿ ಅನರ್ಥಗಳ ದರ್ಶನದಂತೆ ಶಬ್ದಾದಿವಿಷಯಗಳು ಇಲ್ಲದಿದ್ದರೂ ಸಂಸಾರವು ಹೋಗುವದಿಲ್ಲ.

**ತಸ್ಮಾದುದ್ಧವ ಮಾ ಭುಙ್ಕ್ಷ್ವ ವಿಷಯಾನಸದಿನ್ದ್ರಿಯೈಃ ।**
**ಆತ್ಮಾಗ್ರಹಣನಿರ್ಭಾತಂ ಪಶ್ಯ ವೈಕಲ್ಪಿಕಂ ಭ್ರಮಮ್ ॥ 56 ॥**

56. ಉದ್ಧವನೆ, ಆದ್ದರಿಂದ ತೃಪ್ತವಾಗದ ಇಂದ್ರಿಯಗಳಿಂದ ವಿಷಯಗಳನ್ನು ಸೇವಿಸಬೇಡ. ಅಜ್ಞಾನದಿಂದ ಆತ್ಮನಲ್ಲಿ ಭ್ರಮೆಯಿಂದ ಭೇದಬುದ್ಧಿಯುಂಟಾಗಿದೆ. ಅದನ್ನು ದೂರಗೊಳಿಸಿಕೊ.

******

## ಭಿಕ್ಷುಗೀತೆ

### (ಹನ್ನೊಂದನೆಯ ಸ್ಕಂದ – ಇಪ್ಪತ್ತ ಮೂರನೆಯ ಅಧ್ಯಾಯ)

**ಸ ಚಾಹೇದಮಹೋ ಕಷ್ಟಂ ವೃಥಾತ್ಮಾ ಮೇऽನುತಾಪಿತಃ ।**
**ನ ಧರ್ಮಾಯ ನ ಕಾಮಾಯ ಯಸ್ಯಾರ್ಥಾಯಾಸ ಈದೃಶಃ ॥ 14 ॥**

14. ಬ್ರಾಹ್ಮಣನು ಹೇಳುತ್ತಾನೆ, ನಾನು ಇಷ್ಟುದಿನಗಳವರೆಗೆ ನನ್ನನ್ನು ಕಷ್ಟಕ್ಕೀಡುಮಾಡಿಕೊಂಡೇನು! ಇದು ದುಃಖದ ಮಾತಾಗಿದೆ. ನಾನು

ಧನಕ್ಕಾಗಿಮಾಡಿದ ಶ್ರಮವಹಿಸಿದೆನೊ ಅದು ಧರ್ಮಕ್ಕಾಗಿಯೂ ಸುಖೋಪಭೋಗಕ್ಕಾಗಿಯೂ ಆಗಲೇ ಇಲ್ಲ.

**ಪ್ರಾಯೇಣಾರ್ಥಾಃ ಕದರ್ಯಾಣಾಂ ನ ಸುಖಾಯ ಕದಾಚನ ।**
**ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ ॥ 15 ॥**

15. ಬಹುಶಃ ಕೃಪಣರ ಸಂಪತ್ತುಗಳು ಇಲ್ಲಿ ದೇಹಾಯಾಸಕ್ಕೆ ಮೃತರಾದ ಮೇಲೆ ನರಕಕ್ಕೆ ಆಗುತ್ತದೆ. ಒಮ್ಮೆಯಾದರೂ ಸುಖಕ್ಕೆ ಆಗುವದಿಲ್ಲ.

**ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾ ಯೇ ಗುಣಿನಾಂ ಗುಣಾಃ ।**
**ಲೋಭಃ ಸ್ವಲ್ಪೋಽಪಿ ತಾನ್ಹನ್ತಿ ಶ್ವಿತ್ರೋ ರೂಪಮಿವೇಪ್ಸಿತಮ್ ॥ 16 ॥**

16. ಸ್ವಲ್ಪವಾದ ತೊನ್ನು ಸರ್ವಾಂಗದ ಸೌಂದರ್ಯವನ್ನೂ ಕೆಡಿಸುವಂತೆ, ಸ್ವಲ್ಪವಾದ ಲೋಭವು ಯಶಸ್ವಿಗಳ ಶುದ್ಧಕೀರ್ತಿಯನ್ನೂ ಗುಣಗಣಗಳನ್ನೂ ನಾಶಪಡಿಸುತ್ತದೆ.

**ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ ।**
**ನಾಶೋಪಭೋಗ ಆಯಾಸಸ್ತ್ರಾಸಶ್ಚಿನ್ತಾ ಭ್ರಮೋ ನೃಣಾಮ್ ॥ 17 ॥**

17. ಸಂಪತ್ತಿನ ಗಳಿಕೆಯಲ್ಲಿ, ಬಳಿಕ ಬೆಳೆಸುವದರಲ್ಲಿ, ರಕ್ಷಣೆಯಲ್ಲಿ, ವ್ಯಯಿಸುವದರಲ್ಲಿ, ನಾಶದಲ್ಲಿ, ಉಪಭೋಗದಲ್ಲಿ ಎಲ್ಲೆಲ್ಲಿಯೂ ಆಯಾಸ, ಚಿಂತೆ, ಭ್ರಮೆ ಇವುಗಳ ಉಂಟಾಗುತ್ತವೆ.

**ಸ್ತೇಯಂ ಹಿಂಸಾನೃತಂ ದಮ್ಭಃ ಕಾಮಃ ಕ್ರೋಧಃ ಸ್ಮಯೋ ಮದಃ ।**
**ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ ॥ 18 ॥**

**ಏತೇ ಪಞ್ಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್ ।**
**ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋಽರ್ಥೀ ದೂರತಸ್ತ್ಯಜೇತ್ ॥ 19 ॥**

18. ಕಳ್ಳತನ, ಹಿಂಸೆ, ಸುಳ್ಳು, ವಂಚನೆ, ಕಾಮ, ಕ್ರೋಧ, ಗರ್ವ, ಕೊಬ್ಬು, ಭೇದ, ವೈರ, ನಂಬಿಕೆಯಿಲ್ಲದಿರುವದು, ಕಲಹ, ವ್ಯಸನಗಳು – ಈ ಹದಿನೈದು ಅನರ್ಥಗಳು ಅರ್ಥಮೂಲವಾಗಿ ಬರುವಂತಹವು. ಆದ್ದರಿಂದ ಶ್ರೇಯಸ್ಸನ್ನು ಬಯಸುವವನು ಅರ್ಥವನ್ನು ಅನರ್ಥವೆಂದು ತಿಳಿದು ದೂರದಿಂದಲೇ ಬಿಟ್ಟುಬಿಡಬೇಕು.

**ಭಿದ್ಯನ್ತೇ ಭ್ರಾತರೋ ದಾರಾಃ ಪಿತರಃ ಸುಹೃದಸ್ತಥಾ ।**
**ಏಕಾಸ್ನಿಗ್ಧಾಃ ಕಾಕಿಣಿನಾ ಸದ್ಯಃ ಸರ್ವೇಽರಯಃ ಕೃತಾಃ ॥ 20 ॥**

20. ಅರ್ಥದಿಂದಲೇ ಸಹೋದರರು, ಹೆಂಡತಿ, ತಂದೆತಾಯಿಯರು, ಸ್ನೇಹಿತರು ಬೇರೆಯಾಗುವರು. ಒಂದೇ ಪ್ರಾಣವೆನಿಸಿದವರೂ ಕವಡೆಯಂತೆ ಸೇರಿದ್ದವರಾದರೂ ಕ್ಷಣದಲ್ಲಿ ಶತ್ರುಗಳಾಗಿ ಹೋಗುತ್ತಾರೆ.

**ಅರ್ಥೇನಾಲ್ಪೀಯಸಾ ಹ್ಯೇತೇ ಸಂರಬ್ಧಾ ದೀಪ್ತಮನ್ಯವಃ ।**
**ತ್ಯಜನ್ತ್ಯಾಶು ಸ್ಪೃಧೋ ಘ್ನನ್ತಿ ಸಹಸೋತ್ಸೃಜ್ಯ ಸೌಹೃದಮ್ ॥ 21 ॥**

21. ಜನರು ಸ್ವಲ್ಪವಾದ ಧನದಿಂದಲೇ ಕ್ಷುಬ್ಧರಾಗಿ ಕ್ರೋಧಗೊಂಡವರಾಗಿ ಕ್ಷಣದಲ್ಲಿ ಸೌಹಾರ್ದಭಾವವನ್ನೆಲ್ಲ ಮರೆತು ಪರಸ್ಪರಸ್ಪರ್ಧೆಯಲ್ಲಿ ತೊಡಗುತ್ತಾರೆ. ಒಬ್ಬರು ಮತ್ತೊಬ್ಬರ ಪ್ರಾಣಘಾತಕರಾಗುವಲ್ಲಿಯವರೆಗೆ ಮುಂದುವರಿಯುತ್ತಾರೆ.

**ಲಬ್ಧ್ವಾ ಜನ್ಮಾಮರಪ್ರಾರ್ಥ್ಯಂ ಮಾನುಷ್ಯಂ ತದ್ದ್ವಿಜಾಗ್ರ್ಯತಾಮ್ ।**
**ತದನಾದೃತ್ಯ ಯೇ ಸ್ವಾರ್ಥಂ ಘ್ನನ್ತಿ ಯಾನ್ತ್ಯಶುಭಾಂ ಗತಿಮ್ ॥ 22 ॥**

22. ದೇವತೆಗಳಿಂದಲೂ ಪ್ರಾರ್ಥಿಸಲ್ಪಡುವ ಮನುಷ್ಯಜನ್ಮವನ್ನು ಅದರಲ್ಲಿಯೂ ಬ್ರಾಹ್ಮಣ್ಯವನ್ನು ಪಡೆದು, ಅದನ್ನು ತಿರಸ್ಕರಿಸಿ, ಯಾರು ತಮ್ಮ ನಿಜವಾದ ಸ್ವಾರ್ಥವನ್ನು ನಾಶಮಾಡಿಕೊಳ್ಳುವರೊ ಅವರು ಅಶುಭಗತಿಯನ್ನು ಪಡೆಯುತ್ತಾರೆ.

**ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।**
**ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ ॥ 23 ॥**

23. ಸ್ವರ್ಗಮೋಕ್ಷಗಳಿಗೆ ಬಾಗಿಲೆನಿಸಿದ ಈ ದೇಹವನ್ನು ಹೊಂದಿ ಮರಣಶೀಲನಾದ ಯಾವ ಮನುಷ್ಯನು ಅನರ್ಥಕ್ಕೆ ನೆಲೆಯಾದ ಧನದಲ್ಲಿ ಆಸಕ್ತನಾದಾನು!

**ದೇವರ್ಷಿಪಿತೃಭೂತಾನಿ ಜ್ಞಾತೀನ್ಬನ್ಧೂಂಶ್ಚ ಭಾಗಿನಃ ।**
**ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ ॥ 24 ॥**

24. ದೇವ, ಋಷಿ, ಪಿತೃ, ಭೂತಗಳು – ಇವನ್ನು, ಜ್ಞಾತಿಗಳನ್ನು, ನೆಂಟರನ್ನು, ಭಾಗಾರ್ಹರನ್ನು, ತನ್ನನ್ನೂ ತೃಪ್ತಿಗೊಳಿಸಿಕೊಳ್ಳದೆ, ಯಕ್ಷನಂತೆ ಧನಕಾಯುವ ಕೃಪಣನಾಗಿ ಅವಶ್ಯವಾಗಿ ಅಧೋಗತಿಯನ್ನು ಪಡೆಯುತ್ತಾನೆ.

**ವ್ಯರ್ಥಯಾರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ ।**
**ಕುಶಲಾ ಯೇನ ಸಿಧ್ಯನ್ತಿ ಜರಠಃ ಕಿಂ ನು ಸಾಧಯೇ ॥ 25 ॥**

25. ಯಾವ ಸಂಪತ್ತಿನಿಂದ ವಿವೇಕಿಗಳು ಸಿದ್ಧಿಯನ್ನು ಪಡೆಯುವರೊ, ಅಂಥ ನಿಷ್ಪ್ರಯೋಜಕವಾದ ಹಣದಾಸೆಯಿಂದ ಮರುಳಾದ ನನ್ನ ಸಂಪತ್ತು, ವಯಸ್ಸು, ಶಕ್ತಿಯು ಹೋಯಿತು. ಮುದುಕನಾದ ನಾನು ಏನನ್ನು ಸಾಧಿಸಲಿ!

**ಕಸ್ಮಾತ್ಸಙ್ಕ್ಲಿಶ್ಯತೇ ವಿದ್ವಾನ್ವ್ಯರ್ಥಯಾರ್ಥೇಹಯಾಸಕೃತ್ ।**
**ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ ॥ 26 ॥**

26. ತಿಳಿದವರೂ ಸಂಪತ್ತಿನ ಕುರಿತಾದ ವ್ಯರ್ಥವಾದ ಚಿಂತೆಯಿಂದ ಏಕೆ ದುಃಖಿಗಳಾಗಿರುತ್ತಾರೆ? ಎಂಬುದು ನನಗೆ ತಿಳಿದಿಲ್ಲ. ಅವಶ್ಯವಾಗಿ ಇವರು ಯಾವುದೋ ಮಾಯೆಯಿಂದ ಮೋಹಿತರಾಗಿರುತ್ತಾರೆ.

**ಕಿಂ ಧನೈರ್ಧನದೈರ್ವಾ ಕಿಂ ಕಾಮೈರ್ವಾ ಕಾಮದೈರುತ ।**
**ಮೃತ್ಯುನಾ ಗ್ರಸ್ಯಮಾನಸ್ಯ ಕರ್ಮಭಿರ್ವೋತ ಜನ್ಮದೈಃ ॥ 27 ॥**

27. ಮೃತ್ಯುವಿನಿಂದ ಹಿಡಿಯಲ್ಪಟ್ಟ ಇವನಿಗೆ ಸಂಪತ್ತಿನಿಂದಾಗಲಿ ಸಂಪತ್ತನ್ನು ಕೊಡುವವನಿಂದಲಾಗಲಿ, ಕಾಮದಿಂದಾಗಲಿ, ಕಾಮಗಳನ್ನು ಕೊಡುವದರಿಂದಾಗಲಿ, ಜನ್ಮವನ್ನು ಕೊಡುವ ಕರ್ಮಗಳಿಂದಲಾಗಲಿ ಆಗಬೇಕಾದದ್ದೇನು?

**ನೂನಂ ಮೇ ಭಗವಾಂಸ್ತುಷ್ಟಃ ಸರ್ವದೇವಮಯೋ ಹರಿಃ ।**
**ಯೇನ ನೀತೋ ದಶಾಮೇತಾಂ ನಿರ್ವೇದಶ್ಚಾತ್ಮನಃ ಪ್ಲವಃ ॥ 28 ॥**

28. ಸರ್ವದೇವಮಯನೂ ಭವಂತನೂ ಆದ ಹರಿಯು ನನ್ನಲ್ಲಿ ತುಷ್ಟನಾಗಿರುವದರಲ್ಲಿ ಸಂದೇಹವಿಲ್ಲ. ಅವನೇ ನನ್ನನ್ನು ಈ ಸ್ಥಿತಿಗೆ ತಂದು ವೈರಾಗ್ಯವನ್ನು ಅನುಗ್ರಹಿಸಿರುವನು. ಅದು ಈ ಸಂಸಾರಾ ಸಾಗರವನ್ನು ದಾಟಿಸುವ ನಾವೆಯಂತಿದೆ.

**ಸೋಽಹಂ ಕಾಲಾವಶೇಷೇಣ ಶೋಷಯಿಷ್ಯೇಽಙ್ಗಮಾತ್ಮನಃ ।**
**ಅಪ್ರಮತ್ತೋಽಖಿಲಸ್ವಾರ್ಥೇ ಯದಿ ಸ್ಯಾತ್ಸಿದ್ಧ ಆತ್ಮನಿ ॥ 29 ॥**

29. ನಾನು ಉಳಿದ ಆಯುಸ್ಸಿನಿಂದ ನನ್ನ ಶರೀರವನ್ನು ತಪಸ್ಸಿನಿಂದಲೂ, ಮೈಮರೆಯದೆ ಧರ್ಮಾದಿಸಾಧನಗಳಲ್ಲಿ ತೊಡಗಿ, ಮನಸ್ಸಿನಿಂದಲೇ ಸಿದ್ಧನಾಗಿ ಶೋಷಿಸಿಕೊಳ್ಳುತ್ತೇನೆ.

**ತತ್ರ ಮಾಮನುಮೋದೇರನ್ದೇವಾಸ್ತ್ರಿಭುವನೇಶ್ವರಾಃ ।**
**ಮುಹೂರ್ತೇನ ಬ್ರಹ್ಮಲೋಕಂ ಖಟ್ವಾಙ್ಗಃ ಸಮಸಾಧಯತ್ ॥ 30 ॥**

30. ಮೂರುಲೋಕಗಳ ಒಡೆಯರಾದ ದೇವತೆಗಳೂ ನನ್ನನ್ನು ಅನುಗ್ರಹಿಸಲಿ, ಏಕೆಂದರೆ ಖಟ್ವಾಂಗನೆಂಬ ರಾಜನು (ಏಕಾಗ್ರವಾದ ಭಗವಚ್ಚಿಂತನೆಯಿಂದ) ಒಂದು ಮುಹೂರ್ತಕಾಲದಲ್ಲಿ ಬ್ರಹ್ಮಲೋಕವನ್ನು ಸಾಧಿಸಿಕೊಂಡುಬಿಟ್ಟನು.

**ನಾಯಂ ಜನೋ ಮೇ ಸುಖದುಃಖಹೇತು–**
**ರ್ನ ದೇವತಾತ್ಮಾ ಗ್ರಹಕರ್ಮಕಾಲಾಃ ।**
**ಮನಃ ಪರಂ ಕಾರಣಮಾಮನನ್ತಿ**
**ಸಂಸಾರಚಕ್ರಂ ಪರಿವರ್ತಯೇದ್ಯತ್ ॥ 42 ॥**

43. ನನ್ನ ಸುಖದುಃಖಗಳಿಗೆ ಈ ಜನರು, ದೇವತೆಗಳು, ಜೀವ, ಗ್ರಹಗಳು, ಕರ್ಮ, ಕಾಲ ಕಾರಣರಲ್ಲ, ಈ ಸಂಸಾರಚಕ್ರವನ್ನು ತಿರುಗಿಸುವ ಮನಸ್ಸೇ ಪರಮಕಾರಣವೆಂದು ಹೇಳುತ್ತಾರೆ.

**ಮನೋ ಗುಣಾನ್ವೈ ಸೃಜತೇ ಬಲೀಯ–**
**ಸ್ತತಶ್ಚ ಕರ್ಮಾಣಿ ವಿಲಕ್ಷಣಾನಿ ।**
**ಶುಕ್ಲಾನಿ ಕೃಷ್ಣಾನ್ಯಥ ಲೋಹಿತಾನಿ**
**ತೇಭ್ಯಃ ಸವರ್ಣಾಃ ಸೃತಯೋ ಭವನ್ತಿ ॥ 44 ॥**

44. ಬಲಿಷ್ಠವಾದ ಈ ಮನಸ್ಸು ಸತ್ತ್ವಾದಿಗುಣಗಳನ್ನು ಸೃಷ್ಟಿಸುತ್ತದೆ. ಆ ಗುಣಗಳಿಂದ ಸಾತ್ವಿಕ, ರಾಜಸ, ತಾಮಸಕರ್ಮಗಳು; ಅವುಗಳಿಂದ ಜನ್ಮಗಳು ಉಂಟಾಗುವವು.

**ಅನೀಹ ಆತ್ಮಾ ಮನಸಾ ಸಮೀಹತಾ**
**ಹಿರಣ್ಮಯೋ ಮತ್ಸಖ ಉದ್ವಿಚಷ್ಟೇ ।**

**ಮನಃ ಸ್ವಲಿಙ್ಗಂ ಪರಿಗೃಹ್ಯ ಕಾಮಾನ್**
**ಜುಷನ್ನಿಬದ್ಧೋ ಗುಣಸಙ್ಗತೋಽಸೌ ॥ 45 ॥**

45. ಗುಣವೃತ್ತಿಗಳನ್ನು ಸೃಜಿಸುವ ಮನಸ್ಸಿನೊಡನೆ ನಿಯಂತೃವಾಗಿದ್ದರೂ ವಿಜ್ಞಾನಸ್ವರೂಪಿಯಾಗಿದ್ದು ಜೀವನ ಗೆಳೆಯನಾಗಿರುವವನು. ಸಾಕ್ಷಿಯಾಗಿ ನೋಡುತ್ತಿರುವವನು. ಈ ಜೀವನು ತನ್ನಲ್ಲಿ ಸಂಸಾರವನ್ನು ತೋರಿಸುವ ಮನಸ್ಸನ್ನು ತಾನೆಂದು ತಿಳಿದು ಗುಣಗಳಿಂದ ಕಟ್ಟಲ್ಪಟ್ಟವನಾಗಿ ವಿಷಯಗಳನ್ನು ಸೇವಿಸುವನು.

**ದಾನಂ ಸ್ವಧರ್ಮೋ ನಿಯಮೋ ಯಮಶ್ಚ**
**ಶ್ರುತಂ ಚ ಕರ್ಮಾಣಿ ಚ ಸದ್ವ್ರತಾನಿ ।**
**ಸರ್ವೇ ಮನೋನಿಗ್ರಹಲಕ್ಷಣಾನ್ತಾಃ**
**ಪರೋ ಹಿ ಯೋಗೋ ಮನಸಃ ಸಮಾಧಿಃ ॥ 46 ॥**

46. ದಾನ, ಸ್ವಧರ್ಮಾಚರಣೆ, ನಿಯಮ, ಯಮ, ವೇದಾಧ್ಯಯನ, ಕರ್ಮಗಳು, ಸದ್ವ್ರತಗಳು – ಇವೆಲ್ಲವೂ ಮನೋನಿಗ್ರಹವನ್ನು ಲಕ್ಷಣವಾಗಿ ಉಳ್ಳವು. ಮನಸ್ಸನ್ನು ನಿಗ್ರಹಿಸುವದೇ ಹೆಚ್ಚಿನ ಯೋಗವು.

**ಸಮಾಹಿತಂ ಯಸ್ಯ ಮನಃ ಪ್ರಶಾನ್ತಂ**
**ದಾನಾದಿಭಿಃ ಕಿಂ ವದ ತಸ್ಯ ಕೃತ್ಯಮ್ ।**
**ಅಸಂಯತಂ ಯಸ್ಯ ಮನೋ**
**ವಿನಶ್ಯದ್ದಾನಾದಿಭಿಶ್ಚೇದಪರಂ ಕಿಮೇಭಿಃ ॥ 47 ॥**

47. ಯಾರ ಮನಸ್ಸು ಸಮಾಹಿತವಾಗಿ ಶಾಂತವಾಗಿದೆಯೋ ಅವನಿಗೆ ದಾನಾದಿಗಳಿಂದ ಆಗಬೇಕಾದದ್ದೇನು? ಹೇಳು. ಯಾರ ಮನಸ್ಸು ನೆಲೆನಿಂತಿಲ್ಲವೊ ಅವನಿಗೆ ದಾನಾದಿಗಳಿಂದ ಬೇರೆ ಯಾವ ಪ್ರಯೋಜನವು ಆಗುತ್ತದೆ.

**ಮನೋವಶೇಽನ್ಯೇ ಹ್ಯಭವನ್ಸ್ಮ ದೇವಾ**
**ಮನಶ್ಚ ನಾನ್ಯಸ್ಯ ವಶಂ ಸಮೇತಿ ।**
**ಭೀಷ್ಮೋ ಹಿ ದೇವಃ ಸಹಸಃ ಸಹೀಯಾ–**
**ನ್ಯುಞ್ಜ್ಯಾದ್ವಶೇ ತಂ ಸ ಹಿ ದೇವದೇವಃ ॥ 48 ॥**

48. ಎಲ್ಲ ಇಂದ್ರಿಯಗಳೂ ಮನಸ್ಸಿನ ವಶದಲ್ಲಿ ಇರುವವು. ಮನಸ್ಸು

ಬೇರೆಯವುಗಳ ವಶಕ್ಕೆ ಒಳಪಡುವದಲ್ಲ. ಮನಸ್ಸು ಬಲಿಷ್ಠರಿಗಿಂತಲೂ ಭಯಂಕರವಾದದ್ದು. ಮನಸ್ಸನ್ನು ಯಾವನು ವಶಪಡಿಸಿಕೊಂಡಿರುತ್ತಾನೊ ಅವನು ದೇವತೆಗಳಿಗೂ ದೇವನಾಗುತ್ತಾನೆ.

**ತಂ ದುರ್ಜಯಂ ಶತ್ರುಮಸಹ್ಯವೇಗ–**
**ಮರುನ್ತುದಂ ತನ್ನ ವಿಜಿತ್ಯ ಕೇಚಿತ್ ।**
**ಕುರ್ವನ್ತ್ಯಸದ್ವಿಗ್ರಹಮತ್ರ ಮರ್ತ್ಯೈ–**
**ರ್ಮಿತ್ರಾಣ್ಯುದಾಸೀನರಿಪೂನ್ವಿಮೂಢಾಃ ॥ 49 ॥**

49. ಜಯಿಸುವದಕ್ಕೆ ಅಸಾಧ್ಯವಾದ, ತಡೆಲಸಾಧ್ಯವಾದ ಪ್ರವೃತ್ತಿಯುಳ್ಳ, ಮರ್ಮಭೇದಿಯಾದ ಮನಸ್ಸನ್ನು ಗೆಲ್ಲದೆ ಕೆಲವರು ಮರಣಶೀಲರು ಇಲ್ಲಿ ಪರಸ್ಪರ ನಿಷ್ಫಲವಾದ ವೈರವನ್ನು ಮಾಡುತ್ತಿರುವರು. ಆ ಮೂಢರು ಮಿತ್ರರನ್ನೂ ಉದಾಸೀನರನ್ನೂ ಶತ್ರುಗಳನ್ನಾಗಿ ಮಾಡುತ್ತಿರುತ್ತಾರೆ.

**ದೇಹಂ ಮನೋಮಾತ್ರಮಿಮಂ ಗೃಹೀತ್ವಾ**
**ಮಮಾಹಮಿತ್ಯನ್ಧಧಿಯೋ ಮನುಷ್ಯಾಃ ।**
**ಏಷೋಽಹಮನ್ಯೋಽಯಮಿತಿ ಭ್ರಮೇಣ**
**ದುರನ್ತಪಾರೇ ತಮಸಿ ಭ್ರಮನ್ತಿ ॥ 50 ॥**

50. ಮನಸ್ಸಿನಿಂದಲೇ ಕಲ್ಪಿತವಾದ ಈ ದೇಹವನ್ನು ವಿವೇಕವಿಲ್ಲದ ಮನುಷ್ಯನು ನಾನು, ನನ್ನದು ಎಂದೂ; ನಾನಿವನು, ಇವನು ಬೇರೆ ಎಂಬ ಭ್ರಾಂತಿಯಿಂದ ಅಂತವಿಲ್ಲದ ಸಂಸಾರದಲ್ಲಿ ಓಡಾಡುತ್ತಿರುವರು.

**ಜನಸ್ತು ಹೇತುಃ ಸುಖದುಃಖಯೋಶ್ಚೇ–**
**ತ್ಕಿಮಾತ್ಮನಶ್ಚಾತ್ರ ಹಿ ಭೌಮಯೋಸ್ತತ್ ।**
**ಜಿಹ್ವಾಂ ಕ್ವಚಿತ್ಸನ್ದಶತಿ ಸ್ವದದ್ಭಿ–**
**ಸ್ತದ್ವೇದನಾಯಾಂ ಕತಮಾಯ ಕುಪ್ಯೇತ್ ॥ 51 ॥**

51. ಸುಖದುಃಖಗಳಿಗೆ ಮನುಷ್ಯನೇ ಕಾರಣನೆಂದಾದರೆ ಅದರಲ್ಲಿ ಆತ್ಮನಿಗೆ ಸಂಬಂಧವೇನಿಲ್ಲ. ಸುಖದುಃಖಭೋಗಗಳು ಮಣ್ಣಿನಿಂದಾದ ಶರೀರಕ್ಕೇ ಆಗಿದೆ. ತನ್ನ ನಾಲಿಗೆಯನ್ನು ತನ್ನ ಹಲ್ಲಿಗಳಿಂದ ಕಚ್ಚಿಕೊಂಡವನು ಯಾರಮೇಲೆ ಸಿಟ್ಟುಗೊಳ್ಳುತ್ತಾನೆ.

**ದುಃಖಸ್ಯ ಹೇತುರ್ಯದಿ ದೇವತಾಸ್ತು**
**ಕಿಮಾತ್ಮನಸ್ತತ್ರ ವಿಕಾರಯೋಸ್ತತ್ ।**
**ಯದಙ್ಗಮಙ್ಗೇನ ನಿಹನ್ಯತೇ ಕ್ವಚಿತ್**
**ಕ್ರುಧ್ಯೇತ ಕಸ್ಮೈ ಪುರುಷಃ ಸ್ವದೇಹೇ ॥ 52 ॥**

52. ಇಂದ್ರಿಯಗಳು ದುಃಖಕ್ಕೆ ಕಾರಣವೆಂದಾದರೆ ಅದರಲ್ಲಿ ಆತ್ಮನ ಸಂಬಂಧವೇನಿದೆ? ಒಮ್ಮೊಮ್ಮೆ ಒಂದು ಇಂದ್ರಿಯದಿಂದ ಇನ್ನೊಂದು ಇಂದ್ರಿಯವು ಹೊಡೆಯಲ್ಪಡುತ್ತದೆ, ಆಗ ಶರೀರಿಯು ಯಾರಮೇಲೆ ಕೋಪಗೊಳ್ಳಬೇಕು?

**ಆತ್ಮಾ ಯದಿ ಸ್ಯಾತ್ಸುಖದುಃಖಹೇತುಃ**
**ಕಿಮನ್ಯತಸ್ತತ್ರ ನಿಜಸ್ವಭಾವಃ ।**
**ನ ಹ್ಯಾತ್ಮನೋಽನ್ಯದ್ಯದಿ ತನ್ಮೃಷಾ ಸ್ಯಾತ್**
**ಕ್ರುಧ್ಯೇತ ಕಸ್ಮಾನ್ನ ಸುಖಂ ನ ದುಃಖಮ್ ॥ 53 ॥**

53. ಆತ್ಮನು ಸುಖದುಃಖಗಳಿಗೆ ಕಾರಣನಾಗಿದ್ದಲ್ಲಿ ಆಗಲೂ ಮತ್ತೊಬ್ಬರಿಂದೇನು? ಅದು ಆತ್ಮನ ಸ್ವಭಾವವು. ಅಲ್ಲಿ ಆತ್ಮನಿಗಿಂತ ಬೇರೆಯಾದುದು ಇಲ್ಲವಷ್ಟೆ! ಇದ್ದರೆ ಸುಳ್ಳಾಗುತ್ತದೆ, ಸುಖದುಃಖಗಳೆರಡೂ ಇಲ್ಲದಿರುವಾಗ ಯಾವದರಮೇಲೆ ಕೋಪಿಸಿಕೊಳ್ಳಬೇಕು?

**ಗ್ರಹಾ ನಿಮಿತ್ತಂ ಸುಖದುಃಖಯೋಶ್ಚೇ**
**ತ್ಕಿಮಾತ್ಮನೋಽಜಸ್ಯ ಜನಸ್ಯ ತೇ ವೈ ।**
**ಗ್ರಹೈರ್ಗ್ರಹಸ್ಯೈವ ವದನ್ತಿ ಪೀಡಾಂ**
**ಕ್ರುಧ್ಯೇತ ಕಸ್ಮೈ ಪುರುಷಸ್ತತೋಽನ್ಯಃ ॥ 54 ॥**

54. ಸುಖದುಃಖಗಳಿಗೆ ಗ್ರಹಗಳು ಕಾರಣವೆಂದಾದರೆ ಜನ್ಮವಿಲ್ಲದ ಆತ್ಮನಿಗೇನು? ಅವು ಹುಟ್ಟಿದ್ದವನಿಗೆ ಪೀಡೇಯನ್ನು ಉಂಟುಮಾಡುವವು. ಆತ್ಮನಿಗೆ ಅವುಗಳಿಂದ ತೊಂದರೆಯಿಲ್ಲದಾಗ ಯಾರಮೇಲೆ ಕೋಪಗೊಳ್ಳಬೇಕು?

**ಕರ್ಮಾಸ್ತು ಹೇತುಃ ಸುಖದುಃಖಯೋಶ್ಚೇತ್**
**ಕಿಮಾತ್ಮನಸ್ತದ್ಧಿ ಜಡಾಜಡತ್ವೇ ।**
**ದೇಹಸ್ತ್ವಚಿತ್ಪುರುಷೋಽಯಂ ಸುಪರ್ಣಃ**
**ಕ್ರುಧ್ಯೇತ ಕಸ್ಮೈ ನ ಹಿ ಕರ್ಮ ಮೂಲಮ್ ॥ 55 ॥**

55. ಸುಖದುಃಖಗಳಿಗೆ ಕರ್ಮಗಳು ಕಾರಣವೆಂದಾದರೆ ಆತ್ಮನಿಗೆ ಅದರಿಂದೇನು? ಆತ್ಮನು ಸಾಕ್ಷಿಸ್ವರೂಪನು, ಜಡವಾದ ದೇಹವು ಏನೂ ಮಾಡುವದಲ್ಲ, ಆದ್ದರಿಂದ ಕರ್ಮಗಳ ಸೋಂಕು ಇಲ್ಲ. ಕರ್ಮಸಂಬಂಧವೇ ಇಲ್ಲವೆಂದಾದರೆ ಯಾರಮೇಲೆ ಕೋಪಗೊಳ್ಳಬೇಕು?

**ಕಾಲಸ್ತು ಹೇತುಃ ಸುಖದುಃಖಯೋಶ್ಚೇತ್**
**ಕಿಮಾತ್ಮನಸ್ತತ್ರ ತದಾತ್ಮಕೋಽಸೌ ।**
**ನಾಗ್ನೇರ್ಹಿ ತಾಪೋ ನ ಹಿಮಸ್ಯ**
**ತತ್ಸ್ಯಾತ್ಕ್ರುಧ್ಯೇತ ಕಸ್ಮೈ ನ ಪರಸ್ಯ ದ್ವನ್ದ್ವಮ್ ॥ 56 ॥**

**56**. ಸುಖದುಃಖಗಳಿಗೆ ಕಾಲವು ಕಾರಣವೆಂದಾದರೆ ಆತ್ಮನಿಗೆ ಅದರಿಂದೇನು? ಆತ್ಮನೇ ಕಾಲಸ್ವರೂಪನು. ಅಗ್ನಿಗೆ ಬಿಸಿಯಾಗುವದಿಲ್ಲ, ಹಿಮಕ್ಕೆ ಚಳಿಯಾಗುವದಿಲ್ಲ. ಹೀಗೆ ಸುಖದುಃಖಸಂಬಂಧ ಇಲ್ಲವೆಂದಾದರೆ ಯಾರಮೇಲೆ ಕೋಪಗೊಳ್ಳಬೇಕು?

**ನ ಕೇನಚಿತ್ಕ್ವಾಪಿ ಕಥಞ್ಚನಾಸ್ಯ**
**ದ್ವನ್ದ್ವೋಪರಾಗಃ ಪರತಃ ಪರಸ್ಯ ।**
**ಯಥಾಹಮಃ ಸಂಸೃತಿರೂಪಿಣಃ ಸ್ಯಾ-**
**ದೇವಂ ಪ್ರಬುದ್ಧೋ ನ ಬಿಭೇತಿ ಭೂತೈಃ ॥ 57 ॥**

57. ಆತ್ಮನಿಗೆ ಪ್ರಕೃತಿಯಿಂದಲೂ ಯಾರಿಂದಲೂ ಎಲ್ಲೂ ಹೇಗೂ ದ್ವಂದ್ವಗಳ ಸಂಬಂಧವಾಗುವದಿಲ್ಲ. ಅಹಂಕಾರವೇ ಸಂಸಾರಕ್ಕೆ ಕಾರಣವಾಗಿದೆ. ಆದ್ದರಿಂದ ಪ್ರಬುದ್ಧನಾದ ಸಾಧಕನು ಭೂತಗಳಿಂದ ಹೆದರುವದಿಲ್ಲ.

**ಏತಾಂ ಸ ಆಸ್ಥಾಯ ಪರಾತ್ಮನಿಷ್ಠಾಮ-**
**ಧ್ಯಾಸಿತಾಂ ಪೂರ್ವತಮೈರ್ಮಹರ್ಷಿಭಿಃ ।**
**ಅಹಂ ತರಿಷ್ಯಾಮಿ ದುರನ್ತಪಾರಂ**
**ತಮೋ ಮುಕುನ್ದಾಙ್ಘ್ರಿನಿಷೇವಯೈವ ॥ 58 ॥**

58. ಆ ನಾನು ಪೂರ್ವದ ಮಹರ್ಷಿಗಳಿಂದ ಆಚರಿಸಲ್ಪಟ್ಟ ಈ ಪರಮಾತ್ಮನಿಷ್ಠೆಯನ್ನು ಪಡೆದು, ಮುಕುಂದನ ಪಾದವನ್ನು ಸೇವಿಸುವದರಿಂದ ಪಾರವಿಲ್ಲದ ಸಂಸಾರಸಾಗರವನ್ನು ದಾಟುವೆನು.

*****

# ಪರಮಾರ್ಥತತ್ತ್ವನಿರೂಪಣೆ

## (ಹನ್ನೊಂದನೆಯ ಸ್ಕಂಧ – ಇಪ್ಪತ್ತೆಂಟನೆಯ ಅಧ್ಯಾಯ)

**ಶ್ರೀಭಗವಾನುವಾಚ –**

**ಯಾವದ್ದೇಹೇನ್ದ್ರಿಯಪ್ರಾಣೈರಾತ್ಮನಃ ಸನ್ನಿಕರ್ಷಣಮ್ ।**
**ಸಂಸಾರಃ ಫಲವಾಂಸ್ತಾವದಪಾರ್ಥೋಽಪ್ಯವಿವೇಕಿನಃ ॥ 12 ॥**

12. ದೇಹೇಂದ್ರಿಯಪ್ರಾಣಗಳಿಂದ ಆತ್ಮನಿಗೆ ಎಲ್ಲಿಯವರೆಗೆ ಸಂಬಂಧ ವಿರುತ್ತದೆಯೊ ಅಜ್ಞಾನಿಗೆ ಅರ್ಥವಿಲ್ಲದಿದ್ದರೂ ಸಂಸಾರವು ಫಲವನ್ನು ಕೊಡುತ್ತದೆ.

**ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।**
**ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥ 13 ॥**

13. ವಿಷ್ಯಗಳನ್ನು ಧ್ಯಾನಿಸುವ ಇವನಿಗೆ ಕನಸಿನಲ್ಲಿ ದುಃಖವು ಬಂದೊದಗುವಂತೆ ಬಾಹ್ಯಾರ್ಥವು ಇಲ್ಲದಿದ್ದರೂ ಸಂಸಾರವು ಹೋಗುವದಿಲ್ಲ.

**ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।**
**ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥ 14 ॥**

14. ಸ್ವಪ್ನವನ್ನು ನೋಡುತ್ತಿರುವಾಗ ಎಚ್ಚರುವಮೊದಲು ಅನೇಕ ಅನರ್ಥಗಳು ಉಂಟಾಗುತ್ತವೆ. ಅದೇ ಎಚ್ಚರಗೊಂಡವನಿಗೆ ನಿದ್ದೆಯ ಅನರ್ಥಗಳು ಉಂಟಾಗುವದಿಲ್ಲ.

**ಶೋಕಹರ್ಷಭಯಕ್ರೋಧಲೋಭಮೋಹಸ್ಪೃಹಾದಯಃ ।**
**ಅಹಙ್ಕಾರಸ್ಯ ದೃಶ್ಯನ್ತೇ ಜನ್ಮಮೃತ್ಯುಶ್ಚ ನಾತ್ಮನಃ ॥ 15 ॥**

15. ದುಃಖ, ಸಂತೋಷ, ಭಯ, ಕೋಪ, ಲೋಭ, ಮೋಹ, ಕಾಮ ಮೊದಲಾದವು, ಹುಟ್ಟುಹೊಂದುಗಳು ಇವು ಅಹಂಕಾರಕ್ಕೆ ಕಾಣುತ್ತವೆ. ಆತ್ಮನಿಗೆ ಇಲ್ಲ.

**ದೇಹೇನ್ದ್ರಿಯಪ್ರಾಣಮನೋಽಭಿಮಾನೋ**
**ಜೀವೋಽನ್ತರಾತ್ಮಾ ಗುಣಕರ್ಮಮೂರ್ತಿಃ ।**
**ಸೂತ್ರಂ ಮಹಾನಿತ್ಯುರುಧೇವ ಗೀತಃ**
**ಸಂಸಾರ ಆಧಾವತಿ ಕಾಲತನ್ತ್ರಃ ॥ 16 ॥**

16. ದೇಹ, ಇನ್ದ್ರಿಯ, ಪ್ರಾಣ, ಮನಸ್ಸಿನಲ್ಲಿ ಅಭಿಮಾನವುಳ್ಳ; ದೇಹಾದಿಗಳಲ್ಲಿ ಅಡಗಿರುವ ಗುಣಕರ್ಮಮಯವಾದ ಶರೀರವುಳ್ಳ ಜೀವನು ಸೂತ್ರಾತ್ಮನೆಂದೂ, ಮಹಾನೆಂದೂ ವಿಧವಿಧವಾಗಿ ಹೇಳಲ್ಪಟ್ಟು ಕಾಲವಶನಾಗಿ ಸಂಸಾರಲ್ಲಿ ತೊಳಲುತ್ತಾನೆ.

**ಅಮೂಲಮೇತದ್ಬಹುರೂಪರೂಪಿತಂ**
**ಮನೋವಚಃಪ್ರಾಣಶರೀರಕರ್ಮ ।**
**ಜ್ಞಾನಾಸಿನೋಪಾಸನಯಾ ಶಿತೇನ**
**ಚ್ಛಿತ್ತ್ವಾ ಮುನಿರ್ಗಾಂ ವಿಚರತ್ಯತೃಷ್ಣಃ ॥ 17 ॥**

17. ಮೂಲವಿಲ್ಲದಿದ್ದರೂ ಅನೇಕರೂಪದಿಂದ ಹೊರತೋರುವ ಮನಸ್ಸು, ಮಾತು, ಪ್ರಾಣ, ಶರೀರ, ಕರ್ಮ ಇವುಗಳ ರೂಪವಾದ ಈ ಅಹಂಕಾರವನ್ನು ಗುರೂಪಾಸಯಿಂದ ಪಡೆದ ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿಕೊಂಡು ಮುನಿಯು ಬಯಕೆಗಳಿಲ್ಲದೆ ಭೂಮಿಯಲ್ಲಿ ಸಂಚರಿಸುತ್ತಾನೆ.

**ಜ್ಞಾನಂ ವಿವೇಕೋ ನಿಗಮಸ್ತಪಶ್ಚ**
**ಪ್ರತ್ಯಕ್ಷಮೈತಿಹ್ಯಮಥಾನುಮಾನಮ್ ।**
**ಆದ್ಯನ್ತಯೋರಸ್ಯ ಯದೇವ ಕೇವಲಂ**
**ಕಾಲಶ್ಚ ಹೇತುಶ್ಚ ತದೇವ ಮಧ್ಯೇ ॥ 18 ॥**

18. ಆತ್ಮಾನಾತ್ಮವಿವೇಕವೇ ಜ್ಞಾನವು, ವೇದ, ತಪಸ್ಸು, ಅನುಭವ, ಗುರೂಪದೇಶ ಹಾಗೂ (ಅನ್ವಯವ್ಯತಿರೇಕರೂಪದ) ತರ್ಕ – ಇವು ಸಾಧನಗಳು. ಮೊದಲು, ಮಧ್ಯೆ, ಕೊನೆಯಲ್ಲಿ ಯಾವುದೊಂದೇ ಕಾರಣವಾಗಿರುವದೊ ಅದೇ ಜ್ಞಾನದ ಫಲವು.

**ಯಥಾ ಹಿರಣ್ಯಂ ಸ್ವಕೃತಂ ಪುರಸ್ತಾ–**
**ತ್ಪಶ್ಚಾಚ್ಚ ಸರ್ವಸ್ಯ ಹಿರಣ್ಮಯಸ್ಯ ।**
**ತದೇವ ಮಧ್ಯೇ ವ್ಯವಹಾರ್ಯಮಾಣಂ**
**ನಾನಾಪದೇಶೈರಹಮಸ್ಯ ತದ್ವತ್ ॥ 19 ॥**

19. ಆಭರಣಗಳ ರೂಪದಲ್ಲಿ ಮಾಡಿರುವ ಚಿನ್ನವು ಮೊದಲಲ್ಲೂ, ಮಧ್ಯದಲ್ಲೂ, ಕೊನೆಯಲ್ಲೂ ಹಲವು ಹೆಸರುಗಳಿಂದ ವ್ಯವಹರಿಸಲ್ಪಡುತ್ತಿದ್ದರೂ

ಅದರ ಚಿನ್ನವೆಂಬ ಸ್ವರೂಪವು ಬದಲಾಗುವದಿಲ್ಲವೋ ಹಾಗೆಯೇ ಈ ಜಗತ್ತಿಗೆ ಪರಮಾತ್ಮನೇ ಸತ್ಯನಾಗಿದ್ದಾನೆ.

**ವಿಜ್ಞಾನಮೇತತ್ತ್ರಿಯವಸ್ಥಮಙ್ಗ**
**ಗುಣತ್ರಯಂ ಕಾರಣಕಾರ್ಯಕರ್ತೃ ।**
**ಸಮನ್ವಯೇನ ವ್ಯತಿರೇಕತಶ್ಚ**
**ಯೇನೈವ ತುರ್ಯೇಣ ತದೇವ ಸತ್ಯಮ್ ॥ 20 ॥**

20. ಉದ್ಧವನೆ, ಎಚ್ಚರ, ಕನಸು, ನಿದ್ರೆಗಳೆಂಬ ಮೂರವಸ್ಥೆಯುಳ್ಳ ಬುದ್ಧಿಯು ಅದಕ್ಕೆ ಕಾರಣವಾದ ಗುಣಗಳು, ಕಾರಣಕಾರ್ಯಕರ್ತೃ (ಅಧ್ಯಾತ್ಮ, ಅಧಿದೈವ, ಅಧಿಭೂತ)ಗಳು ಈ ಮೂರುವಿಧವಾದ ಜಗತ್ತು ಯಾವ ತುರೀಯವಸ್ತುವಿನ ಸಮನ್ವಯದಿಂದ ಇರುವದೊ, ಅವನಲ್ಲಿಯೇ ಸೇರಿರುವದೊ ಅದೇ ಸತ್ಯವು.

**ನ ಯತ್ಪುರಸ್ತಾದುತ ಯನ್ನ ಪಶ್ಚಾ-**
**ನ್ಮಧ್ಯೇ ಚ ತನ್ನ ವ್ಯಪದೇಶಮಾತ್ರಮ್ ।**
**ಭೂತಂ ಪ್ರಸಿದ್ಧಂ ಚ ಪರೇಣ ಯದ್ಯ-**
**ತ್ತದೇವ ತತ್ಸ್ಯಾದಿತಿ ಮೇ ಮನೀಷಾ ॥ 21 ॥**

21. ಈ ಜಗತ್ತು ಮೊದಲೂ ಮಧ್ಯದಲ್ಲಿಯೂ ಕೊನೆಯಲ್ಲಿಯೂ ಇಲ್ಲದ್ದು; ಇದು ಕೇವಲ ಮಾತಿನಿಂದಾದದ್ದು. ಭೂತಕಾಲದಲ್ಲಿ ಅವನಿಂದಲೇ ಹುಟ್ಟಿದ್ದಾಗಿ ಅವನಿಂದಲೇ ವ್ಯವಹರಿಸಲ್ಪಡುತ್ತಿದೆ. ಪರಮಾರ್ಥವಾಗಿಯೇ ಇರುತ್ತದೆ ಎಂಬುದು ನನ್ನ ನಿಶ್ಚಯವು.

**ಅವಿದ್ಯಮಾನೋಽಪ್ಯವಭಾಸತೇ ಯೋ**
**ವೈಕಾರಿಕೋ ರಾಜಸಸರ್ಗ ಏಷಃ ।**
**ಬ್ರಹ್ಮ ಸ್ವಯಂಜ್ಯೋತಿರತೋ ವಿಭಾತಿ**
**ಬ್ರಹ್ಮೇನ್ದ್ರಿಯಾರ್ಥಾತ್ಮವಿಕಾರಚಿತ್ರಮ್ ॥ 22 ॥**

22. ವಿಕಾರಸಮೂಹವಾದ ಈ ರಾಜಸ ಸರ್ಗವು ಇಲ್ಲದಿದ್ದರೂ ತೋರುತ್ತದೆ. ಬ್ರಹ್ಮವು ಸ್ವಯಂಜ್ಯೋತಿಯು. ಬ್ರಹ್ಮವು ಇಂದ್ರಿಯ, ವಿಷಯ, ಮನಸ್ಸು – ಇವುಗಳ ವಿಕಾರದಿಂದ ಆಶ್ಚರ್ಯಕರವಾಗಿ ಹೊಳೆಯುತ್ತದೆ.

**ಏವಂ ಸ್ಫುಟಂ ಬ್ರಹ್ಮವಿವೇಕಹೇತುಭಿಃ**
**ಪರಾಪವಾದೇನ ವಿಶಾರದೇನ ।**
**ಛಿತ್ತ್ವಾತ್ಮಸನ್ದೇಹಮುಪಾರಮೇತ**
**ಸ್ವಾನನ್ದತುಷ್ಟೋಽಖಿಲಕಾಮುಕೇಭ್ಯಃ ॥ 23 ॥**

23. ಹೀಗೆ ಸ್ಫುಟವಾಗಿ ಬ್ರಹ್ಮವನ್ನು ವಿಂಗಡಿಸುವ ಕಾರಣಗಳಿಂದಲೂ ನಿಪುಣವಾದ ಅನಾತ್ಮನಿಷೇಧದಿಂದಲೂ ತನ್ನ ಸಂದೇಹವನ್ನು ಕಳೆದು ಆತ್ಮಾನಂದದಿಂದ ಸಂತುಷ್ಟನಾಗಿ ಸಕಲ ವಿಷ್ಯಗಳಿಂದಲೂ ಹಿಂದಿರುಗಬೇಕು.

**ನಾತ್ಮಾ ವಪುಃ ಪಾರ್ಥಿವಮಿನ್ದ್ರಿಯಾಣಿ**
**ದೇವಾ ಹ್ಯಸುರ್ವಾಯುರ್ಜಲಂ ಹುತಾಶಃ ।**
**ಮನೋಽನ್ನಮಾತ್ರಂ ಧಿಷಣಾ ಚ ಸತ್ತ್ವ**
**ಮಹಙ್ಕೃತಿಃ ಖಂ ಕ್ಷಿತಿರರ್ಥಸಾಮ್ಯಮ್ ॥ 24 ॥**

24. ಶರೀರವು ಪೃಥ್ವಿಮಯವು, ಇಂದ್ರಿಯಗಳು ದೇವತೆಗಳದ್ದು, ಪ್ರಾಣ, ವಾಯು, ಜಲ, ಅಗ್ನಿ, ಮನಸ್ಸು ಇವು ಅನ್ನದಿಂದ ಬೆಳೆದುಕೊಂಡವು; ಬುದ್ಧಿ, ಚಿತ್ತ, ಅಹಂಕಾರ, ಆಕಾಶ, ಪೃಥಿವಿ, ಶಬ್ದಾದಿವಿಷಯಗಳು ಮತ್ತು ಗುಣಗಳ ಸಾಮ್ಯಾವಸ್ಥೆಯಾದ ಪ್ರಕೃತಿ ಇವು ಯಾವವೂ ಆತ್ಮನಲ್ಲ.

**ಸಮಾಹಿತೈಃ ಕಃ ಕರಣೈರ್ಗುಣಾತ್ಮಭಿರ್**
**ಗುಣೋ ಭವೇನ್ಮತ್ಸುವಿವಿಕ್ತಧಾಮ್ನಃ ।**
**ವಿಕ್ಷಿಪ್ಯಮಾಣೈರುತ ಕಿಂ ನು ದೂಷಣಂ**
**ಘನೈರುಪೇತೈರ್ವಿಗತೈ ರವೇಃ ಕಿಮ್ ॥ 25 ॥**

25. ನನ್ನ ಸ್ವರೂಪವನ್ನು ಚೆನ್ನಾಗಿ ವಿವೇಚಿಸಿ ತಿಳಿದವನಿಗೆ ಸತ್ವಾದಿ ಗುಣಮಯಗಳಾದ ಶಾಂತವಾದ ಇಂದ್ರಿಯಗಳಿಂದ ಯಾವ ಗುಣವು ಆಗುತ್ತದೆ? ಅಥವಾ ಮೋಡಗಳು ಬಂದುಹೋಗುವದರಿಂದ ಸೂರ್ಯನಿಗೆ ಏನೂ ಆಗದಿರುವಂತೆ ಚಂಚಲಗಳಾದ ಅವುಗಳಿಂದ ಏನೂ ದೋಷವಾಗುವದಿಲ್ಲ.

**ಯಥಾ ನಭೋ ವಾಯ್ವನಲಾಮ್ಬುಭೂಗುಣೈರ್**
**ಗತಾಗತೈರ್ವರ್ತುಗುಣೈರ್ನ ಸಜ್ಜತೇ ।**

**ತಥಾಕ್ಷರಂ ಸತ್ತ್ವರಜಸ್ತಮೋಮಲೈರ್**
**ಅಹಂಮತೇಃ ಸಂಸ್ಕೃತಿಹೇತುಭಿಃ ಪರಮ್ ॥ 26 ॥**

26. ಹೇಗೆ ಆಕಾಶವು ಅನಿತ್ಯವಾದ ಗಾಳಿ, ಅಗ್ನಿ, ನೀರು, ಭೂಮಿಯ ಋತುಗುಣಗಳಿಂದ ಯುಕ್ತವಾಗುವದಿಲ್ಲವೊ ಹಾಗೆ ಅಹಂಕಾರಕ್ಕಿಂತ ಅತೀತವಾದ ಬ್ರಹ್ಮವು ಸಂಸಾರಕ್ಕೆ ಕಾರಣವಾದ ಸತ್ತ್ವ, ರಜಸ್ಸು, ತಮಸ್ಸೆಂಬ ಗುಣಗಳ ದೋಷದಿಂದ ಕೂಡಿದ್ದಾಗುವದಿಲ್ಲ.

**ತಥಾಪಿ ಸಙ್ಗಃ ಪರಿವರ್ಜನೀಯೋ**
**ಗುಣೇಷು ಮಾಯಾರಚಿತೇಷು ತಾವತ್ ।**
**ಮದ್ಭಕ್ತಿಯೋಗೇನ ದೃಢೇನ ಯಾವ–**
**ದ್ರಜೋ ನಿರಸ್ಯೇತ ಮನಃಕಷಾಯಃ ॥ 27 ॥**

27. ಹಾಗಿದ್ದರೂ ಸ್ಥಿರವಾದ ನನ್ನ ಭಕ್ತಿಯೋಗದಿಂದ ಎಲ್ಲಿಯವರೆಗೆ ಕಷಾಯದಂತೆ ಮನಸ್ಸಿಗಂಟಿರುವ ಕಾಮಾದಿಗಳು ಕಳೆಯಲ್ಪಡುವದಿಲ್ಲವೊ ಅಲ್ಲಿಯವರೆಗೆ ತ್ರಿಗುಣಗಳಿಂದುಂಟಾಗುವ ವಿಷಯಗಳ ಸಂಬಂಧವನ್ನು ಬಿಡಬೇಕು.

**ಯಥಾಮಯೋಽಸಾಧು ಚಿಕಿತ್ಸಿತೋ ನೃಣಾಂ**
**ಪುನಃ ಪುನಃ ಸನ್ತುದತಿ ಪ್ರರೋಹನ್ ।**
**ಏವಂ ಮನೋಽಪಕ್ವಕಷಾಯಕರ್ಮ**
**ಕುಯೋಗಿನಂ ವಿಧ್ಯತಿ ಸರ್ವಸಙ್ಗಮ್ ॥ 28 ॥**

28. ಚೆನ್ನಾಗಿ ಚಿಕಿತ್ಸೆಯಾಗದ ರೋಗವು ಹೇಗೆ ಮತ್ತೆ ಮತ್ತೆ ಉಲ್ಬಣಿಸಿ ಮನುಷ್ಯನಿಗೆ ತೊಂದರೆಕೊಡುತ್ತದೆಯೋ ಹಾಗೆ ಕಷಾಯಗಳು ಸರಿಯಾಗಿ ಶುದ್ಧವಾಗದ ಮನಸ್ಸು ಈ ಅಜ್ಞಾನಿಯನ್ನು ಎಲ್ಲದರಲ್ಲಿ ಸಂಗವುಳ್ಳವನನ್ನಾಗಿಮಾಡಿ ಬೀಳಿಸುತ್ತದೆ.

**ಕುಯೋಗಿನೋ ಯೇ ವಿಹಿತಾನ್ತರಾ–**
**ಯೈರ್ಮನುಷ್ಯಭೂತೈಸ್ತ್ರಿದಶೋಪಸೃಷ್ಟೈಃ ।**
**ತೇ ಪ್ರಾಕ್ತನಾಭ್ಯಾಸಬಲೇನ ಭೂಯೋ**
**ಯುಞ್ಜನ್ತಿ ಯೋಗಂ ನ ತು ಕರ್ಮತನ್ತ್ರಮ್ ॥ 29 ॥**

29. ದೇವತೆಗಳಿಂದ ಪ್ರೇರಿತರಾದ ಮನುಷ್ಯರಿಂದುಂಟಾದ ವಿಘ್ನಗಳುಳ್ಳ

ಯೋಗಭ್ರಷ್ಟರು ಜನ್ಮಾಂತರದಲ್ಲಿ ಹಿಂದಿನ ಅಭ್ಯಾಸಬಲದಿಂದ ಪ್ರಾರಬ್ಧಕರ್ಮಗಳ ಪ್ರಭಾವವಿದ್ದರೂ ಜ್ಞಾನಯೋಗವನ್ನು ಪಡೆದುಕೊಳ್ಳುತ್ತಾರೆ.

**ಕರೋತಿ ಕರ್ಮ ಕ್ರಿಯತೇ ಚ ಜನ್ತುಃ**
**ಕೇನಾಪ್ಯಸೌ ಚೋದಿತ ಆನಿಪತಾತ್ ।**
**ನ ತತ್ರ ವಿದ್ವಾನ್ಪ್ರಕೃತೌ ಸ್ಥಿತೋಽಪಿ**
**ನಿವೃತ್ತತೃಷ್ಣಃ ಸ್ವಸುಖಾನುಭೂತ್ಯಾ ॥ 30 ॥**

30. ಸಂಸ್ಕಾರವಶದಿಂದ ಇಷ್ಟಾನಿಷ್ಟಬುದ್ಧಿಯಿಂದ ಕರ್ಮವನ್ನು ಮಾಡುತ್ತಲೇ ಇರುತ್ತಾನೆ. ಅದರಿಂದ ಹರ್ಷಶೋಕಾದಿಗಳನ್ನು ಅನುಭವಿಸುತ್ತಾನೆ. ಆದರೆ ಜ್ಞಾನಿಯು ಕರ್ಮದಿಂದ ಕೂಡಿದ ದೇಹದಲ್ಲಿದ್ದರೂ ಬಯಕೆಗಳು ಇಲ್ಲದವನಾಗಿ ಸ್ವಾನಂದದಲ್ಲಿ ಇರುತ್ತಾನೆ.

**ತಿಷ್ಠನ್ತಮಾಸೀನಮುತ ವ್ರಜನ್ತಂ**
**ಶಯಾನಮುಕ್ಷನ್ತಮದನ್ತಮನ್ನಮ್ ।**
**ಸ್ವಭಾವಮನ್ಯತ್ಕಿಮಪೀಹಮಾನ-**
**ಮಾತ್ಮಾನಮಾತ್ಮಸ್ಥಮತಿರ್ನ ವೇದ ॥ 31 ॥**

31. ಸ್ವಸ್ವರೂಪದಲ್ಲಿ ನೆಲೆನಿಂತವನಿಗೆ ತನ್ನ ದೇಹವು ಕೂತಿದೆಯೊ, ನಿಂತಿದೆಯೊ, ಓಡಾಡುತ್ತಿದೆಯೊ, ಮಲಗಿದೆಯೊ, ವಿಸರ್ಜನೆಯನ್ನು ಮಾಡುತ್ತಿದೆಯೊ, ಅನ್ನವನ್ನು ತಿನ್ನುತ್ತಿದೆಯೊ ಅಥವಾ ಯಾವದಾದರೂ ಸ್ವಾಭಾವಿಕ ಕರ್ಮವನ್ನು ಮಾಡುತ್ತಿದೆಯೊ ಎಂಬ ಅರಿವು ಇರುವದಿಲ್ಲ.

**ಯದಿ ಸ್ಮ ಪಶ್ಯತ್ಯಸದಿನ್ದ್ರಿಯಾರ್ಥಂ**
**ನಾನಾನುಮಾನೇನ ವಿರುದ್ಧಮನ್ಯತ್ ।**
**ನ ಮನ್ಯತೇ ವಸ್ತುತಯಾ ಮನೀಷೀ**
**ಸ್ವಾಪ್ನಂ ಯಥೋತ್ಥಾಯ ತಿರೋದಧಾನಮ್ ॥ 32 ॥**

32. ಜ್ಞಾನಿಯಾದವನ ದೃಷ್ಟಿಯಲ್ಲಿ ಇಂದ್ರಿಯಗಳ ವಿಷಯಗಳನ್ನು ನೋಡುವದಾದರೆ ಸ್ವಪ್ನದೃಶ್ಯದಂತೆ ಸುಳ್ಳು. ಏಕೆಂದರೆ ನಿದ್ದೆಯಿಂದೆದ್ದವನಿಗೆ ಸ್ವಪ್ನವನ್ನು ಹೇಗೆ ನಿಜವೆಂದು ಕಾಣುವದಿಲ್ಲವೊ ಹಾಗೆಯೇ ಇಂದ್ರಿಯದೃಶ್ಯಗಳನ್ನು ಮಿಥ್ಯವಾಗಿಯೇ ನೋಡುತ್ತಾನೆ.

**ಪೂರ್ವಂ ಗೃಹೀತಂ ಗುಣಕರ್ಮ**
**ಚಿತ್ರಮಜ್ಞಾನಮಾತ್ಮನ್ಯವಿವಿಕ್ತಮಙ್ಗ ।**
**ನಿವರ್ತತೇ ತತ್ಪುನರೀಕ್ಷಯೈವ ನ**
**ಗೃಹ್ಯತೇ ನಾಪಿ ವಿಸೃಜ್ಯ ಆತ್ಮಾ ॥ 33 ॥**

33. ಉದ್ಧವನೆ, ಮೊದಲು ಅನೇಕ ವಿಧವಾದ ಗುಣ, ಕರ್ಮಗಳಿಂದ ಕೂಡಿದ್ದಾಗಿ ಅಜ್ಞಾನದಿಂದ ದೇಹೇಂದ್ರಿಯಾದಿಗಳು ಆತ್ಮನಿಗಿಂತ ಬೇರೆಯಲ್ಲದ್ದಾಗಿ ಕಂಡುಬರುತ್ತಿತ್ತು. ಆದರೆ ಜ್ಞಾನದಿಂದ ಆ ಭ್ರಮೆಯು ಹೋಗಿ ಆತ್ಮಸ್ವರೂಪವೇ ಆಗುತ್ತಾನೆ. ಆಗ ಬಿಡುವದು ಏನೂ ಇರುವದಿಲ್ಲ.

**ಯಥಾ ಹಿ ಭಾನೋರುದಯೋ ನೃಚಕ್ಷುಷಾಂ**
**ತಮೋ ನಿಹನ್ಯಾನ್ನ ತು ಸದ್ವಿಧತ್ತೇ ।**
**ಏವಂ ಸಮೀಕ್ಷಾ ನಿಪುಣಾ ಸತೀ ಮೇ**
**ಹನ್ಯಾತ್ತಮಿಸ್ರಂ ಪುರುಷಸ್ಯ ಬುದ್ಧೇಃ ॥ 34 ॥**

34. ಹೇಗೆ ಸೂರ್ಯನು ಉದಿಸಿದ್ದರಿಂದ ಕತ್ತಲೆಯು ಹೊರಟು ಹೋಗುತ್ತದೊ, ಅವನು ಹೊಸತನ್ನೇನೂ ಉಂಟುಮಾಡುವದಿಲ್ಲವೊ, ಹಾಗೆಯೇ ಪ್ರಮಾತ್ಮನ ಪೂರ್ಣವಾದ ಜ್ಞಾನವು ಮನುಷ್ಯನ ಬುದ್ಧಿಯಲ್ಲಿರುವ ಅಜ್ಞಾನವನ್ನು ಕಳೆಯುತ್ತದೆ.

**ಏಷ ಸ್ವಯಂಜ್ಯೋತಿರಜೋಽಪ್ರಮೇಯೋ**
**ಮಹಾನುಭೂತಿಃ ಸಕಲಾನುಭೂತಿಃ ।**
**ಏಕೋಽದ್ವಿತೀಯೋ ವಚಸಾಂ ವಿರಾಮೇ**
**ಯೇನೇಷಿತಾ ವಾಗಸವಶ್ಚರನ್ತಿ ॥ 35 ॥**

35. ಈತನು ಸ್ವಯಂಜ್ಯೋತಿಯು, ಹುಟ್ಟಿಲ್ಲದವನು, ಪ್ರಮಾಣಕ್ಕೆ ಸಿಕ್ಕದವನು, ಅಪರಿಚ್ಛಿನ್ನವಾದ ಅನುಭೂತಿಸ್ವರೂಪನು, ಸಕಲಾನುಭೂತಿಸ್ವರೂಪನು, ಒಬ್ಬನು, ಎರಡಿಲ್ಲದವನು, ಮಾತಿನ ನಿವೃತ್ತಿರೂಪನು, ಇವನ ಪ್ರೇರಣೆಯಿಂದಲೇ ವಾಕ್ಪ್ರಾಣಗಳು ಪ್ರವರ್ತಿಸುತ್ತವೆ.

**ಏತಾವಾನಾತ್ಮಸಮ್ಮೋಹೋ ಯದ್ವಿಕಲ್ಪಸ್ತು ಕೇವಲೇ ।**
**ಆತ್ಮನ್ನೃತೇ ಸ್ವಮಾತ್ಮಾನಮವಲಮ್ಬೋ ನ ಯಸ್ಯ ಹಿ ॥ 36 ॥**

36. ಭೇದವೇ ಇಲ್ಲದ ಆತ್ಮನಲ್ಲಿ ಇಷ್ಟುವಿಕಲ್ಪಗಳೇನಿವೆಯೊ ಅವು ಮನಸ್ಸಿನ ಭ್ರಾಂತಿಯು. ಆತ್ಮನನ್ನುಳಿದು ಯಾವ ಭೇದಕ್ಕೂ ಆಶ್ರಯವಿಲ್ಲ.

**ಯನ್ನಾಮಾಕೃತಿಭಿರ್ಗ್ರಾಹ್ಯಂ ಪಞ್ಚವರ್ಣಮಬಾಧಿತಮ್ ।**
**ವ್ಯರ್ಥೇನಾಪ್ಯರ್ಥವಾದೋಽಯಂ ದ್ವಯಂ ಪಣ್ಡಿತಮಾನಿನಾಮ್ ॥ 37 ॥**

37. ತಮ್ಮನ್ನು ಪಂಡಿತರೆಂದು ತಿಳಿದಿರುವ ಅನೇಕರು ನಾಮರೂಪಗಳಿಂದ ಗ್ರಹಿಸಲ್ಪಡುವ, ಪಂಚಭೂತಾತ್ಮಕವಾದ ದ್ವೈತವು ಸತ್ಯವೆಂದು ತಿಳಿಯುತ್ತಾರೆ. ಆದರೆ ಹೀಗೆ ಹೇಳುವದು ಕೇವಲ ಶಬ್ದಾಡಂಬರವಾಗಿದೆ.

**ಯೋಗಿನೋಽಪಕ್ವಯೋಗಸ್ಯ ಯುಞ್ಜತಃ ಕಾಯ ಉತ್ಥಿತೈಃ ।**
**ಉಪಸರ್ಗೈರ್ವಿಹನ್ಯೇತ ತತ್ರಾಯಂ ವಿಹಿತೋ ವಿಧಿಃ ॥ 38 ॥**

38. ಯೋಗಸಿದ್ಧಿಯಾಗದೆ ಅಭ್ಯಾಸವನ್ನು ಮಾಡುತ್ತಿರುವ ಯೋಗಿಗೆ ರೋಗಾದಿ ಉಪದ್ರವಗಳು ಉಂಟಾಗಿ ಶರೀರವು ಪೀಡಿಸಲ್ಪಟ್ಟರೆ ಅಲ್ಲಿ ಈ ವಿಧಿಯನ್ನು ಹೇಳಿದೆ.

**ಯೋಗಧಾರಣಯಾ ಕಾಂಶ್ಚಿದಾಸನೈರ್ಧಾರಣಾನ್ವಿತೈಃ ।**
**ತಪೋಮನ್ತ್ರೌಷಧೈಃ ಕಾಂಶ್ಚಿದುಪಸರ್ಗಾನ್ವಿನಿರ್ದಹೇತ್ ॥ 39 ॥**

39. ಪ್ರಾಣಧಾರಣೆಯನ್ನು ಮಾಡಿ, ಆಸನಗಳ ಮೂಲಕ, ತಪಸ್ಸು, ಮಂತ್ರ ಔಷಧ, ಜಪ – ಇವುಗಳಿಂದ ರೋಗಾದಿ ಉಪದ್ರವಗಳನ್ನು ನಾಶಗೊಳಿಸಿ ಕೊಳ್ಳಬೇಕು.

**ಕಾಂಶ್ಚಿನ್ಮಮಾನುಧ್ಯಾನೇನ ನಾಮಸಙ್ಕೀರ್ತನಾದಿಭಿಃ ।**
**ಯೋಗೇಶ್ವರಾನುವೃತ್ತ್ಯಾ ವಾ ಹನ್ಯಾದಶುಭದಾನ್ಶನೈಃ ॥ 40 ॥**

40. ಕೆಲವನ್ನು ಭಗವಧ್ಯಾನ, ನಾಮಸಂಕೀರ್ತನೆ, ಯೋಗಿಗಳ ಸೇವೆಯಿಂದ – ನಿಧಾನವಾಗಿ ಅಶುಭಗಳನ್ನು ನಾಶಗೊಳಿಸಿಕೊಳ್ಳಬೇಕು.

**ಕೇಚಿದ್ದೇಹಮಿಮಂ ಧೀರಾಃ ಸುಕಲ್ಪಂ ವಯಸಿ ಸ್ಥಿರಮ್ ।**
**ವಿಧಾಯ ವಿವಿಧೋಪಾಯೈರಥ ಯುಞ್ಜನ್ತಿ ಸಿದ್ಧಯೇ ॥ 41 ॥**

44. ಕೆಲವರು ಧೀರರು ವಿವಿಧ ಉಪಾಯಗಳಿಂದ ಶರೀರವು

ಸುದೃಢವಾಗಿಯೂ ತರುಣವಾಗಿಯೂ ಇರುವಂತೆ ಸ್ಥಿರಗೊಳಿಸಿ ಅಣಿಮಾದಿ ಸಿದ್ಧಿಗಳಿಗಾಗಿ ಯೋಗವನ್ನು ಮಾಡುತ್ತಾರೆ.

**ನ ಹಿ ತತ್ಕುಶಲಾದೃತ್ಯಂ ತದಾಯಾಸೋ ಹ್ಯಪಾರ್ಥಕಃ ।**
**ಅನ್ತವತ್ತ್ವಾಚ್ಛರೀರಸ್ಯ ಫಲಸ್ಯೇವ ವನಸ್ಪತೇಃ ॥ 42 ॥**

42. ವೃಕ್ಷದಲ್ಲಿ ಬಿಟ್ಟ ಫಲಗಳಂತೆ ಈ ದೇಹವು ನಾಶವುಳ್ಳದ್ದು. ಆದ್ದರಿಂದ ವ್ಯರ್ಥವಾದ ಈ ಸಿದ್ಧ್ಯಾದಿಗಳು ಪ್ರಾಜ್ಞರಿಂದ ಆಚರಿಸಲ್ಪಡತಕ್ಕದ್ದಲ್ಲ.

**ಯೋಗಂ ನಿಷೇವತೋ ನಿತ್ಯಂ ಕಾಯಶ್ಚೇತ್ಕಲ್ಪತಾಮಿಯಾತ್ ।**
**ತಚ್ಛ್ರದ್ದಧ್ಯಾನ್ನ ಮತಿಮಾನ್ಯೋಗಮುತ್ಸೃಜ್ಯ ಮತ್ಪರಃ ॥ 43 ॥**

43. ಜ್ಞಾನಯೋಗವನ್ನು ಮಾಡುವವನಿಗೆ ಶರೀರಸಾಮರ್ಥ್ಯವನ್ನು ಹೊಂದುವದಾದರೆ ಬುದ್ಧಿವಂತನು ಯೋಗವನ್ನು ಬಿಟ್ಟು ನನ್ನಲ್ಲಿ ನಿಷ್ಠನಾಗಿ ಆ ಕಾಯಸಿದ್ಧಿಯನ್ನು ನಂಬಬಾರದು.

**ಯೋಗಚರ್ಯಾಮಿಮಾಂ ಯೋಗೀ ವಿಚರನ್ಮದಪಾಶ್ರಯಃ ।**
**ನಾನ್ತರಾಯೈರ್ವಿಹನ್ಯೇತ ನಿಃಸ್ಪೃಹಃ ಸ್ವಸುಖಾನುಭೂಃ ॥ 44 ॥**

44. ಯೋಗಿಯು ಈ ಯೋಗಪ್ರಕಾರವನ್ನು ನನ್ನನ್ನು ಆಶ್ರಯಿಸಿದವನಾಗಿ ಸಿದ್ಧಿಗಳಲ್ಲಿ ಆಸೆಯಿಡದೆ ಮಾಡುತ್ತಾ ಇದ್ದರೆ, ಆತ್ಮಸುಖವನ್ನು ಅನುಭವಿಸುತ್ತಿದ್ದರೆ ವಿಘ್ನಗಳಿಂದ ತೊಂದರೆಗೆ ಒಳಗಾಗುವದಿಲ್ಲ.

******

## ಭಾಗವತಧರ್ಮನಿರೂಪಣೆ

### (ಹನ್ನೊಂದನೆಯ ಸ್ಕಂಧ – ಇಪ್ಪತ್ತೊಂಬತ್ತನೆಯ ಅಧ್ಯಾಯ)

**ಶ್ರೀಭಗವಾನುವಾಚ–**

**ಹನ್ತ ತೇ ಕಥಯಿಷ್ಯಾಮಿ ಮಮ ಧರ್ಮಾನ್ಸುಮಙ್ಗಲಾನ್ ।**
**ಯಾನ್ಶ್ರದ್ಧಯಾಚರನ್ಮರ್ತ್ಯೋ ಮೃತ್ಯುಂ ಜಯತಿ ದುರ್ಜಯಮ್ ॥ 8 ॥**

8. ಭಗವಂತನು ಹೇಳುತ್ತಾನೆ, ಉದ್ಧವನೆ ಆಗಲಿ, ಯಾವ ಧರ್ಮವನ್ನು ಶ್ರದ್ಧೆಯಿಂದ ಶ್ರವಣ ಮಾಡಿದರೆ ಜಯಿಸಲಶಕ್ಯವಾದ ಮೃತ್ಯುವನ್ನು ಗೆಲ್ಲುತ್ತಾನೊ ಅಂತಹ ಮಂಗಲಕರವಾದ ನನ್ನ ಧರ್ವನ್ನು ನಿನಗೆ ಹೇಳುತ್ತೇನೆ.

**ಕುರ್ಯಾತ್ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ ।**
**ಮಯ್ಯರ್ಪಿತಮನಶ್ಚಿತ್ತೋ ಮದ್ಧರ್ಮಾತ್ಮಮನೋರತಿಃ ॥ 9 ॥**

9. ನನ್ನಲ್ಲಿ ಅರ್ಪಿಸಿದ ಮನಸ್ಸು, ಚಿತ್ತವುಳ್ಳವನಾಗಿ, ನನ್ನ ಧರ್ಮಗಳೇ ಶರೀರಮನಸ್ಸಿನಲ್ಲಿ ತುಂಬಿಕೊಂಡವನಾಗಿ, ಎಲ್ಲಾ ಕರ್ಮಗಳನ್ನೂ ನನಗೋಸ್ಕರ ಅವಸರವಿಲ್ಲದೆ ಮಾಡಬೇಕು.

**ದೇಶಾನ್ಪುಣ್ಯಾನಾಶ್ರಯೇತ ಮದ್ಭಕ್ತೈಃ ಸಾಧುಭಿಃ ಶ್ರಿತಾನ್ ।**
**ದೇವಾಸುರಮನುಷ್ಯೇಷು ಮದ್ಭಕ್ತಾಚರಿತಾನಿ ಚ ॥ 10 ॥**

10. ನನ್ನ ಭಕ್ತರಾದ ಸಾಧುಗಳಿಂದ ಕೂಡಿದ ಪುಣ್ಯಸ್ಥಳಗಳನ್ನು ಆಶ್ರಯಿಸಿ, ದೇವತೆಗಳು, ಅಸುರರು, ಮನುಷ್ಯರಲ್ಲಿ ನನ್ನ ಭಕ್ತರು ಯಾರಿದ್ದಾರೊ ಅವರ ನಡವಳಿಕೆಯನ್ನು ಅನುಸರಿಸಬೇಕು.

**ಪೃಥಕ್ಸತ್ರೇಣ ವಾ ಮಹ್ಯಂ ಪರ್ವಯಾತ್ರಾಮಹೋತ್ಸವಾನ್ ।**
**ಕಾರಯೇದ್ಗೀತನೃತ್ಯಾದ್ಯೈರ್ಮಹಾರಾಜವಿಭೂತಿಭಿಃ ॥ 11 ॥**

11. ಬೇರೆಯಾಗಿಯಾಗಲಿ, ಗುಂಪಿನಲ್ಲಾಗಲಿ ನೃತ್ಯ, ಸಂಗೀತ ಮೊದಲಾದ ರಾಜೋಪಚಾರಗಳಿಂದ ಪರ್ವಕಾಲ, ಯಾತ್ರೆ, ಮಹೋತ್ಸವಗಳನ್ನು ಆಚರಿಸಬೇಕು.

**ಮಾಮೇವ ಸರ್ವಭೂತೇಷು ಬಹಿರನ್ತರಪಾವೃತಮ್ ।**
**ಈಕ್ಷೇತಾತ್ಮನಿ ಚಾತ್ಮಾನಂ ಯಥಾ ಖಮಮಲಾಶಯಃ ॥ 12 ॥**

12. ಶುದ್ಧಾಂತಃಕರಣರಾದವರು ಹೇಗೆ ಒಳಗೂ ಹೊರಗೂ ಆಕಾಶವು ಮಲರಹಿತವಾಗಿದೆಯೊ ಹಾಗೆ ಸರ್ವಭೂತಗಳಲ್ಲಿಯೂ ತನ್ನಲ್ಲಿಯೂ ಆತ್ಮನು ಇರುವನೆಂದು ಕಾಣಬೇಕು.

**ಇತಿ ಸರ್ವಾಣಿ ಭೂತಾನಿ ಮದ್ಭಾವೇನ ಮಹಾದ್ಯುತೇ ।**
**ಸಭಾಜಯನ್ಮನ್ಯಮಾನೋ ಜ್ಞಾನಂ ಕೇವಲಮಾಶ್ರಿತಃ ॥ 13 ॥**

13. ಮಹಾತೇಜಸ್ವಿಯೇ, ಹೀಗೆ ಎಲ್ಲ ಭೂತಗಳನ್ನೂ ನನ್ನ ಭಾವನೆಯಿಂದ ತಿಳಿದವನಾಗಿ ಗೌರವಿಸುತ್ತಾ ಕೇವಲ ಜ್ಞಾನವನ್ನು ಆಶ್ರಯಿಸಿ ಇರಬೇಕು.

**ಬ್ರಾಹ್ಮಣೇ ಪುಕ್ಕಸೇ ಸ್ತೇನೇ ಬ್ರಹ್ಮಣ್ಯೇಽರ್ಕೇ ಸ್ಫುಲಿಙ್ಗಕೇ ।**
**ಅಕ್ರೂರೇ ಕ್ರೂರಕೇ ಚೈವ ಸಮದೃಕ್ಪಣ್ಡಿತೋ ಮತಃ ॥ 14 ॥**

14. ಬ್ರಾಹ್ಮಣ, ಚಂಡಾಲ, ಕಳ್ಳ, ಬ್ರಹ್ಮ, ಸೂರ್ಯ, ಅಗ್ನಿಕಣ, ಸಾಧು, ಕ್ರೂರಿ – ಇವರಲ್ಲಿ ಸಮಭಾವವನ್ನು ಮಾಡುವವನನ್ನು ಜ್ಞಾನಿ ಎನ್ನುವರು.

**ನರೇಷ್ವಭೀಕ್ಷ್ಣಂ ಮದ್ಭಾವಂ ಪುಂಸೋ ಭಾವಯತೋಽಚಿರಾತ್ ।**
**ಸ್ಪರ್ಧಾಸೂಯಾತಿರಸ್ಕಾರಾಃ ಸಾಹಙ್ಕಾರಾ ವಿಯನ್ತಿ ಹಿ ॥ 15 ॥**

15. ಹೀಗೆ ನಿರಂತರವಾಗಿ ಜನರಲ್ಲಿ ನನ್ನ ಭಾವವನ್ನು ತಿಳಿಯುವ ಪುರುಷನಿಗೆ ಸ್ಪರ್ಧೆ, ಅಸೂಯೆ, ತಿರಸ್ಕಾರ ಇವು ಅಹಂಕಾರದೊಡನೆ ತೊಲಗುವವು.

**ವಿಸೃಜ್ಯ ಸ್ಮಯಮಾನಾನ್ಸ್ವಾನ್ದೃಶಂ ವ್ರೀಡಾಂ ಚ ದೈಹಿಕೀಮ್ ।**
**ಪ್ರಣಮೇದ್ದಣ್ಡವದ್ಭೂಮಾವಾಶ್ವಚಾಣ್ಡಾಲಗೋಖರಮ್ ॥ 16 ॥**

16. ಅಪಹಾಸ್ಯಮಾಡುವ ತನ್ನವರನ್ನು, ದೇಹಸಂಬಂಧವಾದ ದೃಷ್ಟಿಯನ್ನು, ನಾಚಿಕೆಯನ್ನು ಬಿಟ್ಟು ನಾಯಿ, ಚಾಂಡಾಲ, ಗೋವು, ಕತ್ತೆ – ಇವೆಲ್ಲಕ್ಕೂ ಭೂಮಿಯಲ್ಲಿ ಬಿದ್ದು ದಂಡವತ್ಪ್ರಣಾಮವನ್ನು ಮಾಡಬೇಕು.

**ಯಾವತ್ಸರ್ವೇಷು ಭೂತೇಷು ಮದ್ಭಾವೋ ನೋಪಜಾಯತೇ ।**
**ತಾವದೇವಮುಪಾಸೀತ ವಾಙ್ಮನಃಕಾಯವೃತ್ತಿಭಿಃ ॥ 17 ॥**

17. ಎಲ್ಲಿಯುವರೆಗೆ ಸರ್ವಭೂತಗಳಲ್ಲಿಯೂ ನನ್ನ ಭಾವವು ಮೂಡುವದಿಲ್ಲವೊ ಅಲ್ಲಿಯವರೆಗೆ ಮಾತು, ಮನಸ್ಸು, ಶರೀರ ಇವುಗಳಿಂದ ನನ್ನ ಉಪಾಸನೆ ಮಾಡಬೇಕು.

**ಸರ್ವಂ ಬ್ರಹ್ಮಾತ್ಮಕಂ ತಸ್ಯ ವಿದ್ಯಯಾತ್ಮಮನೀಷಯಾ ।**
**ಪರಿಪಶ್ಯನ್ನುಪರಮೇತ್ಸರ್ವತೋ ಮುಕ್ತಸಂಶಯಃ ॥ 18 ॥**

18. ಹೀಗೆ ಮಾಡುವವನಿಗೆ ಎಲ್ಲೆಡೆ ಉಂಟಾದ ಈಶ್ವರಬುದ್ಧಿಯಿಂದ ಎಲ್ಲವೂ ಬ್ರಹ್ಮರೂಪವು ಎಂದು ನೋಡುತ್ತಾ ಸಂಶಯರಹಿತನಾಗಿ ಎಲ್ಲದರಿಂದಲೂ ಹಿಂತಿರುಗಬೇಕು.

**ಅಯಂ ಹಿ ಸರ್ವಕಲ್ಪಾನಾಂ ಸಧ್ರೀಚೀನೋ ಮತೋ ಮಮ ।**
**ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯವೃತ್ತಿಭಿಃ ॥ 19 ॥**

19. ಮನಸ್ಸು ಮತ್ತು ಮಾತಿನ ವ್ಯಾಪಾರದಿಂದ ಸಕಲ ಭೂತಗಳಲ್ಲಿಯೂ

ನನ್ನ ಭಾವನೆಯು ಉಂಟಾಗಿದೆ ಎಂಬುದು ಎಲ್ಲ ವಿಧದಲ್ಲಿಯೂ ಸಾಧುವಾದುದು ಎಂಬುದು ನನ್ನ ಅಭಿಪ್ರಾಯವು.

**ನ ಹ್ಯಙ್ಗೋಪಕ್ರಮೇ ಧ್ವಂಸೋ ಮದ್ಧರ್ಮಸ್ಯೋದ್ಧವಾಣ್ವಪಿ ।**
**ಮಯಾ ವ್ಯವಸಿತಃ ಸಮ್ಯಙ್ನಿರ್ಗುಣತ್ವಾದನಾಶಿಷಃ ॥ 20 ॥**

20. ಪ್ರಿಯ ಉದ್ಧವನೆ! ನಿಷ್ಕಾಮವಾದ ನನ್ನ ಧರ್ಮವು ಪ್ರಾರಂಭವಾದ ಬಳಿಕ ಮತ್ತೆ ಯಾವ ವಿಘ್ನಗಳೂ ಸ್ವಲ್ಪವೂ ಉಂಟಾಗುವದಿಲ್ಲ. ಇದು ನಿರ್ಗುಣವಾಗಿದೆ ಆದ್ದರಿಂದ ಸರ್ವೋತ್ಕೃಷ್ಟವೆಂದು ನಾನು ನಿಶ್ಚಯಿಸಿರುವೆನು.

**ಯೋ ಯೋ ಮಯಿ ಪರೇ ಧರ್ಮಃ ಕಲ್ಪ್ಯತೇ ನಿಷ್ಫಲಾಯ ಚೇತ್ ।**
**ತದಾಯಾಸೋ ನಿರರ್ಥಃ ಸ್ಯಾದ್ಭಯಾದೇರಿವ ಸತ್ತಮ ॥ 21 ॥**

21. ಸಾಧುವೆ! ಭಯ ಮೊದಲಾದವುಗಳಿಂದುಂಟಾಗುವ ಪಲಾಯನವೇಮೊದಲಾದ ವ್ಯರ್ಥಪ್ರಯಾಸಗಳನ್ನು ನನ್ನಲ್ಲಿ ಸಮರ್ಪಿಸಿದರೆ ಆಗ ಅದು ಧರ್ಮವೇ ಆಗುವದು.

**ಏಷಾ ಬುದ್ಧಿಮತಾಂ ಬುದ್ಧಿರ್ಮನೀಷಾ ಚ ಮನೀಷಿಣಾಮ್ ।**
**ಯತ್ಸತ್ಯಮನೃತೇನೇಹ ಮರ್ತ್ಯೇನಾಪ್ನೋತಿ ಮಾಮೃತಮ್ ॥ 22 ॥**

22. ಅಸತ್ಯವಾದ ಮರಣಶೀಲವಾದ ಈ ದೇಹದಿಂದ ಈ ಜನ್ಮದಲ್ಲಿಯೇ ನಾಶರಹಿತನಾದ ನನ್ನನ್ನು ಪಡೆಯುವದೆಂಬುದು ವಿವೇಕಿಗಳ ವಿವೇಕವು, ಬುದ್ಧಿವಂತರ ಬುದ್ಧಿಮತ್ತೆಯು.

**ಏಷ ತೇಽಭಿಹಿತಃ ಕೃತ್ಸ್ನೋ ಬ್ರಹ್ಮವಾದಸ್ಯ ಸಙ್ಗ್ರಹಃ ।**
**ಸಮಾಸವ್ಯಾಸವಿಧಿನಾ ದೇವಾನಾಮಪಿ ದುರ್ಗಮಃ ॥ 23 ॥**

23. ಈ ಬ್ರಹ್ಮವಾದವು ದೇವತೆಗಳಿಗೂ ಕಷ್ಟಸಾಧ್ಯವಾದದ್ದು. ಆದರೆ ಇದು ನಿನಗಾಗಿ ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ಸಂಪೂರ್ಣವಾಗಿ ನನ್ನಿಂದ ಹೇಳಲ್ಪಟ್ಟಿತು.

**ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ ।**
**ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ ॥ 24 ॥**

24. ಸ್ಪಷ್ಟವಾದ ಯುಕ್ತಿಗಳಿಂದ ಈ ಜ್ಞಾನವನ್ನು ಅನೇಕಬಾರಿ ನಿನಗೆ ಹೇಳಿದೆನು. ಇದನ್ನು ತಿಳಿದ ಪುರುಷನು ಮುಕ್ತನಾಗುವದರಲ್ಲಿ ಸಂಶಯವಿಲ್ಲ.

**ಸುವಿವಿಕ್ತಂ ತವ ಪ್ರಶ್ನಂ ಮಯ್ಯೈತದಪಿ ಧಾರಯೇತ್ ।**
**ಸನಾತನಂ ಬ್ರಹ್ಮಗುಹ್ಯಂ ಪರಂ ಬ್ರಹ್ಮಾಧಿಗಚ್ಛತಿ ॥ 25 ॥**

25. ನಿನ್ನ ಪ್ರಶ್ನೆಗಳಿಗೆ ನಾನು ಸರಿಯಾಗಿ ವಿವೇಚಿಸಿದ್ದೇನೆ. ಈ ಸನಾತನವಾದ ವೇದರಹಸ್ಯವನ್ನು ತಿಳಿದವನು ಪರಬ್ರಹ್ಮವನ್ನು ಹೋಗಿ ಸೇರುತ್ತಾನೆ.

**ಯ ಏತನ್ಮಮ ಭಕ್ತೇಷು ಸಮ್ಪ್ರದದ್ಯಾತ್ಸುಪುಷ್ಕಲಮ್ ।**
**ತಸ್ಯಾಹಂ ಬ್ರಹ್ಮದಾಯಸ್ಯ ದದಾಮ್ಯಾತ್ಮಾನಮಾತ್ಮನಾ ॥ 26 ॥**

26. ಈ ಉಪದೇಶವನ್ನು ನನ್ನ ಭಕ್ತರಲ್ಲಿ ಸರಿಯಾಗಿ ಯಾವನು ತಿಳಿಸುವನೋ ಆ ಬ್ರಹ್ಮೋಪದೇಶಕನಿಗೆ ನಾನು ನನ್ನ ಸ್ವರೂಪವನ್ನು ಅನುಗ್ರಹಿಸುವೆನು.

**ಯ ಏತತ್ಸಮಧೀಯೀತ ಪವಿತ್ರಂ ಪರಮಂ ಶುಚಿ ।**
**ಸ ಪೂಯೇತಾಹರಹರ್ಮಾಂ ಜ್ಞಾನದೀಪೇನ ದರ್ಶಯನ್ ॥ 27 ॥**

27. ಯಾವನು ಪವಿತ್ರವೂ ಶ್ರೇಷ್ಠವೂ ಶುದ್ಧವೂ ಆದ ಈ ಉಪಾಖ್ಯಾನವನ್ನು ಚೆನ್ನಗಿ ಅಧ್ಯಯನಮಾಡುತ್ತಾ ಪ್ರತಿದಿನವೂ ಜ್ಞಾನದೀಪದಿಂದ ನನ್ನನ್ನು ದರ್ಶಿಸುವನೋ ಅವನು ಶುದ್ಧನಾಗುವನು.

**ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ ।**
**ಮಯಿ ಭಕ್ತಿಂ ಪರಾಂ ಕುರ್ವನ್ಕರ್ಮಭಿರ್ನ ಸ ಬಧ್ಯತೇ ॥ 28 ॥**

28. ಯಾವ ಮನುಷ್ಯನು ಪ್ರತಿದಿನವೂ ಸ್ಥಿರಚಿತ್ತನಾಗಿ ಇದನ್ನು ಕೇಳುತ್ತಾನೊ ಅವನು ನನ್ನಲ್ಲಿ ಪರಭಕ್ತಿಯನ್ನು ಮಾಡುತ್ತಾ ಕರ್ಮಬಂಧನಕ್ಕೆ ಒಳಪಡುವದಿಲ್ಲ.

**ಅಪ್ಯುದ್ಧವ ತ್ವಯಾ ಬ್ರಹ್ಮ ಸಖೇ ಸಮವಧಾರಿತಮ್ ।**
**ಅಪಿ ತೇ ವಿಗತೋ ಮೋಹಃ ಶೋಕಶ್ಚಾಸೌ ಮನೋಭವಃ ॥ 29 ॥**

29. ಮಿತ್ರನಾದ ಉದ್ಧವನೆ! ನೀನು ಬ್ರಹ್ಮಸ್ವರೂಪವನ್ನು ಚೆನ್ನಾಗಿ ತಿಳಿದೆಯೆ? ನಿನ್ನ ಮನಸ್ಸಿನಲ್ಲುಂಟಾದ ಮೋಹವು, ಶೋಕವು ಹೋಯಿತೆ?

**ನೈತತ್ತ್ವಯಾ ದಾಮ್ಭಿಕಾಯ ನಾಸ್ತಿಕಾಯ ಶಠಾಯ ಚ ।**
**ಅಶುಶ್ರೂಷೋರಭಕ್ತಾಯ ದುರ್ವಿನೀತಾಯ ದೀಯತಾಮ್ ॥ 30 ॥**

30. ನಾನು ಉಪದೇಶಿಸಿದ ಈ ರಹಸ್ಯವನ್ನು ದಾಂಭಿಕನಿಗೆ, ನಾಸ್ತಿಕನಿಗೆ, ಶ್ರದ್ಧಾಹೀನನಿಗೆ, ಶಿಷ್ಯನಲ್ಲದವನಿಗೆ, ಭಕ್ತನಲ್ಲದವನಿಗೆ, ದುಷ್ಟನಿಗೆ ನೀನು ಉಪದೇಶಿಸಬಾರದು.

**ಏತೈರ್ದೋಷೈರ್ವಿಹೀನಾಯ ಬ್ರಹ್ಮಣ್ಯಾಯ ಪ್ರಿಯಾಯ ಚ ।**
**ಸಾಧವೇ ಶುಚಯೇ ಬ್ರೂಯಾದ್ಭಕ್ತಿಃ ಸ್ಯಾಚ್ಛೂದ್ರ ಯೋಷಿತಾಮ್ ॥ 31 ॥**

31. ಈ ದೋಷಗಳಿಲ್ಲದ ನನ್ನ ಭಕ್ತರಾದ ಬ್ರಾಹ್ಮಣಭಕ್ತನಿಗೂ, ಪ್ರಿಯನಿಗೂ, ಸಾಧುವಿಗೂ, ಶುದ್ಧನಾದವನಿಗೂ, ಶೂದ್ರನಿಗೂ, ಸ್ತ್ರೀಯರಿಗೂ ಉಪದೇಶಿಸಬೇಕು.

**ನೈತದ್ವಿಜ್ಞಾಯ ಜಿಜ್ಞಾಸೋರ್ಜ್ಞಾತವ್ಯಮವಶಿಷ್ಯತೇ ।**
**ಪೀತ್ವಾ ಪೀಯೂಷಮಮೃತಂ ಪಾತವ್ಯಂ ನಾವಶಿಷ್ಯತೇ ॥ 32 ॥**

32. ಇದನ್ನು ತಿಳಿದ ಜಿಜ್ಞಾಸುವಿಗೆ – ಅಮೃತವನ್ನು ಕುಡಿದವನಿಗೆ ಮತ್ತೆ ಕುಡಿಯಬೇಕಾದದ್ದಿರುವದಿಲ್ಲವೋ ಹಾಗೆ – ಜಿಜ್ಞಾಸೆಮಾಡಬೇಕಾದದ್ದು ಉಳಿದಿರುವದಿಲ್ಲ.

**ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಣ್ಡಧಾರಣೇ ।**
**ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇಽಹಂ ಚತುರ್ವಿಧಃ ॥ 33 ॥**

33. ಜ್ಞಾನದಿಂದುಂಟಾಗುವ ಮೋಕ್ಷವು, ವಿಹಿತಕರ್ಮದಿಂದುಂಟಾಗುವ ಧರ್ಮವು, ಸ್ವಾಭಾವಿಕವಾದ ಲೌಕಿಕ ಕರ್ಮಗಳಿಂದುಂಟಾಗುವ ಕಾಮವು, ಯೋಗದಿಂದುಂಟಾಗುವ ಸಿದ್ಧಿಗಳು, ಕೃಷ್ಯಾದಿಗಳಿಂದುಂಟಾಗುವ ಸಂಪತ್ತು, ದಂಡನೀತಿಯಿಂದುಂಟಾಗುವ ಐಶ್ವರ್ಯವು – ಈ ಚತುರ್ವಿಧ ಪುರುಷಾರ್ಥಗಳು ನಿನಗೆ ನಾನೇ ಆಗಿದ್ದೇನೆ.

**ಮರ್ತ್ಯೋ ಯದಾ ತ್ಯಕ್ತಸಮಸ್ತಕರ್ಮಾ**
**ನಿವೇದಿತಾತ್ಮಾ ವಿಚಿಕೀರ್ಷಿತೋ ಮೇ ।**
**ತದಾಮೃತತ್ವಂ ಪ್ರತಿಪದ್ಯಮಾನೋ**
**ಮಯಾತ್ಮಭೂಯಾಯ ಚ ಕಲ್ಪತೇ ವೈ ॥ 34 ॥**

34. ಮನುಷ್ಯನು ಎಲ್ಲಾ ಕರ್ಮಗಳನ್ನು ನನ್ನಲ್ಲಿ ಅರ್ಪಿಸಿ ಅನನ್ಯ ಶರಣಾಗತನಾಗುತ್ತಾನೊ ಎಲ್ಲ ಕ್ರಿಯೆಗಳನ್ನೂ ವ್ಯವಹಾರಗಳನ್ನೂ ನನಗಾಗಿ ಮಾಡುತ್ತಾನೊ ಅವನು ನನಗೆ ಅತ್ಯಂತ ಪ್ರಿಯನು. ನಾನೂ ಅವನಿಗೆ ಪ್ರಿಯವಾದದ್ದನು ಮಾಡಲು ಬಯಸುತ್ತೇನೆ. ಇಂತಹ ಭಕ್ತನು ಅಮೃತತ್ತ್ವವನ್ನು ಪಡೆದುಕೊಂಡು ನನ್ನ ಸ್ವರೂಪವೇ ಆಗುತ್ತಾನೆ.

*****

## ಭಗವಂತನ ಪರಂಧಾಮ

### (ಹನ್ನೊಂದನೆಯ ಸ್ಕಂಧ – ಮೂವತ್ತೊಂದನೆಯ ಅಧ್ಯಾಯ)

**ರಾಜನ್ಪರಸ್ಯ ತನುಭೃಜ್ಜನನಾಪ್ಯಯೇಹಾ**
**ಮಾಯಾವಿಡಮ್ಬನಮವೇಹಿ ಯಥಾ ನಟಸ್ಯ ।**
**ಸೃಷ್ಟ್ವಾತ್ಮನೇದಮನುವಿಶ್ಯ ವಿಹೃತ್ಯ ಚಾನ್ತೇ**
**ಸಂಹೃತ್ಯ ಚಾತ್ಮಮಹಿನೋಪರತಃ ಸ ಆಸ್ತೇ ॥ 11 ॥**

11. ಶ್ರೀಶುಕರು ಹೇಳುತ್ತಾರೆ, ಎಲೈ ಪರೀಕ್ಷಿತ, ನಟನಾದವನು ತಾನು ವಿಕಾರಗಳನ್ನು ಪಡೆಯದೆ ನಾನಾ ವೇಷಗಳನ್ನು ಅನುಕರಿಸಿ ಪ್ರಕಟಗೊಳಿಸುವಂತೆ, ಪರಮಾತ್ಮನು ತನ್ನಿಂದ ಜಗತ್ತನ್ನು ಸೃಷ್ಟಿಸಿ, ತಾನೇ ಅಂತರ್ಯಾಮಿಯಾಗಿ ಪ್ರವೇಶಿಸಿ, ವಿವಿಧ ಲೀಲೆಗಳಿಂದ ವಿಹರಿಸಿ, ಕಡೆಯಲ್ಲಿ ಅದನ್ನು ಲಯಗೊಳಿಸಿ ಎಲ್ಲದರಿಂದಲೂ ಉಪರತನಾಗಿ ತನ್ನ ಮಹಿಮೆಯಲ್ಲಿ ಇರುತ್ತಾನೆ.

**ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ**
**ತ್ವಾಂ ಚಾನಯಚ್ಛರಣದಃ ಪರಮಾಸ್ತ್ರದಗ್ಧಮ್ ।**
**ಜಿಗ್ಯೇಽನ್ತಕಾನ್ತಕಮಪೀಶಮಸಾವನೀಶಃ**
**ಕಿಂ ಸ್ವಾವನೇ ಸ್ವರನಯನ್ಮೃಗಯುಂ ಸದೇಹಮ್ ॥ 12 ॥**

12. ಯಾವ ಭಗವಂತನು ಯಮಲೋಕಕ್ಕೆ ಹೋಗಿದ್ದ ಗುರುಪುತ್ರನನ್ನು ಹಿಂದಕ್ಕೆ ಕರೆತಂದು ತನ್ನ ಗುರು ಸಾಂದೀಪಿನಿಗೆ ಒಪ್ಪಿಸಿದನೊ, ಶರಣಾಗತರಕ್ಷಕನಾದ ಅವನು ಬ್ರಹ್ಮಾಸ್ತ್ರದಿಂದ ದಹಿಸಲ್ಪಟ್ಟ ನಿನ್ನನ್ನು ಬದುಕೊಸಿದನೊ, ಬಾಣಾಸುರ ನೊಡನೆ ಕಾದಾಡುವಾಗ ಅಂತಕನಿಗೂ ಅಂತಕನಾದ ಪರಮೇಶ್ವರನನ್ನು

ಜಯಿಸಿದನೊ, ಯಾವನು ಜರೆಯೆಂಬ ಬೇಡನನ್ನು ಸಶರೀರನಾಗಿ ಸ್ವರ್ಗಕ್ಕೆ ಕಳುಹಿಸಿದನೊ, ಅಂತಹ ಪರಮಾತ್ಮನು ತನ್ನನ್ನು ರಕ್ಷಿಸಿಕೊಳ್ಳಲು ಸಮರ್ಥನಲ್ಲವೆ?

**ತಥಾಪ್ಯಶೇಷಸ್ಥಿತಿಸಮ್ಭವಾಪ್ಯಯೇಷು**
**ಅನನ್ಯಹೇತುರ್ಯದಶೇಷಶಕ್ತಿಧೃಕ್ ।**
**ನೈಚ್ಛತ್ತ್ರಣೇತುಂ ವಪುರತ್ರ ಶೇಷಿತಂ**
**ಮರ್ತ್ಯೇನ ಕಿಂ ಸ್ವಸ್ಥಗತಿಂ ಪ್ರದರ್ಶಯನ್ ॥ 13 ॥**

13. ಈ ಸಮಸ್ತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿದ್ದಾನೆ. ಸಮಸ್ತ ಶಕ್ತಿಗಳನ್ನು ಧರಿಸುವಂತವನಾದರೂ ತನ್ನ ಶರೀರವನ್ನು ತ್ಯಜಿಸುವದು ಅವಶ್ಯವಾಗಿತ್ತೇ? ಎಂದರೆ, ಭಗವಂತನು ಸಮಸ್ತ ಯಾದವರ ಮರಣದ ನಂತರ ಮಾನುಷ ದೇಹದಿಂದ ಕಾರ್ಯವೇನೂ ಇಲ್ಲವೆಂದು ನಿಶ್ಚಯಿಸಿ – ಮನುಷ್ಯದೆಹದ ಮೂಲಕ ಯೋಗಿಯು ಹೇಗೆ ಪರಲೋಕಯಾತ್ರೆಯನ್ನು ಮಾಡಬೇಕೆಂದು ತಿಳಿಸಲೋ ಎಂಬಂತೆ – ತನ್ನ ಶರೀರವನ್ನು ಬಿಟ್ಟು ವೈಕುಂಠಕ್ಕೆ ತೆರಳಿದನು. ಅಂದರೆ ಯೋಗಿಯು ಸಿದ್ಧಿಗಳ ಮೂಲಕ ಶರೀರವನ್ನು ಉಳಿಸಿಕೊಂಡು ಅದರ ಮೂಲಕ ಇಲ್ಲಿ ಭೋಗಾಸಕ್ತನಾಗಿರಬಾರದು, ಅವಧಿ ಮುಗಿದಮೇಲೆ ಪರಮಧಾಮವನ್ನು ಪಡೆಯಬೇಕು ಎಂಬುದನ್ನು ಭಗವಂತನು ತೋರಿದ್ದಾನೆ.

******

## ಮೋಕ್ಷದ ಸ್ವರೂಪ

### (ಹನ್ನೆರಡನೆಯ ಸ್ಕಂಧ – ನಾಲ್ಕನೆಯ ಅಧ್ಯಾಯ)

**ಲಯಃ ಪ್ರಾಕೃತಿಕೋ ಹ್ಯೇಷ ಪುರುಷಾವ್ಯಕ್ತಯೋರ್ಯದಾ ।**
**ಶಕ್ತಯಃ ಸಮ್ಪ್ರಲೀಯನ್ತೇ ವಿವಶಾಃ ಕಾಲವಿದ್ರುತಾಃ ॥ 22 ॥**

22. ಪ್ರಾಕೃತಿಕ ಪ್ರಳಯದಲ್ಲಿ ಪ್ರಕೃತಿ ಪುರುಷರ ಸತ್ತ್ವಾದಿಶಕ್ತಿಗಳು ಕಾಲಪ್ರೆರಿತವಾಗಿ ತಮ್ಮ ಮೂಲದಲ್ಲಿ ಲಯವಾಗಿತ್ತವೆ.

**ಬುದ್ಧೀನ್ದ್ರಿಯಾರ್ಥರೂಪೇಣ ಜ್ಞಾನಂ ಭಾತಿ ತದಾಶ್ರಯಮ್ ।**
**ದೃಶ್ಯತ್ವಾವ್ಯತಿರೇಕಾಭ್ಯಾಮಾದ್ಯನ್ತವದವಸ್ತು ಯತ್ ॥ 23 ॥**

23. ಬುದ್ಧಿ, ಇಂದ್ರಿಯಗಳು ವಿಷಯಗಳ ರೂಪದಿಂದ ಅವುಗಳಿಗೆ ಆಶ್ರಯವಾದ ಜ್ಞಾನವು ಪ್ರಕಾಶಿಸುವದು. ಯಾವದು ದೃಶ್ಯತ್ವ, ಕಾರಣಾಭೇದಗಳಿಂದ ಉತ್ಪತ್ತಿಲಯಗಳುಳ್ಳದ್ದೋ ಅದು ಮಿಥ್ಯೆಯಾದದ್ದು.

**ದೀಪಶ್ಚಕ್ಷುಶ್ಚ ರೂಪಂ ಚ ಜ್ಯೋತಿಷೋ ನ ಪೃಥಗ್ಭವೇತ್ ।**
**ಏವಂ ಧೀಃ ಖಾನಿ ಮಾತ್ರಾಶ್ಚ ನ ಸ್ಯುರನ್ಯತಮಾದೃತಾತ್ ॥ 24 ॥**

24. ದೀಪ, ಕಣ್ಣು, ರೂಪ ಇವು ತೇಜಸ್ಸಿಗಿಂತ ಬೇರೆಯಾಗಿಲ್ಲ. ಹಾಗೆಯೇ ಬುದ್ಧಿ, ಇಂದ್ರಿಯಗಳು, ವಿಷಯಗಳು ಅತ್ಯಂತಭಿನ್ನವಾದ ಬ್ರಹ್ಮಕ್ಕಿಂತಲೂ ಬೇರೆಯಲ್ಲ.

**ಬುದ್ಧೇರ್ಜಾಗರಣಂ ಸ್ವಪ್ನಃ ಸುಷುಪ್ತಿರಿತಿ ಚೋಚ್ಯತೇ ।**
**ಮಾಯಾಮಾತ್ರಮಿದಂ ರಾಜನ್ನಾನಾತ್ವಂ ಪ್ರತ್ಯಗಾತ್ಮನಿ ॥ 25 ॥**

25. ರಾಜನೆ, ಎಚ್ಚರ, ಸ್ವಪ್ನ, ಸುಷುಪ್ತಿ ಈ ಅವಸ್ಥೆಗಳು ಬುದ್ಧಿಗೆ ಹೇಳಲ್ಪಡುತ್ತದೆ. ಪ್ರತ್ಯಗಾತ್ಮನಲ್ಲಿ ಇವು ಮಾಯಾ(ಮಿಥ್ಯಾ)ಮಾತ್ರವಾಗಿದೆ.

**ಯಥಾ ಜಲಧರಾ ವ್ಯೋಮ್ನಿ ಭವನ್ತಿ ನ ಭವನ್ತಿ ಚ ।**
**ಬ್ರಹ್ಮಣೀದಂ ತಥಾ ವಿಶ್ವಮವಯವ್ಯುದಯಾಪ್ಯಯಾತ್ ॥ 26 ॥**

26. ಹೇಗೆ ಆಕಾಶದಲ್ಲಿ ಮೋಡಗಳು ಉಂಟಾಗುತ್ತವೆ, ನಶಿಸುತ್ತವೆ. ಹಾಗೆಯೇ ಸಾವಯುವವಾದ ಈ ಪ್ರಪಂಚವು ಬ್ರಹ್ಮನಲ್ಲಿಯೇ ತೋರಿ ಲಯವಾಗುವದರಿಂದ ಸತ್ಯವಲ್ಲ.

**ಸತ್ಯಂ ಹ್ಯವಯವಃ ಪ್ರೋಕ್ತಃ ಸರ್ವಾವಯವಿನಾಮಿಹ ।**
**ವಿನಾರ್ಥೇನ ಪ್ರತೀಯೇರನ್ಪಟಸ್ಯೇವಾಙ್ಗ ತನ್ತವಃ ॥ 27 ॥**

27. ರಾಜನೆ! ವಸ್ತ್ರವು ಇಲ್ಲದಿದ್ದರೂ ಅದರ ಕಾರಣವಾದ ನೂಲಿರುವಂತೆ ಈ ಲೋಕದಲ್ಲಿ ಎಲ್ಲಾ ಅವಯವಿಗಳಿಗಿಂತ ಬೇರೆಯಾಗಿ ಅವಯವವು ಸತ್ಯವೆಂದು ಹೇಳಿದೆ.

**ಯತ್ಸಾಮಾನ್ಯವಿಶೇಷಾಭ್ಯಾಮುಪಲಭ್ಯೇತ ಸ ಭ್ರಮಃ ।**
**ಅನ್ಯೋನ್ಯಾಪಾಶ್ರಯಾತ್ಸರ್ವಮಾದ್ಯನ್ತವದವಸ್ತು ಯತ್ ॥ 28 ॥**

28. ಯಾವದು ಒಂದನ್ನೊಂದನ್ನು ಆಶ್ರಯಿಸಿರುವದರಿಂದ ಸಾಮಾನ್ಯ-ವಿಶೇಷಗಳಿಂದ ಕಾಣುವದೊ ಅದು ಭ್ರಾಂತಿಯು. ಯಾವದು ಆದ್ಯಂತವುಳ್ಳದ್ದೋ ಅದೆಲ್ಲವೂ ಮಿಥ್ಯೆಯೇ ಆಗಿದೆ.

**ವಿಕಾರಃ ಖ್ಯಾಯಮಾನೋಽಪಿ ಪ್ರತ್ಯಗಾತ್ಮಾನಮನ್ತರಾ ।**
**ನ ನಿರೂಪ್ಯೋಽಸ್ತ್ಯಣುರಪಿ ಸ್ಯಾಚ್ಚೇಚ್ಚಿತ್ಸಮ ಆತ್ಮವತ್ ॥ 29 ॥**

29. ಪ್ರಪಂಚವು ಪ್ರಕಾಶಮಾನವಾದರೂ ಪರಮಾತ್ಮನ ಪ್ರಕಾಶವನ್ನುಳಿದು ಸ್ವಲ್ಪವೂ ತೋರತಕ್ಕದ್ದಲ್ಲ. ಹಾಗೆ ತೋರಿದಲ್ಲಿ ಅದು ಸ್ವಪ್ರಕಾಶವಾಗಿ ಆತ್ಮನಂತೆಯೇ ಆದೀತು.

**ನ ಹಿ ಸತ್ಯಸ್ಯ ನಾನಾತ್ವಮವಿದ್ವಾನ್ಯದಿ ಮನ್ಯತೇ ।**
**ನಾನಾತ್ವಂ ಛಿದ್ರಯೋರ್ಯದ್ವಜ್ಜ್ಯೋತಿಷೋರ್ವಾತಯೋರಿವ ॥ 30 ॥**

30. ಸತ್ಯದಲ್ಲಿ ಭೇದವಿಲ್ಲವಲ್ಲವೆ! ಹಾಗೆ ತಿಳಿದರೆ ಅವನು ವಿದ್ವಾಂಸನಲ್ಲ. ಘಟಾಕಾಶ-ಮಹಾಕಾಶಗಳಂತೆ ಆಕಾಶದಲ್ಲಿಯೂ, ನೀರಿನಲ್ಲಿಯೂ ಇರುವ ಸೂರ್ಯರಂತೆಯೂ ಶರೀರ ಮತ್ತು ಹೊರಗಡೆಯೂ ಇರುವ ವಾಯುವಿನಂತೆಯೂ ಉಪಾಧಿಯಿಂದ ಭೇದವಿದೆ.

**ಯಥಾ ಹಿರಣ್ಯಂ ಬಹುಧಾ ಸಮೀಯತೇ**
**ನೃಭಿಃ ಕ್ರಿಯಾಭಿರ್ವ್ಯವಹಾರವರ್ತ್ಮಸು ।**
**ಏವಂ ವಚೋಭಿರ್ಭಗವಾನಧೋಕ್ಷಜೋ**
**ವ್ಯಾಖ್ಯಾಯತೇ ಲೌಕಿಕವೈದಿಕೈರ್ಜನೈಃ ॥ 31 ॥**

31. ಒಂದು ಚಿನ್ನವನ್ನು ಕಂಕಣ, ಓಲೆ, ಕಡಗ ಮುಂತಾದ ಅನೇಕರೂಪದಲ್ಲಿ, ಒಡವೆಗಳಾಗಿಸಿ ಬೇರೆಬೇರೆ ರೂಪದಲ್ಲಿ ಕಂಡುಬರುವಂತೆ ವ್ಯವಹಾರದಲ್ಲಿ ನಿಪುಣರಾದ ವಿದ್ವಾಂಸರು ಲೋಕದ ವೇದದ ನುಡಿಗಳಿಂದ ಇಂದ್ರಿಯಾತೀತನಾದ ಭಗವಂತನಾದ ಶ್ರೀಹರಿಯು ವರ್ಣಿತನಾಗಿದ್ದಾನೆ.

**ಯಥಾ ಘನೋಽರ್ಕಪ್ರಭವೋಽರ್ಕದರ್ಶಿತೋ-**
**ಹ್ಯರ್ಕಾಂಶಭೂತಸ್ಯ ಚ ಚಕ್ಷುಷಸ್ತಮಃ ।**
**ಏವಂ ತ್ವಹಂ ಬ್ರಹ್ಮಗುಣಸ್ತದೀಕ್ಷಿತೋ**
**ಬ್ರಹ್ಮಾಂಶಕಸ್ಯಾತ್ಮನ ಆತ್ಮಬನ್ಧನಃ ॥ 32 ॥**

32. ಸೂರ್ಯನಿಂದ ಹುಟ್ಟಿ ಬೆಳಗಿಸಲ್ಪಡುವ ಮೋಡವು, ಸೂರ್ಯನ ಅಂಶವಾದ ಕಣ್ಣಿಗೆ ಹೇಗೆ ಸೂರ್ಯನನ್ನು ನೋಡಲು ಪ್ರತಿಬಂಧಕವೊ, ಹಾಗೆ ಬ್ರಹ್ಮದಿಂದುಂಟಾಗಿ ಅದರಿಂದ ಪ್ರಕಾಶಗೊಳಿಸುವ ಅಹಂಕಾರವು ಬ್ರಹ್ಮಾಂಶವಾದ ಜೀವನಿಗೆ ಆತ್ಮದರ್ಶನಕ್ಕೆ ಪ್ರತಿಬಂಧಕವು.

**ಘನೋ ಯದಾರ್ಕಪ್ರಭವೋ ವಿದೀರ್ಯತೇ**
**ಚಕ್ಷುಃ ಸ್ವರೂಪಂ ರವಿಮೀಕ್ಷತೇ ತದಾ ।**
**ಯದಾ ಹ್ಯಹಙ್ಕಾರ ಉಪಾಧಿರಾತ್ಮನೋ**
**ಜಿಜ್ಞಾಸಯಾ ನಶ್ಯತಿ ತರ್ಹ್ಯನುಸ್ಮರೇತ್ ॥ 33 ॥**

33. ಯಾವಾಗ ಸೂರ್ಯನಿಂದುಂಟಾದ ಮೇಘವು ನಾಶವಾಗುವದೊ, ಆಗ ಕಣ್ಣು ತನಗೆ ಕಾರಣವಾದ ಸೂರ್ಯನನ್ನು ನೋಡುವದು. ಜೀವನಿಗೆ ಉಪಾಧಿಗೆ ಕಾರಣವಾದ ಅಹಂಕಾರವು ತತ್ತ್ವವಿಚಾರದಿಂದ ಯಾವಾಗ ನಾಶವಾಗುವದೊ ಆಗ ಬ್ರಹ್ಮಸ್ವರೂಪನಾಗುವನು.

*****

## ಶ್ರೀ ಶುಕಮುನಿಗಳ ಕೊನೆಯ ಉಪದೇಶ
### (ಹನ್ನೆರಡನೆಯ ಸ್ಕಂಧ – ಐದನೆಯ ಅಧ್ಯಾಯ)

**ಶ್ರೀಶುಕ ಉವಾಚ –**
**ಅತ್ರಾನುವರ್ಣ್ಯತೇಽಭೀಕ್ಷ್ಣಂ ವಿಶ್ವಾತ್ಮಾ ಭಗವಾನ್ಹರಿಃ ।**
**ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಃ ಕ್ರೋಧಸಮುದ್ಭವಃ ॥ 1 ॥**

1. ಯಾವನ ರಜೋಗುಣದಿಂದ ಬ್ರಹ್ಮನೂ, ಕ್ರೋಧದಿಂದ ರುದ್ರನೂ ಉಂಟಾದರೊ, ಅಂತಹ ವಿಶ್ವಾತ್ಮನಾದ ಭಗವಾನ್ ಹರಿಯ ಸಂಕೀರ್ತನೆಯು ಈ ಪುರಾಣದಲ್ಲಿ ಎಲ್ಲೆಡೆಯೂ ವರ್ಣಿಸಿದೆ.

**ತ್ವಂ ತು ರಾಜನ್ಮರಿಷ್ಯೇತಿ ಪಶುಬುದ್ಧಿಮಿಮಾಂ ಜಹಿ ।**
**ನ ಜಾತಃ ಪ್ರಾಗಭೂತೋಽದ್ಯ ದೇಹವತ್ತ್ವಂ ನ ನಙ್ಕ್ಷ್ಯಸಿ ॥ 2 ॥**

2. ರಾಜನೆ! ನೀನಾದರೂ ಈ ಸಾಯುವೆನೆಂಬ ಪಶುಬುದ್ಧಿಯನ್ನು ಬಿಡು. ಈ ಶರೀರದಂತೆ – ನೀನು ಹಿಂದೆ ಇಲ್ಲದೆ, ಈಗ ಹುಟ್ಟಿ, ಮುಂದೆ ಸಾಯುವದಿಲ್ಲ.

**ನ ಭವಿಷ್ಯಸಿ ಭೂತ್ವಾ ತ್ವಂ ಪುತ್ರಪೌತ್ರಾದಿರೂಪವಾನ್ ।**
**ಬೀಜಾಙ್ಕುರವದ್ದೇಹಾದೇರ್ವ್ಯತಿರಿಕ್ತೋ ಯಥಾನಲಃ ॥ 3 ॥**

3. ಅಗ್ನಿಯಂತೆ ದೇಹಾದಿಗಳಿಗಿಂತ ಭಿನ್ನನಾದ ನೀನು, ಬೀಜಾಂಕುರ ನ್ಯಾಯದಿಂದ ಮಕ್ಕಳು ಮೊಮ್ಮಕ್ಕಲೇ ಮೊದಲಾದ ರೂಪದಿಂದ ಹುಟ್ಟುವೆ, ನಾಶವಾಗುವದಿಲ್ಲ.

**ಸ್ವಪ್ನೇ ಯಥಾ ಶಿರಶ್ಛೇದಂ ಪಞ್ಚತ್ವಾದ್ಯಾತ್ಮನಃ ಸ್ವಯಮ್ ।**
**ಯಸ್ಮಾತ್ಪಶ್ಯತಿ ದೇಹಸ್ಯ ತತ ಆತ್ಮಾ ಹ್ಯಜೋಽಮರಃ ॥ 4 ॥**

4. ಹೇಗೆ ಸ್ವಪ್ನದಲ್ಲಿ ತನ್ನ ತಲೆಯ ಕತ್ತರಿಸುವಿಕೆಯಿಂದಾದ ತನ್ನ ಶರೀರದ ಮರಣವನ್ನು ತಾನೇ ನೋಡುತ್ತಾನೆ. ಇದೆಲ್ಲ ದೇಹದ ಅವಸ್ಥೆಗಳೇ ಆಗಿದೆ. ಆದ್ದರಿಂದ ಆತ್ಮನು ಹುಟ್ಟುವವನಲ್ಲ ಸಾಯುವವನಲ್ಲ.

**ಘಟೇ ಭಿನ್ನೇ ಘಟಾಕಾಶ ಆಕಾಶಃ ಸ್ಯಾದ್ಯಥಾ ಪುರಾ ।**
**ಏವಂ ದೇಹೇ ಮೃತೇ ಜೀವೋ ಬ್ರಹ್ಮ ಸಮ್ಪದ್ಯತೇ ಪುನಃ ॥ 5 ॥**

5. ಮಡಿಕೆಯು ಒಡೆದಾಗ ಘಟಾಕಾಶವು ಮೊದಲಿನಂತೆ ಮಹಾಕಾಶವೇ ಆದಂತೆ ಕಾಣುವದೊ ಹಾಗೆಯೇ ದೇಹವು ಮರಣಹೊಂದಲಾಗಿ ಜೀವನು ಮೊದಲಿನಂತೆ ಬ್ರಹ್ಮವನ್ನು ಪಡೆಯುತ್ತಾನೆ.

**ಮನಃ ಸೃಜತಿ ವೈ ದೇಹಾನ್ಗುಣಾನ್ಕರ್ಮಾಣಿ ಚಾತ್ಮನಃ ।**
**ತನ್ಮನಃ ಸೃಜತೇ ಮಾಯಾ ತತೋ ಜೀವಸ್ಯ ಸಂಸೃತಿಃ ॥ 6 ॥**

6. ಮನಸ್ಸು ಆತ್ಮನಿಗೆ ಶರೀರ, ವಿಷಯ, ಕರ್ಮಗಳನ್ನು ಸೃಷ್ಟಿಸುತ್ತದೆ. ಆ ಮನಸ್ಸೇ ಅವಿದ್ಯೆಯನ್ನೂ ಸೃಷ್ಟಿಸುತ್ತದೆ. ಅದರಿಂದ ಜೀವನಿಗೆ ಸಂಸಾರವು ಉಂಟಾಗುತ್ತದೆ.

**ಸ್ನೇಹಾಧಿಷ್ಠಾನವರ್ತ್ಯಗ್ನಿ ಸಂಯೋಗೋ ಯಾವದೀಯತೇ ।**
**ತಾವದ್ದೀಪಸ್ಯ ದೀಪತ್ವಮೇವಂ ದೇಹಕೃತೋ ಭವಃ ।**
**ರಜಃಸತ್ತ್ವತಮೋವೃತ್ತ್ಯಾ ಜಾಯತೇಽಥ ವಿನಶ್ಯತಿ ॥ 7 ॥**

7. ಎಣ್ಣೆ, ದೀಪ, ಬತ್ತಿ, ಅಗ್ನಿ – ಇವುಗಳ ಸೇರುವಿಕೆಯು ಇರುವವರೆಗೆ ದೀಪದ ದೀಪತ್ವವು, ಹೀಗೆಯೇ ದೇಹಕ್ಕುಂಟಾಗುವ ಸಂಸಾರವು. ಹಾಗೆಯೇ ಸತ್ತ್ವ, ರಜಸ್ಸು, ತಮಸ್ಸು – ಇವುಗಳ ಸೇರುವಿಕೆಯಿಂದ ಹುಟ್ಟುತ್ತದೆ, ಅನಂತರ ನಾಶವಾಗುತ್ತದೆ.

**ನ ತತ್ರಾತ್ಮಾ ಸ್ವಯಂಜ್ಯೋತಿರ್ಯೋ ವ್ಯಕ್ತಾವ್ಯಕ್ತಯೋಃ ಪರಃ ।**
**ಆಕಾಶ ಇವ ಚಾಧಾರೋ ಧ್ರುವೋಽನನ್ತೋಪಮಸ್ತತಃ ॥ 8 ॥**

8. ಯಾವನು ವ್ಯಕ್ತ–ಅವ್ಯಕ್ತಕ್ಕಿಂತ ಭಿನ್ನನೂ ಸ್ವಯಂಪ್ರಕಾಶನೂ ಆಕಾಶದಂತೆ ಆಧಾರಭೂತನೂ ನಾಶರಹಿತನೂ ಎಣೆಯಿಲ್ಲದವನೂ ಆಗಿರುವದರಿಂದ ಆತ್ಮನು ಆ ದೇಹಾದಿ ಪ್ರಪಂಚದಲ್ಲಿ ನಾಶವನ್ನು ಪಡೆಯುವದಿಲ್ಲ.

**ಏವಮಾತ್ಮಾನಮಾತ್ಮಸ್ಥಮಾತ್ಮನೈವಾಮೃಶ ಪ್ರಭೋ ।**
**ಬುದ್ಧ್ಯಾನುಮಾನಗರ್ಭಿಣ್ಯಾ ವಾಸುದೇವಾನುಚಿನ್ತಯಾ ॥ 9 ॥**

9. ಎಲೈ ರಾಜನೆ! ಹೀಗೆ ವಾಸುದೇವನ ನಿರಂತರ ಚಿಂತನೆಯಿಂದ ಅನ್ವಯವ್ಯತಿರೇಕಗಳಿಂದಾದ ಜ್ಞಾನದಿಂದ ದೇಹಾದ್ಯುಪಾಧಿಗತನಾದ ಪರಮಾತ್ಮನನ್ನು ಮನಸ್ಸಿನಿಂದಲೇ ವಿಚಾರಿಸಬೇಕು.

**ಚೋದಿತೋ ವಿಪ್ರವಾಕ್ಯೇನ ನ ತ್ವಾಂ ಧಕ್ಷ್ಯತಿ ತಕ್ಷಕಃ ।**
**ಮೃತ್ಯವೋ ನೋಪಧಕ್ಷ್ಯನ್ತಿ ಮೃತ್ಯೂನಾಂ ಮೃತ್ಯುಮೀಶ್ವರಮ್ ॥ 10 ॥**

10. ಬ್ರಾಹ್ಮಣನ ಮಾತಿನಿಂದ ಪ್ರೇರಿತನಾದ ತಕ್ಷಕನು ನಿನ್ನನ್ನು ಸುಡುವದಿಲ್ಲ, ಮೃತ್ಯುಗಳು ಮೃತ್ಯುಗಳಿಗೂ ಮೃತ್ಯುವಾದ ಸ್ವಾಮಿಯನ್ನು ಸುಡಲಾರವು.

**ಅಹಂ ಬ್ರಹ್ಮ ಪರಂ ಧಾಮ ಬ್ರಹ್ಮಾಹಂ ಪರಮಂ ಪದಮ್ ।**
**ಏವಂ ಸಮೀಕ್ಷ್ಯ ಚಾತ್ಮಾನಮಾತ್ಮನ್ಯಾಧಾಯ ನಿಷ್ಕಲೇ ॥ 11 ॥**

**ದಶನ್ತಂ ತಕ್ಷಕಂ ಪಾದೇ ಲೇಲಿಹಾನಂ ವಿಷಾನನೈಃ ।**
**ನ ದ್ರಕ್ಷ್ಯಸಿ ಶರೀರಂ ಚ ವಿಶ್ವಂ ಚ ಪೃಥಗಾತ್ಮನಃ ॥ 12 ॥**

11. ನಾನು ಮೋಕ್ಷಸ್ವರೂಪವೂ, ಪರಮಪದವೂ ಆದ ಬ್ರಹ್ಮವು, ಎಂದು ಚಿಂತಿಸಿ ಆತ್ಮನನ್ನು ನಿಷ್ಕಲನಾದ ಪರಮಾತ್ಮನಲ್ಲಿ ನೆಲೆಗೊಳಿಸಿದಾಗ; ತನ್ನ ವಿಷದ ನಾಲಿಗೆಯನ್ನು ಚಾಚುತ್ತಾ, ತುಟಿಯನ್ನು ಸವರಿಕೊಳ್ಳುತ್ತಿರುವ ತಕ್ಷಕನು ವಿಷದ ಬಾಯಿಂದ ಕಚ್ಚಿದರೂ ಈ ಶರಿರವನ್ನೂ ಪ್ರಪಂಚವನ್ನೂ ಪರಮಾತ್ಮನಿಗಿಂತ ಬೇರೆಯಾಗಿ ನೋಡುವದಿಲ್ಲ.

*****

## ಪರಮಗತಿ

### (ಹನ್ನೆರಡನೆಯ ಸ್ಕಂಧ – ಆರನೆಯ ಅಧ್ಯಾಯ)

**ಸೈಷಾ ವಿಷ್ಣೋರ್ಮಹಾಮಾಯಾಽಬಾಧ್ಯಯಾಽಲಕ್ಷಣಾ ಯಯಾ ।**
**ಮುಹ್ಯನ್ತ್ಯಸ್ಯೈವಾತ್ಮಭೂತಾ ಭೂತೇಷು ಗುಣವೃತ್ತಿಭಿಃ ॥ 29 ॥**

29. ವಿಷ್ಣುವಿನ ಯಾವ ಮಹಾಮಾಯೆಯಿದೆಯೊ ಅದು ಬಾಧಿಸಲಾಗದ್ದು, ಗುರುತಿಸಲಾಗದ್ದು; ಆತ್ಮಭೂತವಾದ ಕ್ರೋಧಾದಿ ಗುಣವೃತ್ತಿಗಳಿಂದ ಇದರಲ್ಲಿ ಮೋಹಗೊಳ್ಳುತ್ತಾರೆ.

**ನ ಯತ್ರ ದಮ್ಭೀತ್ಯಭಯಾ ವಿರಾಜಿತಾ**
**ಮಾಯಾತ್ಮವಾದೇಽಸಕೃದಾತ್ಮವಾದಿಭಿಃ ।**
**ನ ಯದ್ವಿವಾದೋ ವಿವಿಧಸ್ತದಾಶ್ರಯೋ**
**ಮನಶ್ಚ ಸಙ್ಕಲ್ಪವಿಕಲ್ಪವೃತ್ತಿ ಯತ್ ॥ 30 ॥**

**ನ ಯತ್ರ ಸೃಜ್ಯಂ ಸೃಜತೋಭಯೋಃ**
**ಪರಂ ಶ್ರೇಯಶ್ಚ ಜೀವಸ್ತ್ರಿಭಿರನ್ವಿತಸ್ತ್ವಹಮ್ ।**
**ತದೇತದುತ್ಸಾದಿತಬಾಧ್ಯಬಾಧಕಂ ನಿಷಿಧ್ಯ**
**ಚೋರ್ಮೀನ್ವಿರಮೇತ ತನ್ಮುನಿಃ ॥ 31 ॥**

30. ವಂಚಕನೆಂದು ಅಡಿಗಡಿಗೂ ಆತ್ಮವಾದಿಗಳಿಂದ ಊಹಿಸಲ್ಪಡುವ ಮಾಯೆಯು ಆತ್ಮವೇತ್ತರಿಂದ ಆತ್ಮವಿಚಾರಮಾಡುವಾಗ ಯಾವ ಆತ್ಮನಲ್ಲಿ ಪ್ರಕಾಶವಾಗುವದಿಲ್ಲವೊ; ಯಾವ ಮಾಯೆಯನ್ನು ಆಶ್ರಯಿಸಿ ಅನೇಕವಿಧವಾದ ವಾದಗಳು ಇಲ್ಲವೊ; ಎಲ್ಲಿ ಸಂಕಲ್ಪವಿಕಲ್ಪರೂಪವಾದ ಮನಸ್ಸು ಇಲ್ಲವೊ; ಯಾವನಲ್ಲಿ

ಸೃಷ್ಟಿಕಾರ್ಯ, ಸಾಧನ, ಫಲ ಮತ್ತು ಕರ್ತೃ – ಎಂಬವು ಇಲ್ಲವೋ ಅಂತಹ ಸಕಲ ಬಾಧ್ಯಬಾಧಕಗಳನ್ನು ನಿರಾಕರಿಸಿದ ತತ್ತ್ವವೇ ಆತ್ಮಸ್ವರೂಪವೆಂದು ಜ್ಞಾನಿಗಳು ತಿಳಿಯುವರು. ವಿವೇಕಿಯಾದ ಮುನಿಯು ಅಹಂಕಾರವೇ ಮೊದಲಾದ ಷಡೂರ್ಮಿಗಳನ್ನು ಬಿಟ್ಟು ಪರಮಾತ್ಮಸ್ವರೂಪದಲ್ಲಿ ನಿರಂತರ ರಮಿಸಬೇಕು.

**ಪರಂ ಪದಂ ವೈಷ್ಣವಮಾಮನನ್ತಿ**
**ತದ್ಯನ್ನೇತಿ ನೇತೀತ್ಯತದುತ್ಸಿಸೃಕ್ಷವಃ ।**
**ವಿಸೃಜ್ಯ ದೌರಾತ್ಮ್ಯಮನನ್ಯಸೌಹೃದಾ**
**ಹೃದೋಪಗುಹ್ಯಾವಸಿತಂ ಸಮಾಹಿತೈಃ ॥ 32 ॥**

32. ಸಮಾಹಿತರಾದ ಮನಸ್ಸಿನವರಿಂದ ನೆಲೆಗೊಳಿಸಿ ನಿಶ್ಚಯಿಸಲ್ಪಟ್ಟ, ಯಾವ ದೇಹಾದಿಗಳಲ್ಲಿರುವ ಅಹಂಭಾವವನ್ನು ತೊರೆದು, ಇದಲ್ಲ ಇದಲ್ಲ ಎಂದು ತನಗಿಂತ ಬೇರೆಯಾದುದನ್ನು ಬಿಡಲೆಳೆಸಿದವರು, ಮತ್ತಾವುದರಲ್ಲಿಯೂ ಪ್ರೀತಿಯಿಲ್ಲದವರಾಗಿ ಆ ಉತ್ಕೃಷ್ಟವಾದ ವಿಷ್ಣುವಿನ ಪರಮಪದವನ್ನು ತಿಳಿಯುವರು.

**ತ ಏತದಧಿಗಚ್ಛನ್ತಿ ವಿಷ್ಣೋರ್ಯತ್ಪರಮಂ ಪದಮ್ ।**
**ಅಹಂ ಮಮೇತಿ ದೌರ್ಜನ್ಯಂ ನ ಯೇಷಾಂ ದೇಹಗೇಹಜಮ್ ॥ 33 ॥**

33. ಯಾರಿಗೆ ಶರೀರವೆಂಬ ಗೃಹದಿಂದುಂಟಾಗುವ ನಾನು ನನ್ನದೆಂಬ ಅಹಂಕಾರವು ಇಲ್ಲವೋ ಅವರು ಈ ವಿಷ್ಣುವಿನ ಪರಮ ಪದವನ್ನು ತಿಳಿಯುವರು.

**ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಞ್ಚನ ।**
**ನ ಚೇಮಂ ದೇಹಮಾಶ್ರಿತ್ಯ ವೈರಂ ಕುರ್ವೀತ ಕೇನಚಿತ್ ॥ 34 ॥**

34. ಬಿರುನುಡಿಗಳನ್ನು ಸೈರಿಸಬೇಕು, ಯಾವದನ್ನೂ ಅವಮಾನ ಮಾಡಬಾರದು. ಈ ಶರೀರವನ್ನು ಆಶ್ರಯಿಸಿ ಯಾರಲ್ಲಿಯೂ ವೈರವನ್ನು ಮಾಡಬಾರದು.

**ನಮೋ ಭಗವತೇ ತಸ್ಮೈ ಕೃಷ್ಣಾಯಾಕುಣ್ಠಮೇಧಸೇ ।**
**ಯತ್ಪಾದಾಮ್ಬುರುಹಧ್ಯಾನಾತ್ಸಂಹಿತಾಮಧ್ಯಗಾಮಿಮಾಮ್ ॥ 35 ॥**

ಯಾವ ಭಗವಂತನ ಪಾದಕಮಲದ ಧ್ಯಾನದಿಂದ ಈ ಶಾಸ್ತ್ರವನ್ನು ಅಧ್ಯಯನಮಾಡಿದೆನೊ ಆ ಅಪ್ರತಿಹತಬುದ್ಧಿಯುಳ್ಳ ಷಡ್ಗುಣೈಶ್ವರ್ಯಪೂರ್ಣನಾದ ಆ ಕೃಷ್ಣನಿಗೆ ನಮಸ್ಕಾರವು.

*****

## ಗ್ರಂಥಪರಿಸಮಾಪ್ತಿ ಮಂಗಲ

### (ಹನ್ನೆರಡನೆಯ ಸ್ಕಂಧ – ಹದಿಮೂರನೆಯ ಅಧ್ಯಾಯ)

**ಇದಂ ಭಗವತಾ ಪೂರ್ವಂ ಬ್ರಹ್ಮಣೇ ನಾಭಿಪಙ್ಕಜೇ ।**
**ಸ್ಥಿತಾಯ ಭವಭೀತಾಯ ಕಾರುಣ್ಯಾತ್ಸಮ್ಪ್ರಕಾಶಿತಮ್ ॥ 10 ॥**

10. ಈ ಭಾಗವತ ಪುರಾಣವನ್ನು ಭಗವಂತನು ಮೊದಲು ತನ್ನ ನಾಭಿಕಮಲದಲ್ಲಿದ್ದ, ಸಂಸಾರಭಯದಿಂದ ಭೀತನಾಗಿದ್ದ ಬ್ರಹ್ಮನಿಗೆ ಕರುಣೆಯಿಂದ ಉಪದೇಶಿಸಿದನು.

**ಆದಿಮಧ್ಯಾವಸಾನೇಷು ವೈರಾಗ್ಯಾಖ್ಯಾನಸಂಯುತಮ್ ।**
**ಹರಿಲೀಲಾಕಥಾವ್ರಾತಾಮೃತಾನನ್ದಿತಸತ್ಸುರಮ್ ॥ 11 ॥**

**ಸರ್ವವೇದಾನ್ತಸಾರಂ ಯದ್ಬ್ರಹ್ಮಾತ್ಮೈಕತ್ವಲಕ್ಷಣಮ್ ।**
**ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕಪ್ರಯೋಜನಮ್ ॥ 12 ॥**

11–12. ಮೊದಲು, ನಡುವೆ, ತುದಿಗಳಲ್ಲಿ ವೈರಾಗ್ಯವನ್ನುಂಟುಮಾಡುವ ಆಖ್ಯಾನಗಳಿಂದ ಕೂಡಿದ, ಹರಿಯ ಲೀಲೆಗಳೆಂಬ ಕಥಾಹಂದರಗಳಿಂದ ಸಾಧುಗಳನ್ನೂ ದೇವತೆಗಳನ್ನೂ ಸಂತೋಷಪಡಿಸುವದು; ಸಕಲ ವೇದಾಂತಗಳ ಸಾರಭೂತವೂ ಜೀವಬ್ರಹ್ಮರ ಐಕ್ಯರೂಪವೂ ಅದ್ವಿತೀಯವೂ ಆದ ಯಾವ ವಸ್ತುವುಂಟೋ ಅದೆ ಭಾಗವತದವಿಷಯವಾಗಿದ್ದು, ಮೋಕ್ಷವೇ ಪ್ರಯೋಜನವುಳ್ಳದ್ದಾಗಿದೆ.

**ಪ್ರೌಷ್ಠಪದ್ಯಾಂ ಪೌರ್ಣಮಾಸ್ಯಾಂ ಹೇಮಸಿಂಹಸಮನ್ವಿತಮ್ ।**
**ದದಾತಿ ಯೋ ಭಾಗವತಂ ಸ ಯಾತಿ ಪರಮಾಂ ಗತಿಮ್ ॥ 13 ॥**

13. ಯಾವನು ಈ ಭಾಗವತವನ್ನು ಭಾದ್ರಪದ ಪೌರ್ಣಮಿಯಲ್ಲಿ ಹೇಮ ಸಿಂಹಾಸನದಲ್ಲಿಟ್ಟು ದಾನಮಾಡುತ್ತಾನೊ ಅವನು ಪರಮಗತಿಯನ್ನು ಹೊಂದುತ್ತಾನೆ.

**ರಾಜನ್ತೇ ತಾವದನ್ಯಾನಿ ಪುರಾಣಾನಿ ಸತಾಂ ಗಣೇ ।**
**ಯಾವದ್ಭಾಗವತಂ ನೈವ ಶ್ರೂಯತೇಽಮೃತಸಾಗರಮ್ ॥ 14 ॥**

14. ಸಾಧುಗಳ ಸಭೆಯಲ್ಲಿ ಕಥಾಮೃತಸಾಗರವಾದ ಭಾಗವತಪುರಾಣವು ಪ್ರತ್ಯಕ್ಷವಾಗಿ ಕರ್ಣಗೋಚರವಾಗುವದಿಲ್ಲವೊ ಅಲ್ಲಿಯವವರೆಗೆ ಬೇರೆಪುರಾಣಗಳು ರಾರಾಜಿಸುತ್ತವೆ.

**ಸರ್ವವೇದಾನ್ತಸಾರಂ ಹಿ ಶ್ರೀಭಾಗವತಮಿಷ್ಯತೇ ।**
**ತದ್ರಸಾಮೃತತೃಪ್ತಸ್ಯ ನಾನ್ಯತ್ರ ಸ್ಯಾದ್ರತಿಃ ಕ್ವಚಿತ್ ॥ 15 ॥**

15. ಶ್ರೀ ಭಾಗವತವು ಸಕಲ ವೇದಾಂತಗಳ ಸಾರವಾಗಿರುವದಲ್ಲವೆ! ಅದರ ರಸವೆಂಬ ಅಮೃತದಿಂದ ತೃಪ್ತನಾದವನಿಗೆ ಬೇರೆಲ್ಲಿಯೂ ಗಮನವುಂಟಾಗುವದಿಲ್ಲ.

**ನಮಸ್ತಸ್ಮೈ ಭಗವತೇ ವಾಸುದೇವಾಯ ಸಾಕ್ಷಿಣೇ ।**
**ಯ ಇದಂ ಕೃಪಯಾ ಕಸ್ಮೈ ವ್ಯಾಚಚಕ್ಷೇ ಮುಮುಕ್ಷವೇ ॥ 20 ॥**

20. ಮೋಕ್ಷವನ್ನು ಬಯಸುತ್ತಿದ್ದ ಬ್ರಹ್ಮನಿಗೆ ಕೃಪೆಯಿಂದ ಈ ಭಾಗವತವನ್ನು ವ್ಯಾಖ್ಯಾನಿಸಿದ, ಸಾಕ್ಷಿಯಾದ ಆ ವಾಸುದೆವಭಗವಂತನಿಗೆ ನಮಸ್ಕಾರವು.

**ಯೋಗೀನ್ದ್ರಾಯ ನಮಸ್ತಸ್ಮೈ ಶುಕಾಯ ಬ್ರಹ್ಮರೂಪಿಣೇ ।**
**ಸಂಸಾರಸರ್ಪದಷ್ಟಂ ಯೋ ವಿಷ್ಣುರಾತಮಮೂಮುಚತ್ ॥ 21 ॥**

21. ಸಂಸಾರಸರ್ಪದಿಂದ ಕಚ್ಚಲ್ಪಟ್ಟ ಯಾವ ಪರೀಕ್ಷಿತನನ್ನು ಬಿಡಿಸಿದನೊ, ಆ ಯೋಗೀಂದ್ರನೂ ಬ್ರಹ್ಮಸ್ವರೂಪನೂಆದ ಶುಕಮಹಾಮುನಿಗೆ ನಮಸ್ಕಾರವು.

**ಭವೇ ಭವೇ ಯಥಾ ಭಕ್ತಿಃ ಪಾದಯೋಸ್ತವ ಜಾಯತೇ ।**
**ತಥಾ ಕುರುಷ್ವ ದೇವೇಶ ನಾಥಸ್ತ್ವಂ ನೋ ಯತಃ ಪ್ರಭೋ ॥ 22 ॥**

22. ಪ್ರಭುವೆ! ದೇವದೇವೇಶನೆ! ಯಾವ ಕಾರಣದಿಂದ ನಮಗೆ ನೀನು ಒಡೆಯನೊ ಅದೇಕಾರಣದಿಂದ ನಮಗೆ ಪ್ರತಿಜನ್ಮದಲ್ಲಿಯೂ ನಿನ್ನ ಪಾದಪದ್ಮಗಳಲ್ಲಿ ಅಚಲವಾದ ಭಕ್ತಿಯು ಉಂಟಾಗುವಂತೆ ಮಾಡು.

**ನಾಮಸಙ್ಕೀರ್ತನಂ ಯಸ್ಯ ಸರ್ವಪಾಪ ಪ್ರಣಾಶನಮ್ ।**
**ಪ್ರಣಾಮೋ ದುಃಖಶಮನಸ್ತಂ ನಮಾಮಿ ಹರಿಂ ಪರಮ್ ॥ 23 ॥**

23. ಯಾವನ ನಾಮಸಂಕೀರ್ತನೆಯಿಂದ ಎಲ್ಲ ಪಾಪಗಳೂ ನಾಶ ವಾಗುವವೊ, ಯಾವನನ್ನು ನಮಸ್ಕರಿಸುವದರಿಂದ ದುಃಖಗಳೆಲ್ಲ ಉಪಶಮನಗೊಳ್ಳುವವೊ ಅಂತಹ ಶ್ರೀಹರಿಯನ್ನು ನಮಸ್ಕರಿಸುತ್ತೆನೆ.

*******

**ಓಂ ತತ್ಸತ್**

**ಮಹಾಭಾರತ–ಮೋಕ್ಷಧರ್ಮದ ಉಪದೇಶಗಳು – 252 ಪುಟಗಳು; 1ನೆಯ ಮುದ್ರಣ; ಬೆಲೆ ರೂ. 100/–** ಇದರಲ್ಲಿ ಭಾಗವತಧರ್ಮವನ್ನು ಕುರಿತು ನಾರದ–ನಾರಾಯಣರ ಸಂವಾದದ ನಾರಾಯಣೀಯ, ಪ್ರಾಣಿಗಳ ಗತ್ಯಾಗತಿ, ಸೃಷ್ಟಿಪ್ರಲಯಗಳು ಹೇಗೆ ಆಗುವದೆಂದು ಶುಕ–ವ್ಯಾಸರು ನಡೆಸಿದ ಸಂವಾದಭಾಗವಾದ ಶುಕಾನುಶಾಸನ, ಬಂಧಮೋಕ್ಷಗಳನ್ನು ಕುರಿತು ಶುಕರು ವ್ಯಾಸರೊಡನೆ ನಡೆಸಿದ ಧರ್ಮಜಿಜ್ಞಾಸೆಯಿರುವ ಶುಕಾನುಪ್ರಶ್ನ, ಶುಕನು ಜನಿಸಿದ ಬಗೆ, ವ್ಯಾಸರ ಉಪದೇಶ, ಜನಕ ನಾರದರೊಡನೆ ಶುಕನು ಸಂವಾದ ನಡೆಸಿ ಮಹಾನಿರ್ಯಾಣವನ್ನು ಹೊಂದಿದ ಶುಕವೃತ್ತಾಂತ – ಎಂಬ ಮೋಕ್ಷಧರ್ಮಪರ್ವದ ಭಾಗಗಳು ಸೇರಿವೆ. ಶ್ರದ್ಧಾಭಕ್ತಿಯುತರಾದ ಭಾವುಕರೆಲ್ಲರೂ ಪಠಿಸಬೇಕಾಗಿರುವ ಗ್ರಂಥವು.

**ಭಾಗವತದ ಅಧ್ಯಾತ್ಮಸಂದೇಶಗಳು –229 ಪುಟಗಳು; 1ನೆಯ ಮುದ್ರಣ; ಬೆಲೆ ರೂ. 100/–** ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ರಚಿಸಿರುವ ಗ್ರಂಥ. ಅಧ್ಯಾತ್ಮ ಪ್ರಕಾಶದಲ್ಲಿ ತಿಂಗಳಸಂದೇಶ ಎಂದು ಶ್ರೀಮದ್ಭಾಗವತದ ಕೆಲವು ಶ್ಲೋಕಗಳನ್ನು ಆಯ್ಕೆಮಾಡಿ ಬರೆದಿದ್ದ ಲೇಖನಗಳ ಸಂಗ್ರಹ.

**ಭಾಗವತಸಂಪ್ರದಾಯ – 126 ಪುಟಗಳು; 2ನೆಯ ಮುದ್ರಣ; ಬೆಲೆ ರೂ. 30/–** ವಾಸುದೇವನೆಂಬ ಹೆಸರಿನಿಂದ ಪರಮಾತ್ಮನನ್ನು ಭಜಿಸುವವರ ಮತವೇ ಭಾಗವತಮತವು. ಭಾಗವತಸಂಪ್ರದಾಯವು ಯಾವದು? ಎಂಬ ವಿಷಯದಲ್ಲಿ ಒಬ್ಬೊಬ್ಬ ಭಾಷ್ಯಕಾರರ ಮತವೂ ಒಂದೊಂದಾಗಿದೆ. ಮುಖ್ಯವಾಗಿ ಆಚಾರ್ಯರು ಸೂತ್ರಭಾಷ್ಯದಲ್ಲಿ ಮಾಡಿರುವ ಪರಾಮರ್ಶದಿಂದಲೂ, ಮಹಾಭಾರತದ ನಾರಾಯಣೀಯೋಪಾಖ್ಯಾನದಿಂದಲೂ, ಭಾಗವತ, ವಿಷ್ಣುಪುರಾಣಗಳ ಆಧಾರದಿಂದಲೂ ಶುದ್ಧವಾದ ಭಾಗವತ ಸಂಪ್ರದಾಯವು ಯಾವದು ಎಂಬುದನ್ನು ಶ್ರೀಶ್ರೀಗಳವರು ಸ್ಪಷ್ಟಪಡಿಸಿರುತ್ತಾರೆ.

**ಅಧ್ಯಾತ್ಮರಾಮಾಯಣ– 620 ಪುಟಗಳು; 2ನೆಯ ಮುದ್ರಣ; ಬೆಲೆ ರೂ. 150/–** ಪಾರ್ವತೀಪರಮೇಶ್ವರರ ಸಂವಾದರೂಪವಾಗಿರುವ ಈ ಗ್ರಂಥವು ಪ್ರಾರಂಭದ ಅಧ್ಯಾತ್ಮವಿಚಾರಕರು ಅಧ್ಯಯನಮಾಡಲು ಯೋಗ್ಯವಾಗಿದೆ. ರಾಮಾಯಣದ ಕಥೆಯೊಡನೆ ವೇದಾಂತಪ್ರಕ್ರಿಯೆಯ ಪರಿಚಯವೂ ತತ್ತ್ವಾನುಸಂಧಾನವೂ ಉಂಟಾಗಿ ಮುಂದೆ ಉಪನಿಷದಾದಿ ಪ್ರಸ್ಥಾನತ್ರಯಗ್ರಂಥಗಳನ್ನು ಅಭ್ಯಾಸಮಾಡಲು ಸಹಾಯವಾಗುವದು. ನವವಿಧಭಕ್ತಿಯ ರುಚಿಯು ಉಂಟಾಗುವದು. ವೇದಾಂತ ಸೋಪಾನವನ್ನೇರಲು ಈ ಗ್ರಂಥವು ಊರುಗೋಲಾಗುವದು. ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ವಿವರಣೆಯನ್ನು ಬರೆದಿರುತ್ತಾರೆ.

**ಭಗಚ್ಚರಣಸ್ತೋತ್ರಮ್–64 ಪುಟಗಳು; 5ನೆಯ ಮುದ್ರಣ; ಬೆಲೆ ರೂ. 10/–** ಶ್ರೀಬ್ರಹ್ಮಾನಂದಸ್ವಾಮಿಗಳ ಕೃತಿ. ಅಧ್ಯಾತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆನ್ನುವವರು ವ್ಯವಹಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನೂ ಯಾವಯಾವ ಸಾಧನಗಳನ್ನು ಅಳವಡಿಸಿಕೊಂಡಿರಬೇಕೆಂಬುದನ್ನೂ ವಿವರಿಸುವದು. ಪ್ರತಿಯೊಂದು ಶ್ಲೋಕಕ್ಕೂ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನು ಕೊಟ್ಟಿದೆ.

ಆಧ್ಯಾತ್ಮಿಕ ಜೀವನದಲ್ಲಿ ಮುನ್ನಡೆಯುವವರಿಗೆ ಶ್ರೀಮದ್ಭಾಗವತವು ಜ್ಞಾನದೀಪವಾಗಿದೆ. ಇದರಲ್ಲಿ ಭಗವಂತನ ದಶಾವತಾರ ಹಾಗೂ ಇಪ್ಪತ್ತನಾಲ್ಕು ಅವತಾರಗಳವರ್ಣನೆ ಅಲ್ಲದೆ ಶ್ರೀಕೃಷ್ಣನಾಗಿ ಲೋಕದಲ್ಲಿ ತೋರಿದ ಲೀಲಾವಿನೋದಗಳು, ಆಮೂಲಕ ಉಪದೇಶಿಸಿದ ಕರ್ಮ, ಭಕ್ತಿ, ಉಪಾಸನೆ, ಜ್ಞಾನಗಳ ವರ್ಣನೆಯು ಅತ್ಯಂತ ಚೇತೋಹಾರಿಯಾಗಿ ಭಾವುಕ ರಸಿಕ ಭಕ್ತರಿಗೆ ಮನಃಪ್ರಸನ್ನತೆಯನ್ನು ಕೊಡುವದಾಗಿದೆ. ಇದು ಶುಕಮುಖದಿಂದ ಹೊರಹೊಮ್ಮಿದ್ದೂ ಸಕಲ ಶಾಸ್ತ್ರಗಳ ಸಾರವೂ ಆಗಿದೆ. ಆದರೆ ಪುರಾಣಗಳು ತತ್ತ್ವವನ್ನು ತಿಳಿಸಬೇಕಾದರೆ ಕಥಾ ಮಾಧ್ಯಮವನ್ನು ಅನುಸರಿಸುತ್ತದೆ.

ಪ್ರತೀಕೋಪಾಸನೆ, ಅಹಂಗ್ರಹೋಪಾಸನೆ ಮುಂತಾದ ಉಪಾಸನೆಗಳನ್ನು ವರ್ಣಿಸಿದೆ. ಸಗುಣ ಮತ್ತು ನಿರ್ಗುಣ ಬ್ರಹ್ಮದ ಸ್ವರೂಪವನ್ನು ಮನದಟ್ಟಾಗುವಂತೆ ಬೋಧಿಸಿದೆ. ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ಉತ್ತರಾಯಣ-ದಕ್ಷಿಣಾಯನ ಮಾರ್ಗ ಹಾಗೂ ಅಧಿಕಾರಿಯು ಅದರ ಮೂಲಕ ಪಡೆಯುವ ಲೋಕಗಳನ್ನು ತಿಳಿಸುತ್ತದೆ. ಹಾಗೂ ಈ ಗ್ರಂಥದಲ್ಲಿ ವಿವರಿಸಿರುವ ಅವತಾರತತ್ತ್ವವು ಅನನ್ಯಾದೃಶ.

ಎಲ್ಲಾ ಪುರಾಣಗಳಲ್ಲೂ ವೇದಾಂತೋಪದೇಶಗಳನ್ನು ನಾವು ಕಾಣಬಹುದು. ಇಲ್ಲಿ ವೇದಾಂತೋಪದೇಶವು ಎರಡು ಬಗೆಯಾಗಿ ಕಂಡು ಬರುತ್ತಿದೆ. ಒಂದು ಭಗವತ್-ಸ್ತುತಿರೂಪವಾದರೆ, ಇನ್ನೊಂದು ಉಪದೇಶಪರವಾದುದು. ಮುಖ್ಯವಾಗಿ ಕಾರ್ಯ-ಕಾರಣ ಪ್ರಕ್ರಿಯೆ, ದೃಗ್-ದೃಶ್ಯ ಪ್ರಕ್ರಿಯೆಗಳೂ ನಿರೂಪಿತವಾಗಿವೆ. ಅಲ್ಲದೆ ಅವಸ್ಥಾತ್ರಯ ಪ್ರಕ್ರಿಯೆಯನ್ನು ವಿಶಿಷ್ಟವಾಗಿ ನಿರೂಪಿಸುತ್ತದೆ. ತಾತ್ಪರ್ಯದಿಂದ ಅದ್ವೈತವೆಂಬ ಯಥಾರ್ಥವನ್ನು ಮತ್ತು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾರ್ಷ್ಟಿ ಮತ್ತು ಸಾಯುಜ್ಯ ಎಂಬ ಸಗುಣ ಮೋಕ್ಷಗಳಿಗಿಂತ ಭಿನ್ನವಾದ ಕೈವಲ್ಯಮೋಕ್ಷವನ್ನು ನೀಡುವ ಬ್ರಹ್ಮಾತ್ಮೈಕ್ಯವನ್ನು ಹೇಳುವ ಜ್ಞಾನನಿಷ್ಠೆಯನ್ನು ಪ್ರಧಾನವಾಗಿ ಉಪದೇಶಿಸಿದೆ.

ಕಥೆಯ ಮಧ್ಯದಲ್ಲಿ ಉಪದೇಶಗಳು ಸೇರಿರುವದರಿಂದ ಉಪದೇಶವನ್ನು ಗ್ರಹಿಸುವದು ಕಷ್ಟವಾಗುತ್ತದೆ. ಆದ್ದರಿಂದ ಕಥೆಯನ್ನುಳಿದು ಉಪದೇಶಗಳಷ್ಟೇ ಅಧ್ಯಾತ್ಮಪ್ರೇಮಿಗಳಿಗೆ ದೊರೆಯಬೇಕೆಂದು ಶ್ರೀಶ್ರೀಗಳವರು ಮಹಾಮುನಿ ವ್ಯಾಸಕೃತವಾದ ಶುಕಮುಖಾಮೃತ ಲೇಪಿತವಾದ ಭಾಗವತದ ಸಾರತಮವಾದ ಭಾಗವನ್ನಷ್ಟೇ ಆಯ್ದು ವಾಚಕರಿಗೆ ಲಭ್ಯವಾಗಿಸಿದ್ದಾರೆ. ಹಾಗಾಗಿ ಈ ಗ್ರಂಥವು ವೇದಾಂತ ಜಿಜ್ಞಾಸುಗಳಿಗೆ ಸ್ವಾಮಿಗಳು ಮಾಡಿರುವ ಇನ್ನೊಂದು ಆಶೀರ್ವಾದ ಎಂಬುದರಲ್ಲಿ ಸಂಶಯವಿಲ್ಲ.

2021 ₹ 160/-